
ಗಾಂಧೀ ಗ್ರಂಥಮಾಲೆ ಸಂಪುಟ-2

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸುವರ್ಣ ಮಹೋತ್ಸವ ವರ್ಷ ಅಕ್ಟೋಬರ್ 2010-2011

2



ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ

ಮೂಲ: ಮೋ.ಕ.ಗಾಂಧಿ

ಅನುವಾದ: ಎಸ್.ವಿ. ಕೃಷ್ಣಮೂರ್ತಿರಾವ್

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸುವರ್ಣ ಮಹೋತ್ಸವ ವರ್ಷ:ಅಕ್ಟೋಬರ್ ೨೦೧೦-೨೦೧೧

ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ

ಮೋ. ಕ. ಗಾಂಧೀ

ಅನುವಾದಕರು

ಎಸ್.ವಿ. ಕೃಷ್ಣಮೂರ್ತಿರಾವ್

ಗಾಂಧಿಯಾನ ಪಬ್ಲಿಷಿಂಗ್ ಹೌಸ್

ಕಸ್ತೂರ್‌ಬಾಭವನ, ಗಾಂಧೀಭವನ ಆವರಣ
ಕುಮಾರಪಾರ್ಕ್ ಪೂರ್ವ, ಬೆಂಗಳೂರು – 560 001

Dakshina Africadali Sathagraha

Written by

M. K. Gandhi

Translated by

S.V.Krishnamurthy Rao

Published by

Gandhiyana Publishing House

Kasturba Bhavan, Gandhi Bhavan Premises
Kumara Park East
Banagalore -560 001

First Impression : 1958
Second Impression : 2010
Price : **Rs. 150 /-**
Pages : IV + 296 = **300**
1/8th Demmy
80 GSM Maplitho

Printed by
Shakthi Printers & Publishers
Bangalore - 560 058

ಗಾಂಧೀಜಿಯ ಬರಹಗಳ ಕನ್ನಡ ಅನುವಾದ

ವಿಶ್ವದ ಎಲ್ಲ ಭಾಷೆಗಳಲ್ಲಿಯೂ ಗಾಂಧೀಜಿಯ ವಿಚಾರಗಳ ಪ್ರಚಾರ ಮಾಡುವುದು ಗಾಂಧೀ ಸ್ಮಾರಕ ನಿಧಿಯ ಮುಖ್ಯ ಉದ್ದೇಶಗಳಲ್ಲಿ ಒಂದು. ಕರ್ನಾಟಕಕ್ಕೆ ಹಾಗೂ ಕನ್ನಡಿಗರಿಗೆ ಅತೀವ ಮಹತ್ವದ ಗಾಂಧೀ ವಿಚಾರಗಳ ಪರಿಚಯ ಮಾಡಿಕೊಡುವುದು ಈಗ ಕೈಗೊಂಡ ಈ ಯೋಜನೆಯ ಗುರಿಯಾಗಿದೆ.

ಕರ್ನಾಟಕದ ಹಲವಾರು ಸಾಹಿತಿಗಳು, ಲೇಖಕರು, ಗಾಂಧೀಜಿಯ ಬರಹಗಳಲ್ಲಿ ಕೆಲವನ್ನು ಆಗಲೇ ಅನುವಾದಿಸಿ ಪ್ರಕಟಿಸಿದ್ದಾರೆ. ಸಾಧ್ಯವಾದಷ್ಟು ಈಗಲೇ ಪ್ರಕಟವಾಗಿರುವ ಅನುವಾದಗಳನ್ನು ಅವಶ್ಯಕವಿದ್ದಲ್ಲಿ ಪರಿಷ್ಕರಿಸಿ ಅವುಗಳನ್ನು ಈ ಗಾಂಧೀ ಗ್ರಂಥಮಾಲೆಯಲ್ಲಿ ಪೋಣಿಸುವ ಪ್ರಯತ್ನ ನಡೆದಿದೆ. ಗಾಂಧೀಜಿಯ ಮುಖ್ಯ ಹಾಗೂ ವಿವಿಧ ವಿಚಾರಗಳ ಪರಿಚಯವನ್ನು ಮಾಡಿಕೊಡಲು ಸುಮಾರು ಇಪ್ಪತ್ತು ಸಂಪುಟಗಳು ಸಿದ್ಧವಾಗುತ್ತಲಿವೆ.

ಗಾಂಧೀಜಿಯ ಎಲ್ಲ ಬರಹಗಳನ್ನೂ ಸಂಪೂರ್ಣವಾಗಿ ಅನುವಾದಿಸುವುದು ನಮ್ಮ ಉದ್ದೇಶವಲ್ಲ; ಭಾರತ ಸರ್ಕಾರ ಆ ಕಾರ್ಯವನ್ನು ಕೈಕೊಂಡಿದೆ. ಆದರೆ ಈ ನಮ್ಮ ಯೋಜನೆಯ ಉದ್ದೇಶ ಗಾಂಧೀಜಿಯ ಪ್ರಧಾನವಾದ ಅಭಿಪ್ರಾಯಗಳನ್ನು ಸಮಂಜಸವಾದ ರೀತಿಯಲ್ಲಿ ಕೂಡಿಸಿ ಮುಖ್ಯವಾದ ಶೀರ್ಷಿಕೆಗಳ ಅಡಿಯಲ್ಲಿ ಅವನ್ನು ಅಳವಡಿಸಿ ಕನ್ನಡಿಸಿ ಪ್ರಕಟ ಮಾಡುವುದಾಗಿದೆ. ಗಾಂಧೀಜಿ ಪುಸ್ತಕರೂಪವಾಗಿಯೇ ಬರೆದ ಗ್ರಂಥಗಳನ್ನು ಅವು ಇರುವಂತೆ ಅಥವಾ ಅವಶ್ಯಕವಾದರೆ ಸಂಗ್ರಹಿಸಿ ಅನುವಾದ

ಮಾಡಲಾಗುತ್ತದೆ. ಮತ್ತೆ ಕೆಲವು ಗ್ರಂಥಗಳು ಗಾಂಧೀಜಿ ಅವರ ಅಭಿಪ್ರಾಯಗಳನ್ನು "ಯಂಗ್ ಇಂಡಿಯಾ" ಮತ್ತು "ಹರಿಜನ" ಪತ್ರಿಕೆಗಳಿಂದ ಆಯ್ಕ ಲೇಖನಗಳ ಸಂಕಲನಗಳಾಗಿವೆ. ಸಂಕಲನವು ಸ್ವಲ್ಪ ನಿಧಾನದ ಕೆಲಸ; ಕಷ್ಟವಾದ ಕೆಲಸವೂ ಹೌದು. ಎಷ್ಟು ಪ್ರಯತ್ನ ಮಾಡಿದರೂ ವಿಷಯ ಪ್ರತಿಪಾದನೆಯ ಪುನರಾವರ್ತನೆಯನ್ನು ತಪ್ಪಿಸುವುದು ಕಷ್ಟ. ನಮ್ಮ ಅನುವಾದಕರು ಕರ್ನಾಟಕದ ನುರಿತ ಸಾಹಿತಿಗಳು ಮತ್ತು ಗಾಂಧೀ ಮಾರ್ಗದಲ್ಲಿ ಶ್ರದ್ಧೆಯುಳ್ಳವರು. ಆದಷ್ಟು ಸಮರ್ಪಕವಾಗಿ ಭಾಷಾಂತರ ಕೆಲಸವನ್ನು ಮಾಡುತ್ತಿದ್ದಾರೆ. ಗಾಂಧೀಜಿಯವರ ಸರಳ ಮತ್ತು ರಸವತ್ತಾದ ಬರಹಗಳನ್ನು ಭಾಷಾಂತರಿಸುವುದು ಎಷ್ಟು ಕಷ್ಟವೆಂಬುದನ್ನು ಹೇಳಬೇಕಾಗಿಲ್ಲ. ಆದರೂ ಈ ಅನುವಾದಕರು ಗಾಂಧೀಜಿಯವರ ಮನೋಗತವನ್ನು ಅರಿತವರಾದುದರಿಂದ ಈ ಅನುವಾದಗಳು ಜನಪ್ರಿಯವಾಗಬಲ್ಲವೆಂದು ಆಶಿಸಲಾಗಿದೆ.

ಈ ಸಂಪಾದಕ ಸಮಿತಿಯಿಂದ ಪ್ರಕಟಿಸಲ್ಪಡುವ ಗ್ರಂಥಗಳು ಬಹಳ ಸುಲಭ ಬೆಲೆಗೆ ಪಾಠಕರ ಕೈಸೇರಬೇಕೆಂಬ ಉದ್ದೇಶದಿಂದ ಸಾಮಾನ್ಯ ಪ್ರತಿಯ ಬೆಲೆ ಅತಿ ಕಡಿಮೆ ಇಡಲಾಗಿದೆ. ಇದರೊಡನೆ ಉತ್ತಮ ಪ್ರತಿಯೂ ಸಹ ಮಾರಾಟಕ್ಕೆ ಇರುವುದಲ್ಲದೆ ಅದರ ಬೆಲೆಯೂ ಕೂಡ ಬಹಳ ಹೆಚ್ಚು ಇಡಲಾಗಿಲ್ಲ.

ಈ ಗ್ರಂಥಮಾಲೆ ಕನ್ನಡನಾಡಿನ ಜನಕ್ಕೆ ಗಾಂಧೀಸಾಹಿತ್ಯವನ್ನು ಒದಗಿಸಿಕೊಡುವ ಕೆಲಸದಲ್ಲಿ ಕೃತಕೃತ್ಯತೆಯನ್ನು ಪಡೆಯಬಲ್ಲದೆಂದು ಭಾವಿಸಲಾಗಿದೆ. ಗಾಂಧೀಜಿಯವರ ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಅಭಿಪ್ರಾಯಗಳು ಈ ಗ್ರಂಥಗಳ ಮೂಲಕ ಜನಸಾಮಾನ್ಯರಲ್ಲಿ ಹರಡಲಿ, ಸಕಲ ಜನರಿಗೆ ಸ್ಫೂರ್ತಿ ಕೊಟ್ಟು ನವಚೈತನ್ಯವನ್ನು ತುಂಬಲಿ ಎಂದು ಹಾರೈಸಿ ಈ ಗ್ರಂಥಗಳನ್ನು ಜನತಾಜನಾರ್ಧನನಿಗೆ ಅರ್ಪಿಸುತಿರುವೆ.

ಗಾಂಧೀ ಸ್ಮಾರಕ ನಿಧಿ — ರಂಗನಾಥ ದಿವಾಕರ
ರಾಜಘಾಟ, ದಿಲ್ಲಿ
೭–೫–೫೮

ನಿವೇದನ

(ಗಾಂಧೀಜೀಯ ಮಾತುಗಳಲ್ಲಿ)
ಅನುವಾದಕರು : "ಕುವೆಂಪು"

ನಾನೊಬ್ಬ ಸತ್ಯಶೋಧಕ. ಅದಕ್ಕೊಂದು ಮಾರ್ಗವನ್ನು ಕಂಡು ಕೊಂಡಿದ್ದೇನೆಂದು ನನ್ನ ವಿಶ್ವಾಸ. ಅದರ ಸಿದ್ಧಿಗಾಗಿ ನಾನು ನಿರಂತರ ಪ್ರಯತ್ನಶೀಲನಾಗಿದ್ದೇನೆಂದೂ ನನ್ನ ನಂಬಿಕೆ. ಅದು ಇನ್ನೂ ನನಗೆ ಸಿದ್ಧಿಸಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಸತ್ಯದ ಸಮ್ಯಕ್ ದರ್ಶನವೇ ಆತ್ಮ ಸಾಕ್ಷಾತ್ಕಾರ; ಅದೇ ಜೀವನದ ಅಂತಿಮ ಗುರಿ. ಅಂದರೆ ಪರಿಪೂರ್ಣತೆಯ ಸಿದ್ಧಿ. ನನ್ನ ನ್ಯೂನತೆಗಳು ಎಷ್ಟೆಂಬುದನ್ನು ನಾನು ವ್ಯಸನದಿಂದ ಅರಿತಿದ್ದೇನೆ. ಆ ಅರಿವು ನನಗೆ ದುಃಖ ತರುವಷ್ಟೂ ಇದೆ. ಆ ಅರಿವೇ ನನ್ನ ಶಕ್ತಿಯ ಸರ್ವ ಮೂಲ; ಏಕೆಂದರೆ ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನಿಗೆ ಒಂದು ಅಪೂರ್ವಬಲ.[೧]

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಅತ್ಯಂತ ಋಜುವಾಗಿ, ಅತ್ಯಂತ ಸತ್ಯವಾಗಿ, ಅತ್ಯಂತ ಅಹಿಂಸಕವಾಗಿ ನಡೆಯಬೇಕೆಂದು ಹೋರಾಡುತ್ತಿದ್ದರೂ, ನನಗೆ ಸರಿಯೆಂದು ತಿಳಿದ ಗುರಿಯನ್ನು ಮುಟ್ಟಲು ಹಂಬಲಿಸಿ ಹೆಣಗುತ್ತ ಸತತವೂ ಸೋಲುತ್ತಿರುವ

---

೧. ಯಂಗ್ ಇಂಡಿಯಾ, ೧೭.೧೧.೨೧

ನಾನು ಒಂದು ಸಾಮಾನ್ಯ ಚೇತನ. ಆ ಯಾತ್ರೆಯೇನೊ ಕ್ಲೇಶಕರವೇ; ಆದರೆ ಆ ಯಾತನೆಯಲ್ಲಿಯೂ ನನಗೆ ಒಂದು ಆನಂದವಿದೆ. ಏರುವ ಒಂದೊಂದು ಹೆಜ್ಜೆಯೂ ನನ್ನನ್ನು ಬಲಿಷ್ಠನನ್ನಾಗಿ ಮಾಡಿ ಮುಂದಣ ಹೆಜ್ಜೆಗೆ ಸಾಮರ್ಥ್ಯವೀಯುತ್ತದೆ.[೨]

ದಾರಿ ನನಗೆ ಗೊತ್ತು. ಅದು ನೇರ ಮತ್ತು ಇಕ್ಕಟ್ಟು– ಕತ್ತಿಯ ಅಲಗಿನಂತೆ. ಅದರ ಮೇಲೆ ನಡೆಯುವುದೆಂದರೆ ನನಗೆ ಉಲ್ಲಾಸ. ಜಾರಿದಾಗಲೆಲ್ಲ ಕಣ್ಣೀರಿಡುತ್ತೇನೆ. 'ನಮೇ ಭಕ್ತಃ ಪ್ರಣಶ್ಯತಿ' ಎಂದು ದೇವರ ವಚನವಿದೆ. ಆ ವಚನದಲ್ಲಿ ನನಗೆ ದೃಢವಾಧ ನಂಬಿಕೆಯಿದೆ. ಆದ್ದರಿಂದ ನನ್ನ ದೌರ್ಬಲ್ಯದ ಪರಿಣಾಮವಾಗಿ ಸಾವಿರ ಬಾರಿ ಸೋತರೂ ನಾನೆಂದಿಗೂ ಶ್ರದ್ಧೆಗೆಡುವುದಿಲ್ಲ. ಪ್ರತಿಯಾಗಿ, ಇಂದಲ್ಲ ನಾಳೆ, ಸ್ವತಃಸಿದ್ಧವಾಗಿ ಕೈಗೂಡಲೇ ಬೇಕಾಗಿರುವ ಇಂದ್ರಿಯ ಜಯ ಲಭಿಸಿದಂದು, ಬೆಳಕನ್ನು ಕಂಡೇಕಾಣುತ್ತೇನೆಂಬುದು ನನ್ನ ವಿಶ್ವಾಸ.[೩]

ಏಕೆಂದರೆ, ಸಾವಿನ ನಡುವೆ ಬಾಳು, ಸುಳ್ಳಿನ ನಡುವೆ ಸತ್ಯ, ತಮಸ್ಸಿನ ನಡುವೆ ಜ್ಯೋತಿ ಚಿರಸ್ಥಾಯಿಯಾಗಿರುವುದನ್ನು ನಾನು ಕಾಣುತ್ತಿದ್ದೇನೆ. ಭಗವಂತನೇ ಪ್ರಾಣಶಕ್ತಿ, ಅವನೇ ಸತ್ಯ ಮತ್ತು ಜ್ಯೋತಿ ಎಂಬುದು ನನ್ನ ವಿಶ್ವಾಸ. ಆತ ಪ್ರೇಮಸ್ವರೂಪಿ; ಆತನೆ ಪರಮ ಶ್ರೇಯಸ್ಸು.[೪]

ಬಾಲ್ಯದಿಂದಲೂ ನಾನೊಬ್ಬ ಸತ್ಯಾರಾಧಕ ಎಂಬುದು ನನ್ನ ವಿಶ್ವಾಸ. ಅದು ನನ್ನ ಅತ್ಯಂತ ಸಹಜ ಪ್ರವೃತ್ತಿ. ಉಪಾಸನಾಪೂರ್ವಕವಾದ ಶೋಧನೆಯಿಂದ ಭಗವಂತನೇ ಸತ್ಯ ಎಂಬ ರೂಢಿಯ ನಂಬಿಕೆಯ ಬದಲು ಸತ್ಯವೇ ಭಗವಂತ ಎಂಬ ಸೂತ್ರ ನನಗೆ ಸ್ಫುರಣವಾಯಿತು. ಭಗವಂತನನ್ನು ಪ್ರತ್ಯಕ್ಷವೋ ಎಂಬಂತೆ ಕಾಣಲು ಈ ಸೂತ್ರದಿಂದ ನನಗೆ ಸಾಧ್ಯವಾಗಿದೆ. ನನ್ನ ಚೇತನಸಮಸ್ತವನ್ನೂ ಆತ ವ್ಯಾಪಿಸಿದ್ದಾನೆ, ಎಂಬುದು ನನ್ನ ಅನುಭವ.[೫]

ಭಗವಂತನ ಪ್ರತ್ಯಕ್ಷ ದರ್ಶನದ ಹಂಬಲ ನನ್ನದು. ಭಗವಂತನೇ ಸತ್ಯ ಎಂಬುದನ್ನು ನಾನು ಬಲ್ಲೆ. ನನ್ನ ಪಾಲಿಗೆ ಭಗವಂತನನ್ನು ಕಾಣಲು ಇರುವ ಒಂದೇ ಒಂದು ನಿಶ್ಚಿತ ಮಾರ್ಗವೆಂದರೆ ಅಹಿಂಸೆ, ಪ್ರೇಮ.[೬]

ಅಹಿಂಸೆ ನನ್ನ ದೇವರು. ಸತ್ಯ ನನ್ನ ದೇವರು. ಅಹಿಂಸೆಯ ಸಾಧನೆಗಾಗಿ ನಾನು ಶ್ರಮಿಸುವಾಗ ಸತ್ಯ ಹೇಳುತ್ತದೆ; "ನನ್ನ ಮೂಲಕವೇ ಅದರ ಸಿದ್ಧಿ" ಎಂದು. ಸತ್ಯದ ಸಾಧನೆಗಾಗಿ ನಾನು ಶ್ರಮಿಸುವಾಗ ಅಹಿಂಸೆ ಹೇಳುತ್ತದೆ: "ನನ್ನ ಮೂಲಕವೇ ಅದರ ಸಿದ್ಧಿ."[೭]

---

೨. ೨. ಅದೇ, ೯.೪.೨೬
೩. ಯಂಗ್ ಇಂಡಿಯಾ, ೧೬.೬.೨೬
೪. ಅದೇ, ೧೧.೧೦.೧೯೨೮
೫. ಹರಿಜನ್, ೯.೮.೧೯೪೨
೬. ಆತ್ಮಕಥೆ
೭. ಯಂಗ್ ಇಂಡಿಯಾ, ೪.೬.೧೯೨೫

ಭಾರತದ ಸ್ವಾತಂತ್ರ್ಯ ಸಾಧನೆಯೇ ನನ್ನ ಜೀವಿತೋದ್ದೇಶ. ಅದಕ್ಕಾಗಿ ನಾನು ಸಾಯಲು ಕೂಡ ಸಿದ್ಧ. ಏಕೆಂದರೆ ಭಾರತದ ಸ್ವಾತಂತ್ರ್ಯ ಸತ್ಯದ ಒಂದು ಅಂಶ. ಬಂಧಮುಕ್ತವಾದಾಗಲೆ ಭರತಖಂಡ ಸತ್ಯಸ್ವರೂಪನಾದ ಭಗವಂತನನ್ನು ಪೂಜಿಸಬಲ್ಲದು. ಭಾರತದ ಬಿಡುಗಡೆಗಾಗಿ ನಾನು ದುಡಿಯತ್ತಿದ್ದೇನೆ; ಏಕೆಂದರೆ ಭಾರತದಲ್ಲಿ ಬದುಕಿ ಅದರ ಸಂಸ್ಕೃತಿಯನ್ನು ಪಡೆದಿರುವುದರಿಂದ ಅದರ ಸೇವೆಗೆ ನಾನು ಅತ್ಯಂತ ಅರ್ಹ ಎಂಬುದನ್ನು, ನನ್ನ ಸೇವೆಯ ಮೊದಲ ಹಕ್ಕು ಭಾರತದ್ದು ಎಂಬುದನ್ನು ನನ್ನ ಸ್ವದೇಶಿ ನನಗೆ ಕಲಿಸಿದೆ. ನನ್ನ ದೇಶಭಕ್ತಿ ಭಾರತಕ್ಕೆ ಮಾತ್ರ ಮೀಸಲಾದುದಲ್ಲ. ಬೇರೆ ಯಾವ ರಾಷ್ಟ್ರದ ಹಿತಕ್ಕೂ ಧಕ್ಕೆಯೊದಗಬಾರದು ಎಂಬುದಷ್ಟೇ ಅಲ್ಲ; ಸಕಲ ರಾಷ್ಟ್ರಗಳಿಗೂ, ಆ ಪದದ ಸಂಪೂರ್ಣಾರ್ಥದಲ್ಲಿ, ಸರ್ವಲಾಭ ಒದಗಬೇಕು ಎಂಬುದೇ ನನ್ನ ಮಾತಿನ ಆಶಯ. ನಾನು ಸಂಕಲ್ಪಿಸಿರುವ ಭಾರತದ ಸ್ವಾತಂತ್ರ್ಯ ಎಂದೆಂದೂ ಲೋಕಹಿತಕಂಟಕವಾಗಲಾರದು.[೮]

ವಿಶ್ವಾತ್ಮಕವೂ ವಿಶ್ವವ್ಯಾಪಿಯೂ ಆದ ಸತ್ಯವನ್ನು ಸಾಕ್ಷಾತ್ತಾಗಿ ಸಂದರ್ಶಿಸಬೇಕಾದರೆ ಸೃಷ್ಟಿಯಲ್ಲಿ ಕ್ಷುದ್ರತಮವಾದುದನ್ನೂ ತನ್ನಂತೆ ಪ್ರೀತಿಸುವುದು ಸಾಧ್ಯವಾಗಲೇಬೇಕು. ಆ ಹಂಬಲವನ್ನು ತುಂಬಿಕೊಂಡವನು ಜೀವನದ ಯಾವ ಕ್ಷೇತ್ರದಿಂದಲೂ ವಿಮುಖನಾಗಲು ಸಾಧ್ಯವಿಲ್ಲ. ನನ್ನ ಸತ್ಯಶ್ರದ್ಧೆ ನನ್ನನ್ನು ರಾಜಕೀಯ ಕ್ಷೇತ್ರಕ್ಕೆ ಎಳೆದು ತಂದಿರುವುದು ಈ ಕಾರಣದಿಂದಲೇ, ಅಧ್ಯಾತ್ಮಕ್ಕೂ ರಾಜಕೀಯಕ್ಕೂ ಏನೂ ಸಂಬಂಧವಿಲ್ಲ ಎನ್ನುವವರಿಗೆ ಅಧ್ಯಾತ್ಮವೆಂದರೇನು ಎಂಬುದೇ ತಿಳಿಯದೆಂದು ಸ್ವಲ್ಪವೂ ಅಳುಕದೆ, ಆದರೆ ವಿನೀತನಾಗಿ ನಾನು ಹೇಳಬಲ್ಲೆ.[೯]

ಆತ್ಮಶ್ರೀವಿದೂರವಾದ ರಾಜಕೀಯ ನನ್ನ ಪಾಲಿಗೆ ಸರ್ವಥಾ ತ್ಯಾಜ್ಯವಾದ ಕಲಂಕ. ರಾಜಕೀಯ ರಾಷ್ಟ್ರಗಳನ್ನು ಕುರಿತದ್ದು. ಯಾವುದು ರಾಷ್ಟ್ರಗಳ ಹಿತವನ್ನು ಕುರಿತದ್ದೊ ಅದು ಅಧ್ಯಾತ್ಮ ಪ್ರವೃತ್ತಿಯುಳ್ಳ ವ್ಯಕ್ತಿಯ, ಎಂದರೆ ಸತ್ಯದ ಮತ್ತು ಭಗವಂತನ ಅನ್ವೇಷಕನ ಸಾಧನೆಯ ಅಂಗಗಳಲ್ಲಿ ಒಂದಾಗಿರುವುದು ಅನಿವಾರ್ಯ. ನನಗಾದರೊ ಭಗವಂತನೆಂದರೂ ಒಂದೇ ಸತ್ಯವೆಂದರೂ ಒಂದೇ. ಭಗವಂತ ಅಸತ್ಯದ ಮೂರ್ತಿಯೆಂದೂ, ಹಿಂಸೆಯ ಮೂರ್ತಿ ಎಂದೂ ಯಾರಾದರೂ ಸ್ಥಿರಪಡಿಸಿದರೆ ಅಂತಹ ಭಗವಂಗನನ್ನು ಪೂಜಿಸಲು ನಾನು ನಿರಾಕರಿಸುತ್ತೇನೆ. ರಾಜಕೀಯದಲ್ಲಿ ಕೂಡ ಭಗವಂತನ ರಾಜ್ಯ ಸ್ಥಾಪಿತವಾಗಬೇಕಾಗಿದೆ. ನನ್ನ ಬದುಕಿನ ಅತ್ಯಂತ ಆತ್ಮೀಯ ವಸ್ತುಗಳಿಂದ ರಾಜಕೀಯವನ್ನು ಬೇರ್ಪಡಿಸಲಾರೆ. ಕಾರಣ ಇಷ್ಟೆ; ನನ್ನ ರಾಜಕೀಯ ಕಲುಷಿತವಲ್ಲ. ಈ ಎಲ್ಲವೂ ಸತ್ಯ ಅಹಿಂಸೆಗಳೊಂದಿಗೆ ಜಟಿಲವಾಗಿ ಹೆಣೆದುಕೊಂಡಿವೆ. ಸತ್ಯವನ್ನು ಬಲಿಗೊಟ್ಟು ಸ್ವಾತಂತ್ರ್ಯವನ್ನು ಪಡೆಯುವದಕ್ಕಿಂತ ಭಾರತ ವಿನಾಶಹೊಂದುವುದೇ ಹೆಚ್ಚು ಲೇಸೆಂಬುದು ನನ್ನ ಮತ. ರಾಜಕೀಯ ಸಂಪರ್ಕವಿಲ್ಲದೆ ಸಮಾಜಸೇವೆಯಂಥ ಕೆಲಸವನ್ನು ಕೂಡ

---

೮. ಆತ್ಮಕಥೆ

೯. ಅದೇ

ನಡೆಸುವುದು ಅಸಾಧ್ಯವೆಂಬುದು ನನ್ನ ಅನುಭವಕ್ಕೆ ಬಂದುದರಿಂದ ರಾಜಕೀಯ ಕ್ಷೇತ್ರವನ್ನು ನಾನು ಪ್ರವೇಶಿಸುವುದು ಅನಿವಾರ್ಯವಾಯಿತು. ಸಾಮಾಜಿಕ ಮತ್ತು ನೈತಿಕ ದೃಷ್ಟಿಯಿಂದ ರಾಜಕೀಯ ಕಾರ್ಯವು ಪರಿಗಣಿತವಾಗಲೇಬೇಕು.

ಮಾನವನ ಮನಸ್ಸಾಗಲಿ ಸಮಾಜವಾಗಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಎಂಬ ಪ್ರತ್ಯೇಕ ವಿಭಾಗಗಳಾಗಿ ವಿಂಗಡಣೆಯಾಗಿಲ್ಲ ಎಂಬುದು ನನ್ನ ವಿಶ್ವಾಸ. ಅವುಗಳ ನಡುವೆ ಕ್ರಿಯೆ. ಪ್ರತಿಕ್ರಿಯೆಗಳು ಇದ್ದೇ ತೀರುತ್ತವೆ.[೧೦]

ಆತ್ಮಶ್ರೀನಿಯಮಕ್ಕೆ ತನ್ನದೇ ಆದ ಒಂದು ಕ್ಷೇತ್ರವಿದೆ ಎಂಬುದನ್ನು ನಾನು ನಂಬುವುದಿಲ್ಲ. ಬದಲು, ಅದು ಜೀವನದ ಸಾಮಾನ್ಯ ವ್ಯಾಪಾರಗಳ ಮೂಲಕವಾಗಿ ಮಾತ್ರವೇ ವ್ಯಕ್ತಗೊಳ್ಳುತ್ತದೆ. ಹೀಗೆ ಅದು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಲಯಗಳ ಮೇಲೂ ಪರಿಣಾಮವನ್ನುಂಟು ಮಾಡುತ್ತದೆ.[೧೧]

ಮಾನವಜೀವಿತದ ಪರಮೋದ್ದೇಶ ಭಗವತ್ಸಾಕ್ಷಾತ್ಕಾರ. ಅವನ ಕರ್ಮಕ್ರಿಯೆಗಳೇನೆ ಇರಲಿ ಸಾಮಾಜಿಕ, ರಾಜಕೀಯ, ಧಾರ್ಮಿಕ ಎಲ್ಲವೂ ಈ ಈಶ್ವರಸಾಕ್ಷಾತ್ಕಾರ ಪರಮೋದ್ದೇಶದಿಂದಲೇ ನಿಯಂತ್ರಿತವಾಗಿರಬೇಕು. ಮಾನವಸೇವೆಯೆ ಈ ಸಾಧನೆಯ ಪ್ರಪ್ರಥಮ ಅನಿವಾರ್ಯಾಂಗವಾಗುತ್ತದೆ. ಏಕೆಂದರೆ ಇಷ್ಟೆ: ಈಶ್ವರದರ್ಶನಕ್ಕಿರುವ ಏಕೈಕ ಮಾರ್ಗವೆಂದರೆ ಆತನ ಸೃಷ್ಟಿಯಲ್ಲಿಯೆ ಆತನನ್ನು ಕಂಡು ಅದರಲ್ಲಿಯೆ ಒಂದಾಗಿರುವುದು. ಸರ್ವರ ಸೇವೆಯೊಂದೇ ಇದಕ್ಕೆ ಸಾಧನ. ನಾನು ಈ ಸರ್ವದ ಒಂದು ಅಂಶ. ಇತರರನ್ನುಳಿದು ನಾನೊಬ್ಬನೇ ಆತನನ್ನು ಪಡೆಯಲಾರೆ.[೧೨]

ಈಶ ಸೇವೆ ಅರ್ಥಾತ್ ಮಾನವಸೇವೆಯೇ ನನ್ನ ಧರ್ಮ; ನಿಷ್ಕಾಮ ಸೇವೆಯಿಂದ ಸೇವೆ ಸಲ್ಲಿಸುವುದೆಂದರೆ ಇತರರಿಗೆ ನಾವು ಉಪಕಾರಮಾಡಿದ್ದಕ್ಕಿಂತ ನಮ್ಮ ಸಾಲವನ್ನು ನಾವು ತೀರಿಸಿಕೊಂಡು ಕೃತಕೃತ್ಯರಾದಂತೆ. ನಮ್ಮ ಹೊಣೆಯನ್ನು ನಾವೇ ಇಳಿಸಿಕೊಂಡು ನಮ್ಮ ಕರ್ತವ್ಯವನ್ನು ಪರಿಪಾಲಿಸುವುದರ ಮೂಲಕ ನಮಗೆ ನಾವು ಉಕಾರಮಾಡಿಕೊಳ್ಳುತ್ತೇವೆ. ನಮ್ಮಲ್ಲಿ ಒಳ್ಳೆಯವರೆನಿಸಿಕೊಂಡವರು ಮಾತ್ರವಲ್ಲ, ನಾವೆಲ್ಲರೂ ನಮ್ಮ ಸರ್ವಸಂಪತ್ತನ್ನೂ ಸರ್ವರಿಗಾಗಿ ವಿನಿಯೋಗಿಸಲು ಬದ್ಧರು. ಮೃಗಗಳಿಗಿಂತ ಮಾನವ ಭಿನ್ನ ಎಂದು ತೋರುವುದು ತ್ಯಾಗಧರ್ಮ ಒಂದರಿಂದಲೇ.[೧೩]

ಮನುಷ್ಯ ಎಷ್ಟರಮಟ್ಟಿಗೆ ಪರಾರ್ಥಕ್ಕಾಗಿ ಶ್ರಮಿಸುತ್ತಾನೆಯೊ ಅಷ್ಟರ ಮಟ್ಟಿಗೆ ಅವನು ದೊಡ್ಡವನಾಗುತ್ತಾನೆ.[೧೪]

---

೧೦. ಯಂಗ್ ಇಂಡಿಯಾ, ೨.೦೩.೨೨

೧೧. ಅದೇ, ೩.೯.೨೫

೧೨. ಹರಿಜನ, ೨೯.೮.೩೬

೧೩. ಯರವಾಡ ಮಂದಿರ

೧೪. ಯಂಗ್ ಇಂಡಿಯಾ, ೪.೧೨.೨೪

ನಾನು ಸೋದರಭಾವ ಅಥವಾ ತಾದಾತ್ಮ್ಯವನ್ನು ಸಾಧಿಸಲೆಳಸುವುದು ಕೇವಲ ಮಾನವಜೀವಿಗಳೊಂದಿಗೆ ಮಾತ್ರವಲ್ಲ, ಸಮಸ್ತ ಜೀವರಾಶಿಯೊಂದಿಗೆ, ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೊಂದಿಗೆ ಕೂಡ. ನಿಮ್ಮನ್ನು ಚಕಿತಗೊಳಿಸಬಹುದಾದ ಈ ಬಯಕೆಗೆ–ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೊಂದಿಗೆ ಕೂಡ. ನಿಮ್ಮನ್ನು ಚಕಿತಗೊಳೊಸಬಹುದಾದ ಈ ಬಯಕೆಗೆ–ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೊಂದಿಗೂ ತಾದಾತ್ಮ್ಯವನ್ನು ಸಾಧಿಸಬೇಕೆನ್ನುವ ಬಯಕೆಗೆ–ಕಾರಣವಿಷ್ಟೆ; ನಾವೆಲ್ಲರೂ ಒಬ್ಬನೇ ಭಗವಂತನಿಂದ ಬಂದವರು ಎಂದು ಹೇಳುತ್ತೇವಲ್ಲ; ಹಾಗಿರುವುದರಿಂದ ಯಾವುದೇ ರೂಪದಲ್ಲಿ ಗೋಚರಿಸಿದರೂ ಮಾಲತಃ ಎಲ್ಲ ಜೀವವೂ ಒಂದೇ.[೧೫]

ಭಗವಂತನ ಕೇವಲ ಅಖಂಡತೆಯನ್ನು ನಾನು ನಂಬುತ್ತೇನೆ; ಆದುದರಿಂದಲೇ ಜನತೆಯ ಅಖಂಡತೆಯಲ್ಲೂ ನನಗೆ ಶ್ರದ್ಧೆಯಿರುವುದು. ಒಬ್ಬನು ಮಾತ್ರ ಅಧ್ಯಾತ್ಮಲಾಭ ಪಡೆದು ಅವನ ಸುತ್ತಣ ಜನರು ತೊಳಲುತ್ತಾರೆ ಎಂಬುದನ್ನು ನಾನು ನಂಬುವುದಿಲ್ಲ. ಅದ್ವೈತದಲ್ಲಿ ನನಗೆ ಶ್ರದ್ಧೆಯಿದೆ. ತತ್ವಶಃ ಮಾನವನ ಅಖಂಡತೆಯಲ್ಲಿ, ಹಾಗೆ ನೋಡಿದರೆ ಜೀವಸಮಸ್ತದ ಅಖಂಡತೆಯಲ್ಲಿ ನನಗೆ ವಿಶ್ವಾಸವುಂಟು. ಆದುದರಿಂದಲೆ ಒಂದು ವ್ಯಕ್ತಿಗೆ ಅಧ್ಯಾತ್ಮಲಾಭವಾದರೆ ಇಡಿಯ ವಿಶ್ವಕ್ಕೆ ಆ ಲಾಭ ಒದಗುತ್ತದೆ. ಒಂದು ವ್ಯಕ್ತಿ ಪತನ ಹೊಂದಿದರೆ ಅಷ್ಟರ ಮಟ್ಟಿಗೆ ಇಡಿಯ ವಿಶ್ವದ ಪತನವೇ ಆಗುತ್ತದೆ ಎಂದು ನಾನು ಭಾವಿಸಿರುವುದು.[೧೬]

ಈ ಪೃಥ್ವಿಯ ನಶ್ವರ ಸಾಮ್ರಾಜ್ಯದ ಬಯಕೆ ನನಗಿಲ್ಲ. ಮೋಕ್ಷರೂಪನಾದ ಅಮರ ಸಾಮ್ರಾಜ್ಯಕ್ಕಾಗಿ ನಾನು ಶ್ರಮಿಸುತ್ತಿದ್ದೇನೆ. ನನ್ನ ಧ್ಯೇಯ ಸಾಧನೆಗಾಗಿ ನಾನು ಗುಹಾನಿವಾಸಿಯಾಗಬೇಕಾಗಿಲ್ಲ.[೧೭]

ದೇಶದ, ತನ್ಮೂಲಕ ಮಾನವತೆಯ ಸೇವೆಗಾಗಿ ಎಡೆಬಿಡದೆ ದುಡಿಯುವುದೇ ನನ್ನ ಮೋಕ್ಷಪಥ. ಜೀವಸಮಸ್ತದೊಂದಿಗೆ ಅನನ್ಯತೆಯನ್ನು ಸಾಧಿಸುವುದೇ ನನ್ನ ಬಯಕೆ. [೧೮]

ಯಾವ ನೂತನ ಸಿದ್ಧಾಂತಗಳನ್ನೂ ನಾನು ಮಂಡಿಸಿಲ್ಲ. ಅದರ ಬದಲು ಪುರಾತನ ಸಿದ್ಧಾಂತಗಳ ಪುನರ್ನಿರೂಪಣೆಯ ಪ್ರಯತ್ನವೆ ನನ್ನದು. ಅದು ಎಷ್ಟರ ಮಟ್ಟಿಗೆ ಸರಿಯಾಗಿ ಸಾಗಿದೆಯೊ ಹೇಳಲಾರೆ. ಆದರೆ ಅದು ನನ್ನ ಪ್ರಾಮಾಣಿಕವಾದ ನಂಬಿಕೆಯನ್ನು ಪ್ರತಿನಿಧಿಸುತ್ತಿದೆ.[೧೯]

---

೧೫. ಹರಿಜನ, ೪.೪.೨೯

೧೬. ಯಂಗ್ ಇಂಡಿಯಾ, ೪.೧೨.೨೪

೧೭. ಯಂಗ್ ಇಂಡಿಯಾ, ೩.೪.೩೪

೧೮. ಅದೇ, ೩.೪.೩೪

೧೯. ಯಂಗ್ ಇಂಡಿಯಾ, ೩.೧೨.೩೬

ಗಾಂಧೀಪಂಥ ಎಂಬುದೊಂದಿಲ್ಲ. ನನ್ನ ತರುವಾಯ ಯಾವ ಪಂಥವನ್ನು ಕಟ್ಟಿಹೋಗುವ ಇಚ್ಛೆ ನನಗಿಲ್ಲ. ನಾನು ಯಾವುದಾದರೂ ನೂತನ ತತ್ವದ ಅಥವಾ ಸಿದ್ಧಾಂತದ ಮೂಲಪುರುಷ ಎಂಬ ಭಾವನೆ ನನಗಿಲ್ಲ. ನಿತ್ಯ ಸತ್ಯಗಳನ್ನು ನಮ್ಮ ದೈನಂದಿನ ಜೀವನ ಹಾಗೂ ಸಮಸ್ಯೆಗಳಿಗೆ ಅಳವಡಿಸಲು ನನ್ನ ರೀತಿಯಲ್ಲಿ ನಾನು ಸಾಧಾರಣನಂತೆ ಪ್ರಯತ್ನಿಸಿದ್ದೇನೆ; ಅಷ್ಟೆ. ಸತ್ಯ ಅಹಿಂಸೆ–ಈ ಭಾವಗಳು ಪರ್ವತಗಳಷ್ಟೇ ಪುರಾತನವಾದುವು. ನನ್ನ ಶಕ್ತಿಗೆ ಸಾಧ್ಯವಾದಷ್ಟು ವಿಪುಲ ಪ್ರಮಾಣದಲ್ಲಿ ಅವೆರಡರಲ್ಲೂ ಪ್ರಯೋಗಗಳನ್ನು ನಡೆಸಿರುವುದಷ್ಟೆ ನನ್ನ ಕೆಲಸ. ಹಾಗೆ ಮಾಡುವಾಗ ಕೆಲವು ಸಲ ತಪ್ಪು ಮಾಡಿದ್ದೇನೆ; ಆ ತಪ್ಪುಗಳಿಂದ ಪಾಠ ಕಲಿತಿದ್ದೇನೆ.ಹೀಗೆ ಜೀವನ ಮತ್ತು ಅದರ ಸಮಸ್ಯಗಳು ಸತ್ಯ ಅಹಿಂಸೆಗಳ ಅನುಷ್ಠಾನಗಳಲ್ಲಿ ನಡೆಸಿರುವ ಅನೇಕ ಪ್ರಯೋಗಗಳಾಗಿವೆ.[೨೦]

ನಿಮ್ಮ ಮಂದೆ ಉದ್ಭವಿಸಿರುವ ಸಮಸ್ಯೆಗಳನ್ನು ನನ್ನ ಹೇಳಿಕೆಗೆ ಅನುಸಾರವಾಗಿ ಎದುರಿಸಬೇಕೆಂಬುದೇ ನನ್ನ ಇಚ್ಛೆ. ಹೀಗೆ ಸತ್ಯ ಅಹಿಂಸೆಗಳಲ್ಲಿ ನನ್ನ ಶ್ರದ್ಧೆ ವರ್ಧಿಸುತ್ತಲೇ ಇದೆ. ನನ್ನ ಜೀವನದಲ್ಲಿ ಅವುಗಳನ್ನು ಅನುಸರಿಸುತ್ತ ಹೋದಂತೆ ನಾನು ಕೂಡ ಪ್ರತಿಕ್ಷಣವೂ ಬೆಳೆಯುತ್ತಲೇ ಇದ್ದೇನೆ. ಅವುಗಳಲ್ಲಿ ನನಗೆ ಹೊಸ ಅರ್ಥ ಸ್ಫುರಿಸುತ್ತಿದೆ. ದಿನದಿನವೂ ಅವುಗಳನ್ನು ಹೊಸ ಹೊಸ ಬೆಳಕಿನಲ್ಲಿ ಕಂಡು ಹೊಸ ಹೋಸ ಅರ್ಥಗಳನ್ನೂ ಅರಿಯುತ್ತಿದ್ದೇನೆ. ನನ್ನ ಜತೆಜತೆಗೆ ನೀವೂ ಕೂಡ ಬೆಳೆಯಬೇಕು. ನನ್ನ ಅನಂತರ ಏನಾಗುತ್ತದೆ ಎಂಬುದನ್ನು ತಿಳಿಯುವ ಚಿಂತೆ ನನಗಿರಕೂಡದು. ಆದುದರಿಂದ ನನ್ನನ್ನು ಮರೆತುಬಿಡಿ. ನೀವು ಭದ್ರವಾಗಿ ಅಂಟಿಕೊಳ್ಳಬೇಕಾದುದು ನನ್ನ ಹೆಸರಿಗಲ್ಲ, ತತ್ತ್ವಗಳಿಗೆ, ಅದರ ಅಳತೆಗೋಲಿನಿಂದ ನಿಮ್ಮ ಒಂದೋಂದು ಚಟುವಟಿಕೆಯನ್ನೂ ಅಳೆದು, ಉದ್ಭವಿಸಬಹುದಾದ ಎಲ್ಲ ಸಮಸ್ಯೆಗಳನ್ನೂ ನಿರ್ಭೀತರಾಗಿ ಎದುರಿಸಿ.[೨೧]

ನಿಲ್ಲುವುದು ನನ್ನ ಕೃತಿಯೇ ಹೊರತು, ನನ್ನ ಮಾತೂ ಅಲ್ಲ, ಬರಹವೂ ಅಲ್ಲ. ಇತ್ತೀಚೆಗೆ ನಾನು ಈ ಮಾತನ್ನು ಅನೇಕ ಸಲ ಹೇಳಿದ್ದೇನೆ. ಸಕಲ ಶಾಸ್ತ್ರಗಳೂ ಒಂದು ವೇಳೆ ವಿನಾಶ ಹೊಂದುವುದಾದರೂ ಹಿಂದೂ ಧರ್ಮದ ಸಾರವನ್ನು ಸಾರಲು ಈಶೋಪನಿಷತ್ತಿನ ಒಂದು ಮಂತ್ರ ಸಾಕು; ಆದರೆ ಅದನ್ನು ಅನುಷ್ಠಾನಕ್ಕೆ ತರಲು ಯಾರೊಬ್ಬರೂ ಇರದಿದ್ದರೆ ಆ ಒಂದು ಮಂತ್ರವೂ ನಿರರ್ಥಕ. ಅದರಂತೆಯೆ ನನ್ನ ಮಾತು ಬರಹಗಳು ಸತ್ಯ ಅಹಿಂಸೆಯ ಮಹಾ ತತ್ತ್ವಗಳನ್ನು ರಕ್ತಗತಮಾಡಿಕೊಳ್ಳಲು ನಿಮಗೆ ನೆರವು ನೀಡಿರುವಷ್ಟರ ಮಟ್ಟಿಗೆ ಮಾತ್ರ ಉಪಯುಕ್ತ. ಅವುಗಳನ್ನು ನೀವು ಹಾಗೆ ರಕ್ತಗತ ಮಾಡಿಕೊಳ್ಳದಿದ್ದರೆ ನನ್ನ ಬರಹಗಳಿಂದ ನಿಮಗೆ ಯಾವ ಪ್ರಯೋಜನವೂ ಇಲ್ಲ. ಒಬ್ಬ ಸತ್ಯಾಗ್ರಹಿಯಾಗಿ ನಾನು ಈ ಒಂದೊಂದು ಮಾತನ್ನೂ ಉದ್ದೇಶ ಪೂರ್ವಕವಾಗಿ ಹೇಳುತ್ತಿದ್ದೇನೆ.[೨೨]

---

೨೦. ಹರಿಜನ, ೨೮.೩.೩೬

೨೧. ಹರಿಜನ, ೧.೫.೩೭

೨೨. ಅದೇ,

ಗಾಂಧೀಪಂಥ ಎಂಬುದು ದೋಷದ ಪ್ರತೀಕವಾಗಿರುವುದಾದರೆ ಅದು ನಾಶ ಹೊಂದಲಿ. ಸತ್ಯ ಅಹಿಂಸೆಗಳು ಅಜರಾಮರ. ಆದರೆ ಗಾಂಧೀಪಂಥ ಎಂಬುದು ಪಂಥಾಭಿಮಾನಕ್ಕೆ ಮತ್ತೊಂದು ಹೆಸರಾದರೆ ಅದು ವಿನಾಶ ಯೋಗ್ಯವೇ ನಿಜ. ತಾನು ಗಾಂಧೀಯ ಅನುಯಾಯಿ ಎಂದು ಯಾರೊಬ್ಬನೂ ಹೇಳದಿರಲಿ. ನಾನು ನನ್ನನ್ನು ಅನುಸರಿಸಿದರೆ ಸಾಕು. ಅದರಲ್ಲೂ ನಾನು ಎಂತಹ ಅಸಮರ್ಪಕ ಅನುಯಾಯಿ ಎಂಬುದನ್ನು ನಾನು ಬಲ್ಲೆ; ಯಾವ ತತ್ವಗಳಿಗಾಗಿ ನಾನು ನಿಂತಿದ್ದೇನೆಯೊ ಅವುಗಳಿಗೆ ತಕ್ಕಂತೆ ನಾನು ಬಾಳುತ್ತಿಲ್ಲ. ನೀವು ಅನುಯಾಯಿಗಳಲ್ಲ; ಸಹ ವಿದ್ಯಾರ್ಥಿಗಳು, ಸಹ ಯಾತ್ರಿಕರು, ಸಹ ಅನ್ವೇಷಕರು, ಸಹ ಉದ್ಯೋಗಿಗಳು.[೨೩]

ಸತ್ಯ ಅಹಿಂಸೆಗಳನ್ನು ಕೇವಲ ವೈಯಕ್ತಿಕ ಅನುಷ್ಠಾನದ ತತ್ವಗಳನ್ನಾಗಿ ಮಾಡಿಕೊಂಡರೆ ಸಾಲದು; ಸಮಾಜ ಸಮುದಾಯಗಳು, ರಾಷ್ಟ್ರಗಳು ಕೂಡ ಅವುಗಳನ್ನು ಅನುಷ್ಠಾನಕ್ಕೆ ತರುವಂತಾಗಬೇಕು ಹೇಗೇ ಆಗಲಿ, ಅದಂತೂ ನನ್ನ ಕನಸು ನನ್ನ ಬದುಕೆಲ್ಲ ಅದರ ಸಾಕ್ಷಾತ್ಕಾರದ ಪ್ರಯತ್ನಕ್ಕಾಗಿಯೆ. ನನ್ನ ಸಾವೂ ಅದರಲ್ಲಿಯೆ. ನನ್ನ ಶ್ರದ್ಧೆ ನನಗೆ ಅನುದಿನವೂ ನೂತನ ಸತ್ಯಗಳನ್ನು ಕಾಣಿಸುತ್ತಿದೆ. ಆತ್ಮದ ಸ್ವರೂಪವೆ ಅಹಿಂಸೆ; ಆದುದರಿಂದಲೆ ಸಕಲರೂ ಬದುಕಿನ ಸಕಲ ವ್ಯವಹಾರಗಳಲ್ಲೂ ಅದನ್ನು ಅನುಷ್ಠಾನಕ್ಕೆ ತರಬೇಕು. ಎಲ್ಲ ಕ್ಷೇತ್ರಗಳಲ್ಲೂ ಅದನ್ನು ಅನುಷ್ಠಾನ ಮಾಡಲಾಗದಿದ್ದರೆ ಅದಕ್ಕೆ ಔಪಯೋಗಿಕ ಮೌಲ್ಯವೇ ಇಲ್ಲ.[೨೪]

ನನ್ನ ದೇಶಕ್ಕಾಗಿ ನಾನು ತ್ಯಾಗ ಮಾಡಲಾರದುದು ಈ ಜಗತ್ತಿನಲ್ಲಿ ಏನೂ ಇಲ್ಲ– ಎರಡರ ಹೊರತು. ಅವು ಸತ್ಯ ಮತ್ತು ಅಹಿಂಸೆ. ಇಡೀ ಜಗತ್ತನ್ನೇ ನನ್ನ ಮುಂದಿಟ್ಟರೂ ಈ ಎರಡನ್ನು ಮಾತ್ರ ನಾನು ಬಿಡಲಾರೆ. ಏಕೆಂದರೆ ನನ್ನ ಪಾಲಿಗೆ ಸತ್ಯವೇ ದೇವರು. ಸತ್ಯ ಸಾಧನೆಗೆ ಅಹಿಂಸೆಯಲ್ಲದೆ ಅನ್ಯ ಪಥವಿಲ್ಲ. ಸತ್ಯ ಅಥವಾ ಭಗವಂತನನ್ನು ಬಲಿಗೊಟ್ಟು ಭಾರತಕ್ಕೆ ಸೇವೆ ಸಲ್ಲಿಸುವ ಆಲೋಚನೆಯನ್ನು ನಾನು ಮಾಡಲಾರೆ. ನಾನು ಬಲ್ಲೆ. ಸತ್ಯವನ್ನು ಕೈ ಬಿಡಬಲ್ಲವನು ತನ್ನ ದೇಶವನ್ನೂ ಕೈ ಬಿಡಬಲ್ಲ, ಆಪ್ತೇಷ್ಟರನ್ನೂ ಕೈ ಬಿಡಬಲ್ಲ, ನನ್ನಾತ್ಮ ಮತ್ತು ನನ್ನ ಕರ್ತ ಇಬ್ಬರೂ ಮೆಚ್ಚುವಂತೆ ನಾನು ಹೋದೆಡೆಯೆಲ್ಲಾ ನನ್ನ ಕರ್ಮಕ್ಷೇತ್ರದ ಗಾಯತ್ರಿಗಳಾದ ಈ ನನ್ನ ಧರ್ಮಸೂತ್ರಗಳನ್ನು ಸಾರುತ್ತ ಹೋಗುತ್ತೇನೆ.

ನನ್ನದು ಧರ್ಮಮಾರ್ಗ, ನಾವು ಧರ್ಮಿಗಳು, ಆದುದರಿಂದ ಉಳಿದವರಿಗೆ ನಾವು ಶ್ರೇಷ್ಠರು ಎಂಬ ಅಹಂಭಾವ ನಮ್ಮನ್ನು ಆಕ್ರಮಿಸುವ ಭಯ ಯಾವಾಗಲೂ ಇದ್ದೇ ಇದೆ. ಇತರರಿಂದ ನಾನು ನಿರೀಕ್ಷಿಸುವಂತೆ ಸ್ವವಿಮರ್ಶೆಯಲ್ಲಿ ಸತ್ಯದಂತೆಯೆ ನಿಷ್ಠುರವಾಗಿರಲು ನಾನು ಪ್ರತ್ನಿಸುತ್ತೇನೆ.[೨೫]

“ಗಾಂಧೀತತ್ವ” ಎಂದು ಯಾವುದನ್ನು ಕರೆಯುತ್ತಾರೊ ಅದನ್ನು ಅದರ ಪ್ರಸಾರವಿಧಾನಗಳನ್ನು ವಿಚಾರಿಸೋಣ. ಸತ್ಯ ಅಹಿಂಸೆಗಳನ್ನು ಕುರಿತು

೨೩. ಅದೇ, ೨.೩.೪೦
೨೪. ಹರಿಜನ ೧.೫.೩೭
೨೫. ಅದೇ, ೧೦.೫.೩೭

ಪುಸ್ತಕಗಳನ್ನು ಬರೆಯುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸತ್ಯ ಅಹಿಂಸೆಗಳ ಪ್ರಸಾರ ಸಾಧ್ಯ. ಅವುಗಳನ್ನು ಅನುಷ್ಠಾನಕ್ಕೆ ತಂದರೆ ಅನುಷ್ಠಾನದ ಜೀವನ ಪುಸ್ತಕಕ್ಕಿಂತ ಶ್ರೇಷ್ಠ. ಪುಸ್ತಕ ಮತ್ತು ಪತ್ರಿಕೆಗಳ ಪ್ರಕಟನೆ ಅನಗತ್ಯ ಎಂದು ನಾನು ಹೇಳುತ್ತಿಲ್ಲ. ಅವು ಅನಿವಾರ್ಯವೇನಲ್ಲ ಎಂದಷ್ಟೆ ನನ್ನ ಅಭಿಪ್ರಾಯ. ನಾವು ಸತ್ಯ ಅಹಿಂಸೆಗಳ ನಿಜವಾದ ಆರಾಧಕರಾಗುವ ಪಕ್ಷದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾಗಿ ಬೇಕಾದ ಬುದ್ಧಿಶಕ್ತಿಯನ್ನು ಭಗವಂತನೆ ನಮಗೆ ದಯಪಾಲಿಸುತ್ತಾನೆ. ಪ್ರತಿಪಕ್ಷದ ದೃಷ್ಟಿ ಏನೆಂದು ಅರಿಯಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಹಿಂಸೆಯ ಬಾಯನ್ನೇ ಅಹಿಂಸೆ ನೇರವಾಗಿ ಹೋಗುತ್ತದೆ ಎಂಬುದರ ಅರ್ಥ ಇದೇ. ಅಂತಹ ಮನೋಧರ್ಮದ ಕವಚ ನಮಗಿದ್ದರೆ ಅಹಿಂಸೆಯ ತತ್ವಗಳನ್ನು ಪ್ರಸಾರ ಮಾಡುವ ವಿಶ್ವಾಸ ನಮಗೆ ಬರುತ್ತದೆ. ಅದಿಲ್ಲದೆ ಪುಸ್ತಕ ಪತ್ರಿಕೆಗಳ ಪ್ರಚಾರ ವ್ಯರ್ಥ.[೨೬]

ನನ್ನ ಸಲಹೆಗಳಲ್ಲೆಲ್ಲ ಒಂದು ರಕ್ಷಾಸೂತ್ರ ಇದ್ದೇ ಇರುತ್ತದೆ. ತಮ್ಮ ಬುದ್ಧಿಗೂ ಹೃದಯಕ್ಕೂ ಒಪ್ಪಿಗೆಯಾಗದಿದ್ದರೆ ಯಾರೂ ಅವುಗಳನ್ನು ಅನುಸರಿಸಬೇಕಾಗಿಲ್ಲ.[೨೭]

ನನ್ನನ್ನು ಮೆಚ್ಚುವವರಿಗೂ ನನ್ನ ಮಿತ್ರರಿಗೂ ಒಂದು ಧೈರ್ಯ ಹೇಳಬಲ್ಲೆ. ಮಹಾತ್ಮಾ ಎಂಬುದನ್ನು ಮರೆತು ನನ್ನನ್ನು ಬರಿಯ 'ಗಾಂಧೀ' ಎಂದು ಭಾವಿಸುವುದಾದರೆ ಅವರು ನನ್ನ ಮೆಚ್ಚುಗೆಗೆ ಹೆಚ್ಚಾಗಿ ಪಾತ್ರರಾಗುತ್ತಾರೆ ನಾನು ಯಾವ ತತ್ವಗಳನ್ನು ಜೀವನದಲ್ಲಿ ಅನುಷ್ಠಾನ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇನೆಯೊ ಅದನ್ನು ತಾವು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕು; ಇಲ್ಲವೆ ಅದರಲ್ಲಿ ಅವರಿಗೆ ನಂಬುಗೆ ಇರದಿದ್ದ ಪಕ್ಷದಲ್ಲಿ ಅದನ್ನು ಸರ್ವರೀತಿಯಿಂದಲೂ ವಿರೋಧಿಸಬೇಕು– ಇದೇ ನನ್ನ ಮಿತ್ರರು ನನಗೆ ತೋರಿಸಬಹುದಾದ ಪರಮ ಗೌರವ.[೨೮]

ಯಾವ ಮಹಾ ಉದ್ಯಮದಲ್ಲಿಯೆ ಆಗಲಿ ನಿರ್ಣಾಯಕಾರಿಯಾಗುವುದು ಹೋರಾಡುವವರ ಸಂಖ್ಯೆಯಲ್ಲ, ಅವರ ಸತ್ವ, ಜಗತ್ತಿನ ಮಹಾವ್ಯಕ್ತಿಗಳೆಲ್ಲ ಏಕಾಂಗಿಯಾಗಿ ನಿಂತರು. ಝುರತುಷ್ಟ್ರ, ಬುದ್ಧ, ಯೇಸು, ಮಹಮ್ಮದ್ ಈ ಎಲ್ಲ ಮಹಾ ಪ್ರವಾದಿಗಳನ್ನೂ ಗಮನಿಸಿ. ನಾನಿನ್ನೂ ಹೆಸರಿಸಬಹುದಾದ ಇತರ ಹಲವರಂತೆಯೆ ಅವರೆಲ್ಲರೂ ಏಕಾಂಗಿಯಾಗಿಯೆ ಕೆಲಸ ಮಾಡಿದರು. ಅದರೆ ಅವರಿಗೆ ತಮ್ಮಲ್ಲಿಯೂ ಭಗವಂತನಲ್ಲಿಯೂ ಜೀವಂತ ಶ್ರದ್ಧೆಯಿತ್ತು; ಭಗವಂತ ತಮ್ಮ ಪಕ್ಕದಲ್ಲಿದ್ದಾನೆಂಬ ವಿಶ್ವಾಸ ಇದ್ದುದರಿಂದ ತಾವೇ ಏಕಾಕಿಗಳು ಎಂಬ ಭಾವನೆಯೆ ಅವರಿಗೆ ಬರಲಿಲ್ಲ.[೨೯]

ನನ್ನಲ್ಲಿರುವ ಏನೋ ಒಂದು ವಾಣಿ ನನ್ನ ಸಂಕಟವನ್ನು ಕೂಗಿ ಸಾರುವಂತೆ ನನ್ನನ್ನು ಪ್ರಚೋದಿಸುತ್ತಿದೆ. ಅದು ಯಾವುದೆಂಬುದನ್ನು ನಾನು ಖಚಿತವಾಗಿ ಬಲ್ಲೆ.

---

೨೬. ಹರಿಜನ ೧೩.೫.೩೯

೨೭ ಅದೇ, ೧೫.೭.೩೫

೨೮. ಯಂಗ್ ಇಂಡಿಯಾ ೧೨.೬.೨೪

೨೯. ಯಂಗ್ ಇಂಡಿಯಾ, ೧೦.೧೦.೩೯

ನನ್ನನ್ನೆಂದೂ ವಂಚಿಸದ ನನ್ನೊಳಗಿನ ಆ ವಾಣಿ ಹೇಳುತ್ತದೆ "ನೀನು ಒಬ್ಬೊಂಟಿಗನೆ ಆಗಿ ನಿಲ್ಲಬೇಕಾಗಿ ಬಂದರೂ ಸರಿ, ಇಡಿಯ ಜಗತ್ತನ್ನೇ ಎದುರಿಸಿ ನಿಲ್ಲಬೇಕಾಗುತ್ತದೆ. "ಜಗತ್ತು ನಿನ್ನನ್ನು ತನ್ನ ಕೆಂಗಣ್ಣಿನಿಂದ ದುರುದುರನೆ ನೋಡಿದರೂ ಸರಿ. ನೀನು ಅದರ ದೃಷ್ಟಿ ಕೊಟ್ಟು ನಿಲ್ಲಬೇಕಾಗುತ್ತದೆ. ಭೀತಿ ಬೇಡ. ನಿನ್ನ ಹೃದಯದಲ್ಲಿ ನೆಲಸಿ ಹೀಗೆಂದು ಹೇಳುತ್ತಿರುವ ಆ ಅಣುರೂಪಿಯಲ್ಲಿ ನಿನಗೆ ಶ್ರದ್ಧೆಯಿರಲಿ, ಯಾವುದಕ್ಕಾಗಿ ನೀನು ಬದುಕಿದ್ದೇಯೋ ಯಾವುದಕ್ಕಾಗಿ ನೀನು ಮಡಿಯಬೇಕೋ ಅದಕ್ಕಾಗಿ ಮನೆ ಮಠ ಮಡದಿ ಮಕ್ಕಳು ಸರ್ವಸ್ವವನ್ನೂ ಪರಿತ್ಯಜಿಸು; ಆದರೆ ಅದರ ಸತ್ಯಕ್ಕೆ ಸಾಕ್ಷಿಯಾಗಿ ಬಾಳು."[೩೦].

❖

---

೩೦. ಬಾಂಬೆ ಕ್ರಾನಿಕಲ್, ೯.೮.೪೨

ವಿಶೇಷ ದೃಷ್ಟಿ

{ಶ್ರೀ.ರಂ.ರಾ.ದಿವಾಕರ ಅವರಿಂದ}

ಒಂದು ರೀತಿ ನೋಡಿದರೆ ಮಹಾತ್ಮಾ ಗಾಂಧಿಯವರು ದಕ್ಷಿಣ ಆಫ್ರಿಕಾಕ್ಕೆ ಹೋದುದು ಆಕಸ್ಮಿಕವಾಗಿಯೆ. ಆದರೆ ಅಲ್ಲಿಯ ಅವರ ಜೀವನ, ಅಲ್ಲಿ ಅವರಿಗೆ ಎದುರಾದ ಸಮಸ್ಯೆಗಳು, ಅವುಗಳನ್ನು ಪರಿಹರಿಸುವ ಅವರ ವಿಶಿಷ್ಟ ಪದ್ಧತಿ ಇವುಗಳಿಂದಲೆ ಸತ್ಯ, ಅಹಿಂಸೆ, ಸತ್ಯಾಗ್ರಹ ಮತ್ತು ಸರ್ವೋದಯ ಈ ನಾಲ್ಕು ಮುಖ್ಯ ತತ್ವಗಳಿಗೆ ಕಳೆಯೇರಿತು ಹಾಗೂ ಅವು ಪ್ರತ್ಯಕ್ಷ ಆಚರಣದ ರೂಪವನ್ನು ತಾಳಿ ಮೈವೆತ್ತು ನಿಂತವು. ಗಾಂಧೀಜಿಯವರ ಮುಂದಿನ ಜೀವನವೆಲ್ಲ ಈ ಚತುಃಸೂತ್ರಗಳ ಮೇಲೆ ಬರೆದ ಮಹಾಭಾಷ್ಯ ಎಂದು ಹೇಳಬಹುದು.

ಈ ನಾಲ್ಕು ಶಬ್ದಗಳಲ್ಲಿ ಸತ್ಯ ಮತ್ತು ಅಹಿಂಸೆ ಇವೆರಡು ಪುರಾತನ ಶಬ್ದಗಳು. ವೇದೋಪನಿಷತ್ತುಗಳ ಕಾಲದಿಂದ ಅವು ಪ್ರಚಾರದಲ್ಲಿವೆ. ಆದರೆ ಅವುಗಳ ಗೂಢಾರ್ಥದರ್ಶನವನ್ನು ಪಡೆದು, ಅವುಗಳಿಗೆ ವಿಶಿಷ್ಟ ವಿಶಾಲಾರ್ಥಗಳನ್ನು ಕಲ್ಪಿಸಿ, ಅವುಗಳ ಅರ್ಥವಿಕಾಸವನ್ನು ಸಾಧಿಸಿ, ಅವುಗಳನ್ನು ಜೀವನ ವ್ಯಾಪಿಗಳನ್ನಾಗಿಸಿ ಮಾನವಜೀವನದ ಸಕಲ ಕ್ಷೇತ್ರಗಳಲ್ಲಿಯೂ ಅವುಗಳನ್ನು ಪ್ರತ್ಯಕ್ಷ ವ್ಯವಹರಿಸುವುದು ಸಾಧ್ಯ, ಅವಶ್ಯಕ ಮತ್ತು ಹಾಗೆ ಮಾಡುವುದೆ ನಿಜವಾದ ಮಾನವಧರ್ಮ ಎಂಬುದನ್ನು ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಲ್ಲಿಯೆ ಸಿದ್ಧ ಮಾಡಿದರು.

ಸತ್ಯಾಗ್ರಹ ಈ ಶಬ್ದವು ಹೊಸದು; ಸತ್ಯವಂತ, ಸತ್ಯಶೀಲ, ಸತ್ಯಸಂಧ, ಸತ್ಯನಿಷ್ಠ ಇತ್ಯಾದಿ ಶಬ್ದಗಳು ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವುವು. ಆದರೆ 'ಸತ್ಯಾಗ್ರಹ' ಇದು ಹೊಸ ಶಬ್ದವಿರುವದಲ್ಲದೆ ವಿಶಿಷ್ಟಾರ್ಥವುಳ್ಳದ್ದಿರುವುದು. ಸತ್ಯಾಗ್ರಹವೆಂದರೆ ಸತ್ಯವಾದ ಆಗ್ರಹವಲ್ಲ; ಸತ್ಯವನ್ನು ಕುರಿತು ಅಹಿಂಸಾಯುಕ್ತವಾದ ಅಥವಾ ಅಹಿಂಸಾಮಯವಾದ ಆಗ್ರಹ ಅಥವಾ ಹಠ. ಸತ್ಯಾಗ್ರಹ ಈ ಶಬ್ದವು ಹೊಸದು; ಅದರ ಅರ್ಥವು ನವೀನವಾದುದು; ಅದರ ಆಚರಣೆ ಅದ್ಭುತವಾದುದು; ಅಷ್ಟೇ ಅಲ್ಲ, ಆ ಸಂದರ್ಭದಲ್ಲಿ ಆ ರೀತಿ ಗಾಂಧೀಜಿಯವರು ಸತ್ಯಾಗ್ರಹವನ್ನು ಆಚರಿಸಿ ಮಾನವಕುಲಕ್ಕೆಯೆ ಒಂದು ಹೊಸ ಧರ್ಮ ಮಾರ್ಗವನ್ನು ಹಾಕಿಕೊಟ್ಟಿದ್ದಾರೆಂದು ಹೇಳಬೇಕಾಗಿರುವುದು.

ಸರ್ವೋದಯ ಈ ಶಬ್ದವು ಕೂಡ ಕಾಣಲು ಹಳೆಯದಾಗಿ ಕಂಡರೂ ಗಾಂಧೀಜಿಯವರು ಅದನ್ನು ಒಂದು ವಿಶಿಷ್ಟವಾದ ಸಮಾಜಧರ್ಮ (Social Philosophy) ಎಂಬ ಅರ್ಥದಿಂದ ಮೊಟ್ಟಮೊದಲು ಉಪಯೋಗಿಸಿದರು. ನ್ಯಾಷನ್ಯಾಲಿಝಮ್, ಕಮ್ಯೂನಿಝಮ್, ನಾಝಿಝಮ್, ಸೋಶಾಲಿಝಮ್ ಮುಂತಾದ ಹಲವಾರು ಶಬ್ದಗಳು ಹಾಗೂ ಸಮಾಜಪದ್ಧತಿಗಳು ಈಗ ಪ್ರಚಲಿತವಿರುವುವು. ಆದರೆ ಗಾಂಧೀಜಿಯವರು ಸತ್ಯ, ಅಹಿಂಸೆ, ಸತ್ಯಾಗ್ರಹ ಇವುಗಳ ತಳಹದಿಯ ಮೇಲೆ ಸಮಾಜದಲ್ಲಿಯ ಸರ್ವರ, ಸರ್ವತೋಪರಿ ಅಂದರೆ ಶಾರೀರಿಕ-ಮಾನಸಿಕ-ನೈತಿಕ-ಆತ್ಮಿಕ ಉದಯವನ್ನು ಸಾಧಿಸಲು ಅನುವಾದ ಒಂದು ಪದ್ಧತಿಯನ್ನು ಸ್ಪಷ್ಟಪಡಿಸಿದರು. ಇದನ್ನಾದರು ಅವರು ದಕ್ಷಿಣ ಆಫ್ರಿಕೆಯಲ್ಲಿರುವಾಗಲೆ ಮಾಡಿದರು.

ಜನ್ಮದಾರಭ್ಯ ಮತ್ತು ಚಿಕ್ಕಂದಿನಲ್ಲಿ, ಅದೇ ರೀತಿ ವಿದ್ಯಾರ್ಥಿದೆಸೆಯಲ್ಲಿ ಗಾಂಧೀಜಿಯವರ ಮನಸ್ಸಿನ ಮೇಲೆ ಸನಾತನ ಧರ್ಮದ ಗೂಢ ಸಂಸ್ಕಾರಗಳು ಆಗಿದ್ದವು. ಅಲ್ಲದೆ ಅಹಿಂಸಾಧರ್ಮದ ಪ್ರಭಾವವು ಅವರ ಮನಸ್ಸಿನ ಮೇಲೆ ವಿಶೇಷವಾಗಿ ಆಗಿತ್ತು. ತಮ್ಮ ಜೀವನವನ್ನು ಸತ್ಯ-ಅಹಿಂಸೆಗಳ ಮೂಲಾಧಾರದ ಭದ್ರವಾದ ತಳಹದಿಯನ್ನೆ ಆಶ್ರಯಿಸಿ ಕಟ್ಟಬೇಕೆಂಬ ನಿರ್ಧಾರವನ್ನು ಅವರು ಮೊದಲೇ ಮಾಡಿಬಿಟ್ಟಿದ್ದರು. ತಮ್ಮ ಜೀವನದತ್ತ ಹಾಗೂ ತಮ್ಮನ್ನು ಎದುರಿಸುವ ಸಮಸ್ಯೆಗಳತ್ತ ಅವರು ಅದೇ ದೃಷ್ಟಿಯಿಂದ ನೋಡುತ್ತಿದ್ದರು ಹಾಗೂ ಅದೇ ರೀತಿ ಆಚರಿಸುತ್ತಿದ್ದರು; ಈ ದೃಷ್ಟಿ ಹಾಗೂ ಈ ದೃಷ್ಟಿಯಿಂದಲೆ ನಡೆಯುವ ಅವರ ನಿರ್ಧಾರ ಇವೇ ಅವರಿಗೆ ಹೊಸ ಸಾಮರ್ಥ್ಯವನ್ನು ಕೊಟ್ಟವು ಮತ್ತು ಮಾನವರಿಗೆ ಹೊಸ ಮಾರ್ಗವನ್ನು ಹೇಳಿಕೊಡುವ ದಿವ್ಯಶಕ್ತಿಯನ್ನು ದಯಪಾಲಿಸಿದವು.

ಗಾಂಧೀಜಿಯವರ ಜೀವನದಲ್ಲಿ ಸತ್ಯ, ಅಹಿಂಸೆ, ಸತ್ಯಾಗ್ರಹ ಮತ್ತು ಸರ್ವೋದಯ ಇವು ನಾಲ್ಕು ಒಂದಕ್ಕೊಂದು ಬಿಡಿಸಲು ಬರದಂತೆ ಹೊಂದಿಕೊಂಡಿವೆ. ಆದರೆ ಇಲ್ಲಿ ಸತ್ಯಾಗ್ರಹವೊಂದೆ ಪ್ರಸ್ತುತವಿರುವುದರಿಂದ ಅದನ್ನು ಕುರಿತೇ ಎರಡು ಮಾತು ಹೇಳಬೇಕಾಗಿದೆ.

ಗಾಂಧೀಜಿಯವರು ದಕ್ಷಿಣ ಆಫ್ರಿಕೆಗೆ ಹೋದುದು ಒಬ್ಬ ವಕೀಲರೆಂದು, ಒಂದು ದಾವೇ ನಡೆಸಲಿಕ್ಕೆಂದು. ಆದರೆ ಆಲ್ಲಿ ಹೋದಂದಿನಿಂದ ಅವರಿಗೆ ಅಲ್ಲಿದ್ದ ಹಿಂದೀಯರ

ಅನೇಕ ಸಂಕಷ್ಟಗಳ ಹಾಗೂ ಅವರ ಮೇಲೆ ಆಗುತ್ತಿರುವ ಅಮಾನುಷ ಅನ್ಯಾಯಗಳ ದರ್ಶನವಾಗಲಾರಂಭೀಸಿತು. ಸ್ವತಃ ಅವರಿಗೆಯೇ ಹಲವು ಅನುಭವಗಳು ಬಂದವು. ಜನರು ಅನುಭವಿಸುತ್ತಿರುವ ಕಷ್ಟಗಳ ಬಗ್ಗೆ ಕರುಣೆ, ಅಲ್ಲಿಯ ಸರಕಾರದವರು ಹಾಗೂ ಬಿಳಿಯರು ನಡೆಸಿದ ಅನ್ಯಾಯಗಳ ಬಗ್ಗೆ ಸಾತ್ವಿಕ ರೋಷ, ಈ ಭಾವನೆಗಳು ಏಕಕಾಲಕ್ಕೆ ಅವರ ಮನಸ್ಸಿನಲ್ಲಿ ಸಂಚಾರ ಮಾಡಿದವು. ಸತ್ಯ ಹಾಗೂ ಅಹಿಂಸಕ ಮಾರ್ಗಗಳಿಂದಲೆ ಅವುಗಳನ್ನು ಪರಿಹರಿಸಬೇಕು ಎಂಬ ನಿರ್ಧಾರವನ್ನು ಅವರು ಆಗಲೇ ಮಾಡಿಕೊಂಡರು. ಈ ಮಾರ್ಗವು ದುರ್ಬಲರದಲ್ಲ, ಸಬಲರದು; ಅತ್ಮಬಲ ಇದ್ದವರದು ಎಂಬುದು ಅವರ ಮುಖ್ಯ ಸಿದ್ಧಾಂತಗಳಲ್ಲಿ ಒಂದು. ಆದುದರಿಂದ ಅವರು ಬ್ರಹ್ಮಚರ್ಯಾದಿ ಸಾಧನಗಳಿಂದ ತಮ್ಮ ಆತ್ಮಬಲವನ್ನು ಹೆಚ್ಚಿಸುತ್ತ ಹೋದರು. ಆತ್ಮಬಲದ ಮೂಲಕವೆ ಅವರು ಸತ್ಯಾಗ್ರಹವನ್ನು ಆಚರಿಸಲು ಹಾಗೂ ಅಲ್ಲಿದ್ದ ಸಾವಿರಾರು ಹಿಂದೀಯರಿಗೆ ಸತ್ಯಗ್ರಹಮಾರ್ಗ್ಗದಿಂದ ಮುಂದೆ ಒಯ್ಯಲು ಸಮರ್ಥರಾದರು.

ನಿಃಶಸ್ತ್ರ ಪ್ರತಿಕಾರ (passive Resistance) ಮತ್ತು ಸತ್ಯಾಗ್ರಹ ಇವು ಒಂದೇ ಎಂದು ಹಲವರು ಆಕಾಲಕ್ಕೆ ದಕ್ಷಿಣ ಆಫ್ರಿಕೆಯಲ್ಲಿ ವಾದಿಸಿದರು. ಆದರೆ ಗಾಂಧೀಜಿಯವರು ಜರ್ಮಿಸ್ಟನ್ ಎಂಬಲ್ಲಿ ನೆರೆದ ಒಂದು ಸಭೆಯಲ್ಲಿ ಅವೆರಡರಲ್ಲಿರುವ ಮಹದಂತರವನ್ನು ಸ್ಪಷ್ಟಗೊಳಿಸಿ ಹೇಳಿದರು. ಶಸ್ತ್ರಾಸ್ತ್ರಗಳು ನಮಗೆ ದೊರೆತರೂ ಅವುಗಳನ್ನು ಉಪಯೋಗಿಸಿ ನಮಗೆ ಯಶಸ್ಸು ದೊರೆಯಬಹುದೆಂಬ ಭರವಸೆ ಇದ್ದರೂ ನಾವು ಅವುಗಳನ್ನು ಉಪಯೋಗಿಸಲು ಒಲ್ಲೆವು. ಯಾಕೆಂದರೆ ಅದು ವಾಮಮಾರ್ಗ, ಅಸಂಸ್ಕೃತರ ಮಾಗ್ಗ, ಪಶುಗಳ ಮಾರ್ಗ, ಬಲ ಇಲ್ಲದವರ ಮಾರ್ಗ, ಎಂದು ಗಾಂಧೀಜಿಯವರು ಹೇಳಿದರು. ಆ ಮಾರ್ಗದಿಂದ ಹೋದರೆ ದ್ವೇಷಾದಿಗಳು ಹೆಚ್ಚು ಬೆಳೆಯುವವು, ಉಭಯ ಪಕ್ಷದವರೂ ಪಶುತುಲ್ಯ ವರ್ತನೆ ಮಾಡಲು ಪ್ರವರ್ತಿಸುವರು. ಆದುದರಿಂದ ಈ ಅಹಿಂಸಕ ಮಾರ್ಗವನ್ನು ನಾವು ಅನುಸರಿಸುವೆವು ಎಂದು ಗಾಂಧೀಜಿ ಕಟ್ಟುನಿಟ್ಟಾಗಿ ಹೇಳಿದರು. ಆ ಕಾರಣದಿಂದಲೇ ಅವರು ಆ ಕಾಲಕ್ಕೆ ತಮ್ಮ ಮಾರ್ಗಕ್ಕೆ ಹೊಸ ಹೆಸರನ್ನಿಡಬೇಕಾಯಿತು. ಇಲ್ಲದಿದ್ದರೆ ಜನಮನದಲ್ಲಿ ತಪ್ಪು ತಿಳುವಳಿಕೆಯಾಗುತ್ತಿತ್ತು.

ಮನೆಮನೆಗಳಲ್ಲಿ ಅಥವಾ ಸಮಾಜಗಳಲ್ಲಿ ಅಥವಾ ರಾಷ್ಟ್ರಗಳ ನಡುವೆ ನಡೆಯುವ ಅನ್ಯಾಯಗಳನ್ನೆದುರಿಸಲು ಗಾಂಧೀಜಿಯವರು ಒಂದು ಹೊಸ ಹಾಗೂ ಶ್ರೇಷ್ಠ ಹಾದಿಯನ್ನು ಹುಡುಕಿದರು. ಅದನ್ನು ಪ್ರಯೋಗರೂಪವಾಗಿ ದಕ್ಷಿಣ ಆಫ್ರಿಕೆಯಲ್ಲಿ ಉಪಯೋಗಿಸಿ ಮುಂದೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನ್ಮೂಲಕವೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟರು. ಆದುದರಿಂದ ಜಗತ್ತಿನಲ್ಲಿಯೆ ಆ ಮಾರ್ಗವು ಜನಜನಿತವಾಗಿದೆ. ಜಗತ್ತಿನ ಮಾನವ ಇತಿಹಾಸದಲ್ಲಿಯೆ ಆಗದ ಮಾತು–ಅಹಿಂಸಾಮಾರ್ಗದಿಂದ ಸ್ವಾತಂತ್ರ್ಯ ಸಂಪಾದನೆ–ಭಾರತದಲ್ಲಿ ನಡೆದು ಹೋದುದರಿಂದ ಎಲ್ಲರಿಗೂ ಆಶ್ಚರ್ಯವಾಗಿದೆ. ಆದರೆ ಈ ಸತ್ಯಾಗ್ರಹಮಾರ್ಗದ ಮಹತ್ವವನ್ನು ಹಾಗೂ ಅದರ ಭವಿಷ್ಯವನ್ನು ಗಾಂಧೀಜಿಯವರು ಹಾಗೂ ಟಾಲ್‌ಸ್ಟಾಯನಂಥ ಮಹಾಪುರುಷರು ಮನಗಂಡಿದ್ದಾರೆಂದು ಹೇಳಲು ಅಡ್ಡಿ ಇಲ್ಲ.

ಗಾಂಧೀಜಿಯವರ ಪ್ರಥಮ ಚರಿತ್ರಕಾರನಾದ ರೆವ್ಹರೆಂಡ್ ಜೋಸೆಪ್ ಡೋಕ ಎಂಬುವನು ಈ ಮಾತನ್ನು ಬರೆದಿಟ್ಟಿದ್ದಾನೆ. ಅವನು ಸಂಪಾದಿಸುತ್ತಿದ್ದ ಒಂದು ಪತ್ರಿಕೆಗಾಗಿ ಸಂದೇಶವನ್ನು ಬೇಡಲು ಅವನು ಗಾಂಧೀಜಿಯವರ ಕಡೆಗೆ ಹೋದನು. ಇದು ೧೯೦೮ರ ಮಾತು. ಅವರು ಆಗ ಜೋಹಾನ್ಸಬರ್ಗ್‌ದಲ್ಲಿರುತ್ತಿದ್ದರು. ಅಷ್ಟರಲ್ಲಿ ಅವರು ಸತ್ಯಾಗ್ರಹ ಮಾರ್ಗದ ಬಗ್ಗೆ ಪ್ರಸಿದ್ಧರಾಗಿದ್ದರು. ಗಾಂಧೀಜಿಯವರು ಡೋಕಸಾಹೇಬರಿಗೆ ಕೊಟ್ಟ ಸಂದೇಶದಲ್ಲಿ ಅವರು ಹೇಳಿದ್ದೇನೆಂದರೆ, ಇಲ್ಲಿ ಟ್ರಾನ್ಸವಾಲದಲ್ಲಿ ನಾವು ನಡೆಸಿದ ಸತ್ಯಾಗ್ರಹದ ಮಹತ್ವವು ಕೇವಲ ಈ ಪ್ರಶ್ನೆಗೆ ಅಥವಾ ಈ ಸ್ಥಳಕ್ಕೆ ಅಥವಾ ಈ ಜನರಿಗೆ ಮಾತ್ರ ಸೀಮಿತವಿರುವುದೆಂದು ಯಾರೂ ತಿಳಿಯಕೂಡದು. ಇದೊಂದು ಮಹಾ ಉಪಾಯವಿರುವುದು. ನನ್ನ ಮಟ್ಟಿಗೆ ಹೇಳುವುದಾದರೆ, ಹಿಂದುಸ್ತಾನದ ಎಲ್ಲ ಕಷ್ಟನಷ್ಟಗಳಿಗೂ ಇದೇ ಒಂದು ಮಹಾ ಉಪಾಯವೆಂದು ನಾನು ನಂಬಿದ್ದೇನೆ. ಇದೇ ರೀತಿ, ಗಾಂಧಿ– ಟಾಲ್ ಸ್ಟಾಯ್ ಇವರ ನಡುವೆ ನಡೆದ ಪತ್ರವ್ಯವಹಾರದಲ್ಲಿ ಟಾಲ್ ಸ್ಟಾಯ್ ಇವರು ತಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ. ನೀವು ಟ್ರಾನ್ಸವಾಲದಲ್ಲಿ ನಡೆಸಿದ ಪ್ರಯೋಗವು ಮಾನವಕುಲಕ್ಕೆಯೆ ಮಹದುಪಕಾರಿಯಾದುದು, ಎಂದು ಅವರು ಬರೆದಿರುವರು.

ಈ ಪ್ರಕಾರವಾಗಿ ದಕ್ಷಿಣ ಆಫ್ರಿಕೆಯಲ್ಲಿಯ ಗಾಂಧೀಜಿಯವರ ಜೀವನ, ಅವರು ನಡೆಸಿದ ಸತ್ಯಾಗ್ರಹ, ಅವರು ಜನ್ಮಕೊಟ್ಟ ನವತತ್ವ ಪ್ರಣಾಲಿ, ಅವರು ಎದೆಗಾರಿಕೆಯಿಂದ, ಧೈರ್ಯಸ್ಥೈರ್ಯಗಳಿಂದ ಮಾಡಿದ ವೀರೋಚಿತ ಆಚರಣೆ ಇವು ಕೇವಲ ವೈಯಕ್ತಿಕ ದೃಷ್ಟಿಯಿಂದಲ್ಲ ಅಥವಾ ಬರೀ ಭಾರತದ ದೃಷ್ಟಿಯಿಂದಲ್ಲ, ಆದರೆ ಮಾನವಸಮಾಜ, ಅದರ ರಚನೆ, ಸಮಾಜದಲ್ಲಿ ಉಂಟಾಗುವ ಸಮಸ್ಯೆ, ತಿಕ್ಕಾಟ ಮುಂತಾದವುಗಳ ಪರಿಹಾರ, ಮಾನವಸಭ್ಯತೆಯ ವಿಕಾಸ ಇತ್ಯಾದಿ ದೃಷ್ಟಿಗಳಿಂದ ಅತ್ಯಂತ ಮಹತ್ವದವು ಹಾಗೂ ಕ್ರಾಂತಿಕಾರಕವಾದವುಗಳು ಇರುವುವು.

ಈ ಎಲ್ಲ ಮಾತುಗಳನ್ನು ಲಕ್ಷಿಸಿದರೆ ಈ ವಿಷಯದ ಅಭ್ಯಾಸವು ಎಷ್ಟು ಮಹತ್ವದ್ದೆಂಬುದು ವಾಚಕರಿಗೆ ಚೆನ್ನಾಗಿ ಹೊಳೆಯದಿರಲಾರದು.

❖

ಪ್ರಸ್ತಾವನೆ

ದಕ್ಷಿಣ ಆಫ್ರಿಕದ ಭಾರತೀಯರ ಸತ್ಯಾಗ್ರಹ ಎಂಟು ವರ್ಷ ಕಾಲ ನಡೆಯಿತು. 'ಸತ್ಯಾಗ್ರಹ' ಎಂಬ ಶಬ್ದವನ್ನು ಕಂಡುಹಿಡಿದು ಉಪಯೋಗಿಸಿದ್ದು ಅದೇ ಸಂದರ್ಭದಲ್ಲಿ. ಆ ಹೋರಾಟದ ಚರಿತ್ರೆಯನ್ನು ನಾನೇ ಬರೆಯಬೇಕೆಂದು ಬಹಳ ದಿನಗಳಿಂದಲೂ ಯೋಚಿಸಿದ್ದೆ. ಆದರೆ ಕೆಲವು ಸಂಗತಿಗಳನ್ನು ಮಾತ್ರ ಬರೆಯಲು ನನಗೆ ಸಾಧ್ಯವಾಯಿತು. ಹೊಣೆಗಾರನಾದ ನಾಯಕನಿಗೆ ಮಾತ್ರ ಸೇನೆಯ ಪ್ರತಿಯೊಂದು ಚಲನದ ಗುರಿ ತಿಳಿಯಲು ಸಾಧ್ಯ. ಬೃಹತ್ ಪ್ರಮಾಣದಲ್ಲಿ ಸತ್ಯಾಗ್ರಹ ತತ್ವವನ್ನು ರಾಜಕೀಯದಲ್ಲಿ ಪ್ರಯೋಗಿಸಿದ್ದು ಇದೇ ಮೊದಲನೆಯ ಬಾರಿ. ಆದುದರಿಂದ ಅದು ಹೇಗೆ ರೂಪಗೊಂಡು ಬೆಳೆಯಿತು ಎಂಬುದನ್ನು ಜನರು ಒಂದಲ್ಲ ಒಂದು ದಿನ ತಿಳಿಯಬೇಕಾದುದು ಅವಶ್ಯಕ.

ಆದರೆ ಭಾರತದಲ್ಲಿ ಈಗಾಗಲೇ 'ಸತ್ಯಾಗ್ರಹ'ದ ಪ್ರಯೋಗ ಸಾಕಷ್ಟು ಆಗಿದೆ. ಸ್ಥಳೀಯ ಪ್ರಶ್ನೆಯಾದ ವಿರಮಗಾಂವ ಸುಂಕದ ಪ್ರಶ್ನೆಯಿಂದ ಮೊದಲುಗೊಂಡು ಅನೇಕ ಹೋರಾಟಗಳು ನಡೆದಿವೆ. ವಿರಮಗಾಂವ ಪ್ರಶ್ನೆಯಲ್ಲಿ ನನಗೆ ಆಸಕ್ತಿ ಹುಟ್ಟಿದ್ದು ಬಡವಾಣ್ ಸ್ಟೇಷನ್ನಿನಲ್ಲಿ ತಮ್ಮ ಆಪ್ತರೊಂದಿಗೆ ಮೋತೀಲಾಲರು ಬಂದು ನನ್ನನ್ನು ನೋಡಿದರು. ವಿರಮಗಾವದ ಜನರ ತೊಂದರೆಗಳನ್ನೆಲ್ಲ ವಿವರಿಸಿ, "ಈ ತೊಂದರೆ ನಿವಾರಿಸಲು ಏನಾದರೂ ಮಾಡು. ನಿನ್ನ ಜನ್ಮಭೂಮಿಯಾದ ಸೌರಾಷ್ಟ್ರಕ್ಕೆ ಮಹದುಪಕಾರ ಮಾಡಿದಂತೆ ಆಗುತ್ತದೆ" ಎಂದರು.

ಅವರ ಕಣ್ಣುಗಳಿಂದ ಕರುಣೆಯೂ ದೃಢನಿಶ್ಚಯವೂ ಹೊರಹೊಮ್ಮುತ್ತಿದ್ದುವು.

'ಜೈಲಿಗೆ ಹೋಗಲು ಸಿದ್ಧರಿದ್ದೀರಾ' ಎಂದು ಕೇಳಿದೆ.

'ಗಲ್ಲಿಗೇರಲೂ ಸಿದ್ಧರಿದ್ದೇವೆ' ಎಂದು ಮಾರ್ದನಿ ಬಂತು.

'ನನಗೆ ಸೆರೆಮನೆ ಸಾಕು, ಆದರೆ ನಡುನೀರಿನಲ್ಲಿ ಮಾತ್ರ ಕೈ ಬಿಡಬೇಡಿ' ಎಂದು ಹೇಳಿದೆ.

'ಅದೆಲ್ಲ ಮುಂದೆ ತಿಳಿಯುತ್ತದೆ' ಎಂದು ಮೋತೀಲಾಲರು ಹೇಳಿದರು. ರಾಜಕೋಟೆಯನ್ನು ಸೇರಿದೊಡನೆ ವಿಶದವಾಗಿ ವಿಷಯವನ್ನು ಸಂಗ್ರಹಿಸಿ ಸರಕಾರದೊಡನೆ ಪತ್ರವ್ಯವಹಾರ ಪ್ರಾರಂಭಿಸಿದೆ. ಅವಶ್ಯಬಿದ್ದರೆ ವಿರಮಗಾಂವನಲ್ಲಿ ಸತ್ಯಾಗ್ರಹ ಹೂಡಲು ಜನರು ಸಿದ್ಧರಾಗಬೇಕೆಂದು ಬಾಗಸ್ರ ಮುಂತಾದ ಸ್ಥಳಗಳಲ್ಲಿ ನನ್ನ ಭಾಷಣಗಳಿಂದ ತಿಳಿಸಿದೆ. ಗುಪ್ತ ಪೊಲೀಸರು ನನ್ನ ಭಾಷಣಗಳ ವರದಿಗಳನ್ನು ಸರಕಾರಕ್ಕೆ ಕಳುಹಿಸಿದರು. ಆ ಮೂಲಕ ಅನೀರಿಕ್ಷಿತವಾಗಿ ಸರಕಾರಕ್ಕೂ ಪ್ರಜೆಗಳಿಗೂ ಉಪಕಾರವಾಯಿತು. ಕಡೆಯಲ್ಲಿ ಲಾರ್ಡ್‌ಚೆಲ್ಮ್ಸ್‌ಫರ್ಡ್‌ರೊಂದಿಗೆ ಸಂಭಾಷಣೆ ನಡೆಸಿದೆ. ಸುಂಕವನ್ನು ರದ್ದುಗೊಳಿಸುವುದಾಗಿ ಭರವಸೆ ಕೊಟ್ಟು ಅವರು ಅದರಂತೆ ನಡೆದರು. ನನ್ನಂತೆ ಇತರರೂ ಪ್ರಯತ್ನಪಟ್ಟಿದ್ದರು. ಆದರೆ ಸತ್ಯಾಗ್ರಹ ಆರಂಭವಾಗಬಹುದೆಂಬ ಭೀತಿಯೇ ಸುಂಕರದ್ದಾಗಲು ಮುಖ್ಯ ಕಾರಣವೆಂದು ನನ್ನ ದೃಢವಾದ ನಂಬಿಕೆ.

ಅನಂತರ ಭಾರತೀಯರನ್ನು ಪರದೇಶಕ್ಕೆ ಕಳುಹಿಸುವ ಶಾಸನವನ್ನು ನಾವು ಎದುರಿಸಬೇಕಾಯಿತು. ಈ ಶಾಸನವನ್ನು ರದ್ದುಗೊಳಿಸಲು ವಿಶ್ವ ಪ್ರಯತ್ನ ನಡೆಯಿತು. ಸಾರ್ವಜನಿಕ ಚಳವಳಿ ಸಾಕಷ್ಟು ಇತ್ತು. ಮುಂಬೈ ಪಟ್ಟಣದಲ್ಲಿ ಭಾರಿ ಸಭೆ ನಡೆದು, ೧೯೧೭ನೇ ಮೇ ೩೦ನೇ ತಾರೀಖಿನಿಂದ ಭಾರತೀಯ ಕೂಲಿಗಾರರನ್ನು ಪರದೇಶಗಳಿಗೆ ಕಳುಹಿಸುವುದನ್ನು ನಿಲ್ಲಿಸಬೇಕೆಂದು ಸರಕಾರಕ್ಕೆ ತಿಳಿಸಲಾಯಿತು. ಆ ದಿನವನ್ನೇ ಏಕೆ ನಿರ್ಧರಿಸಲಾಯಿತೆಂದು ತಿಳಿಸಬೇಕಾದ್ದು ಇಲ್ಲಿ ಅನಾವಶ್ಯಕ. ಈ ಸಂದರ್ಭದಲ್ಲಿ ಮಹಿಳೆಯರ ನಿಯೋಗ ಗೋಷ್ಠಿಯೊಂದು ವೈಸರಾಯರನ್ನು ಮೊದಲು ನೋಡಿತು. ಸಾಧ್ವೀಮಣಿ ಸಹೋದರಿ ಶ್ರೀಮತಿಜೈಜಿ ಪೆಟಿಟ್ ರ ಹೆಸರನ್ನು ಈ ವಿಷಯದಲ್ಲಿ ಮರೆಯುವಂತಿಲ್ಲ. ಈ ಗೋಷ್ಠಿಯನ್ನು ಏರ್ಪಡಿಸಲು ಆಕೆಯೇ ಕಾರಣಳು. ಇಲ್ಲಿಯೂ ನಮ್ಮ ವಿಜಯಕ್ಕೆ ಸತ್ಯಾಗ್ರಹದ ಸಿದ್ಧತೆಯೇ ಮುಖ್ಯಕಾರಣ. ಆದರೆ ಈ ಸಂದರ್ಭದಲ್ಲಿ ಸಾರ್ವಜನಿಕ ಚಳವಳಿಯೂ ಅವಶ್ಯವಾಯಿತು. ವಿರಮಗಾಂವ ಸುಂಕದ ಪ್ರಶ್ನೆಗಿಂತ ಅವಧಿಕೂಲಿಗಳ ರಫ್ತು ನಿಲ್ಲಿಸಿದ್ದು ಬಹಳ ಮುಖ್ಯ ವಿಷಯ. ರೌಲಟ್ ಕಾನೂನಿನಿಂದ ಮೊದಲುಗೊಂಡು ಲಾರ್ಡ್ ಚೆಲ್ಮ್ಸ್‌ಫರ್ಡ್ ಅನೇಕ ತಪ್ಪುಗಳನ್ನು ಮಾಡಿದರು. ಅದರೂ ಅವರು ಒಳ್ಳೆಯ ಆಡಳಿತಗಾರರೆಂದು ನನ್ನ ನಂಬಿಕೆ. ಸಿವಿಲ್ ಸರ್ವಿಸಿನ ಕಾಯಂ ಅಧಿಕಾರಿಗಳ ಪ್ರಭಾವಕ್ಕೆ ಬೀಳದೆ ಯಾವ ವೈಸರಾಯ್ ತಾನೆ ಬಹುಕಾಲವಿರಲು ಸಾಧ್ಯ?

ಮೂರನೆಯದು ಚಂಪಾರಣ್ಯ ಸತ್ಯಾಗ್ರಹ. ಈ ವಿಷಯವಾಗಿ ಬಾಬು ರಾಜೇಂದ್ರ ಪ್ರಸಾದರು ವಿಶದವಾದ ಚರಿತ್ರೆಯನ್ನು ಬರೆದಿದ್ದಾರೆ. ಇಲ್ಲಿ ಸತ್ಯಾಗ್ರಹವನ್ನೇ ಹೂಡಬೇಕಾಯಿತು. ಇಲ್ಲಿ ಪ್ರಬಲರಾದ ಬಂದವಾಳಗಾರರ ವಿರೋಧವಿದ್ದುದರಿಂದ ಸತ್ಯಾಗ್ರಹಸಿದ್ದತೆ ಮಾತ್ರವೇ ಸಾಲದಾಯಿತು. ಚಂಪಾರಣ್ಯದ ಜನರ ಶಾಂತಿಪಾಲನೆಯ ಶಕ್ತಿ ಚರಿತ್ರಾರ್ಹವಾದುದು. ನಾಯಕರೆಲ್ಲರೂ ಯೋಚನೆ, ನಡೆ-ನುಡಿಗಳಲ್ಲಿ ಪೂರ್ಣ

ಅಹಿಂಸಾವಲಂಬಿಗಳಾಗಿದ್ದರೆಂಬುದಕ್ಕೆ ನಾನೇ ಸಾಕ್ಷಿ. ಅಂತಲೇ ಅನಾದಿಯಿಂದ ಬಂದ ಕೇಡು ಆರು ತಿಂಗಳಲ್ಲಿಯೇ ನಿವಾರಣೆಯಾದಂತೆ ತೋರಿತು.

ನಾಲ್ಕನೆಯದು ಅಹಮದಾಬಾದ ಗಿರಣಿ ಕೂಲಿಗಾರರ ಪ್ರಶ್ನೆ. ಅದರ ಇತಿಹಾಸ ಇಡೀ ಗುಜರಾತೇ ಪೂರಾ ಬಲ್ಲುದು. ಕೂಲಿಗಾರು ಅದೆಷ್ಟು ಶಾಂತಿಯಿಂದ ನಡೆದುಕೊಂಡರು! ಮುಖಂಡರ ವಿಷಯವಾಗಿ ನಾನು ಏನೂ ಹೇಳತಕ್ಕದ್ದಿಲ್ಲ. ಆದರೂ ಕೂಲಿಗಾರರ ನಿರ್ಧಾರವನ್ನು ಭದ್ರಪಡಿಸಲು ನಾನು ಉಪವಾಸಮಾಡಿ ಅವರ ಮೇಲೆ ಒಂದು ವಿಧವಾದ ಬಲಾತ್ಕಾರ ಪ್ರಯೋಗ ಮಾಡಿದ್ದರಿಂದ ಈ ವಿಜಯ ಅಷ್ಟು ಪವಿತ್ರವಾದುದಲ್ಲವೆಂದು ನನ್ನ ಅಭಿಪ್ರಾಯ. ನನ್ನ ಬಗ್ಗೆ ಸ್ನೇಹಭಾವನೆಯಿಂದಿದ್ದ ಅವರ ಮೇಲೆ ನನ್ನ ಉಪವಾಸ ಪೂರ್ಣ ಪ್ರಭಾವ ಉಂಟುಮಾಡಿತು. ಆದರೂ ಆ ಹೋರಾಟದ ನೀತಿ ಮಾತ್ರ ಸ್ಪಷ್ಟವಿದೆ. ಕೂಲಿಗಾರು ಶಾಂತಿಯಿಂದ ತಮ್ಮ ಚಳವಳಿ ನಡೆಸಿದರೆ ಅವರಿಗೆ ಜಯವೂ ಸಿದ್ಧ ; ಜೊತೆಯಲ್ಲಿ ಅವರ ಒಡೆಯರ ಪ್ರೀತಿಯೂ ಲಭಿಸುತ್ತದೆ, ಅವರ ಯೋಚನೆ ನಡೆ ನುಡಿಗಳಲ್ಲಿ ನಿಷ್ಕಪಟತೆ ಇನ್ನೂ ತೋರಲಿಲ್ಲವಾದ್ದರಿಂದ ಅವರಿಗಿನ್ನೂ ಮಾಲೀಕರ ವಿಶ್ವಾಸ ದೊರೆತಿಲ್ಲ. ಕಾರ್ಯತಃ ಅವರು ಅಹಿಂಸಾಯುತರಾಗಿದ್ದುದು ನಿಜವಾಗಿಯೂ ಹೆಮ್ಮೆಯ ವಿಷಯ.

ಐದನೆಯದು ಖೇಡಾ ಹೋರಾಟ. ಇಲ್ಲಿ ಸತ್ಯಾಗ್ರಹಿ ತಂಡಗಳ ಸ್ಥಳೀಯ ನಾಯಕರೆಲ್ಲರೂ ತುಂಬ ಸತ್ಯನಿಷ್ಠರಿದ್ದರೆಂದು ನಾನು ಹೇಳಲಾರೆ. ಶಾಂತಿಪಾಲನೆಯೇನೊ ನಡೆದಿತ್ತು. ಆದರೆ ಗಿರಣಿ ಕೂಲಿಗಾರರಂತೆ ರೈತರ ಅಹಿಂಸೆ ನಾಮ ಮಾತ್ರವಾಗಿತ್ತು. ಆದ್ದರಿಂದ ಮರ್ಯಾದೆಯಿಂದ ಮಾತ್ರ ಹೊರಬಿದ್ದೆವು. ಆದರೂ ಜನರಲ್ಲಿ ಪ್ರಚಂಡ ಜಾಗೃತಿಯಾಯಿತು. ಖೇಡಾ ಜನರು ಅಹಿಂಸೆಯ ಪಾಠವನ್ನು ಪೂರ್ಣ ಗ್ರಹಿಸಲಿಲ್ಲ. ಗಿರಣಿ ಕೆಲಸಗಾರರಿಗೆ ಶಾಂತಿಯ ನಿಜವಾದ ಅರ್ಥ ಹೊಳೆಯಲಿಲ್ಲ. ಆದ್ದರಿಂದ ಜನರು ಕಷ್ಟವನ್ನು ಅನುಭವಿಸಬೇಕಾಯಿತು. ರೌಲಟ್ ಶಾಸನಸಂಬಂಧವಾದ ಸತ್ಯಾಗ್ರಹ ಸಮಯದಲ್ಲಿ ನನ್ನ ಮಹದಪರಾಧಗಳನ್ನು ಒಪ್ಪಿ, ಉಪವಾಸ ಮಾಡಿದೆನಲ್ಲದೆ ಇತರರಿಗೂ ಆ ರೀತಿ ಮಾಡಲು ತಿಳಿಸಿದೆ.

ಆರನೆಯದು ರೌಲಟ್ ಶಾಸನ ಸಂಬಂಧವಾಗಿ ನಡೆದ ಸತ್ಯಾಗ್ರಹ ಇಲ್ಲಿ ನಮ್ಮ ಒಳ ನ್ಯೂನತೆಗಳೆಲ್ಲ ಮೇಲೆ ಕಾಣಿಸಿಕೊಂಡುವು. ಆದರೆ ಮೊದಲಿನ ತಳಹದಿ ಮಾತ್ರ ಭದ್ರವಾಗಿತ್ತು. ನಮ್ಮ ತಪ್ಪುಗಳನ್ನೆಲ್ಲ ಒಪ್ಪಿ ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡೆವು. ರೌಲಟ್ ಶಾಸನ ಜಾರಿಗೆ ಬರುವ ಮುಂಚೆಯೇ ಅದು ನಿರ್ನಾಮವಾಗಿತ್ತು ; ಆ ಮೇಲೆ ರದ್ದು ಸಹ ಆಯಿತು. ಈ ಹೋರಾಟ ನಮಗೆ ಬಹಳ ಬುದ್ಧಿ ಕಲಿಸಿತು.

ಏಳನೆಯದು ಖಿಲಾಫತ್ ಮತ್ತು ಪಂಜಾಬ್ ಅನ್ಯಾಯಗಳನ್ನು ಸರಿಪಡಿಸುವುದಕ್ಕೂ ಸ್ವರಾಜ್ಯಸಾಧನೆಗೂ ಹೂಡಿದ ಸತ್ಯಾಗ್ರಹ, ಅದು ಇನ್ನೂ ನಡೆಯುತ್ತಲೇ ಇದೆ. ನಿಜವಾದ ಸತ್ಯಾಗ್ರಹಿ ಒಬ್ಬನೇ ಇದ್ದರೂ, ಕೊನೆಯವರೆಗೆ ಸತ್ಯಾಗ್ರಹ ನಡೆಸಿದರೆ ಜಯ ಶತಸ್ಸಿದ್ಧವೆಂಬ ನನ್ನ ನಂಬಿಕೆ ಇನ್ನೂ ಅಚಲವಾಗಿದೆ.

ಆದರೆ ನಮ್ಮ ಇಂದಿನ ಹೋರಾಟ ಐತಿಹಾಸಿಕವಾದುದು. ಅರಿವಿಲ್ಲದೆಯೇ ಅದಕ್ಕೆ ಪೂರ್ವಸಿದ್ಧತೆ ಯಾವ ರೀತಿ ನಡೆದಿದೆ ಎಂದು ಆಗಲೇ ವಿವರಿಸಿದ್ದೇನೆ. ವಿರಮಗಾಂವ ಪ್ರಶ್ನೆ ನನ್ನ ಮುಂದೆ ಬಂದಾಗ ಮುಂದಿನ ಈ ಹೋರಾಟಗಳೆಲ್ಲ ಒದಗಬಹುದೆಂದು ಎಣಿಸಿರಲಿಲ್ಲ. ದಕ್ಷಿಣ ಆಫ್ರಿಕದಲ್ಲಿ ವಿರಮಗಾಂವ ವಿಷಯ ನನಗೆ ತಿಳಿದೇ ಇರಲಿಲ್ಲ. ಅದೇ ಸತ್ಯಾಗ್ರಹದ ಸೊಗಸು, ಅದು ತಾನಾಗಿಯೇ ಬರುವಂಥದು; ಯಾರು ಅದಕ್ಕಾಗಿ ಹುಡುಕಿಕೊಂಡು ಹೋಗಬೇಕಾಗಿಲ್ಲ. ಸತ್ಯಾಗ್ರಹ ತತ್ವದಲ್ಲಿ ಸಹಜವಾಗಿ ಅಡಕವಾಗಿರುವ ಗುಣವೆಂದರೆ ಇದೇ. ಇದೊಂದು ಧರ್ಮಯುದ್ಧ ಇದರಲ್ಲಿ ಗುಟ್ಟುಗಳಿಲ್ಲ; ಇದರಲ್ಲಿ ಕುಟಿಲತನಕ್ಕೆ ಎಡೆಯಿಲ್ಲ; ಅಸತ್ಯಕ್ಕೆ ಅವಕಾಶವಿಲ್ಲ; ಅಪ್ರಾರ್ಥಿತವಾಗಿ ಒದಗುವಂಥದು. ಧರ್ಮಜೀವಿ ಸದಾ ಅದಕ್ಕೆ ಸಿದ್ಧವಾಗಿರುತ್ತಾನೆ. ಪೂರ್ವಸಿದ್ಧತೆ ಮಾಡಿ ನಡೆಸುವ ಹೋರಾಟ ಧರ್ಮಯುದ್ಧವೇ ಅಲ್ಲ. ಧರ್ಮಯುದ್ಧದಲ್ಲಿ ಪ್ರತಿಯೊಂದು ಮುನ್ನಡೆಯೂ ದೈವಿಕವಾದುದು; ಹೋರಾಟ ನಡೆಯುವುದೂ ದೈವಪ್ರೇರಣೆಯಿಂದಲೇ. ಧರ್ಮಯುದ್ಧವನ್ನು ದೇವರ ಹೆಸರಿನಲ್ಲಿ ಮಾತ್ರ ನಡೆಸಬಹುದು. ಸತ್ಯಾಗ್ರಹಿ ಆಶಾಶೂನ್ಯನಾಗಿ ದಾರಿಕಾಣದೆ ಕತ್ತಲಲ್ಲಿ ಕಂಗೆಟ್ಟಾಗಲೇ ಆತನಿಗೆ ದೈವಸಹಾಯ ಒದಗುವದು. ನಮ್ಮ ಪಾದದಡಿಯ ಧೂಳಿಗಿಂತ ನಾವು ಅಲ್ಪರು ಎಂಬ ನಮ್ರ ಭಾವನೆ ನಮ್ಮಲ್ಲಿ ಬಂದಾಗ ಮಾತ್ರ ದೈವಸಹಾಯ ದೊರೆಯುವದು. ನಿರ್ಬಲರೂ, ನಿಸ್ಸಹಾಯರೂ ಅದವರಿಗೆ ಮಾತ್ರ ಆಸರೆ ಮೀಸಲು.

ಈ ಸತ್ಯವನ್ನು ನಾವು ಇನ್ನೂ ಕಂಡುಕೊಳ್ಳಬೇಕಾಗಿದೆ. ಆದ್ದರಿಂದ ದಕ್ಷಿಣ ಆಫ್ರಿಕದ ಸತ್ಯಾಗ್ರಹ ಚರಿತ್ರೆ ನಮಗೆ ಸಹಾಯಕವಾಗಬಹುದು ಎಂದು ನನ್ನ ನಂಬಿಕೆ.

ಇಂದಿನ ನಮ್ಮ ಹೋರಾಟದ ಅನುಭವಗಳೆಲ್ಲ ದಕ್ಷಿಣ ಆಫ್ರಿಕದಲ್ಲೂ ಇದ್ದವೆಂದೂ, ಈಗ ನಡೆಯುತ್ತಿರುವ ಹೋರಾಟದಿಂದ ನಿರಾಶೆಹೊಂದಲು ಕಾರಣವಿಲ್ಲವೆಂದೂ ಈ ಚರಿತ್ರೆಯಿಂದ ವ್ಯಕ್ತವಾಗುತ್ತದೆ. ಹಿಡಿದ ಮಾರ್ಗದಿಂದ ಮರುಳದೆ ನೇರವಾಗಿ ನಡೆಯುವುದೊಂದೇ ಜಯ ಲಭಿಸಲು ಮುಖ್ಯ ಮಾರ್ಗ.

ಈ ಪ್ರಸ್ತಾವನೆಯನ್ನು ಜುಹುವಿನಲ್ಲಿ ಬರೆಯುತ್ತಿದ್ದೇನೆ. ಮೊದಲ ಮೂವತ್ತು ಅಧ್ಯಾಯಗಳನ್ನು ಯರವಡಾ ಸೆರೆಮನೆಯಲ್ಲಿ ಬರೆದೆ. ಶ್ರೀಯುತ ಇಂದೂಲಾಲ ಯಾಜ್ಞಿಕರು ನಾನು ಹೇಳಿದುದನ್ನು ಬರೆದುಕೊಟ್ಟು ಉಪಕಾರ ಮಾಡಿದ್ದಾರೆ. ಮುಂದಿನ ಅಧ್ಯಾಯಗಳನ್ನು ಇನ್ನು ಮೇಲೆ ನಾನು ಬರೆಯಬೇಕು. ಸೆರೆಮನೆಯಲ್ಲಿ ನನ್ನ ಬಳಿ ಯಾವ ಪುಸ್ತಕ ಟಿಪ್ಪಣಿಗಳೂ ಇರಲಿಲ್ಲ. ಈಗಲೂ ನನಗೆ ಬೇಕಿಲ್ಲ. ಕ್ರಮವಾದ, ವಿವರವಾದ ಚರಿತ್ರೆ ಬರೆಯಲು ನನಗೆ ಸಮಯವೂ ಇಲ್ಲ, ಇಷ್ಟವೂ ಇಲ್ಲ. ಇಂದಿನ ಹೋರಾಟಕ್ಕೆ ಸಹಾಯವಾಗಿ ಮುಂದಿನ ಚರಿತ್ರಕಾರನಿಗೆ ಮಾರ್ಗದರ್ಶಿಯಾಗಿರಲಿ ಎಂಬುದು ಮಾತ್ರ ನನ್ನ ಈ ಲೇಖನದ ಉದ್ದೇಶ. ನನ್ನ ಬಳಿ ಯಾವ ಪುಸ್ತಕಗಳು ಇಲ್ಲದೆ ಹೋದರೂ ಈ ಗ್ರಂಥದಲ್ಲಿ ಯಾವ ವಿಷಯದಲ್ಲಾಗಲಿ ತಪ್ಪು ಅಥವಾ ಉತ್ಪ್ರೇಕ್ಷೆ ಇರಬಹುದೆಂದು ಮಾತ್ರ ಯಾರೂ ಭಾವಿಸದಿರಲಿ.

ಜುಹು **–ಮೋ.ಕ. ಗಾಂಧೀ**

೨.೪.೧೯೨೪

ಮುನ್ನುಡಿ

ಶ್ರೀ ವಾಲ್ಜಿ ದೇಸಾಯಿ ಅವರ ಭಾಷಾಂತರವನ್ನು ನಾನು ನೋಡಿದ್ದೇನೆ. ಗುಜರಾತಿ ಮೂಲದ ಛಾಯೆ ಭಾಷಾಂತರದಲ್ಲಿ ಅಚ್ಚಳಿಯದೆ ಉಳಿದಿದೆ ಎಂದು ಭರವಸೆ ಕೊಡಬಲ್ಲೆ. ಮೂಲ ಅಧ್ಯಾಯಗಳೆಲ್ಲ ನಾನು ಜ್ಞಾಪಕದಿಂದ ಬರೆದವು. ಕೆಲವನ್ನು ಯರವಡಾ ಸೆರೆಮನೆಯಲ್ಲೂ ಉಳಿದುವನ್ನು ಸೆರೆಮನೆಯಿಂದ ಅನಿರೀಕ್ಷಿತವಾಗಿ ಬಿಡುಗಡೆಯಾದ ಮೇಲೂ ಬರೆದೆ. ಶ್ರೀ ದೇಸಾಯಿ ಅವರಿಗೆ ಈ ವಿಷಯ ಗೊತ್ತಿದ್ದುದರಿಂದ ಅವರು 'ಇಂಡಿಯನ್ ಓಪಿನಿಯನ್' ಪತ್ರಿಕೆಯ ಹಳೆಯ ಸಂಪುಟಗಳನ್ನು ಓದಿ ನೋಡಿ, ಮರೆತು ತಪ್ಪಿದ ಕಡೆಗಳಲ್ಲಿ ತಿದ್ದಿದ್ದಾರೆ. ಮುಖ್ಯ ಅಂಶಗಳಲ್ಲಿ ಎಲ್ಲೂ ತಪ್ಪಿಲ್ಲವೆಂಬುದು ಸಂತೋಷದ ಸಂಗತಿ. ಸತ್ಯಶೋಧನೆಯ ಕಾರ್ಯ ಹೇಗೆ ಮುಂದುವರಿದಿದೆ ಎಂಬುದನ್ನು ಕೂಲಂಕಷವಾಗಿ ತಿಳಿದುಕೊಳ್ಳಬೇಕಾದರೆ, ವಾರ ವಾರವೂ ನಾನು ಬರೆಯುತ್ತಿರುವ ಸತ್ಯಶೋಧನೆಯ ಅಧ್ಯಾಯಗಳನ್ನು ಓದುತ್ತಿರುವವರು 'ಸತ್ಯಾಗ್ರಹ'ವನ್ನು ಕುರಿತ ಈ ಅಧ್ಯಾಯಗಳನ್ನೂ ಓದಲು ಮರೆಯಲಾಗದು.

ಸಾಬರಮತಿ **ಮೋ.ಕ. ಗಾಂಧೀ**

೨೬.೪.೧೯೨೮

ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ

ಅನುಕ್ರಮಣಿಕೆ

ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ

೧. ಭೂ-ವಿವರಣೆ

ಪ್ರಪಂಚದ ದೊಡ್ಡ ಭೂಖಂಡಗಳಲ್ಲಿ ಆಫ್ರಿಕ ಒಂದು. ಹಿಂದೂಸ್ತಾನವು ಒಂದು ದೇಶವಲ್ಲವೆಂದೂ ಭೂಖಂಡವೆಂದೂ ಪ್ರತೀತಿ ಇದ್ದರೂ, ಆಫ್ರಿಕ ನಾಲ್ಕೈದು ಹಿಂದೂಸ್ತಾನಗಳು ಒಟ್ಟುಗೂಡಿದರೆ ಎಷ್ಟೋ ಅಷ್ಟು ವಿಸ್ತಾರವಾಗಿದೆ. ಹಿಂದೂಸ್ತಾನದಂತೆ ಆಫ್ರಿಕವೂ ಒಂದು ಪರ್ಯಾಯ ದ್ವೀಪ; ದಕ್ಷಿಣ ಆಫ್ರಿಕದ ಸುತ್ತಲೂ ಸಮುದ್ರವಿದೆ. ಆಫ್ರಿಕ ಪ್ರಪಂಚದಲ್ಲೆಲ್ಲ ಅತಿ ಉಷ್ಣ ದೇಶವೆಂಬುದು ಒಂದು ದೃಷ್ಟಿಯಿಂದ ನಿಜ. ಭೂಮಧ್ಯರೇಖೆಯು ಆಫ್ರಿಕದ ಮಧ್ಯೆ ಹಾಯ್ದು ಹೋಗುತ್ತಿದೆ. ಭೂಮಧ್ಯರೇಖೆಯ ಸುತ್ತಮುತ್ತಣ ದೇಶಗಳಲ್ಲಿ ಉಷ್ಣವು ಎಷ್ಟಿರುತ್ತದೆ ಎಂಬುದು ಹಿಂದೂ ದೇಶದವರಿಗೆ ಗೊತ್ತಾಗುವುದು ಅಸಂಭವ. ದಕ್ಷಿಣ ಹಿಂದೂಸ್ತಾನದ ಸೆಕೆಗೂ, ಭೂಮಧ್ಯರೇಖೆಯ ಹತ್ತಿರದ ಸೆಕೆಗೂ ಯಾವ ಹೋಲಿಕೆಯೂ ಇಲ್ಲ. ಆದರೆ ದಕ್ಷಿಣ ಆಫ್ರಿಕ ಭೂಮಧ್ಯರೇಖೆಯಿಂದ ಬಹುದೂರ ಇರುವುದರಿಂದ ಅಲ್ಲಿ ಸಹಿಸಲಸಾಧ್ಯವಾದ ಸೆಕೆಯೇನೂ ಇಲ್ಲ. ಯೂರೋಪಿಯನರಿಗೆ ಭಾರತದಲ್ಲಿ ನೆಲೆಸುವುದು ಕಷ್ಟವಾದರೂ, ದಕ್ಷಿಣ ಆಫ್ರಿಕದ ಅನೇಕ ಭಾಗಗಳ ವಾಯುಗುಣವು ಆರೋಗ್ಯಕರವಾಗಿಯೂ ಹಿತಕರವಾಗಿಯೂ ಇರುವುದರಿಂದ ಅವು ನೆಲೆಸಲು ಬಹಳ ಅನುಕೂಲವಾಗಿವೆ.

ದಕ್ಷಿಣ ಆಫ್ರಿಕದಲ್ಲಿ ತಿಬೆಟ್, ಕಾಶ್ಮೀರ ದೇಶಗಳಂತೆ–ಹತ್ತು ಹದಿನಾಲ್ಕು ಸಾವಿರ ಅಡಿ ಅಲ್ಲದಿದ್ದರೂ–ಅಲ್ಲಿಯೂ ಎತ್ತರವಾದ ತಂಪಾದ ಪ್ರದೇಶಗಳಿವೆ. ಇವುಗಳಲ್ಲಿ ಕೆಲವು ಸ್ಥಳಗಳಿಗೆ ಕ್ಷಯರೋಗಿಗಳನ್ನು ಆರೋಗ್ಯ ಲಾಭಕ್ಕೆ ಸಹ ಕಳುಹಿಸುತ್ತಾರೆ. ದಕ್ಷಿಣ ಆಫ್ರಿಕದ ಸುವರ್ಣನಗರವೆಂದು ಹೆಸರಾದ ಜೊಹಾನ್ಸಬರ್ಗ ಎಂಬುದು ಅಂತಹ ಒಂದು ಪಟ್ಟಣ. ಐವತ್ತು ವರ್ಷಗಳ ಹಿಂದೆ ಆ ಪಟ್ಟಣವಿರುವ ಸ್ಥಳವು ಒಂದು ಬರಡು ಹುಲ್ಲುಗಾವಲಾಗಿತ್ತು. ಆದರೆ ಬಂಗಾರದ ಗಣಿಗಳು ದೊರೆತೊಡನೆ ಮಂತ್ರವಾದಿಯ ಇಂದ್ರಜಾಲದಂತೆ ಒಂದರಮೇಲೊಂದು ನಯನ ಮನೋಹರವಾದ ಭವ್ಯಸೌಧಗಳು ನಿರ್ಮಾಣವಾಗಿ ಇಂದು ಅದು ಒಂದು ದೊಡ್ಡ ಪಟ್ಟಣವಾಗಿದೆ. ಅಲ್ಲಿನ ಧನಿಕರು ಒಂದೊಂದು ಗಿಡಕ್ಕೆ ಒಂದೊಂದು ಗಿನಿ ಬೆಲೆ ಕೊಟ್ಟು, ಆಫ್ರಿಕದ ಇತರ ಭಾಗಗಳಿಂದಲೂ ಯುರೋಪಿನಿಂದಲೂ ಗಿಡಗಳನ್ನು ತರಿಸಿ ಬೆಳೆಸಿದ್ದಾರೆ. ಈ ಪೂರ್ವ ಇತಿಹಾಸವನ್ನರಿಯದ ಪ್ರವಾಸಿಗೆ ಮೊದಲಿನಿಂದಲೂ ಆ ಗಿಡಗಳು ಆ ದೇಶದವುಗಳೇನೊ ಎಂಬಂತೆ ಕಾಣುತ್ತವೆ.

ದಕ್ಷಿಣ ಆಫ್ರಿಕದ ಎಲ್ಲ ಭಾಗಗಳ ವಿಚಾರ ನಾನು ಹೇಳಬಯಸುವುದಿಲ್ಲ. ನಮ್ಮ ವಿಷಯಕ್ಕೆ ಸಂಬಂಧಪಟ್ಟ ಪ್ರದೇಶಗಳ ವಿಷಯವನ್ನು ಮಾತ್ರ ಬರೆಯತ್ತೇನೆ. ದಕ್ಷಿಣ ಆಫ್ರಿಕದ ಒಂದು ಭಾಗ ಮಾತ್ರ ಪೋರ್ಚುಗೀಸರ ಆಡಳಿತದಲ್ಲೂ, ಉಳಿದ ಎಲ್ಲ ಭಾಗವೂ ಬ್ರಿಟಿಷರ ಆಡಳಿತದಲ್ಲೂ ಇವೆ. ಪೋರ್ಚುಗೀಸರ ಆಡಳಿತದಲ್ಲಿನ ಭಾಗಕ್ಕೆ ಡೆಲಗೋವ ಕೊಲ್ಲಿ ಎಂದು ಹೆಸರು; ಹಿಂದೂಸ್ತಾನದಿಂದ ಹೊರಟ ಹಡಗುಗಳಿಗೆ ಮೊದಲು ಸಿಕ್ಕುವ ಆಫ್ರಿಕದ ಬಂದರು ಇದೇ. ಅಲ್ಲಿಂದ ದಕ್ಷಿಣಕ್ಕೆ ಮುಂದೆ ಹೋದರೆ ಬ್ರಿಟಿಷರ ಮೊದಲ ವಲಸೆ ರಾಷ್ಟ್ರವಾದ ನೇಟಾಲ್ ಇದೆ. ಅದರ ಮುಖ್ಯ ಬಂದರಿಗೆ ಪೋರ್ಟ್ ನೇಟಾಲ್ ಎಂದು ಹೆಸರು; ಆದರೆ ದಕ್ಷಿಣ ಆಫ್ರಿಕದಲ್ಲಿ ಸಾಮಾನ್ಯವಾಗಿ ಡರ್ಬಾನ್ ಎಂದು ಅದನ್ನು ಕರೆಯುತ್ತಾರೆ. ಡರ್ಬಾನ್ ಪಟ್ಟಣವೇ ನೇಟಾಲಿನ ದೊಡ್ಡ ನಗರ. ಇದಕ್ಕೆ ಅರವತ್ತು ಮೈಲಿಗಳ ದೂರದಲ್ಲಿ ಎರಡು ಸಾವಿರ ಅಡಿ ಎತ್ತರದಲ್ಲಿ ನೇಟಾಲಿನ ಮುಖ್ಯ ಪಟ್ಟಣವಾದ ಪೀಟರ್ ಮಾರಿಸ್ ಬರ್ಗ್ ಇದೆ. ಡರ್ಬಾನಿನ ಹವಾಗುಣವು ಮುಂಬೈ ಪಟ್ಟಣದಂತೆ; ಆದರೆ ಇನ್ನೂ ಸ್ವಲ್ಪ ತಂಪು. ನೇಟಾಲ್ ದೇಶದಿಂದ ಇನ್ನೂ ಸ್ವಲ್ಪ ಒಳಗೆ ಹೋದರೆ ಸಿಕ್ಕುವುದೇ ಟ್ರಾನ್ಸ್‌ವಾಲ್ ಪ್ರಪಂಚದ ಬಂಗಾರದ ಉತ್ಪತ್ತಿಯ ಬಹುಭಾಗ ದೊರೆಯುವುದು ಈ ಟ್ರಾನ್ಸವಾಲ್ ನಲ್ಲಿ. ಕೆಲವು ವರ್ಷಗಳ ಹಿಂದೆ ವಜ್ರದ ಗಣಿಗಳು ಸಿಕ್ಕಿದಾಗ ಪ್ರಪಂಚದ ಅತ್ಯಂತ ದೊಡ್ಡ ವಜ್ರವಾದ 'ಕ್ಯುಲಿನನ್' ದೊರೆತದ್ದು ಇಲ್ಲಿಯೇ. ಆ ಗಣಿಯ ಮಾಲೀಕ ಹೆಸರಿನಿಂದ ವಜ್ರದ ಹೆಸರೂ "ಕ್ಯುಲಿನನ್" ಎಂದಾಯಿತು. ಅದರ ತೂಕ ೩,೦೦೦ ಕ್ಯಾರೆಟ್ ಅಥವಾ ೧ ೧/೨ ಪೌಂಡಿಗಿಂತ ಸ್ವಲ್ಪ ಹೆಚ್ಚು. 'ಕೊಹಿನೂರ್' ವಜ್ರದ ತೂಕ ೧೦೦ ಕ್ಯಾರೆಟ್ ಮಾತ್ರ.

ಜೋಹಾನ್ಸಬರ್ಗ್ ಸುತ್ತಲೂ ಬಂಗಾರದ ಗಣಿಗಳೂ, ವಜ್ರದ ಗಣಿಗಳೂ ಇದ್ದರೂ ಅದು ಟ್ರಾನ್ಸವಾಲಿನ ಮುಖ್ಯ ನಗರವಲ್ಲ. ೩೬ ಮೈಲಿಗಳಾಚೆ ಇರುವ ಪ್ರೆಟೋರಿಯಾ

ಪಟ್ಟಣವೇ ಟ್ರಾನ್ಸವಾಲಿನ ರಾಜಧಾನಿ. ಪ್ರೆಟೋರಿಯಾ ಪಟ್ಟಣದಲ್ಲಿರುವವರೆಲ್ಲ ಅಧಿಕಾರಿಗಳು, ರಾಜಕಾರಣಿಗಳು ಮತ್ತು ಅವರುಗಳಿಗೆ ಸಹಾಯಕರಾದ ಜನರು ಆದ್ದರಿಂದ ಪ್ರೆಟೋರಿಯಾ ಬಹಳ ಪ್ರಶಾಂತ ಪಟ್ಟಣ; ಜೋಹಾನ್ಸಬರ್ಗಿನಲ್ಲಿ ಅಸಾಧ್ಯ ಗಡಿಬಿಡಿ. ಹಳ್ಳಿಗನೊಬ್ಬನು ಅಥವಾ ಒಳನಾಡಿನ ಸಣ್ಣ ಪಟ್ಟಣಿಗನೊಬ್ಬನು ಬೊಂಬಾಯಿಗೆ ಬಂದರೆ ಯಾವ ಅನುಭವವಾಗುತ್ತದೆಯೋ ಅದೇ ಅನುಭವ ಪ್ರೆಟೋರಿಯದಿಂದ ಜೋಹಾನ್ಸಬರ್ಗಕ್ಕೆ ಬಂದರೆ ಆಗುತ್ತದೆ. ಜೋಹಾನ್ಸಬರ್ಗನ ಜನರು ನಡೆಯುವುದಿಲ್ಲ– ಓಡುತ್ತಾರೆ. ಎಂದರೆ ಉತ್ಪ್ರೇಕ್ಷೆ ಏನಲ್ಲ. ಮತ್ತೊಬ್ಬರನ್ನು ವಿಚಾರಿಸಲು ಯಾರಿಗೂ ಬಿಡುವೇ ಇಲ್ಲ; ಪ್ರತಿಯೊಬ್ಬರಿಗೋ ಎಷ್ಟು ಅಲ್ಪ ಅವಧಿಯಲ್ಲಿ ಎಷ್ಟು ಹೆಚ್ಚು ಹಣವನ್ನು ಗಳಿಸಬಲ್ಲೆನೆಂಬ ಯೋಚನೆಯೊಂದೇ ಇರುವಂತೆ ತೋರುತ್ತದೆ ! ಟ್ರಾನ್ಸವಾಲ್ ಬಿಟ್ಟು ಇನ್ನೂ ಪಶ್ಚಿಮಕ್ಕೆ ಪ್ರಯಾಣ ಮಾಡಿದರೆ ಸಿಕ್ಕುವುದೇ 'ಅರೇಂಜ್ ಫ್ರೀ ಸ್ಟೇಟ್' ಅಥವಾ ಆರೇಂಜಿಯಾ ದೇಶ. ಅದರ ರಾಜಧಾನಿ ಬ್ಲೂಮ್ ಫಾಂಟೀನ್–ಒಂದು ಚಿಕ್ಕ ಸದ್ದಿಲ್ಲದ ಪಟ್ಟಣ. ಟ್ರಾನ್ಸವಾಲಿನಂತೆ ಆರೇಂಜಿಯದಲ್ಲಿ ಗಣಿಗಳಾವುವೂ ಇಲ್ಲ.ಆರೇಂಜಿಯಾದಿಂದ ರೈಲಿನಲ್ಲಿ ಕೆಲವು ಗಂಟೆಗಳ ಕಾಲ ಪ್ರಯಾಣಮಾಡಿದರೆ ದಕ್ಷಿಣ ಆಫ್ರಿಕದಲ್ಲೆಲ್ಲ ಅತಿದೊಡ್ಡ ವಲಸೆ ರಾಷ್ಟ್ರವಾದ ಕೇಪ್ ಕಾಲೊನಿ ಗಡಿಯನ್ನು ಸೇರುತ್ತೇವೆ. ಕೇಪ್ ಕಾಲೋನಿಯ ದೊಡ್ಡ ಬಂದರಾದ ಕೇಪ್ ಟೌನ್ ಅದರ ರಾಜಧಾನಿ. ಗುಡ್ ಹೋಪ್ ಭೂಶಿರದ ಮೇಲೆ ಆ ಪಟ್ಟಣವಿದೆ. ಈ ಭೂಶಿರವನ್ನು ಕಂಡುಹಿಡಿದಮೇಲೆ ಹಿಂದೂಸ್ತಾನಕ್ಕೆ ಇನ್ನೂ ಸುಲಭವಾದ ಹೊರದಾರಿ ದೊರೆಯಬಹುದೆಂಬ ಆಶೆಯಿಂದ ಪೋರ್ಚುಗಲ್ ಅರಸನಾದ ಜಾನ್ ದೊರೆ ಆ ಹೆಸರನ್ನು ಕೊಟ್ಟನು. ಏಕೆಂದರೆ ಆಗಿನಕಾಲದ ಎಲ್ಲ ಸಮುದ್ರಯಾನಗಳ ಗುರಿಯೂ ಹಿಂದೂ ದೇಶವನ್ನು ಸುಲಭವಾಗಿ ಸೇರುವುದೇ ಆಗಿತ್ತು.

ಈ ನಾಲ್ಕು ಮುಖ್ಯ ಬ್ರಿಟಿಷ್ ವಲಸೆ ರಾಷ್ಟ್ರಗಳಲ್ಲದೆ, ಯೂರೋಪಿಯನ್ನರಿಗಿಂತ ಮುಂಚೆಯೇ ಹೋಗಿ ನೆಲಸಿದ್ದ ಜನರಿರುವ ಇನ್ನೂ ಕೆಲವು ದೇಶಗಳೂ ಬ್ರಿಟಿಷರ ರಕ್ಷಣೆಯಲ್ಲಿವೆ.

ದಕ್ಷಿಣ ಆಫ್ರಿಕದಲ್ಲಿ ಸ್ವಾಭಾವಿಕವಾಗಿ ಹೆಚ್ಚು ಸೌಲಭ್ಯವಿರುವ ಮುಖ್ಯ ಕೈಗಾರಿಕೆ ಎಂದರೆ ಬೇಸಾಯ. ಕೆಲವು ಭಾಗಗಳಂತೂ ಬಹು ಫಲವತ್ತಾಗಿ, ಸೊಬಗಿನ ಬೀಡುಗಳಾಗಿವೆ. ಹೆಚ್ಚು ಶ್ರಮವಿಲ್ಲದೆ ಬೆಳೆಯುವ ಪೈರು ಮುಸುಕಿನ ಜೋಳ; ಇದೇ ಅಲ್ಲಿಯ ನೀಗ್ರೊ ಜನರ ಮುಖ್ಯ ಆಹಾರ. ಕೆಲವೆಡೆಗಳಲ್ಲಿ ಗೋಧಿಯನ್ನೂ ಬೆಳೆಯುತ್ತಾರೆ. ದಕ್ಷಿಣ ಆಫ್ರಿಕವು ಹಣ್ಣುಗಳಿಗೆ ಹೆಸರಾದ ದೇಶ. ನೇಟಾಲಿನಲ್ಲಿ ಕಡುಬಡವರೂ ತಿನ್ನಬಹುದಾದಷ್ಟು ಪಪ್ಪಾಯಿ ಹಣ್ಣು, ಅನಾನಸು (ಪೈನ್ ಆಪಲ್) ಹಣ್ಣುಗಳನ್ನು ಬೆಳೆಯುತ್ತಾರೆ. ನೇಟಾಲ್ ಮತ್ತು ಇತರ ಕಾಲೋನಿಗಳಲ್ಲಿ ಕಿತ್ತಳೆ, ಸಕ್ಕರೆ ಬಾದಾಮಿ, 'ಪಿಚ್ಚೀಸು' (Peaches) ಹಣ್ಣುಗಳು ಲೆಕ್ಕವಿಲ್ಲದಷ್ಟು ಹೇರಳವಾಗಿ ಬೆಳೆಯುತ್ತವೆ. ಅವುಗಳಲ್ಲಿ ಕೆಲವನ್ನು ಮಾತ್ರ ಆರಿಸಿ ತಿಳಿಸಿರುತ್ತೇನೆ. ಇನ್ನೂ ನಾನಾಜಾತಿಯ ಹಣ್ಣುಗಳು ದೊರೆಯುತ್ತವೆ. ಕೇಪ್ ಕಾಲೊನಿಯಲ್ಲಿ ದ್ರಾಕ್ಷಿ ಮತ್ತು ನೇರಲು (Plums) ಹಣ್ಣುಗಳು

ಬೆಳೆಯುತ್ತವೆ. ಅಷ್ಟು ಮಧುರವಾದ ದ್ರಾಕ್ಷಿಹಣ್ಣು ಇನ್ನೆಲ್ಲಿಯೂ ದೊರೆಯುವುದಿಲ್ಲ. ಸುಗ್ಗಿಯ ಸಮಯದಲ್ಲಿ ಕಡುಬಡವನೂ ಸಹ ಮನದಣಿಯುವಷ್ಟು ಹಣ್ಣು ತಿನ್ನಬಹುದು. ಭಾರತೀಯರು ಇರುವ ಕಡೆ ಮಾವಿನಹಣ್ಣು ಇರಲೇ ಬೇಕು. ಭಾರತೀಯರು ಅಲ್ಲಿಗೆ ಹೋಗಿ ಮಾವಿನ ಗಿಡವನ್ನು ಹಾಕಿ ಮಾವಿನಹಣ್ಣು ಬೆಳೆದರು. ಅಲ್ಲಿಯ ಕೆಲವು ಜಾತಿಯ ಹಣ್ಣುಗಳು ಮುಂಬೈಯಲ್ಲಿ ಸಿಕ್ಕುವ ಹಣ್ಣುಗಳಿಗಿಂತ ರುಚಿಯಲ್ಲಿ ಏನೂ ಕಡಿಮೆ ಇಲ್ಲ. ಭಾರತೀಯರು ತಮ್ಮ ಊಟದ ರುಚಿಗಾಗಿ ಬೇಕಾದಷ್ಟು ಕಾಯಿಪಲ್ಯೆಯನ್ನು ಸಹ ಬೆಳೆಯುತ್ತಾರೆ.

ಅಲ್ಲಿ ಪಶುಸಂಪತ್ತೂ ಸಾಕಷ್ಟು ಪ್ರಮಾಣದಲ್ಲಿ ಇದೆ. ಆಕಳು, ಎತ್ತು ಭಾರತಕ್ಕಿಂತ ಹೆಚ್ಚು ದೃಢವಾಗಿಯೂ ಬಲವಾಗಿಯೂ ಇವೆ. ಗೋಮಾತೆಯನ್ನು ಪೂಜಿಸುವೆವೆಂದು, ರಕ್ಷಿಸುವೆವೆಂದು ಹೇಳಿಕೊಳ್ಳುವ ಭಾರತದಲ್ಲಿ ಜನಗಳಂತೆಯೇ ದನಗಳೂ ಬಡಕಲು ಬಡಕಲಾಗಿರುವುದನ್ನು ನೋಡಿ ನಾಚಿಕೆಯಿಂದ ತಲೆ ತಗ್ಗಿಸಿದ್ದೇನೆ. ನನ್ನ ಹೃದಯ ಗಾಸಿಕೊಂಡು ನೊಂದಿದೆ. ದಕ್ಷಿಣ ಆಫ್ರಿಕದ ಎಲ್ಲ ಭಾಗಗಳಲ್ಲಿಯೂ ತೆರೆದ ಕಣ್ಣುಗಳಿಂದ ಸಂಚರಿಸಿದರೂ ಕೇವಲ ಒಂದೇ ಒಂದು ಕೃಶವಾದ ಆಕಳನ್ನಾಗಲಿ, ಎತ್ತನ್ನಾಗಲಿ ನಾನು ಎಲ್ಲಿಯೂ ಕಾಣಲಿಲ್ಲ.

ಪ್ರಕೃತಿದೇವಿಯು ತನ್ನ ಸಂಪತ್ತೆಲ್ಲವನ್ನೂ ಧಾರಳವಾಗಿ ನೀಡಿರುವುದರ ಜೊತೆಗೆ ನಯನಮನೋಹರವಾದ ಪ್ರಕೃತಿಸೌಂದರ್ಯವನ್ನೂ ಕೊಟ್ಟಿದ್ದಾಳೆ. ಡರ್ಬಾನಿನ ಸೌಂದರ್ಯವು ಚಿತ್ತಾಕರ್ಷಕವಾಗಿದ್ದರೂ, ಕೇಪ್‌ಟೌನಿನ ಸೊಬಗು ಎಲ್ಲವನ್ನೂ ಮೀರಿಸಿದೆ. ಅತಿ ಎತ್ತರವೂ, ತೀರ ಸಣ್ಣದೂ ಅಲ್ಲದ ಬೆಟ್ಟದ ತಪ್ಪಲಿನಲ್ಲಿ ಈ ಪಟ್ಟಣವಿದೆ. ದಕ್ಷಿಣ ಆಫ್ರಿಕದ ಮೇಲೆ ವಿಶೇಷ ಮಮತೆಯುಳ್ಳ ಒಬ್ಬ ಕವಯತ್ರಿಯು ಈ ಬೆಟ್ಟಕ್ಕಿರುವ ವೈಶಿಷ್ಟ್ಯವು ಮತ್ತಾವ ಬೆಟ್ಟಕ್ಕೂ ಇಲ್ಲವೆಂದು ಬಣ್ಣಿಸಿರುತ್ತಾಳೆ, ಇದರಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇರಬಹುದು; ಇದೆ. ಆದರೆ ಆಕೆ ಹೇಳುವ ಒಂದು ವಿಷಯ ಮಾತ್ರ ನಿಜ. ಕೇಪ್ ಟೌನಿನ ಜನರಿಗೆ ಈ ಬೆಟ್ಟ ಆಪ್ತ ಸ್ನೇಹಿತನಂತೆ ಇದೆ ಎಂದಿದ್ದಾಳೆ. ಅತಿ ಎತ್ತರವಿಲ್ಲ; ಭಯಾನಕವಾಗಿಲ್ಲ. ದೂರ ನಿಂತು ಪೂಜಿಸದೆ, ಜನರು ಬೆಟ್ಟದ ಮೇಲೆ ಮನೆ ಮಾಡಿ ವಾಸಮಾಡುತ್ತಿದಾರೆ. ಸಮುದ್ರದಡದಲ್ಲಿಯೇ ಇರುವುದರಿಂದ ಸಮುದ್ರದ ತಿಳಿನೀರು ಯಾವಾಗಲೂ ಅದರ ಪಾದಗಳನ್ನು ತೊಳೆಯುತ್ತ ಇದೆ. ಹುಡುಗರು, ಮುದುಕರು, ಗಂಡಸರು, ಹೆಂಗಸರು ಭಯರಹಿತರಾಗಿ ಸಾವಿರಗಟ್ಟಲೆ ಬೆಟ್ಟದ ಮೇಲೆಲ್ಲ ಅಲೆದು ತಮ್ಮ ಕಿಲಕಿಲವಾಣಿಯಿಂದ ಬೆಟ್ಟವನ್ನು ಪ್ರತಿಧ್ವನಿಗೈಸುತ್ತಾರೆ. ಎತ್ತರವಾದ ಗಿಡಗಳು, ಸುವಾಸನೆಯ ಪುಷ್ಪಗಳು ಇನ್ನೂ ನೋಡಬೇಕೆಂಬ, ಎಷ್ಟು ನೋಡಿದರೂ ತಣಿಯಲಾರದ ಸೊಬಗನ್ನು ಈ ಬೆಟ್ಟಕ್ಕೆ ಕೊಟ್ಟಿವೆ.

ದಕ್ಷಿಣ ಆಫ್ರಿಕದಲ್ಲಿ ಗಂಗಾ ಸಿಂಧು ನದಿಗಳಂತೆ ದೊಡ್ಡ ನದಿಗಳಿಲ್ಲ. ಇರುವ ಕೆಲವು ನದಿಗಳು ಬಹಳ ಸಣ್ಣವು. ನದಿಗಳ ಮೂಲಕ ಅನೇಕ ಸ್ಥಳಗಳನ್ನು ನೋಡುವಂತೆ ಇಲ್ಲ. ಅಲ್ಲಿ ನಾಲೆಗಳು ಬಹಳ ಕಡಿಮೆ. ದೊಡ್ಡ ನದಿಗಳೇ ಇಲ್ಲದಿರುವಾಗ ನಾಲೆಗಳೆಲ್ಲಿ? ನೀರಿನ ಅಭಾವವಿರುವ ಕಡೆಗಳಲ್ಲಿ ಆರ್ಟೀಸಿಯನ್ ಭಾವಿಗಳನ್ನು ತೋಡಿ

ಗಾಳೀಯಂತ್ರಗಳಿಂದಲೊ, ಹಬೆಯ ಯಂತ್ರಗಳಿಂದಲೊ ವ್ಯವಸಾಯಕ್ಕೆ ನೀರನ್ನು ಒದಗಿಸುತ್ತಾರೆ. ಸರ್ಕಾರದವರು ವ್ಯವಸಾಯಕ್ಕೆ ಬಹಳ ಸಹಾಯ ಮಾಡುತ್ತಾರೆ. ವ್ಯವಸಾಯಗಾರರಿಗೆ ಸಲಹೆ ಕೊಡಲು ವ್ಯವಸಾಯ ನಿಪುಣರನ್ನು ಕಳುಹಿಸುತ್ತಾರೆ; ವ್ಯವಸಾಯಗಾರರ ಉಪಯೋಗಕ್ಕೆಂದು ಪರೀಕ್ಷಾ ಕೇಂದ್ರಗಳಿಗಾಗಿ ಮಾದರಿ ಕ್ಷೇತ್ರಗಳನ್ನು ನಡಸುತ್ತಾರೆ; ಒಳ್ಳೆಯ ಹೋರಿಗಳನ್ನೂ ಬೀಜಗಳನ್ನೂ ಒದಗಿಸಿ, ಅಲ್ಪ ಖರ್ಚಿನಲ್ಲಿ ಬಾವಿಗಳನ್ನು ತೋಡಿಸಿಕೊಟ್ಟು ಸುಲಭ ಕಂತಿನಿಂದ ಹಣ ಪಾವತಿ ಮಾಡಲು ಸೌಲಭ್ಯ ಕಲ್ಪಿಸಿದ್ದಾರೆ. ಹೊಲಗಳ ಸಂರಕ್ಷಣೆಗೆ ಮುಳ್ಳುತಂತಿಯ ಬೇಲಿಯನ್ನು ಹಾಕಿಕೊಡುತ್ತಾರೆ.

ಹಿಂದೂಸ್ತಾನವು ಭೂಮಧ್ಯರೇಖೆಗೆ ಉತ್ತರದಲ್ಲಿಯೂ, ದಕ್ಷಿಣ ಆಫ್ರಿಕವು ದಕ್ಷಿಣದಲ್ಲಿಯೂ ಸಮಾನಾಂತರದಲ್ಲಿ ಇರುವುದರಿಂದ ಇಲ್ಲಿನ ಹವಾಗುಣಕ್ಕೆ ಪ್ರತಿಯಾಗಿ ಅಲ್ಲಿನ ಹವಾಗುಣವಿದೆ. ಇಲ್ಲಿ ಬೇಸಗೆಯಾದರೆ ಅಲ್ಲಿ ಚಳಿಗಾಲ. ಅಲ್ಲಿನ ಮಳೆಯನ್ನು ನೆಚ್ಚುವಂತಿಲ್ಲ; ಯಾವಾಗ ಬಂದರೂ ಬರಬಹುದು. ಒಟ್ಟಿನಲ್ಲಿ ವರ್ಷಕ್ಕ ಇಪ್ಪತ್ತು ಅಂಗಲುಗಳಿಗೆ ಮೇಲೆ ಯಾವಾಗಲೂ ಹೋಗಿಲ್ಲ.

೨. ಚರಿತ್ರೆ

ಹಿಂದಿನ ಅಧ್ಯಾಯದಲ್ಲಿ ವಿವರಿಸಿದ ಭೂಭಾಗಗಳು ಪುರಾತನವಾದುವಲ್ಲ, ದಕ್ಷಿಣ ಆಫ್ರಿಕದ ಮೊದಲ ನಿವಾಸಿಗಳು ಯಾರೆಂಬುದು ಇನ್ನೂ ತಿಳಿದಿಲ್ಲ. ದಕ್ಷಿಣ ಆಫ್ರಿಕದಲ್ಲಿ ಯೂರೋಪಿಯನರು ಕಾಲಿಟ್ಟಾಗ ಅಲ್ಲಿದ್ದವರು ನೀಗ್ರೊ ಜನರು. ಈ ನೀಗ್ರೊ ಜನರು ಅಮೆರಿಕದ ಗುಲಾಮರ ಸಂತತಿಯವರೆಂದೂ, ಅಮೇರಿದಲ್ಲಿ ಹಿಂಸೆ ತಾಳಲಾರದೆ ದಕ್ಷಿಣ ಆಫ್ರಿಕಕ್ಕೆ ಓಡಿಬಂದು ನೆಲಸಿದವರೆಂದೂ ಪ್ರತೀತಿ ಇದೆ. ನೀಗ್ರೊ ಜನರಲ್ಲಿ ಜುಲು, ಸ್ವಾಜಿ, ಬಸುಟೊ, ಬೆಚುಆನ ಎಂದು ಮುಂತಾಗಿ ಅನೇಕ ಪಂಗಡಗಳಿವೆ. ಇವರು ಅನೇಕ ಭಾಷೆಗಳನ್ನು ಮಾತನಾಡುತ್ತಾರೆ. ಇವರೇ ದಕ್ಷಿಣ ಆಫ್ರಿಕದ ಪೂರ್ವನಿವಾಸಿಗಳೆಂದು ನಾವು ಪರಿಗಣಿಸಬೇಕು. ಆದರೆ ಈಗಿನ ನೀಗ್ರೊ ಜನಸಂಖ್ಯೆಯ ಇಪ್ಪತ್ತು ಮೂವತ್ತರಷ್ಟು ಜನರಾದರೂ ವಾಸಮಾಡಬಹುದಾದಷ್ಟು ವಿಸ್ತಾರವಾದ ದೇಶ ದಕ್ಷಿಣ ಆಫ್ರಿಕ. ಕೇಪ್ ಟೌನಿಗೂ ಡರ್ಬಾನಿಗೂ ರೈಲಿನಲ್ಲಿ ೧,೮೦೦ ಮೈಲಿಗಳ ದೂರವಿದೆ. ಸಮುದ್ರದ ಮೇಲೆ ೧,೦೦೦ ಮೈಲಿಗಳಾದರೂ ಆಗುತ್ತದೆ. ಈ ನಾಲ್ಕು ವಲಸೆ ರಾಷ್ಟ್ರಗಳ ಒಟ್ಟು ವಿಸ್ತೀರ್ಣ ೪,೭೩,೦೦೦ ಚದರ ಮೈಲಿಗಳು. ಇಷ್ಟು ದೊಡ್ಡ ದೇಶದಲ್ಲಿ ೧೯೧೪ ರಲ್ಲಿ ಐವತ್ತು ಲಕ್ಷ ನೀಗ್ರೋಜನರೂ ೧೦ ೧/೨ ಲಕ್ಷ ಯೂರೋಪಿಯನರೂ ಮಾತ್ರ ವಾಸವಾಗಿದ್ದರು.

ನೀಗ್ರೊ ಜನರಲ್ಲಿ ಜುಲುಗಳು ಎತ್ತರವಾಗಿಯೂ ರೂಪವಂತರಾಗಿಯೂ ಇದ್ದಾರೆ. ನೀಗ್ರೊ ಜನರ ವಿಷಯದಲ್ಲಿ ರೂಪವಂತರು ಎಂದು ನಾನು ಯೋಜನೆ ಮಾಡಿಯೇ ಉಪಯೋಗಿಸಿದ್ದೇನೆ. ನಮ್ಮ ಆದರ್ಶದಂತೆ ಉದ್ದನೆಯ ಮೂಗು ಒಳ್ಳೆಯ ಮೈಬಣ್ಣ ಇರುವವರು ಮಾತ್ರ ಸುಂದರರು. ಈ ಮೂಢನಂಬಿಕೆಯನ್ನು ಸ್ವಲ್ಪ ಮರೆತರೆ ಜುಲು ಜನರ ನಿರ್ಮಾಣದಲ್ಲಿ ಸೃಷ್ಟಿಕರ್ತನು ಯಾವ ಆಲಕ್ಷ್ಯವನ್ನೂ ತೋರಿಲ್ಲವೆಂದು ನನ್ನ

ಭಾವನೆ. ಗಂಡಸರೂ ಹೆಂಗಸರೂ ಒಳ್ಳೆಯ ಎತ್ತರವಿದ್ದು, ಆ ಎತ್ತರಕ್ಕೆ ಅನುಗುಣವಾಗಿ ವಿಶಾಲವಾದ ಎದೆ, ತುಂಬಿದ ಮೈಕಟ್ಟು ಇವೆ; ಕೈಗಳೂ, ಕಾಲಿನ ಮೀನುಖಂಡಗಳು ಮಾಂಸಖಂಡಗಳಿಂದ ತುಂಬಿಕೊಂಡು ದುಂಡಗೆ ಇರುತ್ತವೆ. ಬೆನ್ನು ಬಾಗಿಸಿ ಅಥವಾ ಡುಬ್ಬಿನಿಂದ ನಡೆಯುವ ಒಬ್ಬ ವ್ಯಕ್ತಿಯನ್ನೂ ನೀವು ಅವರಲ್ಲಿ ಕಾಣಲಾರಿರಿ. ತುಟಿಗಳು ದಪ್ಪನಾಗಿ ದೊಡ್ಡದಾಗಿದ್ದರೂ ಒಟ್ಟು ನಿಲುವಿಕೆಯೊಂದಿಗೆ ಸರಿ ತೂಗುತ್ತವೆ; ವಿಕಾರವನ್ನುಂಟು ಮಾಡುತ್ತವೆ ಎಂದು ಮಾತ್ರ ನಾನು ಹೇಳಲಾರೆ.

ಕಣ್ಣುಗಳು ದುಂಡಗೆ ಪ್ರಕಾಶಮಾನವಾಗಿವೆ. ವಿಶಾಲವಾದ ಮುಖಕ್ಕೆ ತಕ್ಕಂತೆ ಮೂಗು ದೊಡ್ಡದಾಗಿ ಚಪ್ಪಟೆಯಾಗಿದೆ. ತಲೆಯ ಮೇಲೆ ಗುಂಗುರುಕೂದಲು ಮೈಬಣ್ಣ ಕಪ್ಪಾದರೂ ಕರಿಯ ಮರದಂತೆ ಹೊಳೆಯುತ್ತದೆ. ಆಫ್ರಿಕ ದೇಶಕ ನಿವಾಸಿಗಳಲ್ಲಿ ಸೌಂದರ್ಯಕ್ಕೆ ಯಾರಿಗೆ ಮೊದಲನೆಯ ಸ್ಥಾನ ಕೊಡುತ್ತೀಯೆ ಎಂದು ಒಬ್ಬ ಜುಲುವನ್ನು ಕೇಳಿದರೆ ಆತನು ಜುಲುವಿಗೇ ಪ್ರಾಮುಖ್ಯತೆ ಕೊಡುತ್ತಾನೆ. ಆತನ ತೀರ್ಮಾನ ತಪ್ಪೆಂದು ನನಗೇನೂ ತೋರುವದಿಲ್ಲ. ಮೈಕಟ್ಟಿನಲ್ಲಿ ಜುಲು ಜನರು ಸ್ವಾಭಾವಿಕವಾಗಿ ಅಜಾನುಬಾಹುಗಳು, ಶಕ್ತಿಯುತರು, ಯೂರೋಪುದೇಶದ ಜಟ್ಟಿಗಳಂತೆ ಯಾವ ಸಾಧನೆಯನ್ನೂ ಅವರು ಮಾಡಬೇಕಾಗಿಲ್ಲ. ಭೂಮಧ್ಯರೇಖೆಯ ಸಮೀಪ ದೇಶಗಳ ಜನರ ಮೈಬಣ್ಣ ಕಪ್ಪಗಿರ ಬೇಕಾದದ್ದು ಪ್ರಕೃತಿನಿಯಮ. ಪ್ರಕೃತಿ ಸೃಷ್ಟಿಯಲ್ಲಿ ಎಲ್ಲೆಡೆಯಲ್ಲೂ ಸೌಂರ್ಯವಿದೆಯೆಂದು ನಾವು ನಂಬುವುದಾದರೆ ಸೌಂದರ್ಯಾನ್ವೇಷಣೆಯಲ್ಲಿ ನಮ್ಮ ಏಕಾಂಶ ದೃಷ್ಟಿಯೂ, ಸಂಕುಚಿತ ಭಾವನೆಯೂ ಮಾಯವಾಗುತ್ತವೆ. ಕೊನೆಯ ಪಕ್ಷ ಭಾರತೀಯರಿಗೆ ತಮ್ಮ ಬಣ್ಣದ ವಿಷಯದಲ್ಲಿರುವ ನಾಚಿಕೆ ಮತ್ತು ತಾತ್ಸಾರವಾದರೂ ಮಾಯವಾಗುತ್ತದೆ.

ಜೊಂಡು ಮತ್ತು ಕರಡು ಹುಲ್ಲಿನಿಂದ ಮಾಡಿದ ದುಂಡನೆಯ ಗುಡಿಸಲುಗಳೇ ನೀಗ್ರೊ ಜನರ ವಾಸದ ಮನೆಗಳು. ಅವುಗಳಿಗೆ ಸುತ್ತಲೂ ಒಂದು ಗೋಡೆ. ಮೇಲೆ ಹುಲ್ಲಿನ ಮುಚ್ಚಿಗೆ. ಮಧ್ಯದ ಒಂದು ಕಂಬವೇ ಮೇಲ್ಛಾವಣಿಗೆ ಆಧಾರ. ಒಬ್ಬ ಮನುಷ್ಯನು ಬಾಗಿ ಹೋಗಬಹುದಾದಷ್ಟು ದೊಡ್ಡ ಕಂಡಿಯೆ ಗಾಳಿ ಬೆಳಕುಗಳಿಗೆ ಮಾರ್ಗ. ಈ ಕಂಡಿಗೆ ಬಾಗಿಲು ಇಲ್ಲ. ನಮ್ಮಂತೆಯೇ ನೀಗ್ರೊ ಜನರೂ ಮಣ್ಣು ಮತ್ತು ಸಗಣಿಯಿಂದ ಗೋಡೆಗಳನ್ನು ಬಳಿಯುತ್ತಾರೆ. ನೀಗ್ರೊ ಜನರು ಚೌಕವಾದ ಯಾವ ಕಟ್ಟಡವನ್ನೂ ನಿರ್ಮಿಸಲಾರರು ಎಂಬುದು ನಿಜ. ಸೃಷಿನಿಯಮದಲ್ಲಿ ಸರಳರೇಖೆಗಳನ್ನಾಗಲಿ, ಚೌಕ ಆಕೃತಿಗಳನ್ನಾಗಲಿ ನಾವು ಕಾಣುವುದಿಲ್ಲ. ನೀಗ್ರೊ ಜನರು ನೋಡುವುದೂ, ಮಾಡುವುದೂ ದುಂಡು ವಸ್ತುಗಳನ್ನೇ. ಪ್ರಕೃತಿಯ ಮಡಿಲಲ್ಲಿ ಬೆಳೆದ ಈ ಸಾಧು ಜನರು ತಮ್ಮ ಎಲ್ಲ ಅನುಭವವನ್ನೂ ಪ್ರಕೃತಿಯಿಂದಲೇ ಪಡೆದಿದ್ದಾರೆ.

ಗುಡಿಸಿಲಿನ ಒಳಗಡೆಯ ಸಾಮಾನುಗಳು ಆ ಸರಳ ಜೀವನಕ್ಕೆ ಅನುಗುಣವಾಗಿವೆ. ಮೇಜು, ಕುರ್ಚಿ, ಪೆಟ್ಟಿಗೆಗಳಿಗೆ ಅಲ್ಲಿ ಸ್ಥಾನವಿಲ್ಲ. ಈಗಲೂ ಸಹ ನೋಡುವದು ಕಷ್ಟ.

ಯೂರೋಪಿಯನರು ಬರುವ ಮುಂಚೆ ಚರ್ಮದ ಹೊದ್ದಿಕೆಯೇ ಅವರ ಉಡುಪಾಗಿತ್ತು. ಅದೇ ಅವರ ಜಮಖಾನ, ಮಗ್ಗಲುಹಾಸಿಗೆ ಮತ್ತು ಮೆತ್ತೆಗಳಾಗುತ್ತಿತ್ತು. ಈಗ ಉಣ್ಣೆಯ ದುಪ್ಪಟೆಗಳನ್ನು ಹೊದೆಯುತ್ತಾರೆ. ಬ್ರಿಟಿಷರ ಆಳ್ವಿಕೆಗೆ ಮೊದಲು

ಗಂಡಸರೂ ಹೆಂಗಸರೂ ಬೆತ್ತಲೆಯಾಗಿ ಓಡಾಡುತ್ತಿದ್ದರು. ಒಳದೇಶದಲ್ಲಿ ಈಗಲೂ ಅವರು ಹಾಗೆಯೆ ಇದ್ದಾರೆ. ತಮ್ಮ ಮರ್ಮಸ್ಥಾನಗಳನ್ನು ಒಂದು ಚರ್ಮದ ತುಂಡಿನಿಂದ ಮುಚ್ಚಿಕೊಳ್ಳುತ್ತಾರೆ. ಕೆಲವು ಕಡೆಗಳಲ್ಲಿ ಅದೂ ಇರುವುದಿಲ್ಲ. ಈ ಪದ್ಧತಿಯಿಂದ ಅವರಲ್ಲಿ ಇಂದ್ರಿಯನಿಗ್ರಹಶಕ್ತಿ ಇಲ್ಲವೆಂದು ಮಾತ್ರ ಯಾರೂ ಭಾವಿಸಕೂಡದು. ಒಂದು ಸಮಾಜದ ಬಹು ಜನರ ಆಚರಣೆಯಲ್ಲಿನ ಒಂದು ಪದ್ಧತಿಯು, ಮತ್ತೊಂದು ಸಮಾಜದವರಿಗೆ ಬಹಳ ಹೀನಾಯವಾಗಿ ತೋರಿದರೂ, ಆಚರಣೆಯಿರುವ ಸಮಾಜದಲ್ಲಿ ಅದು ನಿರ್ದುಷ್ಟವಾಗಿರಬಹುದು. ಒಬ್ಬರನ್ನೊಬ್ಬರು ದಿಟ್ಟಿಸಿನೋಡಲು ನೀಗ್ರೊ ಜನರಿಗೆ ಅವಕಾಶವಿಲ್ಲ. ಭಾಗವತದಲ್ಲಿ ಹೇಳಿರುವಂತೆ, ಶುಕದೇವನು ಬೆತ್ತಲೆಯಾಗಿ ಸ್ನಾನ ಮಾಡುತ್ತಿದ್ದ ಸ್ತ್ರೀಯರ ಬಳಿ ಹೋದಾಗ ಆತನ ಮನಸ್ಸು ನಿರ್ವಿಕಾರವಾಗಿತ್ತು. ಸ್ತ್ರೀಯರಾದರೂ ಅವಮಾನಿತರಾದೆವೆಂದು ಧೈರ್ಯಗೆಡಲಿಲ್ಲ. ಇಂದಿನ ಭಾರತದಲ್ಲಿ ಅಂತಹದೇ ಸಂದರ್ಭದಲ್ಲಿ ಕಲಂಕಿತರಾಗದ ದೃಢಮನಸ್ಕರು ದೊರೆಯದೆ ಹೋದರೆ ಅದು ಮಾನವಸಂಸ್ಕಾರದ ಪರಮಾವಧಿಯ ಕುರುಹಲ್ಲ; ಅದು ನಮ್ಮ ಅವನತಿಗೆ ಸಾಕ್ಷಿ. ನೀಗ್ರೊ ಜನರು ಅನಾಗರಿಕರೆಂದು ಭಾವಿಸಿದರೆ ನಾವು ದುರಹಂಕಾರಿಗಳು. ನಾವು ಯೋಚಿಸುವಂತೆ ಅವರು ಕ್ರೂರಕರ್ಮಿಗಳಲ್ಲ.

ನೀಗ್ರೊ ಹೆಂಗಸರು ಪಟ್ಟಣಕ್ಕೆ ಹೋದಾಗ ಮೊಣಕಾಲಿನಿಂದ ಎದೆಯವರೆಗೆ ಬಟ್ಟೆಯನ್ನು ಹಾಕಬೇಕೆಂದು ಈಗ ಶಾಸನ ಆಗಿದೆ. ಆದ್ದರಿಂದ ಒಂದು ಚೌಕ ತುಂಡುಬಟ್ಟೆಯನ್ನು ಸುತ್ತಿಕೊಳ್ಳುವುದು ಈಗ ಅವರಿಗೆ ಅನಿವಾರ್ಯ. ಅಂತಹ ಬಟ್ಟೆಗಳ ವ್ಯಾಪಾರ ಹೆಚ್ಚಿದೆ. ಯೂರೋಪಿನಿಂದ ಪ್ರತಿವರ್ಷವೂ ಬಟ್ಟೆ ಮತ್ತು ದುಪ್ಪಟೆಗಳು ಆಮದಾಗುತ್ತಿವೆ. ಅದರಂತೆ ಗಂಡಸರೂ ಮೊಣಕಾಲಿನಿಂದ ಸೊಂಟದವರೆಗೆ ಬಟ್ಟೆಯನ್ನು ಧರಿಸಬೇಕೆಂದು ಶಾಸನವಾಗಿದೆ. ಅನೇಕರು ಯೂರೋಪಿನಿಂದ ಬರುವ ಹಳೆಯ ಉಡುಪನ್ನು ಧರಿಸುವ ಅಭ್ಯಾಸ ಮಾಡಿದ್ದಾರೆ. ಇನ್ನು ಕೆಲವರು ಒಂದು ದಾರವನ್ನು ಕಟ್ಟಿ ಚಡ್ಡಿಯನ್ನು ಧರಿಸುತ್ತಾರೆ. ಈ ಎಲ್ಲ ಬಟ್ಟೆಗಳೂ ಯೂರೋಪಿನಿಂದಲೇ ಬರಬೇಕು.

ನೀಗ್ರೊ ಜನರ ಆಹಾರ ಮುಸುಕಿನ ಜೋಳ; ಮತು ದೊರೆತಾಗ ಸ್ವಲ್ಪ ಮಾಂಸ. ಮಸಾಲೆ ಮತ್ತು ಭೋಗ್ಯ ವಸ್ತುಗಳ ವಿಷಯ ಅವರಿಗೆ ತಿಳಿಯದೆ ಇರುವುದು ಅವರ ಅದೃಷ್ಟ. ಸ್ವಲ್ಪ ಮಸಾಲೆ ವಾಸನೆ ಅಥವಾ ಅರಿಸಿನ ಬಣ್ಣವಿದ್ದರೆ ಆ ಆಹಾರವನ್ನು ನೋಡಿ ನೀಗ್ರೊ ಜನರು ಮೂಗು ಮುಚ್ಚಿಕೊಳ್ಳುವುದಲ್ಲದೆ, ನಾವು ಅನಾಗರಿಕರೆಂದು ಕರೆಯುವ ಕೆಲವರು ಅದನ್ನು ಕೈಯಿಂದ ಮುಟ್ಟುವುದು ಸಹ ಇಲ್ಲ. ಒಬ್ಬ ಜುಲು ಮನುಷ್ಯನು ಒಂದು ಪೌಂಡು ಬೇಯಿಸಿದ ಮುಸುಕಿನ ಜೋಳವನ್ನು ಸ್ವಲ್ಪ ಉಪ್ಪು ಸೇರಿಸಿ ಒಂದೇಬಾರಿಗೆ ಊಟ ಮಾಡುವುದು ಸರ್ವಸಾಮಾನ್ಯ. ಒಡೆದು ಕುಟ್ಟಿದ ಮುಸುಕಿನ ಜೋಳದ ಗಂಜಿಯಾದರೆ ಒಪ್ಪೊತ್ತಿನ ಊಟವಾಯಿತು. ಮಾಂಸ ದೊರೆತಾಗ ಹಸಿಯದಾದರೂ, ಬೇಯಿಸಿದ್ದಾದರೂ, ಕುಟ್ಟಿದ್ದಾದರೂ, ಸುಟ್ಟಿದ್ದಾದರೂ ಸ್ವಲ್ಪ ಉಪ್ಪಿನೊಂದಿಗೆ ತಿಂದುಬಿಡುತ್ತಾನೆ. ಯಾವ ಪ್ರಾಣಿಯ ಮಾಂಸವಾದರೂ ಆಗಬಹುದು.

ನೀಗ್ರೊ ಜನರ ಭಾಷೆಗಳನ್ನು ಆಯಾ ಪಂಗಡದ ಹೆಸರಿನಿಂದ ಕರೆಯುತ್ತಾರೆ. ಯೂರೋಪಿಯನರು ಹೋದನಂತರ ಬರವಣಿಗೆಯನ್ನು ಕಲಿತರು. ನೀಗ್ರೊ ಭಾಷೆಗಳಿಗೆ ವರ್ಣಮಾಲೆ ಇಲ್ಲ. ಬೈಬಲ್ ಮುಂತಾದ ಗ್ರಂಥಗಳನ್ನು ರೋಮನ್ ಲಿಪಿಯಿಂದ ನೀಗ್ರೊ ಭಾಷೆಗಳಲ್ಲಿ ಅಚ್ಚು ಹಾಕಿಸಿದ್ದಾರೆ. ಜುಲು ಭಾಷೆ ಬಹಳ ಇಂಪು. ಅನೇಕ ಶಬ್ದಗಳು 'ಆ' ಎಂದು ಕೊನೆಗಾಣುವುದರಿಂದ ಭಾಷೆ ಕಿವಿಗೆ ಬಹಳ ಮೃದುವಾಗಿ ಮನೋಹರವಾಗಿದೆ. ಜುಲು ಶಬ್ದಗಳು ಬಹಳ ಅರ್ಥಗರ್ಭಿತವಾಗಿ, ಕಾವ್ಯಮಯವಾಗಿ ಇರುತ್ತವೆ ಎಂದು ಕೇಳಿಯೂ ಇದ್ದೇನೆ; ಓದಿಯೂ ಇದ್ದೇನೆ. ನಾನು ಕಲಿತ ಕೆಲವು ಶಬ್ದಗಳಿಂದ ಅದು ನಿಜವೆಂದು ನನ್ನ ಭಾವನೆ. ಅನೇಕ ಊರುಗಳ ಹೆಸರು ಬಹಳ ಸೊಗಸಾಗಿವೆ; ಅವುಗಳ ಇಂಗ್ಲೀಷ್ ಅನುವಾದ ಸಹ ಕೊಟ್ಟಿದ್ದೇನೆ. ವಾಚಕರಿಗೆ ಪರಿಚಯಮಾಡಿ ಕೊಡಲು ಈಗ ನನಗೆ ಜ್ಞಾಪಕವಿಲ್ಲ.

ಕ್ರೈಸ್ತ ಪಾದ್ರಿಗಳ ಹೇಳಿಕೆಯನ್ನು ನಂಬುವುದಾದರೆ ನೀಗ್ರೋ ಜನರಿಗೆ ಹಿಂದೆಯೂ, ಈಗಲೂ, ಯಾವ ಧರ್ಮವೂ ಇಲ್ಲ. ಆದರೆ 'ಧರ್ಮ' ಎಂಬ ಶಬ್ದವನ್ನು ವಿಶಾಲದೃಷ್ಟಿಯಿಂದ ಗ್ರಹಿಸುವುದಾದರೆ ಮಾನವನ ತಿಳಿವಿಗೆ ಆಗೋಚರವಾದ ಪರಾತ್ಪರ ಶಕ್ತಿ ಯೊಂದಿರುವುದೆಂದು ನೀಗ್ರೊ ಜನರೂ ನಂಬಿ ಪೂಜಿಸುತ್ತಾರೆ; ಆ ಶಕ್ತಿಗೆ ಭೀತರೂ ಆಗಿದ್ದಾರೆ. ಮಾನವದೇಹವು ನಶಿಸಿ ಹೋದರೂ, ವ್ಯಕ್ತಿತ್ವವು ನಶಿಸಿಹೋಗುವುದಿಲ್ಲ ಎಂಬ ಮಸಕುಭಾವನೆ ಅವರಿಗೂ ಇದೆ. ನೀತಿಯೇ ಎಲ್ಲ ಧರ್ಮದ ತಳಹದಿ ಎಂದು ನಾವು ಒಪ್ಪಿದರೆ, ನೀಗ್ರೋ ಜನರು ನೀತಿಯುತರಾದ್ದರಿಂದ ಧರ್ಮಜೀವಿಗಳೆಂದೂ ಹೇಳಬಹುದು. ಸತ್ಯ ಅಸತ್ಯದ ಅರಿವು ಅವರಿಗೆ ಸಂಪೂರ್ಣ ಇದೆ. ನೀಗ್ರೊ ಜನರು ತಮ್ಮ ಅನಾಗರಿಕ ಜೀವನದಲ್ಲಿ ಸತ್ಯಕ್ಕೆ ಕೊಟ್ಟಿರುವ ಬೆಲೆಯನ್ನು ಯೂರೋಪಿಯನರಾಗಲಿ ನಾವಾಗಲಿ ಕೊಟ್ಟಿದ್ದೇವೆಂದು ನಾನು ಧೈರ್ಯವಾಗಿ ಹೇಳಲಾರೆ. ಅವರಲ್ಲಿ ದೇವಸ್ಥಾನಗಳಿಲ್ಲ. ಇತರ ಜನಾಂಗಗಳಂತೆ ಅವರಲ್ಲಿಯೂ ಅನೇಕ ಮೂಢನಂಬಿಕೆಗಳಿವೆ.

ದೇಹಶಕ್ತಿಯಲ್ಲಿ ಇತರ ಯಾವ ಜನಾಂಗಕ್ಕೂ ಕಡಮೆಯಿಲ್ಲದ ಈ ಜನರು, ಯೂರೋಪಿಯನರ ಒಂದು ಮಗುವನ್ನು ನೋಡಿ ಹೆದರುತ್ತಾರೆಂದು ಕೇಳಿ ನೀವು ಆಶ್ಚರ್ಯಪಡಬಹುದು. ಯಾರಾದರೂ ಒಂದು ಪಿಸ್ತೂಲನ್ನು ತೋರಿಸಿದರೆ ಸಾಕು, ನೀಗ್ರೊ ಮನುಷ್ಯನು ಕಾಲಿಗೆ ಬುದ್ಧಿ ಹೇಳುತ್ತಾನೆ; ಇಲ್ಲವೆ ಸ್ತಂಭೀಭೂತನಾಗುತ್ತಾನೆ. ಇದಕ್ಕೆ ಕಾರಣವಿಷ್ಟೆ. ತಮ್ಮಷ್ಟು ಜನಬಾಹುಳ್ಯವುಳ್ಳ ಶಕ್ತಿಯುತ ಜನಾಂಗವನ್ನು ಅತ್ಯಲ್ಪ ಸಂಖ್ಯೆಯ ಯೂರೋಪಿಯನರು ಆಳಲು ಸಮರ್ಥರಿರಬೇಕಾದರೆ ಅವರಲ್ಲಿ ಏನೋ ದೈವ ಶಕ್ತಿ ಇದೆ ಎಂಬ ಭಾವನೆಯು ನಿಗ್ರೋ ಜನರಲ್ಲಿ ಬೇರೂರಿದೆ. ಭರ್ಜಿ ಬಿಲ್ಲು ಬಾಣಗಳ ಉಪಯೋಗದಲ್ಲಿ ನೀಗ್ರೊ ಜನರು ಬಹಳ ನಿಪುಣರು. ಆದರೆ ಈಗ ಅವುಗಳೆಲ್ಲ ಅವರ ಕೈತಪ್ಪಿವೆ. ಬಂದೂಕನ್ನೂ ನೋಡಿಯೇ ಇಲ್ಲ. ಯಾವಾಗಲೂ ಉಪಯೋಗಿಸಿಲ್ಲ. ಒಂದು ಕಡ್ಡಿಯನ್ನು ಸಹ ಗೀಚದೆ, ಒಂದು ಬೆರಳನ್ನು ಅಲುಗಾಡಿಸಿ, ಬಂದೂಕಿನ ನಳಿಗೆಯಿಂದ ಒಂದು ಶಬ್ದ, ಒಂದು ಬೆಳಕು, ಒಂದು ಗುಂಡಿನ ಏಟು ಬರುವಂತೆ ಮಾಡಿ, ಕ್ಷಣಮಾತ್ರದಲ್ಲಿ ಮನುಷ್ಯನನ್ನೆ ಕೊಲ್ಲುವ ಶಕ್ತಿಯು ನಿಜವಾಗಿಯೂ

ನೀಗ್ರೊ ಜನರ ತಿಳಿವಿನ ಮಟ್ಟವನ್ನು ಮೀರಿದ್ದು. ಆದ್ದರಿಂದ ಬಂದೂಕು ಹಿಡಿದ ಯಾರನ್ನು ನೋಡಿದರೂ ಅವರಿಗೆ ಜೀವಭಯ. ಅನೇಕ ನಿಸ್ಸಹಾಯಕ ನಿರಪರಾಧಿಗಳ ಪ್ರಾಣಗಳನ್ನು ಈ ಗಂಡುಗಳು ಆಹುತಿ ತೆಗೆದುಕೊಂಡಿರುವುದನ್ನು ಪ್ರತಿ ನೀಗ್ರೋ ಮನುಷ್ಯನೂ ಆತನ ಪೂರ್ವಿಕರೂ ಕಣ್ಣಾರೆ ಕಂಡಿದ್ದಾರೆ. ಅದು ಹೇಗೆಂಬುದು ಈಗಲೂ ಅನೇಕರಿಗೆ ತಿಳಿಯದು.

ಈಗೀಗ ನೀಗ್ರೊ ಜನರಲ್ಲಿಯೂ ನಾಗರಿಕತೆ ಹರಡುತ್ತಿದೆ. ಕ್ರೈಸ್ತಮತ ಪ್ರಚಾರಕರು ತಮಗೆ ತಿಳಿದಂತೆ ಕ್ರೈಸ್ತ ಸಂದೇಶವನ್ನು ಸಾರಿ, ಪಾಠಶಾಲೆ ತೆರೆದು, ಓದುಬರಹ ಕಲಿಸುತ್ತಿದ್ದಾರೆ. ಇದುವರೆಗೆ ನೀಗ್ರೊ ಜನರು ಅನಕ್ಷರಸ್ಥರೂ ಅನಾಗರಿಕರೂ ಆಗಿದ್ದರೂ ಅವರಲ್ಲಿ ದುರಾಚಾರಗಳಿರಲಿಲ್ಲ; ಆದರೆ ನಾಗರಿಕತೆಯ ಸೋಂಕು ತಗಲಿದ ಯಾವ ನೀಗ್ರೊ ಮನುಷ್ಯನೂ ಕುಡಿತದ ಬಲೆಯಿಂದ ತಪ್ಪಿಸಿಕೊಂಡಿಲ್ಲ. ಮದ್ಯಪಾನದ ಅಮಲಿನಲ್ಲಿ ತನ್ನ ಪಾಶವೀಬಲದಿಂದ ಹುಚ್ಚನಾಗಿ ಮಾಡಬಾರದ ದುಷ್ಕೃತ್ಯಗಳನ್ನೆಲ್ಲಾ ಮಾಡುತ್ತಾನೆ. ನಾಗರಿಕತೆ ಹರಡಿದಂತೆ ನಮ್ಮ ಭೋಗವಸ್ತುಗಳ ಅವಶ್ಯಕತೆಯೂ ಹೆಚ್ಚುವುದು ಖಂಡಿತ. ನೀಗ್ರೊ ಜನರ ಆಶೆಯನ್ನು ಹೆಚ್ಚಿಸುವ ಉದ್ದೇಶದಿಂದಲೂ, ಶ್ರಮ ಜೀವನದ ಬೆಲೆಯನ್ನು ತಿಳಿಸುವುದಕ್ಕೂ ಆತನ ಮೇಲೆ ತಲೆಗಂದಾಯ, ಮನೆ ಕಂದಾಯಗಳನ್ನು ವಿಧಿಸಿದ್ದಾರೆ. ಈ ತಲೆಗಂದಾಯವಿಲ್ಲದೆ ಇದ್ದರೆ ನೀಗ್ರೊ ಜನರು ತಮ್ಮ ವ್ಯವಸಾಯವನ್ನು ಬಿಟ್ಟು ನೂರಾರು ಅಡಿ ಆಳದ ಗಣಿಗಳಲ್ಲಿ ಕೆಲಸ ಮಾಡಲು ಬರುತ್ತಿರಲಿಲ್ಲ. ನೀಗ್ರೊ ಜನರ ಕೂಲಿಗೆಲಸ ಇಲ್ಲದೆ ಹೋದರೆ ಬಂಗಾರವೂ, ವಜ್ರಗಳು ಭೂಗರ್ಭದಲ್ಲಿಯೇ ಉಳಿಯಬೇಕಿತ್ತು. ಅದರಂತೆ ಈ ತೆರಿಗೆ ಇಲ್ಲದಿದ್ದರೆ ಯೂರೋಪಿಯನರಿಗೆ ಸೇವಕರು ದೊರೆಯುವುದೂ ಕಷ್ಟವಿತ್ತು. ಇದರ ಪರಿಣಾಮವಾಗಿ ಇತರ ರೋಗಗಳಲ್ಲದೆ ಸಾವಿರಾರು ನೀಗ್ರೊ ಜನರು ಒಂದು ಬಗೆಯ ಕ್ರಯರೋಗಕ್ಕೆ ತುತ್ತಾಗಿದ್ದಾರೆ. ಈ ಕಾಯಿಲೆ ಬಂದರೆ ಬದುಕುವುದೇ ಕಷ್ಟ. ಸಂಸಾರವನ್ನು ಬಿಟ್ಟು ಬಂದು ದೂರದ ಗಣಿಗಳಲ್ಲಿ ಕೆಲಸ ಮಾಡುವ ಜನರಲ್ಲಿ ಎಷ್ಟರಮಟ್ಟಿನ ಜಿತೇಂದ್ರಿಯತ್ವ ಇರುತ್ತದೆಂಬುದನ್ನು ಊಹಿಸಬಹುದು. ಬಹು ಬೇಗ ದೇಹಜಾಡ್ಯಗಳಿಗೆ ಬಲಿಯಾಗುತ್ತಾರೆ. ದಕ್ಷಿಣ ಆಫ್ರಿಕದ ಯೂರೋಪಿಯನರಿಗೆ ಈ ಕಠಿಣ ಸಮಸ್ಯೆ ತಿಳಿದಿಲ್ಲ ಎಂದಲ್ಲ. ನೀಗ್ರೊ ಜನಾಂಗದ ಮೇಲೆ ನಾಗರಿಕತೆಯು ಒಟ್ಟಿನಲ್ಲಿ ಒಳ್ಳೆಯ ಪರಿಣಾಮವನ್ನು ಮಾಡಿಲ್ಲವೆಂದು ಒಪ್ಪುತ್ತಾರೆ. ದುಷ್ಪರಿಣಾಮಗಳು ಎಲ್ಲಿ ನೋಡಿದರೂ ಕಣ್ಣಿಗೆ ಕಟ್ಟಿದಂತಿವೆ.

ಇಂತಹ ಸರಳ ಜೀವನದ, ನಿರಾಡಂಬರದ ಜನರಿರುವ ದೇಶದಲ್ಲಿ ನಾಲ್ಕು ನೂರು ವರ್ಷಗಳ ಹಿಂದೆ ಮೊದಲು ವಲಸೆ ಹೋದವರು ಡಚ್ಚರು. ಡಚ್ಚರಿಗೆ ಗುಲಾಮರಿದ್ದರು. ಜಾವಾದಿಂದ ಕೆಲವು ಡಚ್ಚರು ತಮ್ಮ ಮಲಯಾ ಗುಲಾಮರೊಂದಿಗೆ ಕೇಪ್ ಕಾಲೋನಿಗೆ ಬಂದರು. ಈ ಮಲಯಾ ದೇಶದ ಜನರು ಮುಸಲ್ಮಾನರು. ಕೆಲವರು ಡಚ್ಚರ ಸಂಬಂಧವಿಂದ ಜನಿಸಿದವರು; ಅವರಲ್ಲಿ ಡಚ್ಚರ ಗುಣಗಳು ಅನುವಂಶೀಯವಾಗಿ ಬಂದಿವೆ. ದಕ್ಷಿಣ ಆಫ್ರಿಕದ ಅನೇಕ ಕಡೆಗಳಲ್ಲಿ ಇವರು ನೆಲಸಿದ್ದರೂ ಕೇಪ್‌ಟೌನದಲ್ಲಿ ಇವರ ಸಂಖ್ಯೆ ಹೆಚ್ಚು. ಕೆಲವರು ಯೂರೋಪಿಯನರ ಚಾಕರರಾಗಿದ್ದಾರೆ. ಮತ್ತೆ

ಕೆಲವರು ಸ್ವತಂತ್ರರಾಗಿ ಸ್ವಾವಲಂಬಿಗಳಾಗಿದ್ದಾರೆ. ಮಲಯಾ ಹೆಂಗಸರು ಕಷ್ಟಸಹಿಷ್ಣುಗಳು ಮತ್ತು ಅತಿಚತುರರು. ಶುಚಿಯಾದ ಜೀವನ. ಬಟ್ಟೆಯನ್ನು ಒಗೆಯುವುದರಲ್ಲಿ, ಹೊಲಿಯುವುದರಲ್ಲಿ ಅತಿ ನಿಪುಣರು. ಗಂಡಸರು ಸಣ್ಣ ಪುಟ್ಟ ವ್ಯಾಪಾರ, ಗಾಡಿ ಹೊಡೆಯುವುದು ಮುಂತಾದ ಕಸಬುಗಳನ್ನು ಮಾಡುತ್ತಾರೆ. ಕೆಲವರು ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿದ್ದಾರೆ. ಕೇಪ್ ಟೌನಿನ ಡಾಕ್ಟರ್ ಅಬ್ದುಲ್ ರಹಮಾನ್ ಎಂಬವರೊಬ್ಬರು ಕೇಪ್‌ಟೌನಿನ ಹಳೆಯ ನ್ಯಾಯವಿದಾಯಕ ಸಭೆಯ ಸದಸ್ಯರಾಗಿದ್ದರು. ಹೊಸ ರಾಜ್ಯಾಂಗಪದ್ಧತಿಯಂತೆ ಈಗ ಅವರಿಗೆ ಪಾರ್ಲಿಮೆಂಟ್ ಸದಸ್ಯತ್ವದ ಹಕ್ಕು ಹೋಗಿದೆ.

ಡಚ್ಚರ ವಿಷಯ ಹೇಳುತ್ತ ಮಲಯಾ ಜನರ ವಿಷಯ ಹೇಳಿದೆ, ಡಚ್ಚರಾದರೊ ಒಳ್ಳೆಯ ಯೋಧರೂ, ವ್ಯವಸಾಯಗಾರರೂ ಆಗಿದ್ದಾರೆ. ದಕ್ಷಿಣ ಆಫ್ರಿಕಕ್ಕೆ ಬಂದಾಗ ಸುತ್ತಮುತ್ತಲಿನ ದೇಶವು ವ್ಯವಸಾಯಕ್ಕೆ ಅತ್ಯುತ್ತಮವಾಧ ಭೂಮಿ ಎಂದೂ ದೇಶೀಯರು ವರ್ಷದಲ್ಲಿ ಕೆಲವು ತಿಂಗಳು ಮಾತ್ರ ಕೆಲಸ ಮಾಡಿ ಸುಲಭದಲ್ಲಿ ಬೆಳೆ ತೆಗೆಯುತ್ತಿರುವರೆಂದೂ ನೋಡಿದರು. ತಮ್ಮಲ್ಲಿ ಬಂದೂಕು ಇತ್ತು ; ಯುಕ್ತಿಯೂ ಇತ್ತು. ಕಾಡುಮೃಗಗಳನ್ನು ಪಳಗಿಸಿದಂತೆ ಮನುಷ್ಯರನ್ನು ಪಳಗಿಸುವುದನ್ನೂ ಅರಿತಿದ್ದರು. ಅದು ತಮ್ಮ ಧರ್ಮಕ್ಕೆ ವಿರೋಧವಲ್ಲವೆಂದು ಅವರ ಭಾವನೆ. ದೇಶೀಯರ ಶ್ರಮದಿಂದ ಕೆಲಸವನ್ನು ಏಕೆ ತೆಗೆದುಕೊಳ್ಳಬಾರದು? ಆದ್ದರಿಂದ ನ್ಯಾಯಾನ್ಯಾಯದ ವಿಮರ್ಶೆಯ ಗೋಜಿಗೆ ಹೋಗದೆ ದೇಶೀಯರ ಜೀತದಿಂದ ಡಚ್ಚರು ವ್ಯವಸಾಯವನ್ನು ಆರಂಭಿಸಿದರು.

ಡಚ್ಚರಂತೆ ಇಂಗ್ಲೀಷರೂ ವಲಸೆ ರಾಷ್ಟ್ರಗಳಿಗಾಗಿ ಅಲೆಯುತ್ತಿದ್ದವರು ಅಲ್ಲಿಗೇ ಬಂದರು. ಇಂಗ್ಲೀಷರೂ ಡಚ್ಚರೂ ಒಂದೇ ಬುಡಕಟ್ಟಿನವರು. ಇಬ್ಬರ ಶೀಲ ಸ್ವಭಾವ ಆಶೋತ್ತರಗಳು ಒಂದೇ. ಒಂದೇ ಗರಡಿಯ ವಸ್ತಾದಿಗಳು ಸಂಧಿಸಿದರೆ ಕತ್ತಿ ಮಸೆತವೇ ಖಂಡಿತ. ಆದ್ದರಿಂದ ತಮ್ಮ ಸ್ವಾರ್ಥಸಾಧನೆಯಲ್ಲಿ ನೀಗ್ರೊ ಜನರನ್ನು ವಶಪಡಿಸಿಕೊಳ್ಳುವುದರಲ್ಲಿ–ಒಬ್ಬರಿಗೊಬ್ಬರಿಗೆ ಘರ್ಷಣೆ ಪ್ರಾರಂಭವಾಯಿತು ಮೊದಲು ಸಣ್ಣ ವ್ಯಾಜ್ಯಗಳಿಂದ ಮೊದಲಾಗಿ ಅನಂತರ ಯುದ್ಧಗಳೇ ಆಗಬೇಕಾಯಿತು. ಮಜೂಬಾ ಬೆಟ್ಟದ ಹತ್ತಿರ ಇಂಗ್ಲಿಷರಿಗೆ ಸೋಲಾಯಿತು. ಮಜೂಬಾ ಯುದ್ಧದ ಗಾಯವು ಮಾಯದೆ, ೧೮೯೯ ರಿಂದ ೧೯೦೨ ರ ವರೆಗೆ ನಡೆದ ಬೋಅರ್ ಯುದ್ದದಲ್ಲಿ ಪರ್ಯವಸಾನ ಹೊಂದಿತು. ಜನರಲ್ ಕ್ರಾಂಜಿಯು ಶರಣಾಗತನಾದಾಗ ಮಜೂಬಾಕ್ಕೆ ಪ್ರತೀಕಾರವಾಯಿತು ಎಂದು ಲಾರ್ಡ ರಾಬರ್ಟ್ಸ್‌ನು ವಿಕ್ಟೋರಿಯಾ ಮಹಾರಾಣಿಗೆ ಕೇಬಲ್ ಮಾಡಿದನು. ಬೋಅರ್ ಯುದ್ಧಕ್ಕೆ ಮುಂಚೆ ಈ ಎರಡು ಜನಾಂಗಗಳಿಗೆ ಘರ್ಷಣೆಯಾದ ಸಮಯದಲ್ಲಿ, ಅನೇಕ ಡಚ್ಚರು ಬ್ರಿಟಿಷರ ಅಧಿಕಾರವು ಹೆಸರಿಗೆ ಕೂಡ ಇರಬಾರದೆಂದು ದಕ್ಷಿಣ ಆಫ್ರಿಕದ ಒಳದೇಶಕ್ಕೆ ವಲಸೆ ಹೋದರು. ಟ್ರಾನ್ಸವಾಲ್ ಮತ್ತು ಆರೇಂಜ್ ಫ್ರೀ ಸ್ಟೇಟ್ ಪ್ರಾಂತಗಳಿಗೆ ಇದೇ ಮೂಲ.

ಈ ಡಚ್ಚರಿಗೆ ದಕ್ಷಿಣ ಆಫ್ರಿಕದಲ್ಲಿ ಬೋಅರ್ ಗಳೆಂದು ಹೆಸರಾಯಿತು. ಮಗು ತಾಯಿಯ ಮಡಿಲನ್ನು ತಬ್ಬುವಂತೆ ಈಗಲೂ ಅವರು ತಮ್ಮ ಭಾಷೆಯನ್ನು ಮಾತ್ರ

ಬಿಟ್ಟಿಲ್ಲ. ತಮ್ಮ ಭಾಷೆಗೂ ಸ್ವಾತಂತ್ರ್ಯಕ್ಕೂ ನಿಕಟ ಬಾಂಧ್ಯವಿದೆ ಎಂಬುದನ್ನು ಅವರು ಮನಗಂಡಿದ್ದಾರೆ. ಅನೇಕ ತೊಂದರೆಗಳ ಮಧ್ಯೆ ತಮ್ಮ ತಾಯ್ನುಡಿಯನ್ನು ಮಾತ್ರ ಕಾಪಾಡಿಕೊಂಡು ಬಂದಿದ್ದಾರೆ. ಬೋಅರ್‌ಗಳ ವೈಶಿಷ್ಟ್ಯಕ್ಕನುಗುಣವಾಗಿ ಭಾಷೆಯೂ ಸ್ವಲ್ಪ ರೂಪಾಂತರಹೊಂದಿತು. ಹಾಲೆಂಡಿನೊಡನೆ ವ್ಯವಹಾರ ದೂರವಾಗುತ್ತ ಬಂದಂತೆ–ಸಂಸ್ಕೃತದಿಂದ ಪ್ರಾಕೃತ ಹುಟ್ಟಿದ ಹಾಗೆ–ಡಚ್ಚರ ಭಾಷೆಯೂ ಮಾರ್ಪಾಟು ಹೊಂದಿತು. ತಮ್ಮ ಮಕ್ಕಳಿಗೆ ಹೆಚ್ಚು ಶ್ರಮವಾಗದಿರಲೆಂದು ಆ ಭಾಷೆಗೆ ಒಂದು ರೂಪ ಕೊಟ್ಟು ಅದನ್ನು 'ತಾಲ್'ಎಂದು ಕರೆದರು. ಅವರ ಪುಸ್ತಕಗಳು ಅಚ್ಚಾಗುವುದು 'ತಾಲ್' ಭಾಷೆಯಲ್ಲಿ, ಮಕ್ಕಳ ವಿದ್ಯಾಭ್ಯಾಸ ಅದೇ ಭಾಷೆಯಲ್ಲಿ, ಯೂನಿಯನ್ ಪಾರ್ಲಿಮೆಂಟಿನಲ್ಲಿ ಮಾತನಾಡುವುದು ಸಹ ಅದೇ ಭಾಷೆಯಲ್ಲಿ. ಯೂನಿಯನ್ ಸರ್ಕಾರ ಏರ್ಪಟ್ಟಮೇಲೆ ದಕ್ಷಿಣ ಆಫ್ರಿಕದಲ್ಲೆಲ್ಲ ಇಂಗ್ಲಿಷ್ ಮತ್ತು ತಾಲ್ ಭಾಷೆಗಳೆರಡಕ್ಕೂ ಸಮಾನ ಸ್ಥಾನವಿದೆ. ಸರ್ಕಾರದ ಗೆಜೆಟ್ ಮತ್ತು ಪಾರ್ಲಿಮೆಂಟಿನ ಎಲ್ಲ ವರದಿಗಳೂ ಎರಡೂ ಭಾಷೆಗಳಲ್ಲಿ ಅಚ್ಚಾಗುತ್ತಿವೆ.

ಬೋಅರ್ ಜನರು ಸರಳಜೀವಿಗಳು, ಮುಚ್ಚುಮರೆಯಿಲ್ಲದೆ ಮಾತನಾಡುವವರು, ಧರ್ಮಶ್ರದ್ಧಾಳುಗಳು. ದೊಡ್ಡ ದೊಡ್ಡ ವ್ಯವಸಾಯ ಹಿಡುವಳಿಗಳ ಮಧ್ಯೆ ವಾಸಮಾಡುತ್ತಾರೆ. ಈ ಹಿಡುವಳಿಗಳ ವಿಸ್ತಾರವನ್ನು ನಾವು ಊಹಿಸುವುದು ಕಷ್ಟ. ನಮ್ಮಲ್ಲಿ ಹಿಡುವಳಿ ಎಂದರೆ ಒಂದು ಅಥವಾ ಎರಡು ಎಕರೆ ಅಥವಾ ಇನ್ನೂ ಕಡಿಮೆ. ದಕ್ಷಿಣ ಆಫ್ರಿಕದಲ್ಲಿ ಒಬ್ಬೊಬ್ಬ ಹಿಡುವಳಿದಾರನಿಗೆ ಸಾವಿರಾರು ಎಕರೆ ಭೂಮಿ. ಒಂದೇ ಬಾರಿ ಎಲ್ಲ ಭೂಮಿಯನ್ನೂ ಸಾಗುವಳಿ ಮಾಡಬೇಕೆಂಬ ಆಶೆಯಿಲ್ಲ. ಯಾರಾದರೂ ಕೇಳಿದರೆ " ಇವತ್ತು ಬೀಳು ಇದ್ದರೆ, ನಾಳೆ ನಮ್ಮ ಮಕ್ಕಳು ಸಾಗುವಳಿ ಮಾಡುತ್ತಾರೆ" ಎಂದು ಹೇಳುತ್ತಾನೆ.

ಪ್ರತಿಯೊಬ್ಬ ಬೋಅರನೂ ಒಳ್ಳೆಯ ಯೋಧ. ತಮ್ಮತಮ್ಮಲ್ಲಿ ಎಷ್ಟೇ ಅಂತಃಕಲಹಗಳಿದ್ದರೂ, ತಮ್ಮ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗ ಎಲ್ಲರೂ ಒಬ್ಬನಂತೆ ನಿಂತು ಯುದ್ಧ ಸನ್ನದ್ಧರಾಗಿ ಕಾದುತ್ತಾರೆ. ಯುದ್ಧ ಮಾಡುವುದು ಆ ಜನಾಂಗದ ಸ್ವಾಭಾವಿಕ ಗುಣವಾದ್ದರಿಂದ ಅವರಿಗೆ ಹೆಚ್ಚು ತರಪೇತು ಬೇಕಾಗಿಲ್ಲ. ಜನರಲ್ ಸ್ಮಟ್ಸ್, ಜನರಲ್ ಡಿವೆಟ್, ಜನರಲ್ ಹರ್ಟ್‌ಜಾಗ್ ಇವರು ದೊಡ್ಡ ನ್ಯಾಯವಾದಿಗಳೂ ವ್ಯವಸಾಯಗಾರರೂ ಆಗಿರುವಂತೆ ನುರಿತ ಯೋಧರೂ ಆಗಿದ್ದಾರೆ. ಜನರಲ್ ಬೋಥಾ ಅವರ ಹಿಡುವಳಿಯ ವಿಸ್ತೀರ್ಣ ೯,೦೦೦ ಎಕರೆ. ವ್ಯವಸಾಯದ ಗುಟ್ಟೆಲ್ಲ ಆತನಿಗೆ ಗೊತ್ತು. ಶಾಂತಿಸಂಧಾನಕ್ಕೆಂದು ಯೂರೋಪಿಗೆ ಹೋದಾಗ ಯೋರೋಪಿನಲ್ಲಿ ಈತನಿಗಿಂತ ಹೆಚ್ಚಿನ ಕುರಿ ನಿಪುಣರು ಯಾರೂ ಇರಲಿಲ್ಲವಂತೆ. ಪ್ರೆಸಿಡೆಂಟ್ ಕ್ರೂಗರ್ ತರುವಾಯ ಜನರಲ್ ಬೋಥಾ ಆಡಳಿತ ಸೂತ್ರ ವಹಿಸಿಕೊಂಡನು. ಆತನಿಗೆ ಇಂಗ್ಲೀಷ್ ಪರಿಚಯ ಬಹಳ ಚೆನ್ನಾಗಿತ್ತು; ಆದಾಗ್ಯೂ ಇಂಗ್ಲೆಂಡಿನಲ್ಲಿ ರಾಜರನ್ನೂ ಮಂತ್ರಿಗಳನ್ನೂ ನೋಡಿದಾಗ ತನ್ನ ಮಾತೃಭಾಷೆಯಲ್ಲಿಯೇ ಮಾತನಾಡಿದನು. ಇದು ಸರಿಲ್ಲವೆಂದು ಹೇಳುವವರಾದರೂ ಯಾರು ? ತನಗೂ ಇಂಗ್ಲಿಷ್ ಬರುತ್ತದೆಂದು ತೋರಿಸಿಕೊಳ್ಳಲು

ಹೋಗಿ ತಪ್ಪು ಮಾಡುವ ಅವಕಾಶವನ್ನೇಕೆ ಕೊಡಬೇಕು ? ಇಲ್ಲಿ ಯಾವ ಶಬ್ದವನ್ನು ಹಾಕಲಿ ಎಂದು ಹುಡುಕುವುದರಲ್ಲಿ ಯೋಚನಾಲಹರಿಯನ್ನೇಕೆ ಕೆಡಿಸಬೇಕು? ತಿಳಿದೋ ತಿಳಿಯದೆಯೋ ಇಂಗ್ಲಿಷ್ ಮಂತ್ರಿಗಳು ತನಗೆ ತಿಳಿಯದ ಇಂಗ್ಲಿಷ್ ಭಾಷಾಸರಣಿಯನ್ನು ಉಪಯೋಗಿಸಬಹುದು, ಅವರು ಹೇಳಿದ್ದು ತನಗೆ ಅರ್ಥವಾಗದಿರಬಹುದು; ತಪ್ಪು ಉತ್ತರ ಕೊಟ್ಟು ಆ ಮೂಲಕ ತಾನು ಬಂದ ಕೆಲಸ ಕೆಡಬಹುದು. ಆ ತಪ್ಪಿಗೆ ಅವಕಾಶ ಏಕೆ ಕೊಡಬೇಕು?

ಗಂಡಸರಂತೆ ಬೋಅರ್ ಹೆಂಗಸರೂ ಧೈರ್ಯಶಾಲಿಗಳು, ಸರಳ ಜೀವಿಗಳು. ಬೊಅರ್ ಯುದ್ಧದಲ್ಲಿ ಬೋಅರ್‌ಗಳು ರಕ್ತ ಚೆಲ್ಲಿದ್ದರೆ, ಈ ಆತ್ಮಯಜ್ಞಕ್ಕೆ ಪ್ರೇರಕರು ಬೋಅರ್ ಹೆಂಗಸರು; ಮತ್ತು ಅವರ ಧೈರ್ಯ. ವೈಧವ್ಯ ಪ್ರಾಪ್ತಿಯಾಗುವುದೆಂದು ಅವರು ಎದೆಗೆಡಲಿಲ್ಲ; ಪರಿಣಾಮದ ಯೋಜನೆಯಲ್ಲಿ ಕಾಲ ಕಳೆಯಲು ಒಡಂಬಡಲಿಲ್ಲ.

ಬೋಅರ್‌ಗಳು ಧರ್ಮಶ್ರದ್ಧಾಳುಗಳಾದ ಕ್ರೈಸ್ತರೆಂದು ಹೇಳಿದ್ದೇನೆ. ಆದರೆ ಬೈಬಲ್ಲಿನ ಹೊಸ ಒಡಂಬಡಿಕೆ (New Testament) ಅವರಿಗೆ ಒಪ್ಪಿಗೆ ಇರಲಿಲ್ಲ. ವಾಸ್ತವವಾಗಿ ನೋಡಿದರೆ ಯೂರೋಪ್ ಖಂಡದಲ್ಲಿ ಯಾರಿಗೂ ಅದರಲ್ಲಿ ನಂಬಿಕೆ ಇಲ್ಲ. ಶಾಂತಿಯೇ ಕ್ರೈಸ್ತನ ಧರ್ಮವೆಂದು ತಿಳಿದು ಅನುಷ್ಠಾನಮಾಡುವವರು ಅತಿ ವಿರಳರಾದರೂ, ಯೂರೋಪಿನಲ್ಲಿ ಬೈಬಲಿಗೆ ಗೌರವವಿದೆಯೆಂದು ಹೇಳುತ್ತಿದ್ದಾರೆ. ಬೋಅರ್ ಜನರು ಹೊಸ ಬೈಬಲಿನ ಹೆಸರು ಮಾತ್ರ ಕೇಳಬಲ್ಲರು. ಹಳೆಯ ಬೈಬಲನ್ನು ಭಯಭಕ್ತಿಯಿಂದ ಓದಿ ಅದರಲ್ಲಿನ ಯುದ್ಧ ವರ್ಣನೆ ಎಲ್ಲವೂ ಅವರ ಹೃದ್ಗತವಾಗಿವೆ. 'ಮುಯ್ಯಿಗೆ ಮುಯ್ಯಿ' ಎಂಬ ಮೋಮೋಸೆಸ್‌ನ ತತ್ತ್ವವನ್ನು ಸಂಪೂರ್ಣವಾಗಿ ಒಪ್ಪಿ, ಆಚರಣೆಗೆ ಸಹ ತಂದಿರುತ್ತಾರೆ.

ತಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಕಷ್ಟನಷ್ಟಗಳನ್ನು ಅನುಭವಿಸಬೇಕಾದ್ದು ತಮ್ಮ ಧಾರ್ಮಿಕ ಕರ್ತವ್ಯವೆಂದು ಬೋಅರ್ ಹೆಂಗಸರು ತಿಳಿದಿದ್ದರು. ಅದರಿಂದಲೇ ತಾಳ್ಮೆಯಿಂದಲೂ ಸಂತೋಷದಿಂದಲೂ ಎಲ್ಲ ಕಷ್ಟಗಳನ್ನೂ ಅನುಭವಿಸಿದರು. ಅವರ ದೃಢಪ್ರತಿಜ್ಞೆಯನ್ನು ಮುರಿಯಲು ಲಾರ್ಡ್‌ಕಿಚನರ್ ಮಾಡಬಾರದ ಪ್ರಯತ್ನ ಮಾಡಿದನು. ಅವರನ್ನು ಪ್ರತ್ಯೇಕ ಸೆರೆ ಮನೆಗಳಲ್ಲಿಟ್ಟು ಹೇಳ ತೀರದ ಹಿಂಸೆ ಕೊಟ್ಟನು. ಹಸಿವು, ಮೈಯು ಕೊರೆವ ಚಳಿ, ಉರಿಬಿಸಿಲು, ಎಲ್ಲವನ್ನೂ ಸಹಿಸಿದರು. ಕೆಲವು ವೇಳೆ ಹೆಂಡ ಕುಡಿದು ಕಾಮವಾಸನೆಯಿಂದ ಉನ್ಮತ್ತರಾದ ಸೈನಿಕರನ್ನು ನಿಸ್ಸಹಾಯಕರಾದ ಹೆಂಗಸರ ಮೇಲೆ ಬಿಡುತ್ತಿದ್ದನು. ಆದರೂ ಬೊಅರ್ ಹೆಂಗಸರು ಮಣಿಯಲಿಲ್ಲ. ಕೊನೆಗೆ ಎಡ್ವರ್ಡ್ ದೊರೆ ಬೇಸರಗೊಂಡು ವ್ಯಥೆಪಟ್ಟು, ಈ ಯುದ್ಧನೀತಿಯನ್ನು ಒಪ್ಪಲು ತನಗೆ ಸಾಧ್ಯವಿಲ್ಲವೆಂದೂ, ಬೋಅರ್‌ಗಳನ್ನು ಜಯಿಸಲು ಅದೊಂದೇ ಮಾರ್ಗವಾದರೆ ಯುದ್ಧವನ್ನು ಮುಂದುವರಿಸುವುದಕ್ಕಿಂತ ಯಾವ ತರದ ಶಾಂತಿಯಾದರೂ ಮೇಲೆಂದು ತಿಳಿಸಿ, ಯುದ್ಧವನ್ನು ಜಾಗ್ರತೆ ಕೊನೆಗಾಣಿಸಬೇಕೆಂದು ಬರೆದನು.

ಈ ಆರ್ತರೋದನ ಇಂಗ್ಲೆಂಡಿಗೆ ಮುಟ್ಟಿದ ಕೂಡಲೆ ಇಂಗ್ಲಿಷ್ ಜನರಿಗೆ ಬಹಳ ವ್ಯಥೆಯಾಯಿತು. ಬೋಅರ್‌ಗಳ ಧೈರ್ಯವನ್ನು ಮೆಚ್ಚಿದರು. ಇಷ್ಟು ದೊಡ್ಡ ಸಾಮ್ರಾಜ್ಯವನ್ನು ಒಂದು ಸಣ್ಣ ಜನಾಂಗ ಯುದ್ಧದಲ್ಲಿ ಎದುರಿಸುತ್ತಿರುವುದು ತಮಗೆ ಅಗೌರವೆಂದು ಭಾವಿಸಿದ್ದರು. ಆದರೆ ಸೆರೆಮನೆಗಳಲ್ಲಿನ ಹೆಂಗಸರ ಗೋಳಿನ ಕರೆ ದಕ್ಷಿಣ ಆಫ್ರಿಕದ ಕೆಲವು ಉದಾರಹೃದಯರಾದ ಇಂಗ್ಲಿಷ್ ಜನರಿಂದ ತಿಳಿದ ಒಡನೆ ಇಂಗ್ಲೀಷರು ಬಹಳ ವ್ಯಸನಪಟ್ಟರು. ದಿವಂಗತ ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್ ಮನ್ನರು ಇಂಗ್ಲಿಷರ ಮನವರಿತು ಯುದ್ಧವನ್ನು ನಿಲ್ಲಿಸಲು ಪ್ರಯತ್ನಪಟ್ಟರು. ದಿವಂಗತ ಸ್ಟೆಡ್‌ರು, ಇಂಗ್ಲಿಷರಿಗೆ ಸೋಲಾಗಲೆಂದು ಬಹಿರಂಗವಾಗಿ ಪ್ರಾರ್ಥನೆ ನಡೆಸಿದರಲ್ಲದೆ, ಇತರರೂ ಆ ರೀತಿ ಪ್ರಾರ್ಥನೆ ಮಾಡಬೇಕೆಂದು ಸಾರಿದರು. ಇದು ನಿಜವಾಗಿಯೂ ಒಂದು ಆಶ್ಚರ್ಯಕರವಾದ ದೃಶ್ಯ, ಕಷ್ಟವನ್ನು ಧೈರ್ಯದಿಂದ ಸಹಿಸಿದರೆ ಕಲ್ಲಾದರೂ ಕರಗುತ್ತದೆ. ಆತ್ಮಯಜ್ಞದ ಅಥವಾ ತಪಸ್ಸಿನ ಶಕ್ತಿಯೇ ಅದು. ಇದೇ ಸತ್ಯಾಗ್ರಹದ ಗುಟ್ಟು.

ಕೊನೆಗೆ ವೆರೀನಿಗಿಂಗ್ ಎಂಬಲ್ಲಿ ಒಪ್ಪಂದವಾಯಿತು. ದಕ್ಷಿಣ ಆಫ್ರಿಕದ ನಾಲ್ಕು ಕಾಲೊನಿಗಳೂ ಒಂದು ರಾಜ್ಯಾಡಳಿತದಲ್ಲಿ ಸೇರಿದವು. ವೃತ್ತಪತ್ರಿಕೆ ಓದುವವರೆಲ್ಲರಿಗೂ ಈ ಒಪ್ಪಂದದ ವಿಷಯ ತಿಳಿದಿದ್ದರೂ, ಅನೇಕರಿಗೆ ಆ ಸಂಬಂಧವಾದ ಹೆಚ್ಚಿನ ವಿಷಯಗಳು ತಿಳಿಯದು, ಒಪ್ಪಂದವಾದ ಮರುಕ್ಷಣದಲ್ಲಿಯೇ ಯೂನಿಯನ್ ಸರಕಾರ ಏರ್ಪಡಲಿಲ್ಲ. ಪ್ರತಿಯೊಂದು ವಲಸೆ ರಾಷ್ಟ್ರಕ್ಕೂ ಒಂದೊಂದು ನ್ಯಾಯವಿಧಾಯಕ ಸಭೆಯಿತ್ತು. ಮಂತ್ರಿಮಂಡಲವು ನ್ಯಾಯವಿಧಾಯಕ ಸಭೆಗೆ ಪೂರ್ಣ ಜವಾಬ್ದಾರಿಯಾಗಿರಲಿಲ್ಲ. ಟ್ರಾನ್ಸವಾಲ್ ಮತ್ತು ಆರೇಂಜ ಫ್ರೀಸ್ಟೇಟ್ ಪ್ರಾಂತಗಳು ಕ್ರೌನ್ ಕಾಲೋನಿಗಳೆಂದು ಭಾವಿಸಲ್ಪಟ್ಟುವು. ಜನರಲ್ ಭೋಥಾ ಮತ್ತು ಸ್ಮಟ್ಸ ಇವರುಗಳಿಗೆ ಅಂತಹ ಅಧೀನ ಸ್ವಾತಂತ್ರ್ಯ ಬೇಕಿರಲಿಲ್ಲ. ಅವರು ನ್ಯಾಯವಿಧಾಯಕ ಸಭೆಯಿಂದ ಹೊರಗಾದರು. ಅಸಹಕಾರವನ್ನು ಪ್ರಾರಂಭಿಸಿದರು. ಸರಕಾರದೊಂದಿಗೆ ತಮಗೆ ಯಾವ ಸಂಬಂಧವೂ ಬೇಕಿಲ್ಲವೆಂದರು. ಜನರಲ್ ಬೋಥಾ ಸ್ವಪ್ರತಿಷ್ಠೆಗಾಗಿ ಆ ರೀತಿ ಮಾಡುತ್ತಿದ್ದಾನೆಂದೂ ಅವನ ಸಹಾಯವಿಲ್ಲದೆ ರಾಜ್ಯದ ಆಡಳಿತವನ್ನು ನಡಸಲಾಗುವುದೆಂದೂ ಲಾರ್ಡ್ ಮಿಲ್ನರ್ ಉಗ್ರಟೀಕೆ ಮಾಡಿದನು. ವರನಿಲ್ಲದೆ ಮದುವೆ ಮಾಡಲು ಲಾಡ ಮಿಲ್‌ನರ್ ನಿಶ್ಚಯಿಸಿದನು.

ಬೋಅರ್ ಗಳ ಧೈರ್ಯ, ಸ್ವಾತಂತ್ರ್ಯಪ್ರೇಮ, ತ್ಯಾಗ ಬುದ್ಧಿಗಳ ವಿಷಯವಾಗಿ ನಾನು ಬಹಳ ಹೊಗಳಿದ್ದೇನೆ. ಆದರೂ, ಅವರಲ್ಲೂ ಆ ವಿಷಮಕಾಲದಲ್ಲಿ ಭಿನ್ನಾಭಿಪ್ರಾಯಗಳಿದ್ದುವು; ಅಂಜುಬುರುಕರೂ ಕೆಲವರಿದ್ದರು. ಅಲ್ಪತೃಪ್ತರಾದ ಕೆಲವು ಸ್ವಾರ್ಥಿಗಳನ್ನು ಒಳಹಾಕಿಕೊಂಡು ಲಾರ್ಡ್ ಮಿಲ್ನರನು ಬೋಅರ್‌ಗಳದೇ ಒಂದು ಪಕ್ಷ ಕಟ್ಟಿದನು. ಅವರ ಸಹಾಯದಿಂದ ನ್ಯಾಯವಿಧಾಯಕ ಸಭೆಗಳನ್ನು ನಡೆಸಹುದೆಂದು ನಂಬಿದನು. ಮುಖ್ಯ ನಟನಿಲ್ಲದೆ ನಾಟಕ ಆಡುವುದು ಸಹ ಕಷ್ಟ. ರಾಜಕೀಯದಲ್ಲಿ ರಾಜಕಾರಣ ಮುಖಂಡನಿಲ್ಲದೆ ರಾಜ್ಯ ಸೂತ್ರಗಳನ್ನು ನಡೆಸಬಲ್ಲೆನೆಂದು ಆತ್ಮವಂಚನೆ

ಮಾಡಿಕೊಳ್ಳುವ ರಾಜತಂತ್ರಜ್ಞನು ಹುಚ್ಚನೇ ಸರಿ. ಲಾರ್ಡ್ ಮಿಲ್ನರನ ಅವಸ್ಥೆಯೂ ಹೀಗೆಯೇ ಅಯಿತು. ಹೊರಗೆ ಬಡಾಯಿ ಕೊಚ್ಚಿಕೊಳ್ಳುತ್ತಲಿದ್ದರೂ, ಜನರಲ್ ಬೋಥಾನ ಸಹಾಯವಿಲ್ಲದೆ ಟ್ರಾನ್ಸವಾಲ್ ಮತ್ತು ಫ್ರೀ ಸ್ಟೇಟ್‌ಗಳ ರಾಜ್ಯಭಾರ ನಡೆಸುವುದು ದುಸ್ಸಾಧ್ಯವಾಯಿತು. ಅನೇಕ ವೇಳೆ ಲಾರ್ಡ್ ಮಿಲ್ನರನು ತನ್ನ ತೋಟದಲ್ಲಿ ಯೋಚನಾಮಗ್ನನಾಗಿ, ಮನಃಕ್ಲೇಶಪಡುತ್ತಲಿದ್ದನು. ವೇರೀನಿಗಿಂಗ್ ಒಪ್ಪಂದದ ಪ್ರಕಾರ ಒಳ ಆಡಳಿತದಲ್ಲಿ ಕೂಡಲೆ ಬೋಅರ್‌ಗಳಿಗೆ ಸಂಪೂರ್ಣ ಸ್ವಾತಂತ್ರ್ಯ ದೊರೆಯಬೇಕೆಂದು ಜನರಲ್ ಬೋಥಾ ಸ್ಪಷ್ಟವಾಗಿ ಹೇಳಿದನು. ಅದಿಲ್ಲದಿದ್ದರೆ ತಾನು ಒಪ್ಪಂದಕ್ಕೆ ಸಹಿ ಹಾಕುತ್ತಿದ್ದಿಲ್ಲವೆಂದು ತಿಳಿಸಿದನು. ಲಾಡ ಕಿಚನರ್ ಅಂತಹ ಯಾವ ವಚನವನ್ನೂ ಕೊಟ್ಟಿರಲಿಲ್ಲವೆಂದು ಅದಕ್ಕೆ ಉತ್ತರ ಕೊಟ್ಟನು. ತಮ್ಮ ರಾಜನಿಷ್ಠೆಯನ್ನು ಕಾರ್ಯತಃ ವ್ಯಕ್ತಗೊಳಿಸಿದಂತೆಲ್ಲ ಬೋಅರ್ ಗಳಿಗೆ ಸ್ವರಾಜ್ಯವನ್ನು ಕೊಡುವುದಾಗಿ ತಿಳಿಸಿದನು. ಇವರಲ್ಲಿ ಯಾರ ಮಾತು ಸತ್ಯವೆಂಬುದನ್ನು ತೀರ್ಮಾನಿಸುವವರು ಯಾರು? ಪಂಚಾಯಿತಿಗೆ ಒಪ್ಪಿಸಿರೆಂದರೆ ಜನರಲ್ ಬೋಥಾ ಒಪ್ಪುವುದಾದರೂ ಹೇಗೆ? ಈ ಸಂದರ್ಭದಲ್ಲಿ ಸಮ್ರಾಟ ಸರಕಾರ ಕೊಟ್ಟ ತೀರ್ಪು ಬಹಳ ಅಭಿನಂದನೀಯವಾದುದು. ಬಲಹೀನಪಕ್ಷದ ಅಭಿಪ್ರಾಯವನ್ನು ಬಲಿಷ್ಠಪಕ್ಷ ಒಪ್ಪಬೇಕೆಂದು ಅವರು ತೀರ್ಮಾನಿಸಿದರು. ನ್ಯಾಯ ಮತ್ತು ಸತ್ಯದ ದೃಷ್ಟಿಯಲ್ಲಿ ಈ ತೀರ್ಮಾನವೇ ಸರಿ. ನಾನು ಏನೋ ಹೇಳಬೇಕೆಂದು ಇಷ್ಟಪಟ್ಟಿರಹುವುದು. ಆದರೆ ನನ್ನ ಭಾಷಣ ಅಥವಾ ಬರಹದಿಂದ ನನ್ನ ಶ್ರೋತೃ ಅಥವಾ ಪಾಠಕನು ಯಾವ ಅರ್ಥದಲ್ಲಿ ಗ್ರಹಿಸುತ್ತಾನೋ ಆ ಅರ್ಥವನ್ನೇ ನಾನು ಹೇಳಬಯಸಿದೆನೆಂದು ನಾನು ಒಪ್ಪಬೇಕು. ನಮ್ಮ ಜೀವನದಲ್ಲಿ ಈ ಚಿನ್ನದಂಥ ಮಾರ್ಗವನ್ನು ನಾವು ಅನೇಕವೇಳೆ ಬಿಟ್ಟುಬಿಡುತ್ತೇವೆ. ಆದ್ದರಿಂದಲೇ ಅನೇಕ ವ್ಯಾಜ್ಯಗಳು ಹುಟ್ಟುವುದು. ಅಸತ್ಯಕ್ಕಿಂತಲೂ ಕೀಳಾದ ಪದಾರ್ಥಗಳು ಹುಟ್ಟಿ ಸತ್ಯವನ್ನು ಮರೆಮಾಚುವುವು.

ಆದ್ದರಿಂದ ಸತ್ಯಕ್ಕೆ–ಇಲ್ಲಿ ಜನರಲ್ ಬೋಥಾ ಪಕ್ಷಕ್ಕೆ–ಜಯ ದೊರೆತ ಒಡನೆ ಆತನು ಪೂರ್ಣ ಸಹಕಾರವನ್ನು ನೀಡಿದನು. ಎಲ್ಲ ಕಾಲೋನಿಗಳೂ ಕೊನೆಯಲ್ಲಿ ಒಂದಾಗಿ ದಕ್ಷಿಣ ಆಫ್ರಿಕಕ್ಕೆ ಪೂರ್ಣ ಸ್ವರಾಜ್ಯ ಲಭಿಸಿತು. ಅದರ ಬಾವುಟ ಯೂನಿಯನ್ ಜಾಕ್ ಆಗಿದ್ದು, ಭೂಪಟದ ಮೇಲೆ ಅದು ಕೆಂಪು ಬಣ್ಣದಿಂದ ಕಂಡರೂ ದಕ್ಷಿಣ ಆಫ್ರಿಕ ಪೂರ್ಣ ಸ್ವತಂತ್ರ ರಾಷ್ಟ್ರ. ದಕ್ಷಿಣ ಆಫ್ರಿಕ ಸರಕಾರದ ಅನುಮತಿ ಇಲ್ಲದೆ ಒಂದು ಬಿಡಿ ಕಾಸನ್ನೂ ದಕ್ಷಿಣ ಆಫ್ರಿಕದಿಂದ ಬ್ರಿಟಿಷ್ ಸಮ್ರಾಟ ಸರಕಾರ ತೆಗೆದುಕೊಳ್ಳಲಾರದು. ಅಷ್ಟೇ ಅಲ್ಲ. ಯೂನಿಯನ್ ಜಾಕ್ ಬಾವುಟವನ್ನು ತೆಗೆದು, ಪೂರ್ಣ ಸ್ವತಂತ್ರರಾಷ್ಟ್ರವೆಂದು ಹೇಳಲು ಸಹ ದಕ್ಷಿಣ ಆಫ್ರಿಕಕ್ಕೆ ಅಧಿಕಾರವಿದೆ ಎಂದು ಬ್ರಿಟಿಷ್ ಸಚಿವರು ಹೇಳಿದ್ದಾರೆ. ಬೋಅರ್‌ಗಳು ಇದುವರೆಗೆ ಆ ರೀತಿ ಮಾಡದೆ ಇದ್ದರೆ ಅದಕ್ಕೆ ಬಲವಾದ ಕಾರಣಗಳಿವೆ. ಬೋಅರ್ ಮುಖಂಡರು ಬುದ್ಧಿವಂತರು ಮತ್ತು ದೂರಾಲೋಚನೆಯುಳ್ಳವರು. ಬ್ರಿಟಿಷ್ ಚಕ್ರಾಧಿಪತ್ಯದೊಡನೆ ಪಾಲುಗಾರಿಕೆಯಲ್ಲಿರುವುದರಲ್ಲಿ ಅವರಿಗೆ ಯಾವ ನಷ್ಟವೂ ಇಲ್ಲ.

ನೇಟಾಲಿನಲ್ಲಿ ಇಂಗ್ಲಿಷರ ಸಂಖ್ಯೆ ಹೆಚ್ಚು. ಕೇಪ್ ಕಾಲೊನಿಯಲ್ಲಿ ಬೋಅರ್ ಜನರಷ್ಟು ಇಲ್ಲದೆ ಹೋದರೂ ಇಂಗ್ಲಿಷರ ಸಂಖ್ಯೆಯೇನು ಕಡೆಗಣಿಸುವಂತೆ ಇಲ್ಲ. ಜೋಹಾನ್ಸಬರ್ಗ್‌ನಲ್ಲಿಯೂ ಇಂಗ್ಲಿಷರ ಪ್ರಾಬಲ್ಯ ಹೆಚ್ಚು. ಈ ಸಂದರ್ಭದಲ್ಲಿ ಸ್ವತಂತ್ರ ರಿಪಬ್ಲಿಕನ್ನು ಏರ್ಪಡಿಸಲು ಬೋಅರ್‌ಗಳು ಪ್ರಯತ್ನ ಪಟ್ಟರೆ ಅಂತಃಕಲಹ, ದಂಗೆಗಳಿಗೆ ಅವಕಾಶ ಆಗುತ್ತದೆಯೇ ವಿನಾ ಯಾವ ಪ್ರಯೋಜನವೂ ಇಲ್ಲ. ಆದ್ದರಿಂದ ದಕ್ಷಿಣ ಆಫ್ರಿಕ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಒಂದು ಡೊಮಿನಿಯನ್ ಆಗಿ ಉಳಿದಿದೆ.

ಯೂನಿಯನ್ ರಾಜ್ಯದ ರಾಜ್ಯಾಂಗರಚನೆ ಹೇಗಾಯಿತೆಂದು ತಿಳಿಯುವುದು ಅವಶ್ಯಕ. ಕಾಲೋನಿಗಳ ನ್ಯಾಯವಿಧಾಯಕ ಸಭೆಗಳು ಚುನಾಯಿಸಿದ ಎಲ್ಲ ಪಕ್ಷಗಳ ಪ್ರತಿನಿಧಿಗಳು ಒಂದು ರಾಷ್ಟ್ರಮಹಾಸಭೆಯಲ್ಲಿ ಸೇರಿ ಒಮ್ಮತದಿಂದ ಒಂದು ರಾಜ್ಯಾಂಗ ಮಸೂದೆಯನ್ನು ತಯಾರಿಸಿದರು. ಬ್ರಿಟಿಷ್ ಪಾರ್ಲಿಮೆಂಟು ಚಾಚೂ ತಪ್ಪದೆ ಅದನ್ನು ಅನುಮೋದಿಸಿತು. ಇಂಗ್ಲೆಂಡಿನ ಕಾಮನ್ಸ್ ಸಭೆಯ ಸದಸ್ಯರೊಬ್ಬರು ಅದರಲ್ಲಿನ ವ್ಯಾಕರಣನ್ಯೂನತೆಯನ್ನು ತಿದ್ದಬೇಕೆಂದು ಸೂಚಿಸಿದರು. ದಿವಂಗತ ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್ ಮನ್ನರು, "ರಾಜ್ಯಾಡಳಿತ ನಡೆಸಲು ವ್ಯಾಕರಣಶುದ್ಧತೆ ಮುಖ್ಯವಲ್ಲ; ಬ್ರಿಟಿಷ್ ಮಂತ್ರಿಮಂಡಲಕ್ಕೂ ದಕ್ಷಿಣ ಆಫ್ರಿಕ ಮಂತ್ರಿಗಳಿಗೂ ಆದ ಒಪ್ಪಂದದ ಪ್ರಕಾರ ಏರ್ಪಟ್ಟ ರಾಜ್ಯಾಂಗವಿದು; ವ್ಯಾಕರಣದ ತಪ್ಪನ್ನು ಸರಿಪಡಿಸಲು ಸಹ ಬ್ರಿಟಿಷ್ ಪಾರ್ಲಿಮೆಂಟಗೆ ಅಧಿಕಾರವಿಲ್ಲ" ಎಂದು ತಿದ್ದುಪಡಿಯನ್ನು ವಿರೋಧಿಸಿದರು. ಕೊನೆಯಲ್ಲಿ ಅದೇ ರಾಜ್ಯಾಂಗ ಮಸೂದೆಯನ್ನು ಸ್ವಲ್ಪವೂ ತಿದ್ದದೆ ಸಾಮ್ರಾಜ್ಯಶಾಸನವನ್ನಾಗಿ ಪಾರ್ಲಿಮೆಂಟಿನಲ್ಲಿ ಅನುಮೋದಿಸಿದರು.

ಈ ಸಂದರ್ಭದಲ್ಲಿ ಇನ್ನೊಂದು ವಿಶೇಷ ವಿಷಯವನ್ನು ಗಮನಿಸಬೇಕಾದುದು ಅವಶ್ಯವಿದೆ. ಯೂನಿಯನ್ ರಾಜ್ಯಾಂಗ ಶಾಸನದ ವಿಧಿಗಳು ಅರ್ಥವಿಲ್ಲದ ಆಡಂಬರಗಳೆಂದು ಕಾಣಬಹುದು. ಅದರಿಂದ ವೆಚ್ಚವು ಹೆಚ್ಚಿದೆ. ಇದು ರಾಜ್ಯಾಂಗ ನಿರ್ಮಾಪಕರಿಗೆ ಗೊತ್ತಿರಲಿಲ್ಲವೆಂದಲ್ಲ. ಆದರೆ ಅವರ ಆಸೆ ತಮ್ಮದೇ ಕೊನೆಯ ಮಾತಾಗಿರಬೇಕೆಂದಿರಲಿಲ್ಲ; ಸಾಧ್ಯವಾದಮಟ್ಟಿಗೆ ಭಿನ್ನಾಭಿಪ್ರಾಯಗಳನ್ನು ಅರಿತು ಸರಿಪಡಿಸಿ, ರಾಜ್ಯ ಘಟನೆಯನ್ನು ಯಶಸ್ವಿಯಾಗಿ ಮಾಡಬೇಕೆಂದಿತ್ತು. ಆದ್ದರಿಂದ ಯೂನಿಯನ್ ಸರಕಾರಕ್ಕೆ ಈಗಲೂ ನಾಲ್ಕು ಮುಖ್ಯ ಪಟ್ಟಣಗಳಿವೆ; ಯಾವ ಕಾಲೊನಿಗೂ ತನ್ನ ಮುಖ್ಯ ಪಟ್ಟಣವನ್ನು ಬಿಟ್ಟುಕೊಡಲು ಇಷ್ಟವಿಲ್ಲ. ಅದರಂತೆ ಹಿಂದಿನ ಕಾಲೊನಿಗಳ ನ್ಯಾಯವಿಧಾಯಕ ಸಭೆಗಳು ಏರ್ಪಟ್ಟಿವೆ. ಗವರ್ನರ್ ಹುದ್ದೆಗಳನ್ನು ತೆಗೆದಿದ್ದರೂ ಸಮಾನ ಅಧಿಕಾರದ ಪ್ರಾಂತೀಯ ಆಡಳಿತಗಾರರ ಅಧಿಕಾರಸ್ಥಾನಗಳು ನಿರ್ಮಾಣವಾಗಿವೆ. ನಾಲ್ಕು ಸ್ಥಳೀಯ ಪ್ರಾಂತ ಸಭೆಗಳು, ನಾಲ್ಕು ಮುಖ್ಯ ಪಟ್ಟಣಗಳು, ನಾಲ್ಕು ಗವರ್ನರುಗಳು ಆಡಂಬರ ಮಾತ್ರವಲ್ಲದೆ ಅನವಶ್ಯವೆಂದೂ ಎಲ್ಲರಿಗೂ ತಿಳಿದಿದೆ. ಆದರೆ ದಕ್ಷಿಣ ಆಫ್ರಿಕದ ರಾಜಕಾರಣ ನಿಪುಣರು ಅವುಗಳೆಲ್ಲವನ್ನೂ ಲಕ್ಷಿಸಲಿಲ್ಲ. ಆಡಂಬರ, ದುಂದುಗಾರಿಕೆ ಎಂದು ತೋರಿದರೂ ನಾಲ್ಕು ರಾಷ್ಟ್ರಗಳ ಒಕ್ಕೂಟ ಅವಶ್ಯವಾಗಿದ್ದ ಕಾರಣ ಹೊರಗಿನವರು

ಏನೇ ಹೇಳಲಿ ತಮಗೆ ಸರಿ ತೋರಿದಂತೆ ನಡೆದು ಬ್ರಿಟಿಷ್ ಪಾರ್ಲಿಮೆಂಟಿನ ಒಪ್ಪಿಗೆ ಮುದ್ರೆಯನ್ನು ಪಡೆದರು.

ದಕ್ಷಿಣ ಆಫ್ರಿಕದ ಸತ್ಯಾಗ್ರಹ ಸಮರದ ಒಳಗುಟ್ಟಿನ ವಿವರಣೆ ದಕ್ಷಿಣ ಆಫ್ರಿಕದ ಚರಿತ್ರೆ ತಿಳಿಯದೆ ಅರ್ಥವಾಗುವುದು ಕಷ್ಟವಾದ್ದರಿಂದ ಆದಷ್ಟು ಸಂಕ್ಷೇಪವಾಗಿ ಆ ಚರಿತ್ರೆಯನ್ನು ಇಲ್ಲಿ ತಿಳಿಸಿದ್ದೇನೆ. ಸತ್ಯಾಗ್ರಹ ಪ್ರಾರಂಭಿಸುವ ಮೊದಲು ಭಾರತೀಯರು ದಕ್ಷಿಣ ಆಫ್ರಿಕಕ್ಕೆ ಹೇಗೆ ಬಂದರು, ಅಲ್ಲಿನವರೆಗೆ ಅವರ ಕಷ್ಟಗಳೇನು ಎಂಬುದನ್ನು ಇನ್ನು ತಿಳಿಸಿದರೆ ಸಾಕು.

೩. ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಪ್ರವೇಶ

ಇಂಗ್ಲಿಷರು ಹೇಗೆ ಬಂದರೆಂದು ಹಿಂದಿನ ಪ್ರಕರಣದಲ್ಲಿ ನೋಡಿದ್ದೇವೆ. ನೇಟಾಲಿನಲ್ಲಿ ವಲಸೆ ನಿಂತು ಜುಲುಗಳಿಂದ ಕೆಲವು ರಿಯಾಯಿತಿ ಪಡೆದರು. ನೇಟಾಲಿನಲ್ಲಿ ಅತ್ಯುತ್ತಮವಾದ ಕಬ್ಬು, ಟೀ ಮತ್ತು ಕಾಫಿ ಬೆಳೆಯಬಹುದೆಂದು ಕಂಡು ಹಿಡಿದರು. ಅಧಿಕ ಪ್ರಮಾಣದಲ್ಲಿ ಪೈರು ಬೆಳೆಯಲು ಸಾವಿರಾರು ಜನ ಕೆಲಸಗಾರರು ಬೇಕಾಯಿತು; ಅದು ವಲಸೆ ಹೋದ ಅಲ್ಪ ಸ್ವಲ್ಪ ಜನರ ಶಕ್ತಿಯನ್ನು ಮೀರಿದ ಕೆಲಸವಾಗಿತ್ತು. ನೀಗ್ರೊ ಜನರಿಂದ ಕೆಲಸ ತೆಗೆದು ಕೊಳ್ಳಬೇಕೆಂದು ಮೊದಲು ಅವರಿಗೆ ಆಸೆ ತೋರಿಸಿದರು, ಅನಂತರ ಹೆದರಿಸಿ ನೋಡಿದರು. ಆದರೆ ಗುಲಾಮಗಿರಿ ಪದ್ಧತಿ ಹೋಗಿದ್ದುದರಿಂದ ನೀಗ್ರೊ ಜನರು ಯಾರೂ ಒಪ್ಪಲಿಲ್ಲ. ನೀಗ್ರೊ ಜನರು ಶ್ರಮಜೀವಿಗಳಲ್ಲ. ಸಾಮಾನ್ಯವಾಗಿ ವರ್ಷಕ್ಕೆ ಆರು ತಿಂಗಳು ಕೆಲಸಮಾಡಿ ವರ್ಷಕ್ಕಾಗುವ ಬೆಳೆಯನ್ನು ತೆಗೆಯುತ್ತಾರೆ. ವರ್ಷವೆಲ್ಲ ಜೀತಮಾಡಲು ಒಪ್ಪಿ ಮತ್ತೊಬ್ಬರ ಅಡಿಯಾಳು ಏಕಾಗಬೇಕು? ಕಾಯಂ ಕೂಲಿಗಳಿಲ್ಲದೆ ಇಂಗ್ಲಿಷ್ ವಲಸೆಗಾರರು ತಮ್ಮ ತೋಟಗಳಲ್ಲಿ ಕೆಲಸ ಮುಂದುವರಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ತೋಟಗಾರರು ಭಾರತ ಸರಕಾರದೊಂದಿಗೆ ವ್ಯವಹಾರ ನಡೆಸಿ ಕೂಲಿಗಳನ್ನು ಒದಗಿಸಿಕೊಡಬೇಕೆಂದು ಕೇಳಿದರು. ಭಾರತ ಸರಕಾರ ಒಪ್ಪಿತು. ೧೮೬೦ನೇಯ ನವೆಂಬರ್ ೧೬ನೆಯ ದಿನ ಮೊದಲನೆಯ ಗುಂಪು ನೇಟಾಲ್ ಸೇರಿತು. ಅದು ನಿಜವಾಗಿಯೂ ಚರಿತ್ರಾರ್ಹವಾದ ದಿನ. ಇಲ್ಲದಿದ್ದರೆ ದಕ್ಷಿಣ ಆಫ್ರಿಕದಲ್ಲಿ ಭಾರತೀಯರೂ ಇರುತ್ತಿರಲಿಲ್ಲ; ಸತ್ಯಾಗ್ರಹವೂ ನಡೆಯುತ್ತಿರಲಿಲ್ಲ; ಈ ಪುಸ್ತಕ ಬರೆಯಲು ಅವಕಾಶವೂ ದೊರೆಯುತ್ತಿರಲಿಲ್ಲ.

ನನ್ನ ಅಭಿಪ್ರಾಯದಲ್ಲಿ ಭಾರತ ಸರಕಾರ ಆ ರೀತಿ ಕೂಲಿಗಳನ್ನು ಕಳುಹಿಸಲು ಒಪ್ಪಿದುದು ತಪ್ಪು. ಹಿಂದೂ ದೇಶದ ಬ್ರಿಟಿಷ್ ಅಧಿಕಾರಿಗಳು ತಿಳಿದೊ ತಿಳಿಯದೆಯೊ ನೇಟಾಲಿನ ತಮ್ಮ ಸೋದರರಿಗೆ ಪಕ್ಷಪಾತ ತೋರಿಸಿದರು. ಕೂಲಿಗಳ ಒಪ್ಪಂದದ ಷರತ್ತುಗಳಲ್ಲಿ ಕೂಲಿಗಾರರ ಹಿತಸಂರಕ್ಷಣೆಗೆ ಅವಶ್ಯವಾದ ಷರತ್ತುಗಳೆಲ್ಲವನ್ನೂ ಸೇರಿಸಿದ್ದೇನೋ ನಿಜ. ಅವರ ಊಟಕ್ಕೂ ಒಳ್ಳೆಯ ವ್ಯವಸ್ಥೆಯಿತ್ತು. ಆ ದೂರ ದೇಶದಲ್ಲಿ ಈ ನಿರಕ್ಷರಕುಕ್ಷಿಗಳಿಗೆ ಏನಾದರೂ ಕೊರತೆಗಳುಂಟಾದರೆ ಅವುಗಳನ್ನು ಹೇಗೆ

ನಿವಾರಿಸಿಕೊಳ್ಳಬೇಕೆಂಬುದನ್ನು ಮಾತ್ರ ಯೋಚಿಸಲಿಲ್ಲ. ಅವರ ಧಾರ್ಮಿಕ ಜೀವನದ ಅವಶ್ಯಕತೆಗಾಗಲಿ, ನೀತಿರಕ್ಷಣೆಗಾಗಲಿ ಯಾವ ಗಮನವನ್ನೂ ಕೊಡಲಿಲ್ಲ. ಶಾಸನ ವಿಧಿಯಂತೆ ಗುಲಾಮಗಿರಿ ರದ್ದಾಗಿದ್ದರೂ ಬಂಡವಾಳಗಾರರು ಕೆಲಸಗಾರರನ್ನು ಗುಲಾಮರಂತೆ ನೋಡಬಹುದೆಂದು ಭಾರತ ಸರಕಾರದ ಅಧಿಕಾರಿಗಳು ಯೋಚಿಸಲಿಲ್ಲ. ನೇಟಾಲಿನ ಭಾರತೀಯ ಕೂಲಿಗಾರರ ಸ್ಥಿತಿಯನ್ನು ನೋಡಿ, ಅವರ ಸ್ಥಿತಿ ಗುಲಾಮಗಿರಿಯನ್ನು ಹೋಲುತ್ತದೆ, 'ಅರೆ-ಗುಲಾಮಗಿರಿ' ಎಂದು ಹೇಳಿದ್ದಾನೆ. ಇನ್ನೊಂದು ಬಾರಿ ಒಂದು ಪತ್ರದಲ್ಲಿ ಅವರ ಸ್ಥಿತಿಗೂ ಗುಲಾಮಗಿರಿಗೂ ಬಹಳ ಸಮೀಪ ಎಂದಿದ್ದಾನೆ. ನೇಟಾಲಿನ ಯೂರೋಪಿಯನ್ ಮುಖಂಡನಾದ ಹ್ಯಾರಿ ಎಸ್ಕಾಮ್ ಎಂಬಾತನು ಒಂದು ಸಮಿತಿಯ ಮುಂದೆ ಸಾಕ್ಷ್ಯಕೊಟ್ಟಾಗ ಅದರ ಸತ್ಯಾಂಶವನ್ನು ಒಪ್ಪಿದ್ದಾನೆ. ನೇಟಾಲಿನ ಯೂರೋಪಿಯನ್ ಮುಖಂಡರ ಹೇಳಿಕೆಗಳಿಂದಲೇ ಇದಕ್ಕೆ ಬೇಕಾದಷ್ಟು ಸಾಕ್ಷ್ಯವನ್ನು ಒದಗಿಸಬಹುದು; ಭಾರತ ಸರಕಾರಕ್ಕೆ ಕಳುಹಿಸಿದ ಅರ್ಜಿಗಳಲ್ಲಿ ಅವೆಲ್ಲ ಅಡಕವಾಗಿವೆ. ಆದರೆ ಅದೃಷ್ಟಕ್ಕೆ ಹೊಣೆ ಯಾರು ? ಈ ಕೂಲಿಗಾರರನ್ನು ನೇಟಾಲಿಗೆ ಕರೆದೊಯ್ದ ಹಡಗೇ ಸತ್ಯಾಗ್ರಹಬೀಜವನ್ನೂ ಅವರೊಂದಿಗೆ ಕೊಂಡೊಯ್ದಿತು.

ನೇಟಾಲಿನಲ್ಲಿ ಕೆಲಸಕ್ಕೆ ಕೂಲಿಗಾರರನ್ನು ಸೇರಿಸುತ್ತಿದ್ದ ಭಾರತೀ ಮಧ್ಯಸ್ಥಗಾರರು ಕೂಲಿಗಾರರಿಗೆ ಆಸೆ ತೋರಿಸಿ ಹೇಗೆ ಮೋಸಮಾಡಿದರು, ಅವರು ಮೋಸವನ್ನು ನಂಬಿ ಹೇಗೆ ತಮ್ಮ ಮಾತೃಭೂಮಿಯನ್ನು ಬಿಟ್ಟರು,ನೇಟಾಲ್ ಸೇರಿದ ಒಡನೆ ಅವರ ಸವಿಗನಸುಗಳೆಲ್ಲವೂ ಹೇಗೆ ಒಡೆದು ಮಾಯವಾದುವು, ಅವರು ಹೇಗೆ ಅಲ್ಲಿಯೇ ನಿಲ್ಲಬೇಕಾಗಿ ಬಂದಿತು, ಧರ್ಮದ ಮತ್ತು ಅವರ ನೀತಿಯ ಕಟ್ಟುಗಳೆಲ್ಲವನ್ನೂ ಹೇಗೆ ಮೀರಿದರು, ಈ ಅದೃಷ್ಟಹೀನರ ಕೈಹಿಡಿದ ಹೆಂಡತಿಗೂ ವೇಶ್ಯೆಗೂ ಇದ್ದ ವ್ಯತ್ಯಾಸ ಸಹ ಹೇಗೆ ಮಾಯವಾಯಿತು ಎಂಬುದನ್ನು ವಿವರಿಸಲು ಇಲ್ಲಿ ಅವಕಾಶವಿಲ್ಲ.

ಅವಧಿ ಕೆಲಸಗಾರರು ನೇಟಾಲಿಗೆ ಹೋಗಿದ್ದಾರೆಂದು ಮಾರಿಷಸ್ ನಗರದಲ್ಲಿ ತಿಳಿದ ಒಡನೆ, ಅಂತಹ ಕೆಲಸಗಾರೊಡನೆ ವ್ಯವಹಾರವಿದ್ದ ವ್ಯಾಪಾರಸ್ಥರಿಗೆ ಅವರನ್ನು ಹಿಂಬಾಲಿಸುವಂತೆ ಪ್ರಚೋದಿಸಿದರು. ಹಿಂದುಸ್ತಾನಕ್ಕೂ ನೇಟಾಲಿಗೂ ಮಧ್ಯೆ ಇರುವ ಮಾರಿಷಸ್ ನಲ್ಲಿ ಅನೇಕ ಭಾರತೀಯರು-ಕೆಲಸಗಾರರು ಮತ್ತು ವ್ಯಾಪಾರಸ್ಥರು-ನೆಲಸಿದ್ದಾರೆ. ಮಾರಿಷಸ್‌ನ ಭಾರತೀಯ ವರ್ತಕನಾದ ದಿವಂಗತ ಸೇಟ್ ಅಬುಬಕರ್ ಆಮೋದ್ ಎಂಬಾತನು ನೇಟಾಲಿನಲ್ಲಿ ಒಂದು ಅಂಗಡಿ ಪ್ರಾರಂಭಿಸಲು ಯೋಚಿಸಿದನು. ನೇಟಾಲಿನ ಆಗಿನ ಇಂಗ್ಲಿಷರಿಗೆ ಭಾರತೀಯ ವರ್ತಕರ ಶಕ್ತಿ ಸಾಮರ್ಥ್ಯಗಳು ತಿಳಿದಿರಲಿಲ್ಲ; ಅವರು ಆ ಕಡೆ ಲಕ್ಷಿಸಲೂ ಇಲ್ಲ. ಈ ಅವಧಿಕೂಲಿಗಳ ಸಹಾಯದಿಂದ ಕಬ್ಬು, ಟೀ, ಕಾಫಿ ಮುಂತಾದ ಲಾಭಕರವಾದ ಬೆಳೆ ತೆಗೆದಿದ್ದರು. ಸಕ್ಕರೆ ತಯಾರಿಸಿ ಅತ್ಯಲ್ಪಕಾಲದಲ್ಲಿ ದಕ್ಷಿಣ ಆಫ್ರಿಕಕ್ಕೆಲ್ಲ ತಕ್ಕಷ್ಟು ಸಕ್ಕರೆ, ಕಾಫಿ, ಟೀಗಳನ್ನು ಒದಗಿಸಿಕೊಟ್ಟರು. ಅರಮನೆಗಳಂತಹ ಸೌಧಗಳನ್ನು ಕಟ್ಟಿ, ಕಾಡು ಮೇಡುಗಳನ್ನು ನಗುವ ನಂದನವನಗಳನ್ನಾಗಿ ಮಾಡುವಷ್ಟು

ಧನಿಕರಾದರು. ಆ ಉನ್ನತಿಯಕಾಲದಲ್ಲಿ ಅಬುಬಕರ್ ಸೇಟನಂತಹ ಪ್ರಾಮಾಣಿಕನೂ, ಸಾಹಸಿಯೂ ಅದ ಒಬ್ಬ ವರ್ತಕನಿದ್ದರೆ ತಮಗೇನೆಂದು ಗಮನಿಸಿಲಿಲ್ಲ. ಇದಕ್ಕೆ ಸರಿಯಾಗಿ ಒಬ್ಬ ಇಂಗ್ಲಿಷ್ ವರ್ತಕನು ಆತನ ಪಾಲುಗಾರನಾದನು. ಅಬುಬಕರ್ ಸೇಟನು ತನ್ನ ವ್ಯಾಪಾರವನ್ನು ವೃದ್ಧಿಗೊಳಿಸಿ ಜಮೀನು ಸಹ ಮಾಡಿದನು. ಆತನ ಕೀರ್ತಿ ಪೋರ್ ಬಂದರಿಗೂ, ಆತನ ಊರಿಗೂ, ಸುತ್ತಮುತ್ತಲಿನ ನಾಡಿಗೂ ಹಬ್ಬಿತು. ಇದರ ಪರಿಣಾಮವಾಗಿ ಇನ್ನು ಕೆಲವು ಮೆಮನ್‌ರೂ, ಸೂರತ್ತಿನ ಬೋರಾಗಳೂ ನೇಟಾಲಿಗೆ ಬಂದರು. ಇವರಿಗೆ ಲೆಕ್ಕ ಬರೆಯುವವರು ಬೇಕಾದ್ದರಿಂದ ಗುಜರಾತ್ ಮತ್ತು ಕಾಥಿಯವಾಡದಿಂದ ಹಿಂದೂ ಗುಮಾಸ್ತರು ಅವರೊಂದಿಗೆ ಬಂದರು.

ಆದ್ದರಿಂದ ಸ್ವಂತಂತ್ರ ವರ್ತಕರು ಹಾಗೂ ಅವರ ನೌಕರರು ಮತ್ತು ಅವಧಿ ಕೂಲಿಗಳು–ಈ ರೀತಿ ಇಬ್ಬಗೆಯ ಭಾರತೀಯರು ನೇಟಾಲಿನಲ್ಲಿ ನೆಲಸಿದರು. ಕ್ರಮೇಣ ಕೂಲಿಗಾರರಿಗೆ ಮಕ್ಕಳಾದರು. ಶ್ರಮಜೀವನದ ನಿರ್ಬಂಧವೇನೂ ಮಕ್ಕಳಿಗೆ ಇಲ್ಲದೆ ಇದ್ದರೂ ಬಹಳ ಕ್ರೂರ ಶಾಶನಗಳ ನಿರ್ಬಂಧಕ್ಕೆ ಅವರು ಒಳಗಾದರು. ಗುಲಾಮರ ಮಕ್ಕಳು ಗುಲಾಮಗಿರಿಯಿಂದ ತಪ್ಪಿಸಿಕೊಳ್ಳುವುದು ಹೇಗೆ? ಕೂಲಿಗಾರರು ಐದು ವರ್ಷಗಳ ಕಾಲ ದುಡಿಯುವುದಾಗಿ ಒಪ್ಪಂದ ಮಾಡಿಕೊಂಡು ಹೋಗಿದ್ದರು. ಅವಧಿ ಮುಗಿದ ಮೇಲೆ ಕೆಲಸ ಮಾಡಲೇಬೇಕೆಂಬ ನಿರ್ಬಂಧವಿರಲಿಲ್ಲ. ಸ್ವತಂತ್ರ ಕೂಲಿಗಳಾಗಿ ಅಥವಾ ವ್ಯಾಪಾರ ಮಾಡಿ ನೇಟಾಲಿನಲ್ಲಿ ಇರಬಹುದಾಗಿತ್ತು. ಕೆಲವರು ಹಾಗೆ ಅಲ್ಲಿಯೇ ನೆಲಸಿದರು, ಇನ್ನೂ ಕೆಲವರು ಹಿಂದುಸ್ತಾನಕ್ಕೆ ಹಿಂದಿರಿಗಿದರು. ನೇಟಾಲಿನಲ್ಲಿಯೇ ನಿಂತವರನ್ನು ಅವಧಿಮುಕ್ತ ಭಾರತೀಯರೆಂದು ಕರೆಯಲಾರಂಭಿಸಿದರು. ಇವರ ಸ್ಥಾನಮಾನಗಳನ್ನು ತಿಳಿಯುವುದು ಅವಶ್ಯ. ಮೇಲೆ ತಿಳಿಸಿದ ಸ್ವತಂತ್ರ ಭಾರತೀಯರಿಗೆ ಇದ್ದ ಸ್ವಾತಂತ್ರ್ಯ ಇವರಿಗೆ ಇರಲಿಲ್ಲ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಲು ಇವರು ಅಪ್ಪಣೆ ಪಡೆಯಬೇಕಾಗಿತು. ಮದುವೆ ಮಾಡಿಕೊಂಡು, ಆ ಮದುವೆ ಶಾಸನಸಮ್ಮತವಾಗಲು "ಪ್ರೊಟೆಕ್ಟರ್ ಆಫ್ ಇಂಡಿಯನ್ ಇಮ್ಮಿಗ್ರೆಂಟ್ಸ್" ಎಂಬ ಅಧಿಕಾರಿಯ ಮುಂದೆ ರಿಜಿಸ್ಟರು ಮಾಡಿಸಬೇಕಾಗಿತ್ತು. ಇನ್ನೂ ಕೆಲವು ನಿರ್ಬಂಧಗಳನ್ನು ಇವರ ಮೇಲೆ ಹಾಕಿದ್ದರು.

ಭಾರತೀಯ ವರ್ತಕರು, ಕೂಲಿಗಾರರು ಮತ್ತು ಅವಧಿವಿಮುಕ್ತ ಭಾರತೀಯರೊಡನೆ ಅಲ್ಲದೆ ನೀಗ್ರೊ ಜನರೊಡನೆ ಸಹ ವ್ಯಾಪಾರ ಮಾಡಬಹುದೆಂದು ಕಂಡುಕೊಂಡರು. ನೀಗ್ರೋ ಜನರು ಯೂರೋಪಿಯನರಿಗೆ ಬಹಳ ಭೀತರಾಗಿದ್ದ ಕಾರಣ, ಭಾರತೀಯರಲ್ಲಿ ವ್ಯಾಪಾರ ಮಾಡುವುದು ಅವರಿಗೆ ಬಹಳ ಅನುಕೂಲವಾಗಿತ್ತು. ಯೂರೋಪಿಯನ್ ವ್ಯಾಪಾರಿಗೆ ತಾನೊಬ್ಬನೆ ನೀಗ್ರೋ ಜನರೊಂದಿಗೆ ವ್ಯಾಪಾರ ಮಾಡಬೇಕೆಂಬ ಆಸೆ ಬಲವಾಗಿತ್ತು. ಆದರೆ ನೀಗ್ರೊ ಜನರಿಗೆ ಆತನಿಂದ ಯಾವ ಗೌರವವೂ ದೊರೆಯುತ್ತಿರಲಿಲ್ಲ. ತಮ್ಮ ದುಡ್ಡಿನ ಬೆಲೆಗೆ ಸರಿಯಾದ ಸರಕು ದೊರೆತರೆ ತಾವೇ ಅದೃಷ್ಟಶಾಲಿಗಳೆಂದು ತಿಳಿದಿದ್ದರು. ನಾಲ್ಕುಷಿಲಿಂಗ್ ಸಾಮಾನು ತೆಗೆದುಕೊಂಡು ಒಂದು ಸವರನ್ ಕೊಟ್ಟರೆ,

ಹದಿನಾರು ಷಿಲಿಂಗ್ ಚಿಲ್ಲರೆ ಕೊಡುವ ಬದಲು ನಾಲ್ಕು ಷಿಲಿಂಗ್ ಕೊಟ್ಟದ್ದೂ, ಅನೇಕ ವೇಳೆ ಅದೂ ಇಲ್ಲದೆ ಕಳುಹಿಸಿದ್ದೂ ಅವರ ಅನುಭವವಾಗಿತ್ತು. ಚಿಲ್ಲರೆ ದೇಳಿದರೆ ಅಥವಾ ಕಡಿಮೆ ಕೊಟ್ಟುದನ್ನು ತಿಳಿಸಿದರೆ ಬೈಗುಳ ಸುರಿಮಳೆ. ಅಷ್ಟಕ್ಕೇ ಮುಗಿದರೆ ಅವನೇ ಪುಣ್ಯವಂತ; ಬೈಗುಳೊಂದಿಗೆ ಏಟೋ ಅಥವಾ ಒದೆಯೋ ದೊರೆಯುತ್ತಿತ್ತು. ಎಲ್ಲ ಇಂಗ್ಲಿಷ್ ವ್ಯಾಪಾರಿಗಳೂ ಹೀಗೆಯೇ ಇದ್ದರೆಂದಲ್ಲ; ಆದರೆ ಅಂಥವರ ಸಂಖ್ಯೆಯೇ ಹೆಚ್ಚು. ಭಾರತೀಯರು, ನೀಗ್ರೋ ಜನರೊಡನೆ ಉಪಚಾರದ ಮಾತುಗಳನ್ನಾಡಿ ಅನೇಕ ವೇಳೆ ಸಂತೋಷವಾಗಿ ಸರಸವಾಡುತ್ತಿದ್ದುದೂ ಉಂಟು. ನೀಗ್ರೋ ಜನರಿಗೆ ಅಂಗಡಿಗಳಲ್ಲಿನ ಸಾಮಾನುಗಳನ್ನು ಸ್ವತಃ ಪರೀಕ್ಷಿಸಿ, ಕೊಳ್ಳಬೇಕೆಂಬ ಇಚ್ಛೆ ಇತ್ತು. ಭಾರತೀಯ ವ್ಯಾಪಾರಿಗಳು ಇದಕ್ಕೆ ಅವಕಾಶ ಕೊಡುತ್ತಿದ್ದರು. ಪಾರಮಾರ್ಥಿಕ ದೃಷ್ಟಿಯಿಂದಲೇ ಅಷ್ಟು ಸಲಿಗೆ ಕೊಡುತ್ತಿದ್ದರೆಂದಲ್ಲ; ಪ್ರಾಯಶಃ ಸ್ವಲ್ಪ ಸ್ವಾರ್ಥಸಾಧನೆಗೂ ಇರಬಹುದು. ಆದರೆ ತನ್ನ ಸವಿಮಾತಿನಿಂದ ಭಾರತೀಯ ವ್ಯಾಪಾರಿ ನೀಗ್ರೋ ಜನರ ಆದರಕ್ಕೆ ಪಾತ್ರನಾದನು. ಅಲ್ಲದೆ, ಭಾರತೀಯ ವ್ಯಾಪಾರಿಗೆ ನೀಗ್ರೋ ಜನರು ಹೆದರುವ ಸಂಭವ ಇರಲಿಲ್ಲ. ಭಾರತೀಯರ ಮೋಸ ನೀಗ್ರೋ ಜನರಿಗೆ ಗೊತ್ತಾದ ಅನೇಕ ವೇಳೆ ನೀಗ್ರೋ ಜನರು ಭಾರತೀಯ ವ್ಯಾಪಾರಿಗಳಿಗೆ ಪ್ರತೀಕಾರವನ್ನೂ ಮಾಡಿದ್ದಾರೆ. ಅನೇಕ ವೇಳೆ ನೀಗ್ರೋ ಜನರು ಭಾರತೀಯ ವ್ಯಾಪಾರಿಗಳನ್ನು ಬೈದೂ ಇದ್ದಾರೆ. ಆದುದರಿಂದ ಭಾರತೀಯರು ಮತ್ತು ನೀಗ್ರೋ ಜನರಲ್ಲಿ ಭಾರತಿಯರೇ ನೀಗ್ರೋ ಜನರಿಗೆ ಹೆದರುತ್ತಾರೆ. ಒಟ್ಟಿನಲ್ಲಿ ನೀಗ್ರೋ ಜನರೊಂದಿನ ವ್ಯಾಪಾರ ಭಾರತೀಯರಿಗೆ ತುಂಬ ಲಾಭದಾಯಕವಾಯಿತು. ದಕ್ಷಿಣ ಆಫ್ರಿಕದಲ್ಲಿ ಎಲ್ಲಿ ನೋಡಿದರೂ ನೀಗ್ರೋ ಜನರೇ ಹೆಚ್ಚು.

ಕಳೆದ ಶತಮಾನದ ೮೦–೯೦ ವರ್ಷಗಳಲ್ಲಿ ಟ್ರಾನ್ಸ್‌ವಾಲ್ ಮತ್ತು ಆರೇಂಜ್ ಫ್ರೀ ಸ್ಟೇಟ್‌ಗಳು ರಿಪಬ್ಲಿಕ್ ರಾಜ್ಯಗಳಾಗಿದ್ದವು. ಈ ರಿಪಬ್ಲಿಕ್ ಗಳಲ್ಲಿ ನೀಗ್ರೋ ಜನರಿಗೆ ಯಾವ ಅಧಿಕಾರವೂ ಇರಲಿಲ್ಲ, ಎಲ್ಲವೂ ಬಿಳಿಯ ಜನರ ರಾಜ್ಯವೇ ಆಗಿತ್ತು. ಸರಳಜೀವಿಗಳೂ ಆಡಂಬರರಹಿತರೂ ಆದ ಡಚ್ಚರು ತಮ್ಮೊಡನೆ ವ್ಯಾಪಾರ ಮಾಡುವುದು ಅಗೌರವ ಎಂದು ತಿಳಿಯಲಾರರೆಂದು ನಂಬಿ, ಅನೇಕ ಭಾರತೀಯ ವರ್ತಕರು, ಟ್ರಾನ್ಸ್ವಾಲ್ ಮತ್ತು ಫ್ರೀಸ್ಟೇಟ್ಗಳಿಗೆ ಹೋಗಿ ಅಂಗಡಿಗಳನ್ನಿಟ್ಟರು. ಆಗ ರೈಲುಗಳಿಲ್ಲದ್ದರಿಂದ ವರ್ತಕರು ಒಳ್ಳೆಯ ಲಾಭ ಸಂಪಾದಿಸಿದರು. ಭಾರತೀಯ ವರ್ತಕರ ಆಸೆ ಫಲಿಸಿತು; ಬೋಅರ್ ಜನರೊಂದಿಗೂ ನೀಗ್ರೋ ಜನರೊಂದಿಗೂ ಯಥೇಚ್ಛವಾಗಿ ವ್ಯಾಪಾರ ಮಾಡತೊಡಗೊಡಗಿದರು. ಇದರಂತೆ ಕೆಲವರು ಕೇಪ್ ಕಾಲೋನಿಗೂ ಹೋಗಿ ವ್ಯಾಪಾರದಿಂದ ಚೆನ್ನಾಗಿ ದ್ರವ್ಯಸಂಪಾದನೆ ಮಾಡಿದರು. ಈ ರೀತಿ ಭಾರತೀಯರು ನಾಲ್ಕು ವಲಸೆ ಪ್ರಾಂತಗಳಲ್ಲೂ ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಸಂಖ್ಯೆಯಲ್ಲಿ ಹಂಚಿಹೋದರು.

ಈಗ ಸಂಪೂರ್ಣ ಸ್ವತಂತ್ರರಾದ ಭಾರತೀಯರು ೪೦,೦೦೦ ಜನರೂ, ಕೂಲಿಗಾರರಾಗಿ ಹೋಗಿ ಅವಧಿವಿಮುಕ್ತರಾದವರು ಮತ್ತು ಅವರ ಸಂತತಿಯವರು ಸೇರಿ ೧,೦೦,೦೦೦ ಜನರೂ ಇದ್ದಾರೆ.

೪. ಭಾರತೀಯರ ಕುಂದು ಕೊರತೆಗಳು

ನೇಟಾಲ್

ನೇಟಾಲಿನ ಯೂರೋಪಿಯನ್ ತೋಟಗಾರರಿಗೆ ಬೇಕಾಗಿದ್ದುದು ಗುಲಾಮರು ಮಾತ್ರ. ಒಪ್ಪಂದದ ಅವಧಿ ಮುಗಿದ ಮೇಲೆ ಸ್ವತಂತ್ರರಾಗಿ ಎಷ್ಟೇ ಅಲ್ಪವೆಂದರೂ, ತಮ್ಮೊಂದಿಗೆ ಪೈಪೋಟಿ ನಡೆಸುವ ಕೂಲಿಗಳು ಬೇಕಿರಲಿಲ್ಲ. ಭಾರತದಲ್ಲಿ ವ್ಯವಸಾಯ ಅಥವಾ ಇತರ ಕೆಲಸದಲ್ಲಿ ನಷ್ಟಹೊಂದಿದವರೇ ನೇಟಾಲಿಗೆ ಕೂಲಿಗಳಾಗಿರಲು ಒಪ್ಪಿ ಹೋದುದು ನಿಜ. ಆದರೆ ಅವರಿಗೆ ವ್ಯವಸಾಯ ಬರುತ್ತಿರಲಿಲ್ಲವೆಂಬುದಾಗಲಿ, ಭೂಮಿಯ ಬೆಲೆ ಅವರಿಗೆ ತಿಳಿಯದೆಂಬುದಾಗಲಿ ನಿಜವಲ್ಲ. ಭಾರತೀಯರು ನೇಟಾಲಿನಲ್ಲಿ ತರಕಾರಿಯೊಂದನ್ನು ಬೆಳೆದರೇನೇ ಸುಖ ಜೀವನ ನಡಸಬಹುದೆಂದೂ ಕಂಡುಕೊಂಡರು. ತಮ್ಮ ಕೆಲಸದ ಅವಧಿ ಮುಗಿದ ಒಡನೆ ಅನೇಕರು ಸಣ್ಣ ವ್ಯಾಪಾರೋದ್ಯಮಗಳನ್ನು ಪ್ರಾರಂಭಿಸಿದರು. ಒಟ್ಟಿನಲ್ಲಿ ನೇಟಾಲಿಗೆ ಹೋದ ಕೆಲಸಗಾರರಿಗೆ ಅನುಕೂಲವಾಯಿತು. ಒಳ್ಳೆಯ ವ್ಯವಸಾಯಗಾರರಿಲ್ಲದೆ ಬೆಳೆಯಲಾಗದ ಕಾಯಿಪಲ್ಯಗಳು ಈಗ ಹೇರಳವಾಗಿ ದೊರಕಲಾರಂಭಿಸಿದುವು. ಇದರ ಪರಿಣಾಮವಾಗಿ ಕಾಯಿಪಲ್ಯಗಳ ಬೆಲೆ ತಗ್ಗಿತು. ಈ ಹೊಸ ಸನ್ನಿವೇಶ ಯೂರೋಪಿಯನ್ ಪ್ಲಾಂಟರುಗಳಿಗೆ ಸರಿಬೀಳಲಿಲ್ಲ. ಯಾವ ವ್ಯವಸಾಯ ಕ್ಷೇತ್ರ ತಮಗೆ ಮೀಸಲೆಂದು ತಿಳಿದಿದ್ದರೋ ಅಲ್ಲಿ ಈಗ ಸ್ಪರ್ಧೆ ಮಾಡುವವರು ಹುಟ್ಟಿದರೆಂದು ಭಾರತೀಯರ ಮೇಲೆ ರೇಗಿದರು. ಆದ್ದರಿಂದ ಈ ಅವಧಿವಿಮುಕ್ತ ಕೆಲಸಗಾರರ ವಿರುದ್ಧ ಒಂದು ಚಳುವಳಿ ಹೂಡಿದರು. ಯೂರೋಪಿಯನರು ಹಿಂದುಸ್ತಾನದಿಂದ ಹೆಚ್ಚು ಹೆಚ್ಚು ಕೆಲಸಗಾರರನ್ನು ಕರೆಸಿಕೊಂಡರೂ, ಅಲ್ಲಿ ಅವಧಿ ಮುಗಿಸಿದ ಕೆಲಸಗಾರರಿಗೆ ಹಿಂಸೆ ಕೊಡಲು ಮೊದಲುಮಾಡಿದರು. ಭಾರತೀಯರ ದೇಹಶ್ರಮ ಮತ್ತು ಬುದ್ಧಿ ಕೌಶಲಕ್ಕೆ ಇದೇ ಬಹುಮಾನ!

ಚಳವಳಿ ಬಗೆ ಬಗೆಯಲ್ಲಿ ಉಗ್ರಸ್ವರೂಪವನ್ನು ತಾಳಿತು. ಕೆಲವು ಚಳವಳಿಗಾರರು ಅವಧಿ ಮುಗಿಸಿದ ಕೆಲಸಗಾರರನ್ನೆಲ್ಲ ಹಿಂದಕ್ಕೆ ಕಳುಹಿಸಿರೆಂದರು. ಹೊಸದಾಗಿ ಕೆಲಸಕ್ಕೆ ಬರುವವರ ಒಪ್ಪಂದದಲ್ಲಿ ಕೆಲಸದ ಕಾಲ ಮುಗಿದ ಒಡನೆ ಅವಧಿಯನ್ನು ಹೆಚ್ಚಿಸಿಕೊಳ್ಳದೆ ಹೋದರೆ ಹಿಂದಕ್ಕೆ ಹೋಗಬೇಕೆಂಬ ಷರತ್ತನ್ನು ಸೇರಿಸಬೇಕೆಂದರು. ಮೊದಲ ಐದು ವರ್ಷಗಳ ಅನಂತರ ಅವಧಿಯನ್ನು ಹೆಚ್ಚಿಸಿಕೊಳ್ಳದವರ ಮೇಲೆ ವಾರ್ಷಿಕ ತಲೆಕಂದಾಯ ಹೇರಬೇಕೆಂದರು. ಏನಾದರೂ ಪ್ರಯತ್ನಮಾಡಿ ಈ ಅವಧಿವಿಮುಕ್ತ ಕೂಲಿಗಾರರು ಸ್ವತಂತ್ರರಾಗಿ ನೇಟಾಲಿನಲ್ಲಿ ನೆಲಸದಂತೆ ಮಾಡಬೇಕೆಂಬುದೇ ಎರಡೂ ಗುಂಪುಗಳ ಉದ್ದೇಶ. ಈ ಚಳವಳಿಯ ಪರಿಣಾಮವಾಗಿ ನೇಟಾಲ್ ಸರಕಾರ ಒಂದು ವಿಚಾರಣಾಸಮಿತಿಯನ್ನು ಏರ್ಪಡಿಸಿತು. ಆದರೆ ಚಳವಳಿಗಾರರ ಬೇಡಿಕೆಗಳು ಬಹಳ ಅನ್ಯಾಯವಾಗಿದ್ದುದರಿಂದಲೂ, ಅರ್ಥಿಕ ದೃಷ್ಟಿಯಿಂದ ಅವಧಿವಿಮುಕ್ತ ಕೆಲಸಗಾರರು ನೇಟಾಲಿನಲ್ಲಿರುವುದು ಒಟ್ಟಿನಲ್ಲಿ ಪ್ರಜಾಸಮುದಾಯಕ್ಕೆ ಅನುಕೂಲವಾಗಿದ್ದುದರಿಂದಲೂ, ವಿಚಾರಣಾ ಸಮಿತಿಯ ಮುಂದೆ ದೊರೆತ ಸಾಕ್ಷ್ಯದಿಂದ ಯೂರೋಪಿಯನರಿಗೆ

ಏನು ಉಪಯೋಗವಾಗಲಿಲ್ಲ; ಸ್ವಲ್ಪ ಕಾಲ ಅವರ ಬೇಳೆ ಏನೂ ಬೇಯಲಿಲ್ಲ. ಬೆಂಕಿ ಆರಿಸಿದರೂ ಕರಿ ನಿಲ್ಲುವಂತೆ ಈ ಚಳವಳಿ ನೇಟಾಲ್ ಸರಕಾರದ ಮೇಲೆ ಸ್ವಲ್ಪ ಪರಿಣಾಮವನ್ನು ಉಂಟುಮಾಡಿತು. ಅಲ್ಲದೆ ಬೇರೆ ಸಾಧ್ಯವೆ? ನೇಟಾಲ್ ಸರಕಾರದ ಸಹಾನುಭೂತಿಯೆಲ್ಲವೂ ತೋಟಾಗಾರರಕಡೆ. ಆದ್ದರಿಂದ ಭಾರತ ಸರಕಾರದೊಂದಿಗೆ ವ್ಯವಹಾರ ನಡೆಸಿ ಎರಡೂ ತಂಡದ ಬೇಡಿಕೆಗಳನ್ನೂ ಅವರ ಮುಂದೆ ಇಟ್ಟರು. ಆದರೆ ಇಲ್ಲಿಂದ ಹೋದ ಕೆಲಸಗಾರರನ್ನು ಗುಲಾಮಗಿರಿಗೆ ತಳ್ಳುವ ಸಲಹೆಗಳನ್ನು ಭಾರತ ಸರಕಾರ ಒಪ್ಪಿಕೊಳ್ಳಲಿಲ್ಲ. ಕೆಲಸಗಾರರು ತಮ್ಮ ಅವಧಿ ಮುಗಿದ ಮೇಲೆ, ಸ್ವತಂತ್ರರಾಗಿ, ಸ್ವಾವಲಂಬಿಗಳಾಗಿ ತಮ್ಮ ಆರ್ಥಿಕ ಮಟ್ಟವನ್ನು ಉತ್ತಮಗೊಳಿಸಿಕೊಳ್ಳಲೆಂದೇ ಇಲ್ಲಿಂದ ದೂರದೇಶಕ್ಕೆ ಕೂಲಿಗಳನ್ನು ಕಳುಹಿಸುತ್ತಿದ್ದುದು. ಆಗ ನೇಟಾಲ್ ಒಂದು ಕ್ರೌನ್ ಕಾಲೊನಿಯಾಗಿದ್ದ ಕಾರಣ, ಅದರ ರಾಜ್ಯಾಡಳಿತವೆಲ್ಲ ಇಂಗ್ಲಂಡಿನ ವಲಸೆ ಕಚೇರಿಯ (ಕಲೋನಿಯಲ್ ಆಫೀಸ್) ಪೂರ್ಣ ಜವಾಬ್ದಾರಿಯಲ್ಲಿ ಇತ್ತು. ಆದ್ದರಿಂದ ತನ್ನ ಅನ್ಯಾಯದ ಬೇಡಿಕೆಗಳ ಸಾಫಲ್ಯಕ್ಕೆ ಅತ್ತಲಿಂದಲೂ ನೇಟಾಲಿಗೆ ಸಹಾನುಭೂತಿ ದೊರೆಯುವಂತೆ ಇರಲಿಲ್ಲ. ಮತ್ತು ಇನ್ನೂ ಇತರ ಕಾರಣಗಳಿಂದ ನೇಟಾಲಿನಲ್ಲಿ ಜವಾಬ್ದಾರಿ ಸರಕಾರ ಚಳವಳಿ ಆರಂಭವಾಗಿ ೧೮೯೩ ರಲ್ಲಿ ನೇಟಾಲಿಗೆ ಜವಾಬ್ದಾರಿ ಸರಕಾರ ದೊರೆಯಿತು. ನೇಟಾಲ್ ಈಗ ತನ್ನ ಶಕ್ತಿಯನ್ನು ಪ್ರಯೋಗಿಸಲು ಮೊದಲು ಮಾಡಿತು. ಈಗ ನೇಟಾಲ್ ಸೂಚಿಸುವ ಯಾವ ಸಲಹೆಗಳನ್ನೂ ವಲಸೆ ಕಛೇರಿ ತೆಗೆದುಹಾಕುವಂತೆ ಇರಲಿಲ್ಲ. ನೇಟಾಲ್ ಸರಕಾರದ ಪ್ರತಿನಿಧಿಗಳು ಭಾರತ ಸರಕಾರದೊಂದಿಗೆ ಸಂಧಾನ ನಡೆಸಲು ಹಿಂದುಸ್ತಾನಕ್ಕೆ ಬಂದರು. ಕೂಲಿಕೆಲಸದಿಂದ ಬಿಡುಗಡೆಹೊಂದಿದ ಪ್ರತಿಯೊಬ್ಬ ಭಾರತೀಯನೂ ವರ್ಷ ಒಂದಕ್ಕೆ ೨೫ ಪೌಂಡು ಅಥವಾ ೩೭೫ ರೂಪಾಯಿಗಳ ತಲೆಕಂದಾಯ ಕೊಡಬೇಕೆಂಬ ಸೂಚನೆ ತಂದರು. ಅಷ್ಟು ತಲೆಕಂದಾಯ ಕೊಟ್ಟು ಯಾವ ಭಾರತೀಯನೂ ನೇಟಾಲಿನಲ್ಲಿ ವಾಸಮಾಡಲು ಸಾಧ್ಯವಿರಲಿಲ್ಲ. ಭಾರತದ ಗವರ್ನರ್ ಜನರಲ್ ಆದ ಲಾರ್ಡ್ ಎಲ್ಗಿನ್ ೨೫ ಪೌಂಡುಗಳ ತಲೆಕಂದಾ ಹೆಚ್ಚೆಂದು ಮನಗಂಡು ಕೊನೆಗೆ ೩ ಪೌಂಡುಗಳಾಗಿತ್ತು. ಈ ಕಂದಾಯವನ್ನು ಕೂಲಿಗಾರನೊಬ್ಬನ ಮೇಲೆ ಮಾತ್ರ ಹೇರುತ್ತಿರಲಿಲ್ಲ. ಆತನ ಹೆಂಡತಿ, ೧೩ ವರ್ಷಕ್ಕೆ ಮೇಲ್ಪಟ್ಟ ಹೆಣ್ಣು ಮಕ್ಕಳು, ೧೬ ವರ್ಷಕ್ಕೆ ಮೇಲ್ಪಟ ಗಂಡುಮಕ್ಕಳು ಇವರ ಮೇಲೆ ಸಹ ಈ ಕಂದಾಯದ ಹೊರೆ ಬಿದ್ದಿತು. ಹೆಂಡತಿ ಮತ್ತು ಒಂದೆರಡು ಮಕ್ಕಳಿಲ್ಲದ ಕೂಲಿಗಾರರೇ ಅಪರೂಪ. ಆದ್ದರಿಂದ ಸಾಮಾನ್ಯವಾಗಿ ಪ್ರತಿ ಕೂಲಿಯು ೧೨ ಪೌಂಡು ಗಳಾದರೂ ತಲೆಕಂದಾಯ ಕೊಡಬೇಕಾಯಿತು. ಈ ಕಂದಾಯದ ಹೊರೆಯಿಂದ ಆದ ಕಷ್ಟವನ್ನು ಬಣ್ಣಿಸಲು ಅಸಾಧ್ಯ. ಅದರ ದುಃಖ ಅನುಭವಸಿದವರಿಗೆ, ಕಣ್ಣಾರೆ ಕಂಡವರಿಗೆ ಮಾತ್ರ ಗೊತ್ತು.

ನೇಟಾಲ್ ಸರಕಾರದ ಈ ತೀರ್ಮಾನಕ್ಕೆ ವಿರೋಧವಾಗಿ ಭಾರತೀಯರು ಸಹ ವಿರೊಧ ಚಳುವಳಿ ಹೂಡಿದರು. ಸಾಮ್ರಾಜ್ಯ ಸರಕಾರಕ್ಕೂ ಭಾರತ ಸರಕಾರಕ್ಕೂ ಕಳುಹಿಸಿದ ಪ್ರತಿಭಟನೆಗಳಿಂದ ಕಂದಾಯದ ಹೊರೆ ಸ್ವಲ್ಪ ಕಡಮೆಯಾಯಿತೇ ಹೊರತು

ಕಂದಾಯ ಪೂರ್ತಿಯಾಗಿ ಹೋಗಲಿಲ್ಲ. ನಿಸ್ಸಹಾಯಕರಾದ ಕೂಲಿಗಾರರು ಏನು ತಾನೇ ಮಾಡಬಲ್ಲರು? ಈ ವಿಷಯ ಅವರಿಗೆ ತಿಳಿಯುವ ಬಗೆಯಾದರೂ ಹೇಗೆ ? ಭಾರತೀಯ ವ್ಯಾಪಾರಿಗಳು ದೇಶಾಭಿಮಾನದಿಂದಲೂ ಕನಿಕರದಿಂದಲೂ ಕೂಲಿಗಳ ಪರವಾಗಿ ಕಾದಾಡಿದರು.

ಸ್ವತಂತ್ರರಾದ ಭಾರತೀಯರ ಪಾಡು ಅದೇ ಗೋಳಾಗಿತ್ತು. ನೇಟಾಲಿನ ಯೂರೋಪಿಯನ್ ವರ್ತಕರು ಅದೇ ಕಾರಣದಿಂದ ಭಾರತೀಯ ವ್ಯಾಪಾರಿಗಳ ವಿರುದ್ಧ ಚಳವಳಿ ಹೂಡಿದರು. ಭಾರತೀಯ ವ್ಯಾಪಾರಿಗಳು ಒಳ್ಳೆಯ ಸ್ಥಿತಿವಂತರಾಗಿ, ಉತ್ತಮ ಪ್ರದೇಶಗಳಲ್ಲಿ ಭೂಮಿಕಾಣಿಯನ್ನು ಸಂಪಾದಿಸಿದ್ದರು. ಅವಧಿವಿಮುಕ್ತ ಕೂಲಿಗಾರರ ಸಂಖ್ಯೆ ಹೆಚ್ಚಿದಂತೆ, ಅವರ ಜೀವನಕ್ಕೆ ಅವಶ್ಯಕವಾದ ಸರಕುಗಳ ಗಿರಾಕಿಯೂ ಹೆಚ್ಚಿತು. ಹಿಂದುಸ್ತಾನದಿಂದ ಸಾವಿರಾರು ಮೂಟೆ ಅಕ್ಕಿಯನ್ನು ಆಮದು ಮಾಡಿ ಒಳ್ಳೆಯ ಲಾಭ ಪಡೆದರು. ಈ ವ್ಯಾಪಾರವೂ ಜುಲು ಜನರೊಂದಿನ ಬಹುಮಟ್ಟಿನ ವ್ಯಾಪಾರವೂ ಭಾರತೀಯರ ಕೈಯಲ್ಲೇ ಇತ್ತು. ಆದ್ದರಿಂದ ಭಾರತೀಯ ವ್ಯಾಪಾರಿಗಳನ್ನು ಕಂಡರೆ ಸಣ್ಣ ಯೂರೋಪಿಯನ್ ವ್ಯಾಪಾರಿಗಳಿಗೆ ಹೊಟ್ಟೆಕಿಚ್ಚು. ಇಂಗ್ಲಿಷರು ಕೆಲವರು, ಭಾರತೀಯ ವ್ಯಾಪಾರಿಗಳಿಗೆ ನೇಟಾಲ್ ನ್ಯಾಯವಿಧಾಯಕ ಸಭೆಗೆ ಓಟು ಕೊಡುವ ಮತ್ತು ಉಮೇದುವಾರರಾಗಿ ನಿಲ್ಲುವ ಅಧಿಕಾರ ಇರುತ್ತದೆ ಎಂದು ತೋರಿಸಿದರು. ಕೆಲವು ಭಾರತೀಯರು ಆಗ ಓಟರು ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಿಕೊಂಡರು. ಇದನ್ನು ನೋಡಿ ನೇಟಾಲಿನ ಕೆಲವು ಯೂರೋಪಿಯನ್ ರಾಜಕೀಯ ಮುಖಂಡರು ಕೋಪಗೊಂಡು ಭಾರತೀಯರ ವಿರುದ್ಧ ಪಂಗಡ ಒಂದನ್ನು ಕಟ್ಟಿದರು. ಭಾರತೀಯರ ಗೌರವ ಹೆಚ್ಚಿ ಅವರ ಶಕ್ತಿ ಸಂಘಟಿತವಾದರೆ ಭಾರತೀಯರೊಂದಿಗೆ ಪೈಪೋಟಿ ನಡೆಸಲು ತಮಗೆ ಕಷ್ಟವಾಗಬಹುದೆಂದು ಸಹಯೋಚಿಸಿದರು. ಆದ್ದರಿಂದ ಜವಾಬ್ದಾರಿ ಸರಕಾರ ಬಂದೊಡನೆ ನೇಟಾಲ್ ಸರಕಾರ ಕೈಗೊಂಡ ಪ್ರಥಮ ಕಾರ್ಯವೆಂದರೆ ಆ ಮೊದಲಿನ ವೋಟರು ಪಟ್ಟಿಯಲ್ಲಿನ ಭಾರತೀಯರ ಹೊರತು, ಉಳಿದೆಲ್ಲ ಸ್ವತಂತ್ರ ಭಾರತೀಯರೂ ವೋಟುಗಳಿಗೆ ಅನರ್ಹರೆಂದು ತೀರ್ಮಾನಿಸಿದ್ದು. ೧೮೯೪ ರಲ್ಲಿ ಇಂಥ ಒಂದು ಮಸೂದೆಯನ್ನೂ ನೇಟಾಲ್ ಶಾಸನಸಭೆಯ ಮುಂದೆ ಮೊದಲು ತಂದರು. ಭಾರತೀಯರೆಂಬ ನೆವದಿಂದಲೇ ವೋಟಿಗೆ ಅನರ್ಹರೆಂಬ ತತ್ವದ ಮೇಲೆ ಈ ಮಸೂದೆ ಸಿದ್ಧವಾಯಿತು. ಜನಾಂಗಮಾತ್ಸರ್ಯದಿಂದ ಭಾರತೀಯರ ಮೇಲೆ ಸಿದ್ಧಗೊಳಿಸಿದ ಮಸೂದೆಗಳಲ್ಲಿ ಇದೇ ಮೊದಲನೆಯದು. ಭಾರತೀಯರು ಇದನ್ನು ಉಗ್ರವಾಗಿ ಪ್ರತಿಭಟಿಸಿದರು. ಒಂದೇ ರಾತ್ರಿ ಒಂದು ಅಹವಾಲು ಅರ್ಜಿಯನ್ನು ಬರೆದು ಅದಕ್ಕೆ ನಾಲ್ಕು ನೂರು ಜನರು ಸಹಿಮಾಡಿದರು. ಶಾಸನಸಭೆಯ ಮುಂದೆ ಈ ಅರ್ಜಿಯನ್ನು ಕೊಟ್ಟಾಗ ಶಾಸನಸಭೆಗೆ ದಂಗುಬಡಿದಂತಾಯಿತು. ಆದರೂ ಮಸೂದೆಯೇನೊ ಶಾಸನವಾಯಿತು. ಹತ್ತು ಸಾವಿರ ಜನರ ರುಜುವಿನ ಅಹವಾಲನ್ನು ಆಗಿನ ವಲಸೆ ರಾಷ್ಟ್ರಗಳ ಮಂತ್ರಿಗಳಾದ ಲಾರ್ಡ್ ರಿಪ್ಪನ್ನರಿಗೆ ಕೊಡಲಾಯಿತು. ಹತ್ತು

ಸಾವಿರ ರುಜುಗಳೆಂದರೆ ಆಗ ಅಲ್ಲಿದ್ದ ಸ್ವತಂತ್ರ ಭಾರತೀಯರ ಒಟ್ಟು ಪ್ರಜಾಸಂಖ್ಯೆ! ಲಾರ್ಡ್‌ರಿಪ್ಪನ್‌ರು ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ವರ್ಣದ್ವೇಷನ್ನುಂಟುಮಾಡುವ ಯಾವ ಮಸೂದೆಗೂ ಸಾಮ್ರಾಟ ಸರಕಾರ ಒಪ್ಪುವುದಿಲ್ಲವೆಂದು ಈ ಮಸೂದೆಗೆ ಒಪ್ಪಿಗೆ ಕೊಡಲಿಲ್ಲ. ಈ ವಿಜಯದ ಬೆಲೆ ಎಷ್ಟು ಮಹತ್ತರವಾದುದೆಂಬುದು ವಾಚಕರಿಗೆ ಮುಂದೆ ತಿಳಿಯುತ್ತದೆ. ಆಗ ನೇಟಾಲ್ ಸರಕಾರ ವರ್ಣಭೇದವನ್ನು ತೆಗೆದೂ ಇತರ ಕಾರಣಗಳಿಂದ ಭಾರತೀಯರಿಗೆ ವೋಟಿನ ಅನರ್ಹತೆಯನ್ನುಂಟು ಮಾಡುವ ಬೇರೊಂದು ಮಸೂದೆಯನ್ನು ತಂದರು. ಭಾರತೀಯರು ಇದನ್ನು ವಿರೋಧಿಸಿದರೂ ಸಫಲವಾಗಲಿಲ್ಲ. ಈ ಮಸೂದೆಯ ಅರ್ಥ ಬಹಳ ಅಸ್ಪಷ್ಟವಾಗಿತ್ತು. ಆ ಕಾನೂನಿನ ಅರ್ಥವಿವರಣೆಗೆ ಭಾರತೀಯರು ಪ್ರಿವಿ ಕೌನ್ಸಿಲ್ ಜ್ಯುಡಿಷಿಯಲ್ ಕಮಿಟಿಯ ಮುಂದೆ ವಾದ ಹೂಡಬಹುದಾಗಿತ್ತು; ಆದರೆ ಅಷ್ಟು ಲಾಭದಾಯಕವೆಂದು ಭಾರತೀಯರಿಗೆ ಕಾಣಲಿಲ್ಲ. ತೀರದ ವ್ಯಾಜ್ಯವನ್ನು ಬಿಟ್ಟುದೇ ಒಳ್ಳೆಯದೆಂದು ಈಗಲೂ ನನ್ನ ಅಭಿಪ್ರಾಯ. ಆದರೆ ವರ್ಣಭೇದಕ್ಕೆ ಅವಕಾಶ ಕೊಡದಿದ್ದುದು ಮಾತ್ರ ಅಲ್ಪ ವಿಷಯವಲ್ಲ.

ಆದರೆ ತೋಟಗಾರರೂ ನೇಟಾಲ್ ಸರಕಾರವೂ ಅಷ್ಟಕ್ಕೆ ತೃಪ್ತರಾಗಲಿಲ್ಲ ಭಾರತೀಯರ ರಾಜಕೀಯ ಹಕ್ಕುಗಳೆಲ್ಲವನ್ನೂ ಮೊಳಕೆಯಲ್ಲಿಯೇ ಕಿತ್ತೊಗೆಯ ಬೇಕಾದ್ದು ಅವರಿಗೆ ಅನಿವಾರ್ಯವೆನಿಸಿತು; ಆದರೆ ಅವರ ನಿಜವಾದ ವಿರೋಧ ಭಾರತೀಯರ ವ್ಯಾಪಾರ ಮತ್ತು ವಲಸೆಯ ಮೇಲೆ. ಭಾರತ ದೇಶದ ಕೋಟ್ಯಾನುಕೋಟಿ ಭಾರತೀಯರು ನೇಟಾಲನ್ನು ಮುತ್ತಿದರೆ ಯೂರೋಪಿಯನರ ಗತಿ ಏನು ಎಂಬ ಭಯ ಉಂಟಾಯಿತು. ಆಗ ನೇಟಾಲಿನಲ್ಲಿ ೪೦೦,೦೦೦ ಜುಲುಗಳೂ, ೪೦,೦೦೦ ಯೂರೋಪಿಯನರೂ ಇದ್ದರು. ಇದಕ್ಕೆ ಪ್ರತಿಯಾಗಿ ೬೦,೦೦೦ ಭಾರತೀಯ ಕೂಲಿಗಳೂ, ೧೦,೦೦೦ ಬಿಡುಗಡೆ ಹೊಂದಿದ ಕೂಲಿಗಳೂ, ೧೦,೦೦೦ ಸ್ವತಂತ್ರ ಭಾರತೀಯರೂ ಇದ್ದರು. ಯೂರೋಪಿಯನರ ಭೀತಿಗೆ ಬುಡವೇನೋ ಇರಲಿಲ್ಲ. ಆದರೆ ನಿರಾಧಾರವಾದ ಭೀತಿಯಿಂದ ಬುದ್ಧಿ ಕದಡಿದವರನ್ನು ಪರಸ್ಪರ ಚರ್ಚೆಯಿಂದ ಸಮಾಧಾನ ಮಾಡುವುದು ಕಷ್ಟ. ಭಾರತ ದೇಶದಲ್ಲಿನ ಭಾರತೀಯರ ದಾರುಣ ಸ್ಥಿತಿಯೂ ಭಾರತೀಯರ ನಡೆ ನುಡಿಗಳ ಪರಿಚಯವೂ ಇಲ್ಲದ್ದರಿಂದ, ತಮ್ಮಂತೆಯೇ ಭಾರತೀಯರೂ ಮುಂದೆ ನುಗ್ಗುವ ಸ್ವಭಾವದವರೆಂದೂ, ಕಾರ್ಯಕುಶಲರೆಂದೂ ತಿಳಿದಿದ್ದರು. ಭಾರತದ ಅಸಂಖ್ಯಾತ ಜನಬಲವನ್ನು ತಮ್ಮ ಅಲ್ಪ ಜನಸಂಖ್ಯೆಯೊಡನೆ ಹೋಲಿಸಿಕೊಂಡು ಹೆದರಿದ್ದರೆ ಅವರನ್ನು ದೂರುವುದು ಸರಿಯಲ್ಲ. ಏನೇ ಆಗಲಿ, ವೋಟಿನ ಅನರ್ಹತೆಯ ಮಸೂದೆಯನ್ನು ವಿರೋಧಿಸಿದ್ದರ ಫಲವಾಗಿ, ನೇಟಾಲ್ ಶಾಸನ ಸಭೆಯಲ್ಲಿ ಅಂಗೀಕೃತವಾದ ಇನ್ನೆರಡು ಶಾಸನಗಳಲ್ಲಿ ವರ್ಣಭೇದವನ್ನು ತೆಗೆದು ಅದೇ ಉದ್ದೇಶವನ್ನು ಬೇರೆ ಮಾರ್ಗದಿಂದ ಸಾಧಿಸಬೇಕಾಯಿತು. ಆಗಲೂ ಭಾರತೀಯರು ತೀವ್ರವಾಗಿ ವಿರೋಧಿಸಿದರೂ, ಅವು ಶಾಸನಗಳಾದುವು. ಮೊದಲನೆಯ ಶಾಸನದ ಪ್ರಕಾರ, ಅದರ ವಿಧಿಗಳಿಗನುಸಾರವಾಗಿ ನೇಮಕವಾದ ಅಧಿಕಾರಿಯಿಂದ ರಹದಾರಿ ಪಡೆಯದೆ ಯಾರೂ ವ್ಯಾಪಾರ ಮಾಡುವಂತೆ

ಇರಲಿಲ್ಲ ಆದರೆ ಕಾರ್ಯತಃ ಯೂರೋಪಿಯನನಿಗೆ ಬಹು ಸುಲಭವಾಗಿ ರಹದಾರಿ ಕೊರೆಯುತ್ತಿತ್ತು; ಭಾರತೀಯರಿಗೆ ರಹದಾರಿ ಕೊಡುವುದರಲ್ಲಿ ಆಗುತ್ತಿದ್ದ ತೊಂದರೆ ಅಷ್ಟಿಷ್ಟಲ್ಲ. ಒಬ್ಬ ವಕೀಲನನ್ನು ಇಟ್ಟು ಹಣ ವ್ಯಯ ಮಾಡಬೇಕಾಗಿತ್ತು. ಅದಿಲ್ಲದೆ ಹೋದರೆ ರಹದಾರಿ ದೊರೆಯತ್ತಿರಲಿಲ್ಲ. ಇನ್ನೊಂದು ಶಾಸನದ ಮುಖ್ಯ ನಿಯಮದಂತೆ ಯಾವುದಾದರೊಂದು ಯುರೋಪಿಯನ್ ಭಾಷೆಯ ಪರೀಕ್ಷೆಯ ತೇರ್ಗಡೆಯಾಗದ ಹೊರತು ಯಾರೂ ನೇಟಾಲಿಗೆ ಬರುವಹಾಗಿರಲಿಲ್ಲ. ಇದರಿಂದ ಕೋಟ್ಯಾಂತರ ಭಾರತೀಯರಿಗೆ ನೇಟಾಲಿನ ದಾರಿ ಮುಚ್ಚಿತು. ಆದರೆ ಈ ಮಸೂದೆಯಲ್ಲಿ ಒಂದು ನಿಯಮವಿತ್ತು. ಆ ಶಾಸನಕ್ಕೆ ಮುಂಚೆ ಮೂರು ವರ್ಷಗಳ ಹಿಂದಿನಿಂದ ವಾಸಮಾಡುತ್ತ ಇದ್ದವರೆಲ್ಲರೂ ನೇಟಾಲ್ ಕಾಲೊನಿಯನ್ನು ಬಿಟ್ಟು ಹೊರಗೆ ಹೋಗಲು ಅಥವಾ ಬೇಕಾದಾಗ ಹೆಂಡತಿ ಮಕ್ಕಳೊಂದಿಗೆ ಹಿಂದಕ್ಕೆ ಬರಲು ಪರೀಕ್ಷೆಯಲ್ಲಿ ತೇರ್ಗಡೆಯಾಗದೆ ಇದ್ದರೂ ಡಾಮಿಸೈಲ್ ಪತ್ರವನ್ನು ಪಡೆಬಹುದೆಂಬ ಅನುಕೂಲ ಇತ್ತು.

ಅವಧಿ ಮತ್ತು ಅವಧಿವಿಮುಕ್ತ ಕೂಲಿಗಾರರಿಗೆ ಮೇಲೆ ಹೇಳಿದುವುಗಳಲ್ಲದೆ ನೇಟಾಲಿನಲ್ಲಿ ಇನ್ನೂ ಅನೇಕ ಶಾಸನ ನಿರ್ಮಿತವಾದ ಮತ್ತು ಶಾಸನವನ್ನೂ ಮೀರಿದ ನಿರ್ಬಂಧಗಳು ಇದ್ದುವು, ಈಗಲೂ ಇವೆ. ಅವೆಲ್ಲವನ್ನೂ ಪಟ್ಟಿ ಮಾಡಬೇಕಾದ್ದು ಇಲ್ಲಿ ಅನಾವಶ್ಯಕ. ವಿಷಯಗ್ರಹಣಕ್ಕೆ ಎಷ್ಟು ಅವಶ್ಯವೋ ಅಷ್ಟು ವಿವರನ್ನು ಮಾತ್ರ ತಿಳಿಸುತ್ತೇನೆ. ದಕ್ಷಿಣ ಆಫ್ರಿಕದ ಇತರ ಭಾಗಗಳಲ್ಲಿ ನೆಲಸಿರುವ ಭಾರತೀಯರ ಸ್ಥಿತಿಯ ಚರಿತ್ರೆ ಬರೆಯುತ್ತ ಹೋದರೆ ಮೇರೆ ಮೀರುತ್ತದೆ. ಅಲ್ಲದೆ ಈ ಗ್ರಂಥಕ್ಕೆ ಅದು ಅನಾವಶ್ಯಕ.

೫. ಭಾರತೀಯರ ಕಷ್ಟಗಳು

ಟ್ರಾನ್ಸ್‌ವಾಲ್ ಮತ್ತು ಇತರ ವಲಸೆ ರಾಷ್ಟ್ರಗಳು

ನೇಟಾಲಿನಂತೆ ಇತರ ವಲಸೆ ರಾಷ್ಟ್ರಗಳಲ್ಲಿಯೂ ೧೮೮೦ ಕ್ಕೆ ಮುಂಚೆಯೇ ಭಾರತೀಯರ ವಿರುದ್ಧ ಚಳವಳಿ ಆರಂಭವಾಗಿತ್ತು. ಕೇಪ್ ಕಾಲೋನಿ ಒಂದನ್ನು ಬಿಟ್ಟರೆ ಉಳಿದೆಡೆಗಳಲ್ಲಿ ಭಾರತೀಯರು ಕೂಲಿಗಳಾಗಿ ಮಾತ್ರ ಬರಬಹುದೆಂಬ ಭಾವನೆ ಬೇರೂರಿತ್ತು. ಆದರೆ ಸ್ವತಂತ್ರ ಭಾರತೀಯರು ದಕ್ಷಿಣ ಆಫ್ರಿಕದಲ್ಲಿ ಎಲ್ಲಿ ನೆಲೆಸಿದರೂ ಕೆಡುಕೆಂದು ಯೂರೋಪಿಯನರೂ ಭಾವಿಸಿದ್ದರು: ಟ್ರಾನ್ಸ್ವಾಲ್ ಪ್ರಾಂತ ರಿಪಬ್ಲಿಕ್ ರಾಷ್ಟ್ರವಾಗಿತ್ತು. ಅದರ ಅಧ್ಯಕ್ಷರೆದುರಿನಲ್ಲಿ ಭಾರತೀಯರು ಬ್ರಿಟಿಷ್ ಪ್ರಜೆಗಳೆಂದು ಹೇಳಲು ಹೋದರೆ ನಗೆಗೀಡಾಗುತಿತ್ತು. ಅವರ ಕೊರತೆಗಳೇನಿದ್ದರೂ ಪ್ರೆಟೋರಿಯಾ ಬ್ರಿಟಿಷ್ ಧ್ವಜದಡಿ ಬಂದ ಮೇಲೆ ಅವರ ಸ್ಥಿತಿ ಇನ್ನೂ ಕೀಳಾಯಿತು. ಸ್ವತಂತ್ರವಾಗಿದ್ದಾಗ ಬ್ರಿಟಿಷ್ ಪ್ರತಿನಿಧಿ ಕೊಡುತ್ತಿದ್ದ ಸಹಾಯ ಸಹ ಈಗ ದೊರೆಯದಾಯಿತು. ಲರ್ಡ್ ಮಾರ್ಲೆ ಭಾರತ ಕಾರ್ಯದರ್ಶಿಯಾಗಿದ್ದಾಗ ಭಾರತೀಯರ ಪರ ಹೋಗಿದ್ದ ನಿಯೋಗಗೋಷ್ಠಿಯೊಂದಕ್ಕೆ ಸಾಮ್ರಾಜ್ಯ ಸರಕಾರದವರು ಸ್ವತಂತ್ರ ಡೋಮಿನಿಯನ್ಗಳ ಮೇಲೆ ಯಾವ ಅಧಿಕಾರವನ್ನೂ ಚಲಾಯಿಸಲು ಸಾಧ್ಯವಿಲ್ಲವೆಂದು ಹೇಳಿದನು. ಅವರ

ಮೇಲೆ ಯಾವ ಒತ್ತಾಯವನ್ನೂ ಮಾಡುವಂತೆ ಇರಲಿಲ್ಲ. ಒಳ್ಳೆಯ ಮಾತಿನಲ್ಲಿ ವಾದಮಾಡಿ ತಮ್ಮ ತತ್ವಗಳಿಗೆ ಒಪ್ಪಿಸಿಕೊಳ್ಳಬೇಕೇ ಹೊರತು ಬೇರೆ ದಾರಿ ಇರಲಿಲ್ಲ. ಪರ ರಾಷ್ಟ್ರಗಳೊಂದಿಗಾದರೂ ಒತ್ತಾಯ ಪಡಿಸುವುದು ಸುಲಭವಾಗಿತ್ತು: ಆದರೆ ತಮ್ಮ ವಲಸೆ ರಾಷ್ಟ್ರಗಳ ಜನರ ಮೇಲೆ ಒತ್ತಾಯ ಮಾಡುವಂತೆ ಇರಲಿಲ್ಲ. ವಲಸೆ ರಾಷ್ಟ್ರಗಳಿಗೂ ಇಂಗ್ಲೆಂಡಿಗೂ ಇದ್ದ ಬಾಂಧವ್ಯ ಎಂದಾದರೂ ಕಡಿದುಹೋಗ ಬಹುದಾದಷ್ಟು ಸೂಕ್ಷ್ಮವಾಗಿತ್ತು. ಬಲಪ್ರಯೋಗ ನಿಷ್ಪ್ರಯೋಜಕವಾಗಿದ್ದ ಕಾರಣ ಸಂಧಾನದ ಮೂಲಕ ಆದಷ್ಟು ಸಹಾಯ ಮಾಡುವುದಾಗಿ ಲಾರ್ಡ್ ಮಾರ್ಲೆ ಭರವಸೆಕೊಟ್ಟನು. ಟ್ರಾನ್ಸ್‌ವಾಲಿನ ಮೇಲೆ ಯುದ್ಧವನ್ನು ಹೂಡಿದಾಗ, ಲಾರ್ಡ್ ಸೆಲ್ಬೋಗನ್, ಲಾರ್ಡ್ ಲ್ಯಾನ್ಸ್‌ಡೌನ್ ಮುಂತಾದ ಬ್ರಿಟಿಷ್ ರಾಜನೀತಿಜ್ಞರು ಭಾರತೀಯರಿಗೆ ದಕ್ಷಿಣ ಆಫ್ರಿಕದಲ್ಲಿ ಕೊಟ್ಟ ಅನ್ಯಾಯದ ಕಿರುಕುಳವೂ ಯುದ್ಧ ಹೂಡಲು ಒಂದು ಕಾರಣವೆಂದರು.

ಈ ಕಿರುಕುಳ ಹೇಗಿತ್ತೆಂಬುದನ್ನೀಗ ನೋಡೋಣ. ಭಾರತೀಯರು ಟ್ರಾನ್ಸ್‌ವಾಲಿಗೆ ಬಂದುದು ೧೮೮೧ ರಲ್ಲಿ. ದಿವಂಗತ ಸೇಟ್ ಅಬುಬಕರ್ ಪ್ರೆಟೋರಿಯದಲ್ಲಿ ಅಂಗಡಿ ಇಟ್ಟು ಆ ಪಟ್ಟಣದ ಮುಖ್ಯ ಬೀದಿಗಳೊಂದರಲ್ಲಿ ಜಾಗವನ್ನು ಕೊಂಡರು. ಇತರ ವರ್ತಕರು ಅವರನ್ನು ಹಿಂಬಾಲಿಸಿದರು. ವ್ಯಾಪಾರದಲ್ಲಿ ಭಾರತೀಯರ ಮುನ್ನಡೆ ಯೂರೋಪಿಯನ್ನರಲ್ಲಿ ಈರ್ಷೆಯನ್ನು ಕೆರಳಿಸಿರು. ವೃತ್ತಪತ್ರಿಕೆಗಳಲ್ಲಿ ಭಾರತೀಯರ ವಿರುದ್ಧ ಚಳವಳಿ ಆರಂಭವಾಯಿತು. ಭಾರತೀಯರನ್ನು ದೇಶದಿಂದ ಹೊರಗೆ ಓಡಿಸಬೇಕೆಂದೂ ಅವರ ವ್ಯಾಪಾರವನ್ನು ಕೊನೆಗಾಣಿಸಬೇಕೆಂದೂ ವೋಲ್ಕ್ಸ್ ರಾಡ್‌ಗೆ (ಪಾರ್ಲಿಮೆಂಟ್) ಅರ್ಜಿಗಳನ್ನು ಕಳುಹಿಸಿದರು. ಈ ಹೊಸ ವಲಸೆ ರಾಷ್ಟ್ರದ ಯೂರೋಪಿಯನರ ಹಣದಾಸೆಗೆ ಮಿತಿಯೇ ಇರಲಿಲ್ಲ. ನೀತಿಧರ್ಮದ ಕಟ್ಟುಗಳಿಗೆ ಅವರು ಪರಕೀಯರಾಗಿದ್ದರು. ಅವರ ಅರ್ಜಿಗಳಲ್ಲಿ ಬರೆದಿದ್ದ ಕೆಲವು ಆಪಾದನೆಗಳನ್ನು ನೋಡಿ : "ಭಾರತೀಯರಿಗೆ ಮಾನವಸಹಜವಾದ ಮರ್ಯಾದೆಯೇ ಇಲ್ಲ, ಹೆಂಗಸರೆಲ್ಲರೂ ತಮ್ಮ ಕಾಮವಾಸನೆಯ ಬೇಟೆಗಳೆಂದು ಭಾವಿಸುತ್ತಾರೆ. ಹೆಂಗಸೆರೆಲ್ಲರೂ ಆತ್ಮಶೂನ್ಯರೆಂದು ಅವರ ಭಾವನೆ. ಅವರು ಅಸಹನೀಯವಾದ ರೋಗಗಳಿಂದ ನರಳುತ್ತಿದ್ದಾರೆ." ಈ ನಾಲ್ಕು ಅಪಾದನೆಗಳೂ ನಾಲ್ಕು ಸುಳ್ಳಿನ ಕಂತೆಗಳು. ಇಂತಹ ನಿದರ್ಶನಗಳು ಲೆಕ್ಕವಿಲ್ಲದಷ್ಟು ಇವೆ. ಯೂರೋಪಿಯನರಂತೆಯೇ ಅವರ ಪ್ರತಿನಿಧಿಗಳು ಈ ಅನ್ಯಾಯದ ಚಳವಳಿಯ ದುಷ್ಪರಿಣಾಮ ಏನಾಗಬಹುದೆಂದು ಭಾರತೀಯ ವ್ಯಾಪಾರಿಗಳಿಗೆ ಕೊಂಚವೂ ತಿಳಿದಿರಲಿಲ್ಲ ಅವರು ವೃತ್ತ ಪತ್ರಿಕೆಗಳನ್ನು ಓದುತ್ತಿರಲಿಲ್ಲ. ವೃತ್ತಪತ್ರಿಕೆಗಳಲ್ಲಿ ಮತ್ತು ಅರ್ಜಿಗಳ ಮೂಲಕ ನಡೆಸಿದ ಚಳವಳಿ ಫಲಕಾರಿಯಾಗತೊಡಗಿತು. 'ವೋಲ್ಕ್ಸ್ ರಾಡ್' ಮುಂದೆ ಒಂದು ಮಸೂದೆ ಬಂದಿತು. ಸನ್ನಿವೇಶ ಎಷ್ಟು ವಿಷಮವಾಯಿತೆಂದು ನೋಡಿ ಭಾರತೀಯ ಮುಖಂಡರು ಭಯಭರಿತರಾದರು. ಅಧ್ಯಕ್ಷ ಕ್ರೂಗರ್ ನನ್ನು ನೋಡಲು ಹೋದರೆ ಮನೆಯೊಳಕ್ಕೆ ಸಹ ಕರೆಯದೆ ಅಂಗಳದಲ್ಲಿಯೇ ನಿಲ್ಲಿಸಿದನು. ಸ್ವಲ್ಪ ಹೊತ್ತು ಅವರ ಮಾತನ್ನು ಕೇಳಿ "ನೀವು ಇಸ್ಮೇಲನ ವಂಶಿಕರು, ಆದ್ದರಿಂದ 'ಈಸಾ'ನ ವಂಶಿಕರಿಗೆ ಆಸ್ತಿ

ನಾವು ನಿಮ್ಮನ್ನು ಸರಿಸಮಾನಸ್ಕಂಧರೆಂದು ಗಣಿಸಿ ಸಮಾನ ಹಕ್ಕುಬಾಧ್ಯತೆಗಳನ್ನು ನಿಮಗೆ ಕೊಡಲು ಸಾಧ್ಯವಿಲ್ಲ. ನಾವು ಕೊಡುವಷ್ಟರಲ್ಲಿ ಮಾತ್ರ ನೀವು ತೃಪ್ತರಾಗ ಬೇಕು" ಎಂದು ಹೇಳಿಕಳುಹಿಸಿದನು. ಅಧ್ಯಕ್ಷ ಕ್ರೂಗರನು ಓದಿ ಕಲಿತದ್ದು ಹಳೆಯ ಬೈಬಲ್ ಅದರ ಕಥೆಗಳೆಲ್ಲವೂ ನಿಜವೆಂದೇ ಆತನ ನಂಬಿಕೆ. ತನ್ನ ಅಭಿಪ್ರಾಯಗಳು ಏನೇ ಇರಲಿ ಅವುಗಳನ್ನು ನಿರ್ಭಯವಾಗಿ ಹೇಳುವ ಮನುಷ್ಯನನ್ನು ದೂರುವುದು ಹೇಗೆ ? ಸ್ಪಷ್ಟೋಕ್ತಿಯಿದ್ದರೂ, ಮೂಢಭಾವನೆ ಇದ್ದರೆ ಕೇಡು ಖಂಡಿತ. ಪರಿಣಾಮವಾಗಿ ೧೮೮೫ ರಲ್ಲಿ, ಸಾವಿರಾರು ಜನ ಭಾರತೀಯರು ಎಲ್ಲಿ ಟ್ರಾನ್ಸ ವಾಲ್ ಪ್ರಾಂತವನ್ನು ಮುತ್ತಿಗೆ ಹಾಕುತ್ತಾರೊ ಎಂಬಂತೆ, 'ವೋಲ್ಸ್ಕ ರಾಡ್'ನಲ್ಲಿ ಒಂದು ಅವಸರದ ಉಗ್ರ ಶಾಸನವನ್ನು ಶಾಸನ ಕಡತಕ್ಕೆ ಏರಿಸಲಾಯಿತು. ಭಾರತೀಯ ಮುಖಂಡರ ಕೋರಿಕೆಯಂತೆ ಬ್ರಿಟಿಷ್ ಪ್ರತಿನಿಧಿ ಮಧ್ಯಸ್ಥಿಕೆ ವಹಿಸಬೇಕಾಯಿತು. ವಲಸೆ ರಾಷ್ಟ್ರಗಳ ಕಾರ್ಯದರ್ಶಿಗಳವರೆಗೂ ದೂರನ್ನು ಒಯ್ಯಬೇಕಾಯಿತು. ೧೮೮೫ನೆಯ ಇಸವಿಯ ಈ ೩ನೆಯ ಶಾಸನ ವಿಧಿಯಂತೆ ಟ್ರಾನ್ಸ್ ವಾಲ್ ರಿಪಬ್ಲಿಕ್‌ನಲ್ಲಿ ವ್ಯಾಪಾರ ನಡೆಸುತ್ತಿದ್ದ ಪ್ರತಿ ಭಾರತೀಯನೂ ೨೫ ಪೌಂಡುಗಳ ಶುಲ್ಕವನ್ನು ಕೊಟ್ಟು ರಿಜಿಸ್ಟರ್ ಮಾಡಿಸಿ ಕೊಳ್ಳಬೇಕಾಯಿತು, ಅನೇಕ ದಂಡಗಳಿಗೆ ಗುರಿಯಾಗಬೇಕಾಯಿತು. ಯಾವ ಭಾರತೀಯನೂ ಒಂದು ಅಂಗುಲ ಭೂಮಿಯನ್ನಾಗಲಿ ನಾಗರಿಕ ಹಕ್ಕುಗಳನ್ನಾಗಲಿ ಹೊಂದಲು ಅವಕಾಶವಿಲ್ಲವಾಯಿತು. ಅನ್ಯಾಯವೆಂದು ಸ್ಪಷ್ಟವಾಗಿ ಮೇಲೆದ್ದು ತೋರುವ ಈ ಮಸೂದೆಯನ್ನು ಸಮರ್ಥಿಸಲು ಟ್ರಾನ್ಸ್ ವಾಲ್ ಸರಕಾರಕ್ಕೆ ಬಾಯಿ ಇಲ್ಲದಾಯಿತು. ಲಂಡನ್ ಒಪ್ಪಂದದ ಹದಿನೈದನೆಯ ವಿಧಿಯಂತೆ ಬ್ರಿಟಿಷ್ ಪ್ರಜೆಗಳ ಹಕ್ಕುಗಳನ್ನು ಕಾಪಾಡುವುದಾಗಿ ಬೋಅರ್ ಗಳಿಗೂ ಬ್ರಿಟಿಷರಿಗೂ ಒಪ್ಪಂದವಾಗಿತ್ತು. ಮೇಲ್ಕಂಡ ಶಾಸನ ಈ ವಿಧಿಗೆ ವಿರೋಧವೆಂದು ಬ್ರಿಟಿಷರು ಆಕ್ಷೇಪಿಸಿದರು. ಬೋಅರ್ ಗಳು ಇದಕ್ಕೆ ಪ್ರತಿಯಾಗಿ ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಬ್ರಿಟಿಷ್ ಸರಕಾರ ಈ ಮಸೂದೆಗೆ ತನ್ನ ಒಪ್ಪಿಗೆಯನ್ನು ಕೊಟ್ಟಿರುವುದಾಗಿ ವಾದ ಹೂಡಿದರು.

ಈ ರೀತಿ ಬ್ರಿಟಿಷರಿಗೂ ಬೋಅರ್ ಗಳಿಗೂ ಒಂದು ವ್ಯಾಜ್ಯ ಬಂದು, ವಿವಾದವನ್ನು ಪಂಚಾಯಿತಿಗೆ ಒಪ್ಪಿಸಲಾಯಿತು. ಪಂಚಾಯಿತನ ತೀರ್ಮಾನ ಅಸಮರ್ಪಕವಾಗಿತ್ತು. ಆತನು ಇಬ್ಬರನ್ನೂ ಮೆಚ್ಚಿಸಲು ಪ್ರಯತ್ನಪಟ್ಟನು. ಭಾರತೀಯರಿಗೆ ಇದರಿಂದ ನಷ್ಟವಾಯಿತು. ಅದಕ್ಕೂ ಹೆಚ್ಚಿನ ನಷ್ಟ ತಪ್ಪಿತೆಂಬುದೊಂದೇ ಸಮಾಧಾನ. ಪಂಚಾಯಿತನ ತೀರ್ಮಾನದಂತೆ ೧೮೮೬ ರಲ್ಲಿ ಶಾಸನ ತಿದ್ದುಪಡಿಯಾಯಿತು. ರಿಜಿಸ್ಟ್ರೇಷನ್ ಶುಲ್ಕವನ್ನು ೨೫ ಪೌಂಡುಗಳಿಂದ ೩ ಪೌಂಡಿಗೆ ಇಳಿಸಲಾಯಿತು; ಭಾರತೀಯರು ಆಸ್ತಿಯನ್ನೇ ಕೊಳ್ಳಲಾಗದೆಂಬ ವಿಧಿಯನ್ನು ರದ್ದುಗೊಳಿಸಲಾಯಿತು; ಅದಕ್ಕೆ ಪ್ರತಿಯಾಗಿ ಟ್ರಾನ್ಸ್ ವಾಲ್ ಸರಕಾರ ಭಾರತೀಯರಿಗೆಂದು ಗೊತ್ತು ಮಾಡುವ ಸ್ಥಳ ಅಥವಾ ಬೀದಿಗಳಲ್ಲಿ ಆಸ್ತಿಯನ್ನು ಕೊಳ್ಳಬಹುದೆಂದು ವಿಧಿಸಲಾಯಿತು. ಆದರೆ ಸರಕಾರ ತಾನೇ ತಿದ್ದುಪಡಿ ಮಾಡಿದ ನಿಯಮವನ್ನು ಪಾಲಿಸಲಿಲ್ಲ. ಗೊತ್ತಾದ ಸ್ಥಳಗಳಲ್ಲಿಯೂ ಭಾರತೀಯರಿಗೆ

ಮಾಡಲು ಅವಕಾಶ ಕೊಡಲಿಲ್ಲ. ಭಾರತೀಯರು ಇರುವ ಪಟ್ಟಣಗಳಲ್ಲೆಲ್ಲ ನೀರು ಬೆಳಕುಗಳ ವ್ಯವಸ್ಥೆ ಇಲ್ಲದ ಅನಾರೋಗ್ಯಕರ ಸ್ಥಳಗಳಲ್ಲಿ ಊರಿನಿಂದ ದೂರವಾಗಿ ಅವರಿಗೆ ಸ್ಥಳವನ್ನು ಗೊತ್ತು ಮಾಡುತ್ತಿದ್ದರು. ಟ್ರಾನ್ಸ್ ವಾಲಿನಲ್ಲಿ ಭಾರತೀಯರು ಈ ರೀತಿ 'ಪಂಚಮ'ರಾದರು. ಭಾರತದ ಹೊಲಗೇರಿಗೂ ಟ್ರಾನ್ಸ್ ವಾಲಿನಲ್ಲಿ ಭಾರತೀಯರಿಗೆ ಕೊಟ್ಟ ಈ ಸ್ಥಳಗಳಿಗೂ ವಾಸ್ತವವಾಗಿ ಯಾವ ವ್ಯತ್ಯಾಸವೂ ಇರಲಿಲ್ಲ. ಪಂಚಮರನ್ನು ಮುಟ್ಟಿದರೆ ಅಥವಾ ಅವರ ಸಮೀಪ ವಾಸಮಾಡಿದರೆ ಮೈಲಿಗೆಯಾಗುವುದೆಂದು ಕುಲೀನ ಹಿಂದುಗಳು ಹೇಗೆ ಭಾವಿಸುವರೋ ಹಾಗೆಯೇ ಭಾರತೀಯರ ಸ್ಪರ್ಶ ಅಥವಾ ಸಮೀಪ ವಾಸ ಅಷ್ಟು ಹೊಲಸೆಂದು ಟ್ರಾನ್ಸ್ ವಾಲಿನ ಯೂರೋಪಿಯನರು ಕಾರ್ಯತಃ ನಂಬಿದ್ದರು. ಇದಲ್ಲದೆ ಪ್ರತ್ಯೇಕಗೊಳಿಸಿದ ಸ್ಥಳಗಳಲ್ಲಿ ಮಾತ್ರ ಭಾರತೀಯರು ವ್ಯಾಪಾರ ಮಾಡಬಹುದೆಂದು ೧೮೮೫ನೇಯ ಇಸವಿಯ ಮೂರನೆಯ ಶಾಸನದ ವಿಧಿಗೆ ಟ್ರಾನ್ಸ್ ವಾಲ್ ಸರಕಾರ ಅರ್ಥ ಮಾಡಿತು. ಪಂಚಾಯಿತನು ಶಾಸನದ ಅರ್ಥನಿರೂಪಣೆಯನ್ನು ಟ್ರಾನ್ಸ್‌ವಾಲಿನ ಸಾಮಾನ್ಯ ನ್ಯಾಯಸ್ಥಾನಗಳಿಗೆ ಒಪ್ಪಿಸಿದ್ದನು. ಆದ್ದರಿಂದ ಭಾರತೀಯ ವ್ಯಾಪಾರಿಗಳು ಬಹಳ ಇಕ್ಕಟ್ಟಿಗೆ ಸಿಕ್ಕಿದರು. ಆದರೂ ಒಂದೆಡೆ ಶಾಂತಿಸಂಧಾನ, ಇನ್ನೊಂದೆಡೆ ನ್ಯಾಯಸ್ಥಾನಗಳಲ್ಲಿ ವ್ಯವಹಾರ, ಮತ್ತೊಂದೆಡೆ ತಮ್ಮ ದಾಕ್ಷಿಣ್ಯ–ಈ ರೀತಿ ಬಹು ಬುದ್ಧಿವಂತಿಕೆಯಿಂದ ಭಾರತೀಯ ವ್ಯಾಪಾರಿಗಳು ತಮ್ಮ ಸ್ಥಾನಮಾನಗಳ ಸಂರಕ್ಷಣೆ ಮಾಡಿಕೊಳ್ಳುತ್ತಿದ್ದರು. ಬೋಅರ್ ಯುದ್ಧಾರಂಭದಲ್ಲಿ ಟ್ರಾನ್ಸ್ ವಾಲಿನಲ್ಲಿ ಭಾರತೀಯರ ಸ್ಥಿತಿ ನಿಜವಾಗಿಯೂ ಇಷ್ಟು ಕಷ್ಟತಮವೂ, ಭೀಕರವೂ ಆಗಿದ್ದಿತು.

ಇನ್ನು ಫ್ರೀಸ್ಟೇಟ್ ಕಡೆ ನೋಡೋಣ. ಇನ್ನೂ ಹತ್ತು ಹನ್ನೆರಡು ಜನ ಭಾರತೀಯರು ಅಂಗಡಿಗಳನ್ನು ಪ್ರಾರಂಭಿಸುವುದರಲ್ಲಿಯೇ ಯೂರೋಪಿಯನರು ಉಗ್ರಚಳುವಳಿ ಆರಂಭಿಸಿದರು. ವೋಲ್ಕ್ಸ್ ರಾಡಿನಲ್ಲಿ ಕ್ರೂರಶಾಸನವಾಗಿ, ನೆಪ ಮಾತ್ರದ ಪರಿಹಾರ ಕೊಟ್ಟು ಭಾರತೀಯರೆಲ್ಲರನ್ನೂ ದೇಶದಿಂದ ಹೊರಗಟ್ಟಿದರು. ಆ ಶಾಸನದಂತೆ ಫ್ರೀ ಸ್ಟೇಟಿನಲ್ಲಿ ಭಾರತೀಯನಾರೂ ವ್ಯಾಪಾರವನ್ನಾಗಲಿ, ವ್ಯವಸಾಯವನ್ನಾಗಲಿ ಅವಲಂಬಿಸಲು ಸಾಧ್ಯವಿರಲಿಲ್ಲ; ಆಸ್ತಿ ಮಾಡುವುದಕ್ಕಾಗಲಿ, ವೋಟು ಕೊಡುವುದಕ್ಕಾಗಲಿ ಅಧಿಕಾರವಿರಲಿಲ್ಲ. ಪ್ರತ್ಯೇಕ ಅಪ್ಪಣೆ ಪಡೆದು ಹೋಟೆಲ್ ನೌಕರನಾಗಿ ಅಥವಾ ಕೂಲಿಯಾಗಿ ಮಾತ್ರ ಇರಬಹುದಿತ್ತು. ಆದರೆ ಎಲ್ಲ ಸಂದರ್ಭಗಳಲ್ಲಿ ಅಧಿಕಾರಿಗಳು ಈ ಅಮೋಘವಾದ ಅಪ್ಪಣೆ ಸಹ ಕೊಡಬೇಕೆಂಬ ವಿಧಿ ಇರಲಿಲ್ಲ. ಇದರ ಪರಿಣಾಮವಾಗಿ ಯಾವ ಮರ್ಯಾದಸ್ಥ ಭಾರತೀಯನೂ ಫ್ರೀ ಸ್ಟೇಟಿನಲ್ಲಿ ಎರಡು ದಿನ ಸಹ ಇರಲು ಸಾಧ್ಯವಿರಲಿಲ್ಲ. ಬೋಅರ್ ಯುದ್ಧ ಕಾಲದಲ್ಲಿ ಕೆಲವು ಹೋಟೆಲು ನೌಕರರ ಹೊರತು ಬೇರೆ ಭಾರತೀಯರಾರು ಫ್ರೀಸ್ಟೇಟಿನಲ್ಲಿ ಇರಲಿಲ್ಲ.

ಕೇಪ್ ಕಾಲೋನಿಯಲ್ಲಿ ಸಹ ಭಾರತೀಯರ ಮೇಲೆ ವೃತ್ತ ಪತ್ರಿಕೆಗಳಲ್ಲಿ ವಿರುದ್ಧ ಚಳವಳಿ ನಡೆಯುತ್ತಿತ್ತು. ಅನೇಕ ವೇಳೆ ಅವಮಾನಗೊಳಿಸುವ ಸಂದರ್ಭಗಳು ಸಹ

ಒದಗುತ್ತಿದ್ದುವು. ಭಾರತಿಯರ ಮಕ್ಕಳಿಗೆ ಸಾರ್ವಜನಿಕ ಶಾಲೆಗಳಲ್ಲಿ ಪ್ರವೇಶವಿರಲಿಲ್ಲ; ಭಾರತೀಯರಿಗೆ ಹೋಟೆಲುಗಳಲ್ಲಿ ಸ್ಥಳ ದೊರೆಯುತ್ತಿರಲಿಲ್ಲ. ಆದರೆ ಬಹಳ ದಿನಗಳ ವರೆಗೆ ವ್ಯಾಪಾರಕ್ಕಾಗಲಿ, ಆಸ್ತಿಯನ್ನು ಕೊಳ್ಳುವುದಕ್ಕಾಗಲಿ ಯಾವ ಅಡ್ಡಿಯೂ ಇರಲಿಲ್ಲ.

ಇದಕ್ಕೆ ಬಲವಾದ ಕಾರಣಗಳಿದ್ದುವು. ಮುಖ್ಯವಾಗಿ ಕೇಪ್ ಟೌನಿನಲ್ಲಿ, ಸಾಮಾನ್ಯವಾಗಿ ಕೇಪ್ ಕಾಲೋನಿಯಲ್ಲಿ ಮಲಯ ಜನರ ಸಂಖ್ಯೆ ಹೆಚ್ಚು ಇತ್ತು. ಇವರೆಲ್ಲರೂ ಮುಸಲ್ಮಾನರೊಂದಿಗೂ, ಕ್ರಮೇಣ ಇತರ ಭಾರತೀಯರೊಂದಿಗೂ ಇವರ ಬಾಂಧವ್ಯ ಬೆಳೆಯಿತು. ಕೆಲವು ಭಾರತೀಯ ಮುಸಲ್ಮಾನರು ಮಲಯ ಹೆಂಗಸರನ್ನು ಮದುವೆ ಮಾಡಿಕೊಂಡರು. ಕೇಪ್ ಕಾಲೊನಿಯ ಸರಕಾರ ಮಲಯ ಜನರ ವಿರೋಧ ಶಾಸನ ಮಾಡುವುದಾದರೂ ಹೇಗೆ? ಕೇಪ್ ಕಾಲೊನಿಯೇ ಅವರ ಮಾತೃಭೂಮಿ. 'ಡಚ್' ಅವರ ಭಾಷೆ; ಮೊದಲಿನಿಂದಲೂ ಡಚ್ಚರೊಂದಿಗೆ ವಾಸ, ನಿತ್ಯಜೀವನದಲ್ಲಿ ಡಚ್ಚರ ಅನೇಕ ಪದ್ಧತಿಗಳ ಅನುಕರಣ. ಆದ್ದರಿಂದ ವರ್ಣದ್ವೇಷ ಬಹಳ ಕಡಿಮೆಯೆಂದರೆ ಕೇಪ್ ಕಾಲೋನಿಯಲ್ಲಿ ಮಾತ್ರ.

ಅದೂ ಅಲ್ಲದೆ ವಲಸೆ ರಾಜ್ಯಗಳಲ್ಲಿ ಕೇಪ್ ಕಾಲೊನಿಯೇ ಮೊದಲನೆಯದೂ ದ.ಆಫ್ರಿಕಚ ಸಂಸ್ಕೃತಿಯ ಕೇಂದ್ರವೂ ಆದ್ದರಿಂದ ಅಲ್ಲಿಯ ಯೂರೋಪಿಯನರಲ್ಲಿ ಸಮತಾದೃಷ್ಟಿಯೂ, ಹೃದಯ ವೈಶಾಲ್ಯವೂ ಕಂಡು ಬರುತ್ತಲಿತ್ತು. ನನ್ನ ಅಭಿಪ್ರಾಯದಲ್ಲಿ, ಸರಿಯಾದ ಅವಕಾಶವೂ ವಿದ್ಯಾಭ್ಯಾಸವು ದೊರೆತರೆ ಪ್ರಪಂಚದಲ್ಲಿ ಎಲ್ಲಿಯಾದರೂ, ಯಾವ ಜನಾಂಗದಲ್ಲಿಯಾದರೂ ಮಾನವಕುಲಕ್ಕೆ ರತ್ನಪ್ರಾಯರಾದವರು ಹುಟ್ಟಬಹುದು. ದ.ಆಫ್ರಿಕದ ಎಲ್ಲ ಭಾಗಗಳಲ್ಲೂ ಇಂತಹ ಮಾನವ ಶ್ರೇಷ್ಠರ ಪರಿಚಯ ಮಾಡಿಕೊಳ್ಳುವ ಭಾಗ್ಯ ನನ್ನ ಪಾಲಿಗೆ ಬಂದ ಪುಣ್ಯ. ಕೇಪ್ ಕಾಲೊನಿಯಲ್ಲಿ ಅಂತಹ ಮನುಷ್ಯರ ಸಂಖ್ಯೆ ಹೆಚ್ಚಾಗಿತ್ತು. ಇವರಲ್ಲೆಲ್ಲ ಅತಿ ಮೇಧಾವಿಗಳೂ, ಸುಪ್ರಸಿದ್ಧರೂ ಆದವರು ಮೆರಿಮನ್ ಎಂಬವರು. ಇವರು. ೧೮೭೨ ರಲ್ಲಿ ಕೇಪ್ ಕಾಲೋನಿಗೆ ಜವಾಬ್ದಾರಿ ಸರಕಾರ ಬಂದಂದಿನಿಂದ ಮೊದಲನೆಯ ಮಂತ್ರಿಮಂಡಲದಿಂದ ಕೊನೆಯವರೆಗೂ ಮಂತ್ರಿಗಳಾಗಿದ್ದರು; ೧೯೧೦ ರಲ್ಲಿಯೂ ಯೂನಿಯನ್ ಸರಕಾರ ಏರ್ಪಟ್ಟಾಗ ಮುಖ್ಯಮಂತ್ರಿಗಳಾಗಿದ್ದರು; ದಕ್ಷಿಣ ಆಫ್ರಿಕದ ಗ್ಲ್ಯಾಡ್ಸ್ ಟನ್ ಎಂದು ಇವರು ಪ್ರಖ್ಯಾತರಾಗಿದ್ದರು. ಅಲ್ಲದೆ ಮಾಲ್ಬಿನೊ ಮತ್ತು ಷ್ರೀನರ್ ಮನೆತನಗಳವರೂ ಅಷ್ಟೇ ಪ್ರಖ್ಯಾತರು. ೧೮೭೨ ರಲ್ಲಿ ಈ ವಲಸೆ ರಾಷ್ಟ್ರದ ಮುಖ್ಯಮಂತ್ರಿಗಳಾಗಿದ್ದವರು ಸರ್ ಜಾನ್ ಮಾಲ್ಬಿನೊರವರು. ಡಬ್ಲ್ಯೂ.ಸಿ.ಷ್ರೀನರ್ ಅವರು ಸುಪ್ರಸಿದ್ಧ ನ್ಯಾಯವಾಸಿಗಳು; ಕೆಲಕಾಲ ಅಟಾರ್ನಿ ಜನರಲ್ ಆಗಿದ್ದು ಅನಂತರ ಮುಖ್ಯಮಂತ್ರಿಗಳಾದರು. ಆತನ ಸಹೋದರಿ ಆಲಿವರ್ ಫ್ರಿನರ್ ಎಂಬಾಕೆ ದಕ್ಷಿಣ ಆಫ್ರಿಕದಲ್ಲಿ, ಇಂಗ್ಲಿಷ್ ಮಾತು ಬಳಕೆಯಿದ್ದ ಎಲ್ಲ ಕಡೆಗಳಲ್ಲಿ ಗೌರವಾನಿತ್ವಳಾದ ಗ್ರಂಥಕರ್ತಳು. 'ಸ್ವಪ್ನಗಳು' ಎಂಬ ಗ್ರಂಥ ಬರೆದು ಪ್ರಸಿದ್ಧಿಗೆ ಬಂದಳು. ಆಕೆಯ ಮಾನವ ಪ್ರೇಮಕ್ಕೆ ಮಿತಿಯೇ ಇರಲಿಲ್ಲ. ಆಕೆಯ ಕಣ್ಣುಗಳೇ ಆಕೆ ಪ್ರೇಮ ಮೂರ್ತಿ ಎಂದು ಸಾರುತ್ತಿದ್ದವು. ಕುಲೀನ ಮನೆತನಕ್ಕೆ

ಸೇರಿದವಳಾಗಿ, ವಿದ್ಯಾ ಪ್ರೌಢೆಯಾಗಿದ್ದರೂ ಬಹಳ ಸರಳಜೀವಿ; ತನ್ನ ಮನೆಯ ಪಾತ್ರೆಗಳನ್ನು ತಾನೇ ತೊಳೆಯುತ್ತಿದ್ದಳು. ಮೆರಿಮನ್, ಮಾಲ್ಟಿನೊ, ಷ್ರೀನರ್ ವಂಶದವರು ಯಾವಾಗಲೂ ನೀಗ್ರೊ ಪಕ್ಷಪಾತಿಗಳಾಗಿದ್ದರು. ನೀಗ್ರೊ ಜನರ ಹಕ್ಕಿಗೆ ಏನೇ ಆಘಾತ ಒದಗಿದರೂ ಇವರು ನೀಗ್ರೊ ಜನರ ಸಲುವಾಗಿ ಎದೆಗೊಟ್ಟು ಕಾದಾಡುತ್ತಿದ್ದರು. ನೀಗ್ರೊ ಜನರಿಗೂ ಭಾರತೀಯರಿಗೂ ಭೇದವನ್ನು ತೋರಿಸುತ್ತಿದ್ದರೂ, ಭಾರತೀಯರನ್ನೂ ದಯೆಯಿಂದ ಕಾಣುತ್ತಿದ್ದರು. ದಕ್ಷಿಣ ಆಫ್ರಿಕದಲ್ಲಿ ನೀಗ್ರೊ ಜನರು ಯೂರೋಪಿಯನರಿಗಿಂತ ಮುಂಚಿನಿಂದಲೂ ವಾಸ ಮಾಡುತ್ತಿದ್ದುದರಿಂದ ಯೂರೋಪಿಯನರು ನೀಗ್ರೊ ಜನರ ಸ್ವಭಾವಸಿದ್ಧವಾದ ಆ ಜನ್ಮಸಿದ್ಧ ಹಕ್ಕುಗಳನ್ನು ಕಸಿದುಕೊಳ್ಳಲಾಗದೆಂದು ಅವರ ವಾದ. ಭಾರತೀಯರ ಅತಿಯಾದ ಪೈಪೋಟಿಯನ್ನು ಹತೋಟಿಯಲ್ಲಿಡಲು ಶಾಸನ ಮಾಡಿದರೆ ತಪ್ಪಲ್ಲವೆಂದು ಅವರ ಭಾವನೆ. ಆದರೂ ಭಾರತೀಯರ ಮೇಲೂ ವಿಶ್ವಾಸವಿತ್ತು. ಗೋಖಲೆಯವರು ದಕ್ಷಿಣ ಆಫ್ರಿಕಕ್ಕೆ ಹೋದಾಗ, ಆಫ್ರಿಕದಲ್ಲಿ ಅವರಿಗೆ ಕೊಟ್ಟ ಸಾರ್ವಜನಿಕ ಸ್ವಾಗತಗಳಲ್ಲಿ ಮೊದಲನೆಯದು ಕೇಪ್ ಟೌನಿನಲ್ಲಿ. ನಗರಭವನದಲ್ಲಿ ಸೇರಿದ್ದ ಆ ಮಹಾಸಭೆಗೆ ಷ್ರೀನರರೇ ಅಧ್ಯಕ್ಷರಾಗಿದ್ದರು. ಮೆರಿಮನರೂ ಬಹಳ ಗೌರವದಿಂದ ಗೋಖಲೆಯವರನ್ನು ಕಂಡು ಭಾರತೀಯರ ಪರವಾಗಿ ಸಹಾನುಭೂತಿ ವ್ಯಕ್ತಪಡಿಸಿದರು. ಮೆರಿಮನರಂತೆ ಇನ್ನೂ ಅನೇಕ ಯೂರೋಪಿಯನರಿದ್ದರು. ಮಾದರಿಗಾಗಿ ಇಲ್ಲಿ ಈ ಹೆಸರುಗಳನ್ನು ಮಾತ್ರ ಹೇಳಿದ್ದೇನೆ.

ಕೇಪ್ ಕಾಲೊನಿಯ ವೃತ್ತಪತ್ರಿಕೆಗಳು ಸಹ, ದಕ್ಷಿಣ ಆಫ್ರಿಕದ ಇತರ ವೃತ್ತಪತ್ರಿಕೆಗಳಿಗಿಂತ ಭಾರತೀಯರಿಗೆ ಹೆಚ್ಚು ಸೌಹಾರ್ದವನ್ನು ತೋರಿಸುತ್ತಿದ್ದವು.

ಈ ಎಲ್ಲ ಕಾರಣಗಳಿಂದ ದಕ್ಷಿಣ ಆಫ್ರಿಕದ ಇತರ ಭಾಗಗಳಿಗಿಂತ ಕೇಪ್ ಕಾಲೊನಿಯಲ್ಲಿ ವರ್ಣದ್ವೇಷ ಕಡಿಮೆ ಇದ್ದುದು ನಿಜವಾದರೂ, ಇತರ ಕಾಲೋನಿಗಳಲ್ಲಿನ ಭಾರತೀಯರು ವಲಸೆ ಬರುವುದನ್ನು ತಡೆಯುವುದಕ್ಕೂ, ವರ್ತಕರು ರಹದಾರಿ ಪಡೆಯುವುದಕ್ಕೂ ಶಾಸನಗಳಾದವು

ಈ ರೀತಿ ಬೋಅರ್ ಯುದ್ಧದ ಹೊತ್ತಿಗೆ ಭಾರತೀಯರಿಗೆ ತೆರೆದಿದ್ದ ದಕ್ಷಿಣ ಆಫ್ರಿಕದ ಬಾಗಿಲು ಹೆಚ್ಚು ಕಡಮೆ ಮುಚ್ಚಿತು. ಟ್ರಾನ್ಸ್ವಾಲಿನಲ್ಲಿ ರಿಜಿಸ್ಟ್ರೇಷನ್ ಶುಲ್ಕ ಬಿಟ್ಟು ವಲಸೆಗಾರರ ಮೇಲೆ ಯಾವ ಅಡ್ಡಿಯೂ ಇರಲಿಲ್ಲ. ನೇಟಾಲ್ ಮತ್ತು ಕೇಪ್ ಕಾಲೋನಿಯ ಬಂದರಗಳು ಭಾರತೀಯರಿಗೆ ಮುಚ್ಚಿದ ಒಡನೆ, ಟ್ರಾನ್ಸ್ ವಾಲಿಗೆ ಹೋಗಲು ಸಹ ಬಂದರಿನಲ್ಲಿಳಿಯುವುದು ಕಷ್ಟವಾಯಿತು. ಪೋರ್ಚುಗೀಸ್ ಬಂದರಾದ ಡೆಲಗೋವ ಕೊಲ್ಲಿಯ ಬಂದರಿನ ಮುಖಾಂತರ ಹೋಗಬೇಕಾಗಿತ್ತು. ಆದರೆ ಪೋರ್ಚುಗೀಸರೂ ಇಂಗ್ಲಿಷರನ್ನು ಅನುಕರಿಸಿದರು. ಹಾಗೂ ಬಂದರುಗಳ ಅಧಿಕಾರಿಗಳಿಗೆ ಲಂಚ ಕೊಟ್ಟು, ಅನೇಕ ಕಷ್ಟಗಳನ್ನು ಅನುಭವಿಸಿ ನೇಟಾಲ್ ಮುಖಾಂತರವೂ,ಡೆಲಗೋವ ಕೊಲ್ಲಿಯ ಮುಖಾಂತರವೂ ಕೆಲವರು ಭಾರತೀಯರು ಟ್ರಾನ್ಸ್ ವಾಲನ್ನು ಸೇರಿದರು.

ಉದ್ದೇಶಪೂರ್ವಕವಾಗಿ ಅಗೌರಪಡಿಸಬೇಕೆಂದೇ ಆ ರೀತಿ ಕರೆಯುತ್ತಿದ್ದರು.

೬. ಸತ್ಯಾಗ್ರಹಕ್ಕೆ ಮುಂಚಿನ ಹೋರಾಟ

ಹಿಂದಿನ ಅಧ್ಯಾಯಗಳಲ್ಲಿ ಭಾರತೀಯರ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವಾಗ ತಮ್ಮ ಮೇಲಿನ ಹಲ್ಲೆಗಳನ್ನು ಅವರು ಯಾವ ರೀತಿ ಎದುರಿಸಿದರೆಂಬುದನ್ನು ತಕ್ಕಮಟ್ಟಿಗೆ ನೋಡಿದ್ದೇವೆ. ಆದರೂ ಸತ್ಯಾಗ್ರಹದ ಮೂಲವನ್ನು ಸರಿಯಾಗಿ ಗ್ರಹಿಸಬೇಕಾದರೆ ಸತ್ಯಾಗ್ರಹಕ್ಕೆ ಮುಂಚೆ ಭಾರತೀಯರು ತಮ್ಮ ಹಕ್ಕುಗಳ ರಕ್ಷಣೆಗಾಗಿ ಕೈಗೊಂಡ ಪ್ರಯತ್ನಗಳನ್ನು ವಿಶಾದಪಡಿಸುವುದು ಅವಶ್ಯ.

೧೮೯೩ ರವರೆಗೆ ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಪಕ್ಷವನ್ನು ವಹಿಸಿ ಹೋರಾಡತಕ್ಕ ಸ್ವಾತಂತ್ರ್ಯ ಪ್ರಿಯರೂ ವಿದ್ಯಾವಂತರೂ ಆದ ಭಾರತೀಯರು ಯಾರೂ ಇರಲಿಲ್ಲ. ಭಾರತೀಯರಲ್ಲಿ ಇಂಗ್ಲಿಷ್ ಬಲ್ಲವರೆಂದರೆ ಗುಮಾಸ್ತರು ಮಾತ್ರ; ಅವರಿಗಿದ್ದ ಇಂಗ್ಲಿಷ್ ಜ್ಞಾನ ಲೆಕ್ಕ ಬರೆಯುವ ಮಟ್ಟಿಗೆ ಮಾತ್ರ; ಅರ್ಜಿಗಳನ್ನು ಬರೆಯುವಷ್ಟು ಜ್ಞಾನವಾಗಲಿ, ತಮ್ಮ ಯಜಮಾನನ ಕೆಲಸ ಬಿಟ್ಟು ಇತರ ವಿಷಯಗಳ ಕಡೆಗೆ ಗಮನಕೊಡುವಷ್ಟು ಕಾಲವಾಗಲಿ ಅವರಿಗಿರಲಿಲ್ಲ. ಇನ್ನು ಕೆಲವರು ದಕ್ಷಿಣ ಆಫ್ರಿಕದಲ್ಲೇ ಹುಟ್ಟಿ ಬೆಳೆದವರು. ಇವರೆಲ್ಲರೂ ಕೂಲಿಗಾರರ ಸಂತತಿಯವರಾಗಿ ನ್ಯಾಯಸ್ಥಾನಗಳಲ್ಲಿ ಸರಕಾರಿ ನೌಕರಿಯಲ್ಲಿ ಭಾಷಾಂತರಕಾರರಾಗಿದ್ದ ಕಾರಣ ಭಾರತೀಯರಿಗೆ ಮಾತಿನಲ್ಲಿ ಸಹಾನುಭೂತಿಯನ್ನು ತೋರುತ್ತಿದ್ದರೇ ಹೊರತು ಇತರ ಯಾವ ಸಹಾಯವನ್ನೂ ಮಾಡುವಂತೆ ಇರಲಿಲ್ಲ.

ವಾಯಿದೆ ಕೂಲಿಗೂ, ವಾಯಿವಿಮುಕ್ತ ಕೂಲಿಗಳೂ ಮುಖ್ಯವಾಗಿ ಸಂಯುಕ್ತ ಪ್ರಾಂತ ಮತ್ತು ಮದರಾಸ್ ಕಡೆಗಳಿಂದ ಬಂದವರು; ಆದರೆ ಸ್ವತಂತ್ರರಾಗಿ ವ್ಯಾಪಾರ ಮತ್ತು ಗುಮಾಸ್ತೆ ಕೆಲಸಗಳಿಗಾಗಿ ಬಂದ ಮುಸಲ್ಮಾನ ವರ್ತಕರು ಮತ್ತು ಹಿಂದೂ ಗುಮಾಸ್ತರು ಎಲ್ಲರೂ ಗುಜರಾತಿನವರು. ಕೆಲವು ಜನ ಪಾರ್ಸಿ ವರ್ತಕರೂ ಗುಮಾಸ್ತರೂ ಇದ್ದರೂ ಅವರ ಸಂಖ್ಯೆ ೩೦-೪೦ ಕ್ಕಿಂತ ಹೆಚ್ಚು ಇರಲಿಲ್ಲ. ಭಾರತದ ಹೊರಗೆ ಸಿಂಧು ದೇಶದ ವರ್ತಕನು ಎಲ್ಲೇ ಇರಲಿ ಆತನ ವ್ಯಾಪಾರ ಮುಖ್ಯವಾಗಿ ರೇಷ್ಮೆ ಮತ್ತು ಕಸೂತಿ ಬಟ್ಟೆಗಳು, ಕೆತ್ತನೆ ಪೆಟ್ಟಿಗೆಗಳು, ಎಬೊನಿ, ಗಂಧ, ದಂತ ಮುತಾದ ಮೋಹಕ ವಸ್ತುಗಳು- ಇವುಗಳಿಗೆ ಸಂಬಂಧಪಟ್ಟದ್ದು. ಆತನ ಗಿರಾಕಿಗಳೆಲ್ಲರೂ ಮುಖ್ಯವಾಗಿ ಯೂರೋಪಿಯನ್ ಜನರು.

ವಾಯಿದೆ ಕೆಲಸಗಾರರನ್ನು ಯೂರೋಪಿಯನ್ ಜನರು ಕೂಲಿಗಳೆಂದು ಕರೆಯುತ್ತಿದ್ದರು. ಕೂಲಿ ಎಂದರೆ ಸಾಮಾನು ಹೊರುವವನು. ಈ ಶಬ್ದ ಎಷ್ಟು ಬಳಕೆಗೆ ಬಂದಿತೆಂದರೆ ವಾಯಿದೆ ಕೆಲಸಗಾರರೆಲ್ಲ ಕೂಲಿ ಎಂದೇ ತಮ್ಮ ವಿಳಾಸವನ್ನು ಬರೆಯಿಸತೊಡಗಿದರು. ಭಾರತೀಯ ನ್ಯಾಯವಾದಿಗಳನ್ನೂ ವರ್ತಕರನ್ನೂ ನೂರಾರು ಯೂರೋಪಿಯನರು ಕೂಲಿ ಲಾಯರುಗಳೆಂದೂ, ಕೂಲಿ ವರ್ತಕರೆಂದೂ ಕರೆಯುತ್ತಿದ್ದರು. ಹಾಗೆ ಕರೆಯುವುದು ಅವಮಾನವೆಂದು ನಂಬಲಾರದ ಅಥವಾ ಭಾವಿಸಲಾರದ ಯೂರೋಪಿಯನರು ಕೆಲವರಿದ್ದರು. ಆದರೆ ಅನೇಕರು

ಆದ್ದರಿಂದ ಸ್ವತಂತ್ರರಾದ ಭಾರತೀಯರು ಕೂಲಿಗಳಿಂದ ಬೇರೆಯಾಗಲು ಪ್ರಯತ್ನಿಸಿದರು. ಇದು ಮತ್ತು ಇನ್ನಿತರ ಕಾರಣಗಳಿಂದ ಬೇರೆಯಾಗಲು ಪ್ರಯತ್ನಿಸಿದರು. ಇದು ಮತ್ತು ಇನ್ನಿತರ ಕಾರಣಗಳಿಂದ ಒಂದು ಕಡೆ ವಾಯಿದೆ ಕೆಲಸಗಾರರು ಮತ್ತು ವಾಯಿದೆವಿಮುಕ್ತ ಕೆಲಸಗಾರರಿಗೂ ಇನ್ನೊಂದು ಕಡೆ ಸ್ವತಂತ್ರ ಭಾರತೀಯರಿಗೂ ಪರಸ್ಪರ ಭೇದಭಾವನೆಗೆ ಪ್ರಾರಂಭವಾಯಿತು.

ಸ್ವತಂತ್ರ ಭಾರತೀಯರು, ಅದರಲ್ಲೂ ಮುಸಲ್ಮಾನ ವರ್ತಕರು ಮೇಲೆ ಹೇಳಿದ ಅನ್ಯಾಯಗಳನ್ನು ಎದುರಿಸಲು ನಿಶ್ಚಯಿಸಿದರು. ಆದರೆ ವಾಯಿದೆ ಕೆಲಸಗಾರರ ಮತ್ತು ವಾಯಿದೆವಿಮುಕ್ತ ಕೆಲಸಗಾರರ ಸಹಕಾರ ಪಡೆಯಲು ಅವರು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಪ್ರಾಯಶಃ ಅವರ ಸಹಾಯ ಪಡೆಯಬೇಕೆಂದು ಯಾರಿಗೂ ಹೊಳೆದಿರಲಿಕ್ಕಿಲ್ಲ; ಹೊಳೆದಿದ್ದರೂ ಕೆಲಸಗಾರರನ್ನು ತಮ್ಮ ಚಳವಳೀಗೆ ಸೇರಿಸಿಕೊಂಡರೆ ಆದರಿಂದ ತೊಂದರೆಯಾಗಬಹುದೆಂದು ಅವರ ಅಭಿಪ್ರಾಯವಿರಬಹುದು. ಯೂರೋಪಿಯನರ ಚಳವಳಿಯೆಲ್ಲ ಭಾರತೀಯ ವರ್ತಕರ ಮೇಲೆ ಕೇಂದ್ರೀಕೃತ ವಾದ್ದರಿಂದ ಚಳವಳಿಯ ವಿರೋಧ ರಕ್ಷಣಾ ಕಾರ್ಯಕ್ರಮಗಳೆಲ್ಲವನ್ನೂ ಅವರೇ ತೆಗೆದುಕೊಂಡರು. ಭಾರತ ದೇಶದಲ್ಲಿ ಸಾರ್ವಜನಿಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಅನುಭವವಿಲ್ಲದೆ, ಇಂಗ್ಲಿಷ್ ವಿದ್ಯಾಭ್ಯಾಸವಿಲ್ಲದೆ ಬಹಳ ಅನನುಕೂಲದಲ್ಲಿದ್ದರೂ ಸ್ವತಂತ್ರ ಭಾರತೀಯರು ನಿಜವಾಗಿಯೂ ಧೈರ್ಯದಿಂದ ಕಷ್ಟಗಳನ್ನು ಎದುರಿಸಿದರು. ಯೂರೋಪಿಯನ್ ನ್ಯಾಯವಾದಿಗಳನ್ನಿಟ್ಟು, ಅರ್ಜಿಗಳನ್ನು ಬರೆಯಿಸಿ, ಕೆಲವು ವೇಳೆ ಅಧಿಕಾರಿಗಳೆದುರಿಗೆ ನಿಯೋಗಗೋಷ್ಠಿ ಹೋಗಿ, ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಲು ಕೈಲಾದ ಎಲ್ಲ ಪ್ರಯತ್ನವನ್ನೂ ಮಾಡಿದರು. ೧೮೯೩ ರ ವರೆಗೆ ಇದೇ ಸ್ಥಿತಿ ಇತ್ತು.

ಕೆಲವು ತಾರೀಖುಗಳನ್ನು ವಾಚಕರು ಜ್ಞಾಪಕದಲ್ಲಿಡುವುದು ಒಳ್ಳೆಯದು. ೧೮೯೩ ಕ್ಕೆ ಮುಂಚೆಯೇ ಭಾರತೀಯರಿಗೆ ಆರೆಂಜ್ ಫ್ರೀ ಸ್ಟೇಟನಿಂದ ಉಚ್ಚಾಟನೆಯಾಯಿತು. ಟ್ರಾನ್ಸ್ ವಾಲಿನಲ್ಲಿ ೧೮೮೫ನೆಯ ಶಾಸನದ ૩ನೆಯ ವಿಧಿ ಜಾರಿಯಲ್ಲಿತ್ತು. ನೇಟಾಲಿನಲ್ಲಿ ವಾಯಿದೆ ಕೆಲಸಗಾರರನ್ನು ಮಾತ್ರ ಬಿಟ್ಟು ಉಳಿದವರನ್ನು ಕಾಲೊನಿಯಿಂದ ಹೊರಡಿಸುವ ಕಾನೂನು ಮಾಡಬೇಕೆಂದಿದ್ದರು; ಅದೇ ಉದ್ದೇಶದಿಂದ ಜವಾಬ್ದಾರಿ ಸರಕಾರವನ್ನೂ ಸಂಪಾದಿಸಿದ್ದರು.

ನಾನು ೧೮೯೩ ನೆಯ ಎಪ್ರಿಲ್ ನಲ್ಲಿ ಭಾರತದೇಶ ಬಿಟ್ಟು ದಕ್ಷಿಣ ಆಫ್ರಿಕಕ್ಕೆ ಹೊರಟೆ. ವಲಸೆ ಹೋದ ಭಾರತೀಯರ ಪೂರ್ವಚರಿತ್ರೆ ಯಾವುದೂ ಗೊತ್ತಿರಲಿಲ್ಲ. ನನ್ನ ವಕೀಲಿ ವೃತ್ತಿಯ ಕೆಲಸಕ್ಕಾಗಿ ಮಾತ್ರ ನಾನು ಅಲ್ಲಿಗೆ ಯೋದುದು. ಪೋರ್ ಬಂದರಿನ ಮೆಮನ್ ವ್ಯಾಪಾರಿಗಳೊಬ್ಬರು ಡರ್ಬಾನಿನಲ್ಲಿ ದಾದಾ ಅಬ್ದುಲ್ಲಾ ಎಂಬ ಹೆಸರಿನಿಂದ ಅಂಗಡಿ ಇಟ್ಟು ವ್ಯಾಪಾರ ಮಾಡುತ್ತಿದ್ದರು. ಪ್ರೆಟೋರಿಯಾದಲ್ಲಿ ತಾಯಿಬ್ ಹಾಜಿಖಾನ್ ಮಾಮದ್ ಎಂಬ ಹೆಸರಿನಿಂದ ಅಷ್ಟೇ ಪ್ರಖ್ಯಾತರಾದ ಇನ್ನೊಬ್ಬ ವರ್ತಕರು

ಇವರಿಗೆ ಪ್ರತಿಕಕ್ಷಿಯಾಗಿ ವ್ಯಾಪಾರಮಾಡುತ್ತಿದ್ದರು. ದುರದೃಷ್ಟವಶಾತ್ ಇವರಿಬ್ಬರಿಗೂ ಒಂದು ವ್ಯಾಜ್ಯಬಿದ್ದು ನ್ಯಾಯಸ್ಥಾನ ಹತ್ತಿದರು. ಪೋರ್ ಬಂದರಿನ ದಾದಾ ಅಬ್ದುಲ್ಲಾನ ಪಾಲುಗಾರನು ಆ ವ್ಯಾಜ್ಯ ನಡೆಸಲು ನನ್ನನ್ನು ಕಳುಹಿಸಿದರೆ ತಮಗೆ ಅನುಕೂಲವಾಗ ಬಹುದೆಂದು ಯೋಚಿಸಿದನು. ನಾನು ಆಗ ತಾನೆ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದ್ದೆ. ವೃತ್ತಿಯ ಅನುಭವ ಏನೂ ಇರಲಿಲ್ಲ. ನಾನು ಮೊಕದ್ದಮೆಗೆ ಹಾಜರಾಗುವುದರಿಂದ ಮೊಕದ್ದಮೆ ಕೆಡುವುದೆಂಬ ಭಯವೇನೂ ಆತನಿಗೆ ಇರಲಿಲ್ಲ. ವ್ಯಾಜ್ಯವನ್ನು ನಾನೇ ನಡೆಸಬೇಕಾಗಿರಲಿಲ್ಲ. ಆತನ ಕಡೆಯ ದಕ್ಷಿಣ ಆಫ್ರಿಕದ ನ್ಯಾಯವಾದಿಗಳಿಗೆ ನನ್ನ ಸಲಹೆಗಳನ್ನು ಕೊಟ್ಟರೆ ಸಾಕಾಗಿತ್ತು. ಹೊಸ ಅನುಭವದ ಆಸೆ ನನಗೆ ಬಹಳವಿತ್ತು. ಹೊಸ ಸನ್ನಿವೇಶಗಳ ಪರಿಚಯ ಮಾಡಿಕೊಳ್ಳಬೇಕೆಂಬ ಕುತೂಹಲವಿತ್ತು. ಕಾಥಿಯಾವಾಡದ ಫಿತೂರಿಯ ವಾತಾವರಣದಲ್ಲಿ ನನಗೆ ಉಸಿರುಕಟ್ಟಿದಂತೆ ಇತ್ತು. ಒಂದು ವರ್ಷದವರೆಗೆ ಮಾತ್ರ ನನ್ನ ಒಪ್ಪಂದವಿತ್ತು. ಆಫ್ರಿಕಕ್ಕೆ ಹೋಗಲು ಇಷ್ಟವಿಲ್ಲವೆಂದು ಹೇಳಲು ನನಗೇನೂ ಅಭ್ಯಂತರವಿರಲಿಲ್ಲ. ನನಗೆ ಹೋಗಿ ಬರುವ ಮತ್ತು ದಕ್ಷಿಣ ಆಫ್ರಿಕದಲ್ಲಿರುವವರೆಗಿನ ಖರ್ಚುಗಳನ್ನು ಕೊಟ್ಟು, ನನ್ನ ರುಸುಮಿಗಾಗಿ ೧೦೫ ಪೌಂಡುಗಳನ್ನು ಕೊಡುವುದಾಗಿ ದಾದಾ ಅಬ್ದುಲ್ಲಾ ಅಂಗಿಯವರು ಒಪ್ಪಿದ್ದರಿಂದ ನನಗೆ ಯಾವ ನಷ್ಟವೂ ಇರಲಿಲ್ಲ. ನನಗೆ ತಂದೆಯಂತೆ ಇದ್ದು, ಈಗ ಗತಿಸಿರುವ ನನ್ನ ಅಣ್ಣಂದಿರು ಈ ಒಪ್ಪಂದ ಮಾಡಿದ್ದರು. ಅವರ ಮಾತು ನನಗೆ ವೇದವಾಕ್ಯ. ನಾನು ದಕ್ಷಿಣ ಆಫ್ರಿಕಕ್ಕೆ ಹೋಗಬೇಕೆಂದು ಅವರು ಇಷ್ಟಪಟ್ಟರು. ಅದರಂತೆ ೧೮೯೩ನೆಯ ಮೇ ತಿಂಗಳಲ್ಲಿ ನಾನು ಡರ್ಬಾನ್ ನಗರವನ್ನು ಸೇರಿದೆ.

ಬ್ಯಾರಿಸ್ಟರ್ ಪರೀಕ್ಷೆ ಮಾಡಿದ್ದುದರಿಂದ ನನ್ನ ದೃಷ್ಟಿಯಂತೆ ಒಳ್ಳೆಯ ಬಟ್ಟೆಯನ್ನೇ ಧರಿಸಿ ಸ್ವಲ್ಪ ಅಹಂಭಾವನೆಯಿಂದ ಡರ್ಬಾನಿನಲ್ಲಿ ಹಡಗು ಇಳಿದೆ. ಆದರೆ ಸ್ವಲ್ಪದರಲ್ಲಿಯೇ ನನಗೆ ಜ್ಞಾನೋದಯವಾಯಿತು. ನನ್ನ ಕಕ್ಷಿಗಾರನಾದ ದಾದಾ ಅಬ್ದುಲ್ಲಾನ ಪಾಲುಗಾರನು ನೇಟಾಲಿನ ಸ್ಥಿತಿಗತಿಗಳನ್ನು ತಿಳಿಸಿದ್ದನು. ಆದರೆ ನಾನು ಕಣ್ಣಾರೆ ಕಂಡ ಚಿತ್ರಕ್ಕೂ ಆತನ ಹೇಳಿಕೆಗೂ ಯಾವ ಸೌಮ್ಯವೂ ಇರಲಿಲ್ಲ. ಅದರಲ್ಲಿ ಅವರ ತಪ್ಪು ಏನೂ ಇರಲಿಲ್ಲ. ವಸ್ತುಸ್ಥಿತಿ ಆತನಿಗೂ ತಿಳಿದಿರಲಿಲ್ಲ. ತನಗೆ ತಿಳಿದುದನ್ನು ನಿರ್ವಂಚನೆಯಿಂದ ತಿಳಿಸುವ ಸಾಧು ಪ್ರಕೃತಿ ಆತನದು. ನೇಟಾಲಿನಲ್ಲಿ ಭಾರತೀಯರ ಕಷ್ಟವೇನೆಂಬುದರ ಅರಿವು ಆತನಿಗೆ ಎಳ್ಳಷ್ಟೂ ಇರಲಿಲ್ಲ. ಅಲ್ಲಿನ ಅವಮಾನಕರ ಸನ್ನಿವೇಶಗಳು ಆತನ ದೃಷ್ಟಿಯಲ್ಲಿ ಅಗೌರವೆಂದೂ ತೋರಲಿಲ್ಲ. ನಾನು ಹೋದ ಮೊದಲನೆಯ ದಿನವೇ ಯೂರೋಪಿಯನರು ಭಾರತೀಯರನ್ನು ತುಚ್ಛವಾಗಿ ಕಂಡುದನ್ನು ನೋಡಿದೆ.

ನಾನು ಹೋಗಿ ಸೇರಿದ ಹದಿನೈದು ದಿವಸಗಳಲ್ಲಿಯೇ, ನ್ಯಾಯಾಸ್ಥಾನದ ನನ್ನ ಅನುಭವ, ರೈಲು ಗಾಡಿಗಳಲ್ಲಿ ನನಗೆ ಕೊಟ್ಟ ತೊಂದರೆ, ಮಧ್ಯ ದಾರಿಯಲ್ಲಿ ತಿಂದ ಏಟು, ಹೋಟೆಲುಗಳಲ್ಲಿ ಸ್ಥಳ ದೊರೆಯಲು ಪಟ್ಟ ಕಷ್ಟ ಮತ್ತು ಸ್ಥಳ ದೊರೆಯದ ಅನುಭವ ಇವು ಯಾವುವನ್ನೂ ಇಲ್ಲಿ ಹೇಳುವುದಿಲ್ಲ. ಅನುಭಗಳೆಲ್ಲ ನನಗೆ

ರಕ್ತಗತವಾದುವೆಂದರೆ ಸಾಕು. ಸ್ವಾರ್ಥದೃಷ್ಟಿ ಮತ್ತು ದೇಶ ನೋಡಬೇಕೆಂಬ ಕುತೂಹಲದಿಂದ ಒಂದು ವಿವಾದ ನೆಲಸಲು ಅಲ್ಲಿಗೆ ನಾನು ಹೋಗಿದ್ದೆ. ಮೊದಲನೆಯ ವರ್ಷ ಈ ಕ್ರೂರ ವರ್ತನೆಗಳನ್ನು ಕಣ್ಣಾರೆ ಕಂಡುದಲ್ಲದೆ ಸ್ವತಃ ಅನುಭವಿಸಿದೆ. ಆಗ ನನಗೆ ಕರ್ತವ್ಯದ ಜ್ಞಾನೋದಯವಾಯಿತು, ಸ್ವಾರ್ಥದೃಷ್ಟಿಯಿಂದ ದಕ್ಷಿಣ ಆಫ್ರಿಕದಲ್ಲಿ ನನಗೆ ಯಾವ ಉಪಯೋಗವೂ ಇಲ್ಲವೆಂದು ಭಾವಿಸಿದೆ. ಎಲ್ಲಿ ಗೌರವವಿಲ್ಲವೊ ಆ ದೇಶದಲ್ಲಿ ಹಣ ಸಂಪಾದಿಸುವುದಿರಲಿ, ವಾಸವಾಗಿರಲು ಇಷ್ಟವಿರುವುದೂ ಹಾಗಿರಲಿ, ನಿಜವಾಗಿಯೂ ಜುಗುಪ್ಸೆ ಸಹ ಹುಟ್ಟಿತು. ಆಗ ನನ್ನ ಸ್ಥಿತಿ ಮುಳ್ಳಿನ ಮೇಲೆ ನಿಂತಂತೆ ಇತ್ತು. ನನಗೆ ಆಗ ಇದ್ದುದು ಎರಡು ದಾರಿ. ಅಲ್ಲಿನ ಸ್ಥಿತಿಗತಿಗಳನ್ನು ಸರಿಯಾಗಿ ತಿಳಿಸದೆ ನನ್ನನ್ನು ಕರೆತಂದುದರಿಂದ ಇರಲು ಇಷ್ಟವಿಲ್ಲವೆಂದು ಹೇಳಿ, ದಾದಾ ಅಬ್ದುಲ್ಲಾ ಅಂಗಡಿಯವರ ಒಪ್ಪಂದದಿಂದ ನಿವೃತ್ತನಾಗಿ ಮರಳಿ ಭಾರತಕ್ಕೆ ಬರುವುದು; ಅಥವಾ ಎಲ್ಲ ಕಷ್ಟವನ್ನೂ ಸಹಿಸಿಕೊಂಡು ನನ್ನ ಒಪ್ಪಂದವನ್ನು ಪಾಲಿಸಿಕೊಂಡು ಬರುವುದು. ಮಾರಿಷ್ ಬರ್ಗನಲ್ಲಿ ಒಬ್ಬ ಪೋಲೀಸಿನವನು ನನ್ನನ್ನು ರೈಲುಗಾಡಿಯಿಂದ ಹೊರದೂಡಿದನು. ರೈಲು ಹೊರಟುಹೋದ್ದರಿಂದ ಪ್ರಯಾಣಿಕರ ಕೊಠಡಿಯಲ್ಲಿ ಕೊರೆಯುವ ಚಳಿಯಲ್ಲಿ ನಡುಗುತ್ತ ಕುಳಿತಿರಬೇಕಾಯಿತು. ನನ್ನ ಸಾಮಾನು ಎಲ್ಲಿದೆ ಎಂಬುದೂ ನನಗೆ ಗೊತ್ತಿರಲಿಲ್ಲ; ಪುನಃ ಅವಮಾನಗೊಳಿಸಿ ಹೊಡೆದರೆಂದು ಯಾರನ್ನೂ ವಿಚಾರಿಸಲಿಲ್ಲ. ಸಂಶಯ ನನ್ನ ಮನಸ್ಸನ್ನು ಆವರಿಸಿತು. ನಡುರಾತ್ರಿಯಲ್ಲಿ, ಭಾರತಕ್ಕೆ ಓಡಿಹೋಗುವುದು ಹೇಡಿತನವೆಂದು ತೀರ್ಮಾನಿಸಿದೆ. ನಾನು ಕೈಗೊಂಡ ಕೆಲಸ ಪೂರೈಸಲೇಬೇಕು. ಎಷ್ಟೇ ಅವಮಾನವಾಗಲಿ, ಏಟು ತಿನ್ನಲಿ, ಪ್ರೆಟೋರಿಯಾ ಸೇರಬೇಕು; ಪ್ರೆಟೋರಿಯಾ ನನ್ನ ಗುರಿ. ಅಲ್ಲಿಯೇ ವ್ಯಾಜ್ಯ ನಡೆಯುತ್ತ ಇದ್ದುದು. ನನ್ನ ಕೆಲಸದೊಂದಿಗೆ ಸಾಧ್ಯವಾದರೆ ಇನ್ನೂ ಕೆಲವು ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ನಿರ್ಧರಿಸಿದೆ. ಈ ನಿರ್ಧಾರ ನನ್ನ ಮನಸ್ಸಿಗೆ ಸ್ವಲ್ಪ ಶಾಂತಿಯನ್ನುಂಟು ಮಾಡಿ ಮನಸ್ಥೈರ್ಯವನ್ನು ಕೊಟ್ಟಿತು. ಆದರೆ ನಿದ್ರೆ ಮಾತ್ರ ಬರಲಿಲ್ಲ.

ಬೆಳಗಾಗುತ್ತಲೆ ದಾದಾ ಅಬ್ದುಲ್ಲಾ ಅವರ ಅಂಗಡಿಯವರಿಗೂ, ರೇಲ್ವೆ ಜನರಲ್ ಮ್ಯಾನೇಜರವರಿಗೂ ಟೆಲಿಗ್ರಾಂ ಕೊಟ್ಟೆ. ಇಬ್ಬರೂ ಉತ್ತರ ಕೊಟ್ಟರು. ದಾದಾ ಅಬ್ದುಲ್ಲಾ ಮತ್ತು ಆಗ ನೇಟಾಲಿನಲ್ಲಿದ್ದ ಅವರ ಪಾಲುದಾರರಾದ ಸೇಟ್ ಅಬ್ದುಲ್ಲಾ ಹಾಜಿ ಆದಂ ಝೂವೇರಿಯವರು ಉಗ್ರ ಪ್ರತಿಭಟನೆಯ ಕಾರ್ಯಕ್ರಮವನ್ನು ಕೈಗೊಂಡರು. ಬೇರೆ ಬೇರೆ ಸ್ಥಳದ ತಮ್ಮ ಭಾರತೀಯ ಪ್ರತಿನಿಧಿಗಳಿಗೆ ನನ್ನ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳಬೇಕೆಂದು ತಂತಿಕೊಟ್ಟರು. ಅದರಂತೆ ಜನರಲ್ ಮ್ಯಾನೇಜರರನ್ನೂ ನೋಡಿದರು. ಅಲ್ಲಿನ ಪ್ರತಿನಿಧಿಗೆ ಬಂದ ತಂತಿ ವರ್ತಮಾನದ ಮೇಲೆ ಮಾರಿಷ್‌ಬರ್ಗನ ಭಾರತೀಯ ವರ್ತಕರು ನನ್ನನ್ನು ನೊಡಲು ಬಂದರು. ನನ್ನಂತೆ ಅವರೆಲ್ಲರೂ ಸಂಕಟಕ್ಕೀಡಾಗಿರುವುದಾಗಿಯೂ, ಆದರೆ ಅವರ ಪಾಲಿಗೆ ಅದು ಸರ್ವಸಾಮಾನ್ಯವಾದ ಕಾರಣ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲವಾಗಿಯೂ ಹೇಳಿ ನನ್ನನ್ನು ಸಮಾಧಾನ ಪಡಿಸಲು

ಪ್ರಯತ್ನಪಟ್ಟರು. ವ್ಯಾಪಾರಕ್ಕೂ ಮಾನಮರ್ಯಾದೆಗಳಿಗೂ ಬಹುದೂರ. ದುಡ್ಡನ್ನು ಜೇಬಿಗೆ ಸೇರಿಸಿದಂತೆ ಅಗೌರವವನ್ನೂ ಸಹಿಸಬೇಕೆಂದು ನಿರ್ಧರಿಸಿದ್ದರು. ಭಾರತೀಯರು ಮುಖ್ಯ ಬಾಗಿಲಿನಿಂದ ರೇಲ್ವೆ ಸ್ಟೇಷನ್‌ಗಳಿಗೆ ಹೋಗಲು ಅವಕಾಶವಿಲ್ಲದುದನ್ನೂ ಟಿಕೆಟ್ ತೆಗೆದುಕೊಳ್ಳಲು ಅವರಿಗಿರುವ ಕಷ್ಟವನ್ನೂ ವಿವರಿಸಿದರು. ಅದೇ ರಾತ್ರಿ ಪ್ರೆಟೋರಿಯಾಕ್ಕೆ ಹೊರಟೆ. ಸರ್ವ ಪರೀಕ್ಷಕನಾದ ಭಗವಂತನು ನನ್ನ ದೃಢಪ್ರತಿಜ್ಞೆಯನ್ನು ಇನ್ನೂ ಒರೆಗ ಹಚ್ಚಿದನು. ಪ್ರೆಟೋರಿಯಾ ಸೇರುವ ಮುಂಚೆ ದಾರಿಯಲ್ಲಿ ನನಗೆ ಇನ್ನೂ ಅವಮಾನವಾಗಿ ಏಟುಗಳು ಬಿದ್ದುವು. ಇವೆಲ್ಲವೂ ನನ್ನ ಪ್ರತಿಜ್ಞೆಯನ್ನು ಇನ್ನೂ ದೃಢಪಡಿಸಿದುವು.

ಈ ರೀತಿ ೧೮೯೩ ರಲ್ಲಿ, ದಕ್ಷಿಣ ಆಫ್ರಿಕದಲ್ಲಿ ಭಾರತೀಯರಿಗೆ ಇದ್ದ ಕಷ್ಟಗಳು ನನಗೆ ಸ್ವತಃ ಪೂರ್ಣ ಅನುಭವವಾದುವು. ಈ ವಿಷಯ ಭಾರತೀಯರೊಂದಿಗೆ ಆಗಾಗ್ಗೆ ಮಾತುಕತೆ ನಡೆಸಿದೆನೇ ಹೊರತು ಬೇರೆ ಏನೂ ಮಾಡಲಿಲ್ಲ ಅಂಗಡಿಯ ವಿವಾದ ನೋಡಿಕೊಂಡು ಅದೇ ಸಮಯದಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ಕುಂದುಕೊರತೆಗಳ ಪ್ರಶ್ನೆಯನ್ನೂ ನೋಡಿಕೊಳ್ಳುವುದು ಅಸಾಧ್ಯವೆನಿಸಿತು. ಎರಡೂ ಕೆಲಸಗಳನ್ನು ಮಾಡುತ್ತೇನೆಂದು ಹೋಗಿ ಎರಡನ್ನೂ ಹಾಳು ಮಾಡಬಹುದೆಂದು ತೋರಿತು. ಇಷ್ಟರಲ್ಲಿ ೧೮೯೪ನೆಯ ಇಸವಿ ಪ್ರಾರಂಭವಾಗಿತ್ತು. ನಾನು ಡರ್ಬಾನಿಗೆ ಬಂದು ಭಾರತಕ್ಕೆ ಹಿಂದಿರುಗಲು ಪ್ರಯತ್ನಿಸಿದೆ. ದಾದಾ ಅಬ್ದುಲ್ಲಾ ನನ್ನನ್ನು ಬೀಳ್ಕೊಡಲು ಏರ್ಪಡಿಸಿದ್ದ ಸಂತೋಷಕೂಟದಲ್ಲಿ ಯಾರೋ ಒಬ್ಬರು 'ನೇಟಾಲ್ ಮರ್ಕ್ಯುರಿ' ಎಂಬ ಪತ್ರಿಕೆಯ ಪ್ರತಿಯೊಂದನ್ನು ನನ್ನ ಕೈಲಿಟ್ಟರು. ಅದನ್ನು ಓದಿದೆ. ನೇಟಾಲ್ ಶಾಸನಸಭೆಯ ದೀರ್ಘವರದಿಯಲ್ಲಿ 'ಭಾರತೀಯರ ವೋಟಿನ ಹಕ್ಕು' ಎಂಬ ಶಿರೋನಾಮೆಯ ಕೆಳಗೆ ನಾಲ್ಕು ಪಙ್ತಗಳನ್ನು ನೋಡಿದೆ. ಸ್ಥಳೀಯ ಸರಕಾರ ಭಾರತೀಯರ ವೋಟಿನ ಹಕ್ಕನ್ನು ಕಿತ್ತುಕೊಳ್ಳಲು ಮೊದಲು ಮಾರ್ಗವಾಯಿತು. ಆ ಸಮಯದಲ್ಲಿನ ಭಾಷಣಗಳಲ್ಲಿ ಸರಕಾರದ ಮನೋಭಿಪ್ರಾಯ ಸ್ಪಷ್ಟವಾಗಿ ಎದ್ದು ತೋರುತ್ತಿತ್ತು. ಅಲ್ಲಿದ್ದ ವರ್ತಕರಿಗೂ ಅ ವರದಿಯನ್ನು ಓದಿ ಹೇಳಿ ಸಾಧ್ಯವಾದಮಟ್ಟಿಗೆ ಪರಿಸ್ಥಿತಿಯನ್ನು ವಿವರಿಸಿದೆ. ಭಾರತೀಯರ ಹಕ್ಕುಗಳ ಮೇಲಿನ ಈ ದಾಳಿಯನ್ನು ತೀವ್ರವಾಗಿ ಪ್ರತಿಭಟಿಸಬೇಕೆಂದು ತಿಳಿಸಿದೆ. ಅವರೂ ಅ ರೀತಿ ಮಾಡಲು ಒಪ್ಪಿದರು. ಆದರೆ ತಮ್ಮಿಂದಲೇ ಹೋರಾಟ ನಡೆಸಲು ಸಾಧ್ಯವಿಲ್ಲವಾಗಿಯೂ, ನಾನು ಇರಲೇಬೇಕಾಗಿಯೂ ನನ್ನನ್ನು ಬಲಾತ್ಕರಿಸಿದರು. ಒಂದೆರೆಡು ತಿಂಗಳು ಇದ್ದು ಈ ಹೋರಾಟವನ್ನು ನಡಸುವುದಾಗಿ ಒಪ್ಪಿದೆ. ಶಾಸನಸಭೆಯ ಮುಂದಿಡಲು ಅದೇ ರಾತ್ರಿ ಒಂದು ಅರ್ಜಿಯನ್ನು ತಯಾರಿಸಿದೆ. ಮುಂದಿನ ನಡವಳಿಕೆಗಳನ್ನು ನಿಲ್ಲಿಸಬೇಕೆಂದು ಸರಕಾರಕ್ಕೂ ತಂತಿಯನ್ನು ಕಳುಹಿಸಲಾಯಿತು. ಸೇಟ್ ಹಾಜಿ ಅದಮ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿ ಅವರ ಹೆಸರಿನಲ್ಲಿ ತಂತಿಯನ್ನು ಕಳುಹಿಸಿದೆವು. ಮಸೂದೆಯ ಪಠನ ಎರಡು ದಿನಗಳು ಮುಂದುವರಿಯಿತು. ದಕ್ಷಿಣ

ಆಫ್ರಿಕದಲ್ಲಿ ಭಾರತೀಯರು ಶಾಸನ ಸಭೆಗೆ ಕಳುಹಿಸಿದ ಅರ್ಜಿ ಎಂದರೆ ಇದೇ ಮೊದಲನೆಯದು. ಮಸೂದೆ ಬಿದ್ದು ಹೋಗಲು ಆಗದಿದ್ದರೂ ಅರ್ಜಿಯ ಪ್ರಭಾವವೇನೂ ಬಹಳವಾಗಿತ್ತು. ಇದರ ಚರಿತ್ರೆಯನ್ನು ನಾಲ್ಕನೆಯ ಅಧ್ಯಾಯದಲ್ಲಿ ತಿಳಿಸಿದ್ದೇನೆ. ಈ ಮಾದರಿಯ ಚಲವಳಿಯಲ್ಲಿ ದಕ್ಷಿಣ ಆಫ್ರಿಕದ ಭಾರತೀಯರಿಗೆ ಇದೇ ಮೊದಲನೆಯ ಅನುಭವ. ಇಡಿಯ ಜನಾಂಗದಲ್ಲಿ ಒಂದು ಹೊಸ ಉತ್ಸಾಹದ ಆವೇಶ ಉಂಟಾಯಿತು. ಪ್ರತಿನಿತ್ಯವೂ ಸಭೆಗಳಾಗುತ್ತಿದ್ದುವು. ದಿನದಿನಕ್ಕೂ ಹೆಚ್ಚು ಜನರು ಸಭೆಗೆ ಬರಲಾರಂಭಿಸಿದರು. ಬೇಕಾದ ಹಣ ಒಂದಕ್ಕೆರಡರಷ್ಟು ಕೂಡಲಾರಂಭಿಸಿತು. ಯಾವ ಪ್ರತಿಫಲವೂ ಇಲ್ಲದೆ ನಕಲು ಮಾಡುವುದರಲ್ಲಿ, ಸಹಿ ಹಾಕಿಸುವುದರಲ್ಲಿ ಅನೇಕ ಸ್ವಯಂಸೇವಕರು ಸಹಾಯ ಮಾಡಲು ಮುಂದೆ ಬಂದರು. ಇನ್ನು ಕೆಲವರು ಕೆಲಸಮಾಡಿ ಹಣವನ್ನೂ ಕೊಡಿಸುತ್ತಿದ್ದರು. ಅವಧಿವಿಮುಕ್ತ ಕೆಲಸಗಾರರ ಸಂತತಿಯವರು ಬಹು ಸಂತೋಷದಿಂದ ನಮ್ಮ ಚಳವಳಿಗೆ ಸೇರಿದರು. ಅವರಿಗೆ ಇಂಗ್ಲೀಷ್ ಪರಿಚಯವಿದ್ದುದಲ್ಲದೆ ಒಳ್ಳೆಯ ಬರಹಗಾರರೂ ಆಗಿದ್ದರು. ಹಗಲು ರಾತ್ರಿ ಎನ್ನದೆ ನಕಲು ಬರೆಯುವುದು ಮುಂತಾದ ಕೆಲಸಗಳನ್ನು ಗೊಣಗುಟ್ಟದೆ ಮಾಡುತ್ತಿದ್ದರು. ಒಂದು ತಿಂಗಳೊಳಗಾಗಿ ಹತ್ತು ಸಾವಿರ ಜನರು ಸಹಿಮಾಡಿದ ಅರ್ಜಿಯನ್ನು ಲಾರ್ಡ್ ರಿಪನ್‌ಗೆ ಕಳುಹಿಸಿದೆವು. ನಾನು ಮಾಡಬೇಕೆಂದಿದ್ದ ತಾತ್ಕಾಲಿಕ ಕೆಲಸ ಮುಗಿಯಿತು.

ಭಾರತಕ್ಕೆ ಹೋಗಿ ಬರಲು ಅಪ್ಪಣೆ ಕೇಳಿದೆ ಚಳವಳಿಯಿಂದ ಭಾರತೀಯರಲ್ಲಿ ಉಂಟಾದ ಉತ್ಸಾಹದಿಂದ ನನ್ನನ್ನು ಕಳುಹಿಸಲು ಅವರಿಗೆ ಇಷ್ಟ ಬರಲಿಲ್ಲ. "ನಮ್ಮ ವಿನಾಶಕ್ಕೆ ಇದೇ ಮೊದಲನೆಯ ಹೆಜ್ಜೆ ಎಂದು ನೀನೇ ತಿಳಿಸಿದ್ದೀಯೆ. ನಮ್ಮ ಅರ್ಜಿಗೆ ವಲಸೆ ರಾಷ್ಟ್ರಗಳ ಮಂತ್ರಿ ಅನುಕೂಲವಾದ ಉತ್ತರ ಕೊಡುತ್ತಾನೆಂದು ಹೇಗೆ ಗೊತ್ತು? ನಮ್ಮ ಉತ್ಸಾಹ ಎಷ್ಟಿದೆ ಎಂಬುದು ನಿನಗೆ ಗೊತ್ತಿದೆ. ನೀನು ಹೇಳಿದಂತೆ ನಡೆಯಲು ಸಿದ್ಧರಿದ್ದೇವೆ. ಬೇಕಾದಷ್ಟು ಹಣವಿದೆ. ಸರಿಯಾದ ಮಾರ್ಗದರ್ಶನವಿಲ್ಲದೆ ಮಾಡಿದ ಕೆಲಸವೆಲ್ಲ ವ್ಯರ್ಥವಾಗುತ್ತದೆ. ಆದ್ದರಿಂದ ನೀನು ಇಲ್ಲಿಯೇ ಇರಬೇಕಾದ್ದು ನಿನ್ನ ಕರ್ತವ್ಯ" ಎಂದರು. ಭಾರತೀಯರ ಹಿತರಕ್ಷಣೆಗೆ ಒಂದು ಶಾಶ್ವತ ಸಂಸ್ಥೆ ಇರಬೇಕಾದದ್ದು ಅವಶ್ಯವೆಂದು ನನಗೂ ತೋರಿತು. ಆದರೆ ನಾನು ವಾಸಿಸುವುದು ಎಲ್ಲಿ? ಜೀವನೋಪಾಯಕ್ಕೇನು? ಕಾಯಂ ಆಗಿ ತಿಂಗಳು ತಿಂಗಳು ಸಂಬಳವನ್ನು ಕೊಡುವುದಾಗಿ ಹೇಳಿದರು; ನಾನು ಅದಕ್ಕೆ ಒಪ್ಪಲಿಲ್ಲ. ಸಾರ್ವಜನಿಕ ಕೆಲಸ ಮಾಡುವವನಿಗೆ ಭಾರಿ ಸಂಬಳ ಬರದೆ ಇರಬಹುದು. ಅಲ್ಲದೆ ಸಾರ್ವಜನಿಕ ಕಾರ್ಯದಲ್ಲಿ ನಾನಿನ್ನೂ ಹೊಸಬನಾಗಿದ್ದೆ. ಆಗಿನ ನನ್ನ ಮನೋಭಾವನೆಯಲ್ಲಿ ನಾನೂ ಬ್ಯಾರಿಸ್ಟರ್ ಗಳಂತೆ ಜೀವನ ನಡೆಸಿ ನಮ್ಮ ಜನರ ಗೌರವ ಸಂಪಾದಿಸಬೇಕಾಗಿತ್ತು. ಅದಕ್ಕೆ ಹೆಚ್ಚು ಹಣ ಬೇಕು. ಸಾರ್ವಜನಿಕರಿಂದ ಚಂದಾ ಕೂಡಿಸಿದ ಹಣದಲ್ಲಿ ನನ್ನ ಜೀವನಕ್ಕೆ ಹಣ ತೆಗೆದುಕೊಳ್ಳುವುದು ಸರಿ ಕಾಣಲಿಲ್ಲ; ಅಲ್ಲದೆ ನನ್ನ ಸ್ವಾವಲಂಬನ ಶಕ್ತಿಯೂ ಹೋಗುವುದು. ಈ ಎಲ್ಲ ಕಾರಣಗಳಿಂದ ನನ್ನ ಸಾರ್ವಜನಿಕ ಕೆಲಸಗಳಿಗಾಗಿ ಯಾವ

ಸಂಭಾವನೆಯನ್ನೂ ತೆಗೆದುಕೊಳ್ಳಲಾಗದೆಂದು ತೀರ್ಮಾನಿಸಿದೆ. ಆದರೆ ಅಲ್ಲಿನ ಮುಖ್ಯ ವರ್ತಕರು ತಮ್ಮ ವಿವಾದಗಳನ್ನು ನನಗೆ ಕೊಡುವುದಾಗಿ ವಾಗ್ದಾನಮಾಡಿ, ಅದಕ್ಕಾಗಿ ಸ್ವಲ್ಪ ಮುಂಗಡ ಹಣ ಕೊಟ್ಟರೆ ಅಲ್ಲಿಯೇ ಇರುವುದಾಗಿ ಒಪ್ಪಿದೆ. ಮುಂಗಡ ಒಂದು ವರ್ಷಕ್ಕಾದರೆ ಸಾಕೆಂದು ತಿಳಿಸಿದೆ. ಒಂದು ವರ್ಷದ ಅನುಭವದಲ್ಲಿ ಸಮರ್ಪಕವಾಗಿ ಕೆಲಸ ನಡೆದರೆ ಮುಂದೆಯೂ ಉಭಯತರ ಒಪ್ಪಿಗೆಯಿಂದ ನಮ್ಮ ವೃತ್ತಿ ಸಂಬಂಧವನ್ನು ಮುಂದುವರಿಸಬಹುದಾಗಿ ತಿಳಿಸಿದೆ. ಎಲ್ಲರೂ ಸಂತೋಷದಿಂದ ಈ ಸಲಹೆಗೆ ಒಪ್ಪಿದರು.

ನೇಟಾಲ್ ಸುಪ್ರೀಮ್ ಕೋರ್ಟಿನ ವಕೀಲನಾಗಿರಲು ಅಪ್ಪಣೆ ಕೇಳಿದೆ. ನೇಟಾಲ್ ವಕೀಲರ ಸಂಘದವರು ನಾನು ಬೇರೆ ವರ್ಣದವನೆಂಬ ಕಾರಣ ಮಾತ್ರದಿಂದಲೆ ಕಾನೂನು ಪ್ರಕಾರ ನ್ಯಾಯವಾದಿಯಾಗಲು ಅವಕಾಶವಿಲ್ಲವೆಂದು ನನ್ನ ಅರ್ಜಿಯನ್ನು ಪ್ರತಿಭಟಿಸಿದರು. ಪ್ರಸಿದ್ಧ ನ್ಯಾಯವಾದಿಗಳೂ, ಅನಂತರ ಅಡ್ವೊಕೇಟ್ ಜನರಲ್ ಮತ್ತು ನೇಟಾಲಿನ ಮುಖ್ಯ ಮಂತ್ರಿಗಳೂ ದಿವಂಗತ ಎಸ್ಕಾಮ್ ರವರು ನನ್ನ ಪರ ನ್ಯಾಯವಾದಿಗಳು. ನ್ಯಾಯವಾದಿಗಳಲ್ಲಿ ಪ್ರಮುಖರಾದವರು ರುಸುಂ ಇಲ್ಲದೆ ಅಂತಹ ಅರ್ಜಿಗಳನ್ನು ವಾದಿಸಬೇಕಾದ್ದು ಅಲ್ಲಿನ ವಾಡಿಕೆಯಾಗಿತ್ತು; ಅದರಂತೆ ಎಸ್ಕಾಮರು ನನ್ನ ಅರ್ಜಿಯನ್ನು ವಾದಿಸಿದರು. ನನ್ನ ಕಕ್ಷಿಗಾರರಿಗೆ ಅವರು ಪ್ರಧಾನ ನ್ಯಾಯ ಸಲಹೆಗಾರರೂ ಆಗಿದ್ದು. ಸುಪ್ರೀಮ್ ಕೋರ್ಟಿನವರು ನ್ಯಾಯಸಂಘದ ಆಕ್ಷೇಪಣೆಯನ್ನು ತಳ್ಳಿಹಾಕಿ ನನ್ನ ಅರ್ಜಿಯನ್ನು ಅಂಗೀಕರಿಸಿದರು. ನ್ಯಾಯವಾದಿ ಸಂಘದ ನಡತೆಯಿಂದ ಅನಪೇಕ್ಷಿತವಾಗಿ ನಾನು ಪ್ರಸಿದ್ಧಿಗೆ ಬಂದೆ. ದಕ್ಷಿಣ ಆಫ್ರಿಕದ ವೃತ್ತಪತ್ರಿಕೆಗಳು ನ್ಯಾಯವಾದಿ ಸಂಘದ ಅಧಿಕಾರಿಗಳನ್ನು ಅಪಹಾಸ್ಯಮಾಡಿ ಕೆಲವರು ನನಗೆ ಅಭಿನಂದನೆ ಸಹ ಕಳುಹಿಸಿದರು.

ಹಂಗಾಮಿಯಾಗಿ ನಿಯಮಿಸಿದ ಸಮಿತಿಯನ್ನು ಸ್ಥಿರಗೊಳಿಸಲಾಯಿತು. ಭಾರತದ ರಾಷ್ಟ್ರಮಹಾಸಭೆಯ ವಿಚಾರವಾಗಿ ಓದಿದ್ದೇನೇ ಹೊರತು ಅದರ ವಾರ್ಷಿಕಾಧಿವೇಶನಕ್ಕೆ ನಾನು ಎಂದೂ ಹೋಗಿರಲಿಲ್ಲ. ಭಾರತದ ವೃದ್ಧಪಿತಾ ಮಹರಾದ ದಾದಾಭಾಯಿಯವರನ್ನು ನೋಡಿದ್ದೆ. ಅವರನ್ನು ಕಂಡರೆ ನನಗೆ ಬಹಳ ಗೌರವ. ಆದ್ದರಿಂದ ಕಾಂಗ್ರೆಸ್ ಎಂದರೆ ನನಗೆ ಬಹಳ ಭಕ್ತಿ ; ಆ ಹೆಸರನ್ನು ಜನಪ್ರಿಯವಾಗುವಂತೆ ಮಾಡಬೇಕೆಂದು ನನ್ನ ಆಸೆ. ನನಗೆ ಅನುಭವವಿಲ್ಲದೆ ಇದ್ದರೂ ಬೇರೆ ಹೆಸರನ್ನು ಹುಡುಕಲು ಪ್ರಯತ್ನಿಸಲಿಲ್ಲ. ಎಲ್ಲಿ ತಪ್ಪು ಮಾಡುತ್ತೇನೆಯೊ ಎಂಬ ಭಯ ಬೇರೆ. ಆದ್ದರಿಂದ ಅಲ್ಲಿನ ಭಾರತೀಯರಿಗೆ ತಮ್ಮ ಸಂಸ್ಥೆಯನ್ನು ನೇಟಾಲ್ ಇಂಡಿಯನ್ ಕಾಂಗ್ರೆಸ್ ಎಂದು ನಾಮಕರಣ ಮಾಡಬೇಕೆಂದು ಸಲಹೆ ಕೊಟ್ಟೆ. ಭಾರತ ರಾಷ್ಟ್ರ ಮಹಾಸಭೆಯ ವಿಷಯ ನನಗೆ ತಿಳಿದಿದ್ದ ಅಲ್ಪಸ್ವಲ್ಪವನ್ನು ಅವರಿಗೂ ತಿಳಿಸಿದೆ. ಅಂತೂ ೧೮೯೪ಳ ನೆಯ ಮೇ ತಿಂಗಳಲ್ಲಿ ನೇಟಾಲ್ ಇಂಡಿಯನ್ ಕಾಂಗ್ರೆಸ್ ಪ್ರಾರಂಭವಾಯಿತು. ಭಾರತ ರಾಷ್ಟ್ರ ಮಹಾಸಭೆಗೂ ನೇಟಾಲ್ ಇಂಡಿಯನ್ ಕಾಂಗ್ರೆಸ್ಸ್ ಗೂ ಒಂದು ವ್ಯತ್ಯಾಸವಿತ್ತು. ನೇಟಾಲ್ ಇಂಡಿಯನ್ ಕಾಂಗ್ರೆಸ್ಸು ವರ್ಷವೆಲ್ಲ ಕೆಲಸ ಮಾಡುವ

ಸಂಸ್ಥೆ. ಮತ್ತು ಸದಸ್ಯನಾಗಲು ವರ್ಷಕ್ಕೆ ಮೂರು ಪೌಂಡುಗಳ ಚಂದಾ ಹಣವನ್ನು ಕೊಟ್ಟವರಿಗೆ ಮಾತ್ರ ಅವಕಾಶವಿತ್ತು. ಅದಕ್ಕೂ ಹೆಚ್ಚಿನ ಹಣವನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತಿದ್ದೆವು. ವರ್ಷಕ್ಕೆ ೨೦ ಪೌಂಡ ಚಂದಾ ಕೊಡುವವರು ೬-೭ ಜನರಿದ್ದರು; ೧೨ ಪೌಂಡುಗಳನ್ನು ಕೊಡುವವರು ಅನೇಕರಿದ್ದರು. ಒಂದೇ ತಿಂಗಳಲ್ಲಿ ೩೦೦ ಜನ ಸದಸ್ಯರನ್ನು ಸೇರಿಸಲಾಯಿತು ಹಿಂದುಗಳು, ಮುಸಲ್ಮಾನರು, ಪಾರ್ಸಿಗಳು, ಕ್ರಿಶ್ಚಿಯನರು, ಎಲ್ಲರೂ ಸೇರಿದರು. ನೇಟಾಲಿನ ಎಲ್ಲ ಭಾರತೀಯ ಪ್ರಾಂತಗಳಿಂದಲೂ ಪ್ರತಿ. ನಿಧಿಗಳು ದೊರೆತರು. ಮೊದಲನೆಯ ವರ್ಷ ಬಹಳ ಚುರುಕಿನಿಂದ ಕೆಲಸ ನಡೆಯಿತು. ಅನುಕೂಲಸ್ಥ ವರ್ತಕರು ತಮ್ಮ ಸ್ವಂತ ವಾಹನಗಳಲ್ಲಿಯೇ ದೂರದ ಹಳ್ಳಿಗಳಿಗೆ ಹೋಗಿ ಹೊಸ ಸದಸ್ಯರನ್ನು ಸೇರಿಸಿ ನಿಧಿ ಸಂಗ್ರಹದ ಕೆಲಸ ಮಾಡಿದರು. ಎಲ್ಲರೂ ಕೇಳಿದ ಕೂಡಲೆ ಹಣ ಕೊಡುತ್ತಿರಲಿಲ್ಲ. ಕೆಲವರಿಗೆ ಸ್ವಲ್ಪ ಒತ್ತಾಯ ಬೇಕಾಗಿತ್ತು. ಈ ಒತ್ತಾಯವೇ ಒಂದು ರಾಜಕೀಯ ಶಿಕ್ಷಣವಾಗಿ ಜನರಿಗೆ ತಮ್ಮ ಸ್ಥಿತಿಯ ಅರಿವುಂಟಾಯಿತು. ತಿಂಗಳಿಗೊಮ್ಮೆಯಾದರೂ ಕಾಂಗ್ರೆಸ್ ಸಭೆ ಸೇರಿಸಿ ಲೆಕ್ಕಪತ್ರಗಳ ವಿವರಗಳನ್ನು ಪರಿಶೀಲಿಸುತ್ತಿದ್ದೆವು. ಪುಸಕ್ತ ವಿಷಯಗಳನ್ನು ವಿವರಿಸಿ ವರದಿ ಪುಸ್ತಕದಲ್ಲಿ ಬರೆದಿಡುತ್ತಿದ್ದೆವು. ಸದಸ್ಯರು ಪ್ರಶ್ನೆಗಳನ್ನು ಕೇಳಿ ಹೊಸ ಹೊಸ ವಿಷಯಗಳನ್ನು ಚರ್ಚಿಸುತ್ತಿದ್ದರು. ಇದರಿಂದ ಎಂದೂ ಮಾತನಾಡದವರು ಧೈರ್ಯದಿಂದ ಮಾತನಾಡುವಂತೆ ಅನುಕೂಲವಾಯಿತು. ಅದೂ ಅಲ್ಲದೆ ಭಾಷಣಗಳು ಅಚ್ಚುಕಟ್ಟಾಗಿರಬೇಕಿತ್ತು. ಇದೆಲ್ಲವೂ ಹೊಸ ಅನುಭವ. ಭಾರತೀಯರಿಗೆ ತೀವ್ರ ಆಸಕ್ತಿ ಹುಟ್ಟಿತು. ಇದೇ ಹೊತ್ತಿಗೆ ಲಾರ್ಡ್ ರಿಪನ್ ಭಾರತೀಯರ ವೋಟಿನ ಹಕ್ಕನ್ನು ಕಸಿದುಕೊಳ್ಳಲು ತಂದಿದ್ದ ಮಸೂದೆಯನ್ನು ತಿರಸ್ಕರಿಸಿದನೆಂಬ ವರ್ತಮಾನ ಬಂದಿತು; ಇದರಿಂದ ಅವರ ಉತ್ಸಾಹವೂ ಆತ್ಮವಿಶ್ವಾಸವೂ ಇಮ್ಮಡಿಯಾದುವು.

ಹೊರಗಿನ ಚಳವಳಿಯ ಜೊತೆಯಲ್ಲಿಯೇ ಒಳಗಿನ ಸುಧಾರಣೆಯ ಪ್ರಶ್ನೆಯ ಕಡೆಗೂ ಗಮನಕೊಡಲಾಯಿತು. ದಕ್ಷಿಣ ಆಫ್ರಿಕದ ಯೂರೋಪಿಯನರೆಲ್ಲರೂ ಭಾರತೀಯರ ಜೀವನಕ್ರಮವನ್ನು ಹೀಯಾಳಿಸುತ್ತಿದ್ದರು. ಭಾರತೀಯರು ಅಶುಚಿಯಾದವರೆಂದೂ ಕಾಸುಗಳ್ಳರೆಂದೂ ಅವರ ವಾದ. ಎಲ್ಲಿ ವ್ಯಾಪಾರ ಮಾಡುತ್ತಾರೆಯೊ ಅಲ್ಲಿಯೇ ಅವರ ವಾಸ. ಮನೆಗಳು ಬರಿಯ ಗುಡಿಸಿಲುಗಳು. ನಿರ್ಮಲರಾದ, ದಾನಶೂರರಾದ ಯೂರೋಪಿಯನರು. ತಮ್ಮ ಹೆಚ್ಚುವೆಚ್ಚಗಳನ್ನಿಟ್ಟು ಕೊಂಡು ಕೊಳಕರೂ ಕಿಲುಬರೂ ಆದ ಭಾರತೀಯರೊಂದಿಗೆ ವ್ಯಾಪಾರದಲ್ಲಿ ಪೈಪೋಟಿ ನಡಸುವುದು ಹೇಗೆ ? ಕಾಂಗ್ರೆಸ್ ಸಭೆಗಳಲ್ಲಿ ಗೃಹನೈರ್ಮಲ್ಯ, ದೇಹಾರೋಗ್ಯ, ವ್ಯಾಪಾರಕ್ಕೂ ವಾಸಕ್ಕೂ ಪ್ರತ್ಯೇಕ ಸ್ಥಳಗಳ ಅವಶ್ಯಕತೆ ಅನುಕೂಲಸ್ಥರಾದ ವರ್ತಕರು ತಮ್ಮ ಸಾಮಾಜಿಕ ಅಂತಸ್ತಿಗೆ ಅನುಗುಣವಾಗಿ ವಾಸಮಾಡಬೇಕಾದ ಅವಶ್ಯಕತೆ ಮುಂತಾದ ವಿಷಯಗಳ ಮೇಲೆ ಉಪನ್ಯಾಸಗಳನ್ನು ಏರ್ಪಡಿಸಿ, ಚರ್ಚೆಮಾಡಿ ಸಲಹೆಗಳನ್ನು ಕೊಡುತ್ತಿದ್ದೆವು. ಸಭೆಯ ನಡವಳಿಕೆಗಳು ಗುಜರಾತಿಯಲ್ಲಿ ನಡೆಯುತ್ತಿದ್ದುವು.

ಉಂಟಾಯಿತೆಂದು ವಾಚಕರೇ ಊಹಿಸಬಹುದು. ನೇಟಾಲಿನಲ್ಲಿ ಹುಟ್ಟಿ ಇಂಗ್ಲಿಷ್ ಮಾತನ್ನು ಆಡುತ್ತಿದ್ದ ಅವಧಿವಿಮುಕ್ತ ಕೆಲಸಗಾರರ ಮಕ್ಕಳಿಗೆ ಕಾಂಗ್ರೆಸ್ಸಿನ ಆಶ್ರಯದಲ್ಲಿ ವಿದ್ಯೆ ಕಲಿಸಲು 'ನೇಟಾಲ್ ಇಂಡಿಯನ್ ವಿದ್ಯಾಪ್ರಚಾರ ಸಂಘ' ಎಂಬ ಸಂಸ್ಥೆಯನ್ನು ಪ್ರಾರಂಭಿಸಿದೆವು. ಆ ಯುವಕರನ್ನು ಒಂದು ಕಡೆ ಸೇರಿಸಿ, ತಮ್ಮ ಮಾತೃಭೂಮಿಯ ಮೇಲೆ ಪ್ರೇಮ ಹುಟ್ಟುವಂತೆ ಪರಿಚಯಮಾಡಿಕೊಡುವುದೇ ಸಂಸ್ಥೆಯ ಮುಖ್ಯ ಉದ್ದೇಶವಾಗಿತ್ತು. ಸ್ವತಂತ್ರ ಭಾರತೀಯರು ಇವರನ್ನು ತಮ್ಮ ಬಾಂಧವರೆಂದೇ ಕಾಣುತ್ತಾರೆಂದು ತೋರಿಸುವುದೂ, ಸ್ವತಂತ್ರ ಭಾರತೀಯರು ಇವರ ಮೇಲೆ ಗೌರವವಿಡುವಂತೆ ಅವರ ಮನೋಭಿಪ್ರಾಯವನ್ನು ಪರಿವರ್ತಿಸುವುದೂ ಈ ಸಂಸ್ಥೆಯ ಉದ್ದೇಶವಾಗಿತ್ತು. ಕಾಂಗ್ರೆಸ್ಸಿನ ಖರ್ಚು ಕಳೆದು ಹಣ ಮಿಗುತ್ತಿತ್ತು. ಈ ಹಣದಿಂದ ಭೂಮಿಯನ್ನು ಕೊಳ್ಳಲಾಯಿತು. ಈಗಲೂ ಆ ಭೂ ಆಸ್ತಿಯಿಂದ ಉತ್ಪತ್ತಿ ಬರುತ್ತಲಿದೆ.

ಸತ್ಯಾಗ್ರಹ ತನ್ನಷ್ಟಕ್ಕೇ ಹೇಗೆ ರೂಪುಗೊಂಡಿತು, ಭಾರತೀಯರು ಸ್ವಾಭಾವಿಕವಾಗಿ ಸತ್ಯಾಗ್ರಹಕ್ಕೆ ಹೇಗೆ ಸಿದ್ಧತೆ ಪಡೆದರು ಎಂಬುದನ್ನು ಅರ್ಥಮಾಡಿಕೊಳ್ಳುವುದು ಅವಶ್ಯವಾದ್ದರಿಂದ ಈ ವಿವರಗಳನ್ನು ಇಲ್ಲಿ ತಿಳಿಸಿದ್ದೇನೆ. ಕಾಂಗ್ರೆಸ್ಸಿಗೆ ಒದಗಿದ ಕಷ್ಟಗಳು, ಸರಕಾರದ ಅಧಿಕಾರಿಗಳು ಕೊಟ್ಟ ತೊಂದರೆ, ಈ ತೊಂದರೆಗಳಿಂದ ಪಾರಾದ ಬಗೆ-ಇವುಗಳನ್ನೆಲ್ಲ ನಾನು ಬಿಟ್ಟುಬಿಡಬೇಕಾಗಿದೆ. ಒಂದು ವಿಷಯ ಮಾತ್ರ ಭಾರತೀಯರಿಂದ ತಪ್ಪಿಸಲು ಪ್ರಯತ್ನ ಮಾಡಲಾಯಿತು. ತಮ್ಮ ತಪ್ಪುಗಳನ್ನು ತಾವೇ ತಿದ್ದಿಕೊಳ್ಳಲು ಪದೇಪದೇ ಎಚ್ಚರಿಸುತ್ತಿದ್ದೆವು. ಯೂರೋಪಿಯನರ ವಾದಸರಣಿಯಲ್ಲಿದ್ದ ನಿಜಾಂಶಗಳನ್ನೆಲ್ಲ ಒಪ್ಪುತ್ತಿದ್ದೆವು. ಆತ್ಮಗೌರವಕ್ಕೆ ಚ್ಯುತಿಯಿಲ್ಲದೆ ಸರಿಸಮಾನರಾಗಿ ಸಹಕರಿಸಿ ಕೆಲಸ ಮಾಡಬಹುದಾದ ಎಲ್ಲ ಸಮಯಗಳಲ್ಲಿ ಯೂರೋಪಿಯನರೊಂದಿಗೆ ಸಹಕರಿಸುತ್ತಿದ್ದೆವು ವರ್ತಮಾನ ಪತ್ರಿಕೆಗಳು ಮುದ್ರಣ ಮಾಡುವಷ್ಟು ವಿಷಯವನ್ನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದೆವು. ಭಾರತೀಯರ ಮೇಲೆ ಅನ್ಯಾಯವಾದ ಲೇಖನಗಳು ಬಂದರೆ ಒಡನೆ ಅವುಗಳನ್ನು ಖಂಡಿಸಿ ಲೇಖನಗಳನ್ನು ಬರೆಯುತ್ತಿದ್ದೆವು.

ನೇಟಾಲ್ ಇಂಡಿಯನ್ ಕಾಂಗ್ರೆಸ್ಸಿನಂತೆ ಟ್ರಾನ್ಸ್ವಾಲಿನಲ್ಲೂ ಒಂದು ಸ್ವತಂತ್ರ ಸಂಸ್ಥೆ ಇತ್ತು. ಈ ಸಂಸ್ಥೆಗಳ ರಚನೆಯಲ್ಲಿ ಸ್ವಲ್ಪ ವ್ಯತ್ಯಾಸಗಳಿದ್ದುವು; ಅವುಗಳ ಚರ್ಚೆ ಅನಾವಶ್ಯಕ. ಕೇಪ್ ಟೌನಿನಲ್ಲೂ, ನೇಟಾಲ್ ಮತ್ತು ಟ್ರಾನ್ಸ್‌ವಾಲ್ ಸಂಸ್ಥೆಗಳಿಂದ ಬೇರೆಯಾಗಿ ಇನ್ನೂ ಒಂದು ಸಂಸ್ಥೆಯಾಯಿತು. ಆದರೆ ಈ ಮೂರು ಸಂಸ್ಥೆಗಳಿಂದ ಬೇರೆಯಾಗಿ ಇನ್ನೂ ಒಂದು ಸಂಸ್ಥೆಯಾಯಿತು. ಆದರೆ ಈ ಮೂರು ಸಂಸ್ಥೆಗಳ ಕಾರ್ಯಕ್ರಮವೂ ಒಂದೇ ಆಗಿತ್ತು. ೧೮೯೫ನೆಯ ಇಸವಿ ಮಧ್ಯದ ಹೊತ್ತಿಗೆ ನೇಟಾಲ್ ಕಾಂಗ್ರೆಸ್ಸಿಗೆ ಒಂದು ವರ್ಷ ತುಂಬಿತು. ನನ್ನ ಕಕ್ಷಿಗಾರರಿಗೆ ನನ್ನ ಕೆಲಸದಿಂದ ತೃಪ್ತಿಯಾಯಿತು. ನೇಟಾಲಿನಿಂದ ನನ್ನ ಪ್ರಯಾಣವೂ ಮುಂದುವರಿಯಿತು. ೧೮೯೬ ರಲ್ಲಿ ಭಾರತೀಯರ ಅಪ್ಪಣೆ ಪಡೆದು ಆರು ತಿಂಗಳು ಮುಗಿದಿರಲಿಲ್ಲ. ಅಷ್ಟರಲ್ಲೆ ಕೂಡಲೆ ಹಿಂದಕ್ಕೆ ಬರಬೇಕೆಂದು ನೇಟಾಲಿನಿಂದ ಕೇಬಲ್ ಬಂದಿತು. ಅದರಂತೆ ಹಿಂದಿರುಗಿದೆ. ೧೮೯೬-೯೭ನೆಯ ವರ್ಷದ ಘಟನೆಗಳಿಗೆ ಪ್ರತ್ಯೇಕ ಅಧ್ಯಾಯವೇ ಅವಶ್ಯಕ.

ಈ ರೀತಿಯಾಗಿ ಭಾರತೀಯರಿಗೆ ಎಷ್ಟು ಅನುಭವ ಮತ್ತು ರಾಜಕೀಯ ಜ್ಞಾನ

೭. ಸತ್ಯಾಗ್ರಹಕ್ಕೆ ಮುಂಚಿನ ಹೋರಾಟ

{ಮುಂದುವರಿದುದು}

ಈ ರೀತಿ ನೇಟಾಲ್ ಇಂಡಿಯನ್ ಕಾಂಗ್ರೆಸ್ಸು ಚಿರಸ್ಥಾಯಿಯಾಯಿತು ನೇಟಾಲಿನಲ್ಲಿ ರಾಜಕೀಯ ಕೆಲಸದಲ್ಲೆ ಎರಡೂವರೆ ವರ್ಷ ಕಾಲ ಕಳೆದೆ. ನಾನು ದಕ್ಷಿಣ ಆಫ್ರಿಕದಲ್ಲಿಯೇ ಮುಂದೆಯೂ ಇರಬೇಕಾದರೆ ನನ್ನ ಸಂಸಾರವನ್ನು ಕರೆತರುವುದು ಅವಶ್ಯವೆನಿಸಿತು. ಹಾಗೆಯೆ ಭಾರತ ದೇಶದಲ್ಲಿ ಸ್ವಲ್ಪ ಕಾಲವಿದ್ದು ಅಲ್ಲಿ ನಮ್ಮ ಜನರಿಗೆ ನೇಟಾಲ್ ಮತ್ತು ದಕ್ಷಿಣ ಆಫ್ರಿಕದ ಇತರ ಭಾಗಗಳಲ್ಲಿನ ಭಾರತೀಯರ ಸ್ಥಿತಿಗತಿಗಳ ಪರಿಚಯ ಮಾಡಿಕೊಡಬೇಕೆಂದು ತೀರ್ಮಾನಿಸಿದೆ . ಕಾಂಗ್ರೆಸ್ಸು ನನಗೆ ಆರು ತಿಂಗಳ ಅವಧಿ ಕೊಟ್ಟು, ನನ್ನ ಸ್ಥಾನದಲ್ಲಿ ನೇಟಾಲಿನ ಪ್ರಸಿದ್ಧ ವ್ಯಾಪಾರಿಯಾದ ದಿವಂಗತ ಶ್ರೀ ಅದಂಜಿ ಮಿಯಾನ್ ಖಾನ್ ಎಂಬಾತನನ್ನು ಕಾರ್ಯದರ್ಶಿಯಾಗಿ ನೇಮಕ ಮಾಡಿತು. ಆತನು ಬಹಳ ದಕ್ಷತೆಯಿಂದ ಕಾರ್ಯ ನಿರ್ವಹಿಸಿದನು. ಆತನಿಗೆ ಅಭ್ಯಾಸದಿಂದಲೂ ಬಳಕೆಯಿಂದಲೂ ಒಳ್ಳೆಯ ಇಂಗ್ಲಿಷ್ ಜ್ಞಾನವಿತ್ತು. ಸಾಧಾರಣ ಮಟ್ಟಿಗೆ ಗುಜರಾತಿಯನ್ನು ಅಭ್ಯಾಸಮಾಡಿದ್ದನು. ಜುಲುಗಳೊಂದಿಗೆ ಒಳ್ಳೆಯ ವ್ಯಾಪಾರ ನಡೆಸುತ್ತಿದ್ದುದರಿಂದ ಜ಼ಲು ಭಾಷೆ ಚನ್ನಾಗಿ ಬರುತ್ತಿದ್ದಿತಲ್ಲದೆ ಜುಲುಗಳ ನಡೆನುಡಿಗಳ ಪರಿಚಯವಿತ್ತು. ಆತನು ಒಳ್ಳೆಯ ಶಾಂತಸ್ವಭಾವದ ಸ್ನೇಹಪರ ಮನುಷ್ಯ. ಹೆಚ್ಚು ಮಾತನಾಡುವ ಸ್ವಭಾವದವನಲ್ಲ. ಜವಾಬ್ದಾರಿಯ ಅಧಿಕಾರಸ್ಥಾನಗಳನ್ನು ಪಡೆಯಲು ಇಂಗ್ಲಿಷ್ ಪರಿಚಯ ಅಥವಾ ಪಾಂಡಿತ್ಯ ಮಾತ್ರ ಸಾಲದು; ಅದಕ್ಕಿಂತಲೂ ಮಿಗಿಲಾಗಿ ಸತ್ಯನಿಷ್ಠೆ, ತಾಳ್ಮೆ, ಸಹಿಷ್ಣುತೆ, ದೃಢಮನಸ್ಸು, ಮನಸ್ಥೈರ್ಯ, ದಿಟ್ಟತನ ಮತ್ತು ವ್ಯವಹಾರಜ್ಞಾನಗಳು ಇರಬೇಕಾದ್ದು ಮುಖ್ಯವೆಂದು ತೋರಿಸಲು ಈ ಎಲ್ಲ ವಿವರಗಳನ್ನು ಕೊಟ್ಟಿದ್ದೇನೆ. ಈ ಸದ್ಗುಣಗಳು ಯಾರಲ್ಲಿಲ್ಲವೋ ಆತನಲ್ಲಿ ಬೇಕಾದಷ್ಟು ಪಾಂಡಿತ್ಯವಿದ್ದರೂ ಸಾರ್ವಜನಿಕ ಕೆಲಸಕ್ಕೆ ಆತನು ನಿಷ್ಪ್ರಯೋಜಕ.

೧೮೯೬ ರ ಮಧ್ಯಭಾಗದಲ್ಲಿ ನಾನು ಹಿಂದೂಸ್ಥಾನಕ್ಕೆ ಹಿಂದಿರುಗಿದೆ. ನೇಟಾಲಿನಿಂದ ಬೊಂಬಾಯಿಗಿಂತ ಕಲ್ಕತ್ತಕ್ಕೆ ಸುಲಭವಾಗಿ ಹಡಗು ದೊರೆಯುತ್ತಿದ್ದಕಾರಣ ನಾನು ಕಲ್ಕತ್ತಕ್ಕೆ ಹೊರಟ ಹಡಗವನ್ನೇ ಹತ್ತಿದೆ. ವಾಯಿದೆ ಕೆಲಸಗಾರರು ಬರುತ್ತಿದ್ದುದು ಕಲ್ಕತ್ತೆ ಮತ್ತು ಮದ್ರಾಸಿನಿಂದಲೇ ಹೆಚ್ಚು. ಕಲ್ಕತ್ತದಿಂದ ಬೊಂಬಾಯಿಗೆ ಹೊರಟಾಗ ದಾರಿಯಲ್ಲಿ ರೈಲುತಪ್ಪಿ ಅಲಹಾಬಾದಿನಲ್ಲಿ ಒಂದು ದಿವಸ ನಿಲ್ಲಬೇಕಾಯಿತು. ಅಲ್ಲಿಯೇ ನನ್ನ ಕೆಲಸ ಪ್ರಾರಂಭವಾದದ್ದು. 'ಪಯೋನೀರ್' ಪತ್ರಿಕೆಯ ಚೆಸ್ನೆಯವರನ್ನು ನೋಡಿದೆ. ನನ್ನೊಂದಿಗೆ ಬಹಳ ಗೌರವದಿಂದ ಮಾತನಾಡಿದರೂ ತಮ್ಮ ಸಹಾನುಭೂತಿ ಯೂರೋಪಿಯನ್ ವಲಸೆಗಾರರ ಕಡೆ ಇರುವುದೆಂದು ಸ್ಪಷ್ಟವಾಗಿ ಹೇಳಿದರು. ಆದರೂ ನಾನು ಏನಾದರೂ ಬರೆದರೆ ಅದನ್ನು ಓದಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ

ತಿಳಿಸಿದರು. ನನಗೆ ಅಷ್ಟೇ ಸಾಕಾಗಿತ್ತು.

ಹಿಂದೂಸ್ಥಾನದಲ್ಲಿರುವಾಗಲೇ 'ದಕ್ಷಿಣ ಆಫ್ರಿಕದಲ್ಲಿನ ಭಾರತೀಯರ ಸ್ಥಿತಿ' ಎಂದು ಒಂದು ಸಣ್ಣ ಕೈಪಿಡಿಯನ್ನು ಬರೆದೆ. ಎಲ್ಲ ಪತ್ರಿಕೆಗಳವರೂ ಅದರಲ್ಲಿ ಕುತೂಹಲ ತೋರಿದರು; ಎರಡು ಸಲ ಅದನ್ನು ಮುದ್ರಿಸಬೇಕಾಯಿತು. ಹಿಂದೂಸ್ಥಾನದ ಬೇರೆ ಬೇರೆ ಪಟ್ಟಣಗಳಲ್ಲಿ ೫,೦೦೦ ಪ್ರತಿಗಳನ್ನು ಹಂಚಲಾಯಿತು. ಇದೇ ಸಮಯದಲ್ಲಿಯೇ ನಾನು ಸರ್ ಫಿರೋಸ್ ಷಾ ಮೆಹತಾ, ನ್ಯಾಯ ಮೂರ್ತಿಗಳಾದ ಬದ್ರುದ್ದೀನ್ ತೇಬ್ಜಿ, ಮಹಾದೇವ ಗೋವಿಂದ ರಾನಡೆ ಮುಂತಾದವರನ್ನು ಬೊಂಬಾಯಿಯಲ್ಲಿಯೂ ಲೋಕಮಾನ್ಯ ತಿಲಕರು ಮತ್ತು ಅವರ ಅನುಯಾಯಿಗಳನ್ನು, ಪ್ರೊಫೆಸರ್ ಭಂಡಾರ್ಕರ್, ಗೋಪಾಲ ಕೃಷ್ಣ ಗೋಖಲೆ, ಮತ್ತು ಅವರ ಅನುಯಾಯಿಗಳನ್ನು ಪುಣೆಯಲ್ಲಿಯೂ ನೋಡಿದ್ದೆ. ಬೊಂಬಾಯಿ, ಪುಣೆ, ಮದ್ರಾಸ್ ಪಟ್ಟಣಗಳಲ್ಲಿ ಭಾಷಣಗಳನ್ನು ಮಾಡಿದೆ. ಇವುಗಳನ್ನೆಲ್ಲ ನಾನು ವಿಶದೀಕರಿಸುವುದಿಲ್ಲ.

ಆದರೆ ಪುಣೆಯಲ್ಲಿ ನಡೆದ ಒಂದು ಪವಿತ್ರ ಸನ್ನಿವೇಶವನ್ನು ಮಾತ್ರ–ಈ ಕಥೆಗೆ ಅಷ್ಟು ಮುಖ್ಯವಲ್ಲದೆ ಹೋದರೂ–ಹೇಳಬೇಕೆನಿಸುತ್ತದೆ. 'ಸಾರ್ವಜನಿಕ ಸಭೆ'ಯ ಆಡಳಿತ ಸೂತ್ರಗಳು ತಿಲಕರ ಕೈಲಿದ್ದುವು; 'ಡೆಕ್ಕನ್ ಸಭೆ'ಯ ಆಡಳಿತ ಸೂತ್ರಗಳು ಗೋಖಲೆಯವರ ಕೈಲಿದ್ದುವು. ಮೊದಲು ನಾನು ತಿಲಕ ಮಹಾರಾಜರನ್ನು ನೋಡಿದೆ. ಪುಣೆಯಲ್ಲಿ ಒಂದು ಸಭೆ ಸೇರಿಸಬೇಕೆಂಬ ನನ್ನ ಆಶೆಯನ್ನು ತಿಳಿಸಿದೆ. ಒಡನೆ 'ಗೋಪಾಲರಾಯರನ್ನು ನೋಡಿದ್ದೆಯಾ" ಎಂದು ಅವರು ನನ್ನನ್ನು ಕೇಳಿದರು. ಯಾರನ್ನು ಕುರಿತು ಹೇಳುತ್ತಾರೆಂದು ನನಗೆ ಅರ್ಥವಾಗಲಿಲ್ಲ. ಪುನಃ 'ಗೋಖಲೆಯವರ ಪರಿಚಯವಿದೆಯೆ, ಅವರನ್ನು ಕಂಡೆಯಾ?" ಎಂದು ಕೇಳಿದರು.

"ನಾನು ಅವರನ್ನು ಇನ್ನೂ ನೋಡಿಲ್ಲ. ಅವರ ಹೆಸರನ್ನು ಕೇಳಿಬಲ್ಲೆ, ಅವರನ್ನೂ ಕಾಣಬೇಕೆಂದಿದ್ದೇನೆ" ಎಂದು ತಿಳಿಸಿದೆ.

ಲೋಕಮಾನ್ಯರು "ಭಾರತದ ರಾಜಕಾರಣ ನಿನಗೆ ಏನೂ ತಿಳಿದಂತೆ ಕಾಣುವುದಿಲ್ಲ" ಎಂದರು.

ನಾನು, "ಇಂಗ್ಲೆಂಡಿನಿಂದ ಬಂದು ಸ್ವಲ್ಪ ಕಾಲ ಮಾತ್ರ ನಾನು ಭರತಖಂಡದಲ್ಲಿದ್ದೆ. ರಾಜಕೀಯಕ್ಕೆ ನಾನು ಆಗ ಪ್ರವೇಶಿಸಿರಲಿಲ್ಲ. ಅದು ನನ್ನ ಶಕ್ತಿಗೆ ಮೀರಿದ್ದೆಂದು ಭಾವಿಸಿದ್ದೆ" ಎಂದು ತಿಳಿಸಿದೆ.

ಆಗ ಲೋಕಮಾನ್ಯರು "ಹಾಗಾದರೆ ಕೆಲವು ವಿಷಯ ನಿನಗೆ ತಿಳಿಸುತ್ತೇನೆ. ಪುಣೆಯಲ್ಲಿ ಎರಡು ಪಂಗಡಗಳಿವೆ. ಒಂದು ಸಾರ್ವಜನಿಕ ಸಭೆ, ಇನ್ನೊಂದು ಡೆಕ್ಕನ್ ಸಭೆ" ಎಂದು ಹೇಳಿದರು.

"ನನಗೂ ಸ್ವಲ್ಪ ಈ ವಿಷಯ ಗೊತ್ತಿದೆ" ಎಂದು ತಿಳಿಸಿದೆ.

ಲೋಕಮಾನ್ಯರು" ಇಲ್ಲಿ ಒಂದು ಸಭೆ ಸೇರಿಸುವುದು ಸುಲಭ. ಆದರೆ ಎಲ್ಲ ಪಕ್ಷಗಳ ಮುಂದೆಯೂ ನೀನು ವಿಷಯವನ್ನು ಪ್ರತಿಪಾದಿಸಬೇಕಾದರೆ ಎಲ್ಲರ

ಸಹಾನುಭೂತಿಯನ್ನೂ ಪಡೆಯುವುದು ಒಳ್ಳೆಯದು. ನಿನ್ನ ಸೂಚನೆಯನ್ನೇನೂ ಒಪ್ಪುತ್ತೇನೆ. ಆದರೆ ಸಾರ್ವಜನಿಕ ಸಭಾಸದಸ್ಯರು ಅಧ್ಯಕ್ಷರಾದರೆ ಡೆಕ್ಕನ್ ಸಭಾಸದಸ್ಯರಾರೂ ಸಭೆಗೆ ಬರುವುದಿಲ್ಲ. ಅದರಂತೆಯೇ ಡೆಕ್ಕನ್ ಸಭಾಸದಸ್ಯರು ಅಧ್ಯಕ್ಷರಾದರೆ ಸಾರ್ವಜನಿಕ ಸಭೆಯ ಸದಸ್ಯರಾರು ಬರುವುದಿಲ್ಲ. ಆದ್ದರಿಂದ ಯಾವ ಪಕ್ಷಕ್ಕೂ ಸೇರದವರೊಬ್ಬರನ್ನು ಅಧ್ಯಕ್ಷರನ್ನಾಗಿ ನೀನು ಆರಿಸಬೇಕು. ಕೆಲವು ಸಲಹೆಗಳ ಹೊರತಾಗಿ ಬೇರೆ ಯಾವ ಸಹಾಯವನ್ನೂ ನಾನು ಕೊಡಲಾರೆ. ಪ್ರೊಫೆಸರ್ ಭಂಡಾರಕರ್ ನಿನಗೆ ಗೊತ್ತೆ ? ಅವರನ್ನು ನೀನು ಕಾಣು. ಅವರು ಯಾವ ಪಕ್ಷಕ್ಕೂ ಸೇರದವರೆಂದು ನನ್ನ ಭಾವನೆ. ಅವರು ರಾಜಕೀಯದಲ್ಲಿ ಭಾಗವಹಿಸುವುದಿಲ್ಲ. ಪ್ರಾಯಶಃ ನೀನು ಹೋಗಿ ಕೇಳಿದರೆ ಇಲ್ಲವೆನ್ನಲಾರರು. ಗೋಖಲೆಯವರಲ್ಲೂ ಈ ವಿಷಯ ಪ್ರಸ್ತಾಪಿಸಿ ಅವರ ಅಭಿಪ್ರಾಯವನ್ನು ಕೇಳು. ಪ್ರಾಯಶಃ ಅವರೂ ಅದೇ ಸಲಹೆ ಕೊಡಬಹುದು. ಪ್ರೊಫೆಸರ್ ಭಂಡಾರಕರ್ ರಂಥ ಮಾನ್ಯರು ಸಭೆಗೆ ಅಧ್ಯಕ್ಷರಾದರೆ, ಸಭೆ ಯಶಸ್ವಿಯಾಗಿ ನಡೆಯಲು ಉಭಯ ಪಕ್ಷದವರೂ ಪ್ರಯತ್ನಪಡುತ್ತಾರೆ. ನನ್ನ ಪೂರ್ಣ ಸಹಕಾರದ ಭರವಸೆ ನಾನು ಕೊಡುತ್ತೇನೆ" ಎಂದು ತಿಳಿಸಿದರು.

ನಾನು ಗೋಖಲೆಯವರನ್ನು ಕಂಡೆ, ಅವರನ್ನು ನೋಡಿದೊಡನೆ ಅವರಲ್ಲಿ ಅಚಲವಾದ ಪ್ರೀತಿ ಹುಟ್ಟಿದ ಬಗೆಯನ್ನು ಬೇರೊಂದೆಡೆಯಲ್ಲಿ ವಿವರಿಸಿದ್ದೇನೆ. ಬೇಕಾದವರು 'ಯಂಗ ಇಂಡಿಯ' ಅಥವಾ 'ನವಜೀವನ'ದ ಹಾಳೆಗಳನ್ನು ತಿರುವಿಹಾಕಬಹುದು. ಲೋಕಮಾನ್ಯರು ಕೊಟ್ಟ ಸಲಹೆಯನ್ನು ಗೋಖಲೆಯವರು ಮೆಚ್ಚಿದರು. ಅದರಂತೆ ಜ್ಞಾನವೃದ್ಧರಾದ ಪ್ರೊಫೆಸರರ ಬಳಿ ಹೋಗಿ ನನ್ನ ಭಕ್ತಿಯ ಕಾಣಿಕೆಯನ್ನು ಸಲ್ಲಿಸಿದೆ. ಅವರು ನೇಟಾಲಿನಲ್ಲಿನ ಭಾರತೀಯರ ಗೋಳಿನ ಕಥೆಯನ್ನೆಲ್ಲಾ ಲಾಲಿಸಿ, "ನೋಡು, ಸಾರ್ವಜನಿಕ ಜೀವನದಲ್ಲಿ ನಾನು ಭಾಗವಹಿಸುವುದೇ ಇಲ್ಲ. ಅಲ್ಲದೆ ನನಗೆ ವಯಸ್ಸಾಗುತ್ತಿದೆ. ಆದರು ನೀನು ಹೇಳಿರುವ ವಿಷಯ ನನ್ನ ಹೃದಯವನ್ನು ಕಲಕಿದೆ. ಎಲ್ಲ ಪಕ್ಷಗಳ ಸಹಕಾರವನ್ನೂ ಪಡೆಯಬೇಕೆಂಬ ನಿನ್ನ ಉದ್ದೇಶವನ್ನು ನಾನು ಒಪ್ಪುತ್ತೇನೆ. ನೀನಿನ್ನೂ ಹುಡುಗ, ಭಾರತ ದೇಶದ ರಾಜಕೀಯ ಸ್ಥಿತಿ ನಿನಗೆ ತಿಳಿಯದು. ನಿನ್ನ ಅಪೇಕ್ಷೆಯಂತೆ ನಾನು ಅಧ್ಯಕ್ಷತೆ ವಹಿಸಲು ಒಪ್ಪಿದ್ದೇನೆಂದು ಎರಡೂ ಕಡೆಯವರಿಗೂ ತಿಳಿಸು. ಸಭೆ ಸೇರುವುದೆಂದು ಅವರಲ್ಲಿ ಯಾರು ಬಂದು ತಿಳಿಸಿದರೂ ನಾನು ಖಂಡಿತ ಬಂದು ಅಧ್ಯಕ್ಷತೆ ವಹಿಸುತ್ತೇನೆ" ಎಂದು ಹೇಳಿದರು. ಪುಣೆಯಲ್ಲಿ ಭಾರಿ ಸಭೆ ಸೇರಿತು. ಎರಡು ಪಕ್ಷಗಳ ಮುಖಂಡರೂ ಬಂದು ನನ್ನ ಧ್ಯೇಯಕ್ಕೆ ಬೆಂಬಲ ಕೊಟ್ಟು ಮಾನಾಡಿದರು.

ಅಲ್ಲಿಂದ ಮದ್ರಾಸಿಗೆ ಹೋದೆ. ಆಗ ನ್ಯಾಯವಾದಿಗಳಾಗಿದ್ದ ಸರ್ ಸುಬ್ರಹ್ಮಣ್ಯ ಅಯ್ಯರ್, ಪಿ.ಆನಂದಾಚಾರ್ಲು, ಆಗ 'ಹಿಂದೂ' ಸಂಪಾದಕರಾಗಿದ್ದ ಜಿ. ಸುಬ್ರಹ್ಮಣ್ಯ ಅಯ್ಯ, 'ಮದ್ರಾಸ್ ಸ್ಟಾಂಡರ್ಡ್' ಪತ್ರಿಕೆಯ ಸಂಪಾದಕರಾದ ಪರಮೇಶ್ವರಂ ಪಿಳ್ಳೆ, ಪ್ರಸಿದ್ಧ ನ್ಯಾಯವಾದಿಗಳಾದ ಭಾಷ್ಯಂ ಅಯ್ಯಂಗಾರ, ನಾರ್ಟನ್ ಮುಂತಾದವರನ್ನು

ನೋಡಿದೆ. ಒಂದು ದೊಡ್ಡ ಸಭೆಯೂ ಸೇರಿತು. ಅಲ್ಲಿಂದ ಕಲ್ಕತ್ತಾಕ್ಕೆ ಹೋದೆ. ಅಲ್ಲಿ ಸುರೇಂದ್ರನಾಥ ಬಾನರ್ಜಿ, ಮಹಾರಾಜ ಜೋತೀಂದ್ರ ಮೋಹನ್ ಠಾಕೂರ್, 'ಇಂಗ್ಲಿಷಮನ್' ಪತ್ರಿಕೆಯ ಸಂಪಾದಕರಾದ ಸಾಂಡರ್ಸ್ ಮುಂತಾದವರನ್ನು ನೋಡಿದೆ. ಕಲ್ಕತ್ತದಲ್ಲಿ ಒಂದು ಸಭೆಯನ್ನು ಸೇರಿಸಬೇಕೆಂದಿರುವಾಗಲೆ, ಕೂಡಲೆ ಹೊರಟು ಬರಬೇಕೆಂದು ನೇಟಾಲಿನಿಂದ ಕೇಬಲ್ ಬಂದಿತು. ಇದು ೧೮೯೬ನೆಯ ನವೆಂಬರ್ ತಿಂಗಳಲ್ಲಿ ಭಾರತೀಯರಿಗೆ ವಿರೋಧವಾಗಿ ಏನೋ ಒಂದು ಚಳವಳಿ ಪ್ರಾರಂಭವಾಗಿರಬೇಕೆಂದು ಊಹಿಸಿದೆ. ಆದ್ದರಿಂದ ಕಲ್ಕತ್ತದಲ್ಲಿ ನನ್ನ ಕೆಲಸವನ್ನು ಅಷ್ಟಕ್ಕೆ ನಿಲ್ಲಿಸಿ ಬೊಂಬಾಯಿಗೆ ಬಂದು ಮೊದಲು ಸಿಕ್ಕಿದ ಹಡಗಿನಲ್ಲಿ ನನ್ನ ಮನೆಯವರೊಂದಿಗೆ ಹೊರಟೆ. ದಾದಾ ಅಬ್ದುಲ್ಲಾ ಅಂಗಡಿಯವರು 'ಎಸ್.ಎಸ್.ಕೂರ್ಲೆಂಡ್' ಎಂಬ ಹಡಗನ್ನು ಕೊಂಡು ಪೋರ್ಬಂದರಿಗೂ ನೇಟಾಲಿಗೂ ಮಧ್ಯೆ ನಡೆಸುತ್ತಿದ್ದರು. ಸಾಹಸಿಗಳಾದ ಆ ವರ್ತಕರು ಇದೊಂದು ಹೊಸ ಉದ್ಯಮವನ್ನು ಪ್ರಾರಂಭಿಸಿದ್ದರು. ಪರ್ಷಿಯನ್ ಸ್ಟೀಮ್ ನ್ಯಾವಿಗೇಷನ್ ಕಂಪೆನಿಯ 'ನಾದೇರಿ' ಎಂಬ ಹಡಗು ಸಹ ಬೊಂಬಾಯಿಯಿಂದ ನೇಟಾಲಿಗೆ ಹೊರಟಿತ್ತು. ಈ ಎರಡು ಹಡಗುಗಳಲ್ಲಿದ್ದ ಒಟ್ಟು ಪ್ರಯಾಣಿಕರ ಸಂಖ್ಯೆ ೮೦೦.

ಹಿಂದೂಸ್ಥಾನದ ಮುಖ್ಯ ವೃತ್ತಪತ್ರಿಕೆಗಳೆಲ್ಲವೂ ಭಾರತದಲ್ಲಿ ನಾನು ನಡಸಿದ ಪ್ರಚಾರಕ್ಕೆ ಪ್ರಾಮುಖ್ಯತೆ ಕೊಟ್ಟುವು. ಆ ವಿಷಯವಾಗಿ ರಾಯಿಟರ್ ಸುದ್ದಿಗಾರನು ಇಂಗ್ಲೆಂಡಿಗೆ ಕೇಬಲ್ ವರ್ತಮಾನ ಕಳುಹಿಸಿದನು. ಇದು ನೇಟಾಲ್ ಸೇರಿದ ಒಡನೆ ತಿಳಿಯಿತು. ಇಂಗ್ಲೆಂಡಿನಲ್ಲಿ ರಾಯಿಟರ್ ಸುದ್ದಿಗಾರನು, ಹಿಂದುಸ್ಥಾನದಲ್ಲಿ ನಾನು ಮಾಡಿದ ಭಾಷಣಗಳ ವರದಿಯ ಸಾರಾಂಶಗಳನ್ನು ಉತ್ಪ್ರೇಕ್ಷಮಾಡಿ ನೇಟಾಲಿಗೆ ಕಳುಹಿಸಿದ್ದನು. ಈ ರೀತಿ ಆಗುವುದು ಏನೂ ಹೊಸದಲ್ಲ. ಮನಃಪೂರ್ವಕವಾಗಿ ಈ ರೀತಿ ಯಾರೂ ಉತ್ಪ್ರೇಕ್ಷೆ ಮಾಡುವುದಿಲ್ಲ. ತಮ್ಮದೇ ದೃಷ್ಟಿಯಿಂದ ನೋಡುವ ಪಕ್ಷಪಾತಿಗಳಾದ ಸುದ್ದಿಗಾರರು ಅವಸರದಲ್ಲಿ ಅಲ್ಪಸ್ವಲ್ಪ ಓದಿ, ಅನೇಕ ವೇಳೆ ಊಹೆಯಿಂದಲೇ ವರದಿಗಳನ್ನು ಬರೆಯುತ್ತಾರೆ. ಈ ವರದಿಗಳನ್ನು ಮುದ್ರಣ ಮಾಡುವಾಗ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆಯಾಗಿ ಅರ್ಥಮಾಡುತ್ತಾರೆ. ಈ ರೀತಿಯಾಗಿ ಯಾರೂ ಮನಃಪೂರ್ವಕವಾಗಿ ಮಾಡದೆ ಇದ್ದರೂ ವಿಷಯವೇ ಬದಲಾವಣೆ ಹೊಂದುತ್ತದೆ. ಸಾರ್ವಜನಿಕ ಕ್ಷೇತ್ರಗಳಲ್ಲ ಈ ಅಪಾಯ ಇದ್ದೇ ಇದೆ; ಅದರ ಮಿತಿಯೂ ಅಷ್ಟೆ. ಹಿಂದೂಸ್ತಾನದಲ್ಲಿದ್ದ ವೇಳೆಯಲ್ಲಿ ನಾನು ನೇಟಾಲ್ ಯೂರೋಪಿಯನರನ್ನು ಟೀಕಿಸಿದ್ದೆ. ವಾಯಿದೆ ಕೆಲಸಗಾರರ ಮೇಲೆ ಹೊರಿಸಿದ್ದ ಮೂರು ಪೌಂಡುಗಳ ತಲೆಕಂದಾಯದ ವಿಷಯವಾಗಿ ಕಟುವಾಗಿ ಟೀಕೆ ಮಾಡಿದ್ದೆ. ವಾಯಿದೆ ಕೆಲಸಗಾರನಾದ ಸುಬ್ರಹ್ಮಣಂ ಎಂಬಾತನ ಯಜಮಾನರು ಸುಬ್ರಹ್ಮಣ್ಯನನ್ನು ಹೊಡೆದು ಗಾಯಮಾಡಿದ್ದುದನ್ನು ನಾನೇ ನೋಡಿದ್ದೆ. ಆತನ ವ್ಯಾಜ್ಯವನ್ನು ನಾನೇ ನಡಸುತ್ತಲಿದ್ದೆ. ಆದ್ದರಿಂದ ಆತನು ಪಟ್ಟ ಕಷ್ಟವನ್ನು ಕಂಡಂತೆ ವರ್ಣಿಸಿದೆ. ನೇಟಾಲಿನ ಯೂರೋಪಿಯನರು ನನ್ನ ಭಾಷಣಗಳ ತಪ್ಪು ವರದಿಗಳನ್ನು

ಓದಿ ನನ್ನ ಮೇಲೆ ಹಲ್ಲುಕಡಿಯುತ್ತಿದ್ದರು. ಇದರಲ್ಲಿ ಆಶ್ಚರ್ಯವೇನೆಂದರೆ ನೇಟಾಲಿನಲ್ಲಿ ನಾನು ಬರೆಯುತ್ತ, ಮಾತನಾಡುತ್ತ ಇದ್ದುದು ಹಿಂದೂಸ್ಥಾನದಲ್ಲಿ ಬರೆದು ಮಾತನಾಡಿದುದಕ್ಕಿಂತ ಹೆಚ್ಚು ವಿಶದವಾಗಿಯೂ ಕಟುವಾಗಿಯೂ ಇರುತ್ತಿತ್ತು. ಹಿಂದೂಸ್ಥಾನದಲ್ಲಿ ನಾನು ಮಾಡಿದ ಭಾಷಣಗಳಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆ ಇರಲಿಲ್ಲ. ಸಾಮಾನ್ಯವಾಗಿ ಹೊಸಬನಿಗೆ ಒಂದು ವಿಷಯ ತಿಳಿಸಲು ಹೋದರೆ ನಾವು ಹೇಳಬೇಕೆಂದಿರುವುದಕ್ಕಿಂತ ಹೆಚ್ಚಿನ ಅರ್ಥಮಾಡುವುದು ಸ್ವಭಾವವಾದ್ದರಿಂದ ನಾನು ದಕ್ಷಿಣ ಆಫ್ರಿಕದ ವಿಷಯವಾಗಿ ಬಿಗಿ ಹಿಡಿದೇ ಮಾತನಾಡಿದ್ದೆ. ಆದರೆ ನೇಟಾಲಿನಲ್ಲಿ ನಾನು ಬರೆದುದನ್ನು ಓದುತ್ತಿದ್ದವರೇ ಅಪರೂಪ; ಅದನ್ನು ಮನಸ್ಸಿಗೆ ಹಚ್ಚಿಕೊಳ್ಳುತ್ತಿದ್ದವರು ಇನ್ನೂ ವಿರಳ. ಆದರೆ ಹಿಂದೂಸ್ಥಾನದಲ್ಲಿನ ನನ್ನ ಭಾಷಣ ಮತ್ತು ಲೇಖನಗಳ ವಿಷಯದಲ್ಲಿ ಭಾವನೆಯೇ ಬೇರೆ ಆಯಿತು. ರಾಯಿಟರ್ ವರದಿಗಳನ್ನು ಸಾವಿರರು ಜನರು ಓದುತ್ತಿದ್ದರು. ಅದೂ ಅಲ್ಲದೆ ಕೇಬಲ್ ಗ್ರಾಮ್ ಮೂಲಕ ವರದಿ ಮಾಡಲು ಯೋಗ್ಯವೆನಿಸಿದ ವಿಷಯಕ್ಕೆ ಇಲ್ಲದ ಪ್ರಾಮುಖ್ಯತೆ ಬಂದು ಬಿಡುತ್ತದೆ. ನೇಟಾಲಿನ ಯೂರೋಪಿಯನರು, ನಾನು ಹಿಂದೂಸ್ಥಾನದಲ್ಲಿ ನಡೆಸಿದ ಪ್ರಚಾರಕ್ಕೆ ಒಂದು ವಿಶೇಷ ಮಹತ್ವವಿದೆಯೆಂದು ಭಾವಿಸಿದರು. ಪ್ರಾಯಶಃ ಇನ್ನು ಮುಂದೆ ಹಿಂದೂಸ್ಥಾನದಿಂದ ತಮಗೆ ವಾಯಿದೆ ಕೂಲಿಗಳೇ ಬರುವುದಿಲ್ಲವೆಂದೂ ನೂರಾರು ಯೂರೋಪಿಯನ್ ಪ್ಲಾಂಟರುಗಳು ಕಷ್ಟಕ್ಕೀಡಾಗುವರೆಂದೂ ಭಾವಿಸಿದರು. ಅಲ್ಲದೆ ಭಾರತದ ಎದುರಿನಲ್ಲಿ ತಮ್ಮ ಮುಖಕ್ಕೆ ಮಸಿ ಬಳಿದಂತಾಯಿತೆಂದು ತಿಳಿಸಿದರು.

ನೇಟಾಲಿನ ಯೂರೋಪಿನರ ಮನಸ್ಸು ಈ ರೀತಿ ಕದಡಿದಾಗ ಎಸ್. ಎಸ್.'ಕೂರ್ಲೆಂಡ್'ನಲ್ಲಿ ೨೦೦–೪೦೦ ಭಾರತೀಯರೊಂದಿಗೆ ಸಂಸಾರ ಸಮೇತ ನಾನು ಬರುತ್ತಿದ್ದೇನೆಂದೂ, ಎಸ್.ಎಸ್. 'ನಾದೇರಿ' ಎಂಬ ಹಡಗಿನಲ್ಲಿಯೂ ವರ್ತಮಾನ ತಿಳಿಯಿತು. ಈ ವರ್ತಮಾನ ಕೇಳಿ ಅವರ ತಾಳ್ಮೆ ಎಲ್ಲೆ ಮೀರಿತು. ಕೋಪ ಉದ್ರೇಕಗೊಂಡಿತು. ನೇಟಾಲ್ ಯೂರೋಪಿಯನರು ದೊಡ್ಡ ಸಭೆಗಳನ್ನು ಸೇರಿಸಿದರು. ಅವರ ಮುಖಂಡರೆಲ್ಲರೂ ಸಭೆಗೆ ಬಂದಿದ್ದರು. ಭಾರತೀಯರ ಮೇಲೆ, ಮುಖ್ಯವಾಗಿ ನನ್ನ ಮೇಲೆ, ಕಟುವಾದ ಟೀಕೆಗಳಾದವು. 'ಕೂರ್ಲೆಂಡ್', 'ನಾದೇರಿ' ಹಡಗುಗಳಲ್ಲಿ ನೇಟಾಲನ್ನು ಮುತ್ತಿಗೆ ಹಾಕಲು ನಾನು ಬರುತ್ತಿದ್ದೇನೆಂದರು. ನಾಟಾಲಿಗೆ ೮೦೦ ಜನ ಪ್ರಯಾಣಿಕರನ್ನು ನಾನು ಕರೆದುಕೊಂಡು ಬಂದಿದ್ದೇನೆಂತಲೂ, ನೇಟಾಲನ್ನು ಸ್ವತಂತ್ರ ಭಾರತೀಯರಿಂದ ತುಂಬಲು ಇದೇ ಮೊದಲ ಹೆಜ್ಜೆ ಎಂದೂ ಆರೋಪಿಸಿದರು. ನಾನೂ ಸೇರಿ ಎರಡು ಹಡಗುಗಳ ಪ್ರಯಾಣಿಕರನ್ನೂ ನೇಟಾಲಿನಲ್ಲಿ ಇಳಿಯಲು ಅವಕಾಶ ಕೊಡಕೂಡದೆಂದು ಸರ್ವಾನುಮತದಿಂದ ನಿರ್ಣಯಿಸಿದರು. ಪ್ರಯಾಣಿಕರು ಇಳಿಯದಂತೆ ನೇಟಾಲ್ ಸರಕಾರ ತಡೆಯಲು ಇಷ್ಟಪಡದೆ ಹೋದರೆ, ಅಥವಾ ತಡೆಯಲಾಗದೆ ಇದ್ದರೆ ತಾವೇ ಸ್ವತಂತ್ರಿಸಿ, ಬಲಪ್ರಯೋಗದಿಂದ ಭಾರತೀಯರು ಇಳಿಯದಂತೆ ನಿಲ್ಲಿಸಲು ಆ ಸಭೆ ಒಂದು ಸಮಿತಿಯನ್ನು ಸಹ ಏರ್ಪಡಿಸಿತು. ಅದೇ

ದಿನವೇ ಎರಡು ಹಡಗುಗಳೂ ಡರ್ಬಾನ್ ಬಂದರವನ್ನು ಮುಟ್ಟಿದವು.

ಹಿಂದೂಸ್ಥಾನಕ್ಕೆ ಪ್ಲೇಗು ಮೊದಲು ಬಂದದ್ದು ೧೮೯೬ ರಲ್ಲಿ ಎಂಬುದು ಜ್ಞಾಪಕವಿರಬಹುದು. ಇಮಿಗ್ರೇಷನ್ ರೆಸ್ಟ್ರಿಕ್ಷನ್ ಆಕ್ಟ್ ಎಂಬ ಕಾನೂನು ಇನ್ನೂ ಜಾರಿಗೆ ಬಂದಿರಲಿಲ್ಲವಾದ್ದರಿಂದ, ನಮ್ಮನ್ನು ಹಡಗಿಳಿಯದಂತೆ ತಡೆಯಲು ನೇಟಾಲ್ ಸರಕಾರಕ್ಕೆ ಕಾನೂನಿನ ಬಾಧಕವಿತ್ತು. ಹಾಗಿಲ್ಲದಿದ್ದ ಪಕ್ಷದಲ್ಲಿ ಸರಕಾರದ ಸಹಾನುಭೂತಿ ಎಲ್ಲ ಯೂರೋಪಿಯನ್ ಸಮಿತಿಯ ಪರವೇ ಇತ್ತು. ಸರಕಾರದ ಅಧಿಕಾರಿಯಾಗಿದ್ದ ದಿವಂಗತ ಎಸ್ಕಾಮರು ಆ ಸಮಿತಿಯ ಕಾರ್ಯಕಲಾಪಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರೇ ಯೂರೋಪಿಯನರನ್ನು ಎತ್ತಿಕಟ್ಟಿದ್ದರು. ಹಡಗಿನಲ್ಲಿ ಸಾಂಕ್ರಾಮಿಕ ಜಾಡ್ಯವಿದ್ದರೆ ಅಥವಾ ಸಂಕ್ರಾಮಿಕ ಜಾಡ್ಯವಿರುವ ಬಂದರದಿಂದ ಹಡಗು ಬಂದಿದ್ದರೆ ಕೆಲವು ಕಾಲ ಪರೀಕ್ಷಾ ಕೇಂದ್ರದಲ್ಲಿರಬೇಕೆಂದು ಎಲ್ಲ ಬಂದರುಗಳಲ್ಲೂ ನಿಯಮವಿದೆ. ಆರೋಗ್ಯ ರಕ್ಷಣೆಗಾಗಿ ಬಂದರಿನ ಆರೋಗ್ಯ ಶಾಖಾಧಿಕಾರಿಯ ಅಪ್ಪಣೆಯಂತೆ ಈ ನಿರ್ಬಂಧವನ್ನು ಜಾರಿ ಮಾಡಬಹುದು. ನೇಟಾಲ್ ಸರಕಾರದವರು ರಾಜಕೀಯ ಉದ್ದೇಶಗಳಿಗಾಗಿ ಈ ಅಧಿಕಾರವನ್ನು ದುರುಪಯೋಗಪಡಿಸಿದರು. ಹಡಗಿನಲ್ಲಿ ಯಾವ ಸಾಂಕ್ರಮಿಕ ರೋಗವೂ ಇಲ್ಲದೆ ಹೋದರೂ ಎರಡು ಹಡಗುಗಳನ್ನೂ ವಾಯಿದೆ ಮೀರಿ ಇಪ್ಪತ್ತು ಮೂರು ದಿನಗಲ ಕಾಲ ತಡೆದುಹಾಕಿದರು. ಈ ಮಧ್ಯೆ ಯೂರೋಪಿಯನರ ಸಮಿತಿ ತನ್ನ ಅಪಪ್ರಚಾರ ನಡೆಸುತ್ತಲೇ ಇತ್ತು. 'ಕೂರ್ಲೆಂಡ್' ಮಾಲಕರಾದ ದಾದಾ ಅಬ್ದುಲ್ಲಾ ರವರಿಗೂ 'ನಾದೇರಿ'ಯ ಎಜಂಟರಿಗೂ ಇಲ್ಲದ ತೊಂದರೆಯನ್ನು ಕೊಟ್ಟರು. ಪ್ರಯಾಣಿಕರನ್ನು ಹಿಂದಕ್ಕೆ ಕರೆದೊಯ್ಯಲು ಲಂಚಕೊಡಲು ಬಂದರು. ಹಿಂದಕ್ಕೆ ಕರೆದುಕೊಂಡು ಹೋಗದಿದ್ದರೆ ಅವರ ವ್ಯಾಪಾರವನ್ನೇ ಹಾಳುಮಾಡುವುದಾಗಿ ಹೆದರಿಸಿದರು. ಆದರೆ ಅಂಗಡಿಯ ಪಾಲುಗಾರರು ಹೇಡಿಗಳಾಗಿರಲಿಲ್ಲ. ತಾವು ಹಾಳಾದರೂ ಅಡ್ಡಿಯಿಲ್ಲವೆಂದು ಹಠತೊಟ್ಟರು. ನಿಸ್ಸಹಾಯಕರೂ ನಿರಪರಾಧಿಗಳೂ ಆದ ಪ್ರಯಾಣಿಕರನ್ನು ಹಿಂದಕ್ಕೆ ಕಳಿಸುವ ಅಪರಾಧವನ್ನು ತಾವೆಂದಿಗೂ ಮಾಡುವುದಿಲ್ಲವೆಂದೂ ಕೊನೆಯುವರೆಗೂ ಕಾದಾಡುವುದೇ ನಿಜವೆಂದೂ ತೀರ್ಮಾನಿಸಿದರು. ಸ್ವದೇಶಾಭಿಮಾನ ಅವರಿಗೇನೂ ಹೊಸದಾಗಿರಲಿಲ್ಲ. ಅಂಗಡಿಯ ನ್ಯಾಯಸಲಹೆಗಾರರಾದ ಎಫ್.ಎ.ಲಾಫ್ಟನ್ ರೂ ಒಳ್ಳೆಯ ಧೈರ್ಯಶಾಲಿಗಳಾಗಿದ್ದರು.

ಅದೃಷ್ಟಕ್ಕೆ ಸರಿಯಾಗಿ ಸೂರತ್ ನಗರದ ಕಾಯಸ್ಥ ಸದ್ಗೃಹಸ್ಥರೂ ದಿವಂಗತ ನ್ಯಾಯಮೂರ್ತಿ ನಾನಾಭಾಯಿ ಹರಿದಾಸರ ಅಣ್ಣಂದಿರ ಮಕ್ಕಳೂ ಆದ ಮನ್ಸುಖಲಾಲ್ ಹೀರಾಲಾಲ್ ನಾಜರ್ ಅವರು ಅದೇ ಸಮಯಕ್ಕೆ ದಕ್ಷಿಣ ಆಫ್ರಿಕಕ್ಕೆ ಬಂದರು. ನನಗೆ ಅವರು ಪರಿಚಯ ಇರಲಿಲ್ಲ ಮತ್ತು ಅವರು ಹೊರಡುವುದೂ ಗೊತ್ತಿರಲಿಲ್ಲ. 'ಕೂರ್ಲೆಂಡ್' ಮತ್ತು 'ನಾದೇರಿ' ಯ ಪ್ರಯಾಣಿಕರನ್ನು ಕರೆತರಲು ನನ್ನ ಪ್ರಯತ್ನ ಯಾವುದೂ ಇರಲಿಲ್ಲವೆಂದು ನಾನು ಹೇಳಬೇಕಾಗಿಲ್ಲ. ಅವರಲ್ಲಿ ಅನೇಕರು ದಕ್ಷಿಣ ಆಫ್ರಿಕದಲ್ಲಿ ಮೊದಲು ಇದ್ದವರು. ಕೆಲವರು ಟ್ರಾನ್ಸ್ ವಾಲಿಗೆ ಹೊರಟಿದ್ದರು. ಯೂರೋಪಿಯನರ

ಸಮಿತಿ ಪ್ರಯಾಣಿಕರಲ್ಲಿ ಬೆದರಿಕೆಯ ಪ್ರಕಟನೆಗಳನ್ನು ಸಹ ಹಂಚಿತು. ಹಡಗುಗಳ ಕ್ಯಾಪ್ಟನ್ನರು ಪ್ರಯಾಣಿಕರಿಗೆ ಓದಿ ಹೇಳಿದರು. ನೇಟಾಲಿನ ಯೂರೋಪಿಯನರು ಬಹಳ ಕೋಪಗೊಂಡಿರುವುದಾಗಿಯೂ ಈ ಎಚ್ಚರಿಕೆ ಕೊಟ್ಟ ಮೇಲೂ ಭಾರತೀಯ ಪ್ರಯಾಣಿಕರು ಬಂದರಿನಲ್ಲಿ ಇಳಿದರೆ ಸಮಿತಿಯ ಸದಸ್ಯರು ಬಂದರಿನಲ್ಲಿದ್ದು, ಪ್ರತಿಯೊಬ್ಬ ಭಾರತೀಯನನ್ನೂ ಸಮುದ್ರದೊಳಕ್ಕೆ ತಳ್ಳುವುದಾಗಿಯೂ ಆ ಹಸ್ತಪತ್ರಿಕೆಗಳಲ್ಲಿ ಸ್ಪಷ್ಟವಾಗಿ ತಿಳಿಸಿದ್ದರು. 'ಕೂರ್ಲೆಂಡ್' ಹಡಗಿನ ಪ್ರಯಾಣಿಕರಿಗೆ ನಾನು ಅದರಂತೆಯೇ ಇಂಗ್ಲಿಷ್ ಬಲ್ಲ ಪ್ರಯಾಣಿಕರು ಅರ್ಥ ಹೇಳಿದರು. ಎರಡು ಹಡಗುಗಳ ಪ್ರಯಾಣಿಕರೂ ಹಿಂದಕ್ಕೆ ಹೋಗುವುದಿಲ್ಲವಾಗಿ ತಿಳಿಸಿದರು. ಕೆಲವರು ಟ್ರಾನ್ಸವಾಲಿಗೆ ಹೋಗುವುದಾಗಿಯೂ ಇನ್ನು ಕೆಲವರು ನೇಟಾಲಿನ ಮುಂಚಿನ ನಿವಾಸಿಗಳೆಂತಲೂ, ಏನೇ ಆಗಲಿ ಪ್ರತಿಯೊಬ್ಬ ಪ್ರಯಾಣಿಕನಿಗೂ ನೇಟಾಲಿನಲ್ಲಿ ಹಡಗು ಇಳಿಯಲು ಹಕ್ಕು ಇರುವುದಾಗಿಯೂ ಯೂರೋಪಿಯನ್ ಸಮಿತಿಯ ಹೆದರಿಕೆಯಿದ್ದರೂ ತಮಗೆ ಹಕ್ಕು ಇದೆಯೋ ಇಲ್ಲವೋ ಪರೀಕ್ಷೆ ಮಾಡಲು ಪ್ರತಿಯೊಬ್ಬರೂ ಹಡಗು ಇಳಿಯಬೇಕೆಂದು ಪಣ ತೊಟ್ಟಿರುವುದಾಗಿಯೂ ತಿಳಿಸಿದರು.

ನೇಟಾಲ್ ಸರಕಾರಕ್ಕೆ ದಿಕ್ಕೇ ಕಾಣದಂತಾಯಿತು. ಈ ರೀತಿ ಅನ್ಯಾಯವಾದ ನಿರ್ಬಂಧವನ್ನು ಎಷ್ಟು ದಿನ ಹಾಕುವುದು ? ಇಪ್ಪತ್ತು ಮೂರು ದಿನಗಳು ಆಗಲೇ ಕಳೆದು ಹೋಗಿದ್ದವು. ದಾದಾ ಅಬ್ದುಲ್ಲಾ ಆಗಲಿ ಪ್ರಯಾಣಿಕರಾಗಲಿ ಯಾರೂ ಜಗ್ಗಲಿಲ್ಲ. ಇಪ್ಪತ್ತುಮೂರು ದಿನಗಳ ಅನಂತರ ನಿರ್ಬಂಧವನ್ನು ತೆಗೆದುಹಾಕಲಾಯಿತು. ಹಡಗುಗಳೆರಡೂ ಬಂದರೊಳಕ್ಕೆ ಬಂದುವು. ಈ ಮಧ್ಯೆ ಎಸ್ಕಾಮ್ ರು ಉದ್ರಿಕ್ತರಾದ ಯೂರೋಪಿಯನ್ ಸಮಿತಿಯ ಸದಸ್ಯರನ್ನು ಸಮಾಧಾನಗೊಳಿಸಿದ್ದರು. ಒಂದು ಸಭೆಯಲ್ಲಿ "ಡರ್ಬಾನಿನ ಯೂರೋಪಿಯನರಾದ ನೀವು ಅಭಿನಂದನೀಯವಾದ ಒಗ್ಗಟ್ಟನ್ನೂ ಧೈರ್ಯವನ್ನೂ ತೋರಿಸಿದ್ದೀರಿ. ನಿಮ್ಮ ಕೈಲಾದ ಪ್ರಯತ್ನವನ್ನೆಲ್ಲ ನೀವು ಮಾಡಿರುತ್ತೀರಿ. ಸರಕಾರದವರೂ ನಿಮಗೆ ಸಹಾಯ ಮಾಡಿದ್ದಾರೆ. ಭಾರತೀಯರನ್ನು ಇಪ್ಪತ್ತುಮೂರು ದಿನಗಳ ಕಾಲ ನಿರ್ಬಂಧದಲ್ಲಿಟ್ಟೆವು. ನೀವು ನಿಮ್ಮ ಮನೋಭಿಪ್ರಾಯಕ್ಕೆ ಮತ್ತು ಸಾರ್ವಜನಿಕ ನಿಷ್ಠೆಗೆ ತಕ್ಕಷ್ಟು ನಿದರ್ಶನ ಕೊಟ್ಟಿರುತ್ತೀರಿ. ಸಾಮ್ರಾಜ್ಯ ಸರಕಾರದ ಮೇಲೂ ಇದು ಶ್ರೇಷ್ಠ ಪರಿಣಾಮವನ್ನು ಉಂಟುಮಾಡುತ್ತದೆ. ನಿಮ್ಮ ಕಾರ್ಯ ನೇಟಾಲ್ ಸರಕಾರದ ಮಾರ್ಗವನ್ನು ಸುಲಭ ಮಾಡಿದೆ. ನೀವು ಬಲಾತ್ಕಾರದಿಂದ ಒಬ್ಬನೇ ಒಬ್ಬ ಭಾರತೀಯನನ್ನು ಇಳಿಯಲು ಈಗ ಅಡ್ಡಿ ಮಾಡಿದರೂ ನಿಮ್ಮ ಕೆಲಸ ಕೆಡುವುದಲ್ಲದೆ, ಸರಕಾರವನ್ನು ನೀವು ಬಹಳ ಬಿಕ್ಕಟ್ಟಿಗೆ ಗುರಿಪಡಿಸುತ್ತೀರಿ. ಆಗಲೂ ಭಾರತೀಯರು ಇಳಿಯದಂತೆ ತಡೆಯುವುದು ನಿಮ್ಮಿಂದ ಸಾಧ್ಯವಾಗುವುದಿಲ್ಲ. ಪ್ರಯಾಣಿಕರನ್ನು ದೂರಲು ಕಾರಣ ಇಲ್ಲ. ಅವರಲ್ಲಿ ಹೆಂಗಸರೂ ಮಕ್ಕಳೂ ಇದ್ದಾರೆ. ಅವರು ಬೊಂಬಾಯಿಯಲ್ಲಿ ಹಡಗು ಹತ್ತಿದಾಗ ನಿಮ್ಮ ಮನೋಭಾವನೆ ಅವರಿಗೆ ತಿಳಿದಿರಲಿಲ್ಲ. ಆದ್ದರಿಂದ ನೀವೆಲ್ಲರೂ ಚದರಬೇಕೆಂದೂ, ಇವರಿಗೆ ಯಾವ ಆತಂಕವನ್ನೂ ಮಾಡಬಾರದೆಂದೂ ನಾನು

ಹೇಳಬಯಸುತ್ತೇನೆ. ಮುಂದೆ ಭಾರತೀಯರು ಈ ದೇಶಕ್ಕೆ ವಲಸೆ ಬರುವದನ್ನು ತಡೆಗಟ್ಟಲು ನೇಟಾಲ್ ಸರಕಾರ ಶಾಸನಸಭೆಯಿಂದ ಬೇಕಾದ ಅಧಿಕಾರವನ್ನು ಪಡೆಯುತ್ತದೆ" ಎಂದು ಹೇಳಿದರು. ಇದು ಎಸ್ಕಾಮ್ ರ ಭಾಷಣದ ಸಾರಾಂಶ ಮಾತ್ರ. ಅವರ ಶ್ರೋತೃವೃಂದಕ್ಕೆ ಬಹಳ ನಿರಾಶೆಯಾಯಿತು. ಆದರೆ ನೇಟಾಲ್ ಯೂರೋಪಿಯನರು ಅವರ ಮಾತನ್ನು ಮೀರುತ್ತಿರಲಿಲ್ಲ. ಅವರ ಬುದ್ಧಿವಾದದಂತೆ ಎಲ್ಲರೂ ಚದರಿದರು; ಎರಡು ಹಡಗುಗಳೂ ಬಂದರಿನ ಒಳಗೆ ಬಂದವು.

ನಾನು ಎಲ್ಲರೊಡನೆ ಹಡಗನ್ನು ಇಳಿಯಬಾರದಾಗಿಯೂ, ಸಂಜೆಯಾದ ಮೇಲೆ ಮನೆಗೆ ಕರೆದೊಯ್ಯಲು ಪೋಲೀಸ್ ಸೂಪರಿಂಟೆಂಡೆಂಟರನ್ನು ಕಳುಹಿಸುವುದಾಗಿಯೂ, ನನ್ನ ಮನೆಯವರು ಯಾವಾಗ ಬೇಕಾದರು ಹಡಗಿಳಿಯಬಹುದಾಗಿಯೂ ಎಸ್ಕಾಮ್ ರು ನನಗೆ ವರ್ತಮಾನ ಕಳುಹಿಸಿದರು. ಇದು ಯಾವ ಕಾನೂನು ಪ್ರಕಾರವೂ ಮಾಡಿದ ಆಜ್ಞೆಯಲ್ಲ. ನನಗೆ ಕಾದಿದ್ದ ವಿಪತ್ತಿಗೆ ಮುಂಜಾಗ್ರತೆ ಕೊಟ್ಟು, ನನ್ನನ್ನು ಇಳಿಯಗೊಡಬಾರದೆಂದು ಹಡಗಿನ ಕ್ಯಾಪ್ಟನ್‌ಗೆ ಕಳುಹಿಸಿದ್ದ ಸಲಹೆ ಮಾತ್ರ. ಇಳಿಯದಂತೆ ತಡೆಯಲು ಕ್ಯಾಪ್ಟನ್‌ಗೆ ಯಾವ ಅಧಿಕಾರ ಬಲವೂ ಇರಲಿಲ್ಲ. ಸಲಹೆಯಂತೆ ನಡೆಯಬೇಕೆಂದು ನಾನು ತೀರ್ಮಾನಿಸಿದೆ. ನನ್ನ ಮನೆಯವರನ್ನ ಮನೆಗೆ ಕಳುಹಿಸುವ ಬದಲು ನನ್ನ ಹಳೆಯ ಪಾರ್ಸಿ ಸ್ನೇಹಿತರೂ ಕಕ್ಷಿಗಾರರೂ ಆಗಿದ್ದ ರುಸ್ತುಂಜಿ ಅವರ ಮನೆಗೆ ಕಳುಹಿಸಿ ಅಲ್ಲಿ ಅವರನ್ನು ಆಮೇಲೆ ನೋಡುವುದಾಗಿ ಹೇಳಿದೆ. ಪ್ರಯಾಣಿಕರೆಲ್ಲರೂ ಇಳಿದ ಅನಂತರ ದಾದಾ ಅಬ್ದುಲ್ಲಾ ಸಲಹೆಗಾರರಾದ ಲಾಫ್ಟನ್‌ರೂ ನನ್ನ ಆಪ್ತಸ್ನೇಹಿತರೊಬ್ಬರೂ ಬಂದು ನನ್ನನ್ನು ನೋಡಿದರು. ಏಕೆ ಹಡಗು ಇಳಿಯಲಿಲ್ಲವೆಂದು ನನ್ನನ್ನು ಪ್ರಶ್ನಿಸಿದರು. ಎಸ್ಕಾಮ್‌ರ ಪತ್ರದ ವಿಷಯ ಅವರಿಗೆ ತಿಳಿಸಿದೆ. ನಾನು ಸಂಜೆಯವರೆಗೆ ಕಾದಿದ್ದು ಕಳ್ಳನಂತೆ ರಾತ್ರಿ ವೇಳೆ ಪಟ್ಟಣವನ್ನು ಪ್ರವೇಶಿಸುವುದು ತಮಗೆ ಇಷ್ಟವಿಲ್ಲವಾಗಿಯೂ ತಮ್ಮ ಜೊತೆಯಲ್ಲಿಯೇ ಆಗಲೇ ಹೊರಡಬೇಕಾಗಿಯೂ ಪ್ರಮಾದ ಏನೂ ಇಲ್ಲವೆಂಬಂತೆ ಪಟ್ಟಣದೊಳಕ್ಕೆ ನಡೆದುಹೊಗಬೇಕಾಗಿಯೂ ತಿಳಿಸಿದರು.

"ನನಗೆ ಹೆದರಿಕೆ ಏನೂ ಇಲ್ಲ. ಆದರೆ ಎಸ್ಕಾಮ್ ರ ಸಲಹೆಯನ್ನು ನಾನು ಅಂಗೀಕರಿಸಬೇಕೆ, ಬೇಡವೆ ಎಂಬುದೇ ಮುಖ್ಯ ಪ್ರಶ್ನೆ. ಅದೂ ಅಲ್ಲದೆ ಈ ವಿಷಯದಲ್ಲಿ ಹಡಗಿನ ಕ್ಯಾಪ್ಟನ್‌ನ ಜವಾಬ್ದಾರಿ ಏನೆಂಬುದನ್ನು ಯೋಚಿಸಬೇಕು" ಎಂದು ತಿಳಿಸಿದೆ.

ಲಾಫ್ಟನ್‌ರು ನಕ್ಕು "ಎಸ್ಕಾಮ್ರ ಮಾತನ್ನು ನೀವು ಕೇಳಲು ಅವರು ನಿಮಗೆ ಏನು ಮಾಡಿದ್ದಾರೆ? ಪೂರ್ವೋತ್ತರ ಆಶೆಯಿಲ್ಲದೆ ನಿಮ್ಮ ಮೇಲಿನ ಅಭಿಮಾನದಿಂದ ಈ ರೀತಿ ಮಾಡಿದ್ದಾರೆಂದು ನಂಬಲು ನಿಮಗಿರುವ ಕಾರಣವಾದರೂ ಏನು? ಪಟ್ಟಣದಲ್ಲಿ ಏನು ನಡೆದಿದೆ ಎಂಬುದೂ ಅದರಲ್ಲಿ ಎಸ್ಕಾಮರು ಯಾವ ಭಾಗ ವಹಿಸುತ್ತಾರೆಂದೂ ನಿಮಗಿಂತ ಹೆಚ್ಚು ನನಗೆ ಗೊತ್ತು" ಎಂದರು.

ಅವರ ಮಾತಿನ ಮಧ್ಯೆ ನಾನು ತಲೆಯಲ್ಲಾಡಿಸಿದೆ.

ಲಾಫ್ಟನ್ ರು "ಎಸ್ಕಾಮ್ರು ಸದುದ್ದೇಶದಿಂದಲೇ ಪ್ರೇರಿತರಾಗಿದ್ದಾರೆಂದು ಭಾವಿಸೋಣ.

ಆದರೆ ಅವರ ಮಾತನ್ನು ನೀವು ಕೇಳಿದರೆ ನಿಮ್ಮ ಮರ್ಯಾದೆ ಮೂರು ಕಾಸಾಗುತ್ತದೆ. ನೀವು ಸಿದ್ಧರಿದ್ದರೆ ಈಗಲೇ ನನ್ನೊಂದಿಗೆ ಹೊರಡಬೇಕೆಂದು ನನ್ನ ಅಭಿಮತ. ಕ್ಯಾಪ್ಟನ್ ನಮ್ಮವನು, ಆತನ ಜವಾಬ್ದಾರಿಯೇ ನಮ್ಮ ಜವಾಬ್ದಾರಿ. ದಾದಾ ಅಬ್ದುಲ್ಲಾ ರವರಿಗೆ ಮಾತ್ರ ಆತನು ಉತ್ತರ ಹೇಳಬೇಕು. ಈ ಹೋರಾಟದಲ್ಲಿ ಅವರು ಅಸಾಧಾರಣ ಧೈರ್ಯವನ್ನು ತೋರಿಸಿರುವುದರಿಂದ ಅವರ ಅಭಿಪ್ರಾಯ ಏನೆಂಬುದು ನನಗೆ ತಿಳಿದಿದೆ" ಎಂದರು.

"ಹಾಗಾದರೆ ಹೊರಡೋಣ. ನಾನು ಸಿದ್ದತೆ ಏನನ್ನೂ ಮಾಡಬೇಕಾಗಿಲ್ಲ. ರುಮಾಲು ಮಾತ್ರ ಹಾಕಿಕೊಂಡರಾಯಿತು. ಕ್ಯಾಪ್ಟನ್ ಗೆ ತಿಳಿಸಿ ಹೊರಡೋಣ" ಎಂದು ಹೇಳಿದೆ. ಕ್ಯಾಪ್ಟನ್ ನ ಅಪ್ಪಣೆ ಪಡೆದೆವು.

ಲಾಫ್ಟನ್ ರು ಡರ್ಬಾನಿನಲ್ಲಿ ವೃದ್ಧರೂ ಸುಪ್ರಸಿದ್ಧರೂ ಆದ ನ್ಯಾಯವಾದಿಗಳು. ಹಿಂದೂಸ್ಥಾನಕ್ಕೆ ಹಿಂದಿರುಗುವ ಮುಂಚೆ ಅವರೊಂದಿಗೆ ಸಮೀಪ ಬಾಂಧವ್ಯವನ್ನು ಇಟ್ಟುಕೊಂಡಿದ್ದೆ. ಕಷ್ಟತರವಾದ ಮೊಕದ್ದಮೆಗಳಲ್ಲಿ ಅವರ ಸಲಹೆ ಪಡೆದು ಅನೇಕ ವೇಳೆ ಹಿರಿಯ ನ್ಯಾಯವಾದಿಗಳನ್ನಾಗಿ ನೇಮಿಸಿಕೊಳ್ಳುತ್ತಲಿದ್ದೆ.

ನಮ್ಮ ದಾರಿ ಡರ್ಬಾನಿನ ಮುಖ್ಯಬೀದಿಯ ಮುಖಾಂತರವಿತ್ತು. ನಾವು ಹೊರಟಾಗ ಸಂಜೆ ೪–೩೦ ಗಂಟೆಯಾಗಿತ್ತು. ಆಕಾಶದಲ್ಲಿ ಸ್ವಲ್ಪ ಮೋಡ ಕವಿದು ಸೂರ್ಯರಶ್ಮಿ ಕಾಣುತ್ತಿರಲಿಲ್ಲ. ಕಾಲು ನಡಿಗೆಯಿಂದ ಸೇಟ್ ರುಸ್ತುಂಜಿಯವರ ಮನೆಗೆ ಹೋಗಲು ಒಂದು ಗಂಟೆಯಾದರೂ ಬೇಕಿತ್ತು. ನಾವು ಹಡಗು ಇಳಿದಾಗ ನಿಲ್ದಾಣದಲ್ಲಿ ಸಾಮಾನ್ಯವಾಗಿ ಇರುತ್ತಿದ್ದ ಜನಸಂದಣಿಗಿಂತ ಹೆಚ್ಚು ಜನರು ಇರಲಿಲ್ಲ. ನಾವು ಇಳಿದ ಕೂಡಲೆ ಕೆಲಸವು ಹುಡುಗರು ನಮ್ಮನ್ನು ನೋಡಿದರು. ನನ್ನದೇ ಒಂದು ನಮೂನೆಯ ರುಮಾಲನ್ನು ಧರಿಸುವವನು ಭಾರತೀಯರಲ್ಲಿ ನಾನೊಬ್ಬನೇ ಆಗಿದ್ದ ಕಾರಣ, ನನ್ನ ಗುರುತು ಹಿಡಿದು "ಗಾಂಧಿ, ಗಾಂಧಿ, ಹೊಡೆಯಿರಿ, ಮುತ್ತಿರಿ" ಎಂದು ಕೂಗಲು ಪ್ರಾರಂಭಿಸಿ, ನಮ್ಮ ಹತ್ತಿರ ಬಂದರು. ಯೂರೋಪಿಯನರಲ್ಲಿ ಕೆಲವರು ದೊಡ್ಡವರೂ ಸೇರಿದರು. ಕೆಲವರು ಕಲ್ಲುಬೀರಲು ಪ್ರಾರಂಭಿಸಿದರು. ಕ್ರಮೇಣ ದಂಗೆಕಾರರ ಗುಂಪು ದೊಡ್ಡದಾಯಿತು. ನಾವು ನಡೆದು ಹೋದರೆ ಅಪಾಯವೆಂದು ಲಾಫ್ಟನ್‌ರು ಯೋಚಿಸಿದರು. ಆದ್ದರಿಂದ ಒಂದು ರಿಕ್ಷಾ ಕರೆದರು. ಮನುಷ್ಯರು ಎಳೆಯುವ ವಾಹನದಲ್ಲಿ ಕೂಡಲು ನನಗೆ ಬಹಳ ಬೇಸರವಾಗುತ್ತಿದ್ದುದರಿಂದ ನಾನು ಯಾವಾಗಲೂ ರಿಕ್ಷಾದಲ್ಲಿ ಕುಳಿತಿರಲಿಲ್ಲ. ಆದರೆ ಈಗ ಅದು ಅನಿವಾರ್ಯವೆಂದು ತೋರಿತು. ದೈವಬಲವಿದ್ದವನಿಗೆ ತಾನು ತಪ್ಪು ಮಾಡಲು ಮನಸೋತರೂ ದಾರಿ ತಪ್ಪಲು ಸಾಧ್ಯವಾಗುವುದಿಲ್ಲ ಎಂದು ನನಗೆ ಐದು ಬಾರಿಯೊ ಏಳು ಬಾರಿಯೊ ಅನುಭವಕ್ಕೆ ಬಂದಿದೆ. ನಾನು ದುರ್ಮಾರ್ಗಕ್ಕೆ ಬೀಳದಿದ್ದರೆ ಅದರಲ್ಲಿ ನನ್ನ ಪ್ರಯತ್ನ ಏನೂ ಇಲ್ಲ. ಈ ರಿಕ್ಷಾ ಎಳೆಯುವವರು ಜುಲುಗಳು. ನನಗೆ ರಿಕ್ಷಾದಲ್ಲಿ ಕೂಡಲು ಅವಕಾಶ ಕೊಟ್ಟರೆ ರಿಕ್ಷಾ ಚೂರು ಚೂರು ಮಾಡುವುದಾಗಿ ದೊಡ್ಡವರೂ ಹುಡುಗರೂ ಯೂರೋಪಿಯನರು ರಿಕ್ಷಾ

ಎಳೆಯುವವನನ್ನು ಹೆದರಿಸಿದರು. ರಿಕ್ಷಾ ಹುಡುಗನು 'ಖಾ' (ಆಗುವುದಿಲ್ಲ) ಎಂದು ಹೇಳಿ ಹೊರಟು ಹೋದನು. ಈ ರೀತಿ ರಿಕ್ಷಾದಲ್ಲಿ ಕೂಡುವ ಅಪಮಾನ ನನಗೆ ತಪ್ಪಿತು.

ನಮ್ಮ ಗುರಿ ಮುಟ್ಟಲು ನಡೆದು ಹೋಗುವುದರ ಹೊರತು ಬೇರೆ ಮಾರ್ಗವಿರಲಿಲ್ಲ. ಒಂದು ದೊಡ್ಡ ಗುಂಪು ನಮ್ಮನ್ನು ಹಿಂಬಾಲಿಸಿತು. ಹೆಜ್ಜೆ ಹೆಜ್ಜೆಗೂ ಅದು ದೊಡ್ಡದಾಗುತ್ತ ಬಂದಿತು. ವೆಸ್ಟ್ ಸ್ಟ್ರೀಟ್‌ಗೆ ಹೋದಾಗ ಗುಂಪು ಬಹಳ ದೊಡ್ಡದಾಯಿತು. ದೃಢಕಾಯನಾದವನೊಬ್ಬನು ಲಾಫ್ಟನ್ ರ ರಟ್ಟೆಹಿಡಿದೆಳೆದು ನನ್ನಿಂದ ದೂರಮಾಡಿದನು. ಆದ್ದರಿಂದ ಅವರು ನನ್ನ ಸಹಾಯಕ್ಕೆ ಬರುವಂತೆ ಇರಲಿಲ್ಲ. ಜನರ ಗುಂಪು ನನ್ನನ್ನು ಬೈದು ಕಲ್ಲುಗಳ ಸುರಿಮಳೆ ಸುರಿಸಿದರು; ಕೈಗೆ ಸಿಕ್ಕಿದ್ದನ್ನು ನನ್ನ ಮೇಲೆ ಎಸೆದರು. ನನ್ನ ರುಮಾಲನ್ನು ಕಿತ್ತೊಗೆದರು. ಇಷ್ಟರಲ್ಲಿ ಒಬ್ಬ ಧಾಂಡಿಗನು ನನ್ನ ಹತ್ತಿರ ಬಂದು, ಕಪಾಳಕ್ಕೆ ಹೊಡೆದು ನನ್ನನ್ನು ಕಾಲಿನಿಂದ ಒದೆದನು. ಜ್ಞಾನತಪ್ಪಿ ನಾನು ಬೀಳಬೇಕಾಗಿತ್ತು; ಅಷ್ಟರಲ್ಲಿ ಹತ್ತಿರದ ಮನೆಯ ಬೇಲಿಯ ಸರಳನ್ನು ಹಿಡಿದುಕೊಂಡೆ. ಸ್ವಲ್ಪ ಸುಧಾರಿಸಿಕೊಂಡು ಜ್ಞಾನ ಬಂದಮೇಲೆ ಪುನಃ ದಾರಿಯನ್ನು ಹಿಡಿದೆ. ಜೀವಸಹಿತ ಮನೆಸೇರುವ ಆಸೆಯನ್ನು ನಾನು ಬಿಟ್ಟಿದ್ದೆ. ಆದರೂ ನನ್ನ ಮೇಲೆ ಕೈಮಾಡಿದವರ ಮೇಲೆ ನನ್ನ ಮನಸ್ಸಿನಲ್ಲಿ ಯಾವ ದ್ವೇಷಭಾವನೆಯೂ ಹುಟ್ಟಲಿಲ್ಲವೆಂದು ನನಗೆ ಜ್ಞಾಪಕ.

ಈ ರೀತಿ ನಾನು ಹೋಗುತ್ತಿರುವಾಗ ಎದುರುಗಡೆಯಿಂದ ಡರ್ಬಾನ್ ಪೊಲೀಸ್ ಸೂಪರಿಂಟೆಂಡೆಂಟರ ಪತ್ನಿ ಬರುತ್ತಿದ್ದಳು. ನಮಗೆ ಪರಸ್ಪರ ಪರಿಚಯವಿದ್ದಿತು. ಆಕೆ ಒಳ್ಳೆಯ ಧೈರ್ಯಶಾಲಿ. ಮೋಡ ಮುಸುಕಿ ಕತ್ತಲಾಗುತ್ತ ಬಂದಿದ್ದರೂ ನನ್ನ ರಕ್ಷಣೆಗಾಗಿ ತನ್ನ ಕೊಡೆಯನ್ನು ಬಿಚ್ಚಿ ಹಿಡಿದು ನನ್ನ ಜೊತೆಗೆ ನಡೆದು ಬಂದಳು. ಯೂರೋಪಿಯನರು ಹೆಂಗಸಿಗೆ ಅಪಮಾನ ಮಾಡುವಂತೆ ಇರಲಿಲ್ಲ. ಅದರಲ್ಲೂ ವೃದ್ಧರೂ ಜನಾನುರಾಗಿಗಳೂ ಆದ ಪೊಲೀಸ್ ಸೂಪರಿಂಟೆಂಡೆಂಟರ ಪತ್ನಿಯನ್ನು! ಆಕೆಯನ್ನು ಗಾಯಗೊಳಿಸುವಂತೆಯೂ ಇರಲಿಲ್ಲ. ನನಗೆ ಗುರಿಯಿಡುವಾಗ ಆಕೆಗೆ ತಗಲದಂತೆ ಏಟು ಕೊಡಬೇಕಾಗಿತ್ತು. ಆಕೆ ನನ್ನ ಸಂಗಡ ಬಂದಮೇಲೆ ಬಿದ್ದ ಏಟುಗಳಿಂದ ಹೆಚ್ಚು ಗಾಯವಾಗಲಿಲ್ಲ. ಇಷ್ಟು ಹೊತ್ತಿಗೆ ಈ ವರ್ತಮಾನ ಪೊಲೀಸ್ ಸೂಪರಿಂಟೆಂಡೆಂಟರಿಗೆ ತಿಳಿದು ನನ್ನ ರಕ್ಷಣೆಗೆ ಪೊಲೀಸ್ ಪಡೆಯನ್ನು ಕಳುಹಿಸಿದರು. ಪೊಲೀಸಿನವರು ನನ್ನ ಸುತ್ತಲೂ ಕಾವಲು ನಿಂತರು. ದಾರಿಯಲ್ಲೇ ಪೊಲೀಸ್ ಸ್ಟೇಷನ್ ಸಿಕ್ಕಿತು. ಅಲ್ಲಿಗೆ ಹೋಗುತ್ತಲೆ ಪೊಲೀಸ್ ಸೂಪರಿಂಟೆಂಡೆಂಟರು ನಮಗಾಗಿ ಕಾದಿದ್ದರು. ಪೊಲೀಸ್ ಸ್ಟೇಷನ್ ನಲ್ಲಿ ನನಗೆ ಆಶ್ರಯ ಕೊಡುವುದಾಗಿ ತಿಳಿಸಿದರು. ಅವರ ಸಹಾಯಕ್ಕಾಗಿ ವಂದಿಸಿ "ನಾನು ಮನೆಯನ್ನು ಸೇರಲೇ ಬೇಕು. ಡರ್ಬಾನಿನ ನಾಗರಿಕರ ನ್ಯಾಯಪರತೆಯಲ್ಲೂ ನನ್ನ ಕಾರ್ಯದ ನ್ಯಾಯಪರತೆಯಲ್ಲೂ ನನಗೆ ನಂಬಿಕೆ ಇದೆ. ನೀವು ಕಳುಹಿಸಿದ ಪೊಲೀಸ್ ಪಡೆಯ ಸಹಾಯಕ್ಕಾಗಿ ವಂದಿಸುತ್ತೇನೆ. ಶ್ರೀಮತಿ ಅಲೆಕ್ಸಾಂಡರರೂ ನನ್ನ ರಕ್ಷಣೆಗೆ ಸಹಾಯಕರಾದರು" ಎಂದು ತಿಳಿಸಿದೆ.

ಮಧ್ಯೆ ಏನೂ ತೊಂದರೆ ಇಲ್ಲದೆ ರುಸ್ತುಂಜಿ ಮನೆ ಸೇರಿದ. ಅಷ್ಟು ಹೊತ್ತಿಗೆ ಸಂಜೆಯಾಗಿತ್ತು. 'ಕೂರ್ಲೆಂಡ್' ಹಡಗಿನ ವೈದ್ಯಾಧಿಕಾರಿಯಾದ ಡಾಕ್ಟರ್ ಡ್ಯಾಡಿ ಬಾರ್ಜರ್ ನನಗೆ ಚಿಕಿತ್ಸೆ ಮಾಡಿದರು. ನನ್ನ ಗಾಯಗಳನ್ನು ಪರೀಕ್ಷಿಸಿದರು. ಹೆಚ್ಚು ಗಾಯವಾಗಿರಲಿಲ್ಲ. ಒಂದು ಮೂಕಪೆಟ್ಟು ಮಾತ್ರ ಬಹಳ ಬಾಧಿಸುತ್ತ ಇತ್ತು. ಆದರೆ ನನಗೆ ಇನ್ನೂ ಶಾಂತಿ ದೊರೆಯುವಂತೆ ಇರಲಿಲ್ಲ. ಸೇಟ್ ರುಸ್ತಂಜಿಯವರ ಮನೆಯ ಮುಂದೆ ಸಾವಿರಾರು ಯೂರೋಪಿಯನರು ಸೇರಿದರು. ಕತ್ತಲಾದ ಮೇಲೆ ಅವರೊಂದಿಗೆ ಪುಂಡರೂ ಸೇರಿದರು. ನನ್ನನ್ನು ಅವರಿಗೆ ಒಪ್ಪಿಸದೆ ಹೋದರೆ ಅವರ ಮನೆಗೆ ಬೆಂಕಿ ಹಚ್ಚಿ ನನ್ನೊಂದಿಗೆ ಅವರನ್ನೂ ಸುಟ್ಟ ಬಿಡುವುದಾಗಿ ರುಸ್ತುಂಜಿಯವರಿಗೆ ಆ ಗುಂಪು ಹೇಳಿ ಕಳುಹಿಸಿತು. ಸೇಟ್ ರುಸ್ತುಂಜಿಯವರು ಈ ಬೆದರಿಕೆಗೆ ಎದೆಗೆಡುವಂಥ ಜಳ್ಳು ಭಾರತೀಯರಾಗಿರಲಿಲ್ಲ. ಸೂಪರಿಂಟೆಂಡೆಂಟ್ ಅಲೆಕ್ಸಾಂಡರರಿಗೆ ಈ ವರ್ತಮಾನ ತಿಳಿದೊಡನೆ ಕೆಲವು ಗುಪ್ತ ಪೊಲೀಸಿನವರೊಂದಿಗೆ ಬಂದು ಅವರೂ ಜನರ ಗುಂಪನ್ನು ಸೇರಿದರು. ಒಂದು ಬೆಂಚು ತರಿಸಿ ಅದರ ಮೇಲೆ ನಿಂತರು ಗುಂಪಿಗೆ ಮಾತನಾಡುವ ನೆಪದಲ್ಲಿ ರುಸ್ತುಂಜಿಯವರ ಮನೆಯ ಒಳಕ್ಕೆ ಯಾರೂ ಬರದಂತೆಯೂ, ಹೊರಗೆ ಯಾರು ಹೋಗದಂತೆಯೂ, ಹೆಬ್ಬಾಗಿಲಿನಲ್ಲಿ ಕಾವಲು ನಿಂತು, ಬಾಗಿಲನ್ನು ತಮ್ಮ ಹತೋಟಿಗೆ ತೆಗೆದುಕೊಂಡರು. ಅಲ್ಲಿಗೆ ಬಂದ ಒಡನೆ ಅವರ ಕೆಳಗಿನ ನೌಕರರೊಬ್ಬರಿಗೆ ಭಾರತೀಯನಂತೆ ಮುಖಕ್ಕೆ ಬಣ್ಣ ಹಚ್ಚಿಕೊಂಡು, ಭಾರತೀಯ ಉಡುಪನ್ನು ಧರಿಸಿ, ಭಾರತೀಯ ವ್ಯಾಪಾರಿಯಂತೆ ವೇಷ ಹಾಕಿಕೊಂಡು, ಒಳಗೆ ಹೋಗಿ ನನ್ನನ್ನು ನೋಡಿ, ಈ ರೀತಿ ವರ್ತಮಾನ ಕೊಡಬೇಕಾಗಿ ತಿಳಿಸಿದ್ದರು. "ನಿನ್ನ ಸ್ನೇಹಿತ, ಆತನ ಅತಿಥಿಗಳು, ಆಸ್ತಿ ಮತ್ತು ನಿನ್ನ ಮನೆಯವರನ್ನು ಉಳಿಸಿಕೊಳ್ಳಲು ನಿನಗೆ ಇಷ್ಟವಿರುವುದಾದರೆ ಒಬ್ಬ ಭಾರತೀಯ ಪೋಲೀಸಿನವನಂತೆ ವೇಷ ಬದಲಾಯಿಸಿ, ರುಸ್ತುಂಜಿಯವರ ಗಡಂಗಿನ ಮೂಲಕ ಹೊರಗೆ ಬಾ, ನನ್ನ ನೌಕರನೊಂದಿಗೆ ಗುಂಪಿನ ಮಧ್ಯೆ ಹಾದು ಪೋಲಿಸ್ ಸ್ಟೇಷನ್ ಹೋಗಿ ಸೇರು. ಬೀದಿಯ ಹೊರಗಡೆ ಮೂಲೆಯಲ್ಲಿ ನಿನಗಾಗಿ ಒಂದು ಗಾಡಿ ಕಾದಿದೆ. ನಿನ್ನನ್ನೂ ಇತರರನ್ನೂ ಕಾಪಾಡಲು ನನಗಿರುವುದು ಇದೊಂದೇ ಮಾರ್ಗ, ಜನರ ಗುಂಪು ಉದ್ರೇಕಗೊಂಡಿರುವುದರಿಂದ ಹತೋಟಿಗೆ ತರಲು ನನ್ನಿಂದ ಸಾಧ್ಯವಿಲ್ಲ. ನನ್ನ ಸಲಹೆಗಳನ್ನು ಕೂಡಲೆ ನೀನು ಕೇಳದೆ ಹೋದರೆ ಈ ಗುಂಪು ರುಸ್ತುಂಜಿಯವರ ಮನೆಯನ್ನು ನೆಲಸಮ ಮಾಡುವದು ಖಂಡಿತ. ಎಷ್ಟು ಜನರು ಪ್ರಾಣ ಕೊಡಬೇಕಾಗುತ್ತದೆ, ಎಷ್ಟು ಆಸ್ತಿ ಹಾಳಾಗುತ್ತದೆ ಎಂಬುದನ್ನು ಊಹಿಸಲು ನನ್ನಿಂದ ಅಸಾಧ್ಯ."

ಪರಿಸ್ಥಿತಿ ಕೂಡಲೆ ನನಗೆ ಗೊತ್ತಾಯಿತು. ಒಬ್ಬ ಕಾನ್ ಸ್ಟೆಬಲ್‌ನಂತೆ ವೇಷ ಬದಲಾಯಿಸಿಕೊಂಡು ಕೂಡಲೆ ರುಸ್ತುಂಜಿಯವರ ಮನೆಯನ್ನು ಬಿಟ್ಟೆ. ಪೋಲೀಸ್ ಅಧಿಕಾರಿಯೂ ನಾನೂ ಸುರಕ್ಷಿತವಾಗಿ ಪೋಲೀಸ್ ಸ್ಟೇಶನ್ ಸೇರಿದೆವು. ಈ ಮಧ್ಯೆ ಅಲೆಕ್ಸಾಂಡರರು ಜನಪ್ರಿಯವಾದ ಹಾಡುಗಳನ್ನು ಹಾಡುತ್ತ, ಹರಟೆ ಕೊಚ್ಚುತ್ತ, ಜನರ ಗುಂಪನ್ನು ಹತೋಟಿಯಲ್ಲಿಟ್ಟಿದ್ದರು. ನಾನು ಪೋಲೀಸ್ ಸ್ಟೇಷನ್ ಸೇರಿದ್ದೇನೆಂದು

ತಿಳಿದ ಒಡನೆ ಗಂಭೀರವಾಗಿ ಗುಂಪನ್ನು ಕೇಳಿದರು.

"ನಿಮಗೆ ಏನು ಬೇಕು?'

"ನಮಗೆ ಗಾಂಧಿ ಬೇಕು."

"ಆತನನ್ನು ಏನು ಮಾಡುತ್ತೀರಿ?"

"ಆತನನ್ನು ಸುಟ್ಟುಬಿಡುತ್ತೇವೆ."

"ಆತನು ನಿಮಗೆ ಏನು ಕೆಡುಕು ಮಾಡಿದ್ದಾನೆ?"

"ಹಿಂದೂಸ್ಥಾನದಲ್ಲಿ ನಮ್ಮನ್ನು ದೂಷಿಸಿದ್ದಾನೆ. ನೇಟಾಲಿನಲ್ಲಿ ಭಾರತೀಯರನ್ನು ತುಂಬಬೇಕೆಂದಿದ್ದಾನೆ."

'ಆತನು ಬಾರದಿದ್ದರೆ ಏನು ಮಾಡುತ್ತೀರಿ?"

"ಈ ಮನೆಯನ್ನೇ ಸುಟ್ಟುಬಿಡುತ್ತೇವೆ."

'ಆತನ ಹೆಂಡತಿ ಮಕ್ಕಳು ಇಲ್ಲಿ ಇದ್ದಾರೆ. ಅಲ್ಲದೆ ಬೇರೆ ಜನರೂ ಸ್ತ್ರೀಯರೂ ಇದ್ದಾರೆ. ಹೆಂಗಸರನ್ನೂ ಮಕ್ಕಳನ್ನೂ ಸುಡಲು ನಿಮಗೆ ನಾಚಿಕೆಯಾಗುವುದಿಲ್ಲವೆ?"

"ಅದರ ಹೊಣೆಯೆಲ್ಲವೂ ನಿಮ್ಮದು. ನಮ್ಮನ್ನು ನಿಸ್ಸಹಾಯಕರಾಗುವಂತೆ ಮಾಡಿದರೆ ನಾವೇನು ಮಾಡೋಣ? ಬೇರೆ ಯಾರನ್ನೂ ನೋಯಿಸಲು ನಮಗೆ ಇಷ್ಟವಿಲ್ಲ. ಗಾಂಧಿಯೊಬ್ಬನನ್ನು ನಮಗೆ ನೀವು ಕೊಟ್ಟುಬಿಟ್ಟರೆ ಸಾಕು. ಆ ಘಾತುಕನನ್ನು ನೀವು ನಮಗೆ ಒಪ್ಪಿಸದೆ, ಆತನನ್ನು ನಾವು ಸೆರೆ ಹಿಡಿಯುವುದರಲ್ಲಿ ಇತರರಿಗೆ ಗಾಯವಾದರೆ ನೀವು ನಮ್ಮನ್ನು ದೂರುವುದು ಯಾವ ನ್ಯಾಯ?"

ಸೂಪರಿಂಟೆಂಡೆಂಟರು ಹುಸಿನಗೆಯನ್ನು ನಕ್ಕು, ನಾನು ರುಸ್ತುಂಜಿಯವರ ಮನೆಯನ್ನು ಬಿಟ್ಟು ಹೊರಟು ಹೋಗಿರುವೆನೆಂದೂ ಅವರ ಮಧ್ಯವೇ ಹಾಯ್ದು ಹೋದೆನೆಂದೂ ಬೇರೆ ಸ್ಥಳವನ್ನು ಸೇರಿದ್ದೇನೆಂದೂ ಆ ಗುಂಪಿಗೆ ತಿಳಿಸಿದರು. ಆ ಗುಂಪು ಗಟ್ಟಿಯಾಗಿ ಅಪಹಾಸ್ಯ ಮಾಡಿ ನಕ್ಕು, "ಅದು ಸುಳ್ಳು, ಅದು ಸುಳ್ಳು" ದಂದು ಕೂಗಿತು.

ಆಗ ಸೂಪರಿಂಟೆಂಡೆಂಟರು "ನಿಮ್ಮ ವೃದ್ಧ ಸೂಪರಿಂಟೆಂಡೆಂಟರನ್ನು ನಂಬದೆಹೋದರೆ, ನಿಮ್ಮ ಪೈಕಿ ಮೂರು ನಾಲ್ಕು ಜನರ ಒಂದು ಸಣ್ಣ ಸಮಿತಿಯನ್ನು ನೇಮಿಸಿ, ಬಾಕಿಯವರಾರೂ ಮನೆಯ ಒಳಗೆ ಪ್ರವೇಶಿಸುವುದಿಲ್ಲವೆಂದೂ ಸಮಿತಿಯವರು ಗಾಂಧಿಯನ್ನು ಹುಡುಕಲು ಸಾಧ್ಯವಾಗದಿದ್ದರೆ ನೀವುಗಳೆಲ್ಲ ಶಾಂತರೀತಿಯಲ್ಲಿ ಮನೆಗೆ ಹಿಂದಿರುಗುತ್ತೇವೆ ಎಂದು ಭರವಸೆ ಕೊಡಿ. ನೀವುಗಳೆಲ್ಲರೂ ಈ ದಿನ ಕೋಪ ತಾಳಿ ಪೋಲೀಸಿನವರ ಮಾತನ್ನು ಕೇಳಿರುವುದಿಲ್ಲ. ಈ ಅಪಮಾನ ಪೋಲೀಸಿನವರದಲ್ಲ; ನಿಮ್ಮದು. ಆದ್ದರಿಂದ ಪೋಲಿಸಿನವರು ನಿಮ್ಮ ಮೇಲೆ ಒಂದು ಉಪಾಯವನ್ನು ಹೂಡಬೇಕಾಯಿತು. ನಿಮ್ಮ ಮಧ್ಯ ಇದ್ದ ಬೇಟೆಯನ್ನು ಸ್ಥಳಾಂತರ ಮಾಡಿದರು; ಈಗ ನಿಮಗೆ ಬೇಟೆ ಇಲ್ಲವಾಯಿತು. ಇದಕ್ಕಾಗಿ ನೀವು ನಿಜವಾಗಿಯೂ ಪೋಲೀಸಿನವರನ್ನು ದೂರಲಾರಿರಿ. ನೀವೇ ನೇಮಿಸಿದ ಪೋಲೀಸಿನವರು ಅವರ ಕರ್ತವ್ಯವನ್ನು ಪಾಲಿಸಿದ್ದಾರೆ"

ಎಂದು ಹೇಳಿದರು.

ಸೂಪರಿಂಟೆಂಡೆಂಟರ ದೃಢಮನಸ್ಸು ಮತ್ತು ನಯವಾದ ಮಾತುಗಳಿಂದ ಅವರು ಕೇಳಿದಂತೆ ಆ ಗುಂಪು ಭರವಸೆ ಕೊಟ್ಟಿತು. ಒಂದು ಸಮಿತಿಯನ್ನು ನೇಮಿಸಿದರು. ರುಸ್ತುಂಜಿವರ ಮನೆಯನ್ನು ಅದ್ಯಂತ ಹುಡುಕಿದರು. ಸೂಪರಿಂಟೆಂಡೆಂಟರು ಹೇಳಿದ್ದು ನಿಜವೆಂದೂ ತಮ್ಮನ್ನು ಅವರು ಸೋಲಿಸಿರುತ್ತಾರೆಂದೂ ತಿಳಿಸಿದರು. ಗುಂಪಿಗೆ ಬಹಳ ಅಸಮಾಧಾನವಾಯಿತು. ಆದರೆ ಕೊಟ್ಟ ಮಾತಿನಂತೆ ಯಾವ ಕೇಡನ್ನೂ ಮಾಡದೆ ಚದರಿತು. ಇದು ನಡೆದುದು ೧೮೯೭ ಜನವರಿ ೧೩ ನೆಯ ತಾರೀಖಿನ ದಿನ.

ಅದೇ ಬೆಳಗ್ಗೆ, ಹಡಗುಗಳ ಮೇಲಿನ ನಿರ್ಬಂಧವನ್ನು ತೆಗೆದ ಒಡನೆ ಡರ್ಬಾನಿನ ವೃತ್ತ ಪತ್ರಿಕೆಯ ಬಾತ್ಮೀದಾರನೊಬ್ಬನು ನನ್ನನ್ನು ಹಡಗಿನ ಮೇಲೆಯೇ ನೋಡಿದ್ದನು. ಆತನು ನನ್ನಿಂದ ಎಲ್ಲವನ್ನೂ ವಿಚಾರಿಸಿ ತಿಳಿದುಕೊಂಡಿದ್ದನು. ನನ್ನ ಮೇಲಿನ

ಆಪಾದನೆಗಳಿಗೆ ಸಮಾಧಾನವಾಗುವಂತೆ ಆತನಿಗೆ ಉತ್ತರ ಹೇಳುವುದು ಸುಲಭವಾಗಿತ್ತು. ನಾನು ಸ್ವಲ್ಪವೂ ಉತ್ಪ್ರೇಕ್ಷೆ ಮಾಡಿಲ್ಲವೆಂದು ಆತನಿಗೇ ವಿವರಿಸಿ ತೋರಿಸಿದೆ. ನನ್ನ ಕರ್ತವ್ಯವನ್ನು ಮಾತ್ರ ನಾನು ಮಾಡಿ ಇದ್ದೆ. ಅಷ್ಟೂ ಮಾಡದೆ ಹೋಗಿದ್ದರೆ ಮಾನವಕುಲಕ್ಕೆ ನಾನು ಕಳಂಕಪ್ರಾಯನಾಗುತ್ತಿದ್ದೆ. ಮಾರನೆಯ ದಿನ ಇದೆಲ್ಲವೂ ವೃತ್ತಪತ್ರಿಕೆಯಲ್ಲಿ ಬಂದಿತು. ಯೂರೋಪಿಯನರಲ್ಲಿ ತಿಳಿದವರು ತಪ್ಪನ್ನು ಒಪ್ಪಿಕೊಂಡರು. ವೃತ್ತಪತ್ರಿಕೆಗಳು ನೇಟಾಲ್ ಯೂರೋಪಿಯನರ ವಾದಕ್ಕೆ ಸಹಾನುಭೂತಿಯನ್ನು ತೋರಿಸಿದರೂ ನನ್ನ ಕಾರ್ಯವನ್ನು ಶ್ಲಾಘಿಸಿದವು. ಇದು ನನ್ನ ಮತ್ತು ಭಾರತೀಯರ ಗೌರವವನ್ನು ಹೆಚ್ಚಿಸಿತು; ಭಾರತೀಯರು ಬಡವರಾಗಿದ್ದರೂ ಹೇಡಿಗಳಲ್ಲವೆಂದೂ ಭಾರತೀಯ ವರ್ತಕರು ಯಾವ ನಷ್ಟವನ್ನೂ ಲೆಕ್ಕಿಸದೆ ತಮ್ಮ ಆತ್ಮಗೌರವಕ್ಕೂ ತಮ್ಮ ದೇಶವಾತ್ಸಲ್ಯಕ್ಕೂ ಕಾದಾಡಬಲ್ಲರೆಂದೂ ತೋರಿಸಿಕೊಟ್ಟಿತು.

ಈ ರೀತಿ ಭಾರತೀಯರು ಬಹುಮುಖವಾಗಿ ಕಷ್ಟಪಟ್ಟರೂ, ದಾದಾ ಅಬ್ದುಲ್ಲಾರವರಿಗೆ ನಷ್ಟವಾದರೂ ಅಂತ್ಯಪರಿಣಾಮ ಫಲಕಾರಿಯಾಗಿತ್ತೆಂದು ನನ್ನ ನಂಬಿಕೆ. ತಮ್ಮ ಸ್ವಶಕ್ತಿಯನ್ನು ಅಳೆಯಲು ಒಂದು ಅವಕಾಶ ದೊರೆಯಿತು; ಅದರ ಪರಿಣಾಮವಾಗಿ ಆತ್ಮವಿಶ್ವಾಸ ಹೆಚ್ಚಾಯಿತು. ಅಂದಿನ ಅನುಭವ ಬಹು ಬೆಲೆಯುಳ್ಳದ್ದು. ಆ ದಿನವನ್ನು ಈಗಲೂ ನೆನೆಸಿಕೊಂಡರೆ ಸತ್ಯಾಗ್ರಹ ಸಾಧನೆಗೆ ದೇವರು ನನ್ನನ್ನು ತಯಾರಿಸುತ್ತಿದ್ದನೆಂದು ಭಾವಿಸುತ್ತೇನೆ.

ನೇಟಾಲಿನಲ್ಲಿ ನಡೆದ ವಿದ್ಯಮಾನಗಳ ಪ್ರಭಾವ ಇಂಗ್ಲೆಂಡಿನ ಮೇಲೂ ಆಯಿತು. ವಲಸೆ ರಾಷ್ಟ್ರಗಳ ಕಾರ್ಯದರ್ಶಿಗಳಾದ ಚೇಂಬರ್ಲಿನ್‌ರು ನನ್ನ ಮೇಲೆ ಕೈಮಾಡಿದವರ ಮೇಲೆ ಮೊಕದ್ದಮೆ ಹೂಡಬೇಕೆಂದೂ ನನಗೆ ನ್ಯಾಯ ದೊರೆಯುವಂತೆ ಕಾರ್ಯಕ್ರಮ ಕೈಗೊಳ್ಳಬೇಕೆಂದೂ ವಾರ್ತೆ ಕಳುಹಿಸಿದರು.

ನೇಟಾಲ್ ಸರಕಾರದ ಅಟಾರ್ನಿ ಜನರಲ್ ಆದ ಎಸ್ಕಾಮ್ ರು ನನ್ನನ್ನು ಕರೆಸಿದರು. ಚೇಂಬರ್ಲಿನ್ ರ ಕೇಬಲ್ ವಿಷಯ ನನಗೆ ತಿಳಿಸಿದರು. ನನಗೆ ಆದ ಗಾಯಗಳಿಗೆ

ವ್ಯಸನವನ್ನು ಸೂಚಿಸಿ, ಗಾಯಗಳು ಅಷ್ಟು ಅಪಾಯಕರವಾಗಿಲ್ಲದ್ದಕ್ಕೆ ಸಂತೋಷವನ್ನು ವ್ಯಕ್ತಪಡಿಸಿದರು. "ನಿಮಗೇ ಆಗಲಿ ನಿಮ್ಮ ಜನರಿಗೇ ಆಗಲಿ ಯಾರಿಗೂ ಗಾಯವಾಗಬೇಕೆಂದು ನನ್ನ ಇಷ್ಟವಿರಲಿಲ್ಲ. ಪ್ರಾಯಶಃ ನಿಮಗೆ ಅಪಾಯವಾಗಬಹುದೆಂದೇ ರಾತ್ರಿಯಲ್ಲಿ ಹಡಗಿಳಿಯಬೇಕೆಂದು ನಾನು ಹೇಳಿಕಳಿಸಿದೆ. ನನ್ನ ಸಲಹೆಯನ್ನು ನೀವು ಕೇಳಲಿಲ್ಲ. ಲಾಫ್ಟನ್ನರ ಮಾತಿನಂತೆ ನಡೆದುದಕ್ಕೆ ನಾನು ನಿಮ್ಮನ್ನು ಸ್ವಲ್ಪವೂ ಆಕ್ಷೇಪಿಸುವುದಿಲ್ಲ. ನಿಮಗೆ ಯಾವುದು ಸರಿ ಎಂದು ತೋರಿತೊ ಅದರಂತೆ ಮಾಡಲು ನಿಮಗೆ ಹಕ್ಕು ಇದೆ. ನೇಟಾಲ್ ಸರಕಾರದವರು ಚೇಂಬರ್ಲೀನ್‌ರ ಕೋರಿಕೆಯನ್ನು ಪೂರ್ಣ ಪಾಲಿಸುತ್ತಾರೆ. ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ನಮ್ಮ ಇಷ್ಟ. ನಿಮ್ಮನ್ನು ಹೊಡೆದವರನ್ನು ಗುರುತಿಸಲು ನಿಮಗೆ ಸಾಧ್ಯವೇ?" ಎಂದು ಕೇಳಿದರು.

"ಒಬ್ಬಿಬ್ಬರನ್ನು ನಾನು ಗುರುತಿಸಬಹುದು. ನನ್ನ ಮೇಲೆ ಕೈಮಾಡಿದವರನ್ನು ಕುರಿತು ಕ್ರಮ ನಡಸಬಾರದೆಂದು ಈ ಸಂಭಾಷಣೆಗೆ ಮುಂಚೆಯೇ ನಾನು ತೀರ್ಮಾನಿಸಿದ್ದೇನೆಂದು ಹೇಳಬಯಸುತ್ತೇನೆ. ತಪ್ಪು ಅವರದೆಂದು ನಾನು ಹೇಳಲಾರೆ. ಅವರ ಮುಖಂಡರು ತಿಳಿಸಿದ ವಿಷಯಗಳನ್ನು ನಿಜವೆಂದು ಅವರು ನಂಬಿದರು. ಅದು ಸರಿಯೇ ತಪ್ಪೇ ಎಂಬುದನ್ನು ಅವರ ತೀರ್ಮಾನಕ್ಕೆ ಬಿಡುವುದು ತಪ್ಪು. ನನ್ನ ವಿಷಯವಾಗಿ ಅವರು ಕೇಳಿದ್ದೆಲ್ಲ ನಿಜವಾಗಿದ್ದರೆ ಅವರು ಉದ್ರೇಕಗೊಂಡು, ಆ ಕೋಪದ ಭರದಲ್ಲಿ ತಪ್ಪು ಮಾಡುವುದು ಸ್ವಾಭಾವಿಕ. ಅದಕ್ಕೆ ನಾನು ಅವರನ್ನು ದೂಷಿಸಲಾರೆ. ಉದ್ರೇಕಗೊಂಡ ಜನಗಳ ಗುಂಪು ನ್ಯಾಯ ತೀರಿಸುವ ಬಗೆಯೇ ಹಾಗೆ. ಯಾರದಾದರೂ ತಪ್ಪಿದ್ದರೆ ಅದು ಯೂರೋಪಿಯನ್ ಸಮಿತಿಯವರದು, ನಿಮ್ಮದು ಮತ್ತು ನೇಟಾಲ ಸರಕಾರದ್ದು. ರಾಯಿಟರ್ ಸುದ್ದಿಗಾರನು ಉತ್ಪ್ರೇಕ್ಷೆಮಾಡಿ, ನಿಜವನ್ನು ವಿರೂಪಪಡಿಸಿ ವರ್ತಮಾನ ಕಳುಹಿಸಿರಬಹುದು. ಆದರೆ ನಾನೇ ನೇಟಾಲಿಗೆ ಬರುತ್ತಿದ್ದೇನೆಂದು ತಿಳಿದ ಮೇಲೆ, ಹಿಂದೂಸ್ಥಾನದಲ್ಲಿ ನಾನು ನಡಸಿದ ಪ್ರಚಾರದ ವಿಷಯವಾಗಿ ನಿಮಗಿದ್ದ ಸಂಶಯ ನಿವಾರಣೆಗೆ ನನ್ನನ್ನೇ ಪ್ರಶ್ನೆ ಮಾಡಬೇಕಾದ್ದು ನಿಮ್ಮ ಮತ್ತು ನಿಮ್ಮ ಸಮಿತಿಯ ಕರ್ತವ್ಯವಾಗಿತ್ತು. ನಾನು ಏನು ವಿವರಣೆ ಹೇಳುತ್ತೇನೆಂದು ಕೇಳಿ ಆಮೇಲೆ ಯುಕ್ತವೆನಿಸಿದ ಕಾರ್ಯವನ್ನು ಕೈಗೊಳ್ಳಬಹುದಾಗಿತ್ತು. ನಿಮ್ಮನ್ನೇ ಆಗಲಿ, ನಿಮ್ಮ ಸಮಿತಿಯನ್ನೇ ಆಗಲಿ ನಾನು ವ್ಯವಹಾರಕ್ಕೆ ಗುರಿಮಾಡುವಂತೆ ಇಲ್ಲ. ಅದು ಸಾಧ್ಯವಾದರೂ ನ್ಯಾಯಸ್ಥಾನದಲ್ಲಿ ಪರಿಹಾರ ಪಡೆಯುವುದು ನನಗೆ ಇಷ್ಟವಿಲ್ಲ. ಯೂರೋಪಿಯನರ ಹಕ್ಕುಬಾಧ್ಯತೆಗಳ ರಕ್ಷಣೆಗೆ ಅವಶ್ಯವೆನಿಸಿದ ಕಾರ್ಯ ಕ್ರಮಗಳನ್ನೆಲ್ಲ ನೀವು ಕೈಗೊಂಡಿರಿ. ಅದು ರಾಜಕೀಯ ವಿಚಾರ. ಯೂರೋಪಿಯನರಿಗೆ ಸ್ವಲ್ಪವೂ ಅಪಾಯವನ್ನುಂಟುಮಾಡದೆ, ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅಧಿಕ ಪ್ರಮಾಣದ ಜನಸಂಖ್ಯೆಯ ಭಾರತೀಯರು ತಮ್ಮ ಆತ್ಮಗೌರವವನ್ನೂ ಹಕ್ಕು ಬಾಧ್ಯತೆಗಳನ್ನೂ ಕಾಪಾಡಿಕೊಳ್ಳಲು ಬದ್ಧಕಂಕಣರೆಂದು ನಿಮಗೂ ಇತರ ಯೂರೋಪಿಯನರಿಗೂ ತೋರಿಸಲು ನಿಮ್ಮೊಂದಿಗೆ ನಾನು ರಾಜಕೀಯ ಕ್ಷೇತ್ರದಲ್ಲಿ ಕಾದಾಡಬೇಕಾಗಿದೆ" ಎಂದು ಹೇಳಿದೆ.

ಎಸ್ಕಾಮ್ ರು "ನೀವು ಹೇಳುವುದು ನನಗೆ ಅರ್ಥವಾಗುತ್ತದೆ, ಮತ್ತು ನಾನು ಅದನ್ನು ಗೌರವಿಸುತ್ತೇನೆ. ನಿಮ್ಮ ಹಂತಕರನ್ನು ನೀವು ನ್ಯಾಯಸ್ಥಾನದಲ್ಲಿ ವಿಚಾರಣೆಗೆ ಗುರಿಪಡಿಸುವುದಿಲ್ಲವೆಂದು ತಿಳಿಯಲು ಸಿದ್ಧವಿರಲಿಲ್ಲ. ಅವರನ್ನು ವಿಚಾರಣೆಗೆ ಗುರಿಪಡಿಸಿದ್ದರೆ ನನಗೆ ಸ್ವಲ್ಪವೂ ವ್ಯಸನವಾಗುತ್ತಿರಲಿಲ್ಲ ಮೊಕದ್ದಮೆ ಹೂಡಲಾಗದೆಂದು ನೀವು ತೀರ್ಮಾನಿಸಿರುವುದು ನನ್ನ ಅಭಿಪ್ರಾಯದಲ್ಲಿ ಸರಿಯಾದ ತೀರ್ಮಾನ. ನಿಮ್ಮ ಆತ್ಮಸಂಯಮದಿಂದ ನಿಮ್ಮ ಜನರಿಗೆ ಬಹು ದೊಡ್ಡ ಉಪಕಾರವಾಗುತ್ತದೆ. ನಿಮ್ಮ ತೀರ್ಮಾನದಿಂದ ನೇಟಾಲ್ ಸರಕಾರದವರು ಸಿಕ್ಕಿಕೊಂಡಿರುವ ಸಂದಿಗ್ಧ ಸನ್ನಿವೇಶದಿಂದಲೂ ಪಾರಾಗುತ್ತಾರೆ. ನೀವು ಇಷ್ಟಪಟ್ಟರೆ ನಿಮ್ಮ ಹಂತಕರನ್ನು ನೇಟಾಲ್ ಸರಕಾರದವರು ದಸ್ತಗಿರಿ ಮಾಡಲು ಸಿದ್ಧರಿದ್ದಾರೆ. ಆದರೆ ಅದರಿಂದ ಯೂರೋಪಿಯನರು ಉದ್ರಿಕ್ತರಾಗುವರೆಂದೂ ಸರಕಾರದ ಮೇಲೆ ಸಹಿಸಲಾಗದ ಟೀಕೆಗಳಿಗೆ ಅವಕಾಶವಾಗುವುದೆಂದೂ ನಿಮಗೆ ತಿಳಿಸುವುದು ಅನಾವಶ್ಯಕ. ಮೊಖದ್ದಮೆ ಹೂಡಬಾರದೆಂದು ನೀವು ಕಟ್ಟಕಡೆಯ ತೀರ್ಮಾನಕ್ಕೆ ಬಂದಿದ್ದರೆ ಅದೇ ನಿಮ್ಮ ಇಷ್ಟವೆಂದು ಒಂದು ಪತ್ರವನ್ನು ನನಗೆ ಬರೆಯುವುದು ಅವಶ್ಯಕ. ನಮ್ಮ ಸಂಭಾಷಣೆಯ ಸಾರಾಂಶವನ್ನು ಮಾತ್ರ ಚೇಂಬರ್ಲಿನ್‌ರಿಗೆ ಕಳಿಸಿ ನನ್ನ ಸರಕಾರವನ್ನು ನಾನು ಸಮರ್ಥಿಸುವಹಾಗಿಲ್ಲ. ನಿಮ್ಮ ಪತ್ರದ ಸಾರಾಂಶವನ್ನು ಕೇಬಲ್ ಮಾಡಬಲ್ಲೆ. ನಿಮ್ಮ ಪತ್ರವನ್ನು ಈಗಲೇ ಕೊಡಬೇಕಾಗಿಲ್ಲ. ನಿಮ್ಮ ಸ್ನೇಹಿತರ ಸಲಹೆ ಪಡೆದು,–ಲಾಫ್ಟನ್ ರ ಆಲೋಚನೆಯನ್ನೂ ಕೇಳಬಹುದು– ಆ ರೀತಿ ಸಲಹೆ ಪಡೆದ ಮೇಲೂ ಮೊಕದ್ದಮೆ ಹೂಡಬಾರದೆಂಬುದೇ ನಿಮ್ಮ ಸಂಕಲ್ಪವಾದರೆ ನನಗೆ ಬರೆಯಿರಿ. ಆದರೆ ನೀವೇ, ನಿಮ್ಮ ಸ್ವಂತ ಇಚ್ಛೆಯಂತೆ, ನಿಮ್ಮ ಮೇಲೆ ಕೈಮಾಡಿದವರನ್ನು ವಿಚಾರಣೆಗೆ ಗುರಿಪಡಿಸುವುದಿಲ್ಲವೆಂದು ತೀರ್ಮಾನಿಸಿರುವುದಾಗಿ ನಿಮ್ಮ ಪತ್ರದಲ್ಲಿರಬೇಕು. ಹಾಗಿದ್ದರೇನೇ ಆದರಿಂದ ನನಗೆ ಉಪಯೋಗ" ಎಂದು ಹೇಳಿದರು.

" ಈ ವಿಷಯವನ್ನು ಚರ್ಚಿಸಲು ಹೇಳಿಕಳುಹಿಸಿದ್ದಿರೆಂದು ನನಗೆ ಗೊತ್ತಿರಲಿಲ್ಲ. ನಾನು ಯಾರೊಂದಿಗೂ ಯೋಚನೆ ಮಾಡಿಲ್ಲ; ಮಾಡಬಯಸುವುದೂ ಇಲ್ಲ. ನಾನು ಹಡಗು ಇಳಿಯಬೇಕೆಂದು ನಿರ್ಧರಿಸಿ ಲಾಫ್ಟನ್ ರೊಂದಿಗೆ ಹೊರಟಾಗಲೇ ನನಗೇನಾದರೂ ಅಪಾಯವಾದರೆ ಅದನ್ನು ಮನಸ್ಸಿಗೆ ತಂದುಕೊಳ್ಳಬಾರದಾಗಿ ತೀರ್ಮಾನಿಸಿದ್ದೆ. ನನ್ನ ಅತ್ಯಾಚಾರಿಗಳನ್ನು ಆಪಾದನೆಗೆ ಗುರಿಪಡಿಸುವ ಪ್ರಶ್ನೆಯೇ ಈಗ ಇಲ್ಲ. ಇದು ನನಗೆ ಒಂದು ಧಾರ್ಮಿಕ ಪ್ರಶ್ನೆ. ಈ ರೀತಿ ನಡೆಯುವುದರಿಂದ ನನ್ನ ಮತ್ತು ನನ್ನ ಜನರ ಕೆಲಸಕ್ಕೆ ಸಹಾಯವಾಗುವುದೆಂದು ನೀವು ಹೇಳುವುದನ್ನು ನಾನು ಒಪ್ಪುತ್ತೇನೆ. ಆದ್ದರಿಂದ ಎಲ್ಲ ಜವಾಬ್ದಾರಿಯನ್ನೂ ನಾನೇ ವಹಿಸಿಕೊಂಡು ನಿಮಗೆ ಬೇಕಾದ ಪತ್ರ ಈಗಲೇ ಕೊಡುತ್ತೇನೆ" ಎಂದು ಹೇಳಿದೆ. ಅವರಿಂದಲೇ ಒಂದು ಕಾಗದ ತೆಗೆದುಕೊಂಡು ಅವರ ಇಷ್ಟದಂತೆ ಪತ್ರ ಬರೆದು ಅವರ ಕೈಗೆ ಕೊಟ್ಟೆ.

ವ್ಯವಹಾರ ನಡೆಸುತ್ತಿದ್ದೆವು. ಅವರಲ್ಲಿ ಸರ್ ಮಂಚೇರ್ ಜಿ ಭಾವ್‌ನಗರಿ ಮತ್ತು

೮. ಸತ್ಯಾಗ್ರಹಕ್ಕೆ ಮುಂಚಿನ ಹೋರಾಟ

{ಮುಗಿದುದು}

ಇಂಗ್ಲೆಂಡಿನಲ್ಲಿ ಕೆಲಸ

ಹಿಂದಿನ ಅಧ್ಯಾಯಗಳಲ್ಲಿ ಭಾರತೀಯರು, ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಲು ಹೇಗೆ ಪ್ರಯತ್ನಪಟ್ಟರು, ತಮ್ಮ ಗೌರವವನ್ನು ಹೇಗೆ ಹೆಚ್ಚಿಸಿಕೊಂಡರು ಎಂಬುದು ವಾಚಕರಿಗೆ ಗೊತ್ತಾಗಿದೆ. ತಮ್ಮ ಅಂತಃಶಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವ ಪ್ರಯತ್ನದೊಂದಿಗೆ ಭಾರತದಿಂದಲೂ ಇಂಗ್ಲೆಂಡಿನಲ್ಲಿ ಸಹಾನುಭೂತಿಯನ್ನು ಪಡೆಯಲು ಕೈಗೊಂಡ ಕಾರ್ಯಕ್ರಮವನ್ನು ತಿಳಿಸುವುದು ಮಾತ್ರ ಉಳಿದಿದೆ. ಮೊದಲು ಭಾರತದ ರಾಷ್ಟ್ರಮಹಾಸಭೆಯ ಬ್ರಿಟಿಷ್ ಸಮಿತಿಯೊಂದಿಗೆ ಸಂಬಂಧವಿಟ್ಟುಕೊಳ್ಳಬೇಕಾದುದು ಅವಶ್ಯವಾಯಿತು. ಭಾರತದ ವೃದ್ಧ ಪಿತಾಮಹ ದಾದಾಭಾಯಿಯವರಿಗೂ, ಬ್ರಿಟಿಷ್ ಸಮಿತಿಯ ಅಧ್ಯಕ್ಷ ಸರ್ ವಿಲಿಯಮ್ ವೆಡರ್ ಬರ್ನ್‌ರಿಗೂ ಪೂರ್ಣ ವಿವರಗಳನ್ನು ಕೊಟ್ಟು ವಾರವಾರಕ್ಕೆ ಪತ್ರ ಬರೆಯಲಾರಂಭಿಸಿದೆವು. ಅರಿಕೆಗಳ ಪ್ರತಿಗಳನ್ನು ಕಳುಹಿಸಿದಾಗಲೆಲ್ಲ ಸಮಿತಿಯ ಟಪಾಲು ಖರ್ಚು ಮತ್ತು ಇನ್ನಿತರ ಸಾಧಾರಣ ವೆಚ್ಚಕ್ಕಾಗಿ ಹತ್ತು ಪೌಂಡುಗಳನ್ನಾದರೂ ಕಳುಹಿಸುತ್ತಿದ್ದೆವು.

ದಾದಾಭಾಯಿ ನವರೋಜಿಯುವರ ಪವಿತ್ರ ನೆನಪೊಂದನ್ನು ಇಲ್ಲಿ ಹೇಳಬೇಕೆನ್ನಿಸುತ್ತದೆ. ಅವರು ಸಮಿತಿಯ ಅಧ್ಯಕ್ಷರಾಗಿರಲಿಲ್ಲ. ಆದರೂ ಮೊದಲು ನಾವು ಅವರಿಗೆ ಹಣ ಕಳುಹಿಸಿ, ಆ ಹಣವನ್ನು ಅವರು ಅಧ್ಯಕ್ಷರಿಗೆ ಕಳುಹಿಸುವುದೇ ಉಚಿತ ಮಾರ್ಗವೆಂದು ನಮಗೆ ತೋರಿತು. ಆದರೆ ದಾದಾಭಾಯಿಯವರು ಮೊದಲನೆಯ ಕಂತನ್ನೇ ಹಿಂದಕ್ಕೆ ಕಳುಹಿಸಿ ಸಮಿತಿಗೆ ಸಂಬಂಧಪಟ್ಟ ಎಲ್ಲ ಪತ್ರವ್ಯವಹಾರ ಮತ್ತು ಹಣವನ್ನೂ ನೇರವಾಗಿ ಸರ್ ವಿಲಿಯಮ್ ವೆಡರ್ ಬರ್ನ್ ರವರಿಗೆ ಕಳುಹಿಸಬೇಕೆಂದು ಬರೆದರು. ಅವರೇ ನಮಗೆ ಎಲ್ಲ ಸಹಾಯವನ್ನೂ ಖಂಡಿತ ಮಾಡುವುದಾಗಿ ನಮಗೆ ತಿಳಿಸಿದರು. ಬ್ರಿಟಿಷ್ ಭಾರತದ ಸಮಿತಿಯ ಗೌರವ ಹೆಚ್ಚಬೇಕಾದರೆ ಮೊದಲು ನಾವು ಸರ್ ವಿಲಿಯಮ್ ರವರ ಮೂಲಕ ಸಮಿತಿಯ ಬಳಿ ಹೋಗಬೇಕು. ಅಲ್ಲದೆ ದಾದಾಭಾಯಿಯವರಿಗೆ ಬಹಳ ವಯಸ್ಸಾಗುತ್ತ ಬಂದಿದ್ದರೂ ಪತ್ರವ್ಯವಹಾರದಲ್ಲಿ ಬಹಳ ನಿಖರವಾಗಿದ್ದರು. ಅವರು ಉತ್ತರ ಬರೆಯಲು ಏನೂ ಇಲ್ಲದಿದ್ದರೂ ನಮ್ಮ ಪತ್ರ ಬಂದಿರುವುದಾಗಿ ತಿಳಿಸಿ ಒಂದೆರಡು ಪ್ರೋತ್ಸಾಹದ ಮಾತನ್ನು ಸೇರಿಸುತ್ತಿದ್ದರು. ಈ ಕಾಗದಗಳನ್ನು ಸ್ವತಃ ಬರೆದು ಅವರ ಪುಸ್ತಕದಲ್ಲಿ ನಕಲುಗಳನ್ನು ಇಟ್ಟುಕೊಳ್ಳುತ್ತಿದ್ದರು.

ನಮ್ಮ ಸಂಸ್ಥೆಯನ್ನು ಕಾಂಗ್ರೆಸ್ ಎಂದು ಕರೆದರೂ, ನಮ್ಮ ಕುಂದುಕೊರತೆಗಳನ್ನು ಏಕಪಕ್ಷದ ಪ್ರಶ್ನೆಯಾಗಿ ಮಾಡಿಕೊಳ್ಳುವ ಇಷ್ಟ ಇರಲಿಲ್ಲವೆಂದೂ ಮೊದಲೇ ತಿಳಿಸಿದ್ದೇನೆ. ಆದ್ದರಿಂದ ದಾದಾಭಾಯಿಯವರಿಗೆ ತಿಳಿಸಿ ಇತರ ಪಕ್ಷಗಳ ಸದಸ್ಯರೊಂದಿಗೂ ನಾವು

ಸರ್ ಡಬ್ಲ್ಯು. ಡಬ್ಲ್ಯು. ಹಂಟರ್ ಇವರು ಮುಖ್ಯರು. ಸರ್ ಮಂಚೇರ್‌ಜಿಯವರು ಆಗ ಪಾರ್ಲಿಮೆಂಟ್ ಸದಸ್ಯರಾಗಿದ್ದರು. ಅವರ ಸಹಾಯ ಬಹಳ ಅಮೂಲ್ಯವಾಗಿತ್ತು. ಅವರು ಯಾವಾಗಲೂ ನಮಗೆ ಬಹು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದರು. ಆದರೆ ದಕ್ಷಿಣ ಆಫ್ರಿಕದ ಭಾರತೀಯರ ಪ್ರಶ್ನೆಯ ಪ್ರಾಮುಖ್ಯತೆಯನ್ನು ಭಾರತೀಯರಿಗೂ ಮುಂಚೆ ತಿಳಿದಿದ್ದವರೆಂದರೆ, ಸರ್ ವಿಲಿಯಮ್ ವಿಲ್ಸನ್ ಹಂಟರ್ ಅವರು. ಅವರು 'ಟೈಮ್ಸ್' ಪತ್ರಿಕೆಯ ಭಾರತೀಯ ಶಾಖೆಯ ಸಂಪಾದಕರಾಗಿದ್ದರು. ಈ ಸಂಬಂಧವಾಗಿ ನಾವು ಅವರೊಡನೆ ಪತ್ರವ್ಯವಹಾರ ನಡೆಸಿದ ಕೂಡಲೆ 'ಟೈಮ್ಸ್' ಪತ್ರಿಕೆಯಲ್ಲಿ ನಮ್ಮ ಪ್ರಶ್ನೆಯನ್ನು ಸತ್ಯಾನ್ವೇಷಣ ದೃಷ್ಟಿಯಿಂದ ಚರ್ಚೆ ಮಾಡಿದರು. ನಮ್ಮ ವಿಷಯಕ್ಕೆ ಸಹಾಯ ನೀಡಬೇಕೆಂದು ಅನೇಕರಿಗೆ ಸ್ವತಃ ಕಾಗದಗಳನ್ನು ಬರೆದರು. ಯಾವುದಾದರೂ ಮುಖ್ಯ ವಿಷಯ ಪ್ರಾಮುಖ್ಯತೆಗೆ ಬಂದ ಒಡನೆ ನಮಗೆ ಪ್ರತಿವಾರವೂ ಕಾಗದ ಬರೆಯುತ್ತಿದ್ದರು. ಅವರ ಮೊದಲನೆಯ ಪತ್ರದಲ್ಲಿ "ಅಲ್ಲಿನ ಸ್ಥಿತಿಯನ್ನು ಓದಲು ನನಗೆ ವ್ಯಸನವಾಗುತ್ತದೆ. ನಿಮ್ಮ ಹೋರಾಟವನ್ನು ಗೌರವದಿಂದಲೂ ಶಾಂತಿಯುತವಾಗಿಯೂ ಉತ್ಪ್ರೇಕ್ಷೆಯಿಲ್ಲದೆಯೂ ನಡೆಸುತ್ತ ಇದ್ದೀರಿ. ಈ ವಿಷಯದಲ್ಲಿ ನನ್ನ ಪೂರ್ಣ ಸಹಾನುಭೂತಿ ನಿಮ್ಮೊಂದಿಗೆ ಇದೆ. ನಿಮಗೆ ನ್ಯಾಯ ದೊರೆಯಲು ಸಾರ್ವಜನಿಕವಾಗಿಯೂ ವೈಯಕ್ತಿಕವಾಗಿಯೂ ನನ್ನ ಕೈಲಾದ ಎಲ್ಲ ಸಹಾಯವನ್ನೂ ಕೊಡುತ್ತೇನೆ. ಈ ವಿಷಯದಲ್ಲಿ ಒಂದು ಹೆಜ್ಜೆಯನ್ನೂ ಬಿಟ್ಟು ಕೊಡಲು ಸಾಧ್ಯವಿಲ್ಲ. ನಿಮ್ಮ ಬೇಡಿಕೆಗಳು ಬಹಳ ನ್ಯಾಯವಾಗಿರುವುದರಿಂದ ನಿಷ್ಪಕ್ಷಪಾತಿಯಾದ ಯಾರೂ ಅವನ್ನು ಕಡಮೆ ಮಾಡಿ ಎಂದು ಸಹ ಹೇಳುವಂತೆ ಇಲ್ಲ" ಎಂದು ಬರೆದರು. ಟೈಮ್ಸ್ ಪತ್ರಿಕೆಗಳ ಈ ವಿಷಯವಾಗಿ ಅವರು ಬರೆದ ಲೇಖನದಲ್ಲಿ ಈ ಪತ್ರವನ್ನು ಅಕ್ಷರಶಃ ಪ್ರಕಟಿಸಿದರು. ಅವರ ಮನೋಭಾವ ಕೊನೆಯವರೆಗೂ ಒಂದೇ ತೆರನಾಗಿತ್ತು. ಅವರು ಸಾಯುವ ಮುಂಚೆ ಭಾರತೀಯರ ಪ್ರಶ್ನೆಯ ಮೇಲೆ ಒಂದು ಲೇಖನಮಾಲೆಗೆ ವಿಷಯಗಳನ್ನು ಸಂಗ್ರಹಿಸಿದ್ದುದಾಗಿ ಅವರ ಪತ್ನಿ ಲೇಡಿ ಹಂಟರ್ ರವರು ಒಂದು ಪತ್ರ ಬರೆದರು.

ಕಳೆದ ಅಧ್ಯಾಯದಲ್ಲ ಶ್ರೀ ಮನ್ಸುಖಲಾಲ್ ನಾಜರ್ ರವರ ಹೆಸರನ್ನು ಪ್ರಸ್ತಾಪಿಸಿದ್ದೇನೆ. ಭಾರತೀಯರ ಪರವಾಗಿ ಇಂಗ್ಲೆಂಡಿಗೆ ಹೋಗಿ ವಸ್ತುಸ್ಥಿತಿಯನ್ನು ವಿವರವಾಗಿ ತಿಳಿಯಹೇಳಲು ಇವರನ್ನು ಇಂಗ್ಲೆಂಡಿಗೆ ಕಳುಹಲಾಯಿತು. ಎಲ್ಲ ಪಕ್ಷಗಳ ಸದಸ್ಯರೊಂದಿಗೂ ಕೆಲಸ ಮಾಡಬೇಕೆಂದು ಹೇಳಿಕಳುಹಿಸಿದ್ದೆವು. ಇಂಗ್ಲೆಂಡಿನಲ್ಲಿದ್ದಾಗ ಸರ್ ಡಬ್ಲ್ಯು. ಡಬ್ಲ್ಯು. ಹಂಟರ್, ಸರ್ ಮಂಚೇರ್‌ಜಿ ಭಾವ್‌ನಗರಿ, ಭಾರತ ರಾಷ್ಟ್ರ ಮಹಾಸಭೆಯ ಬ್ರಿಟಿಷ್ ಸಮಿತಿ–ಇವರೆಲ್ಲರ ಸಂಬಂಧವನ್ನಿಟ್ಟು ಕೊಂಡಿದ್ದರು. ಇದೇ ರೀತಿ ಇಂಡಿಯನ್ ಸಿವಿಲ್ ಸರ್ವಿಸಿನ ನಿವೃತ್ತ ಅಧಿಕಾರಿಗಳೊಂದಿಗೂ, ಇಂಡಿಯ ಆಫೀಸ್ ಮತ್ತು ಕಲೋನಿಯಲ್ ಆಫೀಸ್‌ಗಳೊಂದಿಗೂ, ಸಂಬಂಧ ಇಟ್ಟುಕೊಂಡಿದ್ದರು. ಈ ರೀತಿ ಎಲ್ಲ ಕಡೆಯೂ ನಮ್ಮ ಪ್ರಯತ್ನಗಳು ನಡೆದುವು. ಇವೆಲ್ಲದರ ಪರಿಣಾಮವಾಗಿ

ಸಮುದ್ರದಾಚೆಯ ದೇಶಗಳಲ್ಲಿನ ಭಾರತೀಯರ ಪ್ರಶ್ನೆ ಸಾಮ್ರಾಜ್ಯ ಸರಕಾರದ ಎದುರಿನಲ್ಲಿ ಅತ್ಯಂತ ಮಹತ್ವದ ಪ್ರಶ್ನೆಯಾಯಿತು. ಇತರ ವಲಸೆ ರಾಷ್ಟ್ರಗಳಲ್ಲಿ ಇದರ ಪರಿಣಾಮ ಒಳ್ಳೆಯದೂ ಆಯಿತು, ಕೆಟ್ಟುದೂ ಆಯಿತು. ಭಾರತೀಯರು ಇದ್ದ ಕಡೆಗಳಲ್ಲೆಲ್ಲ ತಮ್ಮ ಸ್ಥಾನಮಾನವನ್ನು ಕಾಪಾಡಿಕೊಳ್ಳಲು ಎಚ್ಚತ್ತರು; ತಮ್ಮ ಪ್ರಾಮುಖ್ಯತೆಗೆ ಭಾರತೀಯರು ಅಡ್ಡಿ ಬರುತ್ತಾರೆಂದು ಯೂರೋಪಿಯನರೂ ಎಚ್ಚತ್ತರು.

೯. ಬೋಅರ್ ಯುದ್ಧ

ಬೋಅರ್ ಯುದ್ಧ ಪ್ರಾರಂಭವಾದಾಗ ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿಯನ್ನೂ ಅದನ್ನೂ ಉತ್ತಮಗೊಳಿಸಲು ಕೈಗೊಂಡ ಕಾರ್ಯಕ್ರಮದ ವಿಷಯವನ್ನೂ ಹಿಂದಿನ ಅಧ್ಯಾಯಗಳಲ್ಲಿ ತಿಳಿಸಿದೆ.

೧೮೯೯ ರಲ್ಲಿ ಚಿನ್ನದ ಗಣಿಗಳ ಯಜಮಾನರೊಂದಿಗೆ ಮಾಡಿದ್ದ ಪಿತೂರಿಯಂತೆ ಡಾಕ್ಟರ್ ಜೇಮ್ಸನ್ ರು ಜೋಹಾನ್ಸ್ ಬರ್ಗಿಗೆ ಮುತ್ತಿಗೆ ಹಾಕಿದರು. ಜೋಹಾನ್ಸ್ ಬರ್ಗ ಪಟ್ಟಣವನ್ನು ತೆಗೆದುಕೊಂಡಮೇಲೆ, ಬೋಅರ್ ಸರಕಾರಕ್ಕೆ ವರ್ತಮಾನ ತಿಳಿಯಬಹುದೆಂದು ಯೋಚಿಸಿದ್ದರು. ಈ ಯೋಚನೆಯಲ್ಲಿ ಡಾಕ್ಟರ್ ಜೇಮ್ಸನ್‌ರೂ ಅವರ ಸಹಾಯಕರೂ ತಪ್ಪು ಮಾಡಿದ್ದರು. ತಮ್ಮ ಪಿತೂರಿ ಗೊತ್ತಾದ ಮೇಲೆ, ಯುದ್ಧ ಸಿದ್ಧತೆ ಇಲ್ಲದ ಬೋಅರ್ ವ್ಯವಸಾಯಗಾರರು, ಸುಸಜ್ಜಿತ ರ್‍ಹೊಡೀಷಿಯಾ ಬಂದೂಕು ಸೈನ್ಯದ ಎದುರಿನಲ್ಲಿ ಏನೂ ಮಾಡಲಾರರೆಂದು ಯೋಚಿಸಿದ್ದು ಇನ್ನೊಂದು ದೊಡ್ಡ ತಪ್ಪು. ಜೋಹಾನ್ಸಬರ್ಗಾದ ನಿವಾಸಿಗಳಲ್ಲನೇಕರು ತಮಗೆ ಸ್ವಾಗತವನ್ನು ಕೊಡುತ್ತಾರೆಂದು ಪಿತೂರಿಗಾರರು ತಿಳಿದು ಕೊಂಡಿದ್ದರು. ಇಲ್ಲಿಯೂ ಡಾಕ್ಟರ್ ಸಾಹೇಬರು ಗಾಳಿಗೋಪುರ ಕಟ್ಟಿದ್ದರು. ಅಧ್ಯಕ್ಷ ಕ್ರೂಗರ್‌ರಿಗೆ ಮುಂಚೆಯೇ ವರ್ತಮಾನ ತಿಳಿದಿತ್ತು. ಏಕಕಾಲದಲ್ಲಿ ಡಾಕ್ಟರ್ ಜೇಮ್ಸನ್‌ರನ್ನು ಎದುರಿಸುವುದಕ್ಕೂ ಮತ್ತು ಅವರ ಜೊತೆಗಾರರನ್ನು ದಸ್ತಗಿರಿ ಮಾಡುವುದಕ್ಕೂ ಮೊದಲೇ ಯೋಚನೆ ಮಾಡಿ ಬುದ್ಧಿವಂತಿಕೆಯಿಂದಲೂ ಗುಪ್ತವಾಗಿಯೂ ಸಿದ್ಧತೆ ಮಾಡಿಕೊಂಡಿದ್ದರು ಆದ್ದರಿಂದ ಡಾಕ್ಟರ್ ಜೇಮ್ಸನ್‌ರು ಜೋಹಾನ್ಸಬರ್ಗ್ ಹತ್ತಿರ ಬರುವ ಮುಂಚೆಯೇ ಬೋಅರ್‌ರು ಅವರ ಮೇಲೆ ಡಾಕ್ಟರ ಕಡೆಯವರು ಯುದ್ಧವನ್ನು ಪೂರೈಸುವಂತೆ ಇರಲಿಲ್ಲ. ಅದರಂತೆಯೇ ಜೋಹಾನ್ಸ ಬರ್ಗ್‌ದಲ್ಲಿ ದಂಗೆ ಏಳದಂತೆ ಮುಂಜಾಗರೂಕತೆಯನ್ನು ತೆಗೆದುಕೊಳ್ಳಲಾಗಿತ್ತು. ಯಾರೂ ಹೊರಗೆ ತಲೆ ಸಹ ಇಡಲಿಲ್ಲ. ಜೋಹಾನ್ಸಬರ್ಗಿನ ಕೋಟ್ಯಾಧೀಶ್ವರರು ಅಧ್ಯಕ್ಷ ಕ್ರೂಗರ್ ರ ಕಾರ್ಯಕ್ರಮವನ್ನು ಕಂಡು ಮೂಕರಾದರು, ಅವರ ಅತ್ಯುತ್ತಮ ಸಿದ್ಧತೆಯಿಂದ, ಅತ್ಯಲ್ಪ ದ್ರವ್ಯ ಮತ್ತು ಪ್ರಾಣಹಾನಿಯೊಡನೆ ದಂಗೆ ಅಡಗಿತು.

ಚಿನ್ನದ ಗಣಿಗಳ ಮಾಲಕರಾದ ಡಾಕ್ಟರ್ ಜೇಮ್ಸನ್ ಮತ್ತು ಅವರ ಸ್ನೇಹಿತರನ್ನು ದಸ್ತಗಿರಿ ಮಾಡಿ, ತಕ್ಷಣವೇ ಅವರ ಮೇಲೆ ಮೊಖದ್ದಮೆ ಹೂಡಲಾಯಿತು. ಕೆಲವರಿಗೆ ಮರಣದಂಡನೆಯಾಯಿತು. ಶಿಕ್ಷೆಯಾದವರಲ್ಲಿ ಅನೇಕರು ಕೋಟ್ಯಧೀಶ್ವರರು. ಹಗಲಿನಲ್ಲೇ

ಅವರು ದರೋಡೆ ಮಾಡಿದ್ದರಿಂದ ಸಾಮ್ರಾಜ್ಯ ಸರಕಾರ ಅವರಿಗೆ ಯಾವ ಸಹಾಯವನ್ನು ಮಾಡಲಾಗಲಿಲ್ಲ. ಇದ್ದಕ್ಕಿದ್ದ ಹಾಗೇ ಅಧ್ಯಕ್ಷ ಕ್ರೂಗರ್‌ರ ಪ್ರಾಶಸ್ತ್ಯ ಹೆಚ್ಚಿತು. ವಲಸೆ ರಾಷ್ಟ್ರಗಳ ಕಾರ್ಯದರ್ಶಿಗಳಾದ ಚೇಂಬರ್ಲಿನ್‌ರು ದೈನ್ಯದಿಂದ ಅವರಿಗೆ ಕೇಬಲ್ ಕಳುಹಿಸಿ ಶಿಕ್ಷೆಗೊಳಗಾದ ಧನಿಕರ ಪರವಾಗಿ ಕ್ಷಮಾಭಿಕ್ಷೆ ಬೇಡಿದರು. ಅಧ್ಯಕ್ಷ ಕ್ರೂಗರ್‌ರಿಗೆ ತಮ್ಮ ಕೆಲಸ ಏನೆಂಬುದು ಗೊತ್ತು. ದಕ್ಷಿಣ ಆಫ್ರಿಕದಲ್ಲಿ ತಮ್ಮ ಸ್ವತಂತ್ರ ಮನೋಭಾವನೆಯನ್ನು ಎದುರಿಸುವ ಶಕ್ತಿ ಯಾವುದೂ ಇಲ್ಲವೆಂದು ತಿಳಿದಿದ್ದರು. ಡಾಕ್ಟರ್ ಜೇಮ್ಸನ್ ಮತ್ತು ಅವರ ಸ್ನೇಹಿತರು ಒಳ್ಳೆಯ ಸನ್ನಾಹ ಮಾಡಿ ಕೊಂಡಿದ್ದೇವೆಂದು ತಿಳಿದುಕೊಂಡಿದ್ದರೂ ಅಧ್ಯಕ್ಷ ಕ್ರೂಗರರ ದೃಷ್ಟಿಯಲ್ಲಿ ಅದು ಬುದ್ಧಿಯಿಲ್ಲದ ಹುಚ್ಚುತನವಾಗಿತ್ತು. ಆದ್ದರಿಂದ ಅವರು ಚೇಂಬರ್ಲಿನ್ ರ ಸವಿನಯ ಬೇಡಿಕೆಗೆ ಮನ್ನಣೆ ಕೊಟ್ಟರು. ಮರಣದಂಡನೆಯನ್ನು ರದ್ದುಗೊಳಿಸಿ, ಎಲ್ಲರನ್ನೂ ಕ್ಷಮಿಸಿ ಬಿಡುಗಡೆ ಮಾಡಿದರು.

ಆದರೆ ಇದೇ ರೀತಿ ಬಹಳ ಕಾಲ ನಡೆಯಲು ಸಾಧ್ಯವಿರಲಿಲ್ಲ. ಡಾಕ್ಟರ್ ಜೇಮ್ಸನ್‌ರ ಮುತ್ತಿಗೆ ಬಲವಾದ ರೋಗದ ಒಂದು ಸಣ್ಣ ಕುರುಹು ಮಾತ್ರ ಎಂದು ಅವರಿಗೆ ತಿಳಿದಿತ್ತು. ಜೋಹಾನ್ಸಬರ್ಗಿನ ಕೋಟ್ಯಾಧೀಶ್ವರರು ತಮಗಾದ ಅವಮಾನವನ್ನು ಅಳಿಸಲು ಶಕ್ತಿ ಮೀರಿ ಪ್ರಯತ್ನ ಮಾಡದೆ ಸುಮ್ಮನಿರುವುದು ಅಸಾಧ್ಯವಾಗಿತ್ತು, ಅದೂ ಅಲ್ಲದೆ ಯಾವ ಸುಧಾರಣೆಗಳಿಗಾಗಿ ಡಾಕ್ಟರ್ ಜೇಮ್ಸನ್‌ರು ದಂಗೆ ಎದ್ದರೋ ಆ ಸುಧಾರಣೆಗಳು ಇನ್ನೂ ಜಾರಿಗೆ ಬರಲಿಲ್ಲ. ಆದ್ದರಿಂದ ಕೋಟ್ಯಧೀಶ್ವರರು ತೆಪ್ಪಗಿರುವುದು ಸಾಧ್ಯವಿರಲಿಲ್ಲ. ದಕ್ಷಿಣ ಆಫ್ರಿಕದ ಬ್ರಿಟಿಷ್ ಹೈಕಮಿಷನರ್ ಆದ ಲಾರ್ಡ್ ಮಿಲ್ನರ್‌ಗೆ ಈ ಕೋಟ್ಯಧೀಶ್ವರರ ಬೇಡಿಕೆಗಳ ವಿಷಯದಲ್ಲಿ ಪೂರ್ಣ ಸಹಾನುಭೂತಿ ಇತ್ತು. ಚೇಂಬರ್ಲಿನ್‌ರು ಸಹ ಅಧ್ಯಕ್ಷಕ್ರೂಗರರ ದಯಾಳುತ್ವವನ್ನು ಕೊಂಡಾಡಿದಾಗ ಸುಧಾರಣೆಗಳ ಅವಶ್ಯಕತೆಯ ಕಡೆಗೆ ಅವರ ಗಮನವನ್ನು ಎಳೆದಿದ್ದರು. ಯುದ್ಧ ಅನಿವಾರ್ಯವೆಂದು ಎಲ್ಲರೂ ತಿಳಿದಿದ್ದರು. ಟ್ರಾನ್ಸ್ ವಾಲಿನಲ್ಲಿ ಬೋಅರರ ಶಕ್ತಿಯನ್ನು ಮೊಟಕು ಮಾಡಬೇಕೆಂಬುದೇ ಐಟ್ ಲ್ಯಾಂಡರಗಳ ಬೇಡಿಕೆಗಳ ಗುರಿ. ಯುದ್ಧದ ಪರ್ಯವಸಾನವೇನು ಎಂಬುದು ಉಭಯ ಪಕ್ಷದವರಿಗೂ ತಿಳಿದಿದ್ದ ಕಾರಣ ಎರಡೂ ಕಡೆಯವರು ಯುದ್ಧ ಸನ್ನದ್ಧರಾಗುತ್ತಿದ್ದರು. ಉಭಯಪಕ್ಷಗಳ ಮಧ್ಯೆ ನಡೆದ ವಾಗ್ಯುದ್ಧ ಗಮನಾರ್ಹವಾದುದು. ಅಧ್ಯಕ್ಷ ಕ್ರೂಗರ್‌ರು ಮದ್ದುಗಳನ್ನು ಕೊಳ್ಳಲು ಆಜ್ಞೆ ಮಾಡಿದ ಕೂಡಲೆ, ಬ್ರಿಟಿಷ್ ಪ್ರತಿನಿಧಿ ಆತ್ಮರಕ್ಷಣೆಗಾಗಿ ಬ್ರಿಟಿಷರು ದಕ್ಷಿಣ ಆಫ್ರಿಕದೊಳಕ್ಕೆ ಸೈನ್ಯಗಳನ್ನು ಕರೆಸಬೇಕಾಗುವುದೆಂದರು ಎಚ್ಚರಿಸಿದನು. ದಕ್ಷಿಣ ಆಫ್ರಿಕಕ್ಕೆ ಬ್ರಿಟಿಷ್ ಸೈನ್ಯಗಳು ಬಂದೊಡನೆ ಅಧ್ಯಕ್ಷ ಕ್ರೂಗರ್ ರು ಬ್ರಿಟಿಷರನ್ನು ಅಪಹಾಸ್ಯಮಾಡಿ ತಮ್ಮ ಸಿದ್ಧತೆಯನ್ನು ಇನ್ನೂ ಮುಂದುವರಿಸಿದರು. ಈ ರೀತಿ ಎರಡು ಕಡೆಯವರೂ ಪ್ರತಿಪಕ್ಷದವರ ಮೇಲೆ ಆಕ್ಷೇಪಣೆ ಮಾಡುತ್ತಿದ್ದರೂ, ತಮ್ಮ ಸಿದ್ಧತೆಯನ್ನು ಮಾತ್ರ ಮುಂದುವರಿಸಿ ಬಲಪಡಿಸುತ್ತಿದ್ದರು.

ಅಧ್ಯಕ್ಷ ಕ್ರೂಗರ್‌ರು ತಮ್ಮ ಸಿದ್ಧತೆಯನ್ನು ಪೂರೈಸಿದ ಒಡನೆ ಇನ್ನು ಕಾಲವಿಳಂಬ ಮಾಡಿದರೆ, ಶತ್ರುಗಳಿಗೆ ಅನುಕೂಲವೆಂದು ತಿಳಿದರು. ಬ್ರಿಟಿಷರ ಜನ ಮತ್ತು ಧನಸಹಾಯ ಅಪಾರವಾಗಿತ್ತು. ಐಟ್ ಲ್ಯಾಂಡ್‌ರ್‌ಗಳ ಬೇಡಿಕೆಗಳನ್ನು ಪೂರೈಸಿರೆಂದು ಸಂಧಾನ

ನಡೆಸುತ್ತ, ತಮ್ಮ ಸಿದ್ದತೆಗಳನ್ನು ಪೂರೈಸಲು ಬ್ರಿಟಿಷರಿಗೆ ಅವಕಾಶ ದೊರೆಯುವುದೆಂದೂ ಕೊನೆಗೆ ಸಿದ್ಧತೆ ಪೂರೈಸಿದ ಒಡನೆ ತಮ್ಮ ಬೇಡಿಕೆಗಳಿಗೆ ಪರಿಹಾರ ದೊರೆಯದ ಕಾರಣ ಯುದ್ದ ಅನಿವಾರ್ಯವಾಯಿತೆಂದು ಬ್ರಿಟಿಷರು ಪ್ರಪಂಚಕ್ಕೆ ಮಂಕುಬೂದಿ ಎರಚಲು ಅವಕಾಶವಾಗುವುದೆಂದೂ ತಿಳಿದಿತ್ತು. ಪೂರ್ಣ ಸಿದ್ಧತೆಯಾದ ಮೇಲೆ ಯುದ್ಧಕ್ಕೆ ನಿಂತರೆ ಬೋಅರರು ಅದರ ತೀಕ್ಷ್ಣತೆಯನ್ನು ತಾಳಲಾಗದೆ, ಶರಣಾಗತರಾಗಿ ಬ್ರಿಟಿಷರು ಹೇಳಿದ ಷರತ್ತುಗಳಿಗೆ ಒಪ್ಪಬೇಕಾಗಿತ್ತು. ಹದಿನೆಂಟು ವರ್ಷದಿಂದ ಅರವತ್ತು ವರ್ಷದವರೆಗಿನ ಪ್ರತಿ ಬೋಅರನೂ ಒಳ್ಳೆಯ ಯೋಧನಿದ್ದನು. ಬೇಕೆಂದರೆ ಬೋಅರ್ ಹೆಂಗಸರೂ ಯುದ್ಧ ಮಾಡಬಲ್ಲವರಾಗಿದ್ದರು. ಬೋಅರರಿಗೆ ರಾಷ್ಟ್ರಿಯ ಸ್ವಾತಂತ್ರ್ಯ ಧಾರ್ಮಿಕ ತತ್ವದಷ್ಟೇ ಬೆಲೆಯುಳ್ಳದ್ದಾಗಿತ್ತು. ಅಂತಹ ಧೈರ್ಯ ಶಾಲಿಗಳಾದ ಜನರು ಪ್ರಪಂಚದ ಅತ್ಯಂತ ಪ್ರಬಲ ಸಾಮ್ರಾಜ್ಯದಿಂದ ಕೂಡ ಅಪಮಾನವನ್ನು ಸಹಿಸುವಂತೆ ಇರಲಿಲ್ಲ ಅಧ್ಯಕ್ಷ ಕ್ರೂಗರ್‌ರು ಆಗಲೇ ಆರೆಂಜ್ ಫ್ರೀಸ್ಟೇಟ್‌ದೊಂದಿಗೆ ಒಂದು ಒಪ್ಪಂದಕ್ಕೆ ಬಂದಿದ್ದರು. ಸ್ವತಂತ್ರ ಬೋಅರ್ ರಿಪಬ್ಲಿಕ್‌ಗಳೆರಡೂ ಒಂದೇ ಕಾರ್ಯನೀತಿ ಯನ್ನನುಸರಿಸಿದುವು. ಬ್ರಿಟಿಷರ ಬೇಡಿಕೆಗಳನ್ನು ಪೂರ್ತಿ ಅಲ್ಲ–ಐಟ್ ಲ್ಯಾಂಡರುಗಳನ್ನು ತೃಪ್ತಿಪಡಿಸುವಷ್ಟು ಸಹ–ಒಪ್ಪಲು ಅಧ್ಯಕ್ಷ ಕ್ರೂಗರ್‌ರು ಇಷ್ಟಪಡಲಿಲ್ಲ. ಎರಡು ರಿಪಬ್ಲಿಕ್‌ಗಳೂ ಯುದ್ಧ ಅನಿವಾರ್ಯವೆಂದು ತಿಳಿದ ಒಡನೆ, ಬ್ರಿಟಿಷರಿಗೆ ಇನ್ನು ಹೆಚ್ಚು ವ್ಯವಧಾನ ಕೊಟ್ಟರೆ ಯುದ್ಧಸಿದ್ಧತೆಯನ್ನು ಪೂರೈಸಲು ಅವರಿಗೆ ಅವಕಾಶ ದೊರೆಯುತ್ತದೆಂದು ನಿರ್ಧರಿಸಿದರು. ಅಧ್ಯಕ್ಷ ಕ್ರೂಗರ್‌ರು ಲಾರ್ಡ್ ಮಿಲ್ನರ್‌ಗೆ ಕೊನೆಯ ಎಚ್ಚರ ಕೊಟ್ಟು ಟ್ರಾನ್ಸ್ ವಾಲ್ ಮತ್ತು ಆರೆಂಜ್ ಫ್ರೀ ಸ್ಟೇಟ್ ಗಡಿಗಳಲ್ಲಿ ಸೈನ್ಯಗಳನ್ನು ಜಮಾಯಿಸಿದರು. ಈ ಕಾರ್ಯಕ್ರಮದ ಪರಿಣಾಮ ಎಲ್ಲರಿಗೂ ತಿಳಿದೇ ಇತ್ತು. ಪ್ರಪಂಚದಲ್ಲೇ ದೊಡ್ಡ ಸಾಮ್ರಾಜ್ಯದವರೆನಿಸಿದ ಬ್ರಿಟಿಷರು ಕಣ್ಣು ಮುಚ್ಚಿ ಕೂಡುವಂತೆ ಇರಲಿಲ್ಲ. ಎಚ್ಚರಿಕೆ ಕೊಟ್ಟ ವಾಯಿದೆ ಮುಗಿದ ಒಡನೆ ಬೋಅರರು ಮಿಂಚಿನ ವೇಗದಿಂದ ಮುಂದುವರಿದು ಲೇಸಿ ಸ್ಮಿತ್, ಕಿಂಬರ್ಲಿ, ಮ್ಯಾಫೆಕಿಂಗ್‌ಗಳಿಗೆ ಮುತ್ತಿಗೆ ಹಾಕಿದರು. ಈ ಮಹಾಯುದ್ಧ ಪ್ರಾರಂಭವಾದದ್ದು ೧೮೯೯ ರಲ್ಲಿ. ಬ್ರಿಟಿಷರ ಘೋಷಣೆಯಂತೆ ಬೋಅರರು ಭಾರತೀಯರಿಗೆ ಕೊಟ್ಟ ಹಿಂಸೆಯೂ ಈ ಯುದ್ಧಕ್ಕೆ ಒಂದು ಕಾರಣವೆಂದು ವಾಚಕರು ಜ್ಞಾಪಕದಲ್ಲಿಡಬೇಕು.

ಈ ಸಂದರ್ಭದಲ್ಲಿ ದಕ್ಷಿಣ ಆಫ್ರಿಕದಲ್ಲಿ ಭಾರತೀಯರು ಏನು ಮಾಡಬೇಕೆಂಬ ಮಹಾಸಮಸ್ಯೆ ನಮ್ಮೆದುರಿಗೆ ನಿಂತಿತು. ಬೋಅರರಲ್ಲಿ ಗಂಡಸರೆಲ್ಲರೂ ಯುದ್ದಕ್ಕೆ ಸೇರಿದರು. ನ್ಯಾಯವಾದಿಗಳು ನ್ಯಾಯವೃತ್ತಿಯನ್ನೂ ವ್ಯವಸಾಯಗಾರರು ಜಮೀನುಗಳನ್ನೂ ವರ್ತಕರು ವ್ಯಾಪಾರವನ್ನೂ ನೌಕರರು ತಮ್ಮ ಕೆಲಸವನ್ನೂ ಬಿಟ್ಟುಬಂದರು. ದಕ್ಷಿಣ ಆಫ್ರಿಕದ ಬ್ರಿಟಿಷರು ಅದೇ ಪ್ರಮಾಣದಲ್ಲಿ ಯುದ್ಧಕ್ಕೆ ಸೇರಲಿಲ್ಲ. ಆದರೂ ಕೇಪ್ ಕಾಲೊನಿ, ನೇಟಾಲ್, ರ್‍ಹೊಡೀಷಿಯಾ ಪ್ರಾಂತಗಳಿಂದ ಅನೇಕ ಸಾರ್ವಜನಿಕ ಮುಖಂಡರು ಸ್ವಯಂಸೇವಕರಾಗಿ ಸೇರಿದರು. ಅನೇಕ ಪ್ರಮುಖ ಇಂಗ್ಲಿಷ್ ನ್ಯಾಯವಾದಿಗಳೂ ವರ್ತಕರೂ ಅವರನ್ನೂ ಹಿಂಬಾಲಿಸಿದರು. ನಾನು

ವಾದ ಮಾಡುತ್ತಿದ್ದ ನ್ಯಾಯಸ್ಥಾನದಲ್ಲಿ ಈಗ ಬಹಳ ಸ್ವಲ್ಪ ನ್ಯಾಯವಾದಿಗಳು ಉಳಿದರು. ಹಿರಿಯ ನ್ಯಾಯವಾದಿಗಳನೇಕರು ಯುದ್ಧ ಸಹಾಯಕ ಕಾರ್ಯಗಳಲ್ಲಿ ತೊಡಗಿದ್ದರು. ಭಾರತೀಯರು ದುಡ್ಡು ಮಾಡಲು ಮಾತ್ರ ದಕ್ಷಿಣ ಆಫ್ರಿಕಕ್ಕೆ ಹೋಗಿದ್ದಾರೆಂದೂ ಬ್ರಿಟಿಷರ ಕುತ್ತಿಗೆಗೆ ಉರುಲೆಂದೂ ಒಂದು ಆಪಾದನೆ ಇತ್ತು. ಮರದೊಳಗೇ ಸೇರಿ ಕೊರೆದು ಕೊಬ್ಬುವ ಹುಳುಗಳಂತೆ ಭಾರತೀಯರು ಬ್ರಿಟಿಷರ ಖರ್ಚಿನಿಂದ ತಮ್ಮ ಬೊಜ್ಜು ಬೆಳೆಸಲು ದಕ್ಷಿಣ ಆಫ್ರಿಕಕ್ಕೆ ಬಂದಿದ್ದಾರೆಂದು ಹೇಳುತ್ತಿದ್ದರು. ದೇಶವನ್ನೇ ಆಗಲಿ, ತಮ್ಮ ಮನೆಗಳನ್ನೇ ಆಗಲಿ ಮುತ್ತಿದರೂ ಭಾರತೀಯರು ಯಾವ ಸಹಾಯವನ್ನು ಮಾಡುವುದಿಲ್ಲವೆನ್ನುತ್ತಿದ್ದರು. ಬ್ರಿಟಿಷರು ಈ ಸಂದರ್ಭದಲ್ಲಿ ತಮ್ಮ ರಕ್ಷಣೆಯಲ್ಲದೆ ಭಾರತೀಯರ ರಕ್ಷಣೆಯನ್ನೂ ನೋಡಿಕೊಳ್ಳಬೇಕಾಗಿದೆ ಎಂದರು. ನಾವು ಭಾರತೀಯರು ಈ ಎಲ್ಲ ಆಪಾದನೆಗಳನ್ನೂ ಗಮನಿಸಿದೆವು ಇವುಗಳಾವುದಕ್ಕೂ ಬುಡವಿಲ್ಲವೆಂದು ತೋರಿಸಲು ಇದು ಒಳ್ಳೆಯ ಸಮಯವೆಂದೆವು. ಆದರೆ ಕೆಲವರು:

"ಬೋಅರ್‌ರಷ್ಟೇ ಬ್ರಿಟಿಷರೂ ನಮ್ಮನ್ನು ತುಳಿಯುತ್ತಾರೆ. ಟ್ರಾನ್ಸ್ ವಾಲಿನಲ್ಲಿ ನಮಗೆ ತೊಂದರೆಗಳಿದ್ದರೆ ನೇಟಾಲಿನಲ್ಲಾಗಲಿ, ಕೇಪ್ ಕಾಲೊನಿಯಲ್ಲಾಗಲಿ ನಮ್ಮ ಸ್ಥಿತಿ ಉತ್ತಮವಾಗಿಲ್ಲ. ವ್ಯತ್ಯಾಸವೇನಿದ್ದರೂ ಪ್ರಮಾಣದಲ್ಲಿ ಮಾತ್ರ. ಸ್ವಲ್ಪ ಹೆಚ್ಚು ಕಡಮೆ ನಾವೆಲ್ಲರೂ ಗುಲಾಮರು. ಅಲ್ಪಸಂಖ್ಯಾತರಾದ ಬೋಅರ್ ಜನಾಂಗದವರು ತಮ್ಮ ಉಳಿವಿಗಾಗಿ ಹೋರಾಡುತ್ತಿರುವಾಗ ಅವರ ವಿನಾಶಕ್ಕೆ ನಾವೇಕೆ ಕಾರಣರಾಗಬೇಕು? ಕಡೆಯದಾಗಿ, ವ್ಯವಹಾರ ದೃಷ್ಟಿಯಿಂದ ನೋಡಿದರೂ ಬೋಅರರು ಸೋಲುವುದೇ ಖಂಡಿತವೆಂದು ಹೇಳಲು ಯಾರು ಧೈರ್ಯ ಮಾಡಲಾರರು. ಅವರು ಗೆದ್ದುದೇ ಆದರೆ ಖಂಡಿತವಾಗಿಯೂ ನಮ್ಮ ಮೇಲೆ ಸೇಡು ತೀರಿಸಿಕೊಳ್ಳದೆ ಬಿಡುವುದಿಲ್ಲ" ಎಂದರು.

ಮೇಲಿನ ವಾದವನ್ನು ಎತ್ತಿ ಹಿಡಿದವರ ಸಂಖ್ಯೆ ನಮ್ಮಲ್ಲಿ ಬಹಳ ಬಲವಾಗಿತ್ತು. ಅದು ನನಗೆ ಅರ್ಥವಾಯಿತು; ಅದಕ್ಕೆ ತಕ್ಕ ಬೆಲೆಯನ್ನೂ ಕೊಟ್ಟೆವು. ಆದರೂ ಆ ವಾದ ನನಗೆ ಹಿಡಿಸಲಿಲ್ಲ. ನಮ್ಮ ಜನರೆದುರಿನಲ್ಲಿ ಈ ರೀತಿ ಅದನ್ನು ಖಂಡಿಸಿದ :

"ನಾವು ದಕ್ಷಿಣ ಆಫ್ರಿಕದಲ್ಲಿರುವುದು ಬ್ರಿಟಿಷ್ ಪ್ರಜೆಗಳಾಗಿ. ನಾವು ಕಳುಹಿಸಿದ ಪ್ರತಿಯೊಂದು ಅರ್ಜಿಯಲ್ಲೂ ಈ ವಿಷಯವನ್ನು ಪ್ರತಿಪಾದಿಸಿ ಸ್ಥಿರಪಡಿಸುತ್ತ ಬಂದಿದ್ದೇವೆ. ಬ್ರಿಟಿಷ್ ಪ್ರಜೆಗಳೆಂದು ನಾವು ಹೆಮ್ಮೆ ಪಟ್ಟಿದ್ದೇವೆ; ನಮ್ಮ ಆಳರಸರಿಗೂ ಪ್ರಪಂಚಕ್ಕೂ ನಂಬಿಕೆ ಹುಟ್ಟಿಸಿದ್ದೇವೆ. ನಾವು ಬ್ರಿಟಿಷ್ ಪ್ರಜೆಗಳಾದ್ದರಿಂದ ನಮ್ಮ ಹಕ್ಕುಬಾಧ್ಯತೆಗಳನ್ನು ರಕ್ಷಿಸುವುದಾಗಿ ನಮ್ಮ ಆಳರಸರು ಹೇಳುತ್ತಿದ್ದಾರೆ. ಈಗ ನಮಗೆ ಏನಾದರೂ ಸ್ವಲ್ಪ ಹಕ್ಕುಬಾಧ್ಯತೆಗಳಿದ್ದರೆ ಬ್ರಿಟಿಷ್ ಪ್ರಜೆಗಳಾಗಿರುವುದರಿಂದ. ಬ್ರಿಟಿಷರಿಗೂ ನಮಗೂ ಸರ್ವನಾಶ ಸಿದ್ಧವಾಗಿರುವಾಗ, ನಮಗೆ ಇಲ್ಲಿ ತೊಂದರೆ ಕೊಡುತ್ತಿದ್ದಾರೆಂಬ ನೆಪದಿಂದ ನಾವು ಕೈಕಟ್ಟಿ ಸುಮ್ಮನೆ ನೋಡುತ್ತ ಕುಳಿತುಕೊಳ್ಳುವುದು ನಮ್ಮ ಜನಾಂಗದ ಘನತೆಗೆ ಸಲ್ಲದು ಮಾತು. ಅಂತಹ ಹೀನ ನಡತೆ ನಮ್ಮ ತೊಂದರೆಗಳನ್ನು ಹೆಚ್ಚಿಸುವುದಲ್ಲದೆ,

ನಮ್ಮ ಮೇಲಿನ ಯಾವ ಆಪಾದನೆಗಳನ್ನು ಬುಡವಿಲ್ಲದವುಗಳೆಂದು ನಂಬಿದ್ದೆವೋ ಅಂತಹ ನಂಬುಗೆಯನ್ನು ದೃಢಪಡಿಸಿಕೊಡಲು ಅನಾಯಾಸವಾಗಿ ದೊರೆತಿರುವ ಈ ಅವಕಾಶವನ್ನು ಉಪಯೋಗಿಸಿಕೊಳ್ಳದಿದ್ದರೆ ನಮ್ಮ ಘಾತವನ್ನು ನಾವೇ ಮಾಡಿಕೊಂಡಂತಾಗುವುದು. ಇಂಗ್ಲೀಷರು ನಮ್ಮನ್ನು ಇನ್ನೂ ಕೀಳಾಗಿ ಕಂಡು ಮೊದಲಿಗಿಂತ ಹೆಚ್ಚಾಗಿ ತೊಂದರೆ ಕೊಟ್ಟರೆ ಆಶ್ಚರ್ಯಪಡಬೇಕಾದ್ದಿಲ್ಲ. ಆಗ ತಪ್ಪೆಲ್ಲವೂ ನಮ್ಮದೇ ಆಗುತ್ತದೆ. ನಮ್ಮ ಮೇಲಿನ ಆಪಾದನೆಗಳಿಗೆ ವಾಸ್ತವವಾಗಿ ಬುಡವಿಲ್ಲವೆಂದೂ ಅವು ನಿಜವಾಗಿಯೂ ನಿರಾಧಾರವಾದವು ಎಂದೂ ಹೇಳಿದರೆ ಆತ್ಮವಂಚನೆಯಾಗುತ್ತದೆ. ನಾವು ಸಾಮ್ರಾಜ್ಯದ ಪ್ರಜೆಗಳಾಗಿಯೇ ನಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಯತ್ನಿಸಿದ್ದೇವೆ. ಇದೇ ನಮ್ಮ ಮತ್ತು ಭಾರತದಲ್ಲಿನ ನಮ್ಮ ಮುಖಂಡರ ಕಾರ್ಯನೀತಿ. ನಮ್ಮ ಸ್ವಾತಂತ್ರ್ಯವನ್ನು ಸಂಪಾದಿಸಿ, ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳಾಗಿ ನಮ್ಮ ಸ್ವಾತಂತ್ರ್ಯವನ್ನು ಸಂಪಾದಿಸಿ, ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳಾಗಿ ನಮ್ಮ ಹಿತಚಿಂತನೆಯನ್ನು ಕಾಪಾಡಿ ಕೊಳ್ಳಬಯಸಿದರೆ, ನಮ್ಮ ಶಕ್ತಿ ಸಾಮಾರ್ಥ್ಯಗಳೆಲ್ಲವನ್ನೂ ಉಪಯೋಗಿಸಿ ಬ್ರಿಟಿಷರಿಗೆ ಸಹಾಯ ಮಾಡುವ ಈ ಅವಕಾಶವೇ ಚೆನ್ನದಂಥ ಅವಕಾಶ. ನ್ಯಾಯ ಬೋಅರರ ಕಡೆ ಇದೆ ಎಂದು ಬಹುಮಟ್ಟಿಗೆ ಒಪ್ಪಲೇ ಬೇಕು. ಆದರೆ ಒಂದು ರಾಷ್ಟ್ರದ ಮೇಲೆ ಒತ್ತಾಯಪಡಿಸಬಯಸುವುದು ಯೋಗ್ಯವಲ್ಲ. ಅಧಿಕಾರಿಗಳು ಮಾಡಿದ ಕೆಲಸವೆಲ್ಲ ಸರಿಯಿಲ್ಲದಿರಬಹುದು. ಪ್ರಜೆಗಳು ಸರಕಾರದಲ್ಲಿ ಭಕ್ತಿಯನ್ನಿಟ್ಟಿರುವವರೆಗೂ ಸಾಧಾರಣವಾಗಿ ಸರಕಾರದ ರಾಜಕಾರ್ಯಗಳಿಗೆ ತಮ್ಮ ಅಭಿಪ್ರಾಯಗಳನ್ನು ಹೊಂದಿಸಿಕೊಂಡು, ತಮ್ಮ ಬೆಂಬಲ ಕೊಡಬೇಕಾದ್ದು ಪ್ರಜೆಗಳ ಸ್ಪಷ್ಟ ಕರ್ತವ್ಯ.

"ಅದೂ ಅಲ್ಲದೆ ಯಾವುದಾದರೂ ಪ್ರಜಾವರ್ಗಕ್ಕೆ, ಸರಕಾರ ಮಾಡುವ ಕೆಲಸ ಧಾರ್ಮಿಕ ದೃಷ್ಟಿಯಿಂದ ಅನೀತಿಯುತವಾದುದೆಂದು ತೋರಿದರೆ, ಆ ಕೆಲಸಕ್ಕೆ ಸಹಾಯ ಮಾಡುವ ಅಥವಾ ವಿರೋಧಿಸುವ ಮುಂಚೆ ತಮ್ಮ ಪ್ರಾಣವನ್ನು ಬಲಿಕೊಟ್ಟಾದರೂ ಸರಕಾರ ಆ ಮಾರ್ಗವನ್ನು ಹಿಡಿಯದಂತೆ ಸರಕಾರದ ಮನಸ್ಸನ್ನು ಪರಿವರ್ತನೆ ಮಾಡಲು ಪ್ರಯತ್ನ ಮಾಡಬೇಕು. ನಾವು ಆ ರೀತಿ ಏನನ್ನೂ ಮಾಡಿರುವುದಿಲ್ಲ. ಅಂತಹ ಧಾರ್ಮಿಕ ಬಿಕ್ಕಟ್ಟು ಯಾವುದೂ ನಮ್ಮ ಮುಂದೆ ಇರುವುದಿಲ್ಲ. ಈ ಯುದ್ಧದಿಂದ ದೂರವಿರಲು ಅಂತಹ ಬಲವತ್ತರವಾದ ವಿಶ್ವಧರ್ಮಸಮನ್ವಿತವಾದ ಕಾರಣಗಳಿವೆ ಎಂದು ಯಾರೂ ಹೇಳುವುದಿಲ್ಲ. ಆದ್ದರಿಂದ ಸಾಮಾನ್ಯ ಪ್ರಜೆಗಳಾಗಿ, ಯುದ್ಧದ ಗುಣಾವಗುಣಗಳನ್ನು ಪ್ರಶ್ನಿಸುವುದು ನಮ್ಮ ಕೆಲಸವಲ್ಲ. ಈಗಾಗಲೆ ಯುದ್ಧ ಪ್ರಾರಂಭವಾಗಿರುವುದರಿಂದ ನಮ್ಮ ಕೈಲಾದ ಸಹಾಯವನ್ನು ಒದಗಿಸಬೇಕಾದ್ದು ನಮ್ಮ ಕೆಲಸ. ಕೊನೆಯದಾಗಿ ಬೋಅರರು ಗೆದ್ದರೆ–ಬೋಅರರು ಗೆಲ್ಲಲು ಅವಕಾಶವೂ ಇತ್ತು–ನಮ್ಮ ಸ್ಥಿತಿ ಮೊದಲಿಗಿಂತ ಕೀಳಾಗುವುದೆಂದೂ, ಬೋಅರರು ಬಲವಾಗಿ ಸೇಡು ತೀರಿಸಿಕೊಳ್ಳುವರೆಂದೂ ಹೇಳಿದರೆ ಬೋಅರರ ಧೀರೋದಾತ್ತತೆಗೂ ನಮಗೂ ಅನ್ಯಾಯ ಮಾಡಿದಂತಾಗುತ್ತದೆ. ಅಂತಹ ಪರಿಸ್ಥಿತಿಗೆ ಹೆದರಿ ಕಾಲಕಳೆಯುವುದು ಹೇಡಿತನ ಮತ್ತು ನಮ್ಮ ರಾಜಭಕ್ತಿಗೆ ಕಳಂಕ. ಯುದ್ಧದಲ್ಲಿ ಸೋಲಾದರೆ ತನ್ನ ಗತಿ

ಏನು ಎಂದು ಯಾವ ಇಂಗ್ಲಿಷನಾದರೂ ಯೋಚಿಸುವನೇನು? ಇನ್ನೇನು ಯುದ್ಧಕ್ಕೆ ಇಳಿಯಲಿರುವ ಯಾವನೇ ಮನುಷ್ಯ ತನ್ನ ಪೌರುಷ ಕಳೆದುಕೊಳ್ಳದೆ ಅಂಥ ವಾದವನ್ನು ಮುಂದೆ ಮಾಡಲಾರ."

೧೮೯೯ ರಲ್ಲಿ ನಾನು ಈ ವಾದವನ್ನು ನಮ್ಮ ಜನರೆದುರಿಗೆ ಇಟ್ಟೆ. ಈಗಲೂ ಆ ಅಭಿಪ್ರಾಯವನ್ನು ಬದಲಾಯಿಸಲು ಯಾವ ಕಾರಣವೂ ತೋರುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯದಲ್ಲಿ ನನಗೆ ಆಗ ಇದ್ದ ನಂಬಿಕೆ ಈಗಲೂ ಇದ್ದರೆ, ಸಾಮ್ರಾಜ್ಯದ ಆಶ್ರಯದಲ್ಲಿಯೇ ನಮ್ಮ ಸ್ವಾತಂತ್ರ್ಯವನ್ನು ಗಳಿಸಬಹುದೆಂದು ಆಗ ನನಗಿದ್ದ ಆಸೆ ಈಗಲೂ ಇದ್ದರೆ, ಇಂದಿಗೂ ದಕ್ಷಿಣ ಆಫ್ರಿಕದಲ್ಲಿ ಮತ್ತು ಅಂಥದೇ ಸಂದರ್ಭಗಳಲ್ಲಿ ಭಾರತದಲ್ಲಿ ಸಹ ಅದೇ ವಾದಸರಣಿಯನ್ನು ಅವಲಂಬಿಸುತ್ತಿದ್ದೆ. ದಕ್ಷಿಣ ಆಫ್ರಿಕದಲ್ಲೂ, ಅನಂತರ ಇಂಗ್ಲೆಂಡಿನಲ್ಲೂ, ಈ ವಾದಸರಣಿಯನ್ನು ದೂಷಿಸಿದ ಪ್ರಯತ್ನ ನನ್ನ ಕಿವಿಗೆ ಕೇಳಿಬಂತು. ಆದರೂ ನನ್ನ ಅಭಿಪ್ರಾಯವನ್ನು ಬದಲಾಯಿಸಲು ಕಾರಣ ತೋರಲಿಲ್ಲ. ಈಗಿನ ನನ್ನ ಅಭಿಪ್ರಾಯಗಳಿಗೂ, ಈ ಗ್ರಂಥದ ವಿಷಯಕ್ಕೂ ಯಾವ ಸಂಬಂಧವೂ ಇಲ್ಲವೆಂದು ನನಗೆ ಗೊತ್ತು, ಆದರೆ ಅದರ ವಿಷಯ ಪ್ರಸ್ತಾಪಿಸಲು ಎರಡು ಕಾರಣಗಳಿವೆ. ಆತುರದಲ್ಲಿ ಈ ಪುಸ್ತಕವನ್ನು ಓದುವವನು ಸಾವಧಾನವಾಗಿ ಮನಸ್ಸಿಟ್ಟು ಓದುತ್ತಾನೆಂದು ನಂಬಲು ನನಗೆ ಯಾವ ಆಧಾರವೂ ಇಲ್ಲ; ಅಂತಹ ವಾಚಕನು ಮೇಲ್ಕಂಡ ನನ್ನ ಅಭಿಪ್ರಾಯವನ್ನು ಈಗಿನ ನನ್ನ ಕಾರ್ಯ ನೀತಿಯೊಂದಿಗೆ ಸರಿದೂಗಿಸಲು ಪ್ರಯತ್ನಪಟ್ಟರೆ ಕಷ್ಟವಾಗುತ್ತದೆ. ಎರಡನೆಯ ದಾಗಿ ಮೇಲ್ಕಂಡ ವಾದಸರಣಿಯ ಮೂಲತತ್ವ ಸತ್ಯಾಗ್ರಹ; ಸತ್ಯವನ್ನೇ ಎತ್ತಿ ಹಿಡಿಯುವುದು. ನಾವು ಇದ್ದಂತೆ ಹೊರಗೂ ಕಾಣಿಸಿಕೊಂಡು ಅದರಂತೆಯೇ ನಡೆಯುವುದು ಧರ್ಮಾಚರಣೆಯ ಮೊದಲನೆಯ ಮೆಟ್ಟಲು. ಅಂತಹ ತಳಹದಿ ಇಲ್ಲದೆ ಧಾರ್ಮಿಕ ಜೀವನವನ್ನು ನಡೆಸುವುದು ಅಸಾಧ್ಯ.

ನಮ್ಮ ಕಥೆಯನ್ನು ಮುಂದುವರಿಸೋಣ. ಅನೇಕರು ನನ್ನ ವಾದಸರಣಿಯನ್ನು ಒಪ್ಪಿದರು. ಆ ರೀತಿ ವಾದ ಮಾಡಿದವನು ನಾನೊಬ್ಬನೇ ಇರಲಿಲ್ಲ. ಈ ಅಭಿಪ್ರಾಯವನ್ನು ಹೊರಗೆಡಹುವ ಮುಂಚೆಯೇ ಯುದ್ಧದಲ್ಲಿ ತಮ್ಮ ಕೈಲಾದ ಸಹಾಯ ಮಾಡಬೇಕೆಂದು ಕೆಲವರು ಅಭಿಪ್ರಾಯ ಪಟ್ಟಿದ್ದರು. ಯುದ್ಧದ ಚಂಡಮಾರುತ ಬೀಸುತ್ತಿರುವಾಗ ಭಾರತೀಯ ಆರ್ತಧ್ವನಿಗೆ ಕಿವಿಗೊಡುವವರು ಯಾರು ಎಂಬುದು ಈಗ ಮುಖ್ಯ ಪ್ರಶ್ನೆ ಆಯಿತು. ಈ ಸಹಕಾರ ಹಸ್ತದ ಬೆಲೆಯಾದರೂ ಏನು? ನಾವು ಯಾರೂ ಆಯುಧವನ್ನು ಮುಟ್ಟಿದವರಲ್ಲ. ರಣರಂಗದಲ್ಲಿ ಆಯುಧ ಹಿಡಿದು ಕಾದಾಡದಿರುವವರು ಮಾಡಬೇಕಾದ ಕೆಲಸಕ್ಕೂ ಪೂರ್ವಸಿದ್ಧತೆ ಅವಶ್ಯಕವಿತ್ತು. ಹೇಗೆ ನಡೆಯಬೇಕೆಂಬುದು ಸಹ ನಮಗಾರಿಗೂ ತಿಳಿದಿರಲಿಲ್ಲ. ಹೆಗಲಮೇಲೆ ಸಾಮಾನುಗಳನ್ನು ಹೊತ್ತುಕೊಂಡು ದೂರದ ಹಾದಿಗಳನ್ನು ಕ್ರಮಿಸುವುದು ಅಷ್ಟು ಸುಲಭವಾದ ಕೆಲಸವಲ್ಲ. ಬಿಳಿಯರು ನಮ್ಮನ್ನು ಕೂಲಿಗಳೆಂದು ಅಪಮಾನಗೊಳಿಸಿ ಹೀಯಾಳಿಸುತ್ತಾರೆ. ಇದೆಲ್ಲವನ್ನೂ ಸಹಿಸುವುದು ಹೇಗೆ? ನಮ್ಮ ಸೇವೆಯನ್ನು ಸಲ್ಲಿಸಲು ನಾನು ಸಿದ್ಧರಿದ್ದರೂ, ಅದನ್ನು ಸ್ವೀಕರಿಸುವಂತೆ ಸರಕಾರವನ್ನು

ಒಪ್ಪಿಸುವುದು ಹೇಗೆ? ಕೊನೆಗೆ ನಮ್ಮ ಸಹಾಯವನ್ನು ಸರಕಾರ ಅಂಗೀಕರಿಸುವಂತೆ ಸರ್ವ ಪ್ರಯತ್ನವನ್ನೂ ಮಾಡಬೇಕು; ಕೆಲಸದ ಅನುಭವದಿಂದ ಮತ್ತಷ್ಟು ಕೆಲಸ ಮಾಡಲು ಕಲಿಯಬಹುದು; ಮನವಿದ್ದಲ್ಲಿ ಸೇವೆಗೆ ದೈವಸಹಾಯವೂ ಒದಗುವುದು; ನಮಗೆ ಕೊಟ್ಟ ಕೆಲಸವನ್ನು ನಿರ್ವಹಿಸುವುದು ಹೇಗೆ ಎಂಬ ಸಲುವಾಗಿ ಯೋಚಿಸಬೇಕಾದ್ದಿಲ್ಲ; ನಮ್ಮ ಶಕ್ತಿ ಇರುವ ತನಕ ಒಳ್ಳೆಯ ತರಬೇತು ಪಡೆಯಬೇಕು; ಸೇವೆಗೆ ನಿಂತಮೇಲೆ ಮೇಲು ಕೀಳೆಂಬ ಭಾವನೆಗಳನ್ನು ಬಿಟ್ಟು, ಅಪಮಾನಿತರಾದರೂ ಸಹಿಸಿಕೊಳ್ಳಬೇಕು ಎಂದು ತೀರ್ಮಾನಿಸಿದೆವು.

ನಮ್ಮ ಸಹಾಯವನ್ನು ಅಂಗೀಕರಿಸುವಂತೆ ಮಾಡಲು ಅಸಾಧ್ಯ ತೊಂದರೆಗಳನ್ನು ಎದುರಿಸಬೇಕಾಯಿತು ಕಥೆ ಬಹಳ ಸ್ವಾರಸ್ಯವಾಗಿದ್ದರೂ ಹೇಳಲು ಇಲ್ಲಿ ಅವಕಾಶವಿಲ್ಲ. ನಮ್ಮ ಮುಖಂಡರು ಗಾಯಗೊಂಡವರಿಗೂ ಕಾಯಿಲೆಯವರಿಗೂ ಶುಶ್ರೂಷೆ ನಡೆಸುವುದರಲ್ಲಿ ಶಿಕ್ಷಣ ಪಡೆದು ದೇಹಾರೋಗ್ಯದ ಬಗ್ಗೆ ವೈದ್ಯಕೀಯ ಪ್ರಶಸ್ತಿಪತ್ರಗಳನ್ನು ಪಡೆದು ಸರಕಾರಕ್ಕೆ ಮನವಿ ಮಾಡಿಕೊಂಡರು. ಈ ಪತ್ರವೂ, ಸರಕಾರ ಯಾವ ಕೆಲಸವನ್ನು ಕೊಟ್ಟರೂ ಮಾಡಲು ಸಿದ್ಧರಿರುತ್ತೇವೆಂಬ ಭರವಸೆಯೂ ಬಹಳ ಒಳ್ಳೆಯ ಪರಿಣಾಮವನ್ನುಂಟುಮಾಡಿದುವು. ಸರಕಾರ ನಮ್ಮನ್ನು ವಂದಿಸಿ, ನಮ್ಮ ಸಹಾಯ ಬೇಕಾಗಿಲ್ಲವೆಂದು ತಿರಸ್ಕರಿಸಿತು. ಇಷ್ಟು ಹೊತ್ತಿಗೆ ಬೋಅರರು ಪ್ರವಾಹದೋಪಾದಿಯಲ್ಲಿ ಮುನ್ನುಗ್ಗುತ್ತಿದ್ದರು; ಡರ್ಬಾನ್ ಪಟ್ಟಣವನ್ನೂ ಆಕ್ರಮಿಸಬಹುದೆಂಬ ಭೀತಿ ತಲೆದೋರಿತು. ಎಲ್ಲಿ ನೋಡಿದರೂ ಗಾಯಗೊಂಡವರೂ, ಸತ್ತವರೂ ರಾಶಿರಾಶಿಯಾಗಿ ಬಿದ್ದಿದ್ದರು. ನಮ್ಮ ಸಹಕಾರವನ್ನು ಪದೇ ಪದೇ ಸರಕಾರದ ಮುಂದೆ ಇಡುತ್ತಿದ್ದೆವು. ಕೊನೆಗೆ ಭಾರತೀಯ ಚಿಕಿತ್ಸಾಪಡೆಯೊಂದರ ರಚನೆಗೆ ಅಪ್ಪಣೆ ದೊರಕಿತು. ಆಸ್ಪತ್ರೆಯಲ್ಲಿ ಕಸಗುಡಿಸುವವರಾಗಿ ಝಾಡಮಾಲಿಗಳಾಗಿ ಸಹ ಕೆಲಸ ಮಾಡಲು ಸಿದ್ದರಿರುವುದಾಗಿ ನಾವು ತಿಳಿಸಿದ್ದೆವು. ಆದ್ದರಿಂದ ಚಿಕಿತ್ಸಾಪಡೆಂಯು ಂಯೋಚನೆ ಬಹಳ ಸಂತೋಷವನ್ನುಂಟುಮಾಡಿತು. ಮೊದಲು ಸ್ವತಂತ್ರ ಮತ್ತು ವಾಯಿದೆವಿಮುಕ್ತ ಕೆಲಸಗಾರರ ಪರವಾಗಿ ನಾವು ನಮ್ಮ ಸಹಾಯವನ್ನು ನೀಡಿದೆವು. ಆದರೆ ವಾಯಿದೆ ಕೆಲಸಗಾರರಿಗೆ ಸಹ ನಮ್ಮೊಂದಿಗೆ ಸೇರಲು ಅಪ್ಪಣೆ ಕೊಡುವುದು ಒಳ್ಳೆಯದೆಂದು ತಿಳಿಸಿದ್ದೆವು. ಸರಕಾರಕ್ಕೆ ಆದಷ್ಟು ಜನರ ಸಹಾಯ ಆಗ ಅಗತ್ಯವಿದ್ದ ಕಾರಣ, ವಾಯಿದೆ ಕೆಲಸಗಾರರು ಸ್ವಯಂ ಸೇವಕರಾಗಿ ಬರುವುದಾದರೆ ಅವರಿಗೆ ಅವಕಾಶ ಕೊಡಬೇಕೆಂದು ಸರಕಾರ ಬಂಡವಾಳಗಾರರನ್ನು ಕೇಳಿತು. ಈ ರೀತಿ ಒಂದು ಸಾವಿರದ ಒಂದು ನೂರು ಜನ ಭಾರತೀಯರ ದೊಡ್ಡ ಸುಸಜ್ಜಿತ ಚಿಕಿತ್ಸಾ ಪಡೆ ಡರ್ಬಾನಿನಿಂದ ಯುದ್ಧ ರಂಗಕ್ಕೆ ಹೊರಟಿತು. ಹೊರಡುವಾಗ ಎಸ್ಕಾಮ್ ಅವರ ಅಭಿನಂದನೆಗಳೂ ಆಶೀರ್ವಾದವೂ ನಮಗೆ ದೊರಕಿದವು. ಅವರ ಹೆಸರು ವಾಚಕರಿಗೆ ಆಗಲೇ ಪರಿಚಯವಾಗಿದೆ ಆಗ ಅವರು ನೇಟಾಲಿನಲ್ಲಿ ಯೂರೋಪಿಯನ್ ಸ್ವಯಂಸೇವಕ ದಳದ ನಾಯಕರಾಗಿದ್ದರು.

ಇಂಗ್ಲಿಷ್ ಪತ್ರಿಕಾಕರ್ತರಿಗೆ ಇದೆಲ್ಲ ಬಹಳ ವಿಸ್ಮಯವನ್ನುಂಟು ಮಾಡಿತು. ಭಾರತೀಯರು. ಯುದ್ಧದಲ್ಲಿ ಯಾವ ಭಾಗವನ್ನೂ ವಹಿಸುವುದಿಲ್ಲವೆಂದು ಎಲ್ಲರ

ಭಾವನೆಯಾಗಿತ್ತು. ಒಬ್ಬ ಇಂಗ್ಲಿಷ್ ಕವಿ ಒಂದು ಇಂಗ್ಲಿಷ್ ಪತ್ರಿಕೆಯಲ್ಲಿ ಭಾರತೀಯರನ್ನು ಹೊಗಳುತ್ತ "ಏನೆಂದರೂ ಸಾಮ್ರಾಜ್ಯದ ಮಕ್ಕಳು ನಾವು" ಎಂದು ಒಂದು ಕವನವನ್ನು ಸಹ ಬರೆದನು.

ನಮ್ಮ ಪಡೆಯಲ್ಲಿ ಸ್ವತಂತ್ರ ಭಾರತೀಯರು ಸೇರಿಸಿದ ಮುನ್ನೂರು ನಾನೂರು ಜನ ವಾಯಿದೆವಿಮುಕ್ತ ಕೆಲಸಗಾರರಿದ್ದರು. ಇವರಲ್ಲಿ ಮೂವತ್ತೇಳು ಜನರನ್ನು,- ಅವರ ಹೆಸರಿನಲ್ಲಿ ಸರಕಾರಕ್ಕೆ ನಮ್ಮ ಮನವಿ ಕಳುಹಿಸಿದ್ದುದರಿಂದಲೂ ಮತ್ತು ಅವರು ಅನೇಕರನ್ನು ನಮ್ಮ ಪಡೆಗೆ ತಂದು ಸೇರಿಸಿದ್ದುದರಿಂದಲೂ ಮುಖಂಡರನ್ನಾಗಿ ಕಾಣುತ್ತಿದ್ದೆವು. ಈ ಮುಖಂಡರುಗಳಲ್ಲಿ ನ್ಯಾಯವಾದಿಗಳೂ ಗುಮಾಸ್ತರುಗಳೂ ಇದ್ದರು. ಉಳಿದವರು ಗಾರೆ ಕೆಲಸದವರು, ಬಡಗಿಯವರು ಅಥವಾ ಸಾಧಾರಣ ಕೂಲಿಗಳು. ಹಿಂದೂಗಳೂ, ಮುಸಲ್ಮಾನರು, ಮದ್ರಾಸಿಗಳು ಮತ್ತು ಉತ್ತರ ಹಿಂದೂಸ್ಥಾನದವರು, ಎಲ್ಲ ಪಂಗಡ ಜಾತಿಗಳವರೂ ಆ ಪಡೆಯಲ್ಲಿ ಇದ್ದರು. ಅದರಲ್ಲಿ ವರ್ತಕರು ಯಾರೂ ಇರಲಿಲ್ಲ; ಆದರೆ ಅವರು ಬೇಕಾದಷ್ಟು ಧನಸಹಾಯ ಮಾಡಿದ್ದರು. ಸೈನ್ಯದ ಇಲಾಖೆಯಿಂದ ಬರುತ್ತಿದ್ದ ಸರಬರಾಯಿ ನಮ್ಮ ಪಡೆಗೆ ಸಾಕಾಗುತ್ತಿರಲಿಲ್ಲ. ಒಂದು ವೇಳೆ ಅಷ್ಟರಲ್ಲೇ ತೃಪ್ತಿಗೊಳ್ಳಬಹುದಾಗಿದ್ದರೂ ಆ ಕಠಿಣ ಪ್ರಸಂಗದಲ್ಲಿ ಹೊರಗಿನಿಂದ ಏನು ಸರಬರಾಯಿ ಬಂದಿದ್ದರೂ ಅನುಕೂಲವಾಗುತ್ತಿತ್ತು. ವರ್ತಕರು ಕೆಲವು ಅವಶ್ಯಕವಾದ ಸಾಮಾನುಗಳನ್ನು ಒದಗಿಸುವುದಾಗಿ ಒಪ್ಪಿದ್ದರು. ಅದರಂತೆ ನಮ್ಮ ಶುಶ್ರೂಷೆಯಲ್ಲಿದ್ದ ಗಾಯಗೊಂಡವರಿಗೆ ಸಿಹಿ ತಿಂಡಿಗಳು, ಸಿಗರೇಟುಗಳು ಮುಂತಾದ ಸಾಮಾನುಗಳನ್ನು ತಂದು ಕೊಟ್ಟು ಸಂತೋಷಗೊಳಿಸುತ್ತಿದ್ದರು. ಪಟ್ಟಣಗಳ ಹತ್ತಿರ ನಾವು ಬಿಡಾರ ಮಾಡಿದಾಗ ಅಲ್ಲಿಯ ವರ್ತಕರು ನಮ್ಮ ಆತಿಥ್ಯಕ್ಕೆ ತುಂಬ ಸಹಾಯ ಮಾಡುತ್ತಿದ್ದರು.

ನಮ್ಮ ಪಡೆಗೆ ಸೇರಿದ ವಾಯಿದೆ ಕೂಲಿಗಾರರ ಮೇಲೆ ಆಯಾ ಕಾರ್ಖಾನೆಗಳಿಂದ ಇಂಗ್ಲಿಷ್ ಓವರ್ಸಿಯರುಗಳು ಮೇಲ್ವಿಚಾರಣೆಗೆ ಬಂದಿದ್ದರು. ಆದರೆ ಅವರ ಕೆಲಸವೂ ನಮ್ಮ ಕೆಲಸವೂ ಒಂದೇ ಆಗಿತ್ತು. ನಾವೆಲ್ಲರೂ ಒಟ್ಟಿಗೆ ವಾಸ ಮಾಡಬೇಕಾಗಿದ್ದುದು ಅವರಿಗೂ ಬಹಳ ಪ್ರಿಯವಾಗಿತ್ತು; ಆ ಪಡೆಯ ಆಡಳಿತವೆಲ್ಲವೂ ಸ್ವಾಭಾವಿಕವಾಗಿ ನಮ್ಮ ಕೈಯಲ್ಲೇ ಇತ್ತು. ಈ ರೀತಿ ಒಟ್ಟು ಪಡೆ ಭಾರತೀಯ ಪಡೆ ಎಂದು ಹೆಸರಾಯಿತು, ಮತ್ತು ಅದು ಮಾಡಿದ ಸೇವೆಯಿಂದ ಭಾರತೀಯರಿಗೆ ಪ್ರಾಶಸ್ತ್ಯ ದೊರಕಿತು. ವಾಯಿದೆ ಕೆಲಸಗಾರರನ್ನು ಆ ಪಡೆಗೆ ಸೇರಿಸಿದ ಖ್ಯಾತಿ ನ್ಯಾಯವಾಗಿ ಭಾರತೀಯರದಲ್ಲ. ಅದು ಪ್ಲಾಂಟರುಗಳಿಗೇ ನ್ಯಾಯವಾಗಿ ಸಲ್ಲಬೇಕು. ಆದರೆ ಆ ಚಿಕಿತ್ಸಾಪಡೆಯ ನಿರ್ಮಾಣವಾದ ಮೇಲೆ ಅದರ ಅತ್ಯುತ್ತಮ ವ್ಯವಸ್ಥೆಗೆ ಸಲ್ಲಬೇಕಾದ ಖ್ಯಾತಿ ಎಲ್ಲವೂ ಸ್ವತಂತ್ರ ಭಾರತೀಯರಿಗೆ, ಅಂದರೆ ಭಾರತೀಯ ಜನಾಂಗಕ್ಕೆ ಸಲ್ಲಬೇಕಾದ್ದೆಂಬುದು ನಿಸ್ಸಂದೇಹವಾದುದು. ಇದನ್ನು ಜನರಲ್ ಬುಲ್ಲರ್ ರವರು ತಮ್ಮ ಯುದ್ಧ ವರದಿಗಳಲ್ಲಿ ಒಪ್ಪಿರುತ್ತಾರೆ.

ನಮಗೆ ಪ್ರಥಮ ಚಿಕಿತ್ಸೆಯಲ್ಲಿ ಶಿಕ್ಷಣ ಕೊಟ್ಟ ಡಾಕ್ಟರ್ ಬೂತ್ ರವರು ವೈದ್ಯಾಧಿಕಾರಿಗಳಾಗಿ ನಮ್ಮ ಪಡೆಯನ್ನು ಸೇರಿದರು. ಅವರು ಬಹಳ ನಿಷ್ಠರಾದ ಕ್ರೈಸ್ತ

ಮತಬೋಧಕರು. ಅವರ ಕೆಲಸ ಸಾಮಾನ್ಯವಾಗಿ ಭಾರತೀಯ ಕ್ರೈಸ್ತರೊಂದಿಗೆ ಇರುತ್ತಿದ್ದರೂ ಅವರು ಎಲ್ಲ ಜಾತಿಯ ಭಾರತೀಯರೊಡನೆ ಭೇದಭಾವವಿಲ್ಲದೆ ಸೇರುತ್ತಿದ್ದರು. ಮೇಲೆ ಹೇಳಿದ ಮೂವತ್ತೇಳು ಜನರಲ್ಲಿ ಅನೇಕ ಮುಖಂಡರು ಅವರ ಕೈಕೆಳಗೆ ಶಿಕ್ಷಣ ಪಡೆದಿದ್ದರು.

ಭಾರತೀಯರ ಪಡೆಯಂತೆ ಯೂರೋಪಿಯನ್ ಚಿಕಿತ್ಸಾ ಪಡೆಯೂ ಒಂದಿತ್ತು. ಎರಡು ಪಡೆಯವರೂ ಒಂದೇ ಸ್ಥಳದಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದೆವು.

ನಮ್ಮ ಮನವಿಪತ್ರದಲ್ಲಿ ನಾವು ಸರಕಾರಕ್ಕೆ ಯಾವ ಷರತ್ತನ್ನೂ ವಿಧಿಸಿರಲಿಲ್ಲ. ಆದರೆ ಸರಕಾರದ ಆಜ್ಞಾ ಪತ್ರದಲ್ಲಿ ನಾವು ಯುದ್ಧರಂಗದ ಸಮೀಪದಲ್ಲಿ ಕೆಲಸ ಮಾಡಬೇಕಾದ್ದಿಲ್ಲವೆಂಬ ವಿನಾಯಿತಿ ಇತ್ತು. ಅಂದರೆ, ಸೈನ್ಯದ ಅಂಗವಾದ ಕಾಯಂ ಚಿಕಿತ್ಸಾ ಪಡೆಯವರು ಮಾತ್ರ ಯುದ್ಧರಂಗದಲ್ಲಿ ಗಾಯಗೊಂಡವರನ್ನು ತಂದು ಸೈನ್ಯದ ಹಿಂದೆ ಯುದ್ಧ ರಂಗದಿಂದ ದೂರ ಬಿಟ್ಟು ಬರಬೇಕಾಗಿತ್ತು. ಕಾಯಂ ಚಿಕಿತ್ಸಾ ಪಡೆಯಿಂದ ನಿರ್ವಹಿಸಲು ಸಾಧ್ಯವಾಗದಷ್ಟು ಜನರು ಲೇಡಿ ಸ್ಮಿತ್ ಪಟ್ಟಣದಲ್ಲಿ ಗಾಯಗೊಂಡಿದ್ದಾರೆಂದು ತಿಳಿದೊಡನೆ, ಅಲ್ಲಿನ ಜನರಲ್ ವೈಟ್ ರವರಿಗೆ ಕೂಡಲೆ ಸಹಾಯ ಒದಗಿಸಬೇಕೆಂದು ಜನರಲ್ ಬುಲ್ಲರ್ ರವರು ಬಹಳ ಪ್ರಯತ್ನದಿಂದ ಯೂರೋಪಿಯನರ ತಾತ್ಕಾಲಿಕ ಚಿಕಿತ್ಸಾ ಪಡೆಯನ್ನೂ ಭಾರತೀಯರ ಪಡೆಯನ್ನೂ ಸೇರಿಸಿದರು. ಯುದ್ಧ ನಡೆಯುತ್ತಿದ್ದ ಒಳಪ್ರದೇಶದಲ್ಲಿ ಯುದ್ಧರಂಗಕ್ಕೂ ಗಾಯಗೊಂಡವರ ಆಸ್ಪತ್ರೆಗೂ ಮಧ್ಯೆ ತಯಾರಾದ ರಸ್ತೆಗಳು ಇರಲಿಲ್ಲ. ಆದ್ದರಿಂದ ಸಾಮಾನ್ಯ ವಾಹನಗಳ ಮೂಲಕ ಗಾಯಗೊಂಡವರನ್ನು ಸಾಗಿಸುವುದು ಅಸಾಧ್ಯವಾಗಿತ್ತು. ಗಾಯಗೊಂಡವರಿಗೆ ಚಿಕಿತ್ಸೆ ಮಾಡುವ ಮೂಲ ಆಸ್ಪತ್ರೆ ಯಾವಾಗಲೂ ಯುದ್ಧ ರಂಗದಿಂದ ಏಳರಿಂದ ಇಪ್ಪತ್ತೈದು ಮೈಲಿಗಳ ದೂರದಲ್ಲಿ, ಸಾಮಾನ್ಯವಾಗಿ ಒಂದು ರೈಲ್ವೆ ಸ್ಟೇಷನ್ ಬಳಿ ಇರುತ್ತಲಿತ್ತು.

ಸ್ವಲ್ಪ ಕಾಲದಲ್ಲಿಯೇ ನಮಗೆ ಕೆಲಸ ದೊರೆಯಿತು, ನಾವು ಯೋಚಿಸಿದ್ದಕ್ಕಿಂತ ಕಠಿಣವಾದ ಕೆಲಸ. ಗಾಯಗೊಂಡವರನ್ನು ಏಳು ಎಂಟು ಮೈಲಿಗಳ ದೂರ ಸಾಗಿಸುತ್ತಿದ್ದೆವು. ಮಧ್ಯೆ ದಾರಿಯಲ್ಲಿ ಔಷಧ ಕೊಡಬೇಕಾಗಿತ್ತು, ಸಂಜೆ ಐದು ಗಂಟೆಗೆ ಆಸ್ಪತ್ರೆಯನ್ನು ಸೇರಬೇಕಿತ್ತು. ಇದು ನಿಜವಾಗಿಯೂ ಕಷ್ಟವಾಗುತ್ತಿತ್ತು. ಒಂದು ಬಾರಿ ಮಾತ್ರ ನಾವು ಒಂದೇ ದಿನದಲ್ಲಿ ಇಪ್ಪತ್ತೈದು ಮೈಲಿಗಳ ದೂರ ಗಾಯಗೊಂಡವರನ್ನು ಸಾಗಿಸಬೇಕಾಯಿತು. ಅಲ್ಲದೆ ಯುದ್ಧಾರಂಭದಲ್ಲಿ ಬ್ರಿಟಿಷ್ ಸೈನ್ಯಕ್ಕೆ ಸೋಲಿನ ಮೇಲೆ ಸೋಲಾಯಿತು; ಗಾಯಗೊಂಡವರ ಸಂಖ್ಯೆಯೂ ಹೆಚ್ಚಾಗಿತ್ತು. ಆದ್ದರಿಂದ ಅಧಿಕಾರಿಗಳು ರಣಂಗದ ಹತ್ತಿರ ಬರಕೂಡದೆಂದು ಹಾಕಿದ ನಿರ್ಬಂಧವನ್ನು ಬಿಟ್ಟುಬಿಡಬೇಕಾಯಿತು. ಆದರೆ ಅಂತಹ ಸಂದರ್ಭಗಳಲ್ಲಿ ನಮ್ಮ ಒಪ್ಪಂದದಂತೆ ನಾವು ರಣರಂಗದ ಹತ್ತಿರ ಬರಬೇಕೆಂಬ ಒತ್ತಾಯವಿಲ್ಲವೆಂತಲೂ, ಅಪಾಯಕ್ಕೊಳಗಾಗಲು ನಮಗೆ ಇಷ್ಟವಿಲ್ಲದೆ ಹೋದರೆ, ಗುಂಡಿನೇಟಿನೆದುರಿನಲ್ಲಿ ಕೆಲಸ ಮಾಡಿಸಲು ಜನರಲ್ ಜುಲ್ಲರ್ ರವರಿಗೆ

ಇಷ್ಟವಿಲ್ಲವೆಂತಲೂ, ಆದರೆ ಸ್ವಂತ ಇಚ್ಛೆಯಿಂದ ಅಪಾಯಕ್ಕೊಳಗಾಗಿ ಕೆಲಸ ಮಾಡಿದರೆ ಬಹಳ ಕೃತಜ್ಞರಾಗಿರುವುದಾಗಿಯೂ ನಮಗೆ ತಿಳಿಸುತ್ತಿದ್ದರು. ಅಪಾಯಕ್ಷೇತ್ರದ ಒಳಗೆ ನುಗ್ಗಲು ನಾವು ಸದಾ ಸಿದ್ಧರಿದ್ದೆವು. ಹಿಂದೆ ನಿಲ್ಲುವುದು ನಮಗೆ ಇಷ್ಟ ಇರಲಿಲ್ಲ. ಆದ್ದರಿಂದ ಈ ಅವಕಾಶವನ್ನು ನಾವು ಆದರದಿಂದ ಸ್ವಾಗತಿಸಿದೆವು. ಆದರೆ ನಮ್ಮಲ್ಲಿ ಯಾರಿಗೂ ಗುಂಡಿನ ಏಟಾಗಲಿ ಇನ್ನಾವ ಗಾಯವಾಗಲಿ ಆಗಲಿಲ್ಲ.

ನಮ್ಮ ಪಡೆಗೆ ಅನೇಕ ಸಂತೋಷಕರವಾದ ಅನುಭವಗಳು ದೊರೆತವು. ಅವುಗಳನ್ನು ಹೇಳಲು ಇಲ್ಲಿ ಅವಕಾಶವಿಲ್ಲ. ಆದರೆ ನಮ್ಮ ಪಡೆಯಲ್ಲಿ ಕೊಳಕು ಜನರೆಂದು ಹೆಸರಾದ ವಾಯಿದೆ ಕೂಲಿಗಳಿದ್ದರೂ ಅನೇಕ ವೇಳೆ ನಾವು ಯೂರೋಪಿಯನರೇ ಇರುವ ಹಂಗಾಮಿ ಚಿಕಿತ್ಸಾ ಪಡೆಯ ಮತ್ತು ಯೂರೋಪಿಯನ್ ಸೈನಿಕರ ಸಂಗಡ ಸೇರುವ ಸನ್ನಿವೇಶಗಳು ಒದಗುತ್ತಿದ್ದುವು. ಯೂರೋಪಿಯನರು ನಮ್ಮನ್ನು ಅಗೌರವದಿಂದಾಗಲಿ, ತಿರಸ್ಕಾರದಿಂದಾಗಲಿ ಕಂಡುದು ನಮ್ಮಲ್ಲಿ ಯಾರಿಗೂ ಅನುಭವಕ್ಕೆ ಬರಲಿಲ್ಲ. ಹಂಗಾಮಿ ಪಡೆಯಲ್ಲಿದ್ದವರೆಲ್ಲ ಯುದ್ಧಕ್ಕೆ ಮುಂಚೆ ಭಾರತೀಯರ ವಿರುದ್ಧ ಚಳವಳಿ ನಡೆಸಿದ ದಕ್ಷಿಣ ಆಫ್ರಿಕದ ಯೂರೋಪಿಯನರು. ಆದರೆ ಭಾರತೀಯರು ತಮ್ಮ ತಪ್ಪೆಲ್ಲವನ್ನೂ ಮರೆತು, ತಮ್ಮ ಆಪತ್ಕಾಲದಲ್ಲಿ ಸಹಾಯಕ್ಕೆ ಬಂದಿದ್ದರೆಂದು ಆಗಿನ ಮಟ್ಟಿಗಾದರೂ ಅವರ ಹೃದಯ ಪರಿವರ್ತನೆಯಾಯಿತು. ನಮ್ಮ ಕೆಲಸದ ವಿಷಯವನ್ನು ಜನರಲ್ ಬುಲ್ಲರ್ ರವರು ತಮ್ಮ ವರದಿಗಳಲ್ಲಿ ಮೆಚ್ಚಿದ್ದರು ಎಂಬುದನ್ನು ತಿಳಿಸಿದ್ದೇನೆ. ಮೂವತ್ತೇಳು ಜನ ನಾಯಕರಿಗೂ ಯುದ್ಧದ ಬಹುಮಾನಗಳು ಬಂದುವು. ಸುಮಾರು ಎರಡು ತಿಂಗಳ ಒಳಗೆ ಲೇಡಿಸ್ಮಿತ್ ಪಟ್ಟಣದ ಸಹಾಯಾರ್ಥವಾಗಿ ಜನರಲ್ ಬುಲ್ಲರ್ ಕೈಗೊಂಡ ಕೆಲಸಗಳು ಮುಗಿದ ಒಡನೆ ನಮ್ಮ ಪಡೆಯನ್ನೂ ಯೂರೋಪಿಯನ್ ಪಡೆಯನ್ನೂ ವಿಸರ್ಜಿಸಲಾಗಿತ್ತು. ಇದಾದ ಮೇಲೆ ಯುದ್ಧ ಇನ್ನೂ ಬಹಳ ಕಾಲ ನಡೆಯಿತು. ಪುನಃ ಚಿಕಿತ್ಸಾಪಡೆ ಸೇರಲು ನಾವು ಯಾವಾಗಲೂ ಸಿದ್ಧರಿದ್ದೆವು. ನಮ್ಮ ಪಡೆಯನ್ನು ರದ್ದುಗೊಳಿಸಿದ ನಿರೂಪದಲ್ಲಿ ಪುನಃ ಯುದ್ಧ ಉಲ್ಬಣವಾಗಿ, ಅವಶ್ಯವೆಂದು ತೋರಿದರೆ ಪುನಃ ನಮ್ಮ ಸಹಾಯ ಕೋರುವುದಾಗಿ ಸರಕಾರದವರು ತಿಳಿಸಿದ್ದರು.

ಯುದ್ಧಕ್ಕೆ ದಕ್ಷಿಣ ಆಫ್ರಿಕದಲ್ಲಿನ ಭಾರತೀಯರು ಮಾಡಿದ ಈ ಸಹಾಯ ಅತ್ಯಲ್ಪವಾದುದು. ಯಾರೂ ಪ್ರಾಣವನ್ನು ಕಳೆದುಕೊಳ್ಳಲಿಲ್ಲ. ಆದರೂ ಸಹಾಯ ಮಾಡಬೇಕೆಂಬ ನಿಜವಾದ ಅಭಿಲಾಷೆ ಇದ್ದರೆ ಎದುರು ಪಕ್ಷದ ಮೇಲೆ ಪರಿಣಾಮ ಆಗುವುದು ಖಂಡಿತ. ಆ ಸಹಾಯ ಅನಿರೀಕ್ಷಿತವಾದರೆ ಅದರ ಬೆಲೆ ಇಮ್ಮಡಿಯಾಗುತ್ತದೆ. ಭಾರತೀಯರ ಮೇಲಿನ ಈ ಒಳ್ಳೆಯ ಅಭಿಪ್ರಾಯ ಯುದ್ಧ ಮುಗಿಯುವವರೆಗೂ ಇತ್ತು.

ಈ ಪ್ರಕರಣವನ್ನು ಮುಗಿಸುವ ಮುಂಚೆ ಒಂದು ಮುಖ್ಯ ವಿಷಯವನ್ನು ತಿಳಿಸಬೇಕೆಂದಿದ್ದೇನೆ. ಬೋಅರರು ಲೇಡಿಸ್ಮಿತ್ ಮುತ್ತಿದಾಗ ಇಂಗ್ಲಿಷ್ ಜನರಲ್ಲದೆ ಅಲ್ಲಿ ಕೆಲವು ಭಾರತೀಯರೂ ಇದ್ದರು. ಇವರಲ್ಲಿ ಕೆಲವರು ವರ್ತಕರು, ಇನ್ನು

ಕೆಲವರು ವಾಯಿದೆ ಕೂಲಿಗಳು. ರೇಲ್ವೆ ಕಂಪೆನಿಗಳಲ್ಲಿ ಯೂರೋಪಿಯನರ ಚಾಕರರಾಗಿ ಕೆಲಸ ಮಾಡುತ್ತಿದ್ದವರು ಕೆಲವರು. ಅವರಲ್ಲಿ ಪ್ರಭುಸಿಂಹ ಎಂಬಾತನೊಬ್ಬ. ಲೇಡಿಸ್ಮಿತ್‌ನ ಅಧಿಕಾರಿ ಊರಿನ ಪ್ರತಿಯೊಬ್ಬ ನಿವಾಸಿಗೂ ಒಂದೊಂದು ಕೆಲಸವನ್ನು ನೇಮಿಸಿದನು. ಪ್ರಭುಸಿಂಹ ಕೂಲಿಯಾದ್ದರಿಂದ ಬಹಳ ಕಷ್ಟದ ಜವಾಬ್ದಾರಿ ಕೆಲಸ ಅವನ ಪಾಲಿಗೆ ಬಿತ್ತು. ಬೋಅರರು ಲೇಡಿ ಸ್ಮಿತ್ ಹತ್ತಿರ ಒಂದು ಗುಡ್ಡದ ಮೇಲೆ ಒಂದು ಫಿರಂಗಿಯನ್ನು ಇಟ್ಟಿದ್ದರು.

ಅದರ ಹಾವಳಿಯಿಂದ ಅನೇಕ ಮನೆಗಳು ನಾಶವಾದುವಲ್ಲದೆ ಕೆಲವರ ಪ್ರಾಣವೂ ಹೋಯಿತು. ಫಿರಂಗಿಯಿಂದ 'ಷೆಲ್' ಹಾರಿಸಿದ ಮೇಲೆ ಅದು ದೂರದ ಗುರಿಯನ್ನು ಮುಟ್ಟಲು ಒಂದೆರಡು ನಿಮಿಷಗಳಾದರೂ ಬೇಕಿತ್ತು. ಕೋಟೆಯ ಒಳಗೆ ಇದುವರೆಗೆ ಅಷ್ಟು ಕಾಲಾವಕಾಶ ದೊರೆತರೂ ಆ ಷೆಲ್ ಪಟ್ಟಣದೊಳಗೆ ಬೀಳುವ ಮುಂಚೆ ಅಡಗಿಕೊಂಡು ಏಟು ತಪ್ಪಿಸಿಕೊಳ್ಳಬಹುದಾಗಿತ್ತು. ಪ್ರಭುಸಿಂಹನು ಆ ಫಿರಂಗಿ ಕೆಲಸ ಮಾಡುತ್ತಿದ್ದಾಗಲೆಲ್ಲ ಗುಡ್ಡದ ಕಡೆಗೇ ಕಣ್ಣಿಟ್ಟು ಒಂದು ಮರದ ಮೇಲೆ ಕುಳಿತು. ಗುಂಡು ಹಾರಿಸಿದ ಬೆಂಕಿ ಕಂಡೊಡನೆ ಒಂದು ಗಂಟೆಯನ್ನು ಬಾರಿಸಬೇಕಾಗಿತ್ತು. ಗಂಟೆಯ ಶಬ್ಧ ಕೇಳಿದ ಒಡನೆ ಲೇಡಿಸ್ಮಿತ್ ನಿವಾಸಿಗಳು ಮರೆಯಲ್ಲಿ ಅವಿತು ಫಿರಂಗಿಯ ಗುಂಡಿನೇಟಿನಿಂದ ಪಾರಾಗುತ್ತಿದ್ದರು. ಈ ರೀತಿ ಆ ಗುಂಡಿನ ವಿಪತ್ತು ಗೊತ್ತಾಗುತ್ತಿತ್ತು.

ಪ್ರಭುಸಿಂಹನು ಮಾಡಿದ ಈ ಅಮೂಲ್ಯ ಸೇವೆಗೆ ಲೇಡಿಸ್ಮಿತ್‌ನ ಅಧಿಕಾರಿ ವಂದನೆಗಳನ್ನು ಅರ್ಪಿಸುತ್ತ, ಒಂದು ಸಲವೂ ಗಂಟೆ ಬಾರಿಸಲು ತಪ್ಪದೆ ಬಹಳ ನಿಷ್ಠೆಯಿಂದ ಕೆಲಸ ಮಾಡಿದನೆಂದು ಕೊಂಡಾಡಿದನು. ಪ್ರಭುಸಿಂಹನ ಪ್ರಾಣಯಾವಾಗಲೂ ಅಪಾಯದಲ್ಲಿತ್ತು. ಆತನ ಕೀರ್ತಿ ನೇಟಾಲನ್ನು ಮುಟ್ಟಿತು. ಆಗ ಹಿಂದೂಸ್ಥಾನದ ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್ನರ ಕಿವಿಯನ್ನೂ ಮುಟ್ಟಿತು. ಪ್ರಭುಸಿಂಹನಿಗೆ ಒಂದು ಕಾಶ್ಮೀರ ಶಾಲನ್ನು; ಕಳುಹಿಸಿ ಅದಷ್ಟು ಬಹಿರಂಗವಾಗಿ ಆತನಿಗೆ ಕೊಟ್ಟು ಸನ್ಮಾನಿಸಬೇಕೆಂದು ನೇಟಾಲ್ ಸರಕಾರಕ್ಕೆ ಬರೆದರು. ಈ ಕೆಲಸವನ್ನು ಡರ್ಬಾನಿನ ಮೇಯರ್‌ರು ಅಲ್ಲಿನ ನಗರಭವನದಲ್ಲಿ ದೊಡ್ಡ ಬಹಿರಂಗಸಭೆ ಸೇರಿಸಿ ನೆರವೇರಿಸಿದರು. ಈ ಸಂಗತಿಯಿಂದ ನಾವು ಎರಡು ವಿಷಯಗಳನ್ನು ಕಲಿಯಬೇಕಾಗಿದೆ. ಮನುಷ್ಯನು ಎಷ್ಟೇ ಬಡವನಾಗಿ ಅನಾಮಧೇಯನಾಗಿದ್ದರೂ ಯಾರನ್ನೂ ಕಡೆಗಣಿಸಬಾರದೆಂದು ಮೊದಲನೆಯದು. ಮನುಷ್ಯನು ಎಷ್ಟೇ ಹಿಂದೇಟು ಹಾಕುತ್ತಿದ್ದರೂ, ಪರೀಕ್ಷಾ ಸಮಯ ಬಂದರೆ ಹೇಡಿಯೂ ಹುಲಿಯಾಗಬಲ್ಲನೆಂಬುದು ಎರಡನೆಯದು.

೧೦ ಯುದ್ಧ ಮುಗಿದ ಮೇಲೆ

ಯುದ್ಧ ಅತ್ಯಂತ ವಿಷಮಾಸ್ಥೆಗೆ ಬಂದುದು ೧೯೦೦ ರಲ್ಲಿ. ಲೇಡಿಸ್ಮಿತ್, ಕಿಂಬರ್ಲಿ, ಮ್ಯಾಫೆಕಿಂಗ್ ಪಟ್ಟಣಗಳನ್ನು ಮುತ್ತಿಗೆಯಿಂದ ಪಾರುಗಾಣಿಸಲಾಗಿತ್ತು. ಪಾರ್ಡಿಬರ್ಗ್‌ನಲ್ಲಿ ಜನರಲ್ ಕ್ರಾನ್ಜಿಯವರು ಶರಣಾಗತರಾಧರು. ಬೋಅರರು ಆಕ್ರಮಿಸಿದ್ದ ಬ್ರಿಟಿಷ್

ಪ್ರಾಂತಗಳ ಅನೇಕ ಭಾಗಗಳನ್ನು ಪುನಃ ವಶಪಡಿಸಿಕೊಳ್ಳಲಾಗಿತ್ತು. ಲಾರ್ಡ್ ಕಿಚನರ್‌ನು ಟ್ರಾನ್ಸ್‌ವಾಲಿನಲ್ಲೂ ಆರೆಂಜ್ ಫ್ರೀ ಸ್ಟೇಟ್‌ನಲ್ಲೂ ವಿಜಯಿಯಾಗಿದ್ದನು. ಅಲ್ಲಲ್ಲಿ ಗೆರಿಲ್ಲ ಯುದ್ಧ ಮಾತ್ರ ನಡೆಯುತ್ತಿತ್ತು.

ಈಗ ದಕ್ಷಿಣ ಆಫ್ರಿಕದಲ್ಲಿ ನನ್ನ ಕೆಲಸವು ಮುಗಿಯಿತೆಂದುಕೊಂಡೆ. ಮೊದಲು ಯೋಚಿಸಿದ ಒಂದು ತಿಂಗಳಿಗೆ ಬದಲು ಆರು ವರ್ಷ ಅಲ್ಲಿ ನಿಂತೆ. ನಮ್ಮ ಮುಂದಿನ ಕೆಲಸದ ರೂಪರೇಖೆ ನಿಶ್ಚಿತವಾಗಿತ್ತು. ಆದರೂ ನಮ್ಮ ಜನರ ಮನಃಪೂರ್ವಕ ಒಪ್ಪಿಗೆ ಇಲ್ಲದೆ ನಾನು ದಕ್ಷಿಣ ಆಫ್ರಿಕ ಬಿಟ್ಟು ಹೊರಡುವಂತೆ ಇರಲಿಲ್ಲ. ಭಾರತದಲ್ಲಿ ಸಾರ್ವಜನಿಕ ಕಾರ್ಯವನ್ನು ಕೈಗೊಳ್ಳುವುದಾಗಿ ನಾನು ನಮ್ಮ ಜನರಿಗೆ ತಿಳಿಸಿದೆ. ಸ್ವಾರ್ಥಕ್ಕಿಂತ ಸೇವೆಯ ಮಹತ್ವ ಏನೆಂಬುದನ್ನು ದಕ್ಷಿಣ ಆಫ್ರಿಕದಲ್ಲಿ ಅರಿತುಕೊಂಡು ಅಂತಹ ಸೇವೆಯನ್ನು ಸಲ್ಲಿಸಲು ಆತುರನಾಗಿದ್ದೆ. ಮನ್ಸುಖಲಾಲ್ ನಾಜರ್ ಅವರು ಮತ್ತು ಖಾನ್ ರವರು ಅಲ್ಲಿದ್ದರು. ದಕ್ಷಿಣ ಆಫ್ರಿಕದಲ್ಲಿಯೇ ಹುಟ್ಟಿ ಬೆಳೆದ ಭಾರತೀಯ ತರುಣರು ಕೆಲವರು ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಪದವಿಯನ್ನು ಪಡೆದು ಹಿಂದಿರುಗಿದ್ದರು. ಈ ಸಂದರ್ಭದಲ್ಲಿ ನಾನು ಭಾರತಕ್ಕೆ ಹಿಂದಿರುಗುವುದರಲ್ಲಿ ನಷ್ಟವೇನೂ ಇರಲಿಲ್ಲ. ಈ ಎಲ್ಲ ಕಾರಣಗಳನ್ನು ನಮ್ಮ ಜನರಿಗೆ ತಿಳಿಸಿದ ಮೇಲೆ, ದಕ್ಷಿಣ ಆಫ್ರಿಕದಲ್ಲಿ ನಾನು ಸ್ವತಃ ಇರಬೇಕಾದ ಪ್ರಸಂಗಗಳು ಅನಿರೀಕ್ಷಿತವಾಗಿ ಒದಗಿದರೆ, ನನ್ನನ್ನು ಯಾವಾಗ ಬೇಕಾದರೂ ಹಿಂದಕ್ಕೆ ಕರೆಸಿಕೊಳ್ಳಬಹುದಾಗಿಯೂ ಒಡನೆಯೇ ದಕ್ಷಿಣ ಆಫ್ರಿಕಕ್ಕೆ ಹಿಂದಿರುಗುವುದಾಗಿಯೂ ಭರವಸೆ ಕೊಟ್ಟ ಮೇಲೆ ಭಾರತಕ್ಕೆ ಹಿಂದಿರುಗಲು ನನಗೆ ಅಪ್ಪಣೆ ದೊರೆಯಿತು. ಆಗ ನನ್ನ ಪ್ರಯಾಣದ ವೆಚ್ಚವನ್ನೂ ವಹಿಸಿಕೊಳ್ಳುವುದಾಗಿ ಒಪ್ಪಿದರು. ಈ ವ್ಯವಸ್ಥೆಗೆ ಒಪ್ಪಿ ನಾನು ಭಾರತಕ್ಕೆ ಹಿಂದಿರುಗಿದೆ.

ಮುಖ್ಯವಾಗಿ ಗೋಖಲೆಯವರ ಬುದ್ಧಿವಾದ ಮತ್ತು ಮಾರ್ಗದರ್ಶಿತ್ವಗಳಲ್ಲಿ ಸಾರ್ವಜನಿಕ ಸೇವೆಯನ್ನು ಕೈಕೊಳ್ಳಬೇಕೆಂದೂ ಎರಡನೆಯದಾಗಿ ಸಾರ್ವಜನಿಕ ಕೆಲಸದ ಜೊತೆಯಲ್ಲಿ ಜೀವನೋಪಾಯವನ್ನು ದೊರಕಿಸಿಕೊಳ್ಳಬೇಕೆಂದೂ ಬೋಂಬಾಯಿಯಲ್ಲಿ ವಕೀಲಿ ವೃತ್ತಿ ಜೀವನವನ್ನು ಆರಂಭಿಸಿದೆ. ಸ್ವಲ್ಪ ಕೆಲಸವೂ ದೊರೆಯಿತು. ದಕ್ಷಿಣ ಆಫ್ರಿಕದಲ್ಲಿ ನನಗೆ ಆದ ಪರಿಚಯದಿಂದ, ಅಲ್ಲಿಂದ ಹಿಂದಿರುಗಿದ ಜನರೇ ನನಗೆ ಕೆಲಸ ಕೊಡುತ್ತಿದ್ದರು. ಅಷ್ಟೇ ನನ್ನ ಜೀವನಕ್ಕೆ ಸಾಕಾಗಿತ್ತು. ಆದರೆ ಈ ಜನ್ಮದಲ್ಲಿ ನನಗೆ ಶಾಂತಿ ದೊರೆಯುವಂತೆ ಇರಲಿಲ್ಲ. ಬೊಂಬಾಯಿಯಲ್ಲಿರುತ್ತ ಮೂರು ನಾಲ್ಕು ತಿಂಗಳಾಗುವ ಮುಂಚೆಯೆ ಆಫ್ರಿಕದಲ್ಲಿ ಪರಿಸ್ಥಿತಿ ಬಹಳ ಕ್ರೂರವಾಗಿದೆ ಎಂದೂ ಸಧ್ಯದಲ್ಲಿಯೇ ಚೇಂಬರ್ಲಿನ್‌ರು ಬರಲಿರುವರೆಂದೂ ನಾನು ಅಲ್ಲಿ ಪ್ರತ್ಯಕ್ಷ ಇರಬೇಕಾದ್ದು ಅತ್ಯವಶ್ಯವೆಂದೂ ಕೇಬಲ್ ಬಂದಿತು. ಬೊಂಬಾಯಿಯಲ್ಲಿ ನನ್ನ ಕಚೇರಿಗೂ ಮನೆಯ ಬಾಗಿಲಿಗೂ ಬೀಗ ಹಾಕಿ ಮೊದಲು ದೊರೆತ ಹಡಗಿನಲ್ಲಿಯೇ ದಕ್ಷಿಣ ಆಫ್ರಿಕಕ್ಕೆ ಹೊರಟೆ. ಇದು ನಡೆದುದು ೧೯೦೨ನೆಯ ಕೊನೆಯ ಹೊತ್ತಿಗೆ. ೧೯೦೧ ನೆಯ ಕೊನೆಯ ಹೊತ್ತಿಗೆ ಭಾರತಕ್ಕೆ ಬಂದು, ೧೯೦೨ ನೆಯ ಮಾರ್ಚಿ ಸುಮಾರಿನಲ್ಲಿ

ಬೊಂಬಾಯಿಯಲ್ಲಿ ನನ್ನ ಕಚೇರಿ ಆರಂಭಿಸಿದ್ದೆ. ಆ ತಂತಿ ವರ್ತಮಾನದಲ್ಲಿ ವಿವರಗಳಾವುವೂ ಇರಲಿಲ್ಲ. ಟ್ರಾನ್ಸ್ ವಾಲಿನಲ್ಲಿ ತೊಂದರೆ ಪ್ರಾರಂಭವಾಗಿರಬೇಕೆಂದು ಊಹಿಸಿದೆ. ಆದರೆ ನಾಲ್ಕಾರು ತಿಂಗಳಲ್ಲಿ ಹಿಂದಿರುಗಬಹುದೆಂದು ನನ್ನ ಮನೆಯವರನ್ನು ಭಾರತದಲ್ಲೇ ಬಿಟ್ಟು ದಕ್ಷಿಣ ಆಫ್ರಿಕಕ್ಕೆ ಹೊರಟೆ. ಡರ್ಬಾನ್ ನಗರವನ್ನು ಮುಟ್ಟಿ ಅಲ್ಲಿನ ವಿಷಯಗಳನ್ನು ಕೇಳಿದೊಡನೆ ನನಗೆ ಸಿಡಿಲು ಹೊಡೆದಂತಾಯಿತು. ಯುದ್ಧ ಮುಗಿದೊಡನೆ ದಕ್ಷಿಣ ಆಫ್ರಿಕದಲ್ಲೆಲ್ಲ ಭಾರತೀಯರ ಸ್ಥಿತಿ ಉತ್ತಮಗೊಳ್ಳಬಹುದೆಂದು ನಮ್ಮಲ್ಲಿ ಅನೇಕರು ನಂಬಿದ್ದೆವು. ಲಾರ್ಡ ಲ್ಯಾನ್ಸ್ ಡೌನ್, ಲಾರ್ಡ್ ಸೆಲ್ಬೋರನ್ ಮುಂತಾದ ಮಹಾ ಪ್ರಮುಖರು, ಯುದ್ಧವನ್ನು ಪ್ರಾರಂಭಿಸಿದಾಗ ಬೋಅರರು ಭಾರತೀಯರಿಗೆ ಕೊಟ್ಟ ಹಿಂಸೆಯೂ ಒಂದು ಕಾರಣವೆಂದು ಘೋಷಿಸಿದ್ದರಿಂದ, ಟ್ರಾನ್ಸ್ ವಾಲ್ ಮತ್ತು ಅರೆಂಜ ಫ್ರೀ ಸ್ಟೇಟ್ ಗಳಲ್ಲಂತೂ ನಾವು ಯಾವ ತೊಂದರೆಯನ್ನು ನಿರೀಕ್ಷಿಸಿರಲಿಲ್ಲ. ಟ್ರಾನ್ಸ್ ವಾಲ್ ಬ್ರಿಟಿಶ್ ವಲಸೆ ರಾಷ್ಟ್ರ ಆದೊಡನೆ ಭಾರತೀಯರ ಕಷ್ಟಗಳೆಲ್ಲವೂ ನಿವಾರಣೆಯಾಗುವುದೆಂದು ಪ್ರೆಟೋರಿಯ ಬ್ರಿಟಿಷ್ ಪ್ರತಿನಿಧಿ ಅನೇಕ ಬಾರಿ ನನಗೆ ತಿಳಿಸಿದ್ದನು. ಟ್ರಾನ್ಸ್ ವಾಲ್ ಈಗ ಬ್ರಿಟಿಷ್ ಬಾವುಟ ಅಡಿಯಲ್ಲಿ ಬಂದ ಕಾರಣ, ಭಾರತೀಯ ವಿರುದ್ಧ ಬೋಅರ್ ಸರಕಾರ ಮಾಡಿದ್ದ ಶಾಸನಗಳಾವುವೂ ಈಗ ಅನ್ವಯಿಸುವುದಿಲ್ಲವೆಂದು ಯೂರೋಪಿಯನರೂ ತಿಳಿದಿದ್ದರು. ಈ ಭಾವನೆ ಎಷ್ಟು ಹರಡಿತ್ತೆಂದರೆ, ಸ್ವತ್ತುಗಳ ಹರಾಜಿನಲ್ಲಿ ಮೊದಲು ಭಾರತೀಯರು ಸವಾಲು ಮಾಡಿದರೆ ಅಂಗೀಕರಿಸದಿದ್ದ ಮಾರಾಟಗಾರರು ಈಗ ಭಾರತೀಯರ ಸವಾಲುಗಳನ್ನು ಬಹಿರಂಗವಾಗಿಯೇ ಅಂಗೀಕರಿಸಲಾರಂಭಿಸಿದರು. ಈ ರೀತಿ ಅನೇಕ ಭಾರತೀಯರು ಭೂಮಿಯನ್ನು ಕೊಂಡರು. ಆದರೆ ಆ ಕ್ರಯಪತ್ರಗಳನ್ನು ರಿಜಿಸ್ಟರ್ ಮಾಡಿಸಲು ರಿಜಿಸ್ಟ್ರೇಷನ್ ಅಧಿಕಾರಿಯ ಮುಂದೆ ಹೋದಾಗ ೧೮೮೫ ನೆಯ ಇಸವಿಯ ಮೂರನೆಯ ಶಾಸನದಂತೆ ರಿಜಿಸ್ಟರ್ ಮಾಡುವುದಿಲ್ಲವೆಂದು ತಿರಸ್ಕರಿಸಿದನು! ಡರ್ಬಾನ್‌ನಲ್ಲಿ ನಾನು ಇಳಿದೊಡನೆ ಇದೆಲ್ಲವೂ ತಿಳಿಯಿತು. ಚೇಂಬರ್ಲಿನ್‌ರು ಮೊದಲು ಡರ್ಬಾನ್ ನಲ್ಲಿ ನಾನು ಇಳಿದೊಡನೆ ಇದೆಲ್ಲವೂ ತಿಳಿಯಿತು. ಚೇಂಬರ್ಲಿನ್‌ರು ಮೊದಲು ಡರ್ಬಾನಿಗೆ ಬರುವುದಾಗಿಯೂ ನೇಟಾಲಿನ ಎಲ್ಲ ಪರಿಸ್ಥಿತಿಯನ್ನೂ ಅವರಗೆ ತಿಳಿಸಿ ಅನಂತರ ನಾನು ಅವರೊಂದಿಗೆ ಟ್ರಾನ್ಸ್ ವಾಲಿಗೆ ಹೋಗಬೇಕಾಗಿಯೂ ಮುಖಂಡರು ನನಗೆ ತಿಳಿಸಿದರು.

ಚೇಂಬರ್ಲಿನ್‌ರನ್ನು ನೋಡಲು ಒಂದು ನಿಯೋಗಗೋಷ್ಠಿ ಹೋಗಿದ್ದಿತು. ಅವರು ತಾವು ಹೇಳಿದುದನ್ನು ಸಾವಧಾನವಾಗಿ ಕೇಳಿ ಆ ವಿಷಯವಾಗಿ ನಾವು ನೇಟಾಲ್ ಸರಕಾರದೊಂದಿಗೆ ಚರ್ಚಿಸುವುದಾಗಿ ಭರವಸೆಕೊಟ್ಟರು. ಯುದ್ದಕ್ಕೆ ಮುಂಚೆ ನೇಟಾಲ್ ಸರಕಾರದವರು ಜಾರಿಗೆ ತಂದಿದ್ದ ಶಾಸನಗಳನ್ನು ಶೀಘ್ರದಲ್ಲಿಯೇ ತಿದ್ದುಪಡಿ ಮಾಡುವರೆಂಬ ಆಸೆ ನನಗೇನೂ ಇರಲಿಲ್ಲ. ಈ ಶಾಸನ ಸಭೆಗಳ ವಿಷಯ ಹಿಂದಿನ ಅಧ್ಯಾಯದಲ್ಲಿಯೇ ತಿಳಿಸಿದ್ದೇನೆ.

ವಾಚಕರಿಗೆ ತಿಳಿದಿರುವಂತೆ ಯುದ್ಧಕ್ಕೆ ಪೂರ್ವದಲ್ಲಿ ಯಾವ ಭಾರತೀಯನಾದರೂ ಯಾವಾಗಲಾದರೂ ಟ್ರಾನ್ಸ್‌ವಾಲನ್ನು ಪ್ರವೇಶಿಸಬಹುದಾಗಿತ್ತು. ಇನ್ನು ಮುಂದೆ ಅದು ಸಾಧ್ಯವಿರಲಿಲ್ಲ. ಈ ವಿರೋಧ ಭಾರತೀಯರಿಗೆ ಹೇಗೋ ಹಾಗೆ ಯೂರೋಪಿಯನರಿಗೂ ಅನ್ವಯಿಸುತಿದ್ದಿತು. ಯುದ್ದ ಮುಗಿದ ಮೇಲೆ ಎಲ್ಲ ಅಂಗಡಿಗಳು ಇನ್ನೂ ತೆರೆದಿರಲಿಲ್ಲವಾದ್ದರಿಂದ ಒಟ್ಟಿಗೆ ಬಹಳ ಜನರು ಟ್ರಾನ್ಸ್‌ವಾಲಿಗೆ ಹೋಗಿದ್ದರೆ ಆಗಿನ ಸ್ಥಿತಿಯಲ್ಲಿ ಸಾಕಾದಷ್ಟು ಅಹಾರವೂ ಬಟ್ಟೆಯೂ ಸಿಕ್ಕುವಂತೆ ಇರಲಿಲ್ಲ. ಅಂಗಡಿಗಳಲ್ಲಿ ದಾಸ್ತಾನು ಇದ್ದ ಸಾಮಾನುಗಳೆಲ್ಲವನ್ನೂ ಬೋಅರ್ ಸರಕಾರ ನಿರ್ದಾಕ್ಷಿಣ್ಯವಾಗಿ ಮುಟ್ಟುಗೋಲು ಹಾಕಿಕೊಂಡಿತ್ತು. ಆದ್ದರಿಂದ ಈ ನಿರೋಧ ತಾತ್ಕಾಲಿಕವಾದರೆ ಯಾವ ಭಯಕ್ಕೂ ಕಾರಣವಿಲ್ಲವೆಂದು ಭಾವಿಸಿದೆ. ಆಧರೆ ರಹದಾರಿಗಳನ್ನು ಪಡೆಯುವುದರಲ್ಲಿ ಯೂರೋಪಿಯನರು ಅನುಸರಿಸಬೇಕಾಗಿದ್ದ ನಿಯಮಗಳಿಗೂ ಭಾರತೀಯರು ಅನುಸರಿಸಬೇಕಾಗಿದ್ದ ನಿಯಮಗಳಿಗೂ ವ್ಯತ್ಯಾಸ ತೋರಿದ್ದರಿಂದ ನಮಗೆ ಅನುಮಾನವೂ ಭಯವೂ ಹುಟ್ಟಿದುವು. ದಕ್ಷಿಣ ಆಫ್ರಿಕದ ಬಂದರುಗಳಲ್ಲಿ ಅಲ್ಲಲ್ಲಿ ರಹದಾರಿ ಕಚೇರಿಗಳನ್ನಿಟ್ಟರು. ಯೂರೋಪಿಯನರಿಗೆ ಕೇಳಿದೊಡನೆ ರಹದಾರಿ ದೊರೆಯುತ್ತಿತ್ತು. ಆದರೆ ಟ್ರಾನ್ಸ್ ವಾಲಿನಲ್ಲಿ ಭಾರತೀಯರ ಪ್ರಶ್ನೆಯ ಪರಿಶೀಲನೆಗಾಗಿಯೇ 'ಏಷ್ಯಾಟಿಕ್ ಡಿಪಾರ್ಟ್‌ಮೆಂಟ್' ಎಂಬ ಶಾಖೆಯನ್ನು ಪ್ರಾರಂಭಿಸಿದರು. ಈ ರೀತಿ ಮಾಡಿದ್ದು ಒಂದು ಹೊಸ ಮಾರ್ಗ. ಭಾರತೀಯರು ಮೊದಲು ಈ ಇಲಾಖೆಯ ಮುಖ್ಯಾಧಿಕಾರಿಗೆ ಅರ್ಜಿಯನ್ನು ಕೊಡಬೇಕಾಗಿತ್ತು. ಆತನು ಅವರ ಅರ್ಜಿಯನ್ನು ಅಂಗೀಕರಿಸಿದ ಮೇಲೆ ಡರ್ಬಾನಿನಲ್ಲೋ ಅಥವಾ ಬೇರೆ ಯಾವ ಬಂದರಿನಲ್ಲೋ ರಹದಾರಿಯನ್ನು ಪಡೆಯಬೇಕಾದರೆ ಚೇಂಬರ್ಲಿನ್‌ರು ಟ್ರಾನ್ಸ್ ವಾಲಿನ ಭಾರತೀಯರು ನನಗೆ ರಹದಾರಿ ಕೊಡಿಸಲು ಸಾಧ್ಯವಿರಲಿಲ್ಲ. ಅದು ಅವರ ಶಕ್ತಿಯನ್ನು ಮೀರಿತ್ತು. ಡರ್ಬಾನಿನಲ್ಲಿ ನನಗೆ ಇದ್ದ ಪರಿಚಯ ಮತ್ತು ಸಹಾಯದಿಂದ ನಾನು ಅಪ್ಪಣೆ ಪಡೆಯಬಹುದೆಂದು ಅವರು ನಂಬಿದ್ದರು. ನನಗೆ ರಹದಾರಿ ಅಧಿಕಾರಿಯ ಪರಿಚಯವಿರಲಿಲ್ಲ. ಆದರೆ ಪೋಲೀಸ್ ಸೂಪರಿಂಟೆಂಡೆಂಟರ ಪರಿಚಯ ಇದ್ದುದರಿಂದ ಅವರನ್ನು ನನ್ನೊಂದಿಗೆ ರಹದಾರಿ ಕಛೇರಿಗೆ ಬರಬೇಕೆಂದು ಕೇಳಿದ್ದಕ್ಕೆ ಒಪ್ಪಿ, ಬೇಕಾದ ಭರವಸೆಯನ್ನೂ ಕೊಟ್ಟರು. ೧೮೯೩ ರಲ್ಲಿ ಪ್ರೆಟೋರಿಯಾದಲ್ಲಿ ಒಂದು ವರ್ಷ ವಾಸವಾಗಿದ್ದೆನೆಂಬ ಆಧಾರದ ಮೇಲೆ ರಹದಾರಿಯನ್ನು ಪಡೆದು ಪ್ರೆಟೋರಿಯಾ ಸೇರಿದೆ.

ಪ್ರೆಟೋರಿಯಾ ವಾತಾವರಣ ನಿಜವಾಗಿಯೂ ಪ್ರಕ್ಷುಬ್ಧವಾಗಿತ್ತು. ಏಷ್ಯಾಟಿಕ್ ಇಲಾಖೆ ಭಾರತೀಯರ ಮೇಲೆ ದಬ್ಬಾಳಿಕೆ ನಡೆಸುವ ಒಂದು ಭೀಕರ ಯಂತ್ರವಾಗಿತ್ತು. ಯುದ್ಧಕಾಲದಲ್ಲಿ ಭಾರತದಿಂದ ದಕ್ಷಿಣ ಆಫ್ರಿಕಕ್ಕೆ ಬಂದ ಸೈನ್ಯದೊಂದಿಗೆ ಬಂದು ತಮ್ಮ ಅದೃಷ್ಟ ಪರೀಕ್ಷೆಗೆಂದು ಅಲ್ಲಿಯೇ ನೆಲಸಿದ್ದ ಜೂಜು ಕೋರರೇ ಅಲ್ಲಿನ ಅಧಿಕಾರಿಗಳು. ಅವರಲ್ಲಿ ಕೆಲವರು ಲಂಚಕೋರರು. ಇಬ್ಬರು ಅಧಿಕಾರಿಗಳನ್ನು ಲಂಚ ತೆಗೆದುಕೊಂಡರೆಂದು ಮೊಖದ್ದಮೆಗೆ ಸಹ ಗುರಿಪಡಿಸಲಾಗಿತ್ತು. ಅವರು ಹೇಳಿಕೊಟ್ಟದ್ದು.

ತಪ್ಪಿತಸ್ಥರಲ್ಲವೆಂದು ನ್ಯಾಯಸ್ಥಾನದಲ್ಲಿ ಪಂಚಾಯಿತರು ಅಭಿಪ್ರಾಯಪಟ್ಟರೂ, ಅವರು ತಪ್ಪಿತಸ್ಥರೆಂಬ ವಿಷಯದಲ್ಲಿ ಸರಕಾರಕ್ಕೆ ಯಾವ ಅನುಮಾನವೂ ಇರಲಿಲ್ಲವಾದ್ದರಿಂದ ಅವರನ್ನು ಕೆಲಸದಿಂದ ನಿವೃತ್ತಿ ಮಾಡಲಾಯಿತು. ಎಲ್ಲೆಲ್ಲೂ ಪಕ್ಷಪಾತ ತುಂಬಿತ್ತು. ಒಂದು ಪ್ರತ್ಯೇಕ ಶಾಖೆಯ ಸ್ಥಾಪನೆಗೆ ಮತ್ತು ಸಾರ್ಥಕತೆಗೆ ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ಮೊಟಕು ಮಾಡುವುದೇ ಮುಖ್ಯ ಕಾರಣವಾದಾಗ, ಆ ಇಲಾಖೆಯ ಅಧಿಕಾರಿಗಳು ತಮ್ಮ ಸ್ಥಾನಭದ್ರತೆಗೂ ತಮ್ಮ ಕಾರ್ಯನಿರ್ವಹಣ ಶಕ್ತಿ ಪ್ರದರ್ಶನಕ್ಕೂ ಪ್ರಜೆಗಳ ಮೇಲೆ ಪದೇ ಪದೇ ಹೊಸ ನಿರ್ಬಂಧಗಳನ್ನು ನಿರ್ಮಿಸುವ ಮನೋವೃತ್ತಿ ತೋರುವುದು ಸ್ವಾಭಾವಿಕ. ಇಲ್ಲಿಯೂ ಅದೇ ರೀತಿ ಆಯಿತು.

ನನ್ನ ಕೆಲಸವನ್ನು ಮೊದಲಿನಿಂದ ಪ್ರಾರಂಭಿಸಬೇಕಾಗಿ ಕಂಡು ಬಂದಿತು. ಟ್ರಾನ್ಸ್‌ವಾಲಿಗೆ ನಾನು ಹೇಗೆ ಬಂದೆನೆಂಬುದು ಏಷ್ಯಾಟಿಕ್ ಇಲಾಖೆಯವರಿಗೆ ಅರ್ಥವಾಗಲಿಲ್ಲ. ನನ್ನನ್ನೇ ಕೇಳುವಷ್ಟು ಧೈರ್ಯ ಅವರಿಗೆ ಇರಲಿಲ್ಲ. ಎಲ್ಲಿಯೋ ಕಳ್ಳತನದಿಂದ ತಪ್ಪಿಸಿಕೊಂಡು ಬಂದೆನೆಂದು ಅವರು ತಿಳಿದುಕೊಂಡಿರಬೇಕು. ನನಗೆ ರಹದಾರಿ ಪತ್ರ ಸಿಕ್ಕಿದ ರೀತಿಯನ್ನು ಹಿಂದಿನಿಂದ ಪರೋಕ್ಷವಾಗಿ ತಿಳಿದುಕೊಂಡರು. ಪ್ರೆಟೋರಿಯಾದ ಒಂದು ನಿಯೋಗಗೋಷ್ಠಿ ಚೇಂಬರ್ಲಿನ್‌ರನ್ನು ಕಂಡಿತು. ಅವರಿಗೆ ಕೊಡಬೇಕೆಂದಿದ್ದ ನಮ್ಮ ವಿಜ್ಞಾಪನಾಪತ್ರವನ್ನು ನಾನೇ ಕರಡು ಬರೆದೆನು. ಆದರೆ ನಿಯೋಗ ಗೋಷ್ಠಿಯಲ್ಲಿರಲು ನನಗೆ ಏಷ್ಯಾಟಿಕ್ ಇಲಾಖೆಯವರು ಅವಕಾಶ ಕೊಡಲಿಲ್ಲ. ತಮ್ಮೊಂದಿಗೆ ನಿಯೋಗ ಹೋಗಲು ನನಗೆ ಅವಕಾಶ ದೊರೆಯದಿದ್ದರೆ ಚೇಂಬರ್ಲಿನ್‌ರನ್ನು ನೋಡುವುದನ್ನೇ ಬಿಟ್ಟು ಬಿಡಬೇಕೆಂದು ಭಾರತೀಯರು ತೀರ್ಮಾನಿಸಿದರು. ಆದರೆ ನಾನು ಇದಕ್ಕೆ ಒಪ್ಪಲಿಲ್ಲ. ನನಗಾದ ಈ ಅಗೌರವವನ್ನು ನಾನು ಮನಸ್ಸಿಗೆ ತಂದುಕೊಳ್ಳುವುದಿಲ್ಲವಾಗಿಯೂ, ಅವರೂ ಅದೇ ರೀತಿ ಗಮನಿಸಕೂಡದಾಗಿಯೂ ಹೇಳಿದೆ. ನನ್ನ ಬಿನ್ನವತ್ತಳೆ ಸಿದ್ಧವಾಗಿತ್ತು; ಅದನ್ನು ಚೇಂಬರ್ಲಿನ್‌ರಿಗೆ ಕೊಡಬೇಕಾದ್ದು ಮುಖ್ಯ ಕೆಲಸ. ಅಲ್ಲಿನ ಭಾರತೀಯ ಬ್ಯಾರಿಸ್ಟರರಾದ ಜಾರ್ಜ್ ಗಾಢ್ ಫ್ರೆ ಅವರು ಬಿನ್ನವತ್ತಳೆಯನ್ನು ಓದಬೇಕೆಂದು ತೀರ್ಮಾನಿಸಿದರು. ನಿಯೋಗ ಗೋಷ್ಠಿ ಚೇಂಬರ್ಲಿನ್ ರನ್ನು ನೋಡಿದಾಗ, ಪ್ರಾಸಂಗಿಕವಾಗಿ ನನ್ನ ಹೆಸರು ಬಂದಾಗ, "ನಾನು ಗಾಂಧಿಯವರನ್ನು ಡರ್ಬಾನಿನಲ್ಲಿ ನೋಡಿದ್ದೆ. ಟ್ರಾನ್ಸ್‌ವಾಲ್ ನಿವಾಸಿಗಳಾದ ಭಾರತೀಯರಿಂದಲೇ ಇಲ್ಲಿನ ಸ್ಥಿತಿಗತಿಗಳನ್ನು ತಿಳಿಯೋಣವೆಂದು ಗಾಂಧಿಯವರನ್ನು ನೋಡುವುದಿಲ್ಲವೆಂದು ಹೇಳಿದೆ" ಎಂದರಂತೆ.

ನನ್ನ ದೃಷ್ಟಿಯಿಂದ ಹಾಗೆ ಹೇಳಿದ್ದು ಬೆಂಕಿಗೆ ತುಪ್ಪ ಸುರಿದಂತಾಯಿತು. ಏಷ್ಯಾಟಿಕ್ ಇಲಾಖೆಯವರು ಹೇಳಿಕೊಟ್ಟ ಪಾಠದಂತೆ ಚೇಂಬರ್ಲಿನ್‌ರು ಉತ್ತರ ಹೇಳಿ, ಭಾರತದಲ್ಲಿನ ವಾತಾವರಣವನ್ನೇ ಟ್ರಾನ್ಸ್ ವಾಲಿಗೂ ಅನ್ವಯಿಸಲು ಪ್ರಶ್ನಿಸಿದರು. ಬ್ರಿಟಿಶ್ ಅಧಿಕಾರಿಗಳು ಬೊಂಬಾಯಿಯವರನ್ನು ಚಂಪಾರಣ್ಯದಲ್ಲಿ ವಿದೇಶೀಯರೆಂದು ಭಾವಿಸುವುದು ಎಲ್ಲರಿಗೂ ತಿಳಿದಿದೆ. ಅದೇ ವಾದದಂತೆ ಡರ್ಬಾನಿನಲ್ಲಿದ್ದ ನನಗೆ ಟ್ರಾನ್ಸ್ ವಾಲ್ ಜನರ ಸ್ಥಿತಿ ಹೇಗೆ ತಿಳಿಯಬೇಕು? ಇದನ್ನೇ ಏಷ್ಯಾಟಿಕ್ ಇಲಾಖೆಯವರು ಚೇಂಬರ್ಲಿನ್ ರಿಗೆ

ನಾನೂ ಟ್ರಾನ್ಸ್‌ವಾಲಿನಲ್ಲಿ ವಾಸವಾಗಿದ್ದೆನೆಂಬುದೂ ಒಂದು ವೇಳೆ ವಾಸವಾಗಿಲ್ಲದಿದ್ದರೂ ಅಲ್ಲಿನ ಸ್ಥಿತಿಗತಿಗಳೆಲ್ಲವೂ ನನಗೆ ಸಂಪೂರ್ಣ ತಿಳಿದಿದ್ದುವೆಂಬುದೂ ಅವರಿಗೆ ಗೊತ್ತಿರಲಿಲ್ಲ. ಸಧ್ಯದ ಮುಖ್ಯ ಪ್ರಶ್ನೆ ಎಂದರೆ ಟ್ರಾನ್ಸ್ ವಾಲಿನ ಪರಿಸ್ಥಿತಿ ಯಾರಿಗೆ ಚೆನ್ನಾಗಿ ತಿಳಿದಿತ್ತೆಂಬುದು. ಅಷ್ಟು ದೂರದಿಂದ, ಭಾರತದಿಂದ ನನ್ನನ್ನು ಕರೆಯಿಸಿ, ಭಾರತೀಯರು ಆಗಲೆ ಆ ಪ್ರಶ್ನೆಗೆ ಉತ್ತರ ಕೊಟ್ಟಿದ್ದರು. ಆದರೆ ಅಧಿಕಾರದಲ್ಲಿರುವವರಿಗೆ ಸಕಾರಣವಾದ ರುಚಿಸಲಿಲ್ಲ. ಇದು ಹೊಸ ಅನುಭವವೇನಲ್ಲ. ಚೇಂಬರ್ಲಿನ್ ರು ಆಗ ಸಂಪೂರ್ಣ ಸ್ಥಳೀಯ ಅಧಿಕಾರಿಗಳ ಪ್ರಭಾವಕ್ಕೆ ಒಳಗಾಗಿದ್ದುದರಿಂದಲೂ ಯೂರೋಪಿಯನರನ್ನು ತೃಪ್ತಿಗೊಳಿಸುವುದೇ ಅವರ ಮುಖ್ಯ ಉದ್ದೇಶವಾಗಿದ್ದುದರಿಂದಲೂ ಅವರಿಂದ ನಮಗೆ ನ್ಯಾಯ ದೊರೆಯುವದೆಂಬ ಆಸೆ ಸ್ವಲ್ಪವೂ ಇರಲಿಲ್ಲ. ಆದರೂ ಅಜಾಗರೂಕತೆಯಿಂದಾಗಲಿ ನಮ್ಮ ಪ್ರತಿಷ್ಠೆಗೆ ಕುಂದು ಬಂದೀತೆಂಬ ನೆಪದಿಂದಾಗಲಿ ಪರಿಹಾರ ಪಡೆಯಲು ನಮಗಿದ್ದ ಯಾವ ನ್ಯಾಯಮಾರ್ಗವನ್ನೂ ಬಿಟ್ಟಿಲ್ಲವೆಂದು ತೋರಿಸಲು ನಿಯೋಗಗೋಷ್ಠಿ ಚೇಂಬರ್ಲಿನ್‌ರನ್ನು ಕಂಡಿತು.

೧೮೯೪ ರಲ್ಲಿ ನನಗೆ ಒದಗಿದ್ದ ಪರಿಸ್ಥಿತಿಗಿಂತ ಈಗ ಇನ್ನೂ ಕಠಿಣ ಸಂದಿಗ್ಧ ಪರಿಸ್ಥಿತಿ ಒದಗಿತು. ಚೇಂಬಲೀನ್‌ರು ದಕ್ಷಿಣ ಆಫ್ರಿಕದಿಂದ ಹಿಂದಿರುಗಿದೊಡನೆ ನಾನು ಭಾರತಕ್ಕೆ ಹಿಂದಿರುಗಬಹುದೆಂಬ ಒಂದು ದೃಷ್ಟಿಯಿಂದ ಯೋಚಿಸಿದೆ. ಆದರೆ ದಕ್ಷಿಣ ಆಫ್ರಿಕದಲ್ಲಿ ಭಾರತೀಯರಿಗೆ ಒದಗಿದ್ದ ಕ್ರೂರ ಪರಿಸ್ಥಿತಿಯನ್ನು ತಿಳಿದೂ ತಿಳಿದೂ, ಅದಕ್ಕೂ ದೊಡ್ಡ ಕಾರ್ಯಕ್ಷೇತ್ರದಲ್ಲಿ ಸಾರ್ವಜನಿಕ ಸೇವೆ ಮಾಡಬಹುದೆಂದು ನಾನು ಭಾರತಕ್ಕೆ ಹಿಂದಿರುಗಿದರೆ, ನನ್ನ ಸಾರ್ವಜನಿಕ ಸೇವಾಕಾಂಕ್ಷೆಗೆ ಕಳಂಕ ತಂದಂತೆ ಆಗುತ್ತದೆಯೆಂದು ಇನ್ನೊಂದು ದೃಷ್ಟಿಯಿಂದ ಯೋಚಿಸಿದೆ. ನಮ್ಮ ಜನರಿಗೆ ಅದೇ ವಿಷಯ ವಿವರಿಸಿದೆ. ೧೮೯೪ ರಲ್ಲಿ ತೀರ್ಮಾನಿಸಿದಂತೆ ವಕೀಲಿ ವೃತ್ತಿಯಿಂದ ನಾನು ಜೀವನ ನಡೆಸುವುದಾಗಿ ತಿಳಿಸಿದೆ. ನಮ್ಮ ಜನರಿಗೂ ಅದೇ ಬೇಕಿತ್ತು. ಟ್ರಾನ್ಸ್ ವಾಲಿನಲ್ಲಿ ನ್ಯಾಯವಾದಿಯಾಗಿರಲು ಅವಕಾಶ ಕೊಡಬೇಕೆಂದು ನಾನು ಅರ್ಜಿ ಹಾಕಿದೆ. ನ್ಯಾಯವಾದಿ ಸಂಘದವರು ಇಲ್ಲಿಯೂ ನನ್ನ ಅರ್ಜಿಯನ್ನು ವಿರೋಧಿಸುವರೆಂಬ ಭಯವಿತ್ತು ; ಆದರೆ ಅದಕ್ಕೆ ಬುಡವಿಲ್ಲದಾಯಿತು. ಸುಪ್ರೀಂ ಕೋರ್ಟಿನ ನ್ಯಾಯವಾದಿಯಾಗಿ ಜೋಹಾನ್ಸಬರ್ಗಿನಲ್ಲಿ ನನ್ನ ಕಚೇರಿಯನ್ನು ಪ್ರಾರಂಭಿಸಿದೆ. ಟ್ರಾನ್ಸ್ ವಾಲಿನ ಎಲ್ಲ ಸ್ಥಳಗಳಿಗಿಂತ ಜೋಹಾನ್ಸ ಬರ್ಗಿನಲ್ಲಿಯೇ ಭಾರತೀಯರ ಸಂಖ್ಯೆ ಹೆಚ್ಚು ಇದ್ದುದರಿಂದ ನನ್ನ ಜೀವನಕ್ಕೂ ಸಾರ್ವಜನಿಕ ಕೆಲಸಗಳಿಗೂ ಹೆಚ್ಚು ಅನುಕೂಲವೆಂದು ಆ ಪಟ್ಟಣವನ್ನು ಆರಿಸಿದೆ. ಏಷ್ಯಾಟಿಕ್ ಇಲಾಖೆಯ ಲಂಚಕೋರತನದ ವಿಷಮಯ ವಾತಾವರಣ ನನಗೆ ದಿನೇ ದಿನೇ ಹೆಚ್ಚು ಅನುಭವಕ್ಕೆ ಬರಲಾರಂಭವಾಯಿತು. ಟ್ರಾನ್ಸ್ ವಾಲ್ ಬ್ರಿಟಿಷ್ ಭಾರತೀಯರ ಸಂಸ್ಥೆಯ ಪ್ರಯತ್ನವೆಲ್ಲ ಈ ರೋಗಕ್ಕೆ ಮದ್ದು ಹುಡುಕುವುದರಲ್ಲಾಯಿತು. ೧೮೮೫ನೆಯ ಮೂರನೆಯ ಶಾಸನವನ್ನು ರದ್ದುಗೊಳಿಸುವ ಪ್ರಯತ್ನ ದೂರ ಸರಿಯಿತು. ಏಷ್ಯಾಟಿಕ್ ಇಲಾಖೆಯ ಹಾವಳಿಯನ್ನು ಎದುರಿಸಿ

ನಮ್ಮ ಬಚಾವಣೆ ನೋಡಿಕೊಳ್ಳುವುದೇ ನಮಗೆ ಮುಖ್ಯ ಕೆಲಸವಾಯಿತು. ಅಲ್ಲಿಗೆ ಬಂದಿದ್ದ ಲಾರ್ಡ್ ಮಿಲ್ನರ್, ಲಾರ್ಡ್ ಸೆಲ್ಬೋರನ್, ಮುಂದೆ ಮದರಾಸ್ ಗವರ್ನರ್ ಆದ, ಆಗ ಟ್ರಾನ್ಸ್‌ವಾಲ್ ಲೆಫ್ಟಿನೆಂಟ್ ಗೌವರ್‌ನರರಾಗಿದ್ದ ಸರ್ ಆರ್ಥರ್ ಲಾಲೆ ಮತ್ತು ಇತರ ಸಣ್ಣ ಪುಟ್ಟ ಅಧಿಕಾರಿಗಳ ಬಳಿಗೆ ಭಾರತೀಯರು ನಿಯೋಗಗೋಷ್ಠಿಗಳನ್ನು ಕಳುಹಿಸಿದರು. ಅಲ್ಲಲ್ಲಿ ಸ್ವಲ್ಪ ಅನುಕೂಲವಾದರೂ ಎಲ್ಲವೂ ತೇಪೆ ಕೆಲಸ ಆಗಿತ್ತು. ಎಲ್ಲವನ್ನೂ ದೋಚಿಕೊಂಡ ಕಳ್ಳರಿಗೆ ಮೊರೆಯಿಟ್ಟು, ಅವರು ಕೊಟ್ಟ ಅಲ್ಪ ವಸ್ತುಗಳಿಂದ ಸಮಾಧಾನ ಹೊಂದುವವನಂತೆ ಆಗ ನಮ್ಮ ಪರಿಸ್ಥಿತಿ ಇತ್ತು. ಈ ಚಳವಳಿಯ ಪರಿಣಾಮವಾಗಿಯೇ ನಾನು ಹಿಂದೆ ತಿಳಿಸಿರುವಂತೆ ಅಧಿಕಾರಿಗಳನ್ನು ಲಂಚಕೋರತನಕ್ಕಾಗಿ ವಿಚಾರಣೆಗೆ ಗುರಿಪಡಿಸಿದ್ದು. ಈ ನಿರ್ಬಂಧಗಳೆಲ್ಲ ಭಾರತೀಯರು ವಲಸೆ ಬಾರದಂತೆ ತಡೆಗಟ್ಟುವುದಕ್ಕೆ ಎಂದು ಮಾಡಿದ್ದ ನಮ್ಮ ಊಹೆ ನಿಜವಾಯಿತು. ಯೂರೋಪಿಯನರಿಂದ ಯಾವ ರಹದಾರಿಗಳನ್ನೂ ಕೇಳುತ್ತ ಇರಲಿಲ್ಲ; ಆದರೆ ಭಾರತೀಯರಿಗೆ ಮಾತ್ರ ರಹದಾರಿ ಅನಿವಾರ್ಯವಾಯಿತು. ಹಿಂದಿನ ಬೋಅರ್ ಸರಕಾರ ಭಾರತೀಯ ವಿರುದ್ಧ ಶಾಸನಗಳನ್ನು ನಿರ್ಬಂಧದಿಂದ ಆಚರಣೆಗೆ ತರುತ್ತಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಅವರ ಔದಾರ್ಯವಲ್ಲ, ಆದರೆ ಸಡಿಲವಾದ ಅವರ ಆಡಳಿತ ಪದ್ಧತಿ. ಉಪಕಾರಿಯಾದ ಅಧಿಕಾರಿಗೆ ಉಪಕಾರ ಮಾಡಲು ಬೋಅರ್ ಆಡಳಿತದಲ್ಲಿದ್ದ ಅವಕಾಶ ಬ್ರಿಟಿಷ್ ಸರಕಾರ ಪದ್ಧತಿಯಲ್ಲಿಲ್ಲ. ಇದು ಶುಷ್ಕ ಕಂದಾಚಾರದ ಪದ್ಧತಿ. ಅಧಿಕಾರಿಗಳು ನಿರ್ಜೀವ ಯಂತ್ರಗಳಂತೆ ಕೆಲಸ ಮಾಡಬೇಕು. ಅವರ ಕಾರ್ಯನಿರ್ವಾಹಕ ಶಕ್ತಿಗೆ ಹೆಜ್ಜೆ ಹಜ್ಜೆಗೂ ನಿರ್ಬಂಧಗಳಿವೆ. ಆದ್ದರಿಂದ ಬ್ರಿಟಿಷ್ ರಾಜ್ಯಪದ್ಧತಿಯಲ್ಲಿ ಸರಕಾರದ ಆಡಳಿತನೀತಿ ಉದಾರವಾದರೆ ಆದರಿಂದ ಪ್ರಜೆಗಳಿಗೆ ಹೆಚ್ಚಿನ ಪ್ರಯೋಜನ ಉಂಟು. ಆದರೆ ಆಡಳಿತ ನೀತಿ ದಬ್ಬಾಳಿಕೆಯಿಂದ ಕಠಿಣವಾದರೆ ಆಡಳಿತಗಾರರ ಕ್ರೌರ್ಯದ ಹೊರೆ ಎಲ್ಲವೂ ಪ್ರಜೆಗಳ ಮೇಲೆ ಬೀಳುತ್ತದೆ. ಬೋಅರ್ ರಿಪಬ್ಲಿಕ್ ಆಡಳಿತದಲ್ಲಿ ಈ ರೀತಿ ಇರಲಿಲ್ಲ. ಶಾಸನದ ಔದಾರ್ಯದ ಪೂರ್ಣ ಫಲವನ್ನು ಪಡೆಯುವುದು ಬಿಡುವುದು ಆಡಳಿತ ನಡೆಸುತ್ತಿದ್ದ ಅಧಿಕಾರಿಗಳನ್ನು ಅವಲಂಬಿಸಿತ್ತು. ಆದ್ದರಿಂದ ಟ್ರಾನ್ಸ್ ವಾಲಿನಲ್ಲಿ ಬ್ರಿಟಿಷ್ ರಾಜ್ಯಾಧಿಕಾರ ಏರ್ಪಟ್ಟ ಒಡನೆ ಭಾರತೀಯ ವಿರೋಧ ಶಾಸನಗಳಿಗೆ ಜೀವ ತುಂಬಿದಂತಾಗಿ ದಿನದಿನಕ್ಕೂ ಅವುಗಳ ಕಾಠಿಣ್ಯ ಹೆಚ್ಚಾಯಿತು. ಅವುಗಳಲ್ಲಿ ಎಲ್ಲಾದರೂ ಸಂದು ಇದ್ದರೆ ಮುಚ್ಚಲಾಯಿತು. ಈ ಶಾಸನಗಳ ಚಲಾವಣೆಯಲ್ಲಿ ಏಷ್ಯಾಟಿಕ್ ಇಲಾಖೆಯ ಅಧಿಕಾರಿಗಳು ನಿಷ್ಕರುಣಿಗಳಾಗಿದ್ದರೆಂಬುದನ್ನು ಹಿಂದೆಯೇ ನೋಡಿದ್ದೇವೆ. ಹಳೆಯ ಶಾಸನಗಳನ್ನು ರದ್ದುಗೊಳಿಸುವುದು ಅಸಾಧ್ಯವಾಯಿತು. ಆದ್ದರಿಂದ ಅವುಗಳ ಆಚರಣೆಯಲ್ಲಿನ ದಾರುಣತೆಯನ್ನು ನಿವಾರಿಸುವುದೊಂದೇ ಭಾರತೀಯರ ಕೆಲಸವಾಯಿತು.

ಈಗಲೊ ಮುಂದೆಯೊ ಒಂದು ತತ್ವವನ್ನು ವಿಚಾರ ಮಾಡುವುದು ಅವಶ್ಯಕ. ಈಗಲೇ ಅದನ್ನು ವಿಮರ್ಶೆ ಮಾಡಿದರೆ ಭಾರತೀಯರ ಮನೋಭಾವ ಮತ್ತು ಪರಿಸ್ಥಿತಿ ಬದಲಾಯಿಸಿದ ರೀತಿಯನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಟ್ರಾನ್ಸ್‌ವಾಲ್

ಮತ್ತು ಫ್ರೀಸ್ಟೇಟ್ ಎರಡೂ ಬ್ರಿಟಿಷ್ ರಾಜ್ಯಾಡಳಿತದಲ್ಲಿ ಸೇರಿದೊಡನೆ, ಪ್ರಜೆಗಳ ಸ್ವಾತಂತ್ರ್ಯಕ್ಕೆ ನಿರ್ಬಂಧವನ್ನುಂಟುಮಾಡುವ ಮತ್ತು ಬ್ರಿಟಿಷ್ ರಾಜ್ಯಪದ್ಧತಿಗೆ ವಿರೋಧವಾದ ಹಿಂದಿನ ರಿಪಬ್ಲಿಕ್‌ಗಳ ಶಾಸನಗಳ ಪಟ್ಟಿಯೊಂದನ್ನು ತಯಾರಿಸಲು ಲಾರ್ಡ್ ಮಿಲ್ನರ್ ಒಂದು ಸಮಿತಿಯನ್ನು ನೇಮಿಸಿದನು. ಭಾರತೀಯರಿಗೆ ವಿರುದ್ಧವಾದ ಎಲ್ಲ ಶಾಸನಗಳನ್ನೂ ಈ ಪಟ್ಟಿಯಲ್ಲಿ ಸೇರಿಸಬೇಕಾದ್ದು ಅವನ ಕರ್ತವ್ಯವಾಗಿತ್ತು. ಆದರೆ ಈ ಸಮಿತಿಯನ್ನು ನೇಮಿಸುವುದರಲ್ಲಿ ಲಾರ್ಡ್ ಮಿಲ್ನರ್ ನ ಇಷ್ಟ ಭಾರತೀಯರ ಕೊರತೆಗಳ ನಿವಾರಣೆಯಾಗಿರಲಿಲ್ಲ; ಬ್ರಿಟಿಷರ ಕುಂದುಕೊರತೆಗಳ ನಿವಾರಣೆಯಾಗಿತ್ತು. ಬ್ರಿಟಿಷರಿಗೆ ತೊಂದರೆ ಕೊಡುತ್ತಿದ್ದ ಎಲ್ಲ ಶಾಸನಗಳನ್ನೂ ಅದಷ್ಟು ಜಾಗ್ರತೆ ರದ್ದು ಮಾಡುವುದೇ ಆತನ ಉದ್ದೇಶ. ಆ ಸಮಿತಿ ಅತ್ಯಲ್ಪ ಕಾಲದಲ್ಲಿ ತನ್ನ ವರದಿಯನ್ನೊಪ್ಪಿಸಿತು. ಬ್ರಿಟಿಷರಿಗೆ ವಿರೋಧವಾಗಿದ್ದ ಸಣ್ಣ ದೊಡ್ಡ ಅನೇಕ ಶಾಸನಗಳನ್ನು ಒಂದೇ ಏಟಿಗೆ ರದ್ದುಗೊಳಿಸಲಾಯಿತು.

ಇದೇ ಸಮಿತಿ ಭಾರತೀಯ ವಿರುದ್ಧ ಶಾಸನಗಳ ಪಟ್ಟಿಯೊಂದನ್ನು ಗ್ರಂಥ ರೂಪದಲ್ಲಿ ತಯಾರಿಸಿತು. ಏಷ್ಯಾಟಿಕ್ ಇಲಾಖೆಯವರು ಈ ಪುಸ್ತಕವನ್ನು ಇಟ್ಟುಕೊಂಡು ದುರುಪಯೋಗ ಪಡಿಸಿಕೊಳ್ಳಲು ಬಹಳ ಅನುಕೂಲವಾಯಿತು.

ಭಾರತೀಯ ವಿರುದ್ಧ ಶಾಸನಗಳಲ್ಲಿ ಭಾರತೀಯರೆಂದು ಹೆಸರಿಲ್ಲದೆ, ಅವರಿಗೆ ಮಾತ್ರ ಅನ್ವಯಿಸುವಂತಿರದೆ ಎಲ್ಲ ಪ್ರಜೆಗಳಿಗೂ ಅನ್ವಯಿಸುವಂತೆ ಇದ್ದು, ಆ ಶಾಸನಗಳ ಚಲಾವಣೆಯನ್ನು ಸ್ಥಳೀಯ ಅಧಿಕಾರಿಗಳ ವಿವೇಚನೆಗೆ ಬಿಟ್ಟರೆ, ಅಥವಾ ಆ ಶಾಸನಗಳ ಚಲಾವಣೆಯನ್ನು ಸ್ಥಳೀಯ ಅಧಿಕಾರಿಗಳ ವಿವೇಚನೆಗೆ ಬಿಟ್ಟರೆ, ಅಥವಾ ಆ ಶಾಸನಗಳಲ್ಲಿ ಸಾರ್ವತ್ರಿಕವಾದ ನಿರ್ಬಂಧಗಳಿದ್ದು ಆಚರಣೆಯಲ್ಲಿ ಮಾತ್ರ ಭಾರತೀಯರ ಮೇಲೆ ವಿಶೇಷ ಕಾಠಿಣ್ಯದಿಂದ ಪ್ರಯೋಗಿಸಲು ಅವಕಾಶವಿದ್ದರೆ, ಅಂತಹ ಶಾಸನಗಳಿಂದಲೇ ಶಾಸನಸಭಾಸದಸ್ಯರ ಉದ್ದೇಶವನ್ನು ಈಡೇರಿಸಿಕೊಳ್ಳಬಹುದಾಗಿತ್ತು; ಆದರೂ ಶಾಸನಗಳು ಸಾಮಾನ್ಯಶಾಸನಗಳಾಗಿರುತ್ತಿದ್ದುವು. ಅಂತಹ ಶಾಸನಗಳಿಂದ ಯಾರ ಮನಸ್ಸಿಗೂ ನೋವಾಗುತ್ತಿರಲಿಲ್ಲ. ಕಾಲ ಕಳೆದಂತೆ ತಾತ್ಕಾಲಿಕ ವೈಷಮ್ಯ ಮಾಯವಾದ ಮೇಲೆ ಈ ಶಾಸನಗಳನ್ನು ತಿದ್ದು ಪಡಿಮಾಡುವ ಅವಶ್ಯಕತೆಯೇ ಬರುವುದಿಲ್ಲ. ಯಾವ ಪಂಗಡಕ್ಕಾದರೂ ತೊಂದರೆಯಾಗುವಂತೆ ಇದ್ದರೆ ಆ ಶಾಸನಗಳನ್ನು ಉದಾರವಾಗಿ ಪ್ರಯೋಗಿಸುವ ಅವಕಾಶವಿದ್ದಿದ್ದರೆ ತೊಂದರೆಗಳನ್ನು ನಿವಾರಿಸಬಹುದು. ಈ ಎರಡನೆಯ ಮಾದರಿಯ ಶಾಸನಗಳನ್ನು ಸಾಮಾನ್ಯ ಶಾಸನಗಳೆಂದು ನಾನು ಕರೆದಿರುವಂತೆ ಮೊದಲನೆಯ ಜಾತಿಯ ಶಾಸನಗಳನ್ನು ಯೂರೋಪಿಯನರಲ್ಲದವರನ್ನು ಕಪ್ಪು, ಕಂದು ಎಂಬ ವರ್ಣಭೇದ ಕಲ್ಪಿಸಿ, ವಿಶೇಷ ನಿರ್ಬಂಧಗಲನ್ನು ವಿಧಿಸುವ ಶಾಸನಗಳನ್ನು ಜಾತೀಯ ಅಥವಾ ಏಕಪಕ್ಷೀಯ ಶಾಸನಗಳೆಂದು ಕರೆಯಬಹುದು.

ಆಗ ಜಾರಿಯಲ್ಲಿದ್ದ ಒಂದು ಶಾಸನವನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ನೇಟಾಲಿನಲ್ಲಿ ಶಾಸನವಾಗಿ ಕೊನೆಗೆ ಬ್ರಿಟಿಷ್ ಸಾಮ್ರಾಜ್ಯ ಸರಕಾರದಿಂದ ರದ್ದು ಮಾಡಲಾದ ಮೊದಲನೆಯ ವೋಟು ಕಸಿದುಕೊಳ್ಳುವ ಶಾಸನದಲ್ಲಿ ಏಷ್ಯಾಖಂಡದವರನ್ನೆಲ್ಲ ವೋಟು

ಮಾಡಲು ಅನರ್ಹರೆಂದು ವಿಧಿಸಲಾಗಿತ್ತು. ಇಂತಹ ಒಂದು ಶಾಸನವನ್ನು ಜನಾಭಿಪ್ರಾಯದಿಂದ ರದ್ದುಗೊಳಿಸಬೇಕಾದರೆ, ಬಹುಸಂಖ್ಯಾತರು ಏಷ್ಯದವರಿಗೆ ವಿರೋಧವಾಗಿರದಂತೆ ಮಾತ್ರ ಅಲ್ಲದೆ, ಏಷ್ಯಾ ಜನರಿಗೆ ಸ್ನೇಹಭಾವದಿಂದಿರುವಂತೆ ಸಹ ಜನಾಭಿಪ್ರಾಯವನ್ನು ಬದಲಾಯಿಸಬೇಕಾಗುವುದು. ಒಂದು ಬಾರಿ ವರ್ಣಭೇದವನ್ನು ಕಲ್ಪಿಸಲಾಯಿತೆಂದರೆ ಪರಸ್ಪರ ಮನೋಭಾವ ಸ್ನೇಹಪೂರಿತವಾದರೆ ಮಾತ್ರ ಆ ಶಾಸನವನ್ನು ಬದಲಾಯಿಸಲು ಶಕ್ಯವಾಗುತ್ತದೆ. ಜಾತೀಯ ಶಾಸನಕ್ಕೆ ಇದೇ ಒಂದು ನಿದರ್ಶನ. ಆ ಶಾಸನವನ್ನು ಹಿಂದಕ್ಕೆ ತೆಗೆದುಕೊಂಡು, ಅದೇ ಧ್ಯೇಯವನ್ನು ಸಾಧಿಸಲು ಶಕ್ಯವಿರುವ ಸಾರ್ವತ್ರಿಕ ಸ್ವಭಾವದ ಮತ್ತೊಂದು ಶಾಸನವನ್ನು ಮಾಡಿದರು. ಅದರ ಒಂದು ನಿಯಮದ ಸಾರಾಂಶ ಈ ರೀತಿ ಇತ್ತು: "ಪಾರ್ಲಿಮೆಂಟರಿ ವೋಟು ಪದ್ಧತಿಯಂತೆ ಇದುವರೆಗೆ ಯಾವ ಯಾವ ದೇಶಗಳಲ್ಲಿ ಚುನಾಯಿತ ಪ್ರಜಾಪ್ರತಿನಿಧಿ ಸಂಸ್ಥೆಗಳು ಇಲ್ಲವೊ ಆ ದೇಶಗಳ ಜನರಿಗೆ ನೇಟಾಲಿನಲ್ಲಿ ವೋಟರುಗಳ ಪಟ್ಟಿಯಲ್ಲಿ ಸೇರಲು ಅಧಿಕಾರವಿಲ್ಲ." ಇದರಲ್ಲಿ ಭಾರತೀಯರು ಅಥವಾ ಏಷ್ಯದವರು ಎಂಬ ಹೆಸರೇ ಇರುವುದಿಲ್ಲ. ಪಾರ್ಲಿಮೆಂಟರಿ ಪದ್ಧತಿಯಂತೆ ಭಾರತದಲ್ಲಿ ಚುನಾಯಿತ ಪ್ರತಿನಿಧಿ ಶಾಸನಸಭೆಗಳು ಇವೆಯೆ ಇಲ್ಲವೆ ಎಂಬ ವಿಷಯದಲ್ಲಿ ನ್ಯಾಯ ಸಲಹೆಗಾರರ ಅಭಿಪ್ರಾಯ ವ್ಯತ್ಯಾಸವಾಗಬಹುದು. ಆದರೆ ೧೮೯೪ ರಲ್ಲೇ ಆಗಲಿ, ಈಗ ಆಗಲಿ ಭಾರತದಲ್ಲಿ ಚುನಾಯಿತ ಪ್ರತಿನಿಧಿಸಭೆಗಳು ಇಲ್ಲವೆಂದು ವಾದಕ್ಕಾಗಿ ಇಟ್ಟುಕೊಂಡರೂ ನೇಟಾಲಿನ ವೋಟರುಗಳ ಪಟ್ಟಿಯಲ್ಲಿ ಸೇರಿಸಿದರೆ ಅದು ಕಾನೂನಿಗೆ ವಿರುದ್ಧವೆಂದು ಏಕಾಏಕಿ ಯಾರೂ ಹೇಳುವ ಹಾಗಿರಲಿಲ್ಲ. ಯಾವಾಗಲೂ ಪ್ರಜೆಗಳ ಹಕ್ಕುಗಳ ಪರವಾಗಿ ಶಾಸನವಿದೆ ಎಂದು ನಂಬಿಕೆ. ಅಧಿಕಾರದಲ್ಲಿರುವ ಸರಕಾರ ಎಲ್ಲಿಯವರೆಗೆ ಪ್ರಜೆಗಳಿಗೆ ವಿರೋಧವಾಗಿರುವುದಿಲ್ಲವೋ ಅಲ್ಲಿಯವರೆಗೂ ಮೇಲ್ಕಂಡಂತೆ ಶಾಸನವಿದ್ದರೂ ಭಾರತೀಯರ ಮತ್ತು ಇತರರ ಹೆಸರನ್ನು ವೋಟರುಗಳ ಪಟ್ಟಿಗೆ ಸೇರಿಸಲು ಅವಕಾಶವಿದೆ. ಅಂದರೆ ಭಾರತೀಯರಿಗೆ ಕೆಡಕುಮಾಡಲು ಇಷ್ಟವಿಲ್ಲದಿದ್ದರೆ, ಶಾಸನವನ್ನು ಸ್ವಲ್ಪವೂ ತಿದ್ದುಪಡಿ ಮಾಡದೆ ಭಾರತೀಯರ ಹೆಸರನ್ನು ವೋಟರುಗಳ ಪಟ್ಟಿಯಲ್ಲಿ ಸೇರಿಸಬಹುದು. ಇದೇ ಸರ್ವತ್ರ ಶಾಸನಗಳ ಅನುಕೂಲ. ಹಿಂದಿನ ಅಧ್ಯಾಯಗಳಲ್ಲಿ ವಿವರಿಸಿದ ದಕ್ಷಿಣ ಆಫ್ರಿಕದ ಇತರ ಶಾಸನಗಳಿಂದ ಇಂತಹ ಅನೇಕ ಉದಾಹರಣೆಗಳನ್ನು ಇನ್ನೂ ಕೊಡಬಹುದು ಆದ್ದರಿಂದ ವಿಶೇಷ ಶಾಸನಗಳನ್ನು ಅದಷ್ಟು ನಿರ್ಮಾಣ ಮಾಡದಿರುವುದೇ ಬುದ್ಧಿವಂತಿಕೆಯ ನೀತಿ; ಅಂತಹ ಶಾಸನಗಳನ್ನೇ ಮಾಡದಿರುವುದು ಇನ್ನೂ ಒಳ್ಳೆಯದು. ಒಂದು ಸಲ ಶಾಸನವಾದ ಮೇಲೆ ಅದನ್ನು ರದ್ದುಗೊಳಿಸಲು ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ವಿದ್ಯೆಯಲ್ಲಿ ಬಹಳ ಮುಂದುವರಿದಿರುವ ದೇಶದಲ್ಲಿ ಮಾತ್ರ ಪ್ರಜಾಭಿಪ್ರಾಯ ಅಲ್ಲಿನ ಶಾಸನಗಳನ್ನು ಬದಲಾಯಿಸಲು ಸಾಧ್ಯ. ಅದೂ ಅಲ್ಲದೆ ಪದೇ ಪದೇ ದೇಶದ ಶಾಸನಗಳು ಬದಲಾವಣೆ ಅಥವಾ ರದ್ದು ಆಗುತ್ತಿದ್ದರೆ ದೇಶದ ರಾಜ್ಯಪದ್ಧತಿಯ ಭದ್ರತೆಗೆ ಅಥವಾ ಸುವ್ಯವಸ್ಥೆಗೆ ಅದು ಒಂದು ಲೋಪ.

ಆದ್ದರಿಂದ ಟ್ರಾನ್ಸವಾಲಿನ ಭಾರತೀಯರ ವಿರುದ್ಧ ಶಾಸನಗಳಲ್ಲಿದ್ದ ವಿಷದ ಬೀಜವನ್ನು

ಈಗ ನಾವು ಚೆನ್ನಾಗಿ ಗ್ರಹಿಸಬಹುದು. ಅವೆಲ್ಲವೂ ವರ್ಣದ್ವೇಷ ಶಾಸನಗಳು. ಏಷ್ಯದವರಾದ್ದರಿಂದಲೇ ವೋಟು ಮಾಡುವ ಹಕ್ಕು ಇರಲಿಲ್ಲ; ಸರಕಾರದವರು ಗೊತ್ತು ಮಾಡಿದ ಪ್ರದೇಶಗಳ ಹೊರಗೆ ಭೂಮಿಯನ್ನು ಕೊಳ್ಳುವ ಹಾಗಿರಲಿಲ್ಲ. ಶಾಸನ ಕಡತದಿಂದ ಈ ಶಾಸನಗಳನ್ನು ತೆಗೆಯುವವರೆಗೂ ಅಧಿಕಾರಿಗಳು ಭಾರತೀಯರಿಗೆ ಯಾವ ಪರಿಹಾರವನ್ನೂ ಕೊಡುವ ಹಾಗಿರಲಿಲ್ಲ. ಮಿಲ್ನರ್ ಸಮಿತಿಯವರು ಸರ್ವತ್ರ ನಿರ್ಬಂಧಮಾಡುವ ಶಾಸನಗಳ ಪ್ರತ್ಯೇಕ ಪಟ್ಟಿಯನ್ನು ಮಾತ್ರ ಮಾಡಿದರು. ಅವು ಸಹ ಸರ್ವತ್ರ ಅನ್ವಯಿಸುವಂತಿದ್ದು, ಭಾರತೀಯರ ಮೇಲೆ ಉಪಯೋಗಿಸಲ್ಪಡದಿದ್ದರೆ ಉಳಿದವುಗಳೊಂದಿಗೆ ಅವೂ ರದ್ದಾಗುತ್ತಿದ್ದುವು. ಅಧಿಕಾರಿಗಳು ತಾವು ನಿಸ್ಸಹಾಯಕರೆಂದೂ ಹೊಸ ಶಾಸನ ಸಭೆ ರದ್ದುಗೊಳಿಸಿದ ಹೊರತು ಶಾಸನಗಳನ್ನು ಜಾರಿ ಮಾಡದೆ ಗತ್ಯಂತರವಿಲ್ಲವೆಂದೂ ಹೇಳಲು ಅವಕಾಶವಿರುತ್ತ ಇರಲಿಲ್ಲ.

ಈ ಶಾಸನಗಳು ಏಷ್ಯಾಟಿಕ್ ಇಲಾಖೆಯ ಅಧಿಕಾರಿಗಳ ಕೈಗೆ ದೊರೆತೊಡನೆ ಅವುಗಳನ್ನು ಚಾಚೂ ತಪ್ಪದೆ ಚಲಾಯಿಸತೊಡಗಿದರು. ಅಲ್ಲದೆ ಚಲಾವಣೆಗೆ ಯೋಗ್ಯವೆನಿಸಬೇಕಾದರೆ, ಮನಃ ಪೂರ್ವಕವಾಗಿಯೋ ಅಜಾಗರೂಕತೆಯಿಂದಲೋ ಶಾಸನವಿಧಿಗಳಲ್ಲಿದ್ದ, ಏಷ್ಯನರ ಪರವಾಗಿ ಅರ್ಥಮಾಡಬಹುದಾದ ಸಂದುಗಳೆಲ್ಲವನ್ನೂ ಮುಚ್ಚುವ ಹೆಚ್ಚಿನ ಅಧಿಕಾರ ಸರಕಾರಕ್ಕೆ ಇರಬೇಕು. ಈ ನೀತಿಯಲ್ಲಿ ತಪ್ಪು ಏನು ಇಲ್ಲ. ಶಾಸನಗಳು ತಪ್ಪಾಗಿದ್ದರೆ ರದ್ದುಗೊಳಿಸಬೇಕು; ಸರಿಯಾಗಿದ್ದರೆ ಅವುಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸಬೇಕು ಮಂತ್ರಿಗಳು ಈ ಶಾಸನಗಳನ್ನು ಜಾರಿಗೆ ತರಬೇಕೆಂದು ನಿಶ್ಚಯಿಸಿದರು. ಯುದ್ಧ ಕಾಲದಲ್ಲಿ ಭಾರತೀಯರು ಬ್ರಿಟಿಷರೊಂದಿಗೆ ಹೆಗಲುಕೊಟ್ಟು, ತಮ್ಮ ಪ್ರಾಣವನ್ನು ಅಪಾಯಕ್ಕೀಡು ಮಾಡಿಕೊಂಡಿದ್ದರು. ಆದರೆ ಆಗಲೇ ಅದು ಮೂರು ನಾಲ್ಕು ವರ್ಷಗಳ ಹಿಂದಿನ ಕಥೆಯಾಗಿತ್ತು. ಹಿಂದಿನ ಆಡಳಿತದಲ್ಲಿ ಪ್ರೆಟೋರಿಯಾದ ಬ್ರಿಟಿಷ್ ಪ್ರತಿನಿಧಿ ಭಾರತೀಯರ ಪರ ವಹಿಸಿ ಕಾದಾಡಿದ್ದನು. ಭಾರತೀಯರ ಕಷ್ಟಗಳು ಯುದ್ಧಘೋಷಣೆಗೆ ಒಂದು ಕಾರಣವಾಗಿತ್ತು; ಆದರೆ ಸ್ಥಳವಿದ್ಯಮಾನವರಿಯದ, ಮುಂದಾಲೋಚನೆ ಇಲ್ಲದ ರಾಜಕಾರಣಿಗಳು ಆ ಘೋಷಣೆ ಮಾಡಿದ್ದರು. ಹಿಂದಿನ ಬೋಅರ್ ಸರಕಾರದವರು ನಿರ್ಮಿಸಿದ್ದ ಭಾರತೀಯರ ವಿರುದ್ಧ ಶಾಸನಗಳು ಅಷ್ಟೇನೂ ಕಷ್ಟತಮವಲ್ಲವೆಂದೂ, ಉದ್ದೇಶಪೂರ್ವಕವಲ್ಲವೆಂದೂ ಸ್ಥಳೀಯ ಅಧಿಕಾರಿಗಳು ಹೇಳತೊಡಗಿದರು. ಭಾರತೀಯರು ಯಾವಾಗಬೇಕಾದರೆ ಆಗ ಟ್ರಾನ್ಸವಾಲಿಗೆ ಬಂದು, ಎಲ್ಲಿ ಬೇಕಾದರೆ ಅಲ್ಲಿ ವ್ಯಾಪಾರ ಮಾಡತೊಡಗಿದರೆ ಯೂರೋಪಿಯನ್ ವ್ಯಾಪಾರಿಗಳು ಬಹಳ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಇವು ಮತ್ತು ಇದೇ ಮಾದರಿಯ ವಾದಗಳು ಯೂರೋಪಿಯನರಿಗೂ ಮಂತ್ರಿ ಮಂಡಲದಲ್ಲಿನ ಅವರ ಪ್ರತಿನಿಧಿಗಳಿಗೂ ಬಹಳ ಆಪ್ಯಾಯಮಾನವಾದುವು. ಆದಷ್ಟು ಅಲ್ಪಾವಧಿಯಲ್ಲಿ ದೊರೆತಷ್ಟು ಧನವನ್ನು ಗಳಿಸುವುದೇ ವ್ಯಾಪಾರಿಗಳ ಗುರಿಯಾಗಿತ್ತು. ಭಾರತೀಯರು ಅದರಲ್ಲಿ ಪಾಲಿಗೆ ಬಂದರೆ ಸಹಿಸುವುದಾದರೂ ಹೇಗೆ? ಬೂಟಾಟಿಕೆ

ರಾಜಕೀಯ ನೀತಿಯನ್ನು ದುರುಪಯೋಗಪಡಿಸಿಕೊಂಡು ಕಣ್ಣಿಗೆ ಮಣ್ಣೆರಚುವ ಕಾರಣವನ್ನು ಹುಡುಕಿತು. ಸ್ವಾರ್ಥ ವ್ಯಾಪಾರ ಧರ್ಮವನ್ನು ಸ್ಪಷ್ಟವಾಗಿ ವರ್ಣಿಸಿದ್ದರೆ ದಕ್ಷಿಣ ಆಫ್ರಿಕದ ಯೂರೋಪಿಯನ್ ಬುದ್ಧಿವಂತರು ಒಪ್ಪುತ್ತಿರಲಿಲ್ಲ. ಅನ್ಯಾಯವನ್ನು ಸಮರ್ಥಿಸಲು ಹೂಡುವ ವಾದಕ್ಕೆ ಬಣ್ಣದ ಮೆರುಗನ್ನು ಕೊಡಲು ಮನುಷ್ಯನ ಬುದ್ಧಿ ಹಾತೊರೆಯುತ್ತಿರುತ್ತದೆ. ದಕ್ಷಿಣ ಆಫ್ರಿಕದ ಯೂರೋಪಿಯನರು ಈ ಸಾಮಾನ್ಯ ನಿಯಮಕ್ಕೆ ಹೊರತಾಗಿರಲಿಲ್ಲ. ಜನರಲ್ ಸ್ಮಟ್ಸ್ ಮುಂತಾದವರು ಹೂಡಿದ ವಾದ ಹೀಗಿತ್ತು:

"ದಕ್ಷಿಣ ಆಫ್ರಿಕ ಪಾಶ್ಚಾತ್ಯ ಸಂಸ್ಕೃತಿಯ ಪ್ರತಿನಿಧಿ ಕೇಂದ್ರ; ಭಾರತ ಪೌರ್ವಾತ್ಯ ಸಂಸ್ಕೃತಿಯ ಕೇಂದ್ರ. ಈ ಎರಡು ಸಂಸ್ಕೃತಿಗಳೂ ಒಂದುಗೂಡಲಾರವೆಂದು ಇಂದಿನ ಶಾಸ್ತ್ರವೇತ್ತರ ಅಭಿಪ್ರಾಯ. ಈ ವಿರೋಧ ಸಂಸ್ಕೃತಿಗಳ ಪ್ರತಿನಿಧಿಗಳು ಸಣ್ಣ ಸಣ್ಣ ಗುಂಪುಗಳಾಗಿ ಸಂಧಿಸಿದರೂ ಪರಿಣಾಮ ಹಾನಿಕರ. ಪಾಶ್ಚಾತ್ಯರಿಗೆ ಸರಳ ಜೀವನ ವಿರೋಧ, ಪೌರ್ವಾತ್ಯರು ಅದಕ್ಕೆ ಮಾನವಪ್ರಧಾನ ಗುಣಗಳಲ್ಲಿ ಪ್ರಥಮ ಸ್ಥಾನವನ್ನು ಕೊಡುತ್ತಾರೆ. ಈ ಎರಡು ಪರಸ್ಪರ ವಿರೋಧ ದೃಷ್ಟಿಗಳು ಸೇರುವುದೆಂತು? ಇವುಗಳ ಗುಣಾವಗುಣಗಳನ್ನು ತೀರ್ಮಾನಿಸುವುದು ವ್ಯವಹಾರ ವ್ಯಕ್ತಿಗಳಾದ ರಾಜಕಾರಣಿಗಳ ಕೆಲಸವಲ್ಲ. ಪಾಶ್ಚಾತ್ಯ ಸಂಸ್ಕೃತಿ ಒಳ್ಳೆಯದಿರಬಹುದು ಅಥವಾ ಕೆಟ್ಟದಿರಬಹುದು, ಆದರೆ ಪಶ್ಚಾತ್ಯರು ಅದನ್ನೇ ಅನುಸರಿಸಲು ಇಷ್ಟಪಡುತ್ತಾರೆ. ಆ ಸಂಸ್ಕೃತಿಯ ಉಳಿವಿಗಾಗಿ ಅಪಾರ ತ್ಯಾಗ ಮಾಡಿದ್ದರೆ. ಅದಕ್ಕಾಗಿ ರಕ್ತದ ಕಾಲುವೆಗಳನ್ನು ಹರಿಸಿದ್ದಾರೆ. ಆ ಸಂಸ್ಕೃತಿಯ ರಕ್ಷಣೆಗಾಗಿ ಪಡಬಾರದ ಕಷ್ಟಗಳನ್ನು ಅನುಭವಿಸಿದ್ದಾರೆ. ಆದ್ದರಿಂದ ಈಗ ಅವರು ಹೊಸ ಮಾರ್ಗವನ್ನು ಅವಲಂಬಿಸುವುದು ಆಗಹೋಗದ ಕೆಲಸ. ಈ ದೃಷ್ಟಿಯಿಂದ ಯೋಚಿಸಿದರೆ ಭಾರತೀಯ ಪ್ರಶ್ನೆ ವ್ಯಾಪಾರದ್ವೇಷ ಅಥವಾ ವರ್ಣದ್ವೇಷದ ಪ್ರಶ್ನೆಯಾಗುವುದಿಲ್ಲ. ಅದು ಸಂಸ್ಕೃತಿಯ ಪ್ರಶ್ನೆ, ಅಂದರೆ ಸ್ವಸಂರಕ್ಷಣೆಯ ಶ್ರೇಷ್ಠ ಅಧಿಕಾರದ, ಅನುಭವದ ಮತ್ತು ತತ್ಸಂಬಂಧವಾದ ಕರ್ತವ್ಯನಿರ್ವಹಣೆಯ ಪ್ರಶ್ನೆಯಾಗುತ್ತದೆ. ಕೆಲವು ಸಾರ್ವಜನಿಕ ಭಾಷಣಕಾರರು ಭಾರತೀಯರಲ್ಲಿ ತಪ್ಪು ಹುಡುಕಿ ಯೂರೋಪಿಯನರನ್ನು ಉದ್ರೇಕಗೊಳಿಸಲು ಪ್ರಯತ್ನಿಸಹುದು; ಆದರೆ ಭಾರತೀಯರ ಸದ್ಗುಣಗಳೇ ದಕ್ಷಿಣ ಆಫ್ರಿಕದ ದುರ್ಗುಣಗಳೆಂದು ರಾಜಕೀಯವೇತ್ತರು ನಂಬಿ, ಹೇಳುತ್ತಲಿದ್ದಾರೆ. ಭಾರತೀಯರ ಸರಳ ಜೀವನ, ತಾಳ್ಮೆ, ಕಷ್ಟಸಹಿಷ್ಣುತೆ, ಮಿತವ್ಯಯ ಮತ್ತು ಪಾರಮಾರ್ಥಿಕ ದೃಷ್ಟಿ– ಇವುಗಳಿಗಾಗಿಯೇ ದಕ್ಷಿಣ ಆಫ್ರಿಕದ ಜನರು ಭಾರತೀಯರನ್ನು ದ್ವೇಷಿಸುತ್ತಾರೆ. ಪಾಶ್ಚಾತ್ಯರು ಮುಂದೋಡುವವರು, ಆತುರರು, ತಮ್ಮ ಪ್ರಾಪಂಚಿಕ ಭೋಗ್ಯವಸ್ತುಗಳ ಆಸೆಯನ್ನು ಹೆಚ್ಚಿಸುವುದರಲ್ಲಿ ಮತ್ತು ಆ ಆಸೆಯನ್ನು ತೃಪ್ತಿಗೊಳಿಸುವುದರಲ್ಲಿ ಮಗ್ನರಾದವರು, ಹರ್ಷಚಿತ್ತರು, ದೇಹಶ್ರಮ ಕಡಮೆ ಮಾಡಲು ಆಸಕ್ತರು, ದುಂದುಗಾರರು. ಆದ್ದರಿಂದ ಸಾವಿರಾರು ಜನ ಪೌರ್ವಾತ್ಯರು ದಕ್ಷಿಣ ಆಫ್ರಿಕದಲ್ಲಿ ಬಂದು ನೆಲಸಿದರೆ ತಮ್ಮ ಅವಸ್ಥೆ ಮುಗಿಯಿತೆಂದು ಪಾಶ್ಚಾತ್ಯರು ಭೀತರಾಗಿದ್ದಾರೆ. ದಕ್ಷಿಣ ಆಫ್ರಿಕ ಸ್ಥಿತಿ ಬರಲು ಅವರ ಮುಖಂಡರು ಆಸ್ಪದ ಕೊಡುವುದಿಲ್ಲ."

ಯೂರೋಪಿಯನರಲ್ಲಿ ಅತ್ಯಂತ ಗಣ್ಯರೆಂದು ಹೆಸರಾದವರು ಮುಂದಿಡುತ್ತಿದ್ದ

ವಾದವನ್ನು ನಿಷ್ಪಕ್ಷಪಾತವಾಗಿ ತಿಳಿಸಿದ್ದೇನೆಂದು ನನ್ನ ನಂಬಿಕೆ. ಅವರ ವಾದ ಮಿಥ್ಯಾದರ್ಶನವೆಂದು ನನ್ನ ಅಭಿಪ್ರಾಯ. ಆದರೆ ನಿರಾಧಾರವೆಂದು ನಾನು ಹೇಳಬಯಸುವುದಿಲ್ಲ. ವ್ಯವಹಾರದ ದೃಷ್ಟಿಯಿಂದ ಅಂದರೆ ಸ್ವಾರ್ಥದೃಷ್ಟಿಯಿಂದ ನೋಡಿದರೆ ಈ ವಾದವನ್ನು ಅರ್ಥಮಾಡಿಕೊಳ್ಳಬಹುದು; ಆದರೆ ದಾರ್ಶನಿಕ ದೃಷ್ಟಿಯಿಂದ ನೋಡಿದರೆ ಅದೆಲ್ಲವೂ ಶುದ್ಧ ಠಕ್ಕುತನ. ನನ್ನ ಅಭಿಪ್ರಾಯದಲ್ಲಿ ಯಾವ ನಿಷ್ಪಕ್ಷಪಾತಿಯಾದ ಮನುಷ್ಯನೂ ಈ ಅಭಿಪ್ರಾಯವನ್ನು ಸಮರ್ಥಿಸಲಾರ. ಯಾವ ಸುಧಾರಕನೂ ತನ್ನ ಸಂಸ್ಕಂತಿಯನ್ನು, ಈ ವಾದ ಹೂಡಿರುವವರು ತಮ್ಮ ಸಂಸ್ಕೃತಿಗೆ ಕಷ್ಟ ಒದಗಿದೆ ಎಂದು ಹೇಳುವ ನಿಸ್ಸಹಾಯಕ ಸ್ಥಿತಿಗೆ ಇಳಿಸಲು ಒಪ್ಪಲಾರನು. ಪಾಶ್ಚಾತ್ಯ ಜನಾಂಗಗಳು ಪೌರ್ವಾತ್ಯ ಜನಾಂಗಗಳೊಡನೆ ಸ್ವತಂತ್ರ ಸಂಬಂಧ ಬೆಳೆಸಿದರೆ ಪಾಶ್ಚಾತ್ಯ ಸಂಸ್ಕೃತಿಯ ಪ್ರವಾಹದೆದುರಿನಲ್ಲಿ ಪೌರ್ವಾತ್ಯ ಸಂಸ್ಕೃತಿ ಕೊಚ್ಚಿ ಹೋಗುವುದೆಂದು ಹೇಳಿರುವ ಮಟ್ಟಿಗೆ ಪೌರ್ವಾತ್ಯ ಸಂಸ್ಕೃತಿ ಪಾಶ್ಚಾತ್ಯ ಸಂಸ್ಕೃತಿಯೊಂದಿಗೆ ಸಂಬಂಧ ಬೆಳೆಸಲು ಹೆದರುವುದಿಲ್ಲ; ಅಲ್ಲದೆ ಅಂತಹ ಸಂಬಂಧವನ್ನು ಅತ್ಯಾದರದಿಂದ ಬರಮಾಡಿಕೊಳ್ಳುತ್ತದೆ. ಪೌರ್ವಾತ್ಯ ದೇಶಗಳಲ್ಲಿ ಎಲ್ಲಿಯಾದರೂ ವಿರೋಧ ನಿದರ್ಶನಗಳಿದ್ದರೆ ಅವು ನಾನು ಹೇಳಿದ ತತ್ವಕ್ಕೆ ಅನ್ವಯಿಸುವುದಿಲ್ಲ. ಏಕೆಂದರೆ, ಆ ತತ್ವದ ಸಮರ್ಥನೆಗೆ ಅನೇಕ ನಿದರ್ಶನಗಳನ್ನು ಕೊಡಬಹುದು. ಅದು ಏನೇ ಇರಲಿ, ಪಾಶ್ಚಾತ್ಯ ನೀತಿಜ್ಞರು ನ್ಯಾಯಕ್ಕಿಂತ ಪಾಶವೀಬಲವೇ ಪಾಶ್ಚಾತ್ಯ ಸಂಸ್ಕೃತಿಯ ಮುಖ್ಯ ತಳಹದಿ ಎಂದು ಹೇಳುತ್ತಾರೆ. ಆದ್ದರಿಂದ ಆ ಸಂಸ್ಕೃತಿಯ ಆರಾಧಕರು ತಮ್ಮ ಬಹುಮಟ್ಟಿನ ಕಾಲವನ್ನು ಪಾಶವೀಬಲದ ಪೋಷಣೆಗಾಗಿ ಉಪಯೋಗಿಸುತ್ತಾರೆ. ಯಾವ ಜನಾಂಗಗಳು ತಮ್ಮ ಭೋಗ್ಯ ವಸ್ತುಗಳ ಅವಶ್ಯಕತೆಯನ್ನು ಹೆಚ್ಚಿಸುವುದಿಲ್ಲವೋ ಅವು ನಾಶವಾಗುವುದೇ ಖಂಡಿತವೆಂದು ಸಹ ಈ ನೀತಿಜ್ಞರು ಹೇಳುತ್ತಾರೆ. ಈ ನೀತಿಗನುಸಾರವಾಗಿಯೇ ಪಾಶ್ಚಾತ್ಯ ಜನಾಂಗಗಳು ದಕ್ಷಿಣ ಆಫ್ರಿಕದಲ್ಲಿ ನೆಲಸಿ ತಮಗಿಂತಲೂ ಬಹುಸಂಖ್ಯಾತರಾದ ದಕ್ಷಿಣ ಆಫ್ರಿಕದ ನಿವಾಸಿಗಳನ್ನು ಗೆದ್ದು ಇರುವುದು. ಸಾಧು ಪ್ರಕೃತಿಯ ಭಾರತೀಯರಿಗೆ ಅವರು ಹೆದರುತ್ತಾರೆಂದು ಯೋಚಿಸುವುದು ಶುದ್ಧ ಮೂಢತನ. ಭಾರತೀಯರು ಎಂದೆಂದಿಗೂ ಕೂಲಿಗಳಾಗಿಯೇ ಬಂದು ಕೆಲಸ ಮಾಡಲು ಒಪ್ಪಿ ಇರಬಯಸಿದ್ದರೆ. ಭಾರತೀಯ ವಲಸೆಗಾರರ ಮೇಲೆ ಯಾವ ಚಳವಳಿಯೂ ಹುಟ್ಟುತ್ತಿರಲಿಲ್ಲವೆಂಬುದೇ ಯೂರೋಪಿಯನರು ಏಷ್ಯನರಿಗೆ ಹೆದರಬೇಕಾಗಿರಲಿಲ್ಲವೆಂಬುದಕ್ಕೆ ಮುಖ್ಯ ಸಾಕ್ಷಿಯಾಗಿತ್ತು.

ಇನ್ನುಳಿದ ಕಾರಣಗಳೆಂದರೆ ವ್ಯಾಪಾರ ಮತ್ತು ವರ್ಣ. ಭಾರತೀಯರ ವ್ಯಾಪಾರದಿಂದ ಯೂರೋಪಿಯನರಿಗೆ ಬಹಳ ನಷ್ಟವಾಗುವುದೆಂದೂ ಕಂದು ಬಣ್ಣದ ಜನರ ದ್ವೇಷದ ಯೂರೋಪಿಯನರ ಸಾಮಾನ್ಯ ಮನೋಭಾವನೆಯಾಗಿದೆ ಎಂದು ಸಾವಿರಾರು ಯೂರೋಪಿಯನರು ಒಪ್ಪಿದ್ದಾರೆ. ಶಾಸನ ರೀತ್ಯಾ ಸಮಾನಾಧಿಕಾರವಿದ್ದರೂ ಅತ್ಯಂತ ಉಚ್ಚ ಪಾಶ್ಚಾತ್ಯ ವಿದ್ಯೆಯನ್ನು ಪಡೆದು, ಗುಣಾಢ್ಯ ಕ್ರಿಶ್ಚಿಯನ್ ಎಂದು ಹೆಸರಾದ, ಪಾಶ್ಚಾತ್ಯ ಸಂಸ್ಕೃತಿಯನ್ನು ಸಂಪೂರ್ಣ ರಕ್ತಗತ ಮಾಡಿಕೊಂಡ ಬುಕರ್ ಕೊಡಬೇಕೆಂದೂ

ಟಿ.ವಾಷಿಂಗ್‌ಟನ್‌ನಂಥ ಮನುಷ್ಯನು ಅಮೇರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ರೂಸ್ ವೆಲ್ಟನ ಆಸ್ಥಾನಕ್ಕೆ ಹೋಗಲು ಅಪ್ಪಣೆ ಪಡೆಯಲು ಯೋಗ್ಯನೆಂದು ಯೂರೋಪಿಯನರು ಭಾವಿಸಲಿಲ್ಲ, ಪ್ರಾಯಶಃ ಇಂದಿಗೂ ಭಾವಿಸುವುದಿಲ್ಲ. ಅಮೇರಿಕದ ನೀಗ್ರೊ ಜನರು ಪಾಶ್ಚಾತ್ಯ ಸಂಸ್ಕೃತಿಯನ್ನು ಒಪ್ಪಿಕೊಂಡಿದ್ದಾರೆ; ಕ್ರೈಸ್ತಮತವನ್ನು ಅವಲಂಬಿಸಿದ್ದಾರೆ. ಆದರೆ ಅವರ ಚರ್ಮ ಕಪ್ಪು ಬಣ್ಣದಾದುದಕ್ಕೆ ಅವರದು ತಪ್ಪೆ? ಉತ್ತರದ ಸಂಸ್ಥಾನಗಳಲ್ಲಿ ಯೂರೋಪಿಯನರು ಅವರನ್ನು ಸಹವಾಸಕ್ಕೆ ಅಯೋಗ್ಯರೆಂದು ಹೀಯಾಳಿಸಿದರೆ ದಕ್ಷಿಣದ ಸಂಸ್ಥಾನಗಳಲ್ಲಿ ತಪ್ಪಿತಸ್ಥರೆಂದು ಸ್ವಲ್ಪ ಅನುಮಾನ ದೊರೆತರೆ ಅವರನ್ನು ಜೀವಸಹಿತ ಸುಲಿದುಬಿಡುತ್ತಾರೆ.

ಆದ್ದರಿಂದ ಮೇಲಿನ ವಾದದ 'ತತ್ವ'ದಲ್ಲಿ ಯಾವ ಹುರುಳೂ ಇಲ್ಲವೆಂಬುದು ಶತಸ್ಸಿದ್ಧ. ಆದರೆ ಈ ರೀತಿ ವಾದ ಮಾಡಿದವರೆಲ್ಲರೂ ಬೂಟಾಟಿಕೆಗಾಗಿ ಮಾಡಿದರೆಂದು ಮಾತ್ರ ತಿಳಿಯಬಾರದು. ಅವರಲ್ಲಿ ಅನೇಕರು ಈ ವಾದವೇ ಸರಿಯೆಂದು ಪ್ರಾಮಾಣಿಕವಾಗಿ ನಂಬುತ್ತಾರೆ. ನಾವು ಅವರ ಸ್ಥಾನದಲ್ಲಿದ್ದಿದ್ದರೆ ಪ್ರಾಯಶಃ ಅದೇ ವಾದವನ್ನು ಹೂಡುತ್ತಿದ್ದೆವೋ ಏನೋ! ನಮ್ಮಲ್ಲಿ 'ನಡೆ ಇದ್ದಂತೆ ನುಡಿ' ಎಂದು ಒಂದು ಗಾದೆ ಇದೆ. 'ಮನವಿದ್ದಂತೆ ಮಾತು' ಎಂದೂ ನಮ್ಮ ಮಾತು ಇತರರಿಗೆ ರುಚಿಸದಿದ್ದರೆ ನಮಗೆ ಅಸಮಾಧಾನ, ಅಶಾಂತಿ, ಕೋಪ ಸಹ ಉಂಟಾಗುತ್ತದೆಂದೂ ತಿಳಿಯದವರು ಯಾರಿದ್ದಾರೆ?

ವಾಚಕರು ಬೇರೆ ಬೇರೆ ದೃಷ್ಟಿಗಳನ್ನು ಅರ್ಥಮಾಡಿಕೊಳ್ಳಬೇಕೆಂದೂ ಇದುವರೆಗೂ ಆ ರೀತಿ ಮಾಡದೆ ಇದ್ದರೆ ಬೇರೆ ಬೇರೆ ಅಭಿಪ್ರಾಯಗಳಿಗೆ ಮನ್ನಣೆ ಕೊಟ್ಟು ಬೆಲೆ ಕೊಡತಕ್ಕ ಅಭ್ಯಾಸವನ್ನು ಕಲಿಯಲೆಂದೂ ಈ ಪ್ರಶ್ನೆಯನ್ನು ಇಲ್ಲಿ ಇಷ್ಟು ಸೂಕ್ಷ್ಮವಾಗಿ ಉದ್ದೇಶಪೂರ್ವಕವಾಗಿ ನಾನು ಚರ್ಚೆ ಮಾಡಿದ್ದೇನೆ.

ಸತ್ಯಾಗ್ರಹವನ್ನು ಅರ್ಥ ಮಾಡಿಕೊಳ್ಳಲು ಅಷ್ಟು ಉದಾರ ಮನಸ್ಸೂ ತಾಳ್ಮೆಯೂ ಅತ್ಯಾವಶ್ಯಕ: ಸತ್ಯಾಗ್ರಹದ ಅನುಷ್ಠಾನಕ್ಕಂತೂ ಅವು ಅನಿವಾರ್ಯವಾಗಿರಬೇಕಾದ ಗುಣಗಳು. ಈ ಗುಣಗಳಿಲ್ಲದೆ ಸತ್ಯಾಗ್ರಹ ಅಸಾಧ್ಯ. ಪುಸ್ತಕ ಬರೆಯಬೇಕೆಂದು ಮಾತ್ರ ನಾನು ಇದನ್ನು ಬರೆಯುತ್ತಿಲ್ಲ. ದಕ್ಷಿಣ ಆಫ್ರಿಕದ ಚರಿತ್ರೆಯ ಒಂದು ನೋಟವನ್ನು ಸಾರ್ವಜನಿಕರ ಮುಂದಿಡಬೇಕೆಂದೂ ಬರೆಯುತ್ತಿಲ್ಲ. ಯಾವ ಸತ್ಯಾಗ್ರಹಕ್ಕಾಗಿ ಜೀವಿಸುತ್ತಿದ್ದೇನೆಯೊ. ಯಾವ ಸತ್ಯಾಗ್ರಹಕ್ಕಾಗಿ ಜೀವಿಸಲು ಇಷ್ಟಪಡುತ್ತೇನೆಯೊ ಮತ್ತು ಯಾವುದಕ್ಕಾಗಿ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧನಿದ್ದೇನೆಯೊ ಆ ಸತ್ಯಾಗ್ರಹ ಪ್ರಾರಂಭವಾದ ಬಗೆ, ದೊಡ್ಡ ಪ್ರಮಾಣದಲ್ಲಿ ಅದನ್ನು ಅನುಸರಿಸಿದ ರೀತಿ–ಇವನ್ನು ಜನತೆ ತಿಳಿಯಲೆಂದೂ ತಿಳಿದು ಅರ್ಥ ಮಾಡಿಕೊಂಡು, ಇಷ್ಟ ಬಂದರೆ ಶಕ್ತಿ ಇರುವ ಮಟ್ಟಿಗೆ ಅನುಷ್ಠಾನಕ್ಕೆ ತರಲೆಂದೂ ಈ ಪುಸ್ತಕವನ್ನು ಬರೆಯುತ್ತಿದ್ದೇನೆ.

ಇನ್ನು ಕಥೆಯನ್ನು ಮುಂದುವರಿಸುತ್ತೇನೆ. ಹೊಸದಾಗಿ ಭಾರತೀಯ ವಲಸೆಗಾರರು ಯಾರು ಟ್ರಾನ್ಸಾ ವಾಲ್ ಪ್ರವೇಶಿಸದಂತೆ ತಡೆಯಬೇಕೆಂದೂ ಅಲ್ಲಿದ್ದ ಭಾರತೀಯರು ಕೇವಲ ಜುಗುಪ್ಸೆಯಿಂದಲೇ ದೇಶಭ್ರಷ್ಟರಾಗಿ ಹೋಗುವಂತೆ ಸಹಿಸಲಸಾಧ್ಯವಾದ ಕಷ್ಟ

ಒಂದು ವೇಳೆ ದೇಶವನ್ನು ಬಿಟ್ಟು ಹೋಗದಿದ್ದರೆ ಅವರ ಸ್ಥಿತಿ ಗುಲಾಮಗಿರಿಗೆ ಸಮಾನವಾಗಿರಬೇಕೆಂದೂ ಬ್ರಿಟಿಷ್ ಅಧಿಕಾರಿಗಳು ತೀರ್ಮಾನಿಸಿದುದನ್ನು ನೋಡಿದ್ದೇವೆ. ದಕ್ಷಿಣ ಆಫ್ರಿಕದ ಪ್ರಸಿದ್ಧ ರಾಜಕೀಯ ವ್ಯಕ್ತಿಗಳೆಂದು ಹೆಸರಾದ ಕೆಲವರು, ಭಾರತೀಯರಿಗೆ ಸೌದೆ ಒಡೆಯಲು ಮತ್ತು ನೀರು ಎಳೆಯಲು ಮಾತ್ರ ಅವಕಾಶ ಕೊಡುವುದಾಗಿ ಅನೇಕ ಬಾರಿ ಹೇಳಿದ್ದಾರೆ. ದ್ವಿದಳರಾಜ್ಯ ಪದ್ಧತಿಯ ಪ್ರತಿಪಾದಕನೆಂದು ಈಗ ಭಾರತದಲ್ಲಿ ಹೆಸರಾದ ಲಯೊನಲ್ ಕರ್ಟಿಸ್ ಎಂಬಾತನು ಆಗ ಏಷ್ಯಾಟಿಕ್ ಇಲಾಖೆಯ ಅಧಿಕಾರಿಗಳಲ್ಲೊಬ್ಬನಾಗಿದ್ದನು. ಯುವಕನಾಗಿದ್ದ ಈತನಲ್ಲಿ ಲಾರ್ಡ ಮಿಲ್ನರ್‌ಗೆ ಬಹಳ ವಿಶ್ವಾಸವಿತ್ತು. ಎಲ್ಲವನ್ನೂ ಶಾಸ್ತ್ರೀಯವಾಗಿ ಮಾಡಬಲ್ಲೆನೆಂಬ ಹೆಮ್ಮೆ ಕರ್ಟಿಸ್‌ಗೆ ಇತ್ತು; ಆದರೆ ಒಂದೊಂದು ವೇಳೆ ಅವನು ಮಹಾಪರಾಧಗಳನ್ನು ಮಾಡುತ್ತಿದ್ದನು. ಅಂಥ ಒಂದು ತಪ್ಪಿನಿಂದ ಜೋಹಾನ್ಸ ಬರ್ಗ ನಗರಸಭೆಗೆ ೧೪,೦೦೦ ಪೌಂಡು ನಷ್ಟವಾಯಿತು. ಹೊಸದಾಗಿ ಭಾರತೀಯರು ವಲಸೆ ಬರುವುದನ್ನು ನಿಲ್ಲಿಸಬೇಕಾದರೆ ದಕ್ಷಿಣ ಆಫ್ರಿಕಕ್ಕೆ ಮೊದಲೆ ಬಂದು ನೆಲಸಿದ ಭಾರತೀಯರೆಲ್ಲರೂ ರಿಜಿಸ್ಟರ್ ಮಾಡಿಸಿಕೊಳ್ಳಬೇಕಾದ್ದು ಪ್ರಥಮೋಪಾಯವೆಂದು ಸಲಹೆ ಕೊಟ್ಟನು. ಆ ರೀತಿ ರಿಜಿಸ್ಟರ್ ಮಾಡಿಸಿದರೆ ಮರೆಮಾಚಿ ಯಾರು ಕದ್ದುಬರುವಂತೆ ಇರಲಿಲ್ಲ. ಒಂದು ವೇಳೆ ಬಂದರೂ ಅವರನ್ನು ಪತ್ತೆಹಚ್ಚುವುದು ಸುಲಭವಾಗುವುದು. ಟ್ರಾನ್ಸ್ ವಾಲಿನಲ್ಲಿ ಬ್ರಿಟಿಷ್ ಆಡಳಿತ ಏರ್ಪಟ್ಟಮೇಲೆ ಕೊಟ್ಟ ಎಲ್ಲ ರಹದಾರಿ ಪತ್ರಗಳಲ್ಲೂ ರಹದಾರಿ ಪಡೆದವನ ರುಜು ಆಗಲಿ ಅಕ್ಷರಸ್ಥನಲ್ಲದಿದ್ದರೆ ಹೆಬ್ಬಟ್ಟಿನ ಗುರುತಾಗಲಿ ಇರುತ್ತಿತ್ತು. ಅನಂತರ ರಹದಾರಿ ಪಡೆದವನ ಭಾವಚಿತ್ರವಿರಬೇಕೆಂದು ಯಾರೋ ಸಲಹೆ ಕೊಟ್ಟರು. ಅದಕ್ಕೆ ಶಾಸನದ ಬದಲಾವಣೆ ಅನವಶ್ಯವಾದ್ದರಿಂದ ಅಧಿಕಾರಿಗಳು ಅದನ್ನೂ ಜಾರಿಗೆ ತಂದರು. ಈ ಹೊಸ ಪದ್ಧತಿ ಭಾರತೀಯ ಮುಖಂಡರಿಗೆ ಒಡನೆ ಗೊತ್ತಾಗಲಿಲ್ಲ. ಕ್ರಮೇಣ ಈ ಹೊಸ ಪದ್ಧತಿಗಳು ನಮಗೆ ತಿಳಿದಾಗ ಅಧಿಕಾರಿಗೆ ಬಿನ್ನವತ್ತಳೆಗಳನ್ನು ಒಪ್ಪಿಸಿದೆವು; ನಿಯೋಗಗೋಷ್ಠಿಗಳನ್ನು ಕಳುಹಿಸಿ ಮುಖತಃ ಅರಿಕೆ ಮಾಡಿದೆವು. ಯಾವುದಾದರೂ ಒಂದು ವಿಧಿ ಪೂರ್ವಕವಾದ ರೀತಿ ಇಲ್ಲದೆ ಭಾರತೀಯರನ್ನು ದೇಶದೊಳಕ್ಕೆ ಬಿಡುವಂತೆ ಇಲ್ಲವೆಂದೂ ಆದ್ದರಿಂದ ರಹದಾರಿ ಪಡೆದವರ ಹೊರತು ಬೇರೆ ಯಾರೂ ದೇಶದೊಳಕ್ಕೆ ಬರದಂತೆ ಅವಶ್ಯವಾದ ವಿವರಗಳಿರುವ ಒಂದೇ ಮಾದರಿಯ ರಹದಾರಿಗಳನ್ನು ಎಲ್ಲ ಭಾರತೀಯರೂ ಪಡೆಯಬೇಕಾದ್ದು ಅವಶ್ಯವೆಂದೂ ಅಧಿಕಾರಿಗಳು ವಾದಿಸಿದರು. ಕಾನೂನು ಪ್ರಕಾರ ಅಂತಹ ರಹದಾರಿಗಳನ್ನು ನಾವು ಪಡೆಯ ಬೇಕಾದ ಅವಶ್ಯಕತೆ ಇಲ್ಲದಿದ್ದರೂ ಶಾಂತಿರಕ್ಷಣಾ ಕಾನೂನು ಜಾರಿಯಲ್ಲಿ ಇರುವವರೆಗೂ ಅಂತಹ ರಹದಾರಿಗಳನ್ನು ಪಡೆಯಲು ಸರಕಾರದವರು ಒತ್ತಾಯ ಪಡಿಸಬಹುದೆಂದು ನನ್ನ ಅಭಿಪ್ರಾಯವಾಗಿತ್ತು. ದಕ್ಷಿಣ ಆಫ್ರಿಕದ ಶಾಂತಿ ರಕ್ಷಣಾಶಾಸನ ಭಾರತದ ರಕ್ಷಣಾಶಾಸನದಂತೆ ಇತ್ತು. ಜನರಿಗೆ ಹಿಂಸೆ ಕೊಡಲು ಭಾರತದ ರಕ್ಷಣಾಶಾಸನವನ್ನು ಯಾವ ರೀತಿ ಅವಶ್ಯ ಪರಿಮಿತಿಗಿಂತ ಹೆಚ್ಚು ಕಾಲ ಶಾಸನ ಕಡತದಲ್ಲಿಡಲಾಯಿತೊ, ಅದರಂತೆ ದಕ್ಷಿಣ ಆಫ್ರಿಕದಲ್ಲಿ ಸಹ, ಭಾರತೀಯರಿಗೆ ಹಿಂಸೆ ಕೊಡಲು, ಅವಶ್ಯಕತೆ ಇಲ್ಲದಿದ್ದರೂ ಈ ಶಾಸನವನ್ನು ಕಡತದಲ್ಲಿಡಲಾಗಿತ್ತು.

ಯೂರೋಪಿಯನರಿಗೆ ಕಾರ್ಯತಃ ಅದು ನಿರ್ಜೀವ ಶಾಸನವಾಗಿತ್ತು. ರಹದಾರಿಗಳನ್ನು ಪಡೆಯಬೇಕಾದರೆ ಅದರಲ್ಲಿ ಏನಾದರೂ ಗುರುತಿನ ಚಿಹ್ನೆ ಇರಬೇಕು. ಆದ್ದರಿಂದ ಅಕ್ಷರಸ್ಥರಲ್ಲದವರು ಹೆಬ್ಬೆಟ್ಟಿನ ಗುರುತು ಹಾಕಬೇಕೆಂದು ಒತ್ತಾಯ ಮಾಡುವುದರಲ್ಲಿ ತಪ್ಪೇನೂ ಇರಲಿಲ್ಲ. ಆದರೆ ಭಾವಚಿತ್ರಗಳನ್ನು ಇಡುವ ಪದ್ಧತಿಯನ್ನು ನಾನು ಒಪ್ಪಲಿಲ್ಲ. ಅಲ್ಲದೆ ಮುಸಲ್ಮಾನರ ಧರ್ಮಕ್ಕೆ ಅದು ವಿರುದ್ಧವಿತ್ತು.

ಭಾರತೀಯರಿಗೂ ಅಧಿಕಾರಿಗಳಿಗೂ ನಡೆದ ಈ ಸಂಧಾನದಲ್ಲಿ ಕೊನೆಗೆ, ಭಾರತೀಯರು ಹಳೆಯ ರಹದಾರಿಗಳಿಗೆ ಪ್ರತಿಯಾಗಿ ಹೊಸ ರಹದಾರಿಗಳನ್ನು ಪಡೆಯಬೇಕೆಂದೂ ಹೊಸದಾಗಿ ವಲಸೆ ಬರುವವರು ಹೊಸ ನಮೂನೆಯಲ್ಲಿ ರಹದಾರಿ ಪಡೆಯಬೇಕೆಂದೂ ತೀರ್ಮಾನಕ್ಕೆ ಬಂದೆವು. ಕಾನೂನು ಪ್ರಕಾರ ಭಾರತೀಯರು ಬದ್ಧರಲ್ಲದೆ ಹೋದರೂ, ಹೊಸ ನಿರ್ಬಂಧಗಳನ್ನು ತಮ್ಮ ಮೇಲೆ ಹೊರಿಸಲಾರರೆಂದೂ ಅನ್ಯಾಯವಾದ ಮಾರ್ಗಗಳಿಂದ ಹೊಸ ವಲಸೆಗಾರರನ್ನು ತಂದು ತುಂಬುವುದು ಭಾರತೀಯರ ಇಷ್ಟವಾಗಿರಲಿಲ್ಲವೆಂದೂ ಹೊಸದಾಗಿ ಬರುವವರಿಗೆ ತೊಂದರೆ ಕೊಡಲು ಶಾಂತಿರಕ್ಷಣಾ ಕಾನೂನನ್ನು ಉಪಯೋಗಿಸುವುದು ತರವಲ್ಲವೆಂಬುದು ಸಂಬಂಧಪಟ್ಟವರಿಗೆಲ್ಲ ಸ್ಪಷ್ಟವಾಗಲೆಂದೂ ಭಾರತೀಯರು ರಿಜಿಸ್ಟರ್ ಮಾಡಿಸಿಕೊಳ್ಳಲು ತಾವೇ ಮುಂದೆ ಬಂದರು. ಮುಕ್ಕಾಲುಪಾಲು ಎಲ್ಲ ಭಾರತೀಯರು ತಮ್ಮ ರಹದಾರಿಗಳನ್ನು ಬದಲಾಯಿಸಿ ಹೊಸ ರಹದಾರಿಗಳನ್ನು ಪಡೆದರು. ಇದು ಅಲ್ಪ ವಿಷಯವಲ್ಲ. ಕಾನೂನು ಪ್ರಕಾರ ಬದ್ಧರಲ್ಲದೆ ಹೋದರೂ ನಮ್ಮ ಜನರು ಎಲ್ಲರೂ ಒಬ್ಬ ಮನುಷ್ಯನಂತೆ ಕಾಲವಿಲಂಬವಿಲ್ಲದೆ ರಿಜಿಸ್ಟ್ರೇಷನ್ ಕಾರ್ಯವನ್ನು ಮುಗಿಸಿದರು. ಅವರ ಸತ್ಯಶೀಲತೆ, ಬುದ್ಧಿವಂತಿಕೆ, ಉದಾರ ಮನಸ್ಸು, ವ್ಯವಹಾರನೀತಿ ತಾಳ್ಮೆಗಳಿಗೆ ಇದೊಂದೇ ಸಾಕ್ಷಿ. ಅಲ್ಲದೆ ಟ್ರಾನ್ಸ್ ವಾಲಿನಲ್ಲಿ ಜಾರಿಯಲ್ಲಿದ್ದ ಯಾವ ಶಾಸನವನ್ನೂ ಉಲ್ಲಂಘಿಸಲು ನಮ್ಮ ಜನರಿಗೆ ಇಷ್ಟವಿರಲಿಲ್ಲವೆಂಬುದನ್ನೂ ತೋರಿಸುತ್ತದೆ. ಸರಕಾರದೊಡನೆ ಅನುನಯದಿಂದ ನಡೆದರೆ ತಮ್ಮನ್ನು ಸರಕಾರವೂ ಗೌರವಿಸುವುದೆಂದೂ ಹೊಸ ಹಕ್ಕುಗಳು ದೊರೆಯಬಹುದೆಂದೂ ಭಾರತೀಯರಿಗೆ ಟ್ರಾನ್ಸ್ವಾಲಿನ ಬ್ರಿಟಿಷ್ ಸರಕಾರ ಯಾವ ಬಹುಮಾನ ಕೊಟ್ಟಿತು ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ತಿಳಿಸುತ್ತೇನೆ.

೧೧. ಸಭ್ಯತೆಗೆ ಬಹುಮಾನ–ಕರಾಳಶಾಸನ

೧೯೦೬ ರ ಮಧ್ಯಭಾಗದ ಹೊತ್ತಿಗೆ ಪುನಃ ರಿಜಿಸ್ಟರ್ ಮಾಡಿಸಿಕೊಳ್ಳುವ ಈ ಕಾರ್ಯ ಮುಗಿಯಿತು. ಟ್ರಾನ್ಸ್ ವಾಲಿಗೆ ನಾನು ಮತ್ತೆ ಬಂದು ಜೋಹಾನ್ಸ ಬರ್ಗನಲ್ಲಿ ನನ್ನ ಕಚೇರಿಯನ್ನು ಪ್ರಾರಂಭಿಸಿದ್ದು ೧೯೦೩ರ ಮಧ್ಯಭಾಗದಲ್ಲಿ. ಏಷ್ಯಾಟಿಕ್ ಇಲಾಖೆಯವರ ಆಕ್ರಮಣವನ್ನು ತಡೆಗಟ್ಟುವುದರಲ್ಲಿಯೇ ಈ ರೀತಿ ಎರಡು ವರ್ಷಗಳು ಕಳೆದುಹೋಗಿದ್ದುವು. ಈ ರೀತಿ ರಿಜಿಸ್ಟರ್ ಮಾಡಿಸಿದ್ದರಿಂದ ಸರಕಾರಕ್ಕೆ ಸಮಾಧಾನವಾಗುವುದಾಗಿಯೂ ಇನ್ನು ಮುಂದೆ ನಮ್ಮ ಜನರು ನೆಮ್ಮದಿಯಿಂದ

ಜೀವನ ನಡೆಸಬಹುದಾಗಿಯೂ ನಂಬಿದ್ದೆವು. ಆದರೆ ಅದು ಎಲ್ಲಿ ಸಾಧ್ಯ? ಲಯೊನಲ್ ಕರ್ಟಿಸ್‌ನ ಪರಿಚಯವನ್ನು ಆಗಲೇ ಮಾಡಿಕೊಟ್ಟಿದ್ದೇನೆ. ಭಾರತೀಯರು ತಮ್ಮ ರಹದಾರಿಗಳನ್ನು ಬದಲಾಯಿಸಿದ ಮಾತ್ರದಿಂದ ಯೂರೋಪಿಯನರು ತಮ್ಮ ಧ್ಯೇಯವನ್ನು ಸಾಧಿಸಿದಂತಾಗಲಿಲ್ಲವೆಂದು ಆತನ ಅಭಿಪ್ರಾಯ. ಪರಸ್ಪರ ಒಪ್ಪಂದದಿಂದ ಉತ್ತಮ ಕಾರ್ಯಸಾಧನೆಯಾಗುವುದು ಆತನ ದೃಷ್ಟಿಗೆ ಒಪ್ಪಿಗೆ ಆಗಲಿಲ್ಲ. ಈ ಆಚರಣೆಗೆ ಶಾಸನದ ಮುದ್ರೆ ಇದ್ದರೇನೇ ಅದರ ಹಿಂದಿರುವ ತತ್ವ ಎಲ್ಲ ಕಾಲಕ್ಕೂ ಉಪಯುಕ್ತವಾಗುವುದೆಂದು ಆತನು ಭಾವಿಸಿದನು. ದಕ್ಷಿಣ ಆಫ್ರಿಕದಲ್ಲೆಲ್ಲ ಅದ್ಭುತ ಪರಿಣಾಮವನ್ನುಂಟುಮಾಡಿ, ಸಾಮ್ರಾಜ್ಯದ ಇತರ ಡೊಮಿನಿಯನ್ ರಾಷ್ಟ್ರಗಳೂ ಅನುಕರಿಸಲು ಮಾದರಿಯಾಗಿರುವಂತೆ ಭಾರತೀಯರ ಮೇಲೆ ನಿರ್ಬಂಧಗಳನ್ನು ಹಾಕಬೇಕೆಂದು ಯೋಚಿಸಿದನು. ದಕ್ಷಿಣ ಆಫ್ರಿಕದಲ್ಲಿ ಯಾವ ಒಂದು ಸ್ಥಳದಲ್ಲಿ ಭಾರತೀಯರಿಗೆ ಅವಕಾಶ ದೊರೆತರೂ ಟ್ರಾನ್ಸ್‌ವಾಲ್ ಸುರಕ್ಷಿತವಾಗಿರುವುದಿಲ್ಲವೆಂದು ಆತನು ಭಾವಿಸಿದನು. ಅದೂ ಅಲ್ಲದೆ ಪರಸ್ಪರ ರಾಜಿಯಿಂದ ಪುನಃ ರಿಜಿಸ್ಟ್ರೇಷನ್ ಆದರೆ ಭಾರತೀಯರ ಗೌರವ ಹೆಚ್ಚುತ್ತಿತ್ತು; ಆದರೆ ಭಾರತೀಯರಿಗೆ ಅದಷ್ಟು ಮುಖಭಂಗ ಮಾಡುವುದೇ ಆತನ ಉದ್ದೇಶವಾಗಿತ್ತು. ಆತನಿಗೆ ಭಾರತೀಯರ ಸಹಕಾರ ಬೇಕಿರಲಿಲ್ಲ. ಕ್ರೂರ ಶಾಸನಗಳನ್ನು ವಿಧಿಸಿ, ಅಷ್ಟದಿಗ್ಬಂಧನಗಳನ್ನು ಹಾಕಿ ಬೆದರಿಕೆಯಿಂದ ಭಾರತೀಯರನ್ನು ಬಗ್ಗಿಸಬೇಕೆಂದಿದ್ದನು. ಆದ್ದರಿಂದ 'ಏಷ್ಯಾಟಿಕ್ ಬಿಲ್' ಎಂಬ ಒಂದು ಮಸೂದೆಯನ್ನು ರಚಿಸಿ ಆ ಮಸೂದೆಯನ್ನು ಶಾಸನವಾಗಿ ಮಾಡದಿದ್ದರೆ ಇರುವ ಶಾಸನಗಳ ಆಧಾರದ ಮೇಲೆ ಟ್ರಾನ್ಸ್ ವಾಲಿಗೆ ಕದ್ದುಮರೆಯಿಂದ ಬರುವ ಭಾರತೀಯರನ್ನು ತಡೆಗಟ್ಟುವುದಕ್ಕೂ ರಹದಾರಿ ಇಲ್ಲದ ನಿವಾಸಿಗಳನ್ನು ಹೊರಗೆ ಕಳುಹಿಸುವುದಕ್ಕೂ ಸಾಧ್ಯವಿಲ್ಲವೆಂದು ಸರಕಾರಕ್ಕೆ ತಿಳಿಸಿದನು. ಕರ್ಟಿಸ್‌ನ ಆಲೋಚನೆಗೆ ಸರಕಾರ ತಲೆತೂಗಿ, ಏಷ್ಯಾಟಿಕ್ ಶಾಸನದ ತಿದ್ದುಪಡಿ ಮಸೂದೆಯೊಂದನ್ನು ಶಾಸನಸಭೆಯ ಮುಂದೆ ತರುವುದಾಗಿ ಟ್ರಾನ್ಸ್ ವಾಲ್ ಗೆಜೆಟ್ ನಲ್ಲಿ ಪ್ರಸಿದ್ಧಪಡಿಸಿದರು.

ಈ ಮಸೂದೆಯ ವಿವರಗಳನ್ನು ಪ್ರಸ್ತಾಪಿಸುವ ಮುಂಚೆ ಒಂದು ಮುಖ್ಯ ಸಂಗತಿಯನ್ನು ಇಲ್ಲಿಯೇ ತಿಳಿಸಬಯಸುತ್ತೇನೆ. ಸತ್ಯಾಗ್ರಹ ಚಳವಳಿಗೆ ನಾನೇ ಕಾರಣನಾದ್ದರಿಂದ ನನ್ನ ಜೀವನದ ಕೆಲಸವು ವಿಷಯಗಳನ್ನು ಚೆನ್ನಾಗಿ ಗ್ರಹಿಸುವುದು ಅವಶ್ಯ. ಟ್ರಾನ್ಸ್ ವಾಲಿನಲ್ಲಿ ಭಾರತೀಯರ ಮೇಲೆ ವಿಶೇಷ ನಿರ್ಬಂಧಗಳನ್ನು ವಿಧಿಸುವ ಪ್ರಯತ್ನ ನಡೆಯುತ್ತಿರುವಾಗಲೇ ನೇಟಾಲಿನಲ್ಲಿ ಜುಲುದಂಗೆ ಎದ್ದಿತು. ಅದನ್ನು ದಂಗೆ ಎಂದು ಕರೆಯಲು ಆಗಲೂ ಅನುಮಾನ ಪಡುತ್ತಿದ್ದೆ. ಈಗಲೂ ಅನುಮಾನಪಡುತ್ತೇನೆ; ಆದರೆ ಯಾವಾಗಲೂ ಅದನ್ನು ದಂಗೆ ಎಂದೇ ಕರೆದಿದ್ದಾರೆ. ಬೋಅರ್ ಯುದ್ಧಕಾಲದಲ್ಲಿ ಮಾಡಿದಂತೆ ಈಗಲೂ ಅನೇಕ ಯೂರೋಪಿಯನ್ ನಿವಾಸಿಗಳು ಸ್ವಯಂಸೇವಕರಾಗಿ ಸೇರಿದರು. ನಾನು ನೇಟಾಲ್ ನಿವಾಸಿಯಾಗಿದ್ದುದರಿಂದ ಯುದ್ಧದಲ್ಲಿ ನಾನೂ ನನ್ನ ಸೇವೆ ಮಾಡ ಬಯಸಿದೆ. ನಮ್ಮ ಜನರ ಅಪ್ಪಣೆ ಪಡೆದು, ಸೈನ್ಯದ ಸಹಾಯಕ್ಕಾಗಿ

ಗಾಯಗೊಂಡವರನ್ನು ಸಾಗಿಸುವ 'ಸ್ಟ್ರೆಚರ್ ಬೇರರ್' ಪಡೆಯೊಂದನ್ನು ರಚಿಸಲು ಸರಕಾರದ ಅಪ್ಪಣೆ ಬೇಡಿದೆ. ಸರಕಾರದವರು ನನ್ನ ಕೋರಿಕೆಯನ್ನು ನೆರವೇರಿಸಿದರು. ಜೋಹಾನ್ಸ್ ಬರ್ಗಿನ ನನ್ನ ಮನೆಯನ್ನು ಬಿಟ್ಟು ನೇಟಾಲಿನಲ್ಲಿರುವ ಫೀನಿಕ್ಸ್‌ಗೆ ನನ್ನ ಮನೆಯವರನ್ನು ಕಳುಹಿಸಿದೆ. ನನ್ನ ಸಹೋದ್ಯೋಗಿಗಳು ಅಲ್ಲಿಗೆ ಹೋಗಿ ನೆಲಸಿ, 'ಇಂಡಿಯನ್ ಓಪಿನಿಯನ್' ಎಂಬ ಪತ್ರಿಕೆಯನ್ನು ನಡೆಸುತ್ತಿದ್ದರು. ಹಿಂದಿರುಗುವುದು ಬಹಳ ಕಾಲವಾಗಲಾರದೆಂದು ಜೋಹಾನ್ಸ್ ಬರ್ಗಿನಲ್ಲಿಯ ನನ್ನ ಕಛೇರಿಯನ್ನು ಮಾತ್ರ ಮುಚ್ಚಲಿಲ್ಲ.

ಇಪ್ಪತ್ತು ಇಪ್ಪತ್ತೈದು ಜನರ ಸಣ್ಣ ಪಡೆಯೊಂದಿಗೆ ನಾನು ಸೈನ್ಯವನ್ನು ಸೇರಿದೆ. ಈ ಸಣ್ಣ ಪಡೆಯಲ್ಲಿ ಸಹ ಭಾರತದ ಎಲ್ಲ ಪ್ರಾಂತಗಳ ಪ್ರತಿನಿಧಿಗಳು ಇದ್ದರು. ಒಂದು ತಿಂಗಳ ಕಾಲ ಈ ಪಡೆ ಯುದ್ಧದಲ್ಲಿ ಕೆಲಸಮಾಡಿತು. ಆಗ ಸೇವೆ ಸಲ್ಲಿಸಲು ನಮಗೆ ದೊರೆತ ಅವಕಾಶಭಾಗ್ಯಕ್ಕೆ ನಾನು ಯಾವಾಗಲೂ ದೇವರನ್ನು ವಂದಿಸುತ್ತೇನೆ. ನಾವು ಶುಶ್ರೂಷೆ ಮಾಡದೆ ಇದ್ದರೆ ಗಾಯಗೊಂಡ ಜುಲು ಜನರನ್ನು ಕೇಳುವವರೇ ಇರುತ್ತಿರಲಿಲ್ಲ. ಅವರ ಗಾಯಗಳಿಗೆ ಔಷಧಿ ಹಾಕಲು ಯೂರೋಪಿಯನ್ ಡಾಕ್ಟರುಗಳು ಯಾರೂ ಬರುತ್ತಿರಲಿಲ್ಲ. ಚಿಕಿತ್ಸಾಪಡೆಯೊಂದಿಗೆ ಇದ್ದ ಡಾಕ್ಟರ್ ಸ್ಯಾವೇಜರೇನೋ ಬಹಳ ದಯಾಳುಗಳು. ಗಾಯಗೊಂಡವರನ್ನು ಆಸ್ಪತ್ರೆಗೆ ಕರೆದೊಯ್ದ ಮೇಲೆ ಅವರ ಶುಶ್ರೂಷೆ ನಮ್ಮ ಕೆಲಸವಾಗಿರಲಿಲ್ಲ. ಆದರೆ ನಮ್ಮ ಕೆಲಸವಾಗಿರಲಿ ಇಲ್ಲದಿರಲಿ, ನಮ್ಮ ಕೈಲಾದ ಎಲ್ಲ ಸಹಾಯವನ್ನೂ ಮಾಡಬೇಕೆಂದೇ ನಾವು ಯುದ್ಧಕ್ಕೆ ಸೇರಿದ್ದೆವು. ಜುಲುಗಳಿಗೆ ಆರೈಕೆಮಾಡಲು ಯೂರೋಪಿಯನರನ್ನು ಒಪ್ಪಿಸಲು ತಮ್ಮಿಂದ ಆಗಲಿಲ್ಲವಾಗಿಯೂ, ಅವರನ್ನು ಬಲಾತ್ಕರಿಸಲು ಸಾಧ್ಯವಿಲ್ಲವಾಗಿಯೂ, ನಮ್ಮ ಪೈಕಿ ಯಾರಾದರೂ ಕರುಣೆಯಿಟ್ಟು ಕೆಲಸಕ್ಕೆ ಒಪ್ಪಿದರೆ ಉಪಕಾರ ಮಾಡಿದಂತಾಗುವದಾಗಿಯೂ ಡಾಕ್ಟರ್ ಸ್ಯಾವೇಜರು ತಿಳಿಸಿದರು. ಆ ರೀತಿ ಮಾಡಲು ಬಹಳ ಸಂತೋಷದಿಂದ ಒಪ್ಪಿದೆವು. ಐದಾರು ದಿನಗಳಾದರೂ ಚಿಕಿತ್ಸೆ ಇಲ್ಲದೆ ಕೊಳೆತು ದುರ್ವಾಸನೆಯಾಗಿದ್ದ ಗಾಯಗಳನ್ನು ತೊಳೆದು ಜುಲುಗಳಿಗೆ ಶುಶ್ರೂಷೆ ಮಾಡಬೇಕಾಯಿತು. ಆದರದಿಂದ ಕೆಲಸಮಾಡಿದೆವು. ಜುಲುಗಳು ನಮ್ಮೊಂದಿಗೆ ಮಾತನಾಡುವಂತೆ ಇರಲಿಲ್ಲ; ಆದರೆ ದೇವರೇ ನಮ್ಮನ್ನು ಶುಶ್ರೂಷೆಗೆ ಕಳುಹಿಸಿದನೆಂಬಂತೆ ಅವರ ಕಣ್ಣುಗಳು ಹೇಳುತ್ತಿದ್ದುವು.

ನಮ್ಮ ಕೆಲಸ ತೆರಪಿಲ್ಲದ, ಬಹು ಕಷ್ಟಕರವಾದ ಕಾರ್ಯವಾಗಿತ್ತು. ಒಂದೊಂದು ಸಮಯ ದಿನಕ್ಕೆ ನಲವತ್ತು ಮೈಲುಗಳಷ್ಟು ದೂರ ನಡೆದು ಹೋಗಬೇಕಾಗುತ್ತಿತ್ತು.

ಒಂದು ತಿಂಗಳಲ್ಲಿ ನಮ್ಮ ಪಡೆಯನ್ನು ರದ್ದುಗೊಳಿಸಲಾಯಿತು. ನಮ್ಮ ಪಡೆಯ ಕಾರ್ಯಭಾಗವನ್ನು ಯುದ್ಧವರದಿಗಳಲ್ಲಿ ಸೇರಿಸಲಾಗಿತ್ತು. ನಮ್ಮ ಪಡೆಯ ಪ್ರತಿ ಸದಸ್ಯನಿಗೂ, ಆ ಸಮಯಕ್ಕೆಂದೇ ತಯಾರಿಸಿದ ಬಹುಮಾನ ಪದಕಗಳನ್ನು ಕೊಟ್ಟರು. ಗವರ್ನರರು ವಂದನಾಪತ್ರ ಬರೆದರು. ಆ ಪಡೆಯ ಮೂರು ಜನ ಸಾರ್ಜೆಂಟ್ ಗಳು ಉಮಿಯ ಶಂಕರ ಮಂಚಾರಾಮ್ ಷೆಲತ್, ಸುರೇಂದ್ರರಾಯ್ ಬಾಪುಭಾಯ್ ಮೇಧ್, ಹರಿಶಂಕರ್ ಈಶ್ವರ ಜೋಶಿ ಎಂಬ ಗುಜರಾತಿಗಳು. ಈ ಮೂವರೂ ಆಜಾನುಬಾಹುಗಳಾಗಿ ಕಷ್ಟಪಟ್ಟು ಕೆಲಸ ಮಾಡುತ್ತಿದ್ದರು. ಇತರ ಭಾರತೀಯರ ಹೆಸರುಗಳು

ನನಗೆ ಜ್ಞಾಪಕವಿಲ್ಲ; ಆದರೆ ಅವರಲ್ಲಿ ಒಬ್ಬ ಪಠಾಣನಿದ್ದನು; ನಾವೂ ಆತನಂತೆ ಭಾರವನ್ನು ಹೊತ್ತು ಆತನ ಜೊತೆಯಲ್ಲೇ ನಡೆಯುತ್ತಲಿದ್ದುದನ್ನು ನೋಡಿ ಆತನು ಬಹಳ ಆಶ್ಚರ್ಯಪಡುತ್ತಿದ್ದನು.

ಆ ಪಡೆಯೊಂದಿಗೆ ನಾನು ಕೆಲಸ ಮಾಡುತ್ತಿದ್ದಾಗ ನನ್ನ ಮನಸ್ಸಿನಲ್ಲಿ ಬಹಳ ದಿನಗಳಿಂದ ಹೊಳೆದು ಅಲೆಯುತ್ತಿದ್ದ ಎರಡು ಯೋಚನೆಗಳು ಸ್ಥಿರವಾಗಿ ರೂಪುಗೊಂಡುವು. ತನ್ನ ಜೀವಮಾನವನ್ನು ಸಾರ್ವಜನಿಕ ಸೇವೆಗೆ ಮೀಸಲಾಗಿಟ್ಟವನು ಬ್ರಹ್ಮಚರ್ಯವನ್ನು ಪಾಲಿಸಬೇಕೆಂಬುದು ಮೊದಲನೆಯದು; ಜೀವಮಾನಪರ್ಯಂತ ಬಡತನವನ್ನು ಅವಲಂಬಿಸಬೇಕೆಂಬುದು ಎರಡನೆಯದು. ಅತ್ಯಂತ ನೀಚ ಕಾರ್ಯ ಮಾಡುವುದಕ್ಕೆ ಆಗಲಿ ಎಷ್ಟೇ ದೊಡ್ಡ ಅಪಾಯವನ್ನು ಎದುರಿಸುವುದಕ್ಕಾಗಲಿ ಹಿಂಜರಿಯುವಂತೆ ಮಾಡುವಂಥ ಅಥವಾ ತಡೆಗಟ್ಟುವಂಥ ಯಾವ ವೃತ್ತಿಯನ್ನೂ ಅವಲಂಬಿಸಬಾರದು.

ಈ ಪಡೆಯೊಂದಿಗೆ ಕೆಲಸ ಮಾಡುವಾಗಲೇ ನಾನು ಟ್ರಾನ್ಸ್ ವಾಲಿಗೆ ಕೂಡಲೆ ಬರಬೇಕೆಂದು ಕಾಗದಗಳು ತಂತಿಗಳೂ ಬಂದು ಸುರಿದಿದ್ದುವು. ಯುದ್ಧ ಮುಗಿದ ಒಡನೆ ಫೀನಿಕ್ಸ್ ನಲ್ಲಿ ನನ್ನ ಸ್ನೇಹಿರತನ್ನು ನೋಡಿ ತತ್‌ಕ್ಷಣವೇ ಜೋಹಾನ್ಸಬರ್ಗಿಗೆ ಹೊರಟೆ. ಅಲ್ಲಿ ಮೇಲೆ ಹೇಳಿದ ಕರಡು ಮಸೂದೆಯನ್ನು ಓದಿದೆನು. ೧೯೦೬ ನೆಯ ಆಗಸ್ಟ್ ೨೨ನೆಯ ತಾರೀಖಿನ ಮಸೂದೆಯನ್ನು ಪ್ರಸಿದ್ಧ ಪಡಿಸಿದ್ದ ಟ್ರಾನ್ಸ್ ವಾಲ್ ಸರಕಾರದ ವಿಶೇಷ ಗೆಜೆಟ್ಟಿನ ಪ್ರತಿಯನ್ನು ನನ್ನ ಕಚೇರಿಯಿಂದ ಮನೆಗೆ ತೆಗೆದುಕೊಂಡು ಬಂದೆ. ಒಬ್ಬ ಸ್ನೇಹಿತನೊಂದಿಗೆ ನನ್ನ ಮನೆ ಹತ್ತಿರ ಇದ್ದ ಗುಡ್ಡದ ಮೇಲೆ ಏರಿ, 'ಇಂಡಿಯನ್ ಓಪಿನಿಯನ್'ನಲ್ಲಿ ಪ್ರಕಟಿಸಲು ಆ ಶಾಸನವನ್ನು ಗುಜರಾತಿಗೆ ಭಾಷಾಂತರ ಮಾಡಲು ಪ್ರಾರಂಭಿಸಿದೆ. ಆ ಮಸೂದೆಯ ವಿಧಿಗಳನ್ನು ಒಂದಾಗುತ್ತಲೊಂದನ್ನು ಓದುತ್ತ ನನ್ನ ಮೈ ನಡುಗಿತು. ಭಾರತೀಯರ ದ್ವೇಷ ಹೊರತು ಅದರಲ್ಲಿ ಇನ್ನೇನೂ ನನಗೆ ತೋರಲಿಲ್ಲ. ಈ ಮಸೂದೆ ಶಾಸನವಾದರೆ ಭಾರತೀಯರು ಹೇಡಿಗಳಾಗಿ ಅದಕ್ಕೆ ಸುಮ್ಮನೆ ತಲೆಬಾಗಿದರೆ, ಅದರಿಂದ ದಕ್ಷಿಣ ಆಫ್ರಿಕದಲ್ಲಿ ಅವರಿಗೆ ಸರ್ವನಾಶವೆಂದು ನನಗೆ ತೋರಿತು. ಅವರ ಅಳಿವು ಉಳಿವಿನ ಪ್ರಶ್ನೆ ಇದೆಂದು ನನಗೆ ತೋರಿತು. ಬಿನ್ನವತ್ತಳೆ ಬೇಡಿಕೆಗಳಿಂದ ಪರಿಹಾರ ದೊರೆಯದಿದ್ದರೆ ಭಾರತೀಯರು ಕೈಕಟ್ಟಿಕೊಂಡು ಕುಳಿತುಕೊಳ್ಳಲಾಗದೆಂದು ಕಂಡಿತು. ಅಂತಹ ಶಾಸನಕ್ಕೆ ತಲೆಬಾಗುವುದಕ್ಕಿಂತಲೂ ಸಾಯುವುದು ಮೇಲು. ಆದರೆ ನಾವು ಸಾಯುವುದೆಂತು? ಗೆಲ್ಲಬೇಕು ಇಲ್ಲವೆ ಸಾಯಬೇಕು ಎಂಬ ಸ್ಥಿತಿಗೆ ಬರಬೇಕಾದರೆ ನಾವು ಮಾಡಬೇಕಾದ ಕಾರ್ಯವಾವುದು, ಎದುರಿಸಬೇಕಾದ ಸ್ಥಿತಿ ಏನು? ನನ್ನ ಎದುರಿಗೆ ಒಂದು ಗೋಡೆ ಅಡ್ಡ ನಿಂತಂತೆ ಇತ್ತು; ನನಗೆ ದಾರಿಯೇ ಕಾಣಲಿಲ್ಲ. ಓದಿದಾಗ ಮೈಯನ್ನು ನಡುಗಿಸಿಬಿಟ್ಟ ಆ ಮಸೂದೆಯ ವಿಧಿನಿಯಮಗಳನ್ನು ವಿವರಿಸುವುದು ಅವಶ್ಯಕ. ಅದರ ಸಾರಾಂಶವನ್ನು ಮುಂದೆ ತಿಳಿಸಿದ್ದೇನೆ.

ಟ್ರಾನ್ಸ್ ವಾಲಿನಲ್ಲಿ ವಾಸಮಾಡಲು ಅಧಿಕಾರವಿರುವ ಎಂಟು ವರ್ಷಕ್ಕೆ ಮೀರಿದ ಪ್ರತಿಯೊಬ್ಬ ಭಾರತೀಯ ಹೆಂಗಸು, ಗಂಡಸು ಅಥವಾ ಮಗು, ಆಕೆಯ ಅಥವಾ ಆತನ ಹೆಸರನ್ನು ಏಷ್ಯಾಟಿಕ್ ರಿಜಿಸ್ಟರ್‌ನಲ್ಲಿ ರಿಜಿಸ್ಟರ್ ಮಾಡಿಸಿ ರಿಜಿಸ್ಟ್ರೇಷನ್ ಪತ್ರವನ್ನು

ಪಡೆಯತಕ್ಕದ್ದು.

ರಿಜಿಸ್ಟ್ರೇಷನ್‌ಗೆ ಬರುವ ಅರ್ಜಿದಾರರು ತಮ್ಮ ಹಳೆಯ ರಹದಾರಿಗಳನ್ನು ರಿಜಿಸ್ಟ್ರಾರರಲ್ಲಿ ಕೊಟ್ಟು ತಮ್ಮ ಅರ್ಜಿಯಲ್ಲಿ ಹೆಸರು, ವಾಸಸ್ಥಾನ, ಜಾತಿ, ವಯಸ್ಸು ಮುಂತಾದ ವಿವರಗಳನ್ನು ತಿಳಿಸಬೇಕು. ರಿಜಿಸ್ಟ್ರಾರರು ಅರ್ಜಿದಾರನ ಮೈಮೇಲಿನ ಗುರುತಿನ ಮುಖ್ಯ ಚಿಹ್ನೆಗಳನ್ನು ಗುರುತು ಮಾಡಿ ಆತನ ಕೈ ಬೆರಳುಗಳ ಮತ್ತು ಹೆಬ್ಬೆಟ್ಟಿನ ಗುರುತುಗಳನ್ನು ತೆಗೆದುಕೊಳ್ಳಬೇಕು. ನಿಗದಿಯಾದ ತಾರೀಖಿನೊಳಗೆ ರಿಜಿಸ್ಟ್ರೇಷನ್ ಅರ್ಜಿ ಕೊಡದ ಪ್ರತಿಯೊಬ್ಬ ಭಾರತೀಯನಿಗೂ ಟ್ರಾನ್ಸ್‌ವಾಲಿನಲ್ಲಿ ವಾಸ ಮಾಡುವ ಹಕ್ಕು ತಪ್ಪುವುದು. ಅರ್ಜಿ ಕೊಡದೆ ಹೋದರೆ ಕಾನೂನು ಪ್ರಕಾರ ಅಪರಾಧವೆಂದು ಪರಿಗಣಿಸಿ, ಅಪರಾಧಿಗೆ ಜುಲ್ಮಾನೆ, ಸಜ ಅಥವಾ ಕೋರ್ಟಿನವರು ಇಷ್ಟಪಟ್ಟರೆ ಗಡಿಪಾರು ಸಹ ಮಾಡಬಹುದು. ಸಣ್ಣ ಮಕ್ಕಳ ಪರವಾಗಿ ತಾಯಿತಂದೆಗಳು ಅರ್ಜಿ ಹಾಕಿ ಅವರ ಬೆರಳಗುರುತುಗಳು ಮುಂತಾದುವನ್ನು ಕೊಡಲು ರಿಜಿಸ್ಟ್ರಾರರ ಮುಂದೆ ಕರೆದುಕೊಂಡು ಬರಬೇಕು. ಒಂದು ವೇಳೆ ತಾಯಿತಂದೆಗಳು ತಮ್ಮ ಈ ಜವಾಬ್ದಾರಿಯನ್ನು ನಿರ್ವಹಿಸದಿದ್ದರೆ ಅಲ್ಪವಯಿಗೆ ಹದಿನಾರು ವರ್ಷ ತುಂಬುತ್ತಲೆ ಆತನೇ ಆ ಕೆಲಸ ಮಾಡಬೇಕು; ತಪ್ಪಿದರೆ ತಂದೆತಾಯಿಗಳಿಗೆ ಯಾವ ಶಿಕ್ಷೆ ವಿಧಿಸಲಾಗಿದೆಯೋ ಅದೇ ಶಿಕ್ಷೆಗೆ ಗುರಿಯಾಗಬೇಕು. ರಿಜಿಸ್ಟ್ರೇಷನ್ ರಹದಾರಿಯನ್ನು ಪೋಲೀಸ್ ಅಧಿಕಾರಿ ಎಲ್ಲಿ ಯಾವಾಗ ಕೇಳಿದರೂ ತೋರಿಸಬೇಕು. ಆ ರೀತಿ ತೋರಿಸದಿದ್ದರೆ ತಪ್ಪೆಂದು ಭಾವಿಸಿ ತಪ್ಪಿತಸ್ಥನಿಗೆ ಜುಲ್ಮಾನೆಯನ್ನೊ ಸಜವನ್ನೊ ವಿಧಿಸಬಹುದು. ರಹದಾರಿ ಪರೀಕ್ಷೆಗೆಂದು ಯಾರ ಮನೆಯೊಳಗಾದರೂ ಪ್ರವೇಶ ಮಾಡಲು ಪೋಲೀಸ್ ಅಧಿಕಾರಿಗಳಿಗೆ ಅಧಿಕಾರವಿರತಕ್ಕದ್ದು. ಟ್ರಾನ್ಸ್‌ವಾಲ್ ಹೊರಗಿನಿಂದ ಎಲ್ಲಿಂದ ಬಂದರೂ ಭಾರತೀಯರು ಕೆಲಸದ ಮೇಲಿದ್ದ ಪೋಲೀಸ್ ಅಧಿಕಾರಿಗೆ ತಮ್ಮ ರಹದಾರಿಯನ್ನು ತೋರಿಸಬೇಕು. ಕೆಲಸಕ್ಕಾಗಿ ಕೋರ್ಟುಗಳಿಗೆ ಹೋಗಿರಲಿ, ವ್ಯಾಪಾರ ಅಥವಾ ಬೈಸಿಕಲ್ ಲೈಸೆನ್ಸ್ ಪಡೆಯಲು ರೆವಿನ್ಯೂ ಕಚೇರಿಗೆ ಹೋಗಿರಲಿ, ಕೇಳಿದ ಕೂಡಲೆ ರಹದಾರಿಗಳನ್ನು ತೋರಿಸಬೇಕು. ಅಂದರೆ ಸರಕಾರದ ಯಾವುದಾದರೂ ಕಚೇರಿಗೆ ಹೋಗಿ, ತಮ್ಮ ಅಧಿಕಾರದೊಳಗಿನ ಕೆಲಸ ಮಾಡಿಕೊಡಲು ಭಾರತೀಯನು ಕೇಳಿದರೆ, ಆ ರೀತಿ ಮಾಡುವ ಮೊದಲು ರಹದಾರಿಯನ್ನು ತೋರಿಸೆಂದು ಯಾವ ಅಧಿಕಾರಿಯಾದರೂ ಒತ್ತಾಯ ಮಾಡಬಹುದಿತ್ತು. ಆ ರೀತಿ ರಹದಾರಿಯನ್ನು ತೋರಿಸದೆ ಇದ್ದರಾಗಲಿ, ಕಾನೂನು ಪ್ರಕಾರ ವಿಧಾಯಕವಾದ ಗುರುತಿನ ಚಿಹ್ನೆಗಳನ್ನು ಅಥವಾ ವಿವರಗಳನ್ನು ತಿಳಿಸದೆ ಇದ್ದರಾಗಲಿ ತಪ್ಪಿತಸ್ಥನೆಂದು ಭಾವಿಸಿ ತಪ್ಪಿತಸ್ಥನಿಗೆ ಜುಲ್ಮಾನೆ ಅಥವಾ ಸಜ ವಿಧಿಸಬಹುದು.

ಪ್ರಪಂಚದ ಯಾವ ಭಾಗದಲ್ಲೂ ಸ್ವತಂತ್ರ ಪ್ರಜೆಗಳ ಮೇಲೆ ಇಂತಹ ಶಾಸನ ಮಾಡಿರುವುದನ್ನು ಎಲ್ಲಿಯೂ ನಾನು ನೋಡಿಲ್ಲ. ನೇಟಾಲಿನಲ್ಲಿ ಕರಾರು ಮಾಡಿಕೊಂಡ ಕೆಲಸಗಾರರಿಗೆ ಈ ವಿಧವಾದ ರಹದಾರಿ ನಿರ್ಬಂಧವಿತ್ತು; ಆದರೆ ಆ ಬಡಪಾಯಿಗಳನ್ನು

ಸ್ವತಂತ್ರರೆಂದು ಹೇಳಲಾಗುವುದಿಲ್ಲ. ಆದಾಗ್ಯೂ ಅವರ ಮೇಲಿನ ಶಾಸನವಿಧಿಗಳು ಸಹ, ಈ ಹೊಸ ಮಸೂದೆಯ ವಿಧಿಗಳಷ್ಟು ಕ್ರೂರವಾಗಿರಲಿಲ್ಲ. ಲಕ್ಷಾಂತರ ರೂಪಾಯಿ ಆಸ್ತಿವಂತ ವರ್ತಕನನ್ನು ಗಡಿ ಪಾರು ಮಾಡಿ ಈ ಶಾಸನದ ಸಹಾಯದಿಂದ ನಿರ್ಗತಿಕನನ್ನಾಗಿ ಮಾಡಬಹುದಾಗಿತ್ತು. ಈ ಶಾಸನದ ವಿಧಿಗಳನ್ನು ಭಂಗಮಾಡಿದ್ದಕ್ಕೆ ಹೇಗೆ ಗಡಿಪಾರು ಮಾಡಲಾಯಿತೆಂಬುದು ಮುಂದೆ ತಿಳಿಯುತ್ತದೆ. ಭಾರತದಲ್ಲಿ ಕಳ್ಳತನ ದರೋಡೆ ಮಾಡತಕ್ಕ ಕೆಲವು ಜನರ ಮೇಲೆ ಉಪಯೋಗಿಸಲು ಕೆಲವು ಕ್ರೂರ ಶಾಸನಗಳಿವೆ. ಈ ಮಸೂದೆ ಅಂತಹ ಶಾಸನಗಳನ್ನು ಹೋಲುತ್ತಿದ್ದಿತಲ್ಲದೆ, ಅವಕ್ಕೆ ಸರಿತೂಗುವಂತಿತ್ತು. ಈ ಮಸೂದೆಯ ಪ್ರಕಾರ ಹೆಬ್ಬಟ್ಟಿನ ಗುರುತನ್ನು ಕೊಡುವುದು ದಕ್ಷಿಣ ಆಫ್ರಿಕದಲ್ಲಿ ಹೊಸ ಪದ್ಧತಿಯಾಗಿತ್ತು. ಆ ವಿಷಯ ಸ್ವಲ್ಪ ಪರಿಚಯ ಮಾಡಿಕೊಳ್ಳಲು ಒಬ್ಬ ಪೋಲೀಸ್ ಅಧಿಕಾರಿ ಹೆನ್ರಿ ಎಂಬುವನು ಬರೆದಿದ್ದ ಬೆರಳುಗುರುತಿನ ಒಂದು ಪುಸ್ತಕವನ್ನು ಓದಿದೆ. ಬೆರಳಿನ ಗುರುತುಗಳನ್ನು ಸಾಮಾನ್ಯವಾಗಿ ಅಪರಾಧಿಗಳಿಂದ ತೆಗೆದುಕೊಳ್ಳುತ್ತಾರೆಂದು ಅದರಿಂದ ತಿಳಿಯಿತು. ಆದ್ದರಿಂದ ಬಲಾತ್ಕಾರವಾಗಿ ಬೆರಳುಗುರುತುಗಳನ್ನು ಪಡೆಯುವ ಈ ವಿಧಿಯನ್ನು ನೋಡಿ ನನಗೆ ಸಿಡಿಲುಬಡಿದಂತಾಯಿತು. ಅದೂ ಅಲ್ಲದೆ ಹದಿನಾರು ವರ್ಷದೊಳಗಿನ ಹೆಂಗಸರು ಮಕ್ಕಳು ರಿಜಿಸ್ಟರ್ ಮಾಡಿಸಬೇಕೆಂದು ವಿಧಿಸಿದ ಕಾನೂನುಗಳಲ್ಲಿ ಇದೇ ಮೊದಲನೆಯದಾಗಿತ್ತು.

ಮೂರನೆಯ ದಿನ ಭಾರತೀಯ ಮುಖಂಡರ ಒಂದು ಸಣ್ಣ ಸಭೆಯನ್ನು ಸೇರಿಸಿ ಅಲ್ಲಿ ಈ ಮಸೂದೆಯನ್ನು ಶಬ್ದಶಃ ಅರ್ಥಮಾಡಿ ಹೇಳಿದೆ. ನನಗೆ ದಿಗಿಲುಬಡಿದಂತೆ ಅವರಿಗೂ ಗಾಬರಿಯಾಯಿತು. ಅವರಲ್ಲಿ ಒಬ್ಬರು ಉದ್ರೇಕ ಭರದಲ್ಲಿ "ನನ್ನ ಹೆಂಡತಿಯಿಂದ ಯಾರಾದರೂ ರಹದಾರಿಯನ್ನು ಕೇಳಲು ಬಂದರೆ ಅಲ್ಲಿಯೇ ಆತನನ್ನು ಗುಂಡಿನಿಂದ ಸುಟ್ಟು ಆಮೇಲೆ ಬಂದದ್ದನ್ನು ಅನುಭವಿಸುತ್ತೇನೆ" ಎಂದನು. ನಾನು ಆತನನ್ನು ಸಮಾಧಾನಗೊಳಿಸಿ ಸಭೆಗೆ ಈ ರೀತಿ ಹೇಳಿದೆ; "ಇದು ಬಹಳ ವಿಷಮ ಘಳಿಗೆ. ಈ ಮಸೂದೆ ಶಾಸನವಾಗಿ, ಅದಕ್ಕೆ ನಾವು ಒಪ್ಪಿದರೆ, ದಕ್ಷಿಣ ಆಫ್ರಿಕದಲ್ಲೆಲ್ಲ ಅದೇ ರೀತಿ ಶಾಸನಗಳಾಗುತ್ತವೆ. ನನಗೆ ತೋರುವ ಮಟ್ಟಿಗೆ ಈ ಶಾಸನದಿಂದ ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಜೀವನಮೂಲಕ್ಕೇನೆ ಏಟು ಬಿದ್ದಿದೆ. ನಮ್ಮನ್ನು ಈ ದೇಶದಿಂದ ಹೊಡೆದೋಡಿಸಲು ಇದೇ ಕೊನೆಯ ಹೆಜ್ಜೆಯಲ್ಲ. ಆದರೆ ಮೊದಲನೆಯದು. ಆದ್ದರಿಂದ ಟ್ರಾನ್ಸ್ ವಾಲಿನ ಹತ್ತು ಹದಿನೈದು ಸಾವಿರ ಭಾರತೀಯರ ಹಿತ ಒಂದೇ ಅಲ್ಲ; ದಕ್ಷಿಣ ಆಫ್ರಿಕದ ಸಮಸ್ತ ಭಾರತೀಯರ ಹಿತಸಂರಕ್ಷಣೆಯ ಜವಾಬ್ದಾರಿಯ ಹೊರೆ ನಮ್ಮ ಮೇಲೆ ಬಿದ್ದಿದೆ. ಅಲ್ಲದೆ ಈ ಶಾಸನದ ವಿಧಿಗಳ ಅರ್ಥವನ್ನು ನೀವು ಪೂರ್ಣ ಗ್ರಹಿಸುವುದಾದರೆ, ಭಾರತದ ಗೌರವರಕ್ಷಣೆಯ ಭಾರವೂ ನಮ್ಮ ಪಾಲಿಗೆ ಬಂದಿದೆ. ಏಕೆಂದರೆ, ಈ ಶಾಸನ ನಮ್ಮನ್ನು ಮಾತ್ರವಲ್ಲ, ನಮ್ಮ ಮಾತೃಭೂಮಿಯನ್ನೂ ಅವಹೇಳನ ಮಾಡಲು ಪ್ರಯತ್ನಿಸಿದೆ. ನಿರಪರಾಧಿಗಳಾದ ಜನರನ್ನು ಅವಮಾನಗೊಳಿಸುವುದು

ನಮ್ಮ ದೇಶಕ್ಕೇ ಅವಮಾನ. ಈ ಶಾಸನವನ್ನು ನಮ್ಮ ಮೇಲೆ ಹೊರಿಸಲು ನಾವು ಯಾವ ಅಪರಾಧವನ್ನು ಮಾಡಿಲ್ಲ. ನಾವು ನಿರಪರಾಧಿಗಳು. ಒಂದು ಜನಾಂಗಕ್ಕೆ ಸೇರಿದ ಒಬ್ಬ ನಿರಪರಾಧಿಗೆ ಅಗೌರವಮಾಡಿದರೂ ಇಡಿಯ ಜನಾಂಗವನ್ನೇ ಅಗೌರವ ಪಡಿಸಿದಂತೆ ಆಗುತ್ತದೆ. ಆದ್ದರಿಂದ ನಾವು ಆತುರಪಡಬಾರದು. ತಾಳ್ಮೆಗುಂದಬಾರದು, ಸಿಟ್ಟು ಮಾಡಬಾರದು. ಆ ರೀತಿ ಮಾಡಿದರೆ ಈ ದಾಳಿಯಿಂದ ನಾವು ಪಾರಾಗುವುದಿಲ್ಲ. ಆದರೆ ನಾವು ತಾಳ್ಮೆಯಿಂದ ಯೋಚಿಸಿ, ಎಲ್ಲರೂ ಒಂದಾಗಿ ನಿಂತು, ಶಾಸನವನ್ನು ವಿರೋಧಿಸಲು ಕಾರ್ಯಕ್ರಮವನ್ನು ಕೈಗೊಂಡರೆ ಮತ್ತು ಆ ರೀತಿ ವಿರೋಧಿಸುವಾಗ ಬರುವ ಕಷ್ಟವನ್ನೂ ಸಹಿಸಲು ಸಿದ್ಧರಾದರೆ ದೇವರು ನಮಗೆ ಸಹಾಯಕನಾಗುತ್ತಾನೆ."
ಎಲ್ಲರೂ ಪರಿಸ್ಥಿತಿ ಕ್ರೂರವಾಗಿದೆ ಎಂಬುದನ್ನು ಅರಿತುಕೊಂಡರು. ಕೆಲವು ನಿರ್ಣಯಗಳನ್ನು ರಚಿಸಿ ಒಪ್ಪಿಗೆ ಪಡೆಯಲು ಒಂದು ಸಾರ್ವಜನಿಕ ಸಭೆ ಸೇರಿಸಲು ತೀರ್ಮಾನಿಸಿದೆವು. ಅದಕ್ಕೋಸ್ಕರ ಯೆಹೂದ್ಯರ ಒಂದು ನಾಟ್ಯಶಾಲೆಯನ್ನು ಬಾಡಿಗೆಗೆ ಪಡೆದೆವು.

೧೨. ಸತ್ಯಾಗ್ರಹದ ಹುಟ್ಟು

೧೯೦೬ ನೆಯ ಸೆಪ್ಟಂಬರ್ ೧೧ನೆಯ ದಿನ ಈ ಸಭೆ ಸೇರಿತು. ಟ್ರಾನ್ಸ್ ವಾಲಿನ ಅನೇಕ ಸ್ಥಳಗಳಿಂದ ಪ್ರತಿನಿಧಿಗಳು ಬಂದಿದ್ದರು. ಆದರೆ ಆಗ ನನ್ನ ಸಹಾಯದಿಂದ ರಚಿಸಿದ ನಿರ್ಣಯುಗಳ ತೊಡಕು ಏನಾಗಬಹುದೆಂದು ನಾನೇ ಅರ್ಥ ಮಾಡಿಕೊಂಡಿರಲಿಲ್ಲವೆಂದು ಒಪ್ಪುತ್ತೇನೆ. ಅಲ್ಲದೆ ಅವುಗಳ ಎಲ್ಲ ಪರಿಣಾಮವನ್ನೂ ನಾನು ಊಹಿಸಿರಲಿಲ್ಲ. ಆ ಹಳೆಯ ಎಂಪೈರ್ ನಾಟ್ಯಶಾಲೆಯಲ್ಲಿ ನೆಲದಿಂದ ಮಾಳಿಗೆವರೆಗೂ ಜನರು ಕಿಕ್ಕಿರಿದು ತುಂಬಿದ್ದರು. ಪ್ರತಿಯೊಬ್ಬರ ಮುಖದಲ್ಲಿಯೂ ಏನೋ ಮಹತ್ಕಾರ್ಯ ನಡೆಯುತ್ತದೆ ಅಥವಾ ಮಹಾಘಟನೆ ಸಂಭವಿಸುತ್ತದೆ ಎಂಬ ನಿರೀಕ್ಷೆ ಎದ್ದು ಕಾಣುತ್ತಿತ್ತು. ಟ್ರಾನ್ಸ್ ವಾಲ್ ಬ್ರಿಟಿಷ್ ಇಂಡಿಯನ್ ಸಂಸ್ಥೆಯ ಅಧ್ಯಕ್ಷರಾದ ಅಬ್ದುಲ್ ಗನಿಯವರು ಅಧ್ಯಕ್ಷತೆ ವಹಿಸಿದ್ದರು. ಅವರು ಟ್ರಾನ್ಸ್ ವಾಲ್ ಭಾರತೀಯ ನಿವಾಸಿಗಳಲ್ಲಿ ಅತ್ಯಂತ ಹಳಬರಾಗಿಯೂ ಪ್ರಸಿದ್ಧ ವರ್ತಕರಾದ ಮಾಮದ್ ಕಾಸಂ ಕಮ್ರುದೀನ್ ಅಂಗಡಿಯ ಜೋಹಾನ್ಸ್ ಬರ್ಗ ಶಾಖೆಯ ವ್ಯವಸ್ಥಾಪಕರಾಗಿಯೂ ಇದ್ದರು. ಆ ಸಭೆಯಲ್ಲಿ ಒಪ್ಪಿದ ನಿರ್ಣಯಗಳಲ್ಲಿ ಬಹು ಮುಖ್ಯವಾದುದೆಂದರೆ, ಭಾರತೀಯರು ಉಗ್ರವಾಗಿ ವಿರೋಧಿಸಿದರೂ ಆ ಮಸೂದೆಯನ್ನು ಶಾಸನ ಕಡತಕ್ಕೆ ಸೇರಿಸಿದರೆ ಆ ಶಾಸನದಂತೆ ನಡೆಯಲಾಗದೆಂದೂ ಆ ರೀತಿ ಶಾಸನ ಭಂಗ ಮಾಡುವುದರಲ್ಲಿ ಬರುವ ಎಲ್ಲ ಶಿಕ್ಷೆ ಮತ್ತು ಕಷ್ಟವನ್ನೂ ಅನುಭವಿಸಬೇಕೆಂದೂ ಮಾಡಿದ ಪ್ರಸಿದ್ಧವಾದ ನಾಲ್ಕನೆಯ ನಿರ್ಣಯ.

ಈ ನಿರ್ಣಯವನ್ನು ನಾನು ಸಭೆಗೆ ಸಂಪೂರ್ಣವಾಗಿ ವಿವರಿಸಿದ್ದನ್ನು ಎಲ್ಲರೂ ತಾಳ್ಮೆಯಿಂದ ಕೇಳಿದರು. ಸಭೆಯ ನಡೆವಳಿಕೆಗಳೆಲ್ಲವೂ ಹಿಂದಿ ಅಥವಾ ಗುಜರಾತಿಯಲ್ಲಿ ನಡೆದುವು. ಆದ್ದರಿಂದ ಸಭೆಯಲ್ಲಿರುವವರೆಲ್ಲರೂ ಸಭೆಯ ಕಾರ್ಯಕಲಾಪಗಳನ್ನು

ಅರ್ಥಮಾಡಿಕೊಳ್ಳಬಹುದಾಗಿತ್ತು. ಹಿಂದಿ ಬಾರದ ತಮಿಳು ಮತ್ತು ತೆಲುಗು ಜನರಿಗೆ ಆ ಭಾಷೆಗಳನ್ನು ಬಲ್ಲವರು ಭಾಷಣಮಾಡಿ ಆ ಭಾಷೆಗಳಲ್ಲಿ ಎಲ್ಲವನ್ನೂ ಸಂಪೂರ್ಣವಾಗಿ ವಿವರಿಸಿದರು. ನಿರ್ಣಯವನ್ನು ಪ್ರತಿಪಾದಿಸಿ, ಸಮರ್ಥಿಸಿ ಅನೇಕರು ಮಾತನಾಡಿದರು. ಸೇಠ್ ಹಾಜಿ ಹಬೀಬ್ ಎಂಬುವವರು ಅವರಲ್ಲೊಬ್ಬರು. ಅವರೂ ದಕ್ಷಿಣ ಆಫ್ರಿಕದ ಬಹಳ ಹಳೆಯ ಅನುಭವಸ್ಥ ನಿವಾಸಿಗಳು. ಅವರ ಭಾಷಣ ಬಹಳ ಪರಿಣಾಮಕಾರಿಯಾಗಿತ್ತು. ಅವರು ಬಹಳ ಮನನೊಂದುಕೊಂಡು, ದೇವರನ್ನು ಸಾಕ್ಷಿಯಾಗಿಟ್ಟುಕೊಂಡು "ನಾವು ಈ ನಿರ್ಣಯವನ್ನು ಅಂಗೀಕರಿಸಬೇಕು. ಇಂತಹ ಅವಮಾನಕರವಾದ ಶಾಸನಕ್ಕೆ ಹೇಡಿಗಳಂತೆ ಎಂದೂ ತಲೆತಗ್ಗಿಸಬಾರದು" ಎಂದು ಹೇಳಿದರು. ತಾವು ದೇವರ ಸಾಕ್ಷಿಯಾಗಿ ಆ ಪ್ರಮಾಣವನ್ನು ಪಾಲಿಸುವುದಾಗಿಯೂ ಇತರರೂ ಅದೇ ರೀತಿ ಮಾಡಬೇಕೆಂದೂ ತಮ್ಮ ಗಂಭೀರವಾಣಿಯಿಂದ ಪ್ರತಿಜ್ಞೆ ಮಾಡಿದರು. ಆ ನಿರ್ಣಯವನ್ನು ಸಮರ್ಥನೆ ಮಾಡುತ್ತ ಇನ್ನೂ ಇತರರು ಆವೇಶ ಪೂರಿತವಾದ, ಕೋಪೋದ್ರಿಕ್ತ ಭಾಷಣಗಳನ್ನು ಮಾಡಿದರು. ಸೇಠ್ ಹಾಜಿ ಹಬೀಬ್‌ರು ತಮ್ಮ ಭಾಷಣದ ಮಧ್ಯೆ ಆ ರೀತಿ ಪ್ರತಿಜ್ಞೆಯನ್ನು ತೆಗೆದುಕೊಂಡ ಕೂಡಲೆ ನಾನು ಚಕಿತನಾಗಿ, ಎಚ್ಚರಗೊಂಡೆ. ನನ್ನ ಮತ್ತು ನಮ್ಮ ಜನರ ಜವಾಬ್ದಾರಿ ಆಗಲೇ ನನಗೆ ಪೂರ್ಣವಾಗಿ ಅರ್ಥವಾದದ್ದು. ನಮ್ಮ ಜನರು ಆ ಹಿಂದೆ ಅನೇಕ ನಿರ್ಣಯಗಳನ್ನು ಒಪ್ಪಿ, ಪುನರಾಲೋಚಿಸಿ ಅಥವಾ ಹೊಸ ಅನುಭವದಂತೆ ತಿದ್ದುಪಡಿ ಸಹ ಮಾಡಿದ್ದರು. ಒಪ್ಪಿದ ನಿರ್ಣಯಗಳನ್ನು ಎಲ್ಲರೂ ಅನುಸರಿಸದೆ ಇದ್ದ ಸಂದರ್ಭಗಳೂ ಅನೇಕ ಇದ್ದುವು. ನಿರ್ಣಯಕ್ಕೆ ತಿದ್ದುಪಡಿಗಳನ್ನು ಮಾಡುವುದು, ಒಪ್ಪಿದ ನಿರ್ಣಯಗಳನ್ನು ನಿರ್ಣಯಿಸಿದವರೇ ಅನುಸರಿಸದಿರುವುದು ಪ್ರಪಂಚದಲ್ಲಿ ಎಲ್ಲೆಡೆಯಲ್ಲೂ ಸಾರ್ವಜನಿಕ ಜೀವನದ ಸಾಮಾನ್ಯ ಅನುಭವ. ಆದರೆ ಅಂತಹ ನಿರ್ಣಯಗಳಲ್ಲಿ ತತ್ವತಃ ದೇವರ ಹೆಸರನ್ನು ಯಾರೂ ಮುಂದೆ ತರುವುದಿಲ್ಲ. ನಿರ್ಣಯಕ್ಕೂ, ದೇವರ ಹೆಸರಿನಲ್ಲಿ ಮಾಡಿದ ಪ್ರತಿಜ್ಞೆಗೂ ಯಾವ ಭೇದವೂ ಇರಕೂಡದು. ತಿಳಿದವನು ಮನಃಪೂರ್ವಕವಾಗಿ ಒಂದು ನಿರ್ಣಯಕ್ಕೆ ಬಂದಮೇಲೆ ಕೂದಲೆಳೆಯಷ್ಟೂ ತಪ್ಪದಂತೆ ಅದನ್ನು ಪರಿಪಾಲಿಸುತ್ತಾನೆ. ದೇವರ ಹೆಸರಿನಲ್ಲಿ ಮಾಡಿದ ಪ್ರತಿಜ್ಞೆಗೆ ಕೊಡುವ ಬೆಲೆಯನ್ನೇ ಆತನು ಆ ನಿರ್ಣಯಕ್ಕೂ ಕೊಡುತ್ತಾನೆ. ಆದರೆ ವ್ಯವಹಾರ ಪ್ರಪಂಚದಲ್ಲಿ ತಾತ್ವಿಕ ದೃಷ್ಟಿಗೆ ಬೆಲೆ ಕಡಮೆ; ಸಾಮಾನ್ಯ ನಿರ್ಣಯಕ್ಕೂ ದೇವರ ಹೆಸರಿನಲ್ಲಿ ಮಾಡಿದ ನಿರ್ಣಯಕ್ಕೂ ಅಜಗಜಾಂತರವೆಂಬ ಭಾವನೆ ಬೇರೂರಿದೆ. ಸಾಮಾನ್ಯ ನಿರ್ಣಯವನ್ನು ಮಾಡಿದ ಮನುಷ್ಯನೊಬ್ಬನು ಅದಕ್ಕೆ ವಿರೋಧವಾಗಿ ನಡೆದರೆ ನಾಚಿಕೆ ಪಡುವುದಿಲ್ಲ. ಆದರೆ ಪ್ರಮಾಣ ಮಾಡಿದ ಮನುಷ್ಯನು ತಪ್ಪಿನಡೆದರೆ ನಾಚಿಕೆ ಪಡುವುದೊಂದೇ ಅಲ್ಲದೆ, ಸಮಾಜ ಸಹ ಆತನನ್ನು ಪಾಪಿಷ್ಠನೆಂದು ದೂರೀಕರಿಸುತ್ತದೆ. ಈ ಕಾಲ್ಪನಿಕ ಭೇದ ಜನರ ಮನಸ್ಸಿನಲ್ಲಿ ಎಷ್ಟರಮಟ್ಟಿಗೆ ಬೇರೂರಿದೆ ಎಂದರೆ, ನ್ಯಾಯಾಧೀಶರ ಎದುರುರಿನಲ್ಲಿ ಸತ್ಯವೆಂದು ಪ್ರಮಾಣಮಾಡಿ ಸಾಕ್ಷ್ಯ ನುಡಿಯುವ ಮನುಷ್ಯನು ಸುಳ್ಳು

ಹೇಳಿರುವನೆಂದು ಆಮೇಲೆ ಗೊತ್ತಾದರೆ ಆತನು ತಪ್ಪಿತಸ್ಥನೆಂದು ಭಾವಿಸಿ ಉಗ್ರ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ.

ಪವಿತ್ರ ಪ್ರತಿಜ್ಞೆಗಳ ಅನುಭವ ಸ್ವತಃ ನನ್ನಲ್ಲಿ ಬೇಕಾದಷ್ಟು ಇದ್ದು, ಅವುಗಳ ಪ್ರಯೋಜನವನ್ನರಿತ ನನ್ನ ಮನಸ್ಸಿನೆದುರಿನಲ್ಲಿ ಮೇಲ್ಕಂಡ ಯೋಚನೆಗಳು ಸುಳಿಯುತ್ತಿದ್ದಾಗ ಸೇಠ್ ಹಾಜಿ ಹಬೀಬ್ ರ ಪ್ರಮಾಣದ ಸಲಹೆಯನ್ನು ಕೇಳಿದೊಡನೆ ನನಗೆ ದಿಗಿಲು ಬಡಿದಂತಾಯಿತು. ಸ್ವಲ್ಪದರಲ್ಲಿಯೇ ಅದರ ಪರಿಣಾಮ ವೇನಾಗಬಹುದೆಂದು ಯೋಚನೆ ಮಾಡಿದೆ. ನನ್ನ ವಿಸ್ಮಯ ಉತ್ಸಾಹಕ್ಕೆ ಎಡೆಗೊಟ್ಟಿತು. ನಾನು ಸಭೆಗೆ ಹೋದಾಗ ಪ್ರಮಾಣ ತೆಗೆದುಕೊಳ್ಳಬೇಕೆಂದಾಗಲಿ ಅಥವಾ ಇತರರನ್ನು ಪ್ರಮಾಣ ತೆಗೆದುಕೊಳ್ಳಲು ಕೇಳಬೇಕೆಂದಾಗಲಿ ಯೋಚನೆಯೇ ಇಲ್ಲದಿದ್ದರೂ, ಸೇಠ್‌ರ ಸಲಹೆಯನ್ನು ನಾನು ಮನಃ ಪೂರ್ವಕವಾಗಿ ಅನುಮೋದಿಸಿದೆ. ಆದರೆ ಪ್ರಮಾಣದ ಅರ್ಥವನೆಂಬುದನ್ನೂ ಅದರ ಪರಿಣಾಮ ಏನೇನು ಆಗಬಹುದೆಂಬುದನ್ನೂ ಸಭೆಗೆ ಸಂಪೂರ್ಣವಾಗಿ ವಿವರಿಸಬೇಕಾದ್ದು ಅವಶ್ಯವೆನಿಸಿತು. ಅದಾದ ಮೇಲೂ ಅವರು ಪ್ರಮಾಣ ತೆಗೆದುಕೊಳ್ಳಲು ಸಿದ್ಧರಿದ್ದರೆ, ಆಗ ಅವರನ್ನು ಪ್ರೋತ್ಸಾಹಿಸಬೇಕು. ಇಲ್ಲವಾದರೆ ಕೊನೆಯ ಸತ್ವಪರೀಕ್ಷೆಗೆ ಅವರಿನ್ನೂ ಸಿದ್ಧರಿಲ್ಲವೆಂದು ನಾನು ತಿಳಿಯಬೇಕು. ಆದ್ದರಿಂದ ಸೇಠ್ ಹಾಜಿ ಹಬೀಬ್‌ರ ಸಲಹೆಯ ಪೂರ್ಣ ಅರ್ಥವನ್ನು ಸಭೆಗೆ ವಿವರಿಸಲು ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಪುನಃ ಭಾಷಣ ಮಾಡಲು ನಿಂತೆ. ಆಗ ನಾನು ಮಾಡಿದ ಭಾಷಣದ ಸಾರಾಂಶವನ್ನು ಜ್ಞಾಪಕದಿಂದ ಈ ಕೆಳಗೆ ಕೊಟ್ಟಿದ್ದೇನೆ:

"ನಾವು ಈಗ ಮಾಡುವ ನಿರ್ಣಯಕ್ಕೂ ಇದುವರೆಗೆ ಮಾಡಿರುವ ಎಲ್ಲ ಇತರ ನಿರ್ಣಯಗಳಿಗೂ ಬಹಳ ವ್ಯತ್ಯಾಸವಿದೆ ಎಂಬುದನ್ನೂ ಅದನ್ನು ಮಾಡುವ ವಿಧಾನದಲ್ಲಿ ದೊಡ್ಡ ಭೇದವಿದೆ ಎಂಬುದನ್ನೂ ಈ ಸಭೆಗೆ ತಿಳಿಸ ಬಯಸುತ್ತೇನೆ. ದಕ್ಷಿಣ ಆಫ್ರಿಕದಲ್ಲಿ ನಾವು ಇರುವುದು ಬಿಡುವುದು ನಾವು ಈಗ ಮಾಡುವ ನಿರ್ಣಯದ ಪಾಲನೆಯನ್ನು ಅವಲಂಬಿಸಿರುವುದರಿಂದ ಈ ನಿರ್ಣಯ ಬಹಳ ಮಹತ್ವವುಳ್ಳದ್ದು. ನನ್ನ ಸ್ನೇಹಿತರ ಸಲಹೆಯಂತೆ ಆ ನಿರ್ಣಯವನ್ನು ಮಾಡುವ ವಿಧಾನ ಸಹ ನೂತನವೂ ಪವಿತ್ರವೂ ಆಗಿದೆ. ಈ ಸಭೆಗೆ ಬಂದಾಗ ಈ ನಿರ್ಣಯವನ್ನು ಈ ರೀತಿಯಲ್ಲಿ ಅಂಗೀಕರಿಸಬೇಕೆಂಬ ಇಷ್ಟದಿಂದ ಬರಲಿಲ್ಲ; ಅದರ ಕೀರ್ತಿ ಎಲ್ಲವೂ ಸೇಠ್ ಹಾಜಿ ಹಬೀಬ್‌ರವರಿಗೆ ಸೇರಿದ್ದು ಮತ್ತು ಅದರ ಜವಾಬ್ದಾರಿಯ ಹೊರೆಯೂ ಅವರದೇ. ನಾನು ಅವರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಅವರ ಸಲಹೆಯನ್ನು ನಾನು ಹೃತ್ಪೂರ್ವಕವಾಗಿ ಅನುಮೊದಿಸುತ್ತೇನೆ. ನೀವೂ ಅದನ್ನು ಒಪ್ಪುವಿರಾದರೆ ಅವರ ಜವಾಬ್ದಾರಿಯಲ್ಲಿ ನೀವೂ ಭಾಗಿಗಳಾಗುವಿರಿ. ಈ ಜವಾಬ್ದಾರಿ ಏನೆಂಬುದನ್ನು ನೀವು ತಿಳಿದುಕೊಳ್ಳಬೇಕು. ನಮ್ಮ ಜನರ ಸಲಹೆಗಾರನೂ ಸೇವಕನೂ ಆಗಿ ಅದನ್ನು ನಿಮಗೆ ಸಂಪೂರ್ಣ ವಿವರಿಸಬೇಕಾದದ್ದು ನನ್ನ ಕರ್ತವ್ಯ.

"ಹಿಂದೂ ಮತ್ತು ಇಸ್ಲಾಂ ಧರ್ಮಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರೂ ನಾವೆಲ್ಲರೂ ನಂಬಿರುವುದು ಒಬ್ಬ ದೇವರನ್ನೇ. ಆ ದೇವರ ಹೆಸರಿನಲ್ಲಿ ಅಥವಾ ಆತನ ಸಾಕ್ಷಿಯಾಗಿ ಭರವಸೆ ಕೊಡುವುದೆಂದರೆ ಅಥವಾ ಪ್ರಮಾಣ ಮಾಡುವುದೆಂದರೆ

ಹುಡುಗಾಟಿಕೆಯ ಕೆಲಸವಲ್ಲ. ಪ್ರಮಾಣವಚನವನ್ನು ಕೊಟ್ಟು ಆ ಪ್ರಮಾಣವನ್ನು ಮುರಿದರೆ ದೇವರ ಮತ್ತು ಮಾನವಧರ್ಮದ ಎದುರಿನಲ್ಲಿ ನಾವು ಅಪರಾಧಮಾಡುತ್ತೇವೆ. ಮನಃಪೂರ್ವಕವಾಗಿ ತಿಳಿದೂ ತಿಳಿದು ಪ್ರಮಾಣ ತೆಗೆದುಕೊಂಡು ಅನಂತರ ಭಾಷೆಗೆ ತಪ್ಪುವ ಮನುಷ್ಯನು, ನನ್ನ ಮಾನವತ್ವವನ್ನೇ ಕಳೆದುಕೊಳ್ಳುತ್ತಾನೆಂದು ನನ್ನ ಸ್ವಂತ ಅಭಿಪ್ರಾಯ. ತಾಮ್ರದ ನಾಣ್ಯಕ್ಕೆ ಪಾದರಸನ್ನು ಉಜ್ಜಿ ಬೆಳ್ಳಿಯ ನಾಣ್ಯವೆಂದು ನಡೆಸಲು ಪ್ರಯತ್ನಪಟ್ಟು ಸಿಕ್ಕಿಬಿದ್ದರೆ ನಾಣ್ಯ ನಿರುಪಯೋಗವಾಗಿ ನಡೆಸಲು ಪ್ರಯತ್ನಪಟ್ಟವನೂ ಶಿಕ್ಷೆಗೆ ಒಳಗಾಗುವಂತೆ, ಸುಲಭವಾಗಿ ಭಾಷೆಕೊಟ್ಟು ಆಮೇಲೆ ಮುರಿಯತಕ್ಕವನು ಅಯೋಗ್ಯನಾಗುತ್ತಾನೆ. ಅಲ್ಲದೆ ಇಹದಲ್ಲಿಯೂ ಪರದಲ್ಲಿಯೂ ಶಿಕ್ಷಾರ್ಹನಾಗುತ್ತಾನೆ. ಸೇಠ್ ಹಾಜಿ ಹಬೀಬ್‌ರು ನಮಗೆ ಹೇಳಿಕೊಡಬೇಕೆಂದಿರುವ ಪ್ರಮಾಣವಚನ ಅಂತಹ ಕಠಿಣ ತರದ್ದು. ನೀವೆಲ್ಲರೂ ಪ್ರಬುದ್ಧ ವಯಸ್ಕರಾಗಿ ಪ್ರಪಂಚವನ್ನು ತಿಳಿದವರಾಗಿದ್ದೀರಿ. ನಿಮ್ಮಲ್ಲಿ ಅನೇಕ ಪ್ರತಿನಿಧಿಗಳು–ಕೆಲವರು ಹೆಚ್ಚಿನ ಪ್ರಮಾಣದಲ್ಲಿ, ಕೆಲವರು ಕಡಿಮೆ ಪ್ರಮಾಣದಲ್ಲಿ–ನಿಮ್ಮ ನಿಮ್ಮ ಜವಾಬ್ದಾರಿಗಳನ್ನು ನಿರ್ವಹಿಸಿದ್ದೀರಿ. ಆದ್ದರಿಂದ ಇಲ್ಲಿ ಇರುವವರು ಯಾರೂ ಪ್ರಮಾಣವನ್ನು ತೆಗೆದುಕೊಂಡಾಗ ಏನು ಮಾಡುತ್ತಿದ್ದೆನೆಂಬುದು ಗೊತ್ತಾಗಲಿಲ್ಲವೆಂದು ತಪ್ಪಿಸಿಕೊಳ್ಳುವ ಆಸೆ ಇಟ್ಟುಕೊಳ್ಳುವ ಹಾಗಿಲ್ಲ.

"ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರಮಾಣಗಳನ್ನೂ ಸಂಕಲ್ಪಗಳನ್ನೂ ತೆಗೆದುಕೊಳ್ಳಬೇಕೆಂದೂ ತೆಗೆದುಕೊಳ್ಳಲಾಗುವುದೆಂದೂ ನನಗೆ ಗೊತ್ತು. ಮಾತು ಮಾತಿಗೆ ಪ್ರಮಾಣ ಮಾಡತಕ್ಕ ಮನುಷ್ಯನು ಮುಗ್ಗರಿಸುವುದೇ ನಿಶ್ಚಯ. ಆದರೆ ದಕ್ಷಿಣ ಆಫ್ರಿಕದ ಭಾರತೀಯರ ಚರಿತ್ರೆಯಲ್ಲಿ ಆ ರೀತಿ ಪ್ರಮಾಣ ತೆಗೆದುಕೊಳ್ಳಲು ಅನಿರ್ವಾಹ ವಿಷಮ ಸಂದರ್ಭ ಈಗ ಬಂದಿದೆಯೆ ಎಂದು ಯೋಚಿಸಿದರೆ ನಿಜವಾಗಿಯೂ ಈಗ ಅಂತಹ ಸಂದರ್ಭ ಒದಗಿದೆ ಎಂದು ನನ್ನ ಅಭಿಪ್ರಾಯ. ಜವಾಬ್ದಾರಿಯುತವಾದ ಕೆಲಸವನ್ನು ಕೈಕೊಳ್ಳುವಾಗ ಬಹಳ ಜಾಗರೂಕತೆಯಿಂದ, ಹಿಂದೆ ಮುಂದೆ ಆಲೋಚಿಸಬೇಕಾದ್ದು ಬುದ್ಧಿವಂತಿಕೆಯ ಲಕ್ಷಣ. ಆದರೆ ಯೋಚಿಸುವುದಕ್ಕೂ ಹಿಂದೆ ಮುಂದೆ ನೋಡುವುದಕ್ಕೂ ಒಂದು ಪರಿಮಿತಿ ಇದೆ. ಆ ಪರಿಮಿತಿಯನ್ನು ಈಗ ನಾವು ಮೀರಿದ್ದೇವೆ. ಮರ್ಯಾದೆಯ ಭಾವನೆ ಎಲ್ಲವನ್ನೂ ಸರಕಾರ ಸಂಪೂರ್ಣವಾಗಿ ತ್ಯಜಿಸಿಬಿಟ್ಟಿದೆ. ಈಗ ನಮ್ಮನ್ನು ಆವರಿಸಿಕೊಂಡಿರುವ ಬೇಗೆಯ ಎದುರಿನಲ್ಲಿ ನಮ್ಮ ಸರ್ವಸ್ವವನ್ನೂ ತ್ಯಾಗಮಾಡಲು ಪಣತೊಡದೆ, ಕೈಕಟ್ಟಿಕೊಂಡು ನೋಡುತ್ತ ಕುಳಿತರೆ ನಮ್ಮ ಹೇಡಿತನವನ್ನೂ ಅಯೋಗ್ಯತೆಯನ್ನೂ ಬಯಲು ಮಾಡುತ್ತೇವೆ. ಆದ್ದರಿಂದ ಪ್ರಮಾಣ ತೆಗೆದುಕೊಳ್ಳಲು ಇದೇ ಸರಿಯಾದ ಕಾಲ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ನಮ್ಮಲ್ಲಿ ಪ್ರತಿಯೊಬ್ಬರೂ ತಮ್ಮತಮ್ಮಲ್ಲಿ ಯೋಚಿಸಿ, ಪ್ರಮಾಣ ತೆಗೆದುಕೊಳ್ಳಲು ಮನೋದಾರ್ಢ್ಯವೂ ಶಕ್ತಿಯೂ ಇದೆಯೇ ಎಂಬುದನ್ನು ನಿರ್ಧರಿಸಬೇಕು. ಈ ಮಾದರಿಯ ನಿರ್ಣಯಗಳನ್ನು ಬಹುಮತ ಪದ್ಧತಿಯಿಂದ ನಿರ್ಧರಿಸಲಾಗದು. ಯಾರು ಪ್ರಮಾಣವಚನ ತೆಗೆದುಕೊಳ್ಳುತ್ತಾರೋ ಅವರು ಮಾತ್ರ ಅದರಿಂದ ಬದ್ಧರು. ಹೊರಗಿನವರ ಮೇಲೆ ಒಂದು ಪರಿಣಾಮವನ್ನುಂಟು ಮಾಡಲು ಈ ಪ್ರಮಾಣವಚನವನ್ನು ತೆಗೆದುಕೊಳ್ಳಕೂಡದು.

ಸ್ಥಳೀಯ ಸರ್ಕಾರದ ಮೇಲಾಗಲಿ, ಸಾಮ್ರಾಜ್ಯ ಸರಕಾರದ ಮೇಲಾಗಲಿ, ಭಾರತ ಸರಕಾರದ ಮೇಲಾಗಲಿ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ಯೋಚಿಸಬಾರದು. ಪ್ರತಿಯೊಬ್ಬರೂ ತಮ್ಮ ಹೃದಯವನ್ನು ಶೋಧಿಸಿ, ಬರುವ ಎಲ್ಲ ಕಷ್ಟಗಳನ್ನೂ ಎದುರಿಸಲು ಸಾಕಾದಷ್ಟು ಶಕ್ತಿ ಇದೆ ಎಂದು ಅಂತರಾತ್ಮನು ಪ್ರೇರಣೆ ಮಾಡಿದರೇನೇ ಪ್ರಮಾಣ ತೆಗೆದು ಕೊಳ್ಳಬೇಕು ಮತ್ತು ಆಗ ಮಾತ್ರ ಅಂತಹ ಪ್ರಮಾಣ ಫಲಕಾರಿಯಾಗುತ್ತದೆ.

"ಮುಂದಿನ ಪರಿಣಾಮದ ವಿಷಯ ಎರಡು ಮಾತು ಹೇಳುತ್ತೇನೆ. ಭಾರತೀಯರಲ್ಲಿ ಬಹುಮತವು ಶಾಸನವನ್ನು ವಿರೋಧಿಸಲು ಪ್ರತಿಜ್ಞೆ ಮಾಡಿದರೆ ಮತ್ತು ಆ ರೀತಿ ಪ್ರತಿಜ್ಞೆ ಮಾಡಿದವರು ಪ್ರತಿಜ್ಞೆಯನ್ನು ಪಾಲಿಸಿದರೆ ಪ್ರಾಯಶಃ ಈ ಮಸೂದೆ ಶಾಸನವಾಗಲಾರದು. ಒಂದು ವೇಳೆ ಶಾಸನವಾದರೂ ಅತ್ಯಲ್ಪ ಕಾಲದಲ್ಲಿಯೇ ರದ್ದಾಗಬಹುದು. ನಾವು ಕಷ್ಟಗಳನ್ನು ಅನುಭವಿಸುವ ಪರಿಸ್ಥಿತಿಯೆ ಒದಗಲಾರದು. ಪ್ರಮಾಣ ತೆಗೆದುಕೊಳ್ಳುವವರು ಒಂದೆಡೆ ಬಹಳ ಆಶಾಭರಿತರಾಗಿದ್ದರೂ ಇನ್ನೊಂದೆಡೆ ಎಲ್ಲ ಕಷ್ಟಗಳನ್ನೂ ಎದುರಿಸಲು ಸಿದ್ಧರಿರಬೇಕು. ಆದ್ದರಿಂದ ಈ ಹೋರಾಟದಲ್ಲಿ ನಮಗೆ ಒದಗಿಬರಬಹುದಾದ ಸಂಕಟಗಳನ್ನು ಪೂರ್ವಭಾವಿಯಾಗಿಯೇ ಪರಿಚಯ ಮಾಡಿಕೊಡುತ್ತೇನೆ. ಇಲ್ಲಿ ನಾವು ಸೇರಿರುವ ೩,೦೦೦ ಜನರೂ ಈ ಪ್ರತಿಜ್ಞೆಯನ್ನು ತೆಗೆದುಕೊಳ್ಳಲಿಲ್ಲವೆಂದು ಭಾವಿಸಿರಿ. ಉಳಿದ ೧೦,೦೦೦ ಜನರು ಅಂತಹ ಪ್ರತಿಜ್ಞೆಯನ್ನು ತೆಗೆದುಕೊಳ್ಳಲಿಲ್ಲವೆಂದು ಭಾವಿಷೋಣ. ಪ್ರಾರಂಭದಲ್ಲಿ ಅವರು ನಮ್ಮನ್ನು ನೋಡಿ ಅಪಹಾಸ್ಯಮಾಡಬಹುದು. ಅಲ್ಲದೆ ಈಗ ಸಾಕಾದಷ್ಟು ಎಚ್ಚರಕೊಟ್ಟಿದ್ದಾಗ್ಯೂ ಪ್ರತಿಜ್ಞೆ ಮಾಡಿದವರಲ್ಲಿ ಕೆಲವರು ಅಥವಾ ಅನೇಕರು ಮೊದಲನೆಯ ಪರೀಕ್ಷೆಯ ಸಮಯದಲ್ಲಿ ಹಿಂದೇಟು ಹಾಕಬಹುದು ಅಧಿಕಾರಿಗಳು ನಮ್ಮನ್ನು ಸೆರೆಮನೆಗೆ ಹಾಕಿ ಅವಮಾನಗೊಳಿಸಬಹುದು. ನಮಗೆ ಆಹಾರ ಕೊಡದೆ ಇರಬಹುದು ಅಥವಾ ಬಿಸಿಲಿನಲ್ಲೊ ಚಳಿಯಲ್ಲೋ ನರಳುವಂತೆ ಮಾಡಬಹುದು. ಕಠಿಣವಾದ ಕೆಲಸಗಳಿಗೆ ನಮ್ಮನ್ನು ಹಾಕಬಹುದು. ಸೆರೆಮನೆಯಲ್ಲಿ ಕ್ರೌರ್ಯದಿಂದ ನಮ್ಮನ್ನು ಬಾರುಕೋಲಿನಿಂದ ಹೊಡೆಯಬಹುದು. ವಿಶೇಷ ಜುಲ್ಮಾನೆಯನ್ನು ವಿಧಿಸಬಹುದು. ಶಾಸನಭಂಗ ಮಾಡುವವರು ಸ್ವಲ್ಪ ಜನರಿದ್ದರೆ ನಮ್ಮ ಆಸ್ತಿಯನ್ನು ಜಪ್ತಿ ಮಾಡಿ ಹರಾಜು ಮಾಡಬಹುದು. ಇಂದು ಧನಿಕರಾಗಿರುವವರು ನಾಳೆ ಭಿಕ್ಷೆ ಬೇಡುವವರಾಗಬಹುದು. ನಮ್ಮನ್ನು ಗಡಿಪಾರು ಮಾಡಬಹುದು. ಸೆರೆಮನೆಯಲ್ಲಿ ನಿರಶನ ಮುಂತಾದ ಕಷ್ಟಗಳನ್ನು ಅನುಭವಿಸಿ ಕೆಲವರು ಕಾಹಿಲೆ ಬಿದ್ದು ಪ್ರಾಣ ಸಹ ಬಿಡಬೇಕಾಗುವ ಸಂದರ್ಭ ಬರಬಹುದು. ಆದ್ದರಿಂದ ನಾವು ಏನೇನು ಕಷ್ಟಗಳನ್ನು ಊಹಿಸಬಹುದೊ ಆ ಎಲ್ಲ ಕಷ್ಟಗಳನ್ನೂ ಅನುಭವಿಸುವ ಸಂಭವ ಬರುವುದಿಲ್ಲವೆಂದು ಹೇಳಲು ಸಾಧ್ಯವಿಲ್ಲ; ಆದರೆ ಆ ಕಷ್ಟಗಳನ್ನೂ, ಒದಗಿದರೆ ಇನ್ನೂ ಕ್ರೂರವಾದ ಸಂಕಟಗಳನ್ನೂ ಅನುಭವಿಸಿ ಕೆಲವರು ಕಾಹಿಲೆ ಬಿದ್ದು ಪ್ರಾಣ ಸಹ ಬಿಡಬೇಕಾಗುವ ಸಂದರ್ಭ ಬರಬಹುದು. ಆದ್ದರಿಂದ ನಾವು ಏನೇನು ಕಷ್ಟಗಳನ್ನು

ಊಹಿಸಬಹುದೊ ಆ ಎಲ್ಲ ಕಷ್ಟಗಳನ್ನೂ ಅನುಭವಿಸುವ ಸಂಭವ ಬರುವುದಿಲ್ಲವೆಂದು ಹೇಳಲು ಸಾಧ್ಯವಿಲ್ಲ; ಆದರೆ ಆ ಕಷ್ಟಗಳನ್ನೂ, ಒದಗಿದರೆ ಇನ್ನೂ ಕ್ರೂರವಾದ ಸಂಕಟಗಳನ್ನೂ ಅನುಭವಿಸಲು ಸಿದ್ಧರಿದ್ದೇವೆಂದೇ ನಾವು ಪ್ರತಿಜ್ಞೆಯನ್ನು ತೆಗೆದುಕೊಳ್ಳಬೇಕು. ಈ ಹೋರಾಟ ಎಂದು ಹೇಗೆ ಮುಕ್ತಾಯವಾಗುತ್ತದೆ ಎಂದು ಯಾರಾದರೂ ಹೇಳುವುದಾದರೆ, ಭಾರತೀಯರೆಲ್ಲರೂ ಈ ಪರೀಕ್ಷಾ ಸಮಯದಲ್ಲಿ ಧೀರರಂತೆ ವರ್ತಿಸಿದರೆ ಹೋರಾಟ ಶೀಘ್ರದಲ್ಲಿಯೇ ಕೊನೆ ಮುಟ್ಟುವುದೆಂದು ಹೇಳಬಲ್ಲೆ. ಕಷ್ಟನಷ್ಟಗಳಿಗೆ ಹೆದರಿ ಅನೇಕರು ಹಿಂದೇಟು ಹಾಕಿದರೆ ಹೋರಾಟ ಬಹಳ ದಿನ ನಡೆಯಬೇಕಾಗುತ್ತದೆ. ಆದರೆ ದೃಢಪ್ರತಿಜ್ಞೆಯುಳ್ಳವರು ಬೆಟ್ಟು ಮಡಚುವಷ್ಟು ಅಲ್ಪ ಸಂಖ್ಯೆಯಲ್ಲಿ ಇದ್ದರೂ ಈ ಹೋರಾಟದಲ್ಲಿ ನಮಗೆ ಜಯ ಸಿದ್ಧವೆಂದು ಖಚಿತವಾಗಿಯೂ ಧೈರ್ಯವಾಗಿಯೂ ಹೇಳಬಲ್ಲೆ.

"ನನ್ನ ಸ್ವಂತ ಜವಾಬ್ದಾರಿಯ ವಿಷಯವಾಗಿ ಒಂದು ಮಾತು. ಈ ಪ್ರತಿಜ್ಞೆ ತೆಗೆದುಕೊಳ್ಳುವುದರಲ್ಲಿ ಇರುವ ಅಪಾಯಗಳನ್ನು ನಿಮಗೆ ಮುಂಜಾಗರೂಕತೆ ಕೊಟ್ಟೂ, ಈ ಪ್ರತಿಜ್ಞೆಯನ್ನು ನೀವೆಲ್ಲರೂ ತೆಗೆದುಕೊಳ್ಳಬೇಕೆಂದು ನಾನು ನಿಮ್ಮನ್ನು ಆಹ್ವಾನಿಸುತ್ತಲಿದ್ದೇನೆ; ಮತ್ತು ಈ ಸಂದರ್ಭದಲ್ಲಿ ನನ್ನ ಜವಾಬ್ದಾರಿ ಏನೆಂಬುದನ್ನು ನಾನು ಪೂರ್ಣ ಅರಿತಿದ್ದೇನೆ. ಉತ್ಸಾಹದ ಭರದಲ್ಲಿ ಅಥವಾ ಕೋಪದ ಆವೇಶದಲ್ಲಿ ಇಲ್ಲಿ ನೆರೆದಿರುವವರಲ್ಲಿ ಅನೇಕರು ದೀಕ್ಷೆಯನ್ನು ತೆಗೆದು ಕೊಳ್ಳಬಹುದು. ಆದರೆ ಸತ್ವಪರೀಕ್ಷೆಯ ಸಮಯ ಒದಗಿದಾಗ ಎದೆಗುಂದಿ ಕೊನೆಯಲ್ಲಿ ನಾಲ್ಕಾರು ಜನರು ಮಾತ್ರ ಉಳಿಯಬಹುದು. ಆ ಸಮಯದಲ್ಲಿ ಸಹ ನನ್ನಂತಹವರಿಗೆ ಉಳಿದಿರುವುದು ಒಂದೇ ಮಾರ್ಗ: ಇಂತಹ ಶಾಸನಕ್ಕೆ ತಲೆಬಾಗುವುದಕ್ಕಿಂತ ಪ್ರಾಣವನ್ನು ಒಪ್ಪಿಸುವುದು. ಎಲ್ಲರೂ ಹೆದರಿ ಹಿಂಜರಿದು ನಾನೊಬ್ಬನೇ ಉಳಿದರೂ–ಪ್ರಾಯಶಃ ಅಸಂಭವವಾದರೂ–ಎಂದಿಗೂ ಪ್ರತಿಜ್ಞಾಭಂಗ ಮಾಡಲಾರೆನೆಂಬ ನಿಶ್ಚಯ ನನಗೆ ಇದೆ. ನನ್ನನ್ನು ಯಾರೂ ಅಪಾರ್ಥ ಮಾಡಿಕೊಳ್ಳಬೇಡಿ. ನಾನು ಜಂಭದಿಂದ ಹೇಳುತ್ತ ಇಲ್ಲ. ಈ ವೇದಿಕೆಯ ಮೇಲಿರುವ ಮುಖಂಡರುಗಳಾದ ನಿಮಗೆ ಈಗಲೇ ಎಚ್ಚರಕೊಡ ಬಯಸುತ್ತೇನೆ. ನಿಮಗೆ ಮನೋಧೈರ್ಯ ಇಲ್ಲದಿದ್ದರೆ, ಸಂಪೂರ್ಣವಾಗಿ ನಿಮ್ಮನ್ನು ಪ್ರತ್ಯೇಕಿಸಿದಾಗ ದೃಢಮನಸ್ಸಿನಿಂದ ನಿಲ್ಲಲು ನಿಮಗೆ ಶಕ್ತಿ ಇಲ್ಲದಿದ್ದರೆ, ನೀವು ಪ್ರತಿಜ್ಞೆಯನ್ನು ತೆಗೆದುಕೊಳ್ಳಬಾರದೆಂಬುದು ಒಂದೇ ಅಲ್ಲ, ಈ ನಿರ್ಣಯವನ್ನು ಸಭೆ ಒಪ್ಪುವ ಮೊದಲು, ಮತ್ತು ಸಭಿಕರು ಪ್ರತಿಜ್ಞೆ ತೆಗೆದುಕೊಳ್ಳುವ ಮೊದಲು ನೀವು ಅದನ್ನು ವಿರೋಧಿಸಬೇಕು ಮತ್ತು ಆ ನಿರ್ಣಯಕ್ಕೆ ನೀವು ಸಮ್ಮತಿಸಕೂಡದು. ನಾವು ಈ ಪ್ರತಿಜ್ಞೆಯನ್ನು ಸಾಮೂಹಿಕವಾಗಿ ತೆಗೆದುಕೊಳ್ಳುತ್ತ ಇದ್ದರೂ, ಒಬ್ಬರಾಗಲಿ ಅನೇಕರಾಗಲಿ ಪ್ರತಿಜ್ಞಾಭಂಗ ಮಾಡಿದರೆ ಇತರರ ಜವಾಬ್ದಾರಿ ಮುಗಿಯಿತೆಂದು ಯಾರೂ ಭಾವಿಸಬಾರದು. ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು. ಅನಂತರವೇ ಇತರರ ಒತ್ತಾಯವಿಲ್ಲದೆ ಸ್ವತಂತ್ರರಾಗಿ ಪ್ರತಿಜ್ಞೆ ತೆಗೆದುಕೊಳ್ಳಬೇಕು; ಮತ್ತು ಇತರರು ಏನೇ

ಮಾಡಲಿ, ಪ್ರಾಣ ಹೋದರೂ ತಾನು ಮಾತ್ರ ಪ್ರತಿಜ್ಞೆಯನ್ನು ಪಾಲಿಸಬೇಕೆಂಬುದನ್ನು ತಿಳಿದುಕೊಳ್ಳಬೇಕು."

ಈ ರೀತಿ ಮಾತನಾಡಿ ಬಂದು ಕುಳಿತೆ. ಆ ಸಭೆ ನನ್ನ ಭಾಷಣದ ಒಂದೊಂದು ಮಾತನ್ನೂ ನಿಶ್ಶಬ್ದತೆಯಿಂದ ಕೇಳಿತು. ಇತರ ಮುಖಂಡರೂ ಮಾತನಾಡಿದರು. ಎಲ್ಲರೂ ತಮ್ಮ ಮತ್ತು ಸಭೆಯ ಜವಾಬ್ದಾರಿಯನ್ನು ಕುರಿತು ಮಾತನಾಡಿದರು. ಅಧ್ಯಕ್ಷರು ಎದ್ದು ಅವರೂ ಪರಿಸ್ಥಿತಿಯನ್ನು ವಿಶದಗೊಳಿಸಿದರು. ಕೊನೆಯಲ್ಲಿ ಎಲ್ಲರೂ ಎದ್ದು ನಿಂತು ಕೈಗಳನ್ನು ಎತ್ತಿ ಹಿಡಿದು, ದೇವರ ಸಾಕ್ಷಿಯಾಗಿಯೂ ಆ ಮಸೂದೆ ಶಾಸನವಾದರೆ ಯಾರೂ ಅದಕ್ಕೆ ತಲೆಬಾಗಬಾರದೆಂದು ಪ್ರತಿಜ್ಞೆ ಮಾಡಿದರು. ಆ ದೃಶ್ಯವನ್ನು ಎಂದಿಗೂ ಮರೆಯಲಾರೆ; ಈಗಲೂ ಆ ಚಿತ್ರ ನನ್ನ ಕಣ್ಣಿಗೆ ಕಟ್ಟಿದಂತಿದೆ. ನಮ್ಮ ಜನರ ಉತ್ಸಾಹಕ್ಕೆ ಮಿತಿಯೇ ಇರಲಿಲ್ಲ. ಮಾರನೆಯ ದಿನವೇ ಆ ನಾಟ್ಯಶಾಲೆಯಲ್ಲಿ ಒಂದು ಅನಾಹುತ ನಡೆದು ನಾಟ್ಯಶಾಲೆ ಸಂಪೂರ್ಣವಾಗಿ ಬೆಂಕಿಯಿಂದ ಭಸ್ಮವಾಯಿತು. ಮಾರನೆಯ ದಿನ ನನ್ನ ಸ್ನೇಹಿತರು ಬೆಂಕಿಯ ವಿಷಯ ತಿಳಿಸಿ, ಆ ನಾಟ್ಯ ಶಾಲೆಯ ಗತಿಯೇ ಆ ಮಸೂದೆಗೂ ಆಗುವುದಾಗಿ ಹೇಳಿ ಈ ಶುಭಸೂಚನೆಗೆ ನಮ್ಮ ಜನರನ್ನು ಅಭಿನಂದಿಸಿದರು. ಇಂತಹ ಶಕುನಗಳಲ್ಲಿ ನನಗೆ ಯಾವಾಗಲೂ ನಂಬಿಕೆ ಇಲ್ಲ. ಆದ್ದರಿಂದ ಅದಕ್ಕೆ ಯಾವ ಬೆಲೆಯನ್ನೂ ಕೊಡಲಿಲ್ಲ. ನಮ್ಮ ಜನರ ಧೈರ್ಯದ ಮತ್ತು ನಂಬಿಕೆಯ ನಿದರ್ಶನಕ್ಕಾಗಿ ಇಲ್ಲಿ ಅದನ್ನು ತಿಳಿಸಿದ್ದೇನೆ. ಮುಂದಿನ ಅಧ್ಯಾಯಗಳಲ್ಲಿ ಈ ಎರಡು ಸದ್ಗುಣಗಳ ನಿದರ್ಶನಗಳು ವಾಚಕರಿಗೆ ಅನೇಕ ದೊರೆಯುತ್ತವೆ.

ಈ ಮಹಾಸಭೆ ಮುಗಿದ ಒಡನೆ ಕೆಲಸಗಾರರು ಸುಮ್ಮನೆ ನಿದ್ರೆಮಾಡಲಿಲ್ಲ. ಎಲ್ಲೆಲ್ಲಿಯೂ ಸಭೆ ಸೇರಿ ಎಲ್ಲ ಸ್ಥಳಗಳಲ್ಲಿ ಪ್ರತಿಜ್ಞೆಗಳನ್ನು ತೆಗೆದುಕೊಂಡರು. 'ಇಂಡಿಯನ್ ಓಪಿನಿಯನ್' ಪತ್ರಿಕೆಯಲ್ಲಿ ನಡೆಯುತ್ತಿದ್ದ ಮುಖ್ಯ ಚರ್ಚೆ ಎಲ್ಲವೂ ಈ ಕರಾಳಶಾಸನದ ವಿಷಯವೇ ಆಗಿತ್ತು.

ಇನ್ನೊಂದೆಡೆಯಲ್ಲಿ ಸ್ಥಳೀಯ ಸರಕಾರವನ್ನು ನೋಡಲು ಕಾರ್ಯಕ್ರಮ ತೆಗೆದುಕೊಂಡೆವು. ವಲಸೆರಾಷ್ಟ್ರ ಮಂತ್ರಿಯಾದ ಡಂಕನ್‌ರನ್ನು ಕಂಡು ಈ ಪ್ರತಿಜ್ಞೆಗಳ ವಿಷಯ ತಿಳಿಸಿದೆವು. ಆ ನಿಯೋಗಗೋಷ್ಠಿಯ ಸದಸ್ಯರಾಗಿದ್ದ ಸೇಠ್ ಹಾಜಿ ಹಬಿಬ್‌ರು, "ಯಾವನಾದರೂ ಅಧಿಕಾರ ಬಂದು ನನ್ನ ಪತ್ನಿಯ ಬೆರಳುಗುರುತುಗಳನ್ನು ತೆಗೆದುಕೊಳ್ಳಲು ಪ್ರಯತ್ನ ಪಟ್ಟರೆ ನಾನು ಸಹಿಸಲಾರೆ. ಅವನನ್ನು ಅಲ್ಲಿಯೇ ಕೊಂದು ನಾನೂ ಪ್ರಾಣ ಬಿಡುತ್ತೇನೆ" ಎಂದರು. ಮಂತ್ರಿ ಸೇಠರ ಮುಖವನ್ನು ಸ್ವಲ್ಪ ದಿಟ್ಟಿಸಿ ನೋಡಿ, "ಸರಕಾರದವರು ಈ ಮಸೂದೆ ಸ್ತ್ರೀಯರಿಗೆ ಅನ್ವಯಿಸಬೇಕೆಂಬುದನ್ನು ಯೋಚಿಸುತ್ತಲಿದ್ದಾರೆ. ಸ್ತ್ರೀಯರಿಗೆ ಅನ್ವಯಿಸುವ ವಿಧಿಗಳನ್ನು ತೆಗೆದುಹಾಕಲಾಗುವುದೆಂದು ಈಗಲೂ ಭರವಸೆ ಕೊಡಬಲ್ಲೆ. ಸರಕಾರದವರು ಈ ವಿಷಯದಲ್ಲಿ ನಿಮ್ಮ ಮನೋಭಾವ ಏನೆಂಬುದನ್ನು ತಿಳಿದಿದ್ದಾರೆ; ಮತ್ತು ಅದನ್ನು ಮಾನ್ಯ ಮಾಡಲು ಇಷ್ಟ ಪಡುತ್ತಾರೆ. ಆದರೆ ಇತರ ವಿಧಿಗಳ ವಿಷಯದಲ್ಲಿ ಸರಕಾರದವರು ಮನಸ್ಸು ಬದಲಾವಣೆ ಮಾಡಲು ಸಾಧ್ಯವಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನೀವು ಚೆನ್ನಾಗಿ ಯೋಚನೆ ಮಾಡಿ

ಈ ಶಾಸನಕ್ಕೆ ಸಮ್ಮತಿಸಬೇಕೆಂದು ಜನರಲ್ ಬೋಥಾರವರ ಅಭಿಪ್ರಾಯ. ಯೂರೋಪಿಯನರು ಬದುಕಿರಬೇಕಾದರೆ ಸರಕಾರದ ಅಭಿಪ್ರಾಯದಲ್ಲಿ ಈ ಶಾಸನ ಅವಶ್ಯಕ. ಮಸೂದೆಯ ಉದ್ದೇಶಕ್ಕೆ ಭಂಗ ಬರದಂತೆ ವಿವರಗಳಲ್ಲಿ ನೀವು ಏನು ಬದಲಾವಣೆ ಸೂಚಿಸಿದರೂ ಸರಕಾರದವರು ನಿಜವಾಗಿಯೂ ಅವುಗಳಿಗೆ ಗಮನ ಕೊಡುತ್ತಾರೆ. ಈ ಶಾಸನಕ್ಕೆ ಒಪ್ಪಿ, ವಿಧಿಗಳ ವಿವರಗಳಲ್ಲಿ ಮಾತ್ರ ಬದಲಾವಣೆಗೆ ಪ್ರಯತ್ನ ಪಟ್ಟರೆ ನಿಮ್ಮ ಹಿತರಕ್ಷಣೆಯಾಗುವುದೆಂದು ಈ ನಿಯೋಗಗೋಷ್ಠಿಗೆ ನನ್ನ ಬುದ್ಧಿನಾದ" ಎಂದು ತಿಳಿಸಿದನು. ಆ ಮಂತ್ರಿಯೊಡನೆ ನಡೆಸಿದ ಚರ್ಚೆಯ ವಿವರಗಳನ್ನು ಇಲ್ಲಿ ತಿಳಿಸಿಲ್ಲ. ಹಿಂದೆಯೇ ಅವುಗಳನ್ನು ತಿಳಿಸಿದ್ದೇನೆ. ವಾದಸರಣಿ ಎಲ್ಲಾ ಒಂದೇ. ಪರಿಭಾಷೆಯಲ್ಲಿ, ಶೈಲಿಯಲ್ಲಿ ಮಾತ್ರ ವ್ಯತ್ಯಾಸ ಕಂಡುಬಂದಿತು. ಸ್ತ್ರೀಯರಿಗೆ ವಿನಾಯಿತಿ ತೋರಿಸಿದ್ದಕ್ಕಾಗಿ ಸರಕಾರವನ್ನು ವಂದಿಸಿ, ಅವರ ಬುದ್ಧಿವಾದಕ್ಕೆ ವಿರೋಧವಾಗಿದ್ದರೂ ಶಾಸನಕ್ಕೆ ಸಮ್ಮತಿಸುವುದು ಸಾಧ್ಯವಿಲ್ಲ ಎಂದು ತಿಳಿಸಿ ನಿಯೋಗಗೋಷ್ಠಿ ಹಿಂದಿರುಗಿತು. ಸ್ತ್ರೀಯರನ್ನು ಶಾಸನದಿಂದ ವಿನಾಯಿಸಿದ್ದು ನಮ್ಮ ಚಳವಳಿಯ ಪ್ರಥಮ ಫಲವೊ, ಕರ್ಟಿಸ್ ವಿಧಿಸಿದ್ದ ಶಾಸ್ತ್ರೀಯ ಪದ್ಧತಿಗೆ ವಿರೋಧವಾದಾಗ್ಯೂ ವ್ಯವಹಾರ ದೃಷ್ಟಿಯಿಂದ ಸರಕಾರದವರು ತೋರಿಸಿದ ರಿಯಾಯಿತಿಯೋ ಹೇಳಲು ಕಷ್ಟ. ಭಾರತೀಯರು ಚಳವಳಿ ಹೂಡುವುದಕ್ಕೆ ಮುಂಚೆಯೇ ಈ ಶಾಸನ ಸ್ತ್ರೀಯರಿಗೆ ಅನ್ವಯಿಸಲಾಗದೆಂದು ತೀರ್ಮಾನಿಸಿದ್ದುದಾಗಿ ಸರಕಾರದವರು ಹೇಳುತ್ತಿದ್ದರು. ಅದು ಏನೇ ಇರಲಿ, ನಮ್ಮ ಜನರು ತಮ್ಮ ಚಳವಳಿಗೂ ಸ್ತ್ರೀಯರ ವಿನಾಯಿತಿಗೂ ಸಂಬಂಧ ಕಲ್ಪಿಸಿ ಸಮಾಧಾನಗೊಂಡರು. ಅವರ ಹೋರಾಟದ ಛಲವೂ ವೃದ್ಧಿಗೊಂಡಿತು.

ಈ ಚಳವಳಿಗೆ ಏನು ಹೆಸರು ಕೊಡಬೇಕೆಂದು ಯಾರಿಗೂ ತಿಳಿದಿರಲಿಲ್ಲ. ಅದರ ವಿಷಯ ತಿಳಿಸುವಾಗ **ಪ್ಯಾಸಿವ್ ರಿಸಿಸ್ಟ್‌ನ್ಸ್** ಎಂದು ಕರೆದೆನು. ಇದರಲ್ಲಿ ಯಾವುದೊ ಹೊಸ ತತ್ವ ಮೂಡಿದೆ ಎಂದು ಮಾತ್ರ ತಿಳಿದುಕೊಂಡೆ. ನಮ್ಮ ಹೋರಾಟ ಮುಂದುವರಿದಂತೆ 'ಪ್ಯಾಸಿವ್ ರೆಸಿಸ್ಟ್‌ನ್ಸ್' ಎಂಬ ಶಬ್ದದಿಂದ ಸಮಾಧಾನವಾಗಲಿಲ್ಲ; ಅದೂ ಅಲ್ಲದೆ ಈ ಹಿರಿಯ ಹೋರಾಟವನ್ನು ಇಂಗ್ಲಿಷ್ ಹೆಸರಿನಿಂದ ಕರೆಯಲು ನಾಚಿಕೆಗೇಡೆಂದು ತೋರಿತು. ಅಲ್ಲದೆ ಆ ವಿದೇಶಿ ಹೆಸರು ನಮ್ಮ ಜನರಲ್ಲಿ ಬಳಕೆಗೆ ಬರುವುದೂ ಕಷ್ಟವೆಂದು ತೋರಿತು. ಆದ್ದರಿಂದ ನಮ್ಮ ಹೋರಾಟಕ್ಕೆ ಉಚಿತ ಹೆಸರನ್ನು ಹುಡುಕಿಕೊಟ್ಟವರಿಗೆ ಒಂದು ಸಣ್ಣ ಬಹುಮಾನವನ್ನು ಕೊಡುವುದಾಗಿ 'ಇಂಡಿಯನ್ ಒಪಿನಿಯನ್' ನಲ್ಲಿ ಪ್ರಚಾರ ಪಡಿಸಿದೆವು. ಆಗ ಅನೇಕ ಸಲಹೆಗಳು ಬಂದುವು. ಆ ಹೋರಾಟದ ಅರ್ಥ ವಿವರಣೆ 'ಇಂಡಿಯನ್ ಓಪಿನಿಯನ್'ನಲ್ಲಿ ತಕ್ಕಷ್ಟು ಚರ್ಚೆಯಾಗಿತ್ತು. ಹೆಸರನ್ನು ಹುಡುಕತಕ್ಕ ಸ್ಪರ್ಧಿಗಳಲ್ಲಿ ತಕ್ಕಷ್ಟು ವಿಷಯಸಂಗ್ರಹಣೆ ಇತ್ತು. ಅವರಲ್ಲಿ ಒಬ್ಬನಾದ ಮಗನಲಾಲ್ ಗಾಂಧಿ ಸತ್ಕಾರಣದಲ್ಲಿ ಶ್ರದ್ಧೆ' ಎಂದು ಸದಾಗ್ರಹ ಎಂಬುದಾಗಿ ಸಲಹೆ ಕೊಟ್ಟನು. ಆ ಶಬ್ದವೇನೋ ಮೆಚ್ಚುಗೆಯಾಯಿತು; ಆದರೂ ನಾನು ಕೊಡಬೇಕೆಂದಿದ್ದ ಎಲ್ಲ ಅರ್ಥವನ್ನೂ ಅದು ಒಳಗೊಂಡಿರಲಿಲ್ಲ. ಆದ್ದರಿಂದ ಅದನ್ನು ಸತ್ಯಾಗ್ರಹ ಎಂದು ತಿದ್ದುಪಡಿ ಮಾಡಿದೆ. ಸತ್ಯ ಎಂದರೆ ಪ್ರೇಮ; ಆಗ್ರಹ ಎಂದರೆ

ಶಕ್ತಿಯನ್ನು ಉಂಟುಮಾಡುವುದು. ಶಕ್ತಿಯ ಇನ್ನೊಂದು ರೂಪ. ಆದ್ದರಿಂದ ಭಾರತೀಯ ಚಳವಳಿಯನ್ನು ನಾನು ಸತ್ಯಾಗ್ರಹ ಎಂದು ಕರೆಯಲು ಆರಂಭಿಸಿದೆ. ಅಂದರೆ ಸತ್ಯ ಮತ್ತು ಪ್ರೇಮ ಅಥವಾ ಅಹಿಂಸೆಯಿಂದ ಉತ್ಪನ್ನವಾದ ಶಕ್ತಿ ಎಂದು ಬಳಿಕ 'ಪ್ಯಾಸಿವ್ ರೆಸಿಸ್ಟೆನ್ಸ್' ಎಂಬ ಹೆಸರನ್ನು ತ್ಯಜಿಸಿದೆ. ಇಂಗ್ಲಿಷ್ ಬರವಣಿಗೆಗಳಲ್ಲಿ ಸಹ ಸತ್ಯಾಗ್ರಹ ಎಂದಾಗಲಿ ಅಥವಾ ಅದಕ್ಕೆ ಅನುಗುಣವಾದ ಇಂಗ್ಲಿಷ್ ಶಬ್ದಗಳನ್ನಾಗಲಿ ಉಪಯೋಗಿಸುತ್ತಿದ್ದೆವು. ಸತ್ಯಾಗ್ರಹ ಎಂಬ ಹೆಸರಿನ ಚಳವಳಿಗೂ ಮತ್ತು ಆ ಶಬ್ದದ ಹುಟ್ಟಿಗೂ ಇದೇ ಮೂಲ. ನಮ್ಮ ಚರಿತ್ರೆಯನ್ನು ಮುಂದುವರಿಸುವ ಮೊದಲು ಸತ್ಯಾಗ್ರಹಕ್ಕೂ ಪ್ಯಾಸಿವ್ ರೆಸಿಸ್ಟೆನ್ಸ್‌ಗೂ ಇರುವ ವ್ಯತ್ಯಾಸವನ್ನು ತಿಳಿಸುವುದು ಅವಶ್ಯಕ. ಅದೇ ಮುಂದಿನ ಅಧ್ಯಾಯದ ವಿಷಯ.

೧೩. ಸತ್ಯಾಗ್ರಹ ಮತ್ತು ಪ್ಯಾಸಿವ್ ರೆಸಿಸ್ಟೆನ್ಸ್

ನಮ್ಮ ಚಳವಳಿ ಮುಂದುವರಿದಂತೆ ಇಂಗ್ಲಿಷ್ ಜನರು ಅದರ ವಿಷಯದಲ್ಲಿ ಹೆಚ್ಚು ಹೆಚ್ಚು ಕುತೂಹಲಿಗಳಾದರು. ಟ್ರಾನ್ಸ್ ವಾಲಿನ ಇಂಗ್ಲಿಷ್ ಪತ್ರಿಕೆಗಳು ಸಾಮಾನ್ಯವಾಗಿ ಯೂರೋಪಿಯನರನ್ನೂ ಕರಾಳ ಶಾಸನವನ್ನೂ ಸಮರ್ಥಿಸುತ್ತಿದ್ದರೂ, ಭಾರತೀಯ ಪ್ರಮುಖರು ಬರೆದ ಲೇಖನಗಳನ್ನೂ ಆದರದಿಂದ ಮುದ್ರಿಸುತ್ತಲಿದ್ದರು. ಭಾರತೀಯರು ಸರಕಾರದ ಮುಂದಿಡುತ್ತಿದ್ದ ಬೇಡಿಕೆಗಳನ್ನು ಪೂರ್ತಿಯಾಗಿ ಆಗಲಿ ಅವುಗಳ ಸಂಕ್ಷಿಪ್ತ ವರದಿಗಳನ್ನಾಗಲಿ ಮುದ್ರಿಸುತ್ತಿದ್ದರು. ಭಾರತೀಯರ ಮುಖ್ಯ ಸಭೆಗಳಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುತ್ತಿದ್ದರು. ಇಲ್ಲವಾದರೆ ನಾವು ಅವರಿಗೆ ಕಳುಹಿಸಿದ ಸಂಕ್ಷಿಪ್ತ ವರದಿಗಳಿಗೆ ಎಡೆ ಕೊಡುತ್ತಿದ್ದರು.

ಈ ಸೌಲಭ್ಯ ನಮ್ಮ ಜನರಿಗೆ ಬಹಳ ಸಹಕಾರಿಯಾಗಿತ್ತು. ಕ್ರಮೇಣ ನಮ್ಮ ಚಳವಳಿ ಮುಂದುವರಿದಂತೆ ಕೆಲವು ಯೂರೋಪಿಯನ್ ಮುಖಂಡರು ಅದರಲ್ಲಿ ಆಸಕ್ತಿ ವಹಿಸಲು ಪ್ರಾರಂಭಿಸಿದರು. ಇವರಲ್ಲಿ ಜೋಹಾನ್ಸಬರ್ಗಿನ ಕೋಟ್ಯಾಧೀಶ್ವರರಾದ ಹಾಸ್ಕೆನ್ ರೂ ಒಬ್ಬರು. ವರ್ಣಭೇದ ಅವರಲ್ಲಿ ಯಾವಾಗಲೂ ಇರಲಿಲ್ಲ. ಆದರೆ ಸತ್ಯಾಗ್ರಹ ಪ್ರಾರಂಭವಾದ ಮೇಲೆ ಭಾರತೀಯರ ಸಮಸ್ಯೆಯಲ್ಲಿ ಅವರ ಆಸಕ್ತಿ ಹೆಚ್ಚಿತು. ಜೋಹಾನ್ಸ ಬರ್ಗಿನ ಬಡಾವಣೆಯಾದ ಜೆರ್ಮಿಸ್ಟನ್ ನ ಯೂರೋಪಿಯನರು ನನ್ನ ಭಾಷಣ ಕೇಳಬೇಕೆಂದು ಇಷ್ಟಪಟ್ಟು ಒಂದು ಸಭೆ ಸೇರಿಸಿದರು; ಆ ಸಭೆಗೆ ನನ್ನನ್ನೂ ನಮ್ಮ ಚಳವಳಿಯನ್ನೂ ಪರಿಚಯ ಮಾಡಿಕೊಡುತ್ತ ಹಾಸ್ಕೆನ್ ರು ಈ ರೀತಿ ಹೇಳಿದರು:

"ಬೇರೆ ಯಾವ ಮಾರ್ಗವಾಗಿಯೂ ಪರಿಹಾರ ದೊರೆಯದ ಕಾರಣ ಟ್ರಾನ್ಸ್ ವಾಲ್ ಭಾರತೀಯರು 'ಪ್ಯಾಸಿವ್ ರೆಸಿಸ್ಟೆನ್ಸ್' ಪ್ರಾರಂಭಿಸಿದ್ದಾರೆ. ಅವರಿಗೆ ವೋಟಿನ ಹಕ್ಕು ಇಲ್ಲ. ಅವರ ಸಂಖ್ಯಾಬಲ ಅಲ್ಪ. ಅವರು ಶಸ್ತ್ರವಿಲ್ಲದ ದುರ್ಬಲರು. ಆದ್ದರಿಂದ ದುರ್ಬಲರಿಗೆ ಇರುವ ಒಂದೇ ಅಸ್ತ್ರ 'ಪ್ಯಾಸಿವ ರೆಸಿಸ್ಟೆನ್ಸ್'; ಅದನ್ನು ಈಗ ಅವರು ಅವಲಂಬಿಸಿದ್ದಾರೆ." ಈ ಅಭಿಪ್ರಾಯಗಳನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅದರ

ಪರಿಣಾಮವಾಗಿ ನಾನು ಮಾಡಬೇಕೆಂದಿದ್ದ ಭಾಷಣದ ಬಣ್ಣವೇ ಬದಲಾವಣೆಯಾಯಿತು. ಹಾಸ್ಕೆನ್‌ರ ಅಭಿಪ್ರಾಯವನ್ನು ಖಂಡಿಸುತ್ತ ನಮ್ಮ ಪ್ಯಾಸಿವ್ ರೆಸಿಸ್ಟೆನ್ಸ್ ನ್ನು ನಾನು ಆತ್ಮಬಲ ಎಂದು ವಿವರಿಸಿದೆ. 'ಪ್ಯಾಸಿವ್ ರೆಸಿಸ್ಟೆನ್ಸ್' ಎಂದು ಉಪಯೋಗಿಸಿದರೆ ವಿಶೇಷ ಅಪಾರ್ಥಕ್ಕೆ ಎಡೆಗೊಟ್ಟಂತಾಗುವುದೆಂದು ಆ ಸಭೆಯಲ್ಲಿ ತಿಳಿದುಕೊಂಡೆ. 'ಪ್ಯಾಸಿವ್ ರೆಸಿಸ್ಟೆನ್ಸ್'ಗೂ ಸತ್ಯಾಗ್ರಹಕ್ಕೂ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಲು ಆ ಸಭೆಯ ಮುಂದೆ ನಾನು ಮಾಡಿದ ಭಾಷಣವನ್ನೇ ಸ್ವಲ್ಪ ತಿದ್ದುಪಡಿಮಾಡಿ ಇಲ್ಲಿ ಹೇಳುತ್ತೇನೆ.

ಇಂಗ್ಲಿಷಿನಲ್ಲಿ 'ಪ್ಯಾಸಿವ್ ರೆಸಿಸ್ಟೆನ್ಸ್' ಎಂದು ಯಾರು ಯಾವಾಗ ಉಪಯೋಗಿಸಿದರು ಎಂಬುದು ನನಗೆ ತಿಳಿಯದು. ಆದರೆ ಇಂಗ್ಲಿಷರಲ್ಲಿ ಯಾವುದಾದರೂ ಅಲ್ಪ ಸಂಖ್ಯಾತ ಪಂಗಡದವರಿಗೆ ಒಂದು ಶಾಸನ ಅಸಹನೀಯವಾದರೆ ಅವರು ದಂಗೆ ಏಳುವ ಬದಲು ಶಾಸನಭಂಗ ಮಾಡಿ ಅಂತಹ ಶಾಸನಭಂಗದ ಪರಿಣಾಮವಾಗಿ ಬರುವ ಶಿಕ್ಷೆಗಳನ್ನು ಅನುಭವಿಸುವ ವಿರೋಧಭಾವನೆಯನ್ನು ತಾಳುತ್ತಿದ್ದರು. ಕೆಲವು ವರ್ಷಗಳ ಹಿಂದೆ ಬ್ರಿಟಿಷ್ ಪಾರ್ಲಿಮೆಂಟು ವಿದ್ಯಾ ಶಾಸನವನ್ನು {ಎಜ್ಯುಕೇಷನ್ ಆಕ್ಟ್} ಶಾಸನ ಕಡತಕ್ಕೆ ಸೇರಿಸಿದಾಗ ಅರ್ಥಹೀನಾರೂಢ ಧರ್ಮವಿರೋಧಿಗಳು ಡಾಕ್ಟರ್ ಕ್ಲಿಫರ್ಡ್‌ರ ನೇತೃತ್ವದಲ್ಲಿ ಶಾಸನವನ್ನು ವಿರೋಧಿಸಿದರು. ವೋಟಿನ ಹಕ್ಕಿಗಾಗಿ ಇಂಗ್ಲಿಷ್ ಮಹಿಳೆಯರು ನಡೆಸಿದ ಚಳವಳಿಯನ್ನು ಪ್ಯಾಸಿವ್ ರೆಸಿಸ್ಟೆನ್ಸ್ ಎಂದು ಕರೆಯುತ್ತಿದ್ದರು. ಈ ಎರಡು ನಿದರ್ಶನಗಳನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಹಾಸ್ಕೆನ್ ರು ನಮ್ಮ ಚಳವಳಿಯನ್ನು ದುರ್ಬಲರ ಅಥವಾ ವೋಟು ಇಲ್ಲದವರ ಚಳವಳಿ ಎಂದರು. ಡಾಕ್ಟರ್ ಕ್ಲಿಫರ್ಡ್‌ರಿಗೂ ಅವರ ಸ್ನೇಹಿತರಿಗೂ ವೋಟಿನ ಹಕ್ಕು ಇತ್ತು, ಆದರೆ ಪಾರ್ಲಿಮೆಂಟಿನಲ್ಲಿ ಅಲ್ಪಸಂಖ್ಯಾತರಾಗಿದ್ದ ಕಾರಣ ವಿದ್ಯಾಶಾಸನವನ್ನು ಎದುರಿಸಲು ಸಾಧ್ಯವಾಗಲಿಲ್ಲ. ಅಂದರೆ ಅವರ ಸಂಖ್ಯಾಬಲ ಕಡಮೆ ಇತ್ತು. ಅವರು ಧ್ಯೇಯ ಸಾಧನೆಗೆ ಶಸ್ತ್ರಗಳನ್ನು ಉಪಯೊಗಿಸಲಾಗದೆಂದಲ್ಲ. ಆದರೆ ಉಪಯೋಗಿಸಿದ್ದರೆ ಗೆಲ್ಲುವ ಆಸೆ ಏನೂ ಇರಲಿಲ್ಲ. ಅಲ್ಲದೆ ಸುವ್ಯವಸ್ಥಿತ ರಾಷ್ಟ್ರದಲ್ಲಿ ಜನತೆ ತನ್ನ ಬೇಡಿಕೆಗಳನ್ನು ಸಾಧಿಸಿಕೊಳ್ಳಲು ಪದೇಪದೇ ಶಸ್ತ್ರಗಳನ್ನು ಉಪಯೋಗಿಸುತ್ತ ಹೋದರೆ, ಅದರ ಉದ್ದಿಶ್ಯವೇ ಹಾಳಾಗುತ್ತದೆ. ಅದೂ ಅಲ್ಲದೆ ಶಸ್ತ್ರಗಳನ್ನು ಉಪಯೋಗಿಸುವುದು ವ್ಯವಹಾರದೃಷ್ಟಿಯಿಂದ ಶಕ್ಯವಿದ್ದರೂ, ಸಾಮಾನ್ಯವಾಗಿ ಕೆಲವು ಅರ್ಥಹೀನಾರೂಢ ಧರ್ಮವಿರೋಧಿಗಳಿಗೆ ಶಸ್ತ್ರಗಳಿಗೆ ಶರಣುಹೋಗಲು ಇಷ್ಟವಿರಲಿಲ್ಲ. ಮಹಿಳೆಯರಿಗೆ ವೋಟಿನ ಹಕ್ಕು ಇರಲಿಲ್ಲ. ಜನಬಾಹುಲ್ಯ ದೇಹಶಕ್ತಿಗಳಲ್ಲೂ ಅವರ ಬಲ ಕಡಿಮೆಯಾಗಿತ್ತು. ಆದ್ದರಿಂದ ಅವರ ನಿದರ್ಶನವೂ ಹಾಸ್ಕೆನ್‌ರ ಅಭಿಪ್ರಾಯಕ್ಕೆ ಮೆರಗು ಕೊಟ್ಟಿತು. ಮಹಿಳೆಯರು ಸಹ ಹಿಂಸಾತ್ಮಕ ಬಲವನ್ನು ಉಪಯೋಗಿಸಕೂಡದೆಂದು ತೀರ್ಮಾನಿಸಿರಲಿಲ್ಲ. ಕೆಲವರು ಮನೆಗಳಿಗೆ ಬೆಂಕಿ ಹಚ್ಚಿ ಗಂಡಸರ ಮೇಲೆ ಕೈ ಸಹ ಮಾಡಿದರು. ಯಾರನ್ನಾದರೂ ಕೊಲ್ಲಬೇಕೆಂದು ಅವರ ಇಷ್ಟವೆಂದು ನಾನು ನಂಬಲಾರೆ. ಆದರೆ ಅವಕಾಶ ದೊರೆತರೆ ಏಟುಗಳನ್ನು

ಬಿಗಿಯಬೇಕೆಂದೂ ಆ ಮೂಲಕ ಉಗ್ರಪರಿಸ್ಥಿತಿಯನ್ನುಂಟು ಮಾಡಬೇಕೆಂದೂ ಅವರ ಆಶಯವಿತ್ತೆಂದು ತೋರುತ್ತದೆ.

ಆದರೆ ಭಾರತೀಯ ಚಳವಳಿಯಲ್ಲಿ ಪಾಶವೀಬಲಕ್ಕೆ ಯಾವ ಸಂದರ್ಭದಲ್ಲೂ ಅವಕಾಶವಿಲ್ಲ. ಅದೂ ಅಲ್ಲದೆ ನಾವು ಎಷ್ಟೇ ಕಷ್ಟದಲ್ಲಿ ಸಿಕ್ಕಿರಲಿ, ಸತ್ಯಾಗ್ರಹಿಗಳು ಯಾವ ಸಂದರ್ಭದಲ್ಲಿಯೂ ಸಹ ಪಶುಬಲವನ್ನು ಉಪಯೋಗಿಸಬಹುದಾದ ಸಂದರ್ಭಗಳಲ್ಲಿ ಸಹ ಬಲಪ್ರಯೋಗ ಮಾಡಲಿಲ್ಲವೆಂದೂ ಮುಂದೆ ಗೊತ್ತಾಗುತ್ತದೆ. ಅಲ್ಲದೆ ಭಾರತೀಯರು ದುರ್ಬಲರಾಗಿ ವೋಟು ಇಲ್ಲದವರಾಗಿದ್ದರೂ ಅದಾವುದೂ ಸತ್ಯಾಗ್ರಹ ಚಳವಳಿಗೆ ಕಾರಣವಾಗಿರಲಿಲ್ಲ. ಆದರೆ ಭಾರತೀಯರಿಗೆ ವೋಟಿನ ಹಕ್ಕೂ ಶಸ್ತ್ರಾಸ್ತ್ರಗಳಿದ್ದರೆ ಅವರನ್ನು ಎದುರು ಹಾಕಿಕೊಳ್ಳುವ ಮುಂಚೆಯೇ ವಿರೋಧಿ ಪಕ್ಷದವರು ಸಹ ಯೋಚನೆಮಾಡುತ್ತಿದ್ದರು. ಆದ್ದರಿಂದ ಶಸ್ತ್ರಾಸ್ತ್ರವಿರುವವರು ಸತ್ಯಗ್ರಹ ಹೂಡುವ ಅವಕಾಶ ಕಡಮೆ. ಭಾರತೀಯ ಚಳವಳಿಯ ವಿಷಯ ಯೋಚಿಸಿದಾಗ, ಶಸ್ತ್ರಸಹಾಯದಿಂದ ವಿರೋಧಿಸುವ ಪ್ರಸಕ್ತಿಯ ವಿಷಯವೇ ಯೋಚನೆಗೆ ಬರಲಿಲ್ಲವೆಂದು ಖಂಡಿತ ಹೇಳಬಲ್ಲೆ. ಸುಲಭದಲ್ಲಿ 'ಸತ್ಯಾಗ್ರಹ' ಎಂದರೆ ಆತ್ಮಶಕ್ತಿ. ಎಲ್ಲಿ, ಎಷ್ಟರ ವರೆಗೆ ಶಸ್ತ್ರಗಳಿಗೆ, ದೇಹಶಕ್ತಿಗೆ ಅಥವಾ ಪಾಶವೀಬಲಪ್ರಯೋಗಕ್ಕೆ ಅವಕಾಶವಿದೆಯೊ ಅಲ್ಲಿ, ಅಷ್ಟರಮಟ್ಟಿಗೆ ಆತ್ಮಶಕ್ತಿ ಕಡಮೆಯಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಇವು ಎರಡೂ ಪರಸ್ಪರ ವಿರೋಧ ಶಕ್ತಿಗಳು. ಅಲ್ಲದೆ ನಾನು ಸತ್ಯಾಗ್ರಹವನ್ನು ಪ್ರಾರಂಭಿಸಿದಾಗಲೂ ನನಗೆ ಅವುಗಳ ವಿರೋಧಪ್ರಕೃತಿ ಪೂರ್ಣ ಮನವರಿಕೆಯಾಗಿತ್ತು.

ಈ ಅಭಿಪ್ರಾಯಗಳು ತಪ್ಪೇ ಸರಿಯೇ ಎಂಬುದನ್ನು ಇಲ್ಲಿ ವಿಮರ್ಶೆಮಾಡುವುದು ಬೇಡ. 'ಪ್ಯಾಸಿವ್ ರೆಸಿಸ್ಟೆನ್ಸ್' ಮತ್ತು 'ಸತ್ಯಾಗ್ರಹ'ಕ್ಕೆ ಇರುವ ಭೇದವನ್ನು ತಿಳಿಯುವುದು ಮಾತ್ರ ನಮ್ಮ ಕೆಲಸ. ಅವೆರಡಕ್ಕೂ ಅಪಾರ ವ್ಯತ್ಯಾಸವಿದೆ ಎಂಬುದನ್ನು ನಾವು ತಿಳಿದಿದ್ದೇವೆ. ಇದನ್ನು ಅರ್ಥಮಾಡಿಕೊಳ್ಳದೆ 'ಪ್ಯಾಸಿವ್ ರೆಸಿಸ್ಟನ್ಸ್', ಸತ್ಯಾಗ್ರಹಿಗಳು ಎಂದು ಕರೆದುಕೊಳ್ಳುವವರು ಇಬ್ಬರು ಒಂದೇ ಎಂದು ಭಾವಿಸಿದರೆ ಇಬ್ಬರಿಗೂ ಪರಸ್ಪರ ಅನ್ಯಾಯ ಮಾಡಿ ದುಷ್ಪರಿಣಾಮಕ್ಕೆ ಎಡೆ ಮಾಡಿದಂತಾಗುತ್ತದೆ. ದಕ್ಷಿಣ ಆಫ್ರಿಕದಲ್ಲಿ ನಾವು 'ಪ್ಯಾಸಿವ್ ರೆಸಿಸ್ಟನ್ಸ್' ಎಂಬ ಶಬ್ದವನ್ನು ಉಪಯೋಗಿಸಿದ್ದರ ಫಲವಾಗಿ, ಜನರು ನಮಗೆ ವೋಟಿನ ಚಳವಳಿ ನಡೆಸಿದ ಇಂಗ್ಲಿಷ್ ಮಹಿಳೆಯರ ಧೈರ್ಯ ಸ್ವಾರ್ಥತ್ಯಾಗಗಳನ್ನು ಆರೋಪಿಸುವ ಬದಲು ಆಸ್ತಿಪ್ರಾಣಗಳಿಗೆ ಕಂಟಕರೆಂದು ಭಾವಿಸಲು ಪ್ರಾರಂಭಿಸಿದರು; ಹಾಸ್ಕೆನ್ ರಂಥ ಭಾರತೀಯ ಸ್ನೇಹಿತರು ಸಹ ನಮ್ಮನ್ನು ಶಕ್ತಿ ಹೀನರೆಂದು ಅಪಾರ್ಥಮಾಡಿದರು. ನಮ್ಮ ನಂಬಿಕೆಯಂತೆ ನಮ್ಮ ಮನೋಭಾವನೆಯೂ ವಿಕಾಸಹೊಂದಿ ನಮ್ಮ ಶಕ್ತಿಯೂ ಅಭಿವೃದ್ಧಿಯಾಗುತ್ತದೆ. ನಾವು ಬಲಹೀನರೆಂದೂ, ನಿಸ್ಸಹಾಯಕರೆಂದೂ, ಆದ್ದರಿಂದ ಶಾಸನವಿರೋಧವನ್ನು (ಪ್ಯಾಸಿವ್ ರೆಸಿಸ್ಟೆನ್ಸ್) ಅವಲಂಬಿಸಿದ್ದೇವೆಂದೂ ನಂಬುತ್ತ, ಇತರರಲ್ಲಿಯೂ ಅದೇ ನಂಬಿಕೆಯನ್ನುಂಟುಮಾಡುತ್ತ ಹೋದರೆ ನಮ್ಮ ಚಳುವಳಿ ನಿಮ್ಮನ್ನು ಧೈರ್ಯಶಾಲಿಗಳನ್ನಾಗಿ ಮಾಡುವುದಿಲ್ಲ. ಆ

ಚಳವಳಿಯನ್ನು ಬಲಹೀನರ ಆಯುಧವೆಂದು ಅದಷ್ಟು ಜಾಗ್ರತೆಯಾಗಿ ತ್ಯಜಿಸುತ್ತೇವೆ. ಅದೇ ನಾವು ಸತ್ಯಾಗ್ರಹಿಗಳಾದರೆ ಮತ್ತು ಶಕ್ತಿಯುತರೆಂದು ಸತ್ಯಾಗ್ರಹ ಹೂಡಿದರೆ ಅದರಿಂದ ಎರಡು ಪರಿಣಾಮಗಳುಂಟಾಗುತ್ತವೆ. ನಾವು ಬಲಿಷ್ಠರೆಂದು ನಂಬುತ್ತ ಸಾಗಿದಂತೆಲ್ಲ ನಮ್ಮ ಬಲ ದಿನೇದಿನೇ ಅಭಿವೃದ್ಧಿಯಾಗುತ್ತದೆ. ನಮ್ಮ ಬಲ ಅಧಿಕವಾದಂತೆ ನಮ್ಮ ಸತ್ಯಾಗ್ರಹವೂ ಪರಿಣಾಮಕಾರಿಯಾಗುತ್ತದೆ. ಆ ಮಾರ್ಗವನ್ನು ತ್ಯಜಿಸಲು ಅವಕಾಶವನ್ನು ಹುಡುಕುತ್ತಿರುವುದಿಲ್ಲ. ಅದೂ ಅಲ್ಲದೆ 'ಪ್ಯಾಸಿವ್ ರೆಸಿಸ್ಟೆನ್ಸ್' ನಲ್ಲಿ ಪ್ರೇಮಕ್ಕೆ ಎಡೆಯಿಲ್ಲ. ಆದರೆ ಸತ್ಯಾಗ್ರಹದಲ್ಲಿ ದ್ವೇಷಕ್ಕೆ ಸ್ಥಳ ಇಲ್ಲವೆಂಬುದು ಒಂದೇ ಅಲ್ಲ, ಅದು ಸತ್ಯಾಗ್ರಹದ ಮೂಲ ತತ್ವಕ್ಕೆ ವಿರೋಧ. 'ಪ್ಯಾಸಿವ್ ರೆಸಿಸ್ಟೆನ್ಸ್' ನಲ್ಲಿ ಅನುಕೂಲ ಸಂದರ್ಭದಲ್ಲಿ ಶಸ್ತ್ರಗಳನ್ನು ಉಪಯೋಗಿಸಲು ಅವಕಾಶವಿದೆ. ಸತ್ಯಾಗ್ರಹದಲ್ಲಿ ಪರಿಸ್ಥಿತಿ ಎಷ್ಟು ಅನುಕೂಲವಾಗಿದ್ದರೂ ಬಲಪ್ರಯೋಗ ನಿಷಿದ್ಧ. ಬಲಪ್ರಯೋಗಕ್ಕೆ 'ಪ್ಯಾಸಿವ್ ರೆಸಿಸ್ಟೆನ್ಸ್' ಒಂದು ಸಾಧನವೆಂಬ ಭಾವನೆ ಇದೆ. ಆದರೆ ಸತ್ಯಾಗ್ರಹವನ್ನು ಆ ರೀತಿ ಉಪಯೋಗಿಸಲು ಎಂದಿಗೂ ಸಾಧ್ಯವಿಲ್ಲ. ಆಯುಧಗಳನ್ನು ಉಪಯೋಗಿಸುತ್ತ ಜೊತೆಯಲ್ಲಿಯೇ 'ಪ್ಯಾಸಿವ್ ರೆಸಿಸ್ಟೆನ್ಸ್' ಸಹ ನಡೆಸಲು ಅವಕಾಶವಿದೆ. ಆದರೆ ಸತ್ಯಾಗ್ರಹವೂ ಬಲಪ್ರಯೋಗವೂ ಒಂದಕ್ಕೊಂದು ವಿರೋಧವಾದ್ದರಿಂದ ಎರಡೂ ಒಟ್ಟಿಗೆ ಇರಲು ಸಾಧ್ಯವೇ ಇಲ್ಲ. ನಮ್ಮ ಆಪ್ತರಲ್ಲಿಯೂ, ಬಂಧುಗಳಲ್ಲಿಯೂ ನಾವು ಸತ್ಯಾಗ್ರಹವನ್ನು ನಡೆಸಬಹುದು; ಆದರೆ ಅವರ ಮೇಲಿನ ನಮ್ಮ ಪ್ರೀತಿ ನಾಶವಾಗಿ ಅವರು ದ್ವೇಷಿಗಳಾಗದ ಹೊರತು ನಾವು 'ಪ್ಯಾಸಿವ್ ರೆಸಿಸ್ಟೆನ್ಸ್' ಅವರ ಮೇಲೆ ಹೂಡಲು ಸಾಧ್ಯವಿಲ್ಲ. 'ಪ್ಯಾಸಿವ್ ರೆಸಿಸ್ಟೆನ್ಸ್' ನಲ್ಲಿ ನಮ್ಮ ಎದುರಾಳಿಗೆ ಕೆಡುಕನ್ನುಂಟುಮಾಡಬೇಕೆಂದೂ ಅಂತಹ ಕಾರ್ಯದಲ್ಲಿ ಏನು ತೊಂದರೆ ಬಂದರೂ ಎದುರಿಸಲು ಸಿದ್ಧರಿರಬೇಕೆಂದೂ ಭಾವನೆ ಇದೆ; ಆದರೆ ಸತ್ಯಾಗ್ರಹದಲ್ಲಿ ಎದುರಾಳಿಗೆ ಕೆಡುಕು ಮಾಡುವ ಭಾವನೆಯೇ ಇಲ್ಲ. ತಾನಾಗಿ ಯಾತನೆಅನುಭವಿಸುತ್ತ ಆತ್ಮತ್ಯಾಗದಿಂದ ಎದುರಾಳಿಯನ್ನು ಗೆಲ್ಲುವುದೇ ಸತ್ಯಾಗ್ರಹದ ಮೂಲ ತತ್ವ.

ಈ ಎರಡು ಶಕ್ತಿಗಳಿಗೆ ಇರುವ ವ್ಯತ್ಯಾಸಗಳೆ ಇವು. ಆದರೆ ಪ್ಯಾಸಿವ್ ರೆಸಿಸ್ಟೆನ್ಸ್' ಎಂಬ ಹೆಸರಿನಲ್ಲಿ ನಡೆಯುವ ಎಲ್ಲ ಚಳವಳಿಗಳಲ್ಲಿ ಈ ಎಲ್ಲ ಗುಣ ಅಥವಾ ದೋಷಗಳನ್ನೂ ನೋಡಬಹುದೆಂದು ನಾನು ಹೇಳುವುದಿಲ್ಲ. 'ಪ್ಯಾಸಿವ್ ರೆಸಿಸ್ಟೆನ್ಸ್'ನ ಅನೇಕ ನಿದರ್ಶನಗಳಲ್ಲಿ ಈ ದೋಷಗಳು ಕಂಡುಬಂದಿವೆ ಎಂದು ತೋರಿಸಿಕೊಡಬಹುದು. ಏಸು ಕ್ರಿಸ್ತನನ್ನು 'ಪ್ಯಾಸಿವ್ ರೆಸಿಸ್ಟರು'ಗಳಿಗೆ ಕಿರೀಟ ಪ್ರಾಯನೆಂದು ಹೊಗಳಿದ್ದಾರೆ; ಆದರೆ ಈ ಸಂದರ್ಭದಲ್ಲಿ 'ಪ್ಯಾಸಿವ್ ರೆಸಿಸ್ಟೆನ್ಸ್' ಎಂದರೆ ಒಂದೇ ಅರ್ಥ–ಸತ್ಯಾಗ್ರಹ. ಆ ಅರ್ಥದಲ್ಲಿ 'ಪ್ಯಾಸಿವ್ ರೆಸಿಸ್ಟೆನ್ಸ್'ಗಳು ಚರಿತ್ರೆಯಲ್ಲಿ ಅನೇಕ ಇವೆ. ಟಾಲ್ ಸ್ಟಾಯಿಯವರು ಹೇಳಿರುವ ರಷ್ಯಾ ದೇಶದ ಡೂಕೊಬಾರ್ ಗಳ ನಿದರ್ಶನ ಒಂದು. ಕ್ರೈಸ್ತ ಧರ್ಮದ ಮುಂಬೆಳಗಿನಲ್ಲಿ ಕ್ರೂರ ದಬ್ಬಾಳಿಕೆಯನ್ನು ಸಹಿಸಿದ ಸಾವಿರಾರು ಕ್ರೈಸ್ತ ಧರ್ಮಭೀರುಗಳ ಬಲಿದಾನವನ್ನು 'ಪ್ಯಾಸಿವ್ ರೆಸಿಸ್ಟೆನ್ಸ್' ಎಂದು

ಕೆಲವರು ಸಲಹೆಕೊಟ್ಟರು; ಆದರೆ ನಾನು ಒಪ್ಪಲಿಲ್ಲ. ದಕ್ಷಿಣ ಆಫ್ರಿಕದಲ್ಲಿ ಹಿಂದೂ ಮುಸ್ಲಿಂ ಪ್ರಶ್ನೆಯೇ ಇರಲಿಲ್ಲ. ಎರಡು ಕೋಮುಗಳಲ್ಲಿ ಭಿನ್ನಾಭಿಪ್ರಾಯ ಇರಲಿಲ್ಲವೆಂದಲ್ಲ. ಈ ಅಭಿಪ್ರಾಯಗಳು ಉಗ್ರರೂಪ ತಾಳದಿರಲು ದಕ್ಷಿಣ ಆಫ್ರಿಕದ ವಿಶೇಷ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಕಾರಣವಾಗಿದ್ದರೂ ಅಲ್ಲಿನ ಮುಖಂಡರು ನಿಷ್ಕಪಟಿಗಳೂ, ಶ್ರದ್ಧಾನ್ವಿತರೂ ಆಗಿ ಕೆಲಸ ಮಾಡುತ್ತ, ನಮ್ಮ ಜನಾಂಗಕ್ಕೆ ಒಳ್ಳೆಯ ಮಾರ್ಗದರ್ಶಿಗಳಾಗಿದ್ದುದೇ ಮುಖ್ಯ ಕಾರಣ. ನನ್ನ ಜೊತೆಗೆ ಒಬ್ಬ ಮುಸಲ್ಮಾನ ಸದ್ಗೃಹಸ್ಥರು ಬಂದರೆ ಸಾಕೆಂದೂ, ನಿಯೋಗ ಗೋಷ್ಠಿಯಲ್ಲಿ ಇಬ್ಬರು ಇದ್ದರೆ ಸಾಕೆಂದೂ ನನ್ನ ಅಭಿಮತ ತಿಳಿಸಿದೆ. ನಾನು ಭಾರತೀಯರೆಲ್ಲರ ಪ್ರತಿನಿಧಿಯಾದ್ದರಿಂದ ನನ್ನ ಜೊತೆಯಲ್ಲಿ ಹಿಂದೂಗಳ ಪ್ರತಿನಿಧಿಯೂ ಒಬ್ಬರು ಬೇಕೆಂದು ಹಿಂದೂಗಳು ಹೇಳಿದರು. ಇನ್ನು ಕೆಲವರು ಒಬ್ಬ ಕೊಂಕಣಿ, ಒಬ್ಬ ಮುಸಲ್ಮಾನ್, ಒಬ್ಬ ಮೆಮನ್, ಒಬ್ಬ ಪಾಟಿದಾರ್, ಒಬ್ಬ ಅನಾವಾಲ ಇರಬೇಕೆಂದು ಸಲಹೆಕೊಟ್ಟರು. ಕೊನೆಯಲ್ಲಿ ಎಲ್ಲರೂ ನಿಜಸ್ಥಿತಿ ಅರಿತು ಹೆಚ್.ಓ.ಅಲಿ, ನಾನು ಇಬ್ಬರೇ ಹೋಗಬೇಕೆಂದು ನಿರ್ಧರಿಸಿದರು. ಹೆಚ್.ಓ.ಅಲಿ ಅರ್ಧ ಮಲೆಯಾ. ಅವರ ತಂದೆ ಭಾರತೀ ಮುಸಲ್ಮಾನರು. ತಾಯಿ ಮಲೆಯಾ ಹೆಂಗಸು. ಅವರ ಮಾತೃಭಾಷೆ ಡಚ್. ಒಳ್ಳೆಯ ವಿದ್ಯಾವಂತರು; ಡಚ್ ಭಾಷೆಯಲ್ಲಿ ಎಷ್ಟು ಪರಿಶ್ರಮವಿತ್ತೊ ಇಂಗ್ಲಿಷ್ ನಲ್ಲೂ ಅಷ್ಟೇ ಪರಿಶ್ರಮವಿತ್ತು. ವೃತ್ತಪತ್ರಿಕೆಗಳಿಗೆ ಲೇಖನ ಬರೆಯುವ ಅಭ್ಯಾಸ ಸಹ ಇಟ್ಟುಕೊಂಡಿದ್ದರು. ಟ್ರಾನ್ಸ್ ವಾಲ್ ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್ ಸದಸ್ಯರಾಗಿ, ಬಹುಕಾಲ ಸಾರ್ವಜನಿಕ ಜೀವನದಲ್ಲಿ ಭಾಗವಹಿಸುತ್ತ ಬಹಳ ಚೆನ್ನಾಗಿ ಹಿಂದೂಸ್ಥಾನಿ ಮಾತನಾಡುತ್ತಿದ್ದರು.

ನಾವು ಇಂಗ್ಲೆಂಡ್ ಸೇರುತ್ತಲೇ ನಮ್ಮ ಕೆಲಸ ಪ್ರಾರಂಭಿಸಿದೆವು. ಇಂಗ್ಲೆಂಡಿಗೆ ಹೋಗುತ್ತಲೆ ದಾರಿಯಲ್ಲಿ ಹಡಗಿನ ಮೇಲೆ ಸಿದ್ಧಪಡಿಸಿದ್ದ ಬಿನ್ನವತ್ತಳೆಯನ್ನು ಸರಕಾರದ ಕಾರ್ಯದರ್ಶಿಗಳಿಗೆ ಕೊಡಲು ಅಚ್ಚುಹಾಕಿಸಿದೆವು. ವಲಸೆ ರಾಷ್ಟ್ರಗಳಿಗೆ ಲಾರ್ಡ್ ಎಲ್ಗಿನ್‌ರೂ, ಭಾರತಕ್ಕೆ ಲಾರ್ಡ್ ಮಾರ್ಲೆಯವರೂ ಕಾರ್ಯದರ್ಶಿಗಳಾಗಿದ್ದರು. ದಾದಾಭಾಯಿಯವರನ್ನು ಕಂಡೆವು; ಅವರ ಸಹಾಯದಿಂದ ಭಾರತ ರಾಷ್ಟ್ರೀಯ ಮಹಾಸಭೆಯ ಬ್ರಿಟಿಷ್ ಸಮಿತಿಯ ಸದಸ್ಯರನ್ನು ನೋಡಿದೆವು. ನಮ್ಮ ಸಮಸ್ಯೆಯನ್ನು ಅವರೆದುರಿಗೆ ಇಟ್ಟು, ದಾದಾಭಾಯಿಯವರ ಬುದ್ಧಿವಾದದಂತೆ ಎಲ್ಲರ ಸಹಕಾರ ಪಡೆಯುವ ಇಚ್ಛೆ ತಿಳಿಸಿದೆವು. ಸಮಿತಿಯು ನಮ್ಮ ಕಾರ್ಯನೀತಿಯನ್ನು ಒಪ್ಪಿತು. ಅದೇ ರೀತಿ ನಾವು ಮಂಚೆರ್ಜಿಭಾವನಗರಿಯವರನ್ನು ಕಂಡೆವು; ಅವರೂ ನಮಗೆ ತುಂಬ ಸಹಾಯ ಮಾಡಿದರು. ಅವರು ಮತ್ತು ದಾದಾಭಾಯಿಯವರು ನಮ್ಮನ್ನು ಲಾರ್ಡ್ ಎಲ್ಗಿನ್ ರವರಿಗೆ ಪರಿಚಯಮಾಡಿಕೊಡಲು ಒಬ್ಬ ಪ್ರಸಿದ್ಧ ನಿಷ್ಪಕ್ಷಪಾತಿ ಆಂಗ್ಲೋ ಇಂಡಿಯನ್ ರ ಸಹಾಯ ಪಡೆಯಬೇಕೆಂದು ಸಲಹೆಕೊಟ್ಟರು. ಸರ್ ಮಂಚೆರ್ಜಿಯವರು ಕೆಲವು ಹೆಸರು ಸಹ ತಿಳಿಸಿದರು. ಸರ್ ಲೆಪೆಲ್ ಗ್ರಿಫಿನ್ ರೂ ಅವರಲ್ಲಿ ಒಬ್ಬರು. ಸರ್ ಡಬ್ಲ್ಯು. ಡಬ್ಲ್ಯು. ಹಂಟರ್ ಅಷ್ಟುಹೊತ್ತಿಗೆ ಸ್ವರ್ಗಸ್ಥರಾಗಿದ್ದರು.

ಬದುಕಿದ್ದರೆ ದಕ್ಷಿಣ ಆಫ್ರಿಕ ಭಾರತೀಯರ ಸಿದ್ಧತೆಗಳನ್ನೆಲ್ಲ ತಿಳಿದವರಾಗಿ ಅವರೇ ನಮ್ಮ ನಿಯೋಗಗೋಷ್ಠಿಯ ಮುಂದಾಳುಗಳಾಗುತ್ತಿದ್ದರು. ಇಲ್ಲದಿದ್ದರೆ ಲಾರ್ಡ್ಸ್ ಸಭೆಯಲ್ಲಿ ಪ್ರತಿಭಾಶಾಲಿಗಳಾದ ಯಾರಾದರೊಬ್ಬರನ್ನು ಆ ರೀತಿ ಸಹಾಯ ಮಾಡಲು ಒಪ್ಪಿಸುತ್ತಿದ್ದರು. ನಾವು ಸರ್ ಲೆಪೆಲ್ ಗ್ರಿಫಿನ್ ರನ್ನು ನೋಡಿದೆವು. ಭಾರತದಲ್ಲಿನ ಆಗಿನ ರಾಜಕೀಯ ಚಳವಳಿಗೆ ಅವರು ವಿರೋಧಿಗಳಾಗಿದ್ದರು. ಆದರೆ ಈ ಪ್ರಶ್ನೆಯಲ್ಲಿ ಬಹಳ ಆಸಕ್ತಿ ತೋರಿಸಿ ನಿಮ್ಮ ನಿಯೋಗಗೋಷ್ಠಿಯ ನಾಯಕತ್ವ ವಹಿಸಲು ಒಪ್ಪಿದರು. ನಮ್ಮ ದಾಕ್ಷಿಣ್ಯಕ್ಕಲ್ಲ, ನಮ್ಮ ಕಾರ್ಯದ ನ್ಯಾಯಪೂರ್ಣತೆ, ಧರ್ಮಪರತೆಗಾಗಿ, ಆ ಸಂಬಂಧವಾದ ಎಲ್ಲ ಕಾಗದಪತ್ರಗಳನ್ನೂ ಓದಿ ವಿಷಯಪರಿಚಯ ಮಾಡಿಕೊಂಡರು. ಸಾಧ್ಯವಾದ ಎಲ್ಲ ಮುಖ್ಯ ಆಂಗ್ಲೋ ಇಂಡಿಯನ್ ರನ್ನೂ, ಪಾರ್ಲಿಮೆಂಟ್ ಸದಸ್ಯರನ್ನೂ ಭೇಟಿಮಾಡಿದರು. ನಿಯೋಗಗೋಷ್ಠಿ ಲಾರ್ಡ್ ಎಲ್ಗಿನ್‌ರನ್ನು ಕಂಡಾಗ ಅವರು ಎಲ್ಲವನ್ನೂ ಸಾವಧಾನದಿಂದ ಮನಸ್ಸಿಟ್ಟು ಕೇಳಿ, ತಮ್ಮ ಸಹಾನುಭೂತಿ ತೋರಿಸಿ, ತಮಗಿರುವ ಕಷ್ಟಗಳನ್ನು ವಿವರಿಸಿ, ತಮ್ಮ ಕೈಲಾದ ಸಹಾಯ ಮಾಡುವುದಾಗಿ ಭರವಸೆ ಕೊಟ್ಟರು. ಅದೇ ನಿಯೊಗಗೋಷ್ಠಿಯೇ ಮಾರ್ಲೆಯವರನ್ನೂ ಭೇಟಿ ಮಾಡಿತು. ಅವರೂ ಸಹಾನುಭೂತಿ ವ್ಯಕ್ತಪಡಿಸಿ ಅದೇ ಅಭಿಪ್ರಾಯ ಕೊಟ್ಟರು. ಕಾಮನ್ಸ್ ಸಭೆಯ ಆವರಣವೊಂದರಲ್ಲಿ 'ಕಾಮನ್ಸ್ ಸಭೆಯ ಭಾರತೀಯ ವಿಚಾರ ಸಮಿತಿ'ಯ ಸದಸ್ಯರ ಸಭೆಯೊಂದನ್ನು ಸೇರಿಸಲು ಸರ್ ವಿಲಿಯಂ ವೆಡರ್ ಬರ್ನ್‌ರು ಸಹಾಯಮಾಡಿದರು. ನಮ್ಮ ಕೈಲಾದಮಟ್ಟಿಗೆ ಅವರಿಗೂ ನಮ್ಮ ಸಮಸ್ಯೆಯನ್ನು ವಿವರಿಸಿದೆವು. ಆಗ ಐರಿಷ್ ಪಕ್ಷದ ಮುಖಂಡರಾದ ರೆಡ್ಮಂಡ್ ರನ್ನು ನೋಡಿದೆವು. ಒಟ್ಟಿನಲ್ಲಿ, ಯಾವ ಪಕ್ಷದವರೇ ಆಗಲಿ ಆದಷ್ಟು ಜನ ಪಾರ್ಲಿಮೆಂಟ ಸದಸ್ಯರನ್ನು ನೋಡಿದೆವು. ಭಾರತೀಯ ರಾಷ್ಟ್ರ ಮಹಾಸಭೆಯ ಬ್ರಿಟಿಷ್ ಸಮಿತಿಯವರು ನಮಗೆ ಬಹಳ ಸಹಾಯ ಮಾಡಿದರು. ಆಧರೆ ಇಂಗ್ಲಿಷ್ ಪದ್ಧತಿಯಂತೆ ಒಂದು ಪಕ್ಷಕ್ಕೆ ಸೇರಿದ ಅಥವಾ ಕೆಲವು ನಿರ್ದಿಷ್ಟ ಅಭಿಪ್ರಾಯವುಳ್ಳವರು ಮಾತ್ರ ಸಮಿತಿಗೆ ಸದಸ್ಯರಾಗಿರ ಬಹುದಾಗಿತ್ತು; ಆದರೆ ಸಮಿತಿಯ ಹೊರಗಿದ್ದವರಲ್ಲಿ ಸಹ ನಮಗೆ ಸಹಾಯ ಮಾಡಿದವರು ಅನೇಕರಿದ್ದರು. ಇವರೆಲ್ಲ ಒಂದು ಕಡೆ ಸೇರಿ, ನಮ್ಮ ಹಿತರಕ್ಷಣೆಯಲ್ಲಿ ಹೆಚ್ಚು ಸಹಾಯಕರಾಗುವಂತೆ ಒಂದು ಸ್ಥಾಯೀ ಸಮಿತಿಯನ್ನು ರೂಪುಗೊಳಿಸಬೇಕೆಂದು ಪ್ರಯತ್ನಪಟ್ಟೆವು. ಎಲ್ಲ ಪಕ್ಷಗಳ ಸದಸ್ಯರೂ ನಮ್ಮ ಈ ಆಲೋಚನೆಗೆ ಸಮ್ಮತಿಸಿದರು. ಇಂಥ ಸಂಸ್ಥೆಯ ಕೆಲಸ ನಡೆಸುವ ಭಾರ ಮುಖ್ಯವಾಗಿ ಕಾರ್ಯದರ್ಶಿಯ ಮೇಲೆ ಬೀಳುತ್ತದೆ. ಕಾರ್ಯದರ್ಶಿಗೆ ಸಂಸ್ಥೆಯ ಆದರ್ಶ, ಧ್ಯೇಯಗಳಲ್ಲಿ ದೃಢನಂಬಿಕೆ ಇರಬೇಕಾದ್ದು ಮಾತ್ರವಲ್ಲ, ತನ್ನ ವೇಳೆಯನ್ನೂ ಹೆಚ್ಚಾಗಿ ಆ ಧ್ಯೇಯ ಸಾಧನೆಗೆ ವಿನಿಯೋಗಿಸಬೇಕು, ವಿಶೇಷ ಶ್ರಮವಹಿಸಿ ಕೆಲಸಮಾಡಬೇಕು. ಮೊದಲು ದಕ್ಷಿಣ ಆಫ್ರಿಕದಲ್ಲಿ ನನ್ನ ಸಹಾಯಕರಾಗಿ ಕೆಲಸ ಮಾಡಿ, ಈಗ ನ್ಯಾಯವಾದಿಯಾಗಲು ಇಂಗ್ಲೆಂಡಿನಲ್ಲಿ ಅಭ್ಯಾಸ ಮಾಡುತ್ತಿದ್ದ ಡಬ್ಲ್ಯು.ರಿಚ್ ನಲ್ಲಿ ಈ ಎಲ್ಲ ಗುಣಗಳೂ ಇದ್ದವು. ಅವನು ಇಂಗ್ಲೆಂಡಿನಲ್ಲಿಯೆ ಇದ್ದ;

ಸಹಾಯಮಾಡಲು ಸಹ ಸಿದ್ಧನಾಗಿ ಮುಂದೆ ಬಂದ. ಆದ್ದರಿಂದ 'ದಕ್ಷಿಣ ಆಫ್ರಿಕದ ಬ್ರಿಟಿಷ್ ಭಾರತೀಯ ಸಮಿತಿ'ಯನ್ನು ಸ್ಥಾಪಿಸುವ ಧೈರ್ಯ ಮಾಡಿದೆವು.

ಇಂಗ್ಲೆಂಡ್ ಮುಂತಾದ ಪಾಶ್ಚಿಮಾತ್ಯ ದೇಶಗಳಲ್ಲಿ ಹೊಸ ಯೋಜನೆಗಳನ್ನು ಭೋಜನದಿಂದ ಪ್ರಾರಂಭಮಾಡುವ ಒಂದು ಅನಾಗರಿಕ ಪದ್ಧತಿಯಿದೆ. ಬ್ರಿಟಿಷ್ ಮುಖ್ಯಮಂತ್ರಿಗಳು ಪ್ರತಿ ವರ್ಷವೂ ನವೆಂಬರ ಒಂಭತ್ತನೆ ದಿನ 'ಮ್ಯಾನ್ಷನ್ ಹೌಸ್' ನಲ್ಲಿ ಮುಂದಿನ ವರ್ಷದಲ್ಲಿಯ ತಮ್ಮ ಕಾರ್ಯಕ್ರಮ, ನಡೆಯಬಹುದಾದ ದೊಡ್ಡ ಘಟನೆಗಳು ಮುಂತಾದ ವಿಷಯಗಳ ಬಗ್ಗೆ ಮುಖ್ಯ ಭಾಷಣ ಮಾಡುತ್ತಾರೆ. ಈ ಭಾಷಣ ಕೇಳಲು ಎಲ್ಲರಿಗೂ ಕುತೂಹಲ. ಲಂಡನ್ನಿನ ಲಾರ್ಡ್ ಮೇಯರ್, ಕ್ಯಾಬಿನೆಟ್ ಮಂತ್ರಿಗಳನ್ನೂ, ಇತರ ಪ್ರಮುಖರನ್ನೂ ಭೋಜನಕ್ಕೆ ಕರೆಯುತ್ತಾರೆ. ಊಟವಾದ ನಂತರ ಮಧ್ಯದ ಸೀಸೆಗಳನ್ನು ಒಡೆದು ಎಲ್ಲರೂ ಮುಖ್ಯ ಅತಿಥಿ, ಅಭ್ಯಾಗತರ ಅಭ್ಯುದಯಕ್ಕಾಗಿ ಪಾನಮಾಡುತ್ತಾರೆ, ಈ ಸಂತೋಷ ಸಮಾರಂಭದಲ್ಲಿ ಭಾಷಣಗಳೂ ಆಗುತ್ತವೆ. ಬ್ರಿಟಿಷ್ ಮಂತ್ರಿಮಂಡಲದ ಅಭ್ಯುದಯ ಕೋರಿ ಪಾನಸೇವನೆಯಾಗುತ್ತದೆ ಆಗ ಬ್ರಿಟಿಷ್ ಮುಖ್ಯಮಂತ್ರಿಗಳು ಪ್ರತ್ಯುತ್ತರವಾಗಿ ಮೇಲೆ ಹೇಳಿದ ಮುಖ್ಯ ಭಾಷಣ ಮಾಡುತ್ತಾರೆ. ಸಾರ್ವಜನಿಕ ಜೀವನದಲ್ಲಿ ಹೇಗೋ ವೈಯಕ್ತಿಕ ಜೀವನದಲ್ಲೂ ಅದೇ ಪದ್ಧತಿ. ಯಾರ ಸಂಗಡಲಾದರೂ ಏನಾದರೂ ಮುಖ್ಯ ಸಂಭಾಷಣೆ ನಡೆಸಬೇಕಾದರೆ ಆತನನ್ನು ಭೋಜನಕ್ಕೆ ಕರೆದು ಭೋಜನ ಸಮಯದಲ್ಲಿಯಾಗಲಿ, ಭೋಜನಾನಂತರವಾಗಲಿ ಆ ವಿಷಯ ಪ್ರಸ್ತಾಪಿಸ ಬೇಕು. ಮದ್ಯ-ಮಾಂಸ ಸೇವಿಸದಿದ್ದರೂ ಈ ಪದ್ಧತಿಯನ್ನು ನಾವು ಅನೇಕ ಬಾರಿ ಅನುಸರಿಸಬೇಕಾಯಿತು. ಆದ್ದರಿಂದ ನಮ್ಮ ಸಹಾಯಕರಿಗೆ ಒಂದು ಔತಣ ಏರ್ಪಡಿಸಿದೆವು. ಸುಮಾರು ನೂರು ಜನರನ್ನು ಆಹ್ವಾನಿಸಿದ್ದೆವು. ನಮ್ಮ ಸ್ನೇಹಿತರಿಗೆ ವಂದನೆ ಅರ್ಪಿಸಿ, ಹೊರಡುವ ಮುನ್ನ ನಮಸ್ಕಾರ ತಿಳಿಸಿ ಸ್ಥಾಯಿ ಸಮಿತಿಯನ್ನು ಸ್ಥಾಪಿಸಬೇಕೆಂದೆವು. ಪದ್ಧತಿಯಂತೆ ಭೋಜನಾ ನಂತರ ಭಾಷಣಗಳಾದವು, ಸಮಿತಿಯ ಸ್ಥಾಪನೆಯಾಗಿತು. ಈ ರೀತಿ ನಮ್ಮ ಚಳುವಳಿಗೆ ಹೆಚ್ಚಿನ ಪ್ರಕಟನೆ ದೊರೆಯಿತು.

ಆರು ವಾರಗಳ ಕಾಲ ಇಂಗ್ಲೆಂಡಿನಲ್ಲಿದ್ದು ದಕ್ಷಿಣ ಆಫ್ರಿಕಕ್ಕೆ ಹಿಂದಿರುಗಿದೆವು. ನಾವು ಮೆಡಿರಾಕ್ಕೆ ಬರುವ ಹೊತ್ತಿಗೆ ಟ್ರಾನ್ಸ್‌ವಾಲ್ ಏಷಿಯಾಟಿಕ್ ಆರ್ಡಿನೆನ್ಸ್ ಕಾಯಿದೆಗೆ ಪುನರಾಲೋಚನೆ ಮಾಡದೆ ಒಪ್ಪಿಗೆ ಕೊಡುವಂತೆ ಸಾರ್ವಭೌಮರಿಗೆ ಸಲಹೆ ಮಾಡಲು ಸಾಧ್ಯವಿಲ್ಲವೆಂದು ಲಾಡ ಎಲ್ಗಿನ್ ತೀರ್ಮಾನಿಸಿರುವುದಾಗಿ ರಿಚ್ ತಂತಿ ಕಳುಹಿಸಿದ್ದ. ನಮ್ಮ ಆನಂದಕ್ಕೆ ಪಾರವೇ ಇಲ್ಲದಾಯಿತು. ಜಹಜಿನಲ್ಲಿ ಮೆಡಿರಾದಿಂದ ಕೇಪ್‌ಟೌನ್‌ಗೆ ಬರಲು ಹದಿನೈದು ದಿನ ಹಿಡಿಯಿತು. ಈ ಕಾಲವನ್ನು ಬಹಳ ಸಂತೋಷದಿಂದ ಕಳೆದೆವು. ಉಳಿದ ತೊಂದರೆಗಳೂ ಒಂದರ ಮೇಲೊಂದು ನಿವಾರಣೆಯಾಗುವುದಾಗಿ ಗಾಳಿಗೋಪುರ ಕಟ್ಟಿದೆವು. ಆದರೆ ದೈವಲೀಲೆ ನಿಗೂಢವಾದುದು. ನಾವು ಕಟ್ಟಿದ ಗಾಳಿಗೋಪುರಗಳು ಹೇಗೆ ಉರುಳಿ ನೆಲಸಮವಾದವು ಎಂಬುದು ಮುಂದಿನ

ಅಧ್ಯಾಯದಲ್ಲಿ ತಿಳಿಯುತ್ತದೆ.

ಈ ಅಧ್ಯಾಯ ಮುಗಿಸುವ ಮುಂಚೆ ಒಂದೆರಡು ಸವಿನೆನಪುಗಳನ್ನು ಇಲ್ಲಿ ತಿಳಿಸುವದು ಅವಶ್ಯ. ಇಂಗ್ಲೆಂಡಿನಲ್ಲಿದ್ದಾಗ ಒಂದು ನಿಮಿಷವನ್ನೂ ನಾವು ವ್ಯರ್ಥವಾಗಿ ಕಳೆದಿರಲಿಲ್ಲ. ಅನೇಕ ಪರಿಪತ್ರ ಕಳುಹಿಸುವುದು ಮುಂತಾದ ಕೆಲಸ ಒಬ್ಬರಿಗೆ ಸಾಧ್ಯವಲ್ಲ, ಇತರರ ಸಹಾಯ ಬಹಳ ಅವಶ್ಯವಾಗಿತ್ತು. ದುಡ್ಡು ಕೊಟ್ಟರೆ ಈ ಸಹಾಯವೇನೋ ದೊರೆಯುತ್ತದೆ. ಆದರೆ ನಲವತ್ತು ವರ್ಷಗಳ ನನ್ನ ಅನುಭವದಲ್ಲಿ ದುಡ್ಡು ಕೊಟ್ಟು ಮಾಡಿಸಿಕೊಂಡ ಕೆಲಸ ಸ್ವಯಂಸೇವಕರು ಮಾಡುವ ಕೆಲಸಕ್ಕೆ ಎಂದಿಗೂ ಸಮನಲ್ಲ. ಅದೃಷ್ಟವಶದಿಂದ ನಮಗೆ ಅನೇಕ ಜನ ಸ್ವಯಂ ಸೇವಕರು ದೊರೆತರು. ಇಂಗ್ಲೆಂಡಿಗೆ ವಿದ್ಯಾಭ್ಯಾಸಕ್ಕಾಗಿ ಬಂದಿದ್ದ ಅನೇಕ ವಿದ್ಯಾರ್ಥಿಗಳು ನಮ್ಮ ಸುತ್ತಲೂ ನೆರೆದು ಹಗಲು ರಾತ್ರಿ ಎನ್ನದೆ ಯಾವ ಸಹಾಯ ಅಥವಾ ಕೀರ್ತಿಯ ಆಸೆಯೂ ಇಲ್ಲದೆ ಸಹಾಯ ಮಾಡಿದರು. ವಿಳಾಸ ಬರೆಯುವದೇ ಆಗಲಿ, ಸ್ಟಾಂಪು ಹಚ್ಚುವದಾಗಲಿ, ಪತ್ರಗಳನ್ನು ಅಂಚೆಗೆ ಹಾಕುವುದಾಗಲಿ ಯಾವುದನ್ನೂ ಯಾರೂ ಕೀಳೆಂದು ಭಾವಿಸಲಿಲ್ಲ. ಆದರೆ ಸೈಮಂಡ್ಸ್ ಎಂಬ ಇಂಗ್ಲಿಷ್ ಸ್ನೇಹಿತ ಇವರನ್ನೆಲ್ಲ ಮೀರಿಸಿದ. ದೇವರು ತನಗೆ ಪ್ರಿಯರಾದವರನ್ನು ಬಹಳ ಬೇಗ ತನ್ನ ಸಾನ್ನಿಧ್ಯಕ್ಕೆ ಕರೆದುಕೊಳ್ಳುತ್ತಾನಂತೆ! ಈತನೂ ಅಲ್ಪಾಯುಸ್ಸಿನಲ್ಲಿ ದೈವಸಾನ್ನಿಧ್ಯ ಸೇರಿದನು. ಆತನನ್ನು ನಾನು ಮೊದಲು ದಕ್ಷಿಣ ಆಫ್ರಿಕದಲ್ಲಿ ನೋಡಿದೆ. ಭಾರತದಲ್ಲೂ ಇದ್ದ. ೧೮೯೭ ರಲ್ಲಿ ಆತ ಮುಂಬೈಯಲ್ಲಿದ್ದಾಗ ಪ್ಲೇಗಿನಿಂದ ನರಳುತ್ತಿದ್ದ ಭಾರತೀಯರ ಮಧ್ಯೆ ನಿರ್ಭಯವಾಗಿ ತಿರುಗುತ್ತ ಅವರಿಗೆ ಶುಶ್ರೂಷೆ ಮಾಡುತ್ತಿದ್ದ. ಸಾಂಕ್ರಾಮಿಕ ಜಾಡ್ಯಗಳಿಂದ ನರಳುತ್ತಿರುವವರಿಗೆ ಆರೈಕೆ ಮಾಡುವಾಗ ಸಾವಿಗೆ ಅಂಜದಿರುವುದು ಆತನ ಸ್ವಭಾವವಾಗಿತ್ತು. ಜಾತಿ, ಬಣ್ಣಗಳ ದ್ವೇಷದ ಸೋಂಕು ಆತನಲ್ಲಿರಲೇ ಇಲ್ಲ. ಗುಣದಲ್ಲಿ ಸ್ವತಂತ್ರ, ಸತ್ಯಕ್ಕೆ ಮಾರು ಹೋಗಿರುವವರು ಬಹಳ ಸ್ವಲ್ಪ ಜನ ಎಂದು ಆತನ ನಂಬಿಕೆ. ಈ ನಂಬಿಕೆಯಿಂದಲೇ ಜೋಹಾನ್ಸ್ ಬರ್ಗ್‌ನಲ್ಲಿದ್ದಾಗ ಆತನು ನನ್ನೆಡೆಗೆ ಒಲಿದು ಬಂದುದು. ಬಹುಮತದ ಕೈಯಲ್ಲಿ ಸತ್ಯಕ್ಕೂ ಕೇಡು ಸಿದ್ಧವೆಂದು ಆತನ ಅಭಿಪ್ರಾಯವಾದ್ದರಿಂದ, ನಾನು ಬಹುಮತದ ಕಡೆ ತಿರುಗಿದೊಡನೆ ಆತನ ಸಹಾಯ ನನಗೆ ತಪ್ಪುವುದಾಗಿ ತಮಾಷೆಯಿಂದ ಅನೇಕ ಬಾರಿ ಹೇಳಿದ್ದ. ತುಂಬ ವಿದ್ಯಾವಂತ. ಜೊಹಾನ್ಸ್ ಬರ್ಗ್ ಕೋಟ್ಯಾಧೀಶ್ವರರಲ್ಲೊಬ್ಬರಾದ ಸರ್ ಜಾರ್ಜ್ ಫೆರ್ರಾರ್ ರಿಗೆ ಆಪ್ತಕಾರ್ಯದರ್ಶಿ, ಒಳ್ಳೆಯ ಶೀಘ್ರಲಿಪಿಕಾರ; ನಾವು ಇಂಗ್ಲೆಂಡಿಗೆ ಹೋದಾಗ ಅಲ್ಲೇ ಇದ್ದ. ಆತ ಎಲ್ಲಿದ್ದನೆಂದು ನನಗೆ ತಿಳಿದಿರಲಿಲ್ಲ. ನಮ್ಮ ಕಾರ್ಯವಿವರಗಳನ್ನು ಪತ್ರಿಕೆಗಳಲ್ಲಿ ಓದಿ ಆತನೇ ನಮ್ಮನ್ನು ಹುಡುಕಿಕೊಂಡು ಬಂದ. ತನ್ನ ಕೈಲಾದ ಸಹಾಯ ಮಾಡುವುದಾಗಿ ಹೇಳಿದ. 'ಜವಾನನಾಗಿ ಬೇಕಾದರೂ ಕೆಲಸಮಾಡುತ್ತೇನೆ. ಶೀಘ್ರಲಿಪಿಕಾರ ಬೇಕಾದರೆ ನನಗಿಂತ ಉತ್ತಮರು ನಿಮಗೆ ದೊರೆಯುವುದು ಕಷ್ಟ' ಎಂದ. ಈ ಎರಡೂ ಸಹಾಯ ನಮಗೆ ಬೇಕಿತ್ತು. ಈತ ಹಗಲು ರಾತ್ರಿ ಎನ್ನದೆ ನಮ್ಮಿಂದ ಮೂರು ಕಾಸನ್ನೂ ಪಡೆಯದೆ ನಮಗಾಗಿ

ದುಡಿದನೆಂದರೆ ಅದರಲ್ಲಿ ಲೇಶವೂ ಉತ್ಪ್ರೇಕ್ಷೆಯಲ್ಲ. ರಾತ್ರಿ ಹನ್ನೆರಡು, ಒಂದು ಗಂಟೆವರೆಗೆ ಟೈಪ್ ರೈಟರ್ ಮುಂದೆ ಇರುತ್ತಿದ್ದ. ಸಮಾಚಾರ ತೆಗೆದುಕೊಂಡು ಹೋಗುವುದು, ಟಪಾಲಿಗೆ ಕಾಗದ ಹಾಕುವದು, ಯಾವ ಕೆಲಸಕ್ಕೇ ಆಗಲಿ ಸೈಮಂಡ್ಸ್ ನಗುಮುಖದಿಂದ ಸಿದ್ಧನಾಗಿರುತ್ತಿದ್ದ. ತನ್ನ ತಿಂಗಳ ವರಮಾನ ನಲವತ್ತೈದು ಪೌಂಡು ಮಾತ್ರ ಇದ್ದರೂ ಎಲ್ಲವನ್ನೂ ತನ್ನ ಸ್ನೇಹಿತರ, ಇತರರ ಸಹಾಯಕ್ಕೆ ಖರ್ಚು ಮಾಡುತ್ತಿದ್ದ. ಆತನಿಗೆ ಮದುವೆಯಾಗಿರಲಿಲ್ಲ; ಹಾಗೇ ಇರಬೇಕೆಂದು ಆತನ ಇಚ್ಛೆ ಇತ್ತು. ಸ್ವಲ್ಪ ವೇತನ ತೆಗೆದುಕೊಳ್ಳಬೇಕೆಂದು ಬಹಳ ಒತ್ತಾಯ ಮಾಡಿದೆ. " ಈ ಕೆಲಸಕ್ಕೆ ನಾನು ಪ್ರತಿಫಲ ತೆಗೆದುಕೊಂಡರೆ ನಾನು ಕರ್ಮ ಭ್ರಷ್ಟನಾಗುತ್ತೇನೆ" ಎಂದು ಹೇಳಿ ತಿರಸ್ಕರಿಸಿದ. ನಾವು ನಮ್ಮ ಕೆಲಸ ಮುಗಿಸಿ, ನಮ್ಮ ಸಾಮಾನು ಕಟ್ಟುತ್ತಿದ್ದ ಕೊನೆಯ ದಿನ ರಾತ್ರಿ ಮೂರು ಗಂಟೆಯವರೆಗೆ ಎಚ್ಚುತ್ತಿದ್ದ. ಮಾರನೆಯ ದಿನ ಹಡಗು ಹತ್ತಿದಾಗ ಹಡಗಿನ ಮೇಲೆ ಬಂದು ನಮ್ಮನ್ನು ಬೀಳ್ಕೊಟ್ಟ. ಆ ದುಃಖಕರವಿಯೋಗವನ್ನು ನಾನು ಎಂದಿಗೂ ಮರೆಯಲಾರೆ. ದಯಾಪರತೆ ಕಂದು ಬಣ್ಣದ ಜನರಿಗೆ ಮಾತ್ರ ವಿಶೇಷ ಗುಣವಲ್ಲವೆಂದು ಹೀಗೆ ನನಗೆ ಅನೇಕ ಬಾರಿ ಅನುಭವಕ್ಕೆ ಬಂದಿದೆ.

ಸಾರ್ವಜನಿಕ ಕೆಲಸಗಳಲ್ಲಿ ಆಸಕ್ತರಾಗಿರುವ ಯುವಕರಿಗೆ ಇನ್ನೊಂದು ವಿಷಯ ತಿಳಿಸಬೇಕೆಂದಿದ್ದೇನೆ. ಲೆಕ್ಕ ಇಡುವುದರಲ್ಲಿ ನಾವು ಬಹಳ ಜಾಗರೂಕರಾಗಿದ್ದೆವು. ಹಡಗಿನ ಮೇಲೆ ಸೋಡಾ ಮುಂತಾದ ಅಲ್ಪ ಖರ್ಚುಗಳಿಗೂ ನಾವು ರಸೀದಿ ಪಡೆಯುತ್ತಿದ್ದೆವು. ಅದೇ ರೀತಿ ತಂತಿ ಖರ್ಚಿಗೂ. ಲೆಕ್ಕದ ವಿವರ ಬರೆಯುವಾಗ ಚಿಲ್ಲರೆ ಖರ್ಚು ಎಂದು ಬರೆದ ಜ್ಞಾಪಕ ನನಗಿಲ್ಲ. ಸಾಧಾರಣವಾಗಿ ಚಿಲ್ಲರೆಬಾಬು ನಮ್ಮ ಲೆಕ್ಕದಲ್ಲೇ ಇರುತ್ತಿರಲಿಲ್ಲ. ಒಂದು ವೇಳೆ ಇದ್ದರೂ ಎಲ್ಲೋ ಕೆಲವು ಪೆನ್ನಿ ಅಥವಾ ಷಿಲ್ಲಿಂಗ್ ಲೆಕ್ಕ ಬರೆಯುವಾಗ ಖರ್ಚುಮಾಡಿದ ವಿವರ ಜ್ಞಾಪಕಕ್ಕೆ ಬಾರದಿದ್ದರೆ ಆ ರೀತಿ ಬರೆಯುತ್ತಿದ್ದೆವು.

ನಮಗೆ ಬುದ್ಧಿ ಬಂದ ಒಡನೆ ನಾವು ಜವಾಬ್ದಾರಿ ಹೊತ್ತ ಪ್ರತಿನಿಧಿಗಳು ಅಥವಾ ಧರ್ಮದರ್ಶಿಗಳೆಂದು ನನಗೆ ಈ ಜನ್ಮದಲ್ಲೇ ಅನುಭವಕ್ಕೆ ಬಂದಿದೆ. ನಾವು ತಾಯಿತಂದೆಗಳೊಂದಿಗೆ ಇರುವವರೆಗೆ ಅವರು ಕೊಟ್ಟ ದುಡ್ಡಿಗೆ ಅಥವಾ ಅವರು ನಮಗೆ ಒಪ್ಪಿಸಿದ ಕೆಲಸಕ್ಕೆ ಲೆಕ್ಕ ಕೊಡಬೇಕು. ನಮ್ಮ ಲೆಕ್ಕವೇ ಸರಿ ಎಂದು ಅವರು ಒಪ್ಪಬಹುದು ಅಥವಾ ನಮ್ಮನ್ನು ಲೆಕ್ಕ ಕೇಳದೆ ಇರಲೂಬಹುದು; ಆದರೆ ನಮ್ಮ ಜವಾಬ್ದಾರಿ ಮಾತ್ರ ಕಡಮೆಯಾಗುವುದಿಲ್ಲ. ನಾವು ಸ್ವತಂತ್ರ ಸಂಸಾರ ಮಾಡತೊಡಗಿದೊಡನೆ ನಮ್ಮ ಸಂಸಾರಕ್ಕೆ ಜವಾಬ್ದಾರರು. ನಮ್ಮ ಸಂಪಾದನೆಗೆಲ್ಲ ನಾವೇ ಅಧಿಕಾರಿಗಳಲ್ಲ; ನಮ್ಮೊಂದಿಗೆ ನಮ್ಮ ಕುಟುಂಬದವರೂ ಭಾಗಿಗಳು. ಅವರಿಗಾಗಿ ಪ್ರತಿ ಕಾಸಿಗೂ ನಾವು ಲೆಕ್ಕ ಇಡಬೇಕು. ನಮ್ಮ ವ್ಯಕ್ತಿ ಜೀವನದ ಜವಾಬ್ದಾರಿಯೇ ಈ ರೀತಿಯಾದರೆ ಸಾರ್ವಜನಿಕ ಜೀವನದ ಹೊಣೆಗಾರಿಕೆ ಇನ್ನೂ ಹೆಚ್ಚು. ಸೀಸರ್ ನ ಹೆಂಡತಿಯಂತೆ ತಾವು ಕಳಂಕದೂರರೆಂದೂ ಸತ್ಯಹರಿಶ್ಚಂದ್ರರೆಂದೂ, ತಮ್ಮ ಕೈಗೆ ಕೊಟ್ಟ ಹಣಕ್ಕೆ ತಮಗೆ ಒಪ್ಪಿಸಿದ ಕೆಲಸಕ್ಕೆ ಲೆಕ್ಕದ ವಿವರ ಯಾರೂ

ಕೊಡಬೇಕಾದ್ದಿಲ್ಲವೆಂಬಂತೆ ಅನೇಕ ಸ್ವಯಂಸೇವಕರು ನಡೆಯುತ್ತಿರುವುದು ನನಗೆ ತಿಳಿದಿದೆ. ಲೆಕ್ಕ ಇಡುವುದಕ್ಕೂ ಕೆಲಸಗಾರರ ನಂಬಿಕೆ, ಅಪನಂಬಿಕೆಗೂ ಯಾವ ಸಂಬಂಧವೂ ಇಲ್ಲದ ಕಾರಣ ಈ ಅಭಿಪ್ರಾಯ ಶುದ್ಧ ತಪ್ಪು. ಚೊಕ್ಕನಾದ ಕೆಲಸಕ್ಕೆ ಲೆಕ್ಕವಿಡಬೇಕಾದ್ದು ಅತ್ಯವಶ್ಯವಾದ್ದರಿಂದ ಅದು ಪ್ರತ್ಯೇಕ ಕೆಲಸ. ನಿಃಸ್ವಾರ್ಥ ಸೇವೆ ಮಾಡುವ ಸಂಸ್ಥೆಯ ಮುಖ್ಯ ಕೆಲಸಗಾರರು, ದಾಕ್ಷಿಣ್ಯದಿಂದಲೋ ಹೆದರಿಕೆಯಿಂದಲೋ ನಮ್ಮನ್ನು ಲೆಕ್ಕ ಕೇಳದೆ ಹೋದರೆ, ನಮ್ಮ ತಪ್ಪಿಗೆ ಅವರೂ ಹೋಣೆಯಾಗುತ್ತಾರೆ. ಸಂಬಳದ ಕೆಲಸಗಾರ ತಾನು ಮಾಡಿದ ಕೆಲಸಕ್ಕೆ, ಖರ್ಚುಮಾಡಿದ ಹಣಕ್ಕೆ ಲೆಕ್ಕ ಕೊಡಬೇಕಾದರೆ ಸ್ವಯಂಸೇವಕನು ಲೆಕ್ಕಕೊಡಬೇಕಾದ್ದು ಇನ್ನೂ ಅವಶ್ಯಕ; ಏಕೆಂದರೆ ತಾನು ಮಾಡಿದ ಕೆಲಸವೇ ಆತನಿಗೆ ಪ್ರತಿಫಲ. ಇದು ಬಹು ಮುಖ್ಯ ಕೆಲಸ. ಅನೇಕ ಸಂಸ್ಥೆಗಳಲ್ಲಿ ಈ ವಿಷಯಕ್ಕೆ ಸಾಮಾನ್ಯವಾಗಿ ಗಮನ ಕೊಡುತ್ತಿಲ್ಲವಾದ್ದರಿಂದ, ಇಲ್ಲಿ ಇಷ್ಟು ಬೆಳಸಿ ಬರೆಯಲು ಧೈರ್ಯಮಾಡಿದ್ದೇನೆ.

೧೫. ವಕ್ರ ನೀತಿ

ಕೇಪಟೌನ್ ನಲ್ಲಿ ಇಳಿದು ಜೋಹಾನ್ಸಬರ್ಗ್ ಸೇರುವ ಹೊತ್ತಿಗೆ ಮೆಡಿರಾದಲ್ಲಿ ಬಂದ ತಂತಿಸಮಾಚಾರಕ್ಕೆ ನಾವು ಇಲ್ಲದ ಬೆಲೆ ಕೊಟ್ಟೆವೆಂದು ಗೊತ್ತಾಯಿತು. ಅದರಲ್ಲಿ ರಿಚ್ ನ ತಪ್ಪು ಏನೂ ಇರಲಿಲ್ಲ. ಶಾಸನವನ್ನು ತಳ್ಳಿ ಹಾಕುತ್ತಾರೆಂದು ಕೇಳಿದ ವರ್ತಮಾನವನ್ನು ತಂತಿಮೂಲಕ ತಿಳಿಸಿದ್ದ. ಆಗ {೧೯೦೬ ರಲ್ಲಿ} ಟ್ರಾನ್ಸವಾಲ್ ಕ್ರೌನ್ ಕಾಲೋನಿಯಾಗಿತ್ತೆಂದು ಮೊದಲೇ ತಿಳಿಸಿದ್ದೇನೆ. ಪ್ರತಿಯೊಂದು ವಲಸೆರಾಷ್ಟ್ರಕ್ಕೂ ಇಂಗ್ಲೆಂಡಿನಲ್ಲಿ ಒಬ್ಬ ಪ್ರತಿನಿಧಿ ಇರುತ್ತಾನೆ. ಆ ರಾಷ್ಟ್ರದ ಹಿತಕ್ಕೆ ಸಂಬಂಧಿಸಿದ ವಿಷಯಗಳನ್ನು ವಲಸೆರಾಷ್ಟ್ರಗಳಿಗೆ ಪರಿಚಯಮಾಡಿಕೊಡುವುದೇ ಆತನ ಕೆಲಸ. ದಕ್ಷಿಣ ಆಫ್ರಿಕದ ಪ್ರಸಿದ್ಧ ನ್ಯಾಯವಾದಿಯಾಗಿದ್ದ ಸರ್ ರಿಚರ್ಡ್ ಸಾಲೊಮನ್ ಆಗ ಟ್ರಾನ್ಸ್‌ವಾಲ್ ಪ್ರತಿನಿಧಿಯಾಗಿದ್ದರು. ಅವರ ಸಲಹೆ ಪಡೆದು ಲಾರ್ಡ್ ಎಲ್ಗಿನ್ ಆ ಕರಾಳಶಾಸನವನ್ನು ತಳ್ಳಿಹಾಕಿದ್ದರು. ೧೯೦೭, ಜನವರಿ ಒಂದನೇ ತಾರೀಖಿನಿಂದ ಟ್ರಾನ್ಸ್ ವಾಲ್ ನಲ್ಲಿ ಜವಾಬ್ದಾರಿ ಸರಕಾರ ಆಚರಣೆಗೆ ಬರಬೇಕಾಗಿತ್ತು. ಜವಾಬ್ದಾರಿ ಸರಕಾರ ಬಂದ ನಂತರ ಅದೇ ಮಾದರಿ ಮಸೂದೆಯನ್ನು ಶಾಸನಸಭೆ ಒಪ್ಪಿದರೆ ಆಗ ರಾಜಮುದ್ರೆಗೆ ತೊಂದರೆ ಇಲ್ಲವೆಂದು ಲಾರ್ಡ ಎಲ್ಗಿನ್ ಸರ್ ರಿಚರ್ಡ್‌ಗೆ ಭರವಸೆ ಕೊಟ್ಟರು. ಟ್ರಾನ್ಸ್ ವಾಲ್ ಕ್ರೌನ್ ಕಾಲೊನಿಯಾಗಿರುವವರೆಗೆ ಆ ಬಗೆಯ ವರ್ಣಭೇದಶಾಸನಕ್ಕೆ ಸಾಮ್ರಾಜ್ಯ ಸರಕಾರದ ಜವಾಬ್ದಾರಿ ಇದ್ದೇ ಇರುತ್ತದೆ. ವರ್ಣದ್ವೇಷ ಬ್ರಿಟಿಷ್ ಸಾಮ್ರಾಜ್ಯದ ಮೂಲ ತತ್ವಗಳಿಗೆ ವಿರೋಧವಾದ್ದರಿಂದ ಮಸೂದೆ ತಳ್ಳಿಹಾಕದೆ ಸಾಮ್ರಾಟರಿಗೆ ಬೇರೆ ಸಲಹೆಕೊಡಲು ಅವಕಾಶವೇ ಇರಲಿಲ್ಲ.

ಹೆಸರಿಗೆ ಮಾತ್ರ ಮಸೂದೆ ತಳ್ಳಿಹಾಕಿ ಅನಂತರ ಟ್ರಾನ್ಸ್ ವಾಲ್ ಯೂರೋಪಿಯನ್‌ರಿಗೆ ಮನಂದಂತೆ ವರ್ತಿಸಲು ಅವಕಾಶ ದೊರೆತರೆ ಅಂತಹ ಉತ್ತಮೋಪಾಯಕ್ಕೆ ಸರ್ ರಿಚರ್ಡ್ ಸಾಲೊಮನ್‌ರ ಅಡ್ಡಿ ಏನೂ ಇರಲಿಲ್ಲ. ಇದನ್ನೇ

ನಾನು ವಕ್ರನೀತಿ ಎಂದಿದ್ದೇನೆ. ಇದಕ್ಕಿಂತಲೂ ಕಠಿಣ ಶಬ್ದ ಉಪಯೋಗಿಸಿದರೂ ನ್ಯಾಯವೆಂದು ನನ್ನ ನಂಬಿಕೆ. ವಲಸೆರಾಷ್ಟ್ರಗಳ ಶಾಸನ ಕಾರ್ಯಕ್ಕೆ ಸಾಮ್ರಾಜ್ಯ ಸರಕಾರ ಹೊಣೆಯಾಗಿದೆ. ಜಾತಿ, ಬಣ್ಣಗಳ ಭೇದಕ್ಕೆ ಅವಕಾಶವೇ ಇಲ್ಲ. ಅದೇನೋ ಒಳ್ಳೆಯದು ಸರಿ. ಜವಾಬ್ದಾರಿ ಸರಕಾರವಿರುವ ವಲಸೆರಾಷ್ಟ್ರಗಳು ಒಪ್ಪಿದ ಮಸೂದೆಗಳನ್ನು ಸಾಮ್ರಾಜ್ಯ ಸರಕಾರ ಒಂದೇ ಏಟಿಗೆ ತಳ್ಳಿಹಾಕಲಾಗುವುದಿಲ್ಲವೆಂಬುದೂ ಅರ್ಥವಾಗುತ್ತದೆ. ಆದರೆ ವಲಸೆರಾಷ್ಟ್ರದ ಪ್ರತಿನಿಧಿಗಳೊಂದಿಗೆ ಗುಪ್ತ ಸಂಭಾಷಣೆ ನಡೆಸಿ, ಸಾಮ್ರಾಜ್ಯ ತತ್ವಕ್ಕೆ ವಿರುದ್ಧವಾದ ಶಾಸನಗಳಿಗೆ ಶಾಸನವಾಗುವ ಮುಂಚೆಯೇ ರಾಜಮನ್ನಣೆ ಕೊಡಿಸುವ ವಾಗ್ದಾನ ಮಾಡುವುದು, ಯಾರ ಹಕ್ಕು–ಬಾಧ್ಯತೆಗಳಿಗೆ ಸಂಚಕಾರ ತರಬೇಕೆಂದಿರುವರೋ ಅವರಿಗೆ ವಿಶ್ವಾಸದ್ರೋಹ ಮತ್ತು ಅನ್ಯಾಯ ಮಾಡಿದಂತಲ್ಲವೇನು? ಲಾರ್ಡ್ ಎಲ್ಗಿನ್ ಆ ರೀತಿ ಮಾಡಬೇಕೆಂದಿದ್ದರೆ ಭಾರತೀಯ ನಿಯೋಗಗೋಷ್ಠಿಗೆ ಆ ವಿಷಯ ತಿಳಿಸಬಹುದಾಗಿತ್ತು. ಜವಾಬ್ದಾರಿ ಸರಕಾರವಿರುವ ವಲಸೆರಾಷ್ಟ್ರಗಳ ಶಾಸನಗಳಿಗೆ ಸಹ ನ್ಯಾಯವಾಗಿ ಸಾಮ್ರಾಜ್ಯ ಸರಕಾರದ ಜಬಾಬ್ದಾರಿ ತಪ್ಪುವದಿಲ್ಲ. ಅಂತಹ ವಲಸೆರಾಷ್ಟ್ರಗಳು ಬ್ರಿಟಿಷ್ ರಾಜ್ಯಶಾಸನದ ಮೂಲ ತತ್ವಗಳನ್ನು ಅನುಸರಿಸಲು ಬದ್ಧವು. ಉದಾಹರಣೆಗೆ ಯಾವ ವಲಸೆರಾಷ್ಟ್ರವೂ ಗುಲಾಮಗಿರಿಯನ್ನು ಪುನಃ ಶಾಸನಬದ್ಧವಾಗಿ ಸ್ಥಾಪಿಸಲು ಸಾಧ್ಯವಿಲ್ಲ. ಈ ಕರಾಳಶಾಸನವನ್ನು ನೀತಿವಿರುದ್ಧವೆಂದು ಲಾರ್ಡ್ ಎಲ್ಗಿನ್ ತಳ್ಳಿಹಾಕಿದ್ದರೆ–ಇದ್ದ ಕಾರಣ ಅದೊಂದೇ–ಜವಾಬ್ದಾರಿ ಸರಕಾರ ಕೊಟ್ಟ ನಂತರ ಅಂತಹ ಅನ್ಯಾಯವಾದ ಶಾಸನ ಮಾಡಲು ಟ್ರಾನ್ಸ್ ವಾಲ್‌ಗೆ ಅಧಿಕಾರವಿಲ್ಲವಾಗಿಯೂ, ಆ ಉದ್ದೇಶ ಏನಾದರೂ ಇದ್ದರೆ, ಟ್ರಾನ್ಸ್ ವಾಲ್ ಸರಕಾರಕ್ಕೆ ಹೆಚ್ಚಿನ ಅಧಿಕಾರ ಕೊಡುವ ಮುಂಚೆ ಸಾಮ್ರಾಜ್ಯ ಸರಕಾರದವರು ಪುನರಾಲೋಚಿಸಬೇಕಾಗುವುದೆಂದೂ ಸರ್ ರಿಚರ್ಡ್ ಸಾಲೊಮನ್‌ರಿಗೆ ಖಾಸಗಿಯಾಗಿ ಎಚ್ಚರಕೊಡಬೇಕಾದ್ದು ಆತನ ಕರ್ತವ್ಯವಾಗಿತ್ತು. ಇಲ್ಲವಾದರೆ ಭಾರತೀಯರ ಹಕ್ಕುಗಳಿಗೆ ಪೂರ್ಣಭರವಸೆ ಕೊಟ್ಟರೇನೇ ಜವಾಬ್ದಾರಿ ಸರಕಾರ ಕೊಡಲಾಗುವುದೆಂದು ಸರ್ ರಿಚರ್ಡ್‌ರಿಗೆ ಎಚ್ಚರಿಸಬೇಕಾಗಿತ್ತು. ಆ ರೀತಿ ನೇರವಾದ ಮಾರ್ಗ ಬಿಟ್ಟು ಲಾಡ ಎಲ್ಗಿನ್ ಹೊರಗಡೆ ಭಾರತೀಯರಿಗೆ ಸಹಾನುಭೂತಿ ತೋರಿ, ಒಳಗೆ ಟಾನ್ಸ್ ವಾಲ್ ಸರಕಾರಕ್ಕೆ ಬೆಂಬಲಕೊಟ್ಟ. ತಾನು ತಳ್ಳಿ ಹಾಕಿದ ಶಾಸನವನ್ನೇ ಪುನಃ ಒಪ್ಪುವದಾಗಿ ಪ್ರೋತ್ಸಾಹಿಸಿದ. ಬ್ರಿಟಿಷ್ ಸಾಮ್ರಾಜ್ಯ ಅನುಸರಿಸಿರುವ ವಕ್ರನೀತಿಗೆ ಉದಾಹರಣೆ ಇದೊಂದೇ ಅಲ್ಲ; ಇದೇ ಮೊದಲನೆಯದೂ ಅಲ್ಲ. ಸಾಮ್ರಾಜ್ಯದ ಇತಿಹಾಸದಲ್ಲಿ ಸ್ವಲ್ಪ ಕುತೂಹಲ ಇದ್ದ ಯಾರಿಗಾದರೂ ಇಂತಹ ನಿದರ್ಶನ ಬೇಕಾದಷ್ಟು ದೊರೆಯುತ್ತವೆ.

ಆದ್ದರಿಂದ ಜೋಹಾನ್ಸ್ ಬರ್ಗ್‌ನಲ್ಲಿ ಯಾರ ಬಾಯಲ್ಲಿ ನೋಡಿದರೂ ಲಾರ್ಡ್ ಎಲ್ಗಿನ್‌ನೂ, ಬ್ರಿಟಿಷ್ ಸಾಮ್ರಾಜ್ಯ ಸರಕಾರವೂ ನಮಗೆ ಮಾಡಿದ ಮೋಸದ ಮಾತೇ ಮಾತು. ಮೆಡಿರಾದಲ್ಲಿ ನಮಗೆ ಎಷ್ಟು ಆನಂದವಾಗಿತ್ತೋ ದಕ್ಷಿಣ ಆಫ್ರಿಕಕ್ಕೆ ಬಂದ ಒಡನೆ ಅಷ್ಟು ನಿರಾಶೆ ಕವಿಯಿತು. ಆದರೆ ಈ ಮೋಸದಿಂದ ನಮ್ಮ ಜನರು ಮೊದಲಿಗಿಂತ ಹೆಚ್ಚು ಉತ್ಸಾಹಭರಿತರಾದುದೇ ಅದರ ಮೊದಲ ಪರಿಣಾಮ. "ಸಾಮ್ರಾಜ್ಯ ಸರಕಾರದ

ಸಹಾಯಕ್ಕೂ ನಮ್ಮ ಹೋರಾಟಕ್ಕೂ ಯಾವ ಸಂಬಂಧವೂ ಇಲ್ಲದ್ದರಿಂದ ನಾವೇನೂ ಹೆದರಬೇಕಾದ್ದಿಲ್ಲವೆಂದು ಎಲ್ಲರೂ ತಿಳಿಸಿದರು. ನಮ್ಮ ಕಾಲ ಮೇಲೆ ನಾವು ನಿಲ್ಲೋಣ; ಯಾರ ಹೆಸರಿನಲ್ಲಿ ನಾವು ಪ್ರಮಾಣ ಮಾಡಿದ್ದೇವೆಯೋ ಆ ದೇವರ ಕೃಪೆಯೊಂದು ಇದ್ದರೆ ಸಾಕು. ನಾವು ಸತ್ಯನಿಷ್ಠರಾಗಿದ್ದರೆ ಕ್ರಮೇಣ ವಕ್ರನೀತಿಯೂ ನೇರವಾಗುತ್ತದೆ" ಎಂದರು.

ಟ್ರಾನ್ಸ್ ವಾಲ್ಗೆ ಜವಾಬ್ದಾರಿ ಸರಕಾರ ದೊರೆಯಿತು. ಹೊಸ ಪಾರ್ಲಿಮೆಂಟ್ ನಲ್ಲಿ ಮೊದಲನೆಯ ಮಸೂದೆ–ಹಣಕಾಸಿನ ಅಂದಾಜು ಪಟ್ಟಿ; ಎರಡನೆಯದೇ–ಏಷಿಯಾಟಿಕ್ ರಿಜಿಸ್ಟ್ರೇಷನ್ ಮಸೂದೆ. ಕಾಲವ್ಯವಧಾನದಿಂದ ತಾರೀಖು ಒಂದು ಮಾತ್ರ ವ್ಯತ್ಯಾಸಗೊಳಿಸಿದರೇ ವಿನಾ ಉಳಿದೆಲ್ಲ ವಿಧಿಗಳೂ ಮೊದಲಿನ ಮಸೂದೆಯ ಪಡಿಯಚ್ಚೇ. ಅಲ್ಲದೆ ೧೯೦೭ನೆ ಮಾರ್ಚ್ ೨೧ನೇ ತಾರೀಖಿನ ಒಂದೇ ಒಂದು ಅಧಿವೇಶನದಲ್ಲಿ ಮಸೂದೆಯ ಚರ್ಚೆ, ಪಠನ ಮುಂತಾದ ಎಲ್ಲ ಮಜಲುಗಳೂ ಮುಗಿದವು. ಶಾಸನ ತಳ್ಳಿಹಾಕಿದ್ದು ಕನಸಾಯಿತು. ಯಥಾವಿಧಿಯಾಗಿ ಭಾರತೀಯರು ಬಿನ್ನವತ್ತಳೆ ಕಳುಹಿಸಿದರು; ಆದರೆ ಕೇಳುವವರಾರು? ೧೯೦೭ ನೇ ಜುಲೈ ೧ನೇ ತಾರೀಖಿನಿಂದ ಶಾಸನ ಆಚರಣೆಗೆ ಬಂದಿತು. ಜುಲೈ ೩೧ ಭಾರತೀಯರು ರಿಜಿಸ್ಟ್ರೇಷನ್ ಗೆ ಅರ್ಜಿಕೊಡಲು ಕೊನೆಯ ದಿನವೆಂದು ಗೊತ್ತುಮಾಡಿದರು. ಶಾಸನವನ್ನು ಆಚರಣೆಗೆ ತರಲು ವಿಳಂಬವಾದುದು ಭಾರತೀಯರ ಸೌಕರ್ಯಕ್ಕಲ್ಲ; ಪರಿಸ್ಥಿತಿ ಹಾಗಿತ್ತು. ಶಾಸನಕ್ಕೆ ರಾಜಮುದ್ರೆ ಬೀಳಲು ಸ್ವಲ್ಪಕಾಲ ಬೇಕಾಗಿತ್ತು. ಪರಿಶಿಷ್ಟಗಳ ಮಾದರಿಯಂತೆ ಮಾದರಿಪತ್ರ ಸಿದ್ಧವಾಗಬೇಕಾಗಿತ್ತು. ಆದ್ದರಿಂದ ಟ್ರಾನ್ಸ್ ವಾಲ್ ಸರಕಾರದ ಅನುಕೂಲತೆಗಾಗಿಯೇ ಕಾಲವ್ಯವಧಾನವಾಯಿತು.

೧೬. ಅಹಮದ್ ಮಹಮದ್ ಕಾಛಲಿಯಾ

ನಮ್ಮ ನಿಯೋಗಗೋಷ್ಠಿ ಇಂಗ್ಲೆಂಡಿಗೆ ಹೋಗುತ್ತಿದ್ದಾಗ ದಕ್ಷಿಣ ಆಫ್ರಿಕದಲ್ಲಿ ನೆಲೆಸಿದ್ದ ಒಬ್ಬ ಇಂಗ್ಲಿಷ್‌ನವನೊಂದಿಗೆ ಟ್ರಾನ್ಸ್ ವಾಲ್ ಏಷಿಯಾಟಿಕ್ ವಿರೋಧ ಶಾಸನದ ವಿಷಯ ಮಾತನಾಡುವ ಸಂಭವ ಒದಗಿತು. ಆಗ ನಮ್ಮ ಇಂಗ್ಲೆಂಡ್ ಪ್ರವಾಸದ ಉದ್ದೇಶವನ್ನು ಆತನಿಗೆ ತಿಳಿಸಿದೆ "ಒಹೋ, ಕೊರಳುಪಟ್ಟಿ ಬೇಡ ಎಂದು ಕೇಳಲು ಲಂಡನ್ನಿಗೆ ಹೋಗುತ್ತೀರಾ?" ಎಂದು ಆತ ಕೇಳಿದ. ಆತ ಟ್ರಾನ್ಸ್ ವಾಲ್ ರಹದಾರಿಯನ್ನು ಈ ರೀತಿ ನಾಯಿ ಕೊರಳುಪಟ್ಟಿಗೆ ಹೋಲಿಸಿದ. ಈ ವಿಷಯ ಬರೆಯುವಾಗ ಆತ ಭಾರತೀಯರ ಮೇಲೆ ತನ್ನ ತಿರಸ್ಕಾರ ತೋರಿಸಿ ಅವರಿಗಾದ ಅವಮಾನದಿಂದ ತನಗುಂಟಾದ ಸಂತೋಷ ವ್ಯಕ್ತಪಡಿಸಲು ಆ ರೀತಿ ಹೇಳಿದನೊ, ಅಥವಾ ಆ ವಿಷಯದಲ್ಲಿ ತನಗಿದ್ದ ವಿಶೇಷ ವ್ಯಸನ ಸೂಚಿಸಲು ಹೇಳಿದನೊ ಹೇಳಲು ಸಾಧ್ಯವಿಲ್ಲ; ಆಗ ನನಗೆ ತಿಳಿಯಲೂ ಇಲ್ಲ. ಯಾರಾದರೂ ಆಡಿದ ಮಾತನ್ನು ಆಡಿದವರಿಗೆ ಅನ್ಯಾಯವಾಗದ ರೀತಿ ಅರ್ಥಮಾಡಬೇಕು; ಇದು ಲೋಕದ ನೀತಿ. ಅದರಂತೆ ತನ್ನ ಅಪಾರ ವ್ಯಸನವನ್ನು

ಸೂಚಿಸಲು ಆ ರೀತಿ ಆತ ಹೋಲಿಸಿದನೆಂದು ನಾನು ಅರ್ಥಮಾಡುತ್ತೇನೆ. ಅದು ಹೇಗೇ ಇರಲಿ. ಟ್ರಾನ್ಸ್ ವಾಲ್ ಸರಕಾರ ಭಾರತೀಯರ ಕೊರಳಿಗೆ ಪಟ್ಟಿ ಹಾಕುವ ಪ್ರಯತ್ನದಲ್ಲಿ ತೊಡಗಿದ್ದಿತ್ತು; ಇನ್ನೊಂದೆಡೆ ಭಾರತೀಯರೂ ಸರಕಾರದ ದುಷ್ಟ ನೀತಿಯನ್ನು ಎದುರಿಸಲು ಸಿದ್ಧರಾಗುತ್ತಿದ್ದರು. ಆ ಗುಲಾಮಗಿರಿಯ ಪಟ್ಟಿಯನ್ನು ಧರಿಸಲಾಗದೆಂಬ ದೃಢನಿಶ್ಚಯವನ್ನು ಕಾರ್ಯರೂಪಕ್ಕೆ ತರಲು ಎಲ್ಲ ಸಿದ್ಧತೆ ಮಾಡುತ್ತಿದ್ದರು. ಇಂಗ್ಲೆಂಡಿಗೂ ಹಿಂದೂಸ್ತಾನಕ್ಕೂ ನಮ್ಮ ಸ್ನೇಹಿತರಿಗೆ ಪತ್ರ ಬರೆದು ದಿನದಿನದ ಪರಿಸ್ಥಿತಿ ತಿಳಿಸುತ್ತ ಇದ್ದೆವು. ಆದರೆ ಸತ್ಯಾಗ್ರಹ ಯಶಸ್ವಿಯಾಗಲು ಹೊರಗಿನ ಸಹಾಯ ಅಷ್ಟು ಅವಶ್ಯವಲ್ಲ; ಅಂತಶಕ್ತಿಯೇ ಮುಖ್ಯ. ಆದ್ದರಿಂದ ಮುಖಂಡರು ನಮ್ಮ ಜನರ ಒಳಭೇದ ಸರಿಮಾಡುವ ಮುಖ್ಯ ಪ್ರಯತ್ನದಲ್ಲಿ ತೊಡಗಿದರು.

ಯಾವ ಸಂಸ್ಥೆಯ ಮೂಲಕ ಈ ಹೋರಾಟ ನಡೆಸಬೇಕೆಂಬುದು ಒಂದು ಮುಖ್ಯ ಪ್ರಶ್ನೆಯಾಯಿತು. 'ಟ್ರಾನ್ಸ್ ವಾಲ್ ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್'ಗೆ ಅನೇಕ ಜನ ಸದಸ್ಯರಿದ್ದರು. ಅದನ್ನು ಪ್ರಾರಂಭಿಸಿದಾಗ ಸತ್ಯಾಗ್ರಹ ಇನ್ನೂ ಬೆಳಕು ಕಂಡಿರಲಿಲ್ಲ. ಆ ಸಂಸ್ಥೆ ಹಿಂದೆ ಅನೇಕ ಅನ್ಯಾಯದ ಶಾಸನಗಳನ್ನು ಎದುರಿಸಿತ್ತು; ಮುಂದೆಯೂ ಎದುರಿಸಬೇಕಾಗಿತ್ತು. ಅನ್ಯಾಯದ ಶಾಸನ ಎದುರಿಸುವುದಲ್ಲದೆ ಇನ್ನೂ ಅನೇಕ ರಾಜಕೀಯ, ಸಾಮಾಜಿಕ ಮಹತ್ಕಾರ್ಯಗಳನ್ನು ಅದು ಮಾಡಬೇಕಾಗಿತ್ತು. ಆ ಸಂಸ್ಥೆಯ ಸದಸ್ಯರೆಲ್ಲ. ಸತ್ಯಾಗ್ರಹದ ಮೂಲಕವೇ ಈ ಕರಾಳಶಾಸನ ಎದುರಿಸಲು ಪ್ರತಿಜ್ಞೆ ಮಾಡಿರಲಿಲ್ಲ. ಅದೂ ಅಲ್ಲದೆ ಆ ಸಂಸ್ಥೆ ಸತ್ಯಾಗ್ರಹದೊಂದಿಗೆ ಏಕೀಭವಿಸಿದರೆ ಆ ಸಂಸ್ಥೆಯನ್ನು ಎಷ್ಟು ಅಪಾಯಕ್ಕೆ ಗುರಿಮಾಡಿದಂತಾಗುತ್ತದೆಯೋ ಯೋಚಿಸಬೇಕು. ನಮ್ಮ ಹೋರಾಟವನ್ನು ಟ್ರಾನ್ಸ್ ವಾಲ್ ಸರಕಾರ ರಾಜದ್ರೋಹವೆಂದು ಪರಿಗಣಿಸಿ ಅದನ್ನು ನಡೆಸುವ ಎಲ್ಲ ಸಂಸ್ಥೆಗಳೂ ಶಾಸನವಿರುದ್ಧವೆಂದು ಆಜ್ಞೆ ಮಾಡಿದರೆ? ಸತ್ಯಾಗ್ರಹಿಗಳಲ್ಲದ ಇತರ ಸದಸ್ಯರ ಸ್ಥಾನ ಆಗ ಏನಾಗ ಬೇಕು? ಅಲ್ಲದೆ ಸತ್ಯಾಗ್ರಹ ಇಲ್ಲದ ಕಾಲದಲ್ಲಿ ಸಂಗ್ರಹಿಸಿದ ಹಣದ ಅವಸ್ಥೆ ಏನಾಗಬೇಕು? ಈ ಎಲ್ಲ ಗುರುತರ ಸಮಸ್ಯೆಗಳು ನಮ್ಮ ಮುಂದೆ ಬಂದವು. ಅಲ್ಲದೆ ಸತ್ಯಾಗ್ರಹಿಗಳಾದವರು, ನಂಬಿಕೆ ಸಾಲದೆಯೋ, ಶಕ್ತಿ ಇಲ್ಲದೆಯೋ ಅಥವಾ ಇನ್ನಾವ ಕಾರಣದಿಂದಲೋ ಸತ್ಯಾಗ್ರಹಕ್ಕೆ ಸೇರದವರ ಮೇಲೆ ಯಾವ ದ್ವೇಷಭಾವನೆಯನ್ನೂ ಇಟ್ಟುಕೊಳ್ಳಲಾಗದೆಂದೂ, ಆಗಿದ್ದ ಸ್ನೇಹಯುತ ಬಾಂಧವ್ಯಕ್ಕೆ ಯಾವ ಲೋಪವು ಬಾರದಂತೆ ನಡೆದುಕೊಳ್ಳಬೇಕೆಂದೂ, ಸತ್ಯಾಗ್ರಹ ಒಂದು ವಿನಾ ಉಳಿದ ಎಲ್ಲ ಚಳವಳಿಯಲ್ಲೂ ಅವರೊಂದಿಗೆ ಸಹಕರಿಸಿ ಕೆಲಸ ಮಾಡಬೇಕೆಂದೂ ಅವರ ಖಚಿತ ಅಭಿಪ್ರಾಯವಾಗಿತ್ತು.

ಈ ಎಲ್ಲ ಕಾರಣಗಳಿಂದ ಆಗಿದ್ದ ಯಾವ ಸಂಸ್ಥೆಯ ಮೂಲಕವೂ ಸತ್ಯಾಗ್ರಹ ನಡೆಸಲಾಗದೆಂದು ನಮ್ಮ ಜನರು ತೀರ್ಮಾನಿಸಿದರು. ಸತ್ಯಾಗ್ರಹ ಒಂದರ ವಿನಾ, ಉಳಿದ ಎಲ್ಲ ಮಾರ್ಗದಲ್ಲಿಯೂ ಆ ಕರಾಳಶಾಸನ ಎದುರಿಸಬಹುದೆಂದೂ, ತಮ್ಮ ಕೈಲಾದ ಎಲ್ಲ ಸಹಾಯ ಮಾಡಬಹುದೆಂದೂ ತೀರ್ಮಾನಿಸಿ, ಸತ್ಯಾಗ್ರಹ ನಡೆಸಲು 'ಪ್ಯಾಸಿವ್ ರೆಸಿಸ್ಟನ್ಸ್ ಅಸೋಸಿಯೇಷನ್' ಎಂಬ ಹೊಸ ಸಂಸ್ಥೆ ಪ್ರಾರಂಭವಾದಾಗ

ಸತ್ಯಾಗ್ರಹ ಎಂಬ ಶಬ್ದ ಇನ್ನೂ ಹುಟ್ಟಿರಲಿಲ್ಲವೆಂದು ಅದರ ಇಂಗ್ಲಿಷ್ ಹೆಸರಿನಿಂದಲೇ ಗೊತ್ತಾಗುತ್ತದೆ. ಹೊಸ ಸಂಸ್ಥೆ ಸ್ಥಾಪಿಸಿದ್ದೇ ಒಳ್ಳೆಯದಾಯಿತೆಂದು ಮುಂದೆ ನಮಗೆ ಗೊತ್ತಾಯಿತು. ಇದ್ದ ಯಾವುದಾದರೂ ಒಂದು ಸಂಸ್ಥೆಗೆ ಗಂಟು ಹಾಕಿದ್ದರೆ ಪ್ರಾಯಶಃ ಸತ್ಯಾಗ್ರಹದ ಹೋರಾಟಕ್ಕೆ ಅಡಚಣೆಯುಂಟಾಗುತ್ತಿತ್ತು. ಅನೇಕ ಸದಸ್ಯರು ಹೊಸ ಸಂಸ್ಥೆಗೆ ಸೇರಿದರು. ನಮ್ಮ ಜನರು ಅದಕ್ಕೆ ಧಾರಳವಾಗಿ ಧನವನ್ನೂ ಒದಗಿಸಿದರು.

ಹಣದ ಕೊರತೆಯಿಂದ ಯಾವ ಹೋರಾಟವೂ ಸಾಯುವುದೂ ಇಲ್ಲ, ಕ್ಷಯಿಸುವುದೂ ಇಲ್ಲವೆಂದು ಅನುಭವದಿಂದ ನನಗೆ ಗೊತ್ತಾಗಿದೆ. ಹಣವಿಲ್ಲದೆಯೆ ಯಾವುದಾದರೂ ಲೌಕಿಕ ಚಳುವಳಿ ನಡೆಸಬಹುದೆಂದಲ್ಲ. ಯಾವ ಹೋರಾಟವೇ ಆಗಲಿ ಕಾರ್ಯಕರ್ತರು ಒಳ್ಳೆಯವರಾಗಿ, ಪ್ರಾಮಾಣಿಕರಾಗಿದ್ದರೆ, ಬೇಕಾದ ಹಣ ತಾನಾಗಿಯೇ ಬರುತ್ತದೆ. ಎಲ್ಲಿ ಹಣದ ಹೊರೆ ಹೆಚ್ಚಾಗುತ್ತದೆಯೋ ಅಲ್ಲಿ ಹೋರಾಟವೂ ಕ್ಷೀಣದೆಸೆಗೆ ಬರುತ್ತದೆ. ಆದ್ದರಿಂದ ಸಾರ್ವಜನಿಕ ಸಂಸ್ಥೆಗಳನ್ನು ಬಂಡವಾಳದ ದೃಷ್ಟಿಯಿಂದ ನಡೆಸುತ್ತ ಹೋದರೆ ಅದು ಪಾಪಕೃತ್ಯವೇನೊ ಅಲ್ಲವಾಗಲಿ–ಸಾಧುಮಾರ್ಗವಲ್ಲವೆಂದು ನನ್ನ ಭಾವನೆ. ಎಲ್ಲ ಸಾರ್ವಜನಿಕ ಸಂಸ್ಥೆಗಳಿಗೂ ಜನರೇ 'ಬ್ಯಾಂಕ್' ಆಗಿರಬೇಕು. ಜನರಿಗೆ ಬೇಡವಾದರೆ ಆ ಸಂಸ್ಥೆಯು ಒಂದು ದಿನವೂ ಹೆಚ್ಚು ಬಾಳಬಾರದು. ಶಾಶ್ವತ ನಿಧಿಯ ಬಡ್ಡಿಯಿಂದ ನಡೆಯುವ ಸಂಸ್ಥೆಗಳು ಸಾರ್ವಜನಿಕ ಅಭಿಪ್ರಾಯಗಳಿಗೆ ಮನ್ನಣೆ ಕೊಡುವದಿಲ್ಲ; ನಿರಂಕುಶಾಧಿಕಾರಕ್ಕೂ, ಸ್ವಪ್ರತಿಷ್ಠೆಗೂ ತೌರುಮನೆಗಳಾಗುತ್ತವೆ. ಶಾಶ್ವತ ನಿಧಿಗಳಿಂದ ನಡೆಯುವ ಸಾಮಾಜಿಕ, ಧಾರ್ಮಿಕ ಸಂಸ್ಥೆಗಳ ಲೋಪದೋಷ ಚರ್ಚಿಸಲು ಇದು ಸ್ಥಳವಲ್ಲ. ಬೇಕಾದವರು ಕಣ್ಣು ಬಿಟ್ಟು ನೋಡಿದರೆ ಆ ದೋಷ ಎಲ್ಲ ಕಡೆಯಲ್ಲೂ ಸಾಮಾನ್ಯವಾಗಿ ಕಂಡುಬರುತ್ತದೆ.

ನಮ್ಮ ಕಥೆ ಮುಂದುವರಿಸೋಣ. ರಂಧ್ರಾನ್ವೇಷಣೆ ಮಾಡುವದು ನ್ಯಾಯವಾದಿಗಳ, ಇಂಗ್ಲಿಷ್ ಕಲಿತವರ ಹಕ್ಕುದಾರಿ ಏನೂ ಅಲ್ಲ. ದಕ್ಷಿಣ ಆಫ್ರಿಕದ ವಿದ್ಯಾವಿಹೀನ ಭಾರತೀಯರು ಸಹ ಸೂಕ್ಷ್ಮಭೇದ ಹುಡುಕುವುದರಲ್ಲಿ, ನಯವಾದ ತರ್ಕ ಹೂಡುವುದರಲ್ಲಿ ಅಗ್ರಗಣ್ಯರಾಗಿದ್ದರು. ಹಳೆ ಮಸೂದೆ ಇಲ್ಲದಿರುವುದರಿಂದ ಹಳೆ 'ಎಂಪೈರ್' ನಾಟ್ಯ ಶಾಲೆಯಲ್ಲಿ ಮಾಡಿದ ಪ್ರತಿಜ್ಞೆಯ ಕಾರ್ಯ ಮುಗಿಯಿತೆಂದು ಕೆಲವರು ವಾದಿಸಿದರು. ಅಲ್ಲಿಂದೀಚೆಗೆ ಧೈರ್ಯಗುಂದಿದವರೆಲ್ಲ ಈ ವಾದವನ್ನು ಶರಣುಹೊಕ್ಕರು. ಈ ವಾದದಲ್ಲಿ ಹುರುಳಿಲ್ಲವೆಂದಲ್ಲ; ಆದರೆ ಶಾಸನವನ್ನು ಅದೇ ಶಾಸನವೆನ್ನದೆ ಅದರ ದುಷ್ಟ ನೀತಿಗಾಗಿ ವಿರೋಧಿಸುವವರಿಗೆ ಈ ವಾದ ಅರ್ಥವಾಗಲಿಲ್ಲ. ಆದರೂ ನಮ್ಮ ಸಂರಕ್ಷಣೆಗೆ ನಮ್ಮ ಜನರ ಜಾಗ್ರತೆ ಬೇರೂರಿ ಭದ್ರಗೊಳ್ಳುವಂತೆಯೂ, ನಮ್ಮ ದೌರ್ಬಲ್ಯಯ ಅಳೆಯುವುದಕ್ಕಾಗಿಯೂ ಪುನಃ ಪ್ರತಿಜ್ಞೆ ಮಾಡುವುದು ಅವಶ್ಯವಾಗಿ ಕಂಡು ಬಂದಿತು. ಆದ್ದರಿಂದ ಎಲ್ಲ ಕಡೆಗಳಲ್ಲೂ ಸಭೆ ಸೇರಿಸಿದೆವು, ಪರಿಸ್ಥಿತಿ ವಿವರಿಸಿ ಹೊಸದಾಗಿ ಪ್ರತಿಜ್ಞೆ ಮಾಡಿಸಿದೆವು; ನಮ್ಮ ಉತ್ಸಾಹ ಎಂದಿಗಿಂತ ಅಧಿಕವಾಗಿತ್ತೆಂದು ಕಂಡೆವು.

ಇಷ್ಟು ಹೊತ್ತಿಗೆ ಜುಲೈ ತಿಂಗಳು ಮುಗಿಯುತ್ತಾ ಬಂದಿತು. ಕೊನೆಯದಿನ ಟ್ರಾನ್ಸ್

ವಾಲ್ ಮುಖ್ಯನಗರವಾದ ಪ್ರೆಟೋರಿಯದಲ್ಲಿ ಭಾರತೀಯರ ದೊಡ್ಡ ಸಭೆ ಸೇರಿಸಬೇಕೆಂದು ನಿಶ್ಚಯಿಸಿದ್ದೆವು. ಇತರ ಸ್ಥಳಗಳಿಂದಲೂ ಬರಲು ಪ್ರತಿನಿಧಿಗಳಿಗೆ ಆಹ್ವಾನ ಕಳಿಸಿದ್ದೆವು. ಪ್ರೆಟೋರಿಯ ಮಸೀದೆಯ ಎದುರಿನ ಮೈದಾನದಲ್ಲಿ ಸಭೆ ಸೇರಿತು. ಸತ್ಯಾಗ್ರಹ ಪ್ರಾರಂಭವಾದ ಮೇಲೆ ನಾವು ಸೇರಿಸುತ್ತಿದ್ದ ಸಭೆಗಳಿಗೆ ಯಾವ ಸಭಾಮಂದಿರವೂ ಸಾಕಾಗುತ್ತಿರಲಿಲ್ಲ. ಟ್ರಾನ್ಸ್ ವಾಲ್ ಭಾರತೀಯರ ಒಟ್ಟು ಜನಸಂಖ್ಯೆ ೧೩,೦೦೦ ಕ್ಕೆ ಹೆಚ್ಚು ಇರಲಿಲ್ಲ. ಇದರಲ್ಲಿ ೧೦,೦೦೦ ಜನ ಜೋಹಾನ್ಸ ಬರ್ಗ್ ಮತ್ತು ಪ್ರೆಟೋರಿಯಾದಲ್ಲೆ ಇದ್ದರು. ೧೦ ಸಾವಿರ ಜನರಲ್ಲಿ ೫-೬ ಸಾವಿರ ಜನ ಸಭೆಗೆ ಬರುವುದು ಪ್ರಪಂಚದ ಯಾವುದೇ ದೇಶದಲ್ಲಿಯಾಗಲಿ ಬಹುದೊಡ್ಡ ಸಂಖ್ಯೆಯೆಂದೂ ಮತ್ತು ಸಂತೋಷಜನಕವಾದುದೆಂದೂ ಭಾವಿಸಬಹುದು. ಯಾವ ಹೋರಾಟ ಸಂಪೂರ್ಣ ಅಂತಃಶಕ್ತಿಯಿಂದಲೇ ಮುಖ್ಯವಾಗಿ ನಡೆಯಬೇಕಾಗಿದೆಯೋ ಅಲ್ಲಿ ಸಾಮೂಹಿಕ ಶಿಸ್ತು ಅತ್ಯಾವಶ್ಯಕ. ಬೇರೆ ಯಾವ ರೀತಿಯಲ್ಲಿಯೂ ಸಾಮೂಹಿಕ ಸತ್ಯಾಗ್ರಹವು ಸಾಧ್ಯವಾಗಲಾರದು. ಸಭೆಗಳಲ್ಲಿ ಅಷ್ಟು ಹೆಚ್ಚು ಜನಸಂದಣಿಯಿಂದ ಕಾರ್ಯಕರ್ತರಿಗೆ ಯಾರಿಗೂ ಆಶ್ಚರ್ಯವೆನಿಸಲಿಲ್ಲ. ಆದ್ದರಿಂದ ಪ್ರಾರಂಭದಿಂದಲೇ ಅದಷ್ಟು ವೆಚ್ಚ ಉಳಿಸಬೇಕೆಂಬ ದೃಷ್ಟಿಯಿಂದಲೂ, ಸ್ಥಳ ದೊರೆಯದೆಂದು ನಿರಾಶರಾಗಿ ಯಾರೂ ಹಿಂದಿರುಗಬಾರದೆಂದೂ ಎಲ್ಲ ಸಭೆಗಳನ್ನೂ ವಿಶಾಲವಾದ ಮೈದಾನಗಳಲ್ಲಿಯೇ ಸೇರಿಸುತ್ತಿದ್ದೆವು. ಈ ಸಭೆಗಳೆಲ್ಲ ಶಾಂತಿಯುತವಾಗಿ ನಡೆಯುತ್ತಿದ್ದವು. ಸಭಿಕರು ಎಲ್ಲ ಉಪನ್ಯಾಸಗಳನ್ನೂ ಮನವಿಟ್ಟು ಕೇಳುತ್ತಿದ್ದರು. ವೇದಿಕೆಯಿಂದ ದೂರ ಇದ್ದವರಿಗೆ ಕೇಳಿಸದೆ ಹೋದರೆ ಗಟ್ಟಿಯಾಗಿ ಮಾತನಾಡಬೇಕೆಂದು ಕೇಳುತ್ತಿದ್ದರು. ಯಾವ ಸಭೆಗಳಲ್ಲೂ ನಾವು ಕುರ್ಚಿ ಹಾಕುತ್ತಿರಲಿಲ್ಲ. ಎಲ್ಲರೂ ನೆಲದ ಮೇಲೆ ಕೂಡುತ್ತಿದ್ದರು. ಅಧ್ಯಕ್ಷರು, ಉಪನ್ಯಾಸಕರು, ಇನ್ನೆರಡು ಮೂರು ಜನರನ್ನು ಕೂಡಿಸಬಹುದಾದ ಒಂದು ಸಣ್ಣ ವೇದಿಕೆ ಏರ್ಪಡಿಸಿ ಅವರಿಗೆ ಒಂದು ಸಣ್ಣ ಮೇಜು, ಕೆಲವು ಕುರ್ಚಿಗಳನ್ನೊ, ಕಾಲುಮಣೆಗಳನ್ನೊ ಇಡುತ್ತಿದ್ದೆವು.

ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್ ನ ಹಂಗಾಮಿ ಅಧ್ಯಕ್ಷರಾದ ಯುಸೂಫ್ ಇಸ್ಮಾಯಿಲ್ ಮಿಯ್ಯಾ ಈ ಸಭೆಯ ಅಧ್ಯಕ್ಷತೆ ವಹಿಸಿದರು. ಕರಾಳ ಶಾಸನದ ಪ್ರಕಾರ ರಹದಾರಿ ಕೊಡುವ ದಿನ ಹತ್ತಿರ ಬರುತ್ತಾ ಇದ್ದುದರಿಂದ, ಎಷ್ಟೇ ಉತ್ಸಾಹವಿದ್ದರೂ ಭಾರತೀಯರೆಲ್ಲ ಚಿಂತಾಕ್ರಾಂತರಾಗಿದ್ದರು. ಅದರಂತೆಯೆ ಜನರಲ್ ಬೋಥಾ, ಜನರಲ್ ಸ್ಮಟ್ಸ್ ರಿಗೂ-ಟ್ರಾನ್ಸ್‌ವಾಲ್ ಸರಕಾರದ ಶಕ್ತಿ ಎಲ್ಲವೂ ಅವರ ಬೆಂಬಲಕ್ಕಿದ್ದರೂ-ಚಿಂತೆ ಏನೂ ಕಡಿಮೆ ಇರಲಿಲ್ಲ. ಪಾಶವೀ ಶಕ್ತಿಯಿಂದ ಒಂದು ಜನಾಂಗವನ್ನೇ ಬಗ್ಗಿಸಲು ಯಾರಿಗೂ ಇಷ್ಟವಿರದು. ಆದ್ದರಿಂದ ಜನರಲ್ ಬೋಥಾ ನಮಗೆ ಬುದ್ಧಿ ಹೇಳಲು ವಿಲಿಯಮ್ ಹಾಸ್ಕೆನ್ ರನ್ನು ಕಳುಹಿಸಿದ್ದರು. ಹಿಂದಿನ ಅಧ್ಯಾಯದಲ್ಲಿ ಇವರ ಪರಿಚಯ ವಾಚಕರಿಗೆ ಆಗಿದೆ. ಸಭೆ ಅವರನ್ನು ಸ್ವಾಗತಿಸಿತು. ಅವರು "ನಾನು ನಿಮ್ಮ ಸ್ನೇಹಿತ, ನಿಮಗೆ ಗೊತ್ತಿದೆ. ಈ ವಿಷಯದಲ್ಲಿ ನನ್ನ ಮನಸ್ಸೆಲ್ಲ ನಿಮ್ಮ ಕಡೆಗೇ ಇದೆ ಎಂದು

ಹೇಳಬೇಕಾದ್ದು ಅನಾವಶ್ಯಕ. ನನ್ನ ಕೈಯಲ್ಲಿ ಸಾಧ್ಯವಿದ್ದಿದ್ದರೆ ನಿಮ್ಮ ಬೇಡಿಕೆ ಸಲ್ಲಿಸಲು ನಿಮ್ಮ ಎದುರಾಳಿಗಳಿಗೆ ಸಂತೋಷದಿಂದ ಹೇಳುತ್ತಿದ್ದೆ. ಆದರೆ ಟ್ರಾನ್ಸ್ ವಾಲ್ ಯೂರೋಪಿಯನ್ ರು ನಿಮ್ಮ ಜನಾಂಗದ ಮೇಲೆ ಎಷ್ಟು ದ್ವೇಷಭಾವನೆ ಇಟ್ಟಿದ್ದಾರೆಂದು ನಿಮಗೆ ಹೇಳಬೇಕಾಗಿಲ್ಲ. ಜನರಲ್ ಬೋಥಾ ನನ್ನನ್ನು ನಿಮ್ಮಲ್ಲಿಗೆ ಕಳುಹಿಸಿದ್ದಾರೆ. ಈ ಸಭೆಗೆ ಅವರ ಸಂದೇಶ ತಿಳಿಸಲು ನಾನು ಬಂದಿದ್ದೇನೆ. ಅವರಿಗೆ ನಿಮ್ಮ ಮೇಲೆ ತುಂಬ ಗೌರವವಿದೆ; ನಿಮ್ಮ ಮನೋಭಿಪ್ರಾಯ ಅರ್ಥವಾಗಿದೆ; ಆದರೆ ಅವರು ಹೇಳುವದು, ನಾನು ಅಸಹಾಯ. ಟ್ರಾನ್ಸ್ ವಾಲ್ ಯೂರೋಪಿಯನ್‌ರೆಲ್ಲ ಏಕಾಭಿಪ್ರಾಯದಿಂದ ತಮಗೆ ಈ ಶಾಸನ ಬೇಕೆಂದು ಹೇಳುತ್ತಿದ್ದಾರೆ. ಅದರ ಅವಶ್ಯಕತೆ ಅವರಿಗೂ ಮನವರಿಕೆಯಾಗಿದೆ. ಟ್ರಾನ್ಸ್ ವಾಲ್ ಸರಕಾರದ ಶಕ್ತಿ ಎಷ್ಟಿದೆ ಎಂದು ಭಾರತೀಯರು ಬಲ್ಲರು. ಶಾಸನಕ್ಕೆ ಸಾಮ್ರಾಜ್ಯ ಸರಕಾರದ ಒಪ್ಪಿಗೆ ದೊರೆತಿದೆ. ಭಾರತೀಯರು ತಮ್ಮ ಕೈಲಾದ ಎಲ್ಲ ಪ್ರಯತ್ನಮಾಡಿ, ಧೀರರಂತೆ ವರ್ತಿಸಿದ್ದಾರೆ. ಈಗ ಅವರ ವಿರೋಧಕ್ಕೆ ಸೋಲಾಗಿರುವುದರಿಂದಲೂ, ಮಸೂದೆ ಶಾಸನವಾಗಿರುವುದರಿಂದಲೂ, ಭಾರತೀಯರು ಅದಕ್ಕೆ ತಲೆಬಾಗಿ ತಾವು ಶಾಂತಿರಕ್ಷಕರೆಂದೂ, ರಾಜ್ಯಭಕ್ತರೆಂದೂ ತೋರಿಸಿಕೊಡಬೇಕು. ಈ ಶಾಸನದ ಪ್ರಕಾರ ವಿಧಿಸುವ ನಿಯಮಗಳ ವ್ಯತ್ಯಾಸಕ್ಕೆ ನೀವು ಕೊಡುವ ಸಣ್ಣಪುಟ್ಟ ಸಲಹೆಗಳನ್ನು ಜನರಲ್ ಸ್ಮಟ್ಸ್ ಬಹಳ ಜಾಗರೂಕತೆಯಿಂದ ಗಮನಿಸುತ್ತಾರೆ. ನನ್ನ ಬುದ್ಧಿವಾದವೂ ಅಷ್ಟೆ; ನೀವು ಜನರಲ್ ಬೋಥಾರ ಸಂದೇಶ ಒಪ್ಪಿರಿ. ಈ ಶಾಸನದ ವಿಷಯದಲ್ಲಿ ಟ್ರಾನ್ಸ್ ವಾಲ್ ಸರಕಾರ ಗಟ್ಟಿಮನಸ್ಸು ಮಾಡಿದೆ. ಅದನ್ನು ಎದುರಿಸಹೋದರೆ ಗೋಡೆ ಹಾಯ್ದಂತೆಯೇ ಸರಿ. ನಿಷ್ಫಲ ವಿರೋಧ ತೋರಿಸಿ ನಿಮ್ಮ ಜನಾಂಗ ಹಾಳಾಗುವುದೂ ಅನಾವಶ್ಯಕ ಕಷ್ಟಗಳನ್ನು ನೀವಾಗಿಯೇ ತಂದುಕೊಳ್ಳುವುದೂ ನನಗೆ ಇಷ್ಟವಿಲ್ಲ" ಎಂದು ಹೇಳಿದರು. ಅವರ ಭಾಷಣವನ್ನು ಶಬ್ದಶಃ ನಾನು ಸಭೆಗೆ ಭಾಷಾಂತರಿಸಿದೆ; ಬಹು ಎಚ್ಚರದಿಂದ ಇರಬೇಕೆಂದು ನಾನು ಸ್ವತಃ ತಿಳಿಸಿದೆ. ಹರ್ಷಧ್ವನಿಗಳ ಮಧ್ಯೆ ಹಾಸ್ಕೆನ್‌ರು ಸಭೆಯಿಂದ ಹೊರಟರು.

ಭಾರತೀಯ ಭಾಷಣಕಾರರಿಗೆ ಈಗ ಅವಕಾಶ ಕೊಡಲಾಯಿತು. ಈ ಅಧ್ಯಾಯಕ್ಕೆ ಮಾತ್ರವೇ ಅಲ್ಲ, ಈ ಗ್ರಂಥಕ್ಕೆ ನಾಯಕರಾದ ದಿವಂಗತ ಅಹಮದ್ ಮಹಮದ್ ಕಾಛಲಿಯಾ ಅವರಲ್ಲಿ ಒಬ್ಬರು. ನನ್ನ ಕಕ್ಷಿಗಾರರಾಗಿ ಅನುವಾದಕರಾಗಿ ಮಾತ್ರ ನನಗವರ ಪರಿಚಯವಿತ್ತು. ಸಾರ್ವಜನಿಕ ಜೀವನದಲ್ಲಿ ಅವರು ಯಾವಾಗಲೂ ಪ್ರಮುಖ ಪಾತ್ರ ವಹಿಸಿರಲಿಲ್ಲ. ವ್ಯವಹಾರಕ್ಕೆ ತಕ್ಕಷ್ಟು ಅವರಿಗೆ ಇಂಗ್ಲಿಷ್ ಪರಿಚಯವಿತ್ತು. ತಮ್ಮ ಸ್ನೇಹಿತರನ್ನು ಇಂಗ್ಲಿಷ್ ನ್ಯಾಯವಾದಿಗಳ ಬಳಿಗೆ ಕರೆದುಕೊಂಡು ಹೋದಾಗ ತಾವೇ ಅವರಿಗೆ ಅನುವಾದಕರಾಗುವ ಮಟ್ಟಿಗೆ ಅಭ್ಯಾಸಬಲದಿಂದ ಇಂಗ್ಲಿಷ್ ಜ್ಞಾನ ಹೆಚ್ಚಿಸಿಕೊಂಡಿದ್ದರು. ಅನುವಾದವು ಅವರ ಕಸಬು ಆಗಿರಲಿಲ್ಲ; ಸ್ನೇಹದಲ್ಲಿ ಮಾತ್ರ ಆ ರೀತಿ ಸಹಾಯ ಮಾಡುತ್ತಿದ್ದರು. ಮೊದಲು ಬೀದಿಗಳಲ್ಲಿ ಬಟ್ಟೆ ಮಾರುತ್ತಿದ್ದರು. ಆಮೇಲೆ ಅವರ

ಸಹೋದರರೊಂದಿಗೆ ಪಾಲಿನ ಮೇಲೆ ಒಂದು ಅಂಗಡಿ ಇಟ್ಟರು ಸೂರತಿ ಮೆಮನ್ ಪಂಗಡಕ್ಕೆ ಸೇರಿದವರು. ಅವರ ಜನರಲ್ಲಿ ಅವರಿಗೆ ಬಹಳ ಮರ್ಯಾದೆಯಿತ್ತು. ಅವರಿಗೆ ಗುಜರಾತಿ ಜ್ಞಾನ ಸ್ವಲ್ಪವಾದರೂ, ಅನುಭವದಿಂದ ಅದರ ಪರಿಶ್ರಮ ಚೆನ್ನಾಗಿತ್ತು. ಏನೇ ಹೇಳಲಿ ಬಹು ಶೀಘ್ರವಾಗಿ ಗ್ರಹಿಸುವ ಚುರುಚು ಬುದ್ಧಿ. ಅವರು ನ್ಯಾಯದ ತೊಡಕುಗಳನ್ನು ಸುಲಭವಾಗಿ ಬಿಡಿಸುತ್ತಿದ್ದುದು ನನಗೇ ಆಶ್ಚರ್ಯವಾಗುತ್ತಿತ್ತು. ನ್ಯಾಯವಾದಿಗಳೊಂದಿಗೆ ವಾದಮಾಡಲು ಅವರು ಭಯಪಡುತ್ತಿದ್ದಿಲ್ಲ; ಅವರ ಅಭಿಪ್ರಾಯಗಳಿಗೆ ನ್ಯಾಯವಾದಿಗಳು ಮನ್ನಣೆ ಕೊಡುತ್ತಿದ್ದರು.

ಧೈರ್ಯದಲ್ಲಿಯೇ ಆಗಲಿ, ಶ್ರದ್ಧೆಯಲ್ಲಿಯೇ ಆಗಲಿ ಕಾಛಲಿಯಾರನ್ನು ಮೀರಿಸಬಲ್ಲರನ್ನು ದಕ್ಷಿಣ ಆಫ್ರಿಕದಲ್ಲಾಗಲಿ, ಭಾರತದಲ್ಲಾಗಲಿ ಇದುವರೆಗೂ ನಾನು ನೋಡಿಲ್ಲ. ತಮ್ಮ ಜನರಿಗಾಗಿ ಅವರು ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದರು. ಯಾವಾಗಲೂ ಅವರು ಆಡಿದ ಮಾತು ಮಿರಿದವರಲ್ಲ. ಸೂರತಿ ಮೆಮನ್ ಮಸೀದೆಯ ಧರ್ಮದರ್ಶಿಗಳಲ್ಲೊಬ್ಬರಾಗಿ ಬಹಳ ನಿಷ್ಠರಾದ ಮುಸಲ್ಮಾನರಾಗಿದ್ದರು. ಆದರೆ ಹಿಂದೂಗಳನ್ನೂ ಮುಸಲ್ಮಾನರನ್ನೂ ಒಂದೇ ದೃಷ್ಟಿಯಿಂದ ಕಾಣುತ್ತಿದ್ದರು. ಅಂಧಶ್ರದ್ಧೆಯಿಂದಾಗಲಿ, ಅನ್ಯಾಯವಾಗಿ ಆಗಲಿ ಹಿಂದೂಗಳಿಗೆ ವಿರೋಧವಾಗಿ ಮುಸಲ್ಮಾನರ ಪಕ್ಷ ವಹಿಸಿದ್ದು ನನಗೆ ಬೇರೆ ಜ್ಞಾಪಕವಿಲ್ಲ. ತುಂಬ ನಿರ್ಭೀತರೂ, ನಿಷ್ಪಕ್ಷಪಾತಿಗಳೂ ಆಗಿದ್ದ ಕಾರಣ ಹಿಂದೂಗಳಲ್ಲೇ ಆಗಲಿ, ಮುಸಲ್ಮಾನರಲ್ಲೇ ಆಗಲಿ ತಪ್ಪು ಕಂಡಾಗ, ಅವಶ್ಯವೆಂದರೆ ಆ ತಪ್ಪನ್ನು ತೋರಿಸಲು ಹೆದರುತ್ತಿರಲಿಲ್ಲ. ಅವರ ಸರಳ ಸ್ವಭಾವವೂ, ವಿನಯವೂ ಅನುಕರಣೀಯವಾದವು. ನನಗೂ ಅವರಿಗೂ ಇದ್ದ ಅನೇಕ ವರ್ಷಗಳ ಸಮೀಪ ಬಾಂಧವ್ಯದಿಂದ, ಯಾವ ಜನಾಂಗದಲ್ಲೇ ಆಗಲಿ ಕಾಛಲಿಯಾರಂತಹ ಮನುಷ್ಯ ದೊರೆಯುವುದು ದುರ್ಲಭವೆಂದು ನನಗೆ ಬಲವಾದ ನಂಬಿಕೆಯಾಗಿದೆ.

ಆ ಸಭೆಯಲ್ಲಿ ಮಾತನಾಡಿದವರಲ್ಲಿ ಕಾಛಲಿಯಾ ಒಬ್ಬರು. ಅವರು ಹೇಳಿದುದು ಬಹಳ ಸ್ವಲ್ಪ. "ಪ್ರತಿಯೊಬ್ಬ ಭಾರತೀಯನಿಗೂ, ಈ ಕರಾಳ ಶಾಸನ ಏನು, ಅದರ ಪರಿಣಾಮವೇನು ಎಂಬುದು ತಿಳಿದಿದೆ. ನಾನು ಹಾಸ್ಕೆನ್ ರ ಮಾತನ್ನು ಮನಗೊಟ್ಟು ಕೇಳಿದ್ದೇನೆ, ನೀವೂ ಕೇಳಿದ್ದೀರಿ. ಅವರ ಭಾಷಣ ನನ್ನ ತಿರ್ಮಾನವನ್ನು ದೃಢಪಡಿಸಿದೆ. ಟ್ರಾನ್ಸ್ ವಾಲ್ ಸರಕಾರದ ಶಕ್ತಿ ಎಷ್ಟೆಂಬುದು ನಮಗೆ ಗೊತ್ತಿದೆ. ಆದರೆ ಅಂತಹ ಶಾಸನ ನಿರ್ಮಾಣ ಮಾಡುವದರ ಹೊರತಾಗಿ ಇನ್ನೇನನ್ನೂ ಅದು ಮಾಡಲಾರದು. ನಮ್ಮನ್ನು ಸೆರೆಮನೆಗೆ ಹಾಕುತ್ತದೆ; ನಮ್ಮನ್ನು ಗಡಿಪಾರು ಮಾಡುತ್ತದೆ; ಗಲ್ಲಿಗೆ ಏರಿಸುತ್ತದೆ. ಇವೆಲ್ಲವನ್ನೂ ನಾವು ಸಂತೋಷದಿಂದ ಸಹಿಸೋಣ; ಆದರೆ ಈ ಕಾನೂನಿಗೆ ಮಾತ್ರ ಸುಮ್ಮನೆ ತಲೆಬಾಗಲು ಸಾಧ್ಯವಿಲ್ಲ" ಈ ರೀತಿ ಹೇಳುವಾಗ ಕಾಛಲಿಯಾರ ಕಂಠ ಬಿಗಿಯುತ್ತಿದ್ದುದನ್ನು ನಾನು ನೋಡಿದೆ . ಅವರ ಮುಖ ಕೆಂಪೇರಿತ್ತು. ಕುತ್ತಿಗೆ, ಹಾಗೂ ಹಣೆಯ ಮೇಲಿನ ರಕ್ತನಾಳಗಳ ರಕ್ತದ ಒತ್ತಡ ಹೆಚ್ಚಿ ಉಬ್ಬಿದವು. ಅವರ ದೇಹ ಕಂಪಿಸಲಾರಂಭಿಸಿತು. ಬಲಗೈ ಬೆರಳನ್ನು ಕುತ್ತಿಗೆಯ ಮೇಲಿಟ್ಟು "ದೇವರ

ಅಣೆ, ನನ್ನನ್ನು ಗಲ್ಲಿಗೇರಿಸಲಿ, ಆದರೆ ಈ ಶಾಸನಕ್ಕೆ ನಾನು ತಲೆಬಾಗುವುದಿಲ್ಲ. ಇಲ್ಲಿರುವವರೆಲ್ಲ ಅದೇ ರೀತಿ ಪ್ರತಿಜ್ಞೆ ಮಾಡಲೆಂದು ನನ್ನ ಅಪೇಕ್ಷೆ" ಎಂದು ಗರ್ಜಿಸಿ ಕುಳಿತರು. ಅವರು ಕುತ್ತಿಗೆಯ ಮೇಲೆ ಬೆರಳು ಒಯ್ದಾಗ, ವೇದಿಕೆಯ ಮೇಲೆ ಕುಳಿತ ಕೆಲವರು ನಸುನಕ್ಕರು; ನಾನೂ ಅವರೊಂದಿಗೆ ನಸುನಕ್ಕಂತೆ ನನಗೆ ಜ್ಞಾಪಕ. ತಮ್ಮ ಧೀರವಾಣಿಯನ್ನು ಕಾರ್ಯತಃ ತೋರುವ ಶಕ್ತಿ ಕಾಛಲಿಯಾಗಿರೆ ಇದೆಯೇ ಎಂದು ನಾನು ಅನುಮಾನಪಟ್ಟೆ. ಆ ಸಂಶಯಕ್ಕಾಗಿ ಈಗಲೂ, ನೆನೆದಾಗಲೆಲ್ಲ ನಾನು ಪಶ್ಚಾತ್ತಾಪ ಪಡುತ್ತೇನೆ. ಆ ಮಹಾಸಂಗ್ರಾಮದಲ್ಲಿ ಒಂದು ಕ್ಷಣವೂ ಹಿಂದು ಮುಂದೆ ನೋಡದೆ ತಮ್ಮ ಪ್ರತಿಜ್ಞೆ ಪಾಲಿಸಿದ ಭಾರತೀಯರಲ್ಲಿ ಕಾಛಲಿಯಾ ಯಾವಾಗಲೂ ಮುಂದಾಳು.

ಅವರು ಮಾತನಾಡಿದ್ದಕ್ಕೆ ಸಭೆ ಹರ್ಷಧ್ವನಿ ಮಾಡಿತು. ಈ ಅಜ್ಞಾತ ನಾಯಕನ ವ್ಯಯಕ್ತಿಕ ಪರಿಚಯ ಅನೇಕರಿಗೆ ಇದ್ದ ಕಾರಣ, ನನಗಿಂತ ಚೆನ್ನಾಗಿ ಆತನನ್ನು ಅರ್ಥಮಾಡಿಕೊಂಡರು. ಕಾಛಲಿಯಾ ತಮಗೆ ತಿಳಿದಂತೆ ಹೇಳುವವರೆಂದೂ, ಹೇಳಿದಂತೆ ನಡೆಯುವವರೆಂದೂ ಅವರಿಗೆ ಗೊತ್ತು. ಇನ್ನೂ ಇತರರು ಭಾಷಣ ಮಾಡಿದರು. ಆದರೆ ಕಾಛಲಿಯಾರ ಭಾಷಣ ಅವರ ಮುಂದಿನ ನಡತೆಗೆ ಭವಿಷ್ಯ ವಾಣಿಯಂತಾದ್ದರಿಂದ ಅವರ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದ್ದೇನೆ. ಭಾಷಣಕಾರರಲ್ಲಿ ಎಲ್ಲರೂ ಕೊನೆಯವರೆಗೂ ದೃಢ ಮನಸ್ಕರಾಗಿರಲಿಲ್ಲ. ಈ ಸತ್ಯಾಗ್ರಹ ಸಮರ ಮುಗಿದ ಮೇಲೆ ಕೊನೆಯ ವರೆಗೂ ತಮ್ಮ ಜನರ ಸೇವೆ ಮಾಡಿ ೧೯೧೮ ರಲ್ಲಿ ಮಹಾವ್ಯಕ್ತಿ ದಿವಂಗತರಾದರು.

ಕಾಛಲಿಯಾ ಸೇಠರ ವಿಷಯ ಇನ್ನೊಂದು ಸಂಗತಿ ತಿಳಿಸಿ ಈ ಅಧ್ಯಾಯ ಮುಗಿಸುತ್ತೇನೆ. ಅದನ್ನು ತಿಳಿಸಲು ಬೇರೆ ಎಲ್ಲೂ ಅವಕಾಶ ದೊರೆಯಲಾರದು. ಅನೇಕ ಸತ್ಯಾಗ್ರಹಿಗಳ ಸಂಸಾರಗಳು ವಾಸಮಾಡುತ್ತಿದ್ದ 'ಟಾಲ್ ಸ್ಟಾಯ್ ಫಾರಂ' ವಿಷಯ ವಾಚಕರಿಗೆ ಮುಂದೆ ತಿಳಿಯುತ್ತದೆ. ಸೇಠರು ತಮ್ಮ ೧೦-೧೨ ವರ್ಷ ವಯಸ್ಸಿನ ಆಲಿ ಎಂಬ ಹುಡುಗನನ್ನು ತಾವು ಇತರರಿಗೆ ಮಾರ್ಗ ದರ್ಶಿಯಾಗಿರಬೇಕೆಂದೂ ಸೇವೆಯ ಸರಳ ಜೀವನದ ಅನುಭವ ಆ ಹುಡುಗನಿಗೆ ಬರಬೇಕೆಂದೂ, 'ಟಾಲ್ ಸ್ಟಾಯ್' ಆಶ್ರಮಕ್ಕೆ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದರು. ಇವರು ಮುಂದಾರಿಯನ್ನು ತೋರಿಸಿದ್ದರಿಂದ ಇತರ ಮುಸಲ್ಮಾನರೂ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಆಶ್ರಮಕ್ಕೆ ಕಳುಹಿಸಿದರು. ಅಲಿ ವಿನಯಪರ, ಸೂಕ್ಷ್ಮಬುದ್ಧಿ, ಸತ್ಯನಿಷ್ಠ, ಮುಚ್ಚುಮರೆಯಿಲ್ಲದವನು. ತಂದೆಗಿಂತ ಮುಂಚೆಯೇ ಮಗ ಪರಲೋಕವಾಸಿಯಾದ. ಆತನು ಬದುಕಿದ್ದರೆ, ಉತ್ತಮ ಪಿತನ ಉತ್ತಮ ಪುತ್ರನಾಗುತ್ತಿದ್ದನೆಂಬುದರಲ್ಲಿ ನನಗೆ ಏನೂ ಅನುಮಾನವಿಲ್ಲ.

೧೭. ಅಪಸ್ವರ

೧೯೦೭ನೇ ಜುಲೈ ಒಂದನೆ ದಿನ ಬಂತು. ರಹದಾರಿ ಕಚೇರಿಗಳೂ ಪ್ರಾರಂಭವಾದವು. ಪ್ರತಿಯೊಂದು ರಹದಾರಿ ಕಚೇರಿಯನ್ನೂ ಬಹಿರಂಗವಾಗಿ ಕಾಯಬೇಕೆಂದೂ, ದಾರಿಗಳಲ್ಲಿ ಸ್ವಯಂಸೇವಕರನ್ನು ನಿಲ್ಲಿಸಿ ಅಧೈರ್ಯಗೊಂಡ ಭಾರತೀಯರಿಗೆ, ಅವರಿಗಾಗಿ ಬೀಸಿದ ಬಲೆಯ ವಿಚಾರವಾಗಿ ಎಚ್ಚರ ಕೊಡಬೇಕೆಂದೂ ತೀರ್ಮಾನಿಸಿದ್ದೆವು. ಸ್ವಯಂಸೇವಕರಿಗೆ ಗುರುತಿನ ಬಿಲ್ಲೆ ಕೊಟ್ಟಿದ್ದೆವು. ರಹದಾರಿ ಪಡೆದ ಯಾವ ಭಾರತೀಯನನ್ನೂ ಮೂದಲಿಸಬಾರದೆಂದು ಮೊದಲೇ ಸ್ಪಷ್ಟವಾಗಿ ಎಚ್ಚರಿಸಿದ್ದೆವು. ಅವರ ಹೆಸರನ್ನು

ಕೇಳಬೇಕು; ತಿಳಿಸಲು ನಿರಾಕರಿಸಿದರೆ ಅವರನ್ನು ಬಲಾತ್ಕಾರ ಮಾಡಬಾರದು; ಒರಟುತನ ತೋರಕೂಡದು. ರಹದಾರಿ ಕಚೇರಿಗೆ ಹೋಗುವ ಪ್ರತಿ ಭಾರತೀಯನಿಗೂ, ಆ ಕರಾಳ ಶಾಸನಕ್ಕೆ ತಲೆಬಾಗಿದರೆ ಆಗುವ ಕೆಡುಕನ್ನು ವಿವರಿಸುವ ಒಂದು ಹಸ್ತಪತ್ರಿಕೆ ಕೊಟ್ಟು ಅದರಲ್ಲಿ ಬರೆದಿರುವದನ್ನೆಲ್ಲ ತಿಳಿಸಿ ಹೇಳಬೇಕು. ಪೋಲೀಸರನ್ನೂ ಕೂಡ ಗೌರವದಿಂದ ಕಾಣಬೇಕು. ಪೋಲೀಸರು ಬೈದರೂ, ಹೊಡೆದರೂ ತಾಳ್ಮೆಯಿಂದ ಸೈರಿಸಬೇಕು. ಪೋಲೀಸರ ಕ್ರೂರ ವರ್ತನೆ ಅಸಹನೀಯವಾದರೆ ಆ ಸ್ಥಳ ಬಿಡಬೇಕು. ಪೋಲೀಸರು ದಸ್ತಗಿರಿ ಮಾಡಿದರೆ ಸಂತೋಷದಿಂದ ದಸ್ತಗಿರಿ ಆಗಬೇಕು. ಜೋಹಾನ್ಸಬರ್ಗ್‌ನಲ್ಲಿ ಏನಾದರೂ ಪ್ರಮಾದ ನಡೆದರೆ ಕೂಡಲೆ ನನ್ನ ಗಮನಕ್ಕೆ ತರಬೇಕು. ಉಳಿದ ಸ್ಥಳಗಳಲ್ಲಿ ಸ್ಥಳೀಯ ಕಾರ್ಯದರ್ಶಿಗಳಿಗೆ ತಿಳಿಸಿ ಅವರ ಸಲಹೆ ಪಡೆಯಬೇಕು. ಪ್ರತಿಯೊಂದು ಸ್ವಯಂಸೇವಕ ಪಡೆಗೂ ಒಬ್ಬ ನಾಯಕನಿದ್ದ. ಆ ನಾಯಕನ ಅಪ್ಪಣೆಯಂತೆ ಉಳಿದವರು ನಡೆಯ ತಕ್ಕದ್ದು.

ಭಾರತೀಯರಿಗೆ ಈ ಅನುಭವ ಇದೇ ಮೊದಲು. ಹನ್ನೆರಡು ವರ್ಷಕ್ಕೆ ಮೀರಿದವರನ್ನೆಲ್ಲ ಸ್ವಯಸೇವಕರನ್ನಾಗಿ ತೆಗೆದುಕೊಳ್ಳಲಾಯಿತು. ಸ್ವಯಂ ಸೇವಕರಲ್ಲಿ ೧೨ ರಿಂದ ೧೮ ವರ್ಷದವರೇ ಹೆಚ್ಚು ಜನ. ಆದರೆ ಸ್ಥಳೀಯ ಕೆಲಸಗಾರರಿಗೆ ಪರಿಚಯವಿಲ್ಲದ ಯಾರನ್ನೂ ಸೇರಿಸಲಿಲ್ಲ. ಈ ಮುಂಜಾಗರೂಕತೆಗಳಲ್ಲದೆ ರಹದಾರಿ ಪಡೆಯಲು ಇಷ್ಟವಿರುವವರು ಯಾರಿಗಾದರೂ ಸ್ವಯಂ ಸೇವಕರ ಭಯವಿದ್ದರೆ, ರಹದಾರಿ ಕಚೇರಿಗೆ ಕರೆದುಕೊಂಡು ಹೋಗಿ ಹಿಂದಕ್ಕೆ ಕರೆತರಲು ಜೊತೆಗೆ ಸ್ವಯಂಸೇವಕನನ್ನು ಕಳುಹಿಸಲು ಕಾರ್ಯಕರ್ತರನ್ನು ಕೇಳಬಹುದೆಂದು ಎಲ್ಲ ಸಭೆಗಳಲ್ಲೂ ಜನರಿಗೆ ತಿಳಿಸಲಾಗಿತ್ತು. ಕೆಲವರು ಈ ಉಪಯೋಗ ಪಡೆದರು.

ಪ್ರತಿ ಸ್ಥಳದಲ್ಲಿಯೂ ಸ್ವಯಂಸೇವಕರು ಅಪಾರ ಉತ್ಸಾಹದಿಂದ ಕೆಲಸ ಮಾಡಿದರು; ತಮ್ಮ ಕಾರ್ಯನಿರ್ವಹಣದಲ್ಲಿ ಒಳ್ಳೇ ಜಾಗರೂಕತೆ, ಚಟುವಟಿಕೆ ತೋರಿಸಿದರು. ಸಾಮಾನ್ಯವಾಗಿ ಪೋಲೀಸರ ತೊಂದರೆ ಹೆಚ್ಚಾಗಿರಲಿಲ್ಲ. ಅಲ್ಲಲ್ಲಿ ಅಲ್ಪಸ್ವಲ್ಪ ಕಿರುಕುಳ ಕೊಟ್ಟುದನ್ನು ಸಮಾಧಾನದಿಂದ ಸಹಿಸಿದರು. ಕೆಲಸ ಮಾಡುವಾಗ ತಮಾಷೆಯಿಂದ ಕಾಲಕಳೆಯುತ್ತ ಪೋಲೀಸರು ಈ ತಮಾಷೆಯಲ್ಲಿ ಭಾಗವಹಿಸುತ್ತ ಇದ್ದರು. ತಮ್ಮ ಕಾಲ ಕಳೆಯಲು ಅನೇಕ ವಿನೋದಗಳನ್ನು ಹುಡುಕಿದರು. ಸಾರ್ವಜನಿಕ ಓಡಾಟಕ್ಕೆ ಅಡ್ಡಿ ಬಂದರೆಂದು ಕೆಲವರ ದಸ್ತಗಿರಿಯಾಯಿತು. ಅಲ್ಲಿನ ಸತ್ಯಾಗ್ರಹದ ಹೋರಾಟದಲ್ಲಿ ಅಸಹಕಾರ ಇನ್ನೂ ಸೇರಿರಲಿಲ್ಲವಾದ್ದರಿಂದ ನ್ಯಾಯಸ್ಥಾನಗಳಲ್ಲಿ ವಾದಿಸಬಹುದಾಗಿತ್ತು; ಆದರೆ ಸಾರ್ವಜನಿಕ ಹಣದಿಂದ ನ್ಯಾಯವಾದಿಗಳಿಗೆ ಸಂಭಾವನೆ ಕೊಡುತ್ತಿರಲಿಲ್ಲ. ಸ್ವಯಂ ಸೇವಕರು ನಿರಪರಾಧಿಗಳೆಂದು ನ್ಯಾಯಸ್ಥಾನಗಳಲ್ಲಿ ತೀರ್ಮಾನವಾಗಿ ಬಿಡುಗಡೆಯಾಯಿತು. ಇದರಿಂದ ಸ್ವಯಂ ಸೇವಕರ ಉತ್ಸಾಹ ಅಧಿಕವಾಯಿತು.

ರಹದಾರಿ ಪಡೆಯಲು ಇಷ್ಟವಿದ್ದ ಭಾರತೀಯರ ಮೇಲೆ ಬಹಿರಂಗ ಹಿಂಸೆ ಅತ್ಯಾಚಾರಗಳು ಸ್ವಯಂ ಸೇವಕರ ಸಹಾಯದಿಂದ ತಪ್ಪಿದರೂ ಒಳಗಡೆ ಅವರಿಗೆ ಹಿಂಸೆ ಇತರ ಕೆಡಕು ಮಾಡುತ್ತೇವೆಂದು ಹೆದರಿಸುವ, ಸ್ವಯಂ ಸೇವಕರಲ್ಲದ ಜನರ,

ಬೇರೆ ತಂಡವೊಂದು ಉದ್ಭವಿಸಿತು. ಇದು ಬಹಳ ವ್ಯಸನಕರ ಪರಿಸ್ಥಿತಿಯಾದ್ದರಿಂದ ತಿಳಿದೊಡನೆ ಅದನ್ನು ನಿರ್ಮೂಲ ಮಾಡಲು ಎಲ್ಲ ಪ್ರಯತ್ನವನ್ನೂ ಮಾಡಲಾಯಿತು. ಅದರ ಪರಿಣಾಮವಾಗಿ ಬೆದರಿಕೆ ತೋರಿಸುವುದು ಬಹಳ ಮಟ್ಟಿಗೆ ಕಡಮೆಯಾದರೂ ಪೂರ್ತಿ ನಿಲ್ಲಲಿಲ್ಲ. ಆ ಬೆದರಿಕೆಯ ಫಲವಾಗಿ ದುಷ್ಪರಿಣಾಮವಾಯಿತು. ಬೆದರಿಕೆಗೆ ಒಳಗಾದವರೆಲ್ಲ ಸರಕಾರದ ರಕ್ಷಣೆ ಕೇಳಿದರು; ಕೂಡಲೆ ರಕ್ಷಣೆಯೂ ದೊರಕಿತು. ಈ ರೀತಿ ನಮ್ಮ ಜನರ ಮನಸ್ಸಿನಲ್ಲಿ ವಿಷ ತಲೆದೋರಿತು. ಸ್ವಲ್ಪ ಗಾಬರಿಯಾದವರು ಪೂರಾ ಹೆದರಿದರು. ನಿರ್ಬಲರಿಗೆ ಸೇಡು ತೀರಿಸಿಕೊಳ್ಳುವ ಆಸೆ ಹೆಚ್ಚು. ಆದ್ದರಿಂದ ನಮ್ಮ ಜನರ ಮನಸ್ಸಿನ ಕಹಿ ಇನ್ನೂ ಪ್ರಬಲಿಸಿತು.

ಈ ಬೆದರಿಕೆಗಳಿಂದ ಹೆಚ್ಚು ಪರಿಣಾಮವೇನಾಗಲಿಲ್ಲ. ಒಂದು ಕಡೆ ಜನಾಭಿಪ್ರಾಯದ ಹೆದರಿಕೆ, ಇನ್ನೊಂದು ಕಡೆ ಸ್ವಯಂ ಸೇವಕರ ಜೊತೆಯಲ್ಲಿ ಹೋದರೆ ಜನರಿಗೆ ಗೊತ್ತಾಗುವುದೆಂಬ ಹೆದರಿಕೆ–ಇವೆರಡೇ ಸಾಕಾದಷ್ಟು ಭಯ ಉಂಟುಮಾಡಿದ್ದವು. ಈ ಕರಾಳ ಶಾಸನಕ್ಕೆ ಸಮ್ಮತಿಸುವದು ನ್ಯಾಯವೆಂದು ಯಾವ ಭಾರತೀಯನೂ ತಿಳಿದಿರಲಿಲ್ಲ. ಆದರೆ ಕಷ್ಟನಷ್ಟ ಅನುಭವಿಸಲು ಶಕ್ತಿಯಿಲ್ಲದ ಕೆಲವರು ಆ ಶಾಸನಕ್ಕೆ ಮನ್ನಣೆ ಕೊಟ್ಟು ಇದಕ್ಕಾಗಿ ಅವರು ನಾಚಿಕೆಗೊಂಡರು. ಈ ಅಪಮಾನ, ದೊಡ್ಡ ಭಾರತೀಯ ವರ್ತಕರುಗಳಿಗೆ ಅಸಮಾಧಾನವಾದರೆ ತಮಗೆ ವ್ಯಾಪಾರದಲ್ಲಿ ನಷ್ಟವಾಗುತ್ತದೆಂಬ ಭಯ ಕೆಲಸವರಿಗೆ ಬಹಳ ತೊಡಕುಮಾಡಿ, ಈ ಎರಡೂ ತೊಂದರೆ ನಿವಾರಿಸಿಕೊಳ್ಳಲು ಕೆಲವು ಮುಖಂಡರು ಒಂದು ಉಪಾಯ ಹುಡುಕಿದರು. ರಹದಾರಿ ಕಚೇರಿಯೊಂದಿಗೆ ಸಂಧಾನ ನಡೆಸಿ, ಅಧಿಕಾರಿಯೊಬ್ಬರು ರಾತ್ರಿ ಒಂಭತ್ತು ಹತ್ತು ಗಂಟೆಯ ಸಮಯದಲ್ಲಿ ಖಾಸಗಿ ಮನೆಯೊಂದರಲ್ಲಿ ತಮ್ಮನ್ನು ನೋಡಬೇಕಾಗಿಯೂ, ಅಲ್ಲಿ ರಹದಾರಿ ಕೊಡಬೇಕಾಗಿಯೂ ಏರ್ಪಾಡು ಮಾಡಿದರು. ಈ ರೀತಿ ಮಾಡುವುದರಿಂದ, ತಾವು ಶಾಸನಕ್ಕೆ ಸಮ್ಮತಿಸಿದ್ದು ಸ್ವಲ್ಪ ದಿನ ಯಾರಿಗೂ ತಿಳಿಯುವದಿಲ್ಲವೆಂದೂ, ಅನಂತರ ತಾವು ಮುಖ್ಯಸ್ಥರೇ ಆ ರೀತಿ ಮಾಡಿದ ಮೇಲೆ ಇತರರು ತಮ್ಮನ್ನು ಹಿಂಬಾಲಿಸಿದಾಗ ತಮ್ಮ ಅನುಮಾನದ ಹೊರೆ ಕಡಮೆ ಮಾಡಿಕೊಳ್ಳಬಹುದೆಂದೂ ಭಾವಿಸಿದರು. ಸುದ್ಧಿ ಕ್ರಮೇಣ ತಿಳಿದರೆ ಯಾರೂ ಏನೂ ಮಾಡಲಾರರು.

ಆದರೆ ಸ್ವಯಂಸೇವಕರು ಬಹಳ ಎಚ್ಚರದಿಂದಿದ್ದ ಕಾರಣ ಪ್ರತಿ ನಿಮಿಷ ನಡೆಯುವ ವಿಷಯವೂ ನಮಗೆ ಗೊತ್ತಾಗುತ್ತಿದ್ದಿತು. ಸತ್ಯಾಗ್ರಹಿಗಳಿಗೆ ವರ್ತಮಾನ ಕೊಡತಕ್ಕವರು ರಹದಾರಿ ಕಚೇರಿಯಲ್ಲಿ ಸಹ ಕೆಲವರು ಇದ್ದರು. ಇನ್ನು ಕೆಲವರು ತಾವು ನಿರ್ಬಲರಾಗಿದ್ದರೂ, ಮುಖ್ಯಸ್ಥರು ಈ ರೀತಿ ತಮ್ಮ ಘನತೆಗೆ ತಾವೇ ಕುಂದು ತರುವುದನ್ನು ಸೈರಿಸಲಾರದೆ, ಇತರರು ಗಟ್ಟಿಮನಸ್ಸು ಮಾಡಿದರೆ ತಮಗೂ ಅನುಭವಿಸಲು ಕಷ್ಟವಾಗಲಾರದೆಂದು ಸತ್ಯಾಗ್ರಹಿಗಳಿಗೆ ತಿಳಿಸಿದರು. ಒಂದು ರಾತ್ರಿ ಈ ರೀತಿ ಕೆಲವರು ರಹದಾರಿ ಪಡೆಯಲು ಯಾವುದೊ ಒಂದು ಅಂಗಡಿಗೆ ಹೋಗುವುದಾಗಿ ವರ್ತಮಾನ ಬಂದಿತು. ಆ ರೀತಿ ಹೋಗದಂತೆ ಪ್ರೇರೇಪಿಸಲು ನಮ್ಮ ಜನರು ಪ್ರಯತ್ನಪಟ್ಟರು. ಅಂಗಡಿ ಮುಂದೆ ಕಾವಲುನಿಂತರು. ಮಾನವನ ದೌರ್ಬಲ್ಯವನ್ನು ಬಹಳ ಕಾಲ

ಅದುಮಲು ಸುಲಭಸಾಧ್ಯವಲ್ಲ. ಕೆಲವು ಪ್ರಮುಖರು ರಾತ್ರಿ ಹತ್ತು ಹನ್ನೊಂದು ಗಂಟೆಯ ಮೇಲೆ ರಹದಾರಿ ಪಡೆದರು; ಈ ರೀತಿ ಅಪಸ್ವರ ಆರಂಭವಾಯಿತು. ಮರುದಿನವೇ ನಮ್ಮ ಜನ ಅವರ ಹೆಸರನ್ನು ಪ್ರಚಾರಪಡಿಸಿದರು. ಅಪಮಾನಸಹನೆಗೂ ಒಂದು ಮಿತಿ ಇದೆ. ಸ್ವಾರ್ಥದೃಷ್ಟಿಯ ಕೈ ಮೇಲಾದರೆ ಜನರಿಗೆ ನಾಚಿಕೆಯ ಭಯವೇ ತಪ್ಪಿ, ನೇರವಾದ ಕಡಿದಾದ ಮಾರ್ಗಬಿಟ್ಟು ಅಡ್ಡದಾರಿ ಹಿಡಿಯುತ್ತಾರೆ. ಕ್ರಮೇಣ ಈ ರೀತಿ ಸುಮಾರು ಐದು ನೂರು ಜನ ರಹದಾರಿ ಪಡೆದರು. ಕೆಲವು ಕಾಲ ಖಾಸಗಿ ಮನೆಗಳಲ್ಲಿ ರಹದಾರಿ ಕೊಡುತ್ತಿದ್ದರು; ಆದರೆ ನಾಚಿಕೆ ಮೀರಿ ಮೊಂಡು ಬಿದ್ದ ಮೇಲೆ ಕೆಲವರು ಏಷಿಯಾಟಿಕ್ ಕಚೇರಿಗೇ ಹೋಗಿ ರಹದಾರಿ ಪಡೆದರು.

೧೮. ಮೊದಲನೆಯ ಸತ್ಯಾಗ್ರಹಿ ಕೈದಿ

ತಾವು ಎಷ್ಟು ಕಷ್ಟಪಟ್ಟರೂ ರಿಜಿಸ್ಟರ್ ಮಾಡಿಸಿಕೊಳ್ಳಲು ಇಷ್ಟಪಡುವ ಭಾರತೀಯರು ೫೦೦ ಜನರಿಗಿಂತ ಹೆಚ್ಚು ದೊರೆಯದ್ದರಿಂದ ಯಾರನ್ನಾದರೂ ಬಂಧಿಸಬೇಕೆಂದು ಸರಕಾರದವರು ನಿಶ್ಚಯಿಸಿದರು. ಜೆರ್ಮಿಸ್ಟನ್ ನಲ್ಲಿ ಅನೇಕ ಜನ ಭಾರತೀಯರಿದ್ದರು; ಅವರಲ್ಲಿ ಪಂಡಿತ ರಾಮಸುಂದರ ಒಬ್ಬ. ನೋಡಲು ಧೈರ್ಯಶಾಲಿ. ಅವನಿಗೆ ಚೆನ್ನಾಗಿ ಹರಟೆಕೊಚ್ಚಲು ಬರುತ್ತಿತ್ತು. ಕೆಲವು ಸಂಸ್ಕೃತ ಶ್ಲೋಕ ಬಾಯಿಗೆ ಬರುತ್ತಿದ್ದವು. ಉತ್ತರ ಭಾರತದವನಾದುದರಿಂದ ತುಳಸೀ ರಾಮಾಯಣದಿಂದ ಕೆಲವು 'ದೋಹಾಯ್' ಗಳೂ 'ಚೌಪಾಯ್'ಗಳೂ ಗೊತ್ತಿದ್ದವು. ಜನರಲ್ಲಿ ಸ್ವಲ್ಪ ಗೌರವವನ್ನೂ ಸಂಪಾದಿಸಿದ್ದ. ಅನೇಕ ಸ್ಥಳಗಳಲ್ಲಿ ಆವೇಶ ಪೂರಿತ ಭಾಷಣ ಮಾಡಿದ. ಕೆಲವು ಜನ ಹೊಟ್ಟೆಕಿಚ್ಚಿನ ಭಾರತೀಯರು, ರಾಮ ಸುಂದರನನ್ನು ಬಂಧಿಸಿದರೆ ಭಾರತೀಯರನೇಕರು ರಹದಾರಿ ಪಡೆಯುವುದಾಗಿ ಏಷಿಯಾಟಿಕ್ ಇಲಾಖೆಯವರಿಗೆ ಚಾಡಿ ಹೇಳಿದರು; ಆ ಚಾಪಲ್ಯದ ಚಟ ತಡೆಯಲು ಅಧಿಕಾರಿಗಳಿಗೆ ಸಾಧ್ಯವಾಗಲಿಲ್ಲ. ರಾಮಸುಂದರನ ಬಂಧನವಾಯಿತು. ಈ ರೀತಿಯ ಮೊಕದ್ದಮೆಗಳಲ್ಲಿ ಇದೇ ಮೊದಲನೆಯದಾದ್ದರಿಂದ ಸರಕಾರಕ್ಕೂ ಭಾರತೀಯರಿಗೂ ಮನಸ್ಸು ಬಹಳ ಕಲಕಿಹೋಯಿತು. ಜೆರ್ಮಿಸ್ಟನ್ ನಲ್ಲಿ ಕೆಲವರಿಗೆ ಮಾತ್ರ ಪರಿಚಿತನಾಗಿದ್ದ ರಾಮಸುಂದರ ಒಂದು ನಿಮಿಷದೊಳಗಾಗಿ ದಕ್ಷಿಣ ಆಫ್ರಿಕದಲ್ಲೆಲ್ಲ ಖ್ಯಾತಿಪಡೆದ. ಯಾವುದೋ ಮಹಾವ್ಯಕ್ತಿಯನ್ನು ವಿಚಾರಣೆಗೆ ಗುರಿಪಡಿಸಿದ್ದಾರೆಂದು ಎಲ್ಲರ ಗಮನವೂ ಆತನ ಕಡೆಗೇ ತಿರುಗಿತು. ಶಾಂತಿರಕ್ಷಣೆಗೆ ಹೆಚ್ಚಿನ ಏರ್ಪಾಟು ಅವಶ್ಯವಿಲ್ಲದೆ ಇದ್ದರೂ ಸರಕಾರದವರು ವಿಶೇಷ ಸಿದ್ಧತೆ ಮಾಡಿದರು. ನ್ಯಾಯಾಸ್ಥಾನದಲ್ಲಿ ಸಹ ರಾಮ ಸುಂದರನನ್ನು ಸಾಮಾನ್ಯ ಅಪರಾಧಿಯಂತೆ ಎಣಿಸದೆ ಭಾರತೀಯರ ಪ್ರತಿನಿಧಿ ಎಂದು ವಿಶೇಷ ಗೌರವ ತೋರಿಸಿದರು. ನ್ಯಾಯಾಸ್ಥಾನದ ತುಂಬ ಕುತೂಹಲಿಗಳಾದ ಭಾರತೀಯ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು. ರಾಮ ಸುಂದರನಿಗೆ ಒಂದು ತಿಂಗಳ ಸಾದಾ ಶಿಕ್ಷೆ ವಿಧಿಸಿ, ಆತನನ್ನು ಜೋಹಾನ್ಸಬರ್ಗ್ ಯೂರೋಪಿಯನ್ ವಿಭಾಗ ಅಥವಾ ಆವರಣದಲ್ಲಿ

ಪ್ರತ್ಯೇಕ ಕೋಣೆಯಲ್ಲಿಟ್ಟರು. ಜನರಿಗೆ ಆತನನ್ನು ನೋಡಲು ಧಾರಳವಾಗಿ ಅವಕಾಶ ಕೊಡಲಾಯಿತು. ಹೊರಗಿನಿಂದ ಆಹಾರ ತೆಗೆದುಕೊಳ್ಳಲು ಅನುಕೂಲ ಕೊಟ್ಟದ್ದರಿಂದ ನಮ್ಮ ಜನ ಪ್ರತಿದಿನವೂ ರುಚಿರುಚಿಯಾದ ಆಹಾರ ಒಯ್ದು ಕೊಡುತ್ತಿದ್ದರು. ಆತಬೇಕೆಂದ ಸೌಕರ್ಯವನ್ನೆಲ್ಲ ಕಲ್ಪಿಸಿಕೊಟ್ಟರು. ಆತನಿಗೆ ಶಿಕ್ಷೆಯಾದ ದಿನ ಎಲ್ಲೆಲ್ಲಿಯೂ ಉತ್ಸವದಂತೆ ಆಚರಿಸಲಾಯಿತು. ಯಾರ ಮನಸ್ಸಿಗೂ ವ್ಯಸನವಾಗಲಿಲ್ಲ. ಎಲ್ಲರೂ ಹರ್ಷಭರಿತರಾದರು. ನೂರಾರು ಜನ ಸೆರೆಮನೆಗೆ ಹೋಗಲು ಸಿದ್ಧರಾದರು. ಅನೇಕ ಜನ ರಹದಾರಿ ಪಡೆಯಲು ಬರುತ್ತಾರೆಂಬ ಏಷಿಯಾಟಿಕ್ ಇಲಾಖೆ ಅಧಿಕಾರಿಗಳ ಆಶೆ ಮಣ್ಣುಗೂಡಿತು. ಜೆರ್ಮಿಸ್ಟನ್ ನಿಂದ ಸಹ ರಹದಾರಿ ಪಡೆಯಲು ಒಬ್ಬನೂ ಬರಲಿಲ್ಲ. ಅನುಕೂಲವಾದದ್ದು ಭಾರತೀಯರಿಗೆ ಮಾತ್ರ, ಒಂದು ತಿಂಗಳ ಕಾಲ ಜಾಗ್ರತೆ ಕಳೆದುಹೋಯಿತು. ರಾಮ ಸುಂದರನ ಬಿಡುಗಡೆಯಾಯಿತು. ಆತನನ್ನು ಮೆರವಣಿಗೆಯಿಂದ ಕರೆದೊಯ್ದು ಸಭೆ ಸೇರಿಸಿದೆವು. ಉಜ್ವಲ ಭಾಷಣಗಳಾದವು. ಹೂಹಾರಗಳ ಭಾರದಲ್ಲಿ ರಾಮಸುಂದರನು ಬಾಗಿಹೋದ. ಆತನ ಗೌರವಾರ್ಥ ಸ್ವಯಂ ಸೇವಕರ ಒಂದು ಔತಣ ಏರ್ಪಡಿಸಿದರು. ನೂರಾರು ಜನ ರಾಮಸುಂದರನ ಅದೃಷ್ಟ ಕಂಡು ಕರುಬಿ ತಾವೂ ಶಿಕ್ಷೆ ಅನುಭವಿಸಲಿಲ್ಲವಲ್ಲ ಎಂದು ವ್ಯಸನಪಟ್ಟರು.

ಆದರೆ ರಾಮಸುಂದರ ಖೋಟಾ ನಾಣ್ಯ ಎಂದು ಸ್ವಲ್ಪ ದಿನಗಳಲ್ಲೇ ಗೊತ್ತಾಯಿತು. ಆತನ ಬಂಧನ ಅನಿರೀಕ್ಷಿತವಾದ್ದರಿಂದ ಒಂದು ತಿಂಗಳ ಶಿಕ್ಷೆ ತಪ್ಪಿಸಿಕೊಳ್ಳಲು ಆಗಲಿಲ್ಲ. ಹೊರಗೆ ಅನುಭವಿಸುತ್ತಿದ್ದುದಕ್ಕಿಂತ ಸೆರೆಮನೆಯಲ್ಲಿ ಆತನಿಗೆ ಹೆಚ್ಚು ಸುಖವಿತ್ತು. ಆದರೂ ಆತನು ಸ್ವೇಚ್ಛಾವಿಹಾರಿಯೂ, ದುರ್ನಡತೆಯವನೂ ಆದ್ದರಿಂದ, ಸೆರೆಮನೆಯಲ್ಲಿ ಅಧಿಕಾರಿಗಳೂ, ಭಾರತೀಯರೂ ಆತನಿಗೆ ಅಪಾರ ಮಮತೆ ತೋರಿಸಿದರೂ, ಸೆರೆಮನೆ ಆತನಿಗೆ ಬಹಳ ಬೇಸರವಾಯಿತು. ಆದ್ದರಿಂದ ಟ್ರಾನ್ಸ್ ವಾಲ್ ಗೂ, ಸತ್ಯಾಗ್ರಹ ಚಳವಳಿಗೂ ಶರಣುಹೊಡೆದು ಕಾಲಿಗೆ ಬುದ್ಧಿಹೇಳಿದನು. ಪ್ರತಿಯೊಂದು ಪಂಗಡದಲ್ಲೂ ಚಳವಳಿಯಲ್ಲೂ ಮೋಸಗಾರರು ಇದ್ದೇ ಇರುತ್ತಾರೆ; ಅದರಂತೆ ನಮ್ಮಲ್ಲೂ ಇದ್ದರು. ಇವರಿಗೆ ರಾಮಸುಂದರನ ವಿಷಯ ಪೂರ್ಣ ತಿಳಿದಿತ್ತು. ಆದರೆ ಆತನಿಂದಲೂ ನಮ್ಮ ಜನರ ಉದ್ಧಾರವಾಗಬಹುದೆಂದು ಆತನು ಪಲಾಯನಸೂಕ್ತ ಹೇಳುವವರೆಗೂ ಆತನ ಚರಿತ್ರೆಯನ್ನು ಯಾರೂ ನನಗೆ ತಿಳಿಸಲಿಲ್ಲ. ಆತನು ಅವಧಿ ಕೆಲಸಗಾರನೆಂದೂ, ಅವಧಿ ಮುಗಿಯುವ ಮುಂಚೆಯೇ ಓಡಿ ಬಂದಿದ್ದನೆಂದೂ ಆಮೇಲೆ ತಿಳಿಯಿತು. ಅವಧಿ ಕೆಲಸಗಾರನಾದ ಮಾತ್ರಕ್ಕೆ ಆತನಿಗೆ ಅಗೌರವವೇನೂ ಇರಲಿಲ್ಲ. ಅವಧಿ ಕೆಲಸಗಾರರು ಸತ್ಯಾಗ್ರಹಕ್ಕೆ ಎಷ್ಟು ಸಹಾಯ ಮಾಡಿದರೆಂದೂ, ಪರಿಣಾಮದಲ್ಲಿ ಜಯ ಲಭಿಸಲು ಎಷ್ಟು ಮಹಾತ್ಯಾಗ ಮಾಡಿದರೆಂದೂ, ಕೊನೆ ಕೊನೆಗೆ ತಿಳಿಯುತ್ತದೆ. ಆದರೆ ಅವಧಿ ಪೂರೈಸದೆ ಓಡಿ ಬಂದುದು ತಪ್ಪು.

ರಾಮಸುಂದರನ ಚರಿತ್ರೆಯಲ್ಲಿ ಒಂದು ತತ್ವ ತೋರಿಸಲು ಇದನ್ನು ಇಷ್ಟು ವಿಶದವಾಗಿ

ತಿಳಿಸಿದ್ದೇನೆ; ಆತನ ತಪ್ಪು ಎತ್ತಿಹಿಡಿಯುವದಕ್ಕಲ್ಲ. ಪ್ರತಿಯೊಂದು ಪವಿತ್ರ ಚಳವಳಿಯ ಮುಖಂಡರೂ ತಮ್ಮ ಚಳವಳಿಗೆ ನಿರ್ಮಲ ಚಾರಿತ್ರ್ಯವುಳ್ಳ ಯೋಧರೇ ಸೇರುವಂತೆ ಗಮನಿಸಬೇಕಾದುದು ಅತಿ ಮುಖ್ಯ. ಎಷ್ಟು ಜಾಗರೂಕರಾಗಿದ್ದರೂ ಒಂದೊಂದು ಬಾರಿ ಅನಪೇಕ್ಷಿತ ಜನರನ್ನು ದೂರವಿರಿಸಲು ಸಾಧ್ಯವಾಗುವುದಿಲ್ಲ. ಆದರೆ ಮುಖಂಡರು ನಿರ್ಭೀತರೂ, ಸತ್ಯಪ್ರಿಯರೂ ಆಗಿದ್ದರೆ, ಅನಪೇಕ್ಷಣಿಯ ಜನರು ಹೋರಾಟದಲ್ಲಿ ತಿಳಿಯದಂತೆ ಸೇರಿದರೂ ಪರಿಣಾಮದಲ್ಲಿ ಆದರಿಂದ ಯಾವ ಬಾಧಕವೂ ಆಗುವುದಿಲ್ಲ. ರಾಮಸುಂದರನ ಗುಟ್ಟು ರಟ್ಟಾದೊಡನೆ ಆತ ಹುಲುಮನುಜನಾದ. ಆತನ ಹೆಸರೇ ಮರೆತುಹೋಯಿತು. ಆದರೆ ಆತನ ನಡತೆಯಿಂದ ನಮ್ಮ ಹೋರಾಟಕ್ಕೆ ಹೊಸ ಶಕ್ತಿ ಬಂತು. ಆತ ಅನುಭವಿಸಿದ ಕಾರಾಗೃಹವಾಸ ನಮ್ಮ ಹೆಮ್ಮೆಯಾಯಿತು. ಆತನ ವಿಚಾರಣೆಯ ಕಾಲದ ಉತ್ಸಾಹ ಜನರಲ್ಲಿ ಬೇರೂರಿತು. ಆತನ ಉದಾಹರಣೆಯಿಂದ ದುರ್ಬಲರು ನಮ್ಮ ಚಳವಳಿಯಿಂದ ದೂರವಾದರು. ನಮ್ಮ ಜನರ ನಿಜವಾದ ಸತ್ವವನ್ನು ವಾಚಕರು ಅರಿಯ ಬೇಕಾದರೆ ನಮ್ಮಲ್ಲಿ ಒಬ್ಬ ರಾಮಸುಂದರನಲ್ಲ. ಅನೇಕ ರಾಮಸುಂದರರಿದ್ದರು; ಆದರೂ ಅವರ ನಡತೆಯಿಂದಲೂ ನಮ್ಮ ಹೋರಾಟಕ್ಕೆ ಬಹಳ ಅನುಕೂಲವಾಯಿತು.

ವಾಚಕರು ಯಾರೂ ರಾಮಸುಂದರನನ್ನು ಹೀಯಾಳಿಸಬೇಕಾದ್ದಿಲ್ಲ. ನಮ್ಮೆಲ್ಲರಲ್ಲಿಯೂ ನ್ಯೂನತೆ ಇದ್ದೇ ಇದೆ; ಆದರೆ ನ್ಯೂನತೆ ಸ್ವಲ್ಪ ಕಡಿಮೆ ಇರುವವರು ನ್ಯೂನತೆ ಹೆಚ್ಚಿರುವವರನ್ನು ಕಂಡರೆ ದೂಷಿಸುವುದು ಸ್ವಭಾವ. ಇದು ನ್ಯಾಯವಲ್ಲ. ರಾಮಸುಂದರನು ಮನಃಪೂರ್ವಕ ಮನೋದೌರ್ಬಲ್ಯ ಹೊಂದಲಿಲ್ಲ. ನಮ್ಮ ಇಂದ್ರಿಯ ದೌರ್ಬಲ್ಯವನ್ನು ನಾವು ಬದಲಾಯಿಸಬಹುದು ಅಥವಾ ಹತೋಟೆಯಲ್ಲಿಡಬಹುದು. ಆದರೆ ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವಾಗುವದಿಲ್ಲ. ದೇವರು ಮಾನವನಿಗೆ ಅಷ್ಟು ಸ್ವಾತಂತ್ರ್ಯ ಕೊಟ್ಟಿಲ್ಲ. ಕರಿ ನಾಯಿಯನ್ನು ಬಿಳಿದುಮಾಡಲು ಸಾಧ್ಯವಾದರೆ, ಮನುಷ್ಯನಿಗೂ ತನ್ನ ಆಧ್ಯಾತ್ಮಿಕ ಪ್ರಕೃತಿ ಅಥವಾ ಪ್ರವೃತ್ತಿಯನ್ನು ಬದಲಾಯಿಸಲು ಸಾಧ್ಯವಾಗಬಹುದು. ರಾಮಸುಂದರ ಓಡಿಹೋದರೂ ತನ್ನ ದೌರ್ಬಲ್ಯಕ್ಕೆ ಪಶ್ಚಾತ್ತಾಪ ಪಟ್ಟಿಲ್ಲವೆಂದು ಯಾರು ತಾನೆ ಹೇಳಲು ಸಾಧ್ಯ? ಅವನು ಓಡಿಹೋದುದೇ ಆತನ ಪಶ್ಚಾತ್ತಾಪಕ್ಕೆ ಬಲವಾದ ನಿದರ್ಶನವಲ್ಲವೆ? ನಾಚಿಕೆ ಇಲ್ಲದಿದ್ದರೆ ಆತನು ಓಡಿ ಹೋಗಬೇಕಾಗಿರಲಿಲ್ಲ. ರಹದಾರಿ ಪಡೆದು, ಕರಾಳಶಾಸನಕ್ಕೆ ತಲೆಬಾಗಿದ್ದರೆ ಸೆರೆಮನೆಯಿಂದ ತಪ್ಪಿಸಿಕೊಳ್ಳಬಹುದಾಗಿತ್ತು. ಅವನಿಗೆ ಇಷ್ಟವಿದ್ದಿದ್ದರೆ, ಏಷಿಯಾಟಿಕ್ ಇಲಾಖೆಯ ಕೈಗೊಂಬೆಯಾಗಿ, ಆತನ ಸ್ನೇಹಿತರಿಗೆ ತಪ್ಪು ದಾರಿತೋರಿ, ಸರಕಾರದ ಮೆಚ್ಚುಗೆ ಪಡೆಯಬಹುದಿತ್ತು. ಆತನು ಈ ರೀತಿ ಏನೂ ಮಾಡದೆ, ತನ್ನ ಮನೋದೌರ್ಬಲ್ಯಕ್ಕೆ ನಾಚಿ, ತನ್ನ ಜನರಿಂದ ಮರೆಯಾಗಿ, ಅವರಿಗೆ ಉಪಕಾರ ಸಹ ಮಾಡಿದನೆಂದು ಆತನಿಗೆ ಔದಾರ್ಯ ತೋರಿ ಏಕೆ ಅಧಿಕ ಬೆಲೆ ಕೊಡಬಾರದು?

೧೯. 'ಇಂಡಿಯನ್ ಓಪಿನಿಯನ್'

ಸತ್ಯಾಗ್ರಹ ಹೋರಾಟದಲ್ಲಿ ನಾವು ಒಳಗೂ ಹೊರಗೂ ಉಪಯೋಗಿಸಿದ ಆಯುಧಗಳ ಪರಿಚಯ ಮಾಡಿಕೊಡಬೇಕೆಂದಿದ್ದೇನೆ. ಆದ್ದರಿಂದ ಈಗಲೂ ದಕ್ಷಿಣ ಆಫ್ರಿಕದಲ್ಲಿ ನಡೆಯುತ್ತಿರುವ 'ಇಂಡಿಯನ್ ಓಪಿನಿಯನ್' ವಾರಪತ್ರಿಕೆಯ ಪರಿಚಯ ಮಾಡಿಕೊಡುತ್ತೇನೆ. ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಮೊದಲ ಮುದ್ರಣಮಂದಿರ ಸ್ಥಾಪಿಸಿದ ಯಶಸ್ಸು, ಮದನಜಿತ್ ವ್ಯವಹಾರಿಕ್ ಎಂಬ ಗುಜರಾತಿ ಸದ್ಗೃಹಸ್ಥನಿಗೆ ಸಲ್ಲುತ್ತದೆ. ಕೆಲವು ವರ್ಷಕಾಲ ಕಷ್ಟನಷ್ಟ ಅನುಭವಿಸಿ ಮುದ್ರಣ ಮಂದಿರ ನಡೆಸಿಕೊಂಡು ಬಂದ ಮೇಲೆ ಒಂದು ವೃತ್ತ ಪತ್ರಿಕೆ ಹೊರಡಿಸಬೇಕೆಂದು ಯೋಚಿಸಿದವರೂ ಅವರೇ. ಅವರು ನನ್ನ ಮತ್ತು ದಿವಂಗತ ಮನ್ಸುಖಲಾಲ್ ನಾಜರ್‌ರ ಸಲಹೆ ಕೇಳಿದರು. ಪತ್ರಿಕೆ ದರ್ಬಾನಿನಿಂದ ಹೊರಟಿತು. ಮನ್ಸುಖಲಾಲ್ ನಾಜರ್ ವೇತನವಿಲ್ಲದೆ ಸಂಪಾದಕರಾಗಲು ಒಪ್ಪಿದರು. ಮೊದಲಿನಿಂದಲೂ ನಷ್ಟ ಮಾಡಿಕೊಂಡೇ ಪತ್ರಿಕೆ ನಡೆಸಿದರು. ಕೊನೆಗೆ ಒಂದು ದೊಡ್ಡ ವ್ಯವಸಾಯ ಕ್ಷೇತ್ರವನ್ನು ಕೊಂಡು, ಎಲ್ಲ ಕೆಲಸಗಾರರೂ ಅಲ್ಲಿಯೇ ವಾಸಮಾಡಿ ಅಲ್ಲಿ ನಮ್ಮದೇ ಒಂದು ಆಶ್ರಮ ಸ್ಥಾಪಿಸಿ, ಅಲ್ಲಿಂದ ಪತ್ರಿಕೆ ನಡೆಸಬೇಕೆಂದು ತೀರ್ಮಾನಿಸಿದೆವು. ನಾವು ಆರಿಸಿದ ಕ್ಷೇತ್ರ ದರ್ಬಾನಿನಿಂದ ಹದಿಮೂರು ಮೈಲು ದೂರವಿದ್ದ ಒಂದು ಸೊಗಸಾದ ಗುಡ್ಡದ ಮೇಲೆ ಇತ್ತು. ಅದಕ್ಕೆ ಹತ್ತಿರದ ರೇಲ್ವೆಸ್ಟೇಷನ್ ಅಲ್ಲಿಗೆ ಮೂರು ಮೈಲಿ ದೂರದ ಫೀನಿಕ್ಸ್. ಪತ್ರಿಕೆಗೆ 'ಇಂಡಿಯನ್ ಓಪಿನಿಯನ್' ಎಂದು ಹೆಸರಿಟ್ಟೆವು; ಈಗಲೂ ಅದೇ ಹೆಸರೇ ಇದೆ. ಮೊದಲು ಇಂಗ್ಲಿಷ್, ಗುಜರಾತಿ, ಹಿಂದಿ, ತಮಿಳು ಈ ರೀತಿ ನಾಲ್ಕು ಭಾಷೆಗಳಲ್ಲೂ ಹೊರಡಿಸುತ್ತಲಿದ್ದೆವು. ಆದರೆ ಹಿಂದಿ ತಮಿಳು ಭಾಗ ಕೊನೆಗೆ ನಿಲ್ಲಿಸಬೇಕಾಯಿತು. ಅವುಗಳ ಹೊರೆ ಸಹಿಸಲು ಅಸಾಧ್ಯವಾಯಿತು. ತಮಿಳಿನಲ್ಲಿ ಹಿಂದಿಯಲ್ಲಿ ಲೇಖನ ಬರೆಯುವವರು ನಮ್ಮ ಆಶ್ರಮಕ್ಕೆ ಬಂದು ವಾಸಮಾಡಲು ಇಷ್ಟಪಡಲಿಲ್ಲ ಅವರ ಮೇಲೆ ನಾವು ಯಾವ ನಿರ್ಬಂಧ ಇಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಆದ್ದರಿಂದ ಸತ್ಯಾಗ್ರಹ ಪ್ರಾರಂಭದಲ್ಲಿ ಇಂಗ್ಲಿಷ್, ಗುಜರಾತಿಗಳಲ್ಲಿ ಮಾತ್ರ ಪತ್ರಿಕೆ ಹೊರಡುತ್ತಿತ್ತು. ನಮ್ಮ ಆಶ್ರಮದಲ್ಲಿ ಗುಜರಾತಿಗಳು, ಹಿಂದುಸ್ತಾನಿಗಳು, ತಮಿಳರು, ಇಂಗ್ಲಿಷ್ ಜನರು ವಾಸಮಾಡಲು ಬಂದರು. ಮನ್ಸುಖಲಾಲ್ ನಾಜರ್ ಅಲ್ಪಾಯುಸ್ಸಿನಲ್ಲಿಯೇ ತೀರಿಕೊಂಡನಂತರ ಹರ್ಬರ್ಟ್ ಕಿಚಿನ್ ಎಂಬ ಇಂಗ್ಲಿಷ್ ಸ್ನೇಹಿತರು ಪತ್ರಿಕೆಯ ಸಂಪಾದಕತ್ವ ವಹಿಸಿಕೊಂಡರು. ಆಮೇಲೆ ಎಚ್.ಎಸ್. ಎಲ್.ಪೋಲಕ್ ಸಂಪಾದಕರಾದರು. ನಾವು ಸೆರೆಮನೆಯಲ್ಲಿದ್ದಾಗ ದಿವಂಗತ ರೆವರೆಂಡ್ ಜೋಸೆಫ್ ಡೋಕ್ ಸಂಪಾದಕತ್ವ ವಹಿಸಿದರು. ಈ ಪತ್ರಿಕೆಯ ಮೂಲಕ ಒಂದು ವಾರದ ಸುದ್ದಿಗಳನ್ನೆಲ್ಲ ನಮ್ಮ ಜನರಲ್ಲಿ ಹರಡಬಹುದಾಗಿತ್ತು. ಗುಜರಾತಿ ತಿಳಿಯದ ಜನರಿಗೆ ಇಂಗ್ಲಿಷ್ ಮುದ್ರಣದಿಂದ ಸತ್ಯಾಗ್ರಹದ ವಿಷಯಗಳನ್ನೆಲ್ಲ ತಿಳಿಸುತ್ತಲಿದ್ದೆವು; ಅಲ್ಲದೆ ಹಿಂದೂಸ್ಥಾನ, ಇಂಗ್ಲೆಂಡ್, ದಕ್ಷಿಣ ಆಫ್ರಿಕದ ಇಂಗ್ಲಿಷ್ ಜನರಿಗೆ 'ಇಂಡಿಯನ್ ಓಪಿನಿಯನ್' ಒಂದು ವಾರದ ವೃತ್ತಪತ್ರಿಕೆಯಾಯಿತು.

ಅಂತಶ್ಶಕ್ತಿಯನ್ನೇ ಅವಲಂಬಿಸಿ ನಡೆಸಬೇಕಾದ ಯಾವ ಹೋರಾಟವನ್ನೂ, ಒಂದು ವೃತ್ತಪತ್ರಿಕೆ ಇಲ್ಲದೆ ಪೂರ್ಣ ಯಶಸ್ವಿಯಾಗಿ ನಡೆಸಲು ಸಾಧ್ಯವಿಲ್ಲ. ಸ್ಥಳೀಯ ಭಾರತೀಯರಿಗೆ ಸರಿಯಾದ ತಿಳಿವಳಿಕೆ ಕೊಡುವುದಕ್ಕೂ, ಪ್ರಪಂಚದ ಇತರ ಭಾಗಗಳಲ್ಲಿನ ಭಾರತೀಯರಿಗೆ ದಕ್ಷಿಣ ಆಫ್ರಿಕದಲ್ಲಿ ಏನು ನಡೆಯುತ್ತಿದೆ ಎಂದು ತಿಳಿಸುವುದಕ್ಕೂ 'ಇಂಡಿಯನ್ ಓಪಿನಿಯನ್'ನಲ್ಲಿ ಸಾಧ್ಯವಾದಷ್ಟು ಸುಲಭವಾಗಿ ತೃಪ್ತಿಕರವಾಗಿ ಬೇರಾವ ರೀತಿಯಲ್ಲೂ ಸಾಧ್ಯವಾಗುತ್ತಿರಲಿಲ್ಲವೆಂದು ನನ್ನ ಅನುಭವಕ್ಕೆ ಬಂತು. ಆದ್ದರಿಂದ ನಮ್ಮ ಹೋರಾಟದಲ್ಲಿ ಅದು ಬಹಳ ಪರಿಣಾಮಕಾರಿಯಾದ ಪ್ರಬಲ ಅಸ್ತ್ರವಾಯಿತು.

ಹೋರಾಟ ನಡೆಯುವಾಗ, ಹೋರಾಟದ ಪರಿಣಾಮವಾಗಿ ಭಾರತೀಯರ ಮನೋಭಾವ ವ್ಯತ್ಯಾಸಗೊಂಡಂತೆ 'ಇಂಡಿಯನ್ ಓಪಿನಿಯನ್' ರೂಪವೂ ವ್ಯತ್ಯಾಸ ಹೊಂದಿತು. ಮೊದಮೊದಲು ಜಾಹೀರಾತು ಅಂಗೀಕರಿಸುತ್ತಿದ್ದೆವು, ಸಣ್ಣಪುಟ್ಟ ಚಿಲ್ಲರೆ ಅಚ್ಚಿನ ಕೆಲಸ ತೆಗೆದುಕೊಳ್ಳುತ್ತಿದ್ದೆವು. ಕೆಲವರು ನುರಿತ ಕೆಲಸಗಾರರನ್ನು ಇದಕ್ಕೆ ಬಿಡಬೇಕಾಗಿತ್ತು. ಜಾಹೀರಾತುಗಳಲ್ಲಿ ಯಾವುದನ್ನು ಸ್ವೀಕರಿಸುವದು, ಯಾವುದನ್ನು ತಿರಸ್ಕರಿಸುವುದು ಎಂಬ ಕಷ್ಟ ಸದಾ ಇರುತ್ತಿತ್ತು. ಒಂದು ಜಾಹೀರಾತನ್ನು ಅಯೋಗ್ಯವೆಂದು ತಿರಸ್ಕರಿಸುವ ಮನಸ್ಸಿದ್ದರೂ, ಜಾಹೀರಾತು ಕೊಡುವವನು ಧನಾಢ್ಯ, ಮುಖ್ಯಸ್ಥ ಆಗಿದ್ದರೆ ಆತನಿಗೆ ಅಸಮಾಧಾನ ಮಾಡಲಾಗದೆಂದು ಅದನ್ನು ಒಪ್ಪುವ ಸಂದರ್ಭ ಬರುತ್ತಿದ್ದವು. ಉತ್ತಮ ಕೆಲಸಗಾರರು ಕೆಲವರು ಹೊಸ ಜಾಹೀರಾತು ಸಂಪಾದನೆಗೂ, ಬಾಕಿ ವಸೂಲಿಗೂ ತಿರುಗಬೇಕಾಗುತ್ತಿದ್ದಿತಲ್ಲದೆ ಕೆಲವು ವೇಳೆ ಭಟ್ಟಂಗಿಗಳೂ ಆಗಬೇಕಾಗಿತ್ತು. ಅಲ್ಲದೆ ಲಾಭಸಂಪಾದನೆ ದೃಷ್ಟಿ ಬಿಟ್ಟು, ಸೇವಾದೃಷ್ಟಿಯಿಂದ ಪತ್ರಿಕೆ ನಡೆಸುತ್ತ ಬಂದರೆ ನಮ್ಮ ಜನರ ಮೇಲೆ ಬಲವಂತ ಮಾಘಸ್ನಾನವೇನೂ ಆಗುವುದಿಲ್ಲವೆಂದೂ, ಇಷ್ಟವಿದ್ದವರು ಅದರ ಉಪಯೋಗ ಪಡೆಯಬಹುದೆಂದೂ ನನಗೆ ತೋರಿ, ಹಾಗೆ ಮಾಡುವದು ಉತ್ತಮವೆನಿಸಿತು. ಪತ್ರಿಕೆಯನ್ನು ಸ್ವಾವಲಂಬಿಯಾಗಿ ಮಾಡುವ ಪ್ರಯತ್ನದಲ್ಲಿ ಹೆಚ್ಚು ಜನ ಚಂದಾದಾರರಾಗುವದೆ ಆ ಆದರಕ್ಕೆ ಸಾಕ್ಷಿ ಎಂದೂ ತೋರಿತು. ನಾಲ್ಕಾರು ಜನ ವರ್ತಕರನ್ನು ಒತ್ತಾಯ ಮಾಡಿ ಅವರ ಜಾಹೀರಾತು ಪಡೆದು ಅದರ ಸಹಾಯದಿಂದ ಪತ್ರಿಕೆ ನಡೆಸುವದಕ್ಕಿಂತ ಈ ಪತ್ರಿಕೆ ನಡೆಸುವ ಕರ್ತವ್ಯ ನಮ್ಮ ಇಡೀ ಜನಾಂಗಕ್ಕೆ ಸೇರಿದ್ದು; ನಮ್ಮ ಜನರಲ್ಲಿ ಸಾರ್ವತ್ರಿಕ ಸಹಾಯ ಮಾಡಬೇಕೆಂದು ಜನರನ್ನು ಪ್ರಾರ್ಥಿಸುವುದೇ ಎಲ್ಲ ವಿಧದಲ್ಲಿಯೂ ಸರ್ವೋತ್ಕೃಷ್ಟವೆಂದೂ ಹೊಳೆಯಿತು. ಈ ಎಲ್ಲ ಕಾರಣಗಳಿಂದ ನಮ್ಮ ಪತ್ರಿಕೆಯಲ್ಲಿ ಜಾಹೀರಾತು ತೆಗೆದುಕೊಳ್ಳಲಾಗದೆಂದು ತೀರ್ಮಾನಿಸಿದೆವು. ಇದರಿಂದ ಪ್ರಕಟನೆಯ ಕೆಲಸದಲ್ಲಿ ತೊಡಗಿದ್ದ ಅನೇಕ ಕೆಲಸಗಾರರು ಪತ್ರಿಕೆಯನ್ನು ಉತ್ತಮಗೊಳಿಸುವ ಪ್ರಯತ್ನದಲ್ಲಿ ನೆರವಾದರು. 'ಇಂಡಿಯನ್ ಓಪಿನಿಯನ್' ಪತ್ರಿಕೆ ತಮ್ಮೆಲ್ಲರದು; ಅದನ್ನು ಯಶಸ್ವಿಯಾಗಿ ನಡೆಸಲು ತಾವೆಲ್ಲರೂ ಹೊಣೆಗಾರರು ಎಂಬ ಭಾವನೆ ಭಾರತೀಯರಲ್ಲಿ ಮೂಡಿತು. ಈ ವಿಷಯದಲ್ಲಿ ಕೆಲಸಗಾರರಿಗೆ ಇದ್ದ ದಿಗಿಲು ಮಾಯವಾಯಿತು. ನಮ್ಮ ಜನಾಂಗ ಅಪೇಕ್ಷಿಸುವವರೆಗೂ ತಮ್ಮ ಶಕ್ತಿ ಮೀರಿ ಕಷ್ಟಪಟ್ಟು ಪತ್ರಿಕೆ ಉತ್ತಮಗೊಳಿಸಬೇಕೆಂಬುದೇ ಅವರ ಕೆಲಸವಾಯಿತು. ನಮ್ಮ ಪತ್ರಿಕೆಗೆ

ಚಂದಾದಾರರಾಗಬೇಕೆಂದು ಯಾವ ಭಾರತೀಯನನ್ನಾದರೂ ಕೇಳಲು ಈಗ ಹಿಂಜರಿಯುತ್ತಿರಲಿಲ್ಲ; ಹಾಗೆ ಕೇಳುವುದು ತಮ್ಮ ಕರ್ತವ್ಯ ಎಂದು ಸಹ ಭಾವಿಸಿದರು. ಪತ್ರಿಕೆಯ ಅಂತಸ್ಸತ್ವದಲ್ಲಿ, ನೀತಿಯಲ್ಲಿ ಬದಲಾವಣೆಗಳಾದವು ಗಮನಕೊಡಬೇಕಾದ ಒಂದು ಪ್ರಬಲ ಶಕ್ತಿಯಾಯಿತು. ಅದು. ಮೊದಲು ೧,೨೦೦-೧,೫೦೦ ಇದ್ದ ಚಂದಾದಾರರ ಸಂಖ್ಯೆ ದಿನೇದಿನೇ ಬೆಳೆಯುತ್ತ ಬಂತು. ಚಂದಾಹಣ ಸ್ವಲ್ಪ ಹೆಚ್ಚಿಸಬೇಕಾಯಿತು. ಆದರೂ ಸತ್ಯಾಗ್ರಹ ವೇಗದಿಂದ ನಡೆಯುತ್ತಿದ್ದಾಗ ಚಂದಾದಾರರ ಸಂಖ್ಯೆ ಕೇವಲ ೨,೫೦೦ ಇತ್ತು. 'ಇಂಡಿಯನ್ ಓಪಿನಿಯನ್' ಓದಬಲ್ಲ ಭಾರತೀಯರ ಸಂಖ್ಯೆ ದಕ್ಷಿಣ ಆಫ್ರಿಕದಲ್ಲಿ ೨೦,೦೦೦ ಕ್ಕಿಂತ ಸ್ವಲ್ಪ ಹೆಚ್ಚು ಇರಬಹುದು; ಆದ್ದರಿಂದ ೩,೦೦೦ ಪತ್ರಿಕೆಗಳ ಮಾರಾಟವೆಂದರೆ ಬಹಳ ತೃಪ್ತಿಕರ. ಪತ್ರಿಕೆ ಜನರಿಗೆ ಎಷ್ಟು ಆದರಣೀಯವಾಗಿತ್ತೆಂದರೆ, ಜೋಹಾನ್ಸ್ ಬರ್ಗ್ ಗೆ ಹೋಗಲು ಒಂದು ದಿನ ತಡವಾದರೆ ಒಡನೆ ದೂರು ಬರುತ್ತಿತ್ತು. ಸಾಮಾನ್ಯವಾಗಿ ಭಾನುವಾರ ಬೆಳಗ್ಗೆ ಪತ್ರಿಕೆ ಜೋಹಾನ್ಸ್ ಬರ್ಗ್ ಸೇರುತ್ತಿತ್ತು. ಪತ್ರಿಕೆ ಕೈಸೇರಿದ ಒಡನೆ ಉಳಿದೆಲ್ಲ ಕೆಲಸವನ್ನುಬಿಟ್ಟು ಆದ್ಯಂತ ಪತ್ರಿಕೆ ಓದುವುದೇ ಅನೇಕರಿಗೆ ಮುಖ್ಯ ಕೆಲಸವಾಗಿತ್ತು. ಯಾರಾದರೂ ಒಬ್ಬರು ಓದುವುದು, ಉಳಿದವರು ಸುತ್ತಲೂ ಕುಳಿತು ಕೇಳುವುದು. ಪತ್ರಿಕೆ ಓದಬೇಕೆಂದಿರುವವರೆಲ್ಲರಿಗೂ ಪತ್ರಿಕೆ ಕೊಳ್ಳುವ ಶಕ್ತಿ ಇರಲಿಲ್ಲ; ಆದ್ದರಿಂದ ಅವರಲ್ಲಿ ಕೆಲವರು ಈ ರೀತಿ ಒಟ್ಟುಗೂಡುತ್ತಿದ್ದರು.

ಜಾಹೀರಾತು ನಿಲ್ಲಿಸಿದಂತೆಯೇ ಚಿಲ್ಲರೆ ಮುದ್ರಣ ಕೆಲಸಗಳನ್ನೂ ನಿಲ್ಲಿಸಿದೆವು. ಅಚ್ಚುಕೂಟದ ಕೆಲಸಗಾರರಿಗೆ ದೊರೆತ ವಿರಾಮವನ್ನು ಪುಸ್ತಕ ಮುದ್ರಣದಲ್ಲಿ ಉಪಯೋಗಿಸಿದೆವು. ಈ ಕೆಲಸದಲ್ಲಿ ಲಾಭದ ಆಸೆ ಇಲ್ಲದ್ದರಿಂದಲೂ, ನಮ್ಮ ಹೋರಾಟದ ಪ್ರಗತಿಗೆ ಸಹಾಯಕವಾದ ಪುಸ್ತಕಗಳನ್ನೇ ಅಚ್ಚು ಮಾಡುತ್ತಲಿದ್ದುದರಿಂದಲೂ ಪುಸ್ತಕಗಳಿಗೆ ಒಳ್ಳೆ ಗಿರಾಕಿ ದೊರೆಯಿತು. ಈ ರೀತಿ ವೃತ್ತ ಪತ್ರಿಕೆಯೂ, ಮುದ್ರಣಮಂದಿರವೂ ಸತ್ಯಾಗ್ರಹ ಚಳುವಳಿಗೆ ತಮ್ಮ ಸೇವೆ ಸಲ್ಲಿಸಿದವು. ಸತ್ಯಾಗ್ರಹ ಕ್ರಮೇಣ ಜನರಲ್ಲಿ ಬೇರೂರಿದಂತೆ, ವೃತ್ತಪತ್ರಿಕೆಯೂ ಮುದ್ರಣಮಂದಿರದ ನೈತಿಕ ಅಭಿವೃದ್ಧಿಯೂ, ಸತ್ಯಾಗ್ರಹ ದೃಷ್ಟಿಯಿಂದ ಉತ್ತಮಗೊಂಡವು.

೨೦. ದಸ್ತಗಿರಿಗಳ ಸುರಿಮಳೆ

ರಾಮಸುಂದರನ ದಸ್ತಗಿರಿಯಿಂದ ಸರಕಾರ ಯಾವ ಪ್ರಯೋಜನ ಹೊಂದಲೂ ಸಾಧ್ಯವಾಗಲಿಲ್ಲ. ಅದಕ್ಕೆ ಬದಲು ಭಾರತೀಯರ ಉತ್ಸಾಹದಿನದಿನಕ್ಕೂ ಹೆಚ್ಚತೊಡಗಿತು. ಏಷಿಯಾಟಿಕ್ ಇಲಾಖೆಯ ಅಧಿಕಾರಿಗಳು 'ಇಂಡಿಯನ್ ಓಪಿನಿಯನ್' ಪತ್ರಿಕೆಯನ್ನು ಬಹಳ ಜಾಗರೂಕತೆಯಿಂದ ಓದುತಿದ್ದರು. ನಮ್ಮ ಹೋರಾಟದಲ್ಲಿ ಮುಚ್ಚುಮರೆಯಾಗಿ ಏನೂ ಮಾಡುತ್ತಿರಲಿಲ್ಲ. ನಮ್ಮ ಜನರ ಬಲಾಬಲವನ್ನು ತಿಳಿಯಬೇಕೆನ್ನುವವನಿಗೆ ಮಿತ್ರನಾಗಲಿ ಶತ್ರುವಾಗಲಿ, 'ಇಂಡಿಯನ್ ಓಪಿನಿಯನ್' ನೋಡಿದರೆ ಎಲ್ಲ ತಿಳಿಯುತ್ತಿತ್ತು.

ಎಲ್ಲಿ ಯಾರೂ ತಪ್ಪು ದಾರಿ ಹಿಡಿಯಲು ಅವಕಾಶವಿಲ್ಲವೊ ಎಲ್ಲಿ ಮೋಸಕ್ಕೂ ಕುಯುಕ್ತಿಗೂ ಎಡೆಯಿಲ್ಲವೊ, ಎಲ್ಲಿ ಸ್ವಶಕ್ತಿಯೇ ಜಯಾಪಜಯಕ್ಕೆ ಏಕಮಾತ್ರ ಆಧಾರವೊ ಅಂಥ ಚಳುವಳಿಯಲ್ಲಿ ರಹಸ್ಯಕ್ಕೆ ಎಡೆಯಿಲ್ಲವೆಂದು ಎಲ್ಲ ಕೆಲಸಗಾರರಿಗೂ ಮೊದಲೇ ತಿಳಿದಿತ್ತು. ದೌರ್ಬಲ್ಯರೋಗವನ್ನು ತೊಡೆದುಹಾಕಲು, ಅದರ ಕಾರಣ ಕಂಡುಹಿಡಿದು ಬಹಿರಂಗಪಡಿಸಬೇಕಾದ್ದು ನಮ್ಮ ಜನರ ಹಿತದೃಷ್ಟಿಯಿಂದ ಅತ್ಯವಶ್ಯವಿತ್ತು. 'ಇಂಡಿಯನ್ ಓಪಿನಿಯನ್' ನೀತಿ ಇದೆಂದು ಸರಕಾರದ ಅಧಿಕಾರಿಗಳಿಗೆ ಮನವರಿಕೆಯಾಗಿ, ಭಾರತೀಯ ಜನಾಂಗದ ಪ್ರಕೃತ ಇತಿಹಾಸವೆಲ್ಲ ಪತ್ರಿಕೆಯಲ್ಲಿ ಪ್ರತಿಬಿಂಬಿತವಾಗುತ್ತದೆಂದು ಗೊತ್ತಾಯಿತು. ಆದ್ದರಿಂದ ಕೆಲವು ಜನ ಪ್ರಮುಖರನ್ನು ದಸ್ತಗಿರಿ ಮಾಡದ ಹೊರತು, ಚಳವಳಿಯ ರಭಸ ಕಡಿಮೆ ಮಾಡಲು ಸಾಧ್ಯವಿಲ್ಲವೆಂದು ತೋರಿತು. ಆದ್ದರಿಂದ ೧೯೦೭ ರ ಕ್ರಿಸ್‌ಮಸ್ ವಾರದಲ್ಲಿ ನ್ಯಾಯಾಸ್ಥಾನಕ್ಕೆ ಬರಲು ಕೆಲವು ಜನ ಮುಖಂಡರಿಗೆ ನೋಟೀಸ್ ಕೊಟ್ಟರು. ಅಧಿಕಾರಿಗಳ ಈ ಸಭ್ಯತೆ ಎಲ್ಲರೂ ಮೆಚ್ಚಬೇಕಾದ್ದು. ಇಷ್ಟವಿದ್ದರೆ ವಾರಂಟಿನಿಂದ ಮುಖಂಡರೆಲ್ಲರನ್ನೂ ಬಂಧಿಸಬಹುದಾಗಿತ್ತು. ಅದಕ್ಕೆ ಪ್ರತಿಯಾಗಿ ನೋಟೀಸ್ ಕೊಟ್ಟರು. ಇದು ಅವರ ಸದ್ವರ್ತನೆಗೆ ನಿದರ್ಶನ. ಅಲ್ಲದೆ ಮುಖಂಡರು ಬಂಧನಕ್ಕೆ ಒಳಗಾಗಲು ಇಷ್ಟವುಳ್ಳವರು, ಸಿದ್ದರು ಎಂದು ಅವರು ನಂಬಿದುದಕ್ಕೆ ನಿದರ್ಶನವೂ ಆಗಿತ್ತು. ಈ ಮುಖಂಡರು ರಹದಾರಿ ಪಡೆಯದಿದ್ದುದರಿಂದ ಶಾಸನರೀತ್ಯಾ ಅವರನ್ನು ಟ್ರಾನ್ಸ್‌ವಾಲ್ ನಿಂದ ಏಕೆ ಗಡಿಪಾರು ಮಾಡಬಾರದೋ, ಉತ್ತರ ಕೊಡಲು ೧೯೦೭ ಡಿಸೆಂಬರ್ ೨೮ನೆ ತಾರೀಖಿನ ದಿನ ನ್ಯಾಯಮೂರ್ತಿಯ ಎದುರಿಗೆ ಹೋದರು.

ಇವರಲ್ಲಿ ಕ್ವಿನ್ ಎಂಬಾತನೂ ಒಬ್ಬ. ಜೋಹಾನ್ಸ್ ಬರ್ಗ್‌ನಲ್ಲಿದ್ದ ೩೦೦-೪೦೦ ಜನ ಚೀನೀ ವರ್ತಕರಿಗೆ, ವ್ಯವಸಾಯಗಾರರಿಗೆ ಈತ ಮುಖಂಡ. ಭಾರತ ಬೇಸಾಯಗಾರರ ನಾಡು ಎಂದು ಹೆಸರಾಗಿದೆ. ಆದರೂ ಕೃಷಿಕರ್ಮದಲ್ಲಿ ನಾವು ಚೀನೀ ಜನರಷ್ಟು ಮುಂದುವರಿದಿದ್ದೇವೆಂದು ಹೇಳಲಾರೆ. ಅಮೇರಿಕಾ ಮುಂತಾದ ರಾಷ್ಟ್ರಗಳ ವ್ಯವಸಾಯಾಭಿವೃದ್ಧಿಯನ್ನು ಬಣ್ಣಿಸಲು ಅಸಾಧ್ಯವಾದರೂ ಅದು ಇನ್ನೂ ಪ್ರಯೋಗಾವಸ್ಥೆಯಲ್ಲಿಯೇ ಇದೆ ಎಂದು ನನ್ನ ಅಭಿಪ್ರಾಯ. ಚೀನಾ ಭಾರತದಂತೆಯೆ ಪುರಾತನ ದೇಶ. ಭಾರತ-ಚೀನಾಗಳ ಸಾಮ್ಯವೈಷಮ್ಯಗಳನ್ನು ತಿಳಿದುಕೊಳ್ಳುವುದರಿಂದ ಉಪಯೋಗವಿದೆ. ಜೋಹಾನ್ಸ್ ಬರ್ಗ್ ನಲ್ಲಿ ಚೀನೀ ವ್ಯವಸಾಯ ಕ್ರಮ ಅಭ್ಯಾಸಮಾಡಿದೆ; ಅವರೊಂದಿಗೆ ಚರ್ಚೆ ನಡೆಸಿದೆ; ಇದರಿಂದ ಚೀನೀ ಜನ ನಮಗಿಂತ ಬುದ್ಧಿವಂತರು, ಕಷ್ಟ ಸಹಿಷ್ಣುಗಳು ಎಂದು ನನಗೆ ತಿಳಿಯಿತು. ಭೂಮಿ ಫಲವತ್ತಾಗಿಲ್ಲವೆಂದು ನಾವು ಅನೇಕ ಕಡೆ ಬೀಳುಬಿಡುತ್ತೇವೆ. ಆದರೆ ತಮ್ಮ ಭೂಗುಣ ಪರಿಶ್ರಮದಿಂದ ಚೀನೀ ಜನ ಅಂತಹ ಸ್ಥಳಗಳಲ್ಲಿಯೂ ಒಳ್ಳೆ ಫಸಲು ತೆಗೆಯುತ್ತಿದ್ದರು.

ಈ ಕರಾಳ ಶಾಸನವು ಭಾರತೀಯರಿಗೆ ಅನ್ವಯಿಸಿದಂತೆ ಚೀನೀಗಳಿಗೂ ಅನ್ವಯಿಸಿತು; ಆದ್ದರಿಂದ ಅವರೂ ಭಾರತೀಯರೊಂದಿಗೆ ಸತ್ಯಾಗ್ರಹಕ್ಕೆ ಸೇರಿದರು. ಪ್ರಾರಂಭದಿಂದಲೂ ಎರಡೂ ಜನಾಂಗದವರ ಚಟುವಟಿಕೆಗಳನ್ನು ಬೆರೆಸುತ್ತಿರಲಿಲ್ಲ. ಪ್ರತ್ಯೇಕ ಸಂಸ್ಥೆಗಳ ಮೂಲಕ ಕೆಲಸ ಮಾಡುತ್ತಿದ್ದೆವು. ಎಲ್ಲಿಯವರೆಗೆ ಪ್ರತಿ ಜನಾಂಗವೂ ತನ್ನ ತನ್ನ

ಕಾರ್ಯವನ್ನು ಪಾಲಿಸಿಕೊಂಡು ಬರುತ್ತಲಿತ್ತೋ ಅಲ್ಲಿಯವರೆಗೂ ಪರಸ್ಪರ ಶಕ್ತಿ ವೃದ್ಧಿ ಮಾಡಿಕೊಂಡೆವು. ಒಂದು ಸಂಸ್ಥೆ ಹಿಮ್ಮೆಟ್ಟಿದರೆ ಇನ್ನೊಂದು ಸಂಸ್ಥೆಯಾದರೂ ತನ್ನ ನೀತಿಯ ಮಟ್ಟ ಕಾಪಾಡಬಹುದಿತ್ತು; ಅಲ್ಲದೆ ಒಂದರ ನಾಶದಿಂದ ಇನ್ನೊಂದು ಸಂಪೂರ್ಣ ಹಾಳಾಗದಂತೆ ಬುದ್ದಿ ಕಲಿಯಬಹುದಿತ್ತು. ತಮ್ಮ ಮುಂದಾಳು ಮೋಸಗಾರನೆಂದು ಕಂಡ. ಕಾರಣ ಅನೇಕ ಚೀನೀಗಳು ಸತ್ಯಾಗ್ರಹ ಬಿಟ್ಟರು. ಆತನು ಕರಾಳ ಶಾಸನಕ್ಕೇನೂ ತಲೆಬಾಗಲಿಲ್ಲ. ಆದರೆ ತನ್ನ ವಶದಲ್ಲಿದ್ದ ಚೀನೀ ಸಂಸ್ಥೆಯ ಹಣವನ್ನೂ, ಲೆಕ್ಕ ಪುಸ್ತಕಗಳನ್ನೂ ಕೊಡದೆ ಇದ್ದಕ್ಕಿದ್ದಂತೆ ಓಡಿಹೋದನೆಂದು ತಿಳಿಯಿತು. ನಾಯಕ ನಿಲ್ಲದೆ ಹೋರಾಟ ನಡೆಸುವುದು ಹಿಂಬಾಲಿಗರಿಗೆ ಯಾವಾಗಲೂ ಕಷ್ಟ; ಆದರೆ ಮುಖಂಡನೇ ಅವಮಾನಿತನಾದರೆ ಆ ಪೆಟ್ಟು ಸಹಿಸುವದು ಇನ್ನೂ ಕಷ್ಟ. ಆದರೆ ಬಂಧನಗಳು ಪ್ರಾರಂಭವಾದೊಡನೆ ಚೀನೀಗಳೂ ಉತ್ಸಾಹಭರಿತರಾದರು. ಅವರಲ್ಲೂ ಅನೇಕರು ರಹದಾರಿ ಪಡೆದಿರಲಿಲ್ಲ. ಅವರ ಮುಖಂಡನಾದ ಕ್ವಿನ್ ಗೂ ನೋಟೀಸ್ ಬಂದಿತ್ತು. ಕೆಲವು ಕಾಲ ಕ್ವಿನ್ ಬಹಳ ಉತ್ತಮ ಕೆಲಸಮಾಡಿದ.

ಸೆರೆಮನೆಗೆ ಹೋದ ಮೊದಲ ಗುಂಪಿನ ಮುಖ್ಯ ಸೆರೆಯಾಳುಗಳಲ್ಲಿ ತಂಬಿ ನಾಯುಡುವಿನ ಪರಿಚಯ ಮಾಡಿಕೊಡಬಯಸುತ್ತೇನೆ. ಆತನ ತಂದೆ ತಾಯಿ ತಮಿಳರು. ಮದ್ರಾಸ್ ಪ್ರಾಂತದಿಂದ ಮಾರಿಷಸ್ ಗೆ ಹೋಗಿ ನೆಲೆಸಿದ್ದರು. ತಂಬಿ ನಯುಡು ಮಾರಿಷಸ್ ನಲ್ಲಿ ಹುಟ್ಟಿದವನು. ಆತ ಒಬ್ಬ ಸಾಮಾನ್ಯ ವರ್ತಕ. ಯಾವ ಪಾಠಶಾಲೆಯಲ್ಲೂ ಓದಿ ತೇರ್ಗಡೆಯಾದವನಲ್ಲ. ಅಗಾಧ ಪ್ರಪಂಚದ ಅನುಭವವೇ ಆತನ ಪಾಠಶಾಲೆ. ಒಳ್ಳೆ ವ್ಯವಹಾರಜ್ಞಾನಿ. ವ್ಯಾಕರಣಶುದ್ಧ ಭಾಷೆ ತಿಳಿಯದಿದ್ದರೂ ಚೆನ್ನಾಗಿ ಇಂಗ್ಲಿಷ್ ಓದಿ ಬರೆಯಬಲ್ಲವ. ಅದೇ ರೀತಿ ತಮಿಳು ಪರಿಶ್ರಮವಿತ್ತು. ಹಿಂದೂಸ್ಥಾನಿಯನ್ನೂ ತಕ್ಕಮಟ್ಟಿಗೆ ಮಾತನಾಡಲೂ, ಆಡಿದ್ದನ್ನು ಅರಿತುಕೊಳ್ಳಲೂ ಬಲ್ಲವನು. ಸ್ವಲ್ಪ ತೆಲುಗೂ ಬರುತ್ತಿತ್ತು. ಆದರೆ ಈ ಯಾವ ಭಾಷೆಯ ಓನಾಮವೂ ಆತನಿಗೆ ತಿಳಿದಿರಲಿಲ್ಲ. ಇದಲ್ಲದೆ ಮಾರಿಷಸ್ ನಲ್ಲಿ ಬಳಕೆಯಲ್ಲಿದ್ದ ವಿಕೃತ ಫ್ರೆಂಚ್ ಭಾಷೆ 'ಕ್ರೀಲೆ'ಯ ಪರಿಚಯ ಚೆನ್ನಾಗಿತ್ತು; ನೀಗ್ರೋ ಭಾಷೆಯಂತೂ ಸರಿಯೇ ಸರಿ. ದಕ್ಷಿಣ ಆಫ್ರಿಕದಲ್ಲಿದ್ದವರಿಗೆ ಇಷ್ಟು ಭಾಷೆಗಳ ಪರಿಚಯ ಆಶ್ಚರ್ಯವಲ್ಲ. ಭಾರತೀಯರಲ್ಲಿ ನೂರಾರು ಜನಕ್ಕೆ ಈ ರೀತಿ ಅನೇಕ ಭಾಷೆಗಳ ಪರಿಚಯವಾಗುತ್ತದೆ. ಪರಭಾಷೆಯ ಮೂಲಕ ವಿದ್ಯಾಭ್ಯಾಸ ಮಾಡಿ ಬುದ್ದಿಶಕ್ತಿ ಮಂದವಾಗದೆ ಅವರ ಜ್ಞಾಪಕಶಕ್ತಿ ಚುರುಕಾಗಿರುವುದೇ ಅದಕ್ಕೆ ಮುಖ್ಯ ಕಾರಣ. ಬೇರೆ ಬೇರೆ ಭಾಷೆ ಬಲ್ಲವರೊಡನೆ ಮಾತನಾಡಿ, ವ್ಯವಹರಿಸಿ ತಿಳಿಯುವ ಅಭ್ಯಾಸದಿಂದ ಕಲಿತು ಕೊಳ್ಳುತ್ತಾರೆ. ಇದರಿಂದ ಅವರ ಮೆದುಳಿಗೆ ಎಳ್ಳಷ್ಟೂ ಆಯಾಸ ಆಗುವುದಿಲ್ಲ; ಪ್ರತಿಯಾಗಿ ಮಾನಸಿಕ ಸಾಧನೆಯಾಗಿ ಪರಿಣಮಿಸಿ, ಬುದ್ಧಿಶಕ್ತಿ ಇನ್ನೂ ಮೊನಚಾಗುತ್ತದೆ. ತುಂಬಿ ನಾಯುಡು ಮಾತೂ ಹೀಗೇ. ಆತನ ಬುದ್ಧಿಶಕ್ತಿ ಬಹಳ ಚುರುಕು; ಹೊಸ ವಿಷಯಗಳನ್ನು ಬಹು ಸುಲಭವಾಗಿ ಗ್ರಹಿಸುತ್ತಿದ್ದ. ಸಂಭಾಷಣೆಯಲ್ಲಿ ಅಮೋಘ ಹಾಸ್ಯ ತುಳುಕುತ್ತಿತ್ತು. ಆತ ಭಾರತವನ್ನು ನೋಡಿಯೇ ಇರಲಿಲ್ಲವಾದರೂ ತಾಯ್ನಾಡಿನ ಮೇಲೆ ಆತನಿಗೆ ಅಗಾಧ ಪ್ರೇಮ. ಸ್ವದೇಶಾಭಿಮಾನ

ಆತನಿಗೆ ರಕ್ತಗತವಾಗಿತ್ತು. ಆತನ ಸ್ಥೈರ್ಯ ಆ ಮುಖ ಮುದ್ರೆಯಲ್ಲಿ ಎದ್ದು ಕಾಣುತ್ತಿತ್ತು. ಆಜಾನುಬಾಹು; ದಣಿವೆಂಬುದರ ಅರಿವೇ ಇರಲಿಲ್ಲ. ಸಭೆಗಳ ಅಧ್ಯಕ್ಷತೆ ವಹಿಸಲಿ, ಸಭೆ ಸಡೆಸಬೇಕಾಗಲಿ, ಸಾಮಾನು ಹೊರುವುದಿರಲಿ ಎಲ್ಲದರಲ್ಲೂ ಆತನೇ ಮೊಡಲಿಗ. ರಾಜಮಾರ್ಗದಲ್ಲಿ ಸಹ ಕೂಲಿಯಂತೆ ಸಾಮಾನು ಹೊರಲು ಹಿಂಜರಿಯುತ್ತಿರಲಿಲ್ಲ. ಕೆಲಸಮಾಡುತ್ತ ನಿಂತರೆ ಹಗಲು ರಾತ್ರಿ ಎರಡೂ ಆತನಿಗೆ ಒಂದೇ. ತನ್ನ ಜನರಿಗಾಗಿ ತನ್ನ ಸರ್ವಸ್ವವನ್ನೂ ತ್ಯಾಗಮಾಡಲು ಆತನಂತೆ ಸಿದ್ಧರಿದ್ದವರು ಅಪೂರ್ವ. ತಂಬಿ ನಾಯುಡುಗೆ ದುಡುಕು, ಸಿಡುಕು ಮಾತ್ರ ಇರದಿದ್ದರೆ, ಕಾಛಲಿಯಾನ ಸ್ಥಾನದಲ್ಲಿ ತಂಬಿ ನಾಯುಡು ಸುಲಭವಾಗಿ ಟ್ರಾನ್ಸ್ ವಾಲ್ ನಾಯಕನಾಗುತ್ತಿದ್ದ. ಟ್ರಾನ್ಸ್ ವಾಲ್ ಹೋರಾಟ ನಡೆಯುತ್ತಿದ್ದಾಗ ಆತನ ಮುಂಗೋಪದಿಂದ ಇನ್ನೂ ಯಾವ ದುಷ್ಪರಿಣಾಮವೂ ಆಗಿರಲಿಲ್ಲ; ಆತನ ಅಮೂಲ್ಯ ಗುಣಗಳು ರತ್ನಪ್ರಾಯವಾಗಿ ಶೋಭಿಸಿದವು. ಆದರೆ ಕೊನೆಯಲ್ಲಿ ಆತನ ದುಡುಕು ಸ್ವಭಾವವೂ ಕೋಪವೂ ಆತನಿಗೆ ಪರಮ ವೈರಿಗಳಾಗಿ ಆತನ ಸದ್ಗುಣಗಳನ್ನು ನುಂಗಿದವೆಂದು ತಿಳಿಯಿತು. ಅದೇನೆ ಇರಲಿ, ದಕ್ಷಿಣ ಆಫ್ರಿಕದ ಸತ್ಯಾಗ್ರಹ ಚರಿತ್ರೆಯಲ್ಲಿ ತಂಬಿ ನಾಯುಡುವಿನ ಹೆಸರು ಎಂದಿಗೂ ಮಾಸದೆ ಚಿರಸ್ಥಾಯಿಯಾಗಿ ನಿಲ್ಲುತ್ತದೆ.

ನ್ಯಾಯಾದೀಶರು ಪ್ರತಿಯೊಂದು ಮೊಕದ್ದಮೆಯನ್ನೂ ಪ್ರತ್ಯೇಕವಾಗಿ ವಿಚಾರಿಸಿ ಕೆಲವರಿಗೆ ೪೮ ಗಂಟೆಗಳಲ್ಲಿ, ಕೆಲವರಿಗೆ ಒಂದು ವಾರದಲ್ಲಿ, ಇನ್ನು ಕೆಲವರಿಗೆ ಹದಿನೈದು ದಿನಗಳಲ್ಲಿ ಟ್ರಾನ್ಸ್ ವಾಲ್ ಬಿಟ್ಟು ಹೊರಡಬೇಕೆಂದು ಎಲ್ಲರಿಗೂ ಅಜ್ಞೆ ಮಾಡಿದರು.

೧೯೦೮ ಜನವರಿ ೧೦ ನೇ ದಿನ ಈ ಅವಧಿ ಮುಗಿಯಿತು. ಅದೇ ದಿನವೇ ತೀರ್ಪಿಗಾಗಿ ನಾವೆಲ್ಲ ನ್ಯಾಯಾಸ್ಥಾನದ ಮುಂದೆ ನಿಂತೆವು.

ನಮ್ಮಲ್ಲಿ ಯಾರೂ ಏನೂ ವಾದಿಸಲಿಲ್ಲ. ರಿಜಿಸ್ಟ್ರೇಷನ್ ರಹದಾರಿ ಪಡೆದವರೆಂದು ಸರಿಯಾದ ಸಾಕ್ಷ್ಯಪೂರ್ವಕ ಸಮಾಧಾನ ಕೊಡದ ಕಾರಣ ನಿಯಮಿತ ಕಾಲದಲ್ಲಿ ಟ್ರಾನ್ಸ್ ವಾಲ್ ಬಿಟ್ಟು ಹೋಗಬೇಕೆಂಬ ಅಪ್ಪಣೆ ಮೀರಿದೆವೆಂಬ ಆಪಾದನೆಗೆ ನಾವೆಲ್ಲರೂ ಹೌದು ಎನ್ನಲು ತೀರ್ಮಾನಿಸಿದೆವು.

ನಾನು ಒಂದು ಸಣ್ಣ ಹೇಳಿಕೆ ಕೊಡಲು ಅವಕಾಶ ಕೇಳಿದೆ. ನನ್ನ ಮೊಕದ್ದಮೆಗೂ, ಇತರ ಮೊಕದ್ದಮೆಗಳಿಗೂ ಕೊಂಚ ವ್ಯತ್ಯಾಸಮಾಡಬೇಕೆಂದು ಹೇಳಿದೆ. ಪ್ರೆಟೋರಿಯಾದಲ್ಲಿ ನಮ್ಮ ಸಹೋದ್ಯೋಗಿಗಳಿಗೆ ಮೂರು ತಿಂಗಳ ಕಠಿಣ ಶಿಕ್ಷೆ, ಭಾರಿ ದಂಡ ವಿಧಿಸಲಾಗಿತ್ತೆಂದೂ ದಂಡ ಕೊಡಲು ತಪ್ಪಿದರೆ ಪುನಃ ಮೂರು ತಿಂಗಳ ಕಠಿಣಶಿಕ್ಷೆಯೆಂದು ಆಜ್ಞೆಯಾಗಿತ್ತೆಂದೂ ನನಗೆ ಆಗ ತಾನೆ ವರ್ತಮಾನ ಬಂದಿತ್ತು. ಇವರೆಲ್ಲರೂ ತಪ್ಪುಗಾರರಾದರೆ ನಾನು ಅವರೆಲ್ಲರಿಗಿಂತ ದೊಡ್ಡ ತಪ್ಪಿತಸ್ಥ. ನನಗೆ ಎಲ್ಲರಿಗಿಂತ ಹೆಚ್ಚಿನ ಶಿಕ್ಷೆ ವಿಧಿಸಬೇಕೆಂದು ನ್ಯಾಯಾಧೀಶರನ್ನು ಕೇಳಿದೆ. ನ್ಯಾಯಾಧೀಶರು ನನ್ನ ಬೇಡಿಕೆಯನ್ನು ನಿರಾಕರಿಸಿದರು. ನನಗೆ ಎರಡು ತಿಂಗಳ ಸಾದಾ ಶಿಕ್ಷೆಯಾಯಿತು. ನಾನು ಯಾವ ನ್ಯಾಯಾಸ್ಥಾನದಲ್ಲಿ ನ್ಯಾಯವಾದಿಯಾಗಿ ಮೊಕದ್ದಮೆ ನಡೆಸುತ್ತ

ಇದ್ದೆನೋ ಅದೇ ಕೋರ್ಟಿನಲ್ಲಿ ಅಫರಾಧಿಯಾಗಿ ನಿಲ್ಲಲು ನನ್ನ ಮನಸ್ಸಿಗೆ ಸ್ವಲ್ಪ ಸಂಕೋಚವಾಯಿತು. ಆದರೆ ನ್ಯಾಯವಾದಿಯಾಗಿರುವದಕ್ಕಿಂತ ಅಪರಾಧಿಯಾಗಿರುವುದೇ ಗೌರವವೆಂದು ಭಾವಿಸಿ ಆ ಸ್ಥಾನದಲ್ಲಿ ನಿಲ್ಲಲು ಸ್ವಲ್ಪವೂ ಹಿಂದು ಮುಂದೆ ನೋಡಲಿಲ್ಲ.

ನ್ಯಾಯಾಸ್ಥಾನದಲ್ಲಿ ನೂರಾರು ಜನ ಭಾರತೀಯರೂ, ನನ್ನ ಸಹೋದ್ಯೋಗಿಗಳಾದ ನ್ಯಾಯವಾದಿಗಳೂ ಇದ್ದರು. ತೀರ್ಪು ಹೇಳಿದೊಡನೆ ನನ್ನನ್ನು ಸೆರೆಯಲ್ಲಿಟ್ಟರು. ನಾನು ಏಕಾಕಿಯಾದೆ. ಕೈದಿಗಳಿಗಾಗಿ ಹಾಕಿದ್ದ ಒಂದು ಬೆಂಚಿನ ಮೇಲೆ ನನ್ನನ್ನು ಕುಳಿತುಕೊಳ್ಳ ಹೇಳಿ ಪೋಲೀಸ್ ಸಿಪಾಯಿ ಬಾಗಿಲು ಹಾಕಿಕೊಂಡು ಹೊರಟುಹೋದ. ಮನಸ್ಸು ಉದ್ವೇಗಗೊಂಡು ಸ್ವಲ್ಪ ಚಿಂತಾ ಮಗ್ನನಾದೆ. ನನ್ನ ಮನೆ, ನಾನು ವಾದ ಮಾಡುತ್ತಿದ್ದ ನ್ಯಾಯಾಸ್ಥಾನ, ಸಾರ್ವಜನಿಕ ಸಭೆ ಎಲ್ಲ ಕನಸಿನಂತೆ ಕಣ್ಮರೆಯಾಗಿ ನಾನು ಏಕಾಕಿಯಾದೆ. ಎರಡು ತಿಂಗಳಲ್ಲಿ ಏನೇನು ಆಗುವುದೊ? ನಾನು ಎರಡು ತಿಂಗಳ ಶಿಕ್ಷೆ ಪೂರ್ಣ ಅನುಭವಿಸಬೇಕಾದೀತೆ? ಪ್ರತಿಜ್ಞೆ ಮಾಡಿದಂತೆ ಸೆರೆಮನೆಗೆ ಹೋಗುವವರ ಸಂಖ್ಯೆ ಹೆಚ್ಚಿದರೆ ಪೂರಾ ಶಿಕ್ಷೆ ಅನುಭವಿಸಬೇಕಾದ್ದಿಲ್ಲ. ಆದರೆ ಸೆರೆಮನೆ ತುಂಬದಿದ್ದರೆ ಎರಡು ತಿಂಗಳು ಒಂದು ಯುಗವಾಗಬಹುದು. ಈ ಯೊಚನೆಗಳಿಂದ ನನಗೆ ನಾಚಿಕೆಯೂ ಆಯಿತು. ಎಷ್ಟು ದುರಭಿಮಾನಿ ನಾನು? ಸೆರೆಮನೆ-ಚಕ್ರವರ್ತಿ ನಮಗಾಗಿ ಏರ್ಪಡಿಸಿದ ವಿಶ್ರಾಂತಿಮಂದಿರ, ಕರಾಳಶಾಸನ ವಿರೋಧದಿಂದ ಒದಗುವ ಸಂಕಟ ಪರಮಸುಖ, ಆ ಶಾಸನ ಎದುರಿಸಲು ನಮ್ಮ ಸರ್ವಸ್ವ ತ್ಯಾಗ ಮಾಡಿ, ಪ್ರಾಣವನ್ನು ಸಹ ಅರ್ಪಿಸುವುದು ಆನಂದದ ಪರಮಾವಧಿ, ಹೀಗೆ ಭಾವಿಸಬೇಕೆಂದು ನಮ್ಮ ಜನರಿಗೆ ಹೇಳಿದವನು ನಾನೇ! ಈ ಜ್ಞಾನವೆಲ್ಲ ಈ ದಿನ ಎಲ್ಲಿ ಹೋಯಿತು? ಈ ಆತ್ಮಜಿಜ್ಞಾಸೆ ಒಳ್ಳೆ ಶಕ್ತಿ ವರ್ಧಿನಿಯಂತೆ ಧೈರ್ಯ ಕೊಟ್ಟಿತು. ನನ್ನ ಭ್ರಮೆ ಕಂಡು ನನಗೇ ನಗೆ ಬಂತು. ಉಳಿದವರಿಗೆ ಯಾವ ಶಿಕ್ಷೆ ಕೊಡುತ್ತಾರೆ? ಅವರನ್ನೂ ನನ್ನ ಜೊತೆಗೆ ಇಡುತ್ತಾರೆಯೆ? ಮುಂತಾದ ಯೋಚನೆ ಹೊಳೆಯಲಾರಂಭಿಸಿದವು. ಆದರೆ ಪೋಲೀಸ್ ಅಧಿಕಾರಿಯೊಬ್ಬ ಬಂದು ಬಾಗಿಲ ತೆಗೆದು ತನ್ನ ಹಿಂದೆ ಬರಲು ಹೇಳಿ ಆ ಆಲೋಚನಾಧಾರೆಗೆ ಭಂಗ ತಂದ. ಆಮೇಲೆ ನನ್ನನ್ನೇ ಮುಂದೆ ಬಿಟ್ಟು ತಾನು ಹಿಂಬಾಲಿಸಿ ಬಂದಿಗಳ ಗಾಡಿಗೆ ಕರೆದುಕೊಂಡು ಹೋಗಿ ಅದರಲ್ಲಿ ಕೂಡಿಸಿ ಜೋಹಾನ್ಸ್ ಬರ್ಗ್ ಸೆರೆ ಮನೆಗೆ ಕರೆದೊಯ್ದನು.

ಸೆರೆಮನೆಯಲ್ಲಿ ನನ್ನ ಬಟ್ಟೆಗಳನ್ನೆಲ್ಲ ತೆಗೆಯಲು ಹೇಳಿದರು. ಸೆರೆಮನೆಯಲ್ಲಿ ಶಿಕ್ಷೆಯಾದವರನ್ನು ಬೆತ್ತಲೆ ಮಾಡುತ್ತಿದ್ದರೆಂದು ನನಗೆ ತಿಳಿದಿತ್ತು. ನಮ್ಮ ಆತ್ಮಗೌರವಕ್ಕೂ, ಧಾರ್ಮಿಕ ನೀತಿಗೂ ವಿರೋಧವಲ್ಲದ ಸೆರೆಮನೆ ವಿಧಿಗಳನ್ನೆಲ್ಲ ಪಾಲಿಸಬೇಕೆಂದು ನಾವೆಲ್ಲ ತೀರ್ಮಾನಿಸಿದ್ದೆವು. ನನಗೆ ಕೊಟ್ಟ ಬಟ್ಟೆ ಬಹಳ ಕೊಳೆಯಾಗಿದ್ದವು. ಅವನ್ನು ಧರಿಸಲು ನನಗೆ ಮನಸ್ಸು ಬರಲಿಲ್ಲ. ಸ್ವಲ್ಪ ಕೊಳೆ ಸಹಿಸಿಕೊಳ್ಳಬೇಕೆಂದು ಸಮಾಧಾನ ಮಾಡಿಕೊಂಡು ಬಹು ಕಷ್ಟದಿಂದ ಆ ಬಟ್ಟೆ ಹಾಕಿಕೊಂಡೆ, ಧರಿಸಿದೆ. ಅಧಿಕಾರಿಗಳು ನನ್ನ ಹೆಸರು ವಿಳಾಸ ಬರೆದುಕೊಂಡಮೇಲೆ ನನ್ನನ್ನು ಒಂದು ದೊಡ್ಡ ಕೊಠಡಿಗೆ ಕರೆದೊಯ್ದರು. ಸ್ವಲ್ಪ ಹೊತ್ತಿನಲ್ಲಿಯೇ ನನ್ನ ಸಹೋದ್ಯೋಗಿಗಳು ಅಲ್ಲಿಗೆ ಬಂದರು.

ನನಗೆ ಕೊಟ್ಟ ಶಿಕ್ಷೆಯನ್ನೇ ಅವರಿಗೂ ಕೊಟ್ಟರೆಂದು ನಗುತ್ತ ಹೇಳಿ ನನ್ನನ್ನು ಕರೆತಂದ ಮೇಲೆ ನಡೆದ ವಿಷಯಗಳನ್ನೆಲ್ಲ ವಿವರಿಸಿದರು. ನನ್ನ ಮೊಕದ್ದಮೆ ಮುಗಿದೊಡನೆ, ಭಾರತೀಯರಲ್ಲಿ ಕೆಲವರು ಉದ್ರೇಕಗೊಂಡು ಕರೀ ಬಾವುಟ ಹಿಡಿದು ಮೆರವಣಿಗೆ ಹೊರಟರು. ಪೋಲೀಸರು ಆ ಮೆರವಣಿಗೆ ಚದುರಿಸಿ ಅದರಲ್ಲಿ ಭಾಗವಹಿಸಿದ ಕೆಲವರನ್ನು ಚಾಟಿಯಿಂದ ಹೊಡೆದರು. ನಮ್ಮೆಲ್ಲರನ್ನೂ ಒಂದೇ ಸೆರೆಮನೆಯಲ್ಲಿ ಒಂದೇ ಕೊಠಡಿಯಲ್ಲಿಟ್ಟುದಕ್ಕಾಗಿ ನಮಗೆಲ್ಲ ಸಮಾಧಾನವಾಯಿತು.

ಕೊಠಡಿಯ ಬಾಗಿಲನ್ನು ಆರು ಗಂಟೆಗೆ ಮುಚ್ಚುತ್ತಿದ್ದರು. ಬಾಗಿಲಿಗೆ ಸಲಾಕಿ ಇರಲಿಲ್ಲ, ಪೂರಾ ಹಲಗೆಯಿಂದಲೇ ಮಾಡಿತ್ತು. ಗೋಡೆಯಲ್ಲಿ ಮೇಲುಗಡೆ ಗಾಳಿ ಬರಲು ಒಂದು ಸಣ್ಣ ಕಂಡಿಯಿತ್ತು; ಪೆಟ್ಟಿಗೆಯಲ್ಲಿ ಕೂಡಿದಂತೆ ಇತ್ತು.

ರಾಮಸುಂದರನನ್ನು ನೋಡಿಕೊಂಡಂತೆ ನಮ್ಮನ್ನೂ ಸೆರೆಮನೆಯಲ್ಲಿ ನೋಡಿಕೊಳ್ಳದಿದ್ದುದು ನಮಗೇನೂ ಆಶ್ಚರ್ಯವಾಗಲಿಲ್ಲ. ರಾಮಸುಂದರ ಮೊದಲನೆ ಸತ್ಯಾಗ್ರಹಿ; ಆತನನ್ನು ಯಾವ ರೀತಿ ಕಾಣಬೇಕೆಂದು ಅಧಿಕಾರಿಗಳಿಗೂ ತಿಳಿದಿರಲಿಲ್ಲ. ನಮ್ಮ ಮೊದಲನೆಯ ಗುಂಪೇ ದೊಡ್ಡದಾಗಿತ್ತು. ಇನ್ನೂ ಅನೇಕರನ್ನು ದಸ್ತಗಿರಿ ಮಾಡಬೇಕೆಂದಿದ್ದರು. ಆದ್ದರಿಂದ ನಮ್ಮನ್ನು ನೀಗ್ರೋ ಆವರಣದಲ್ಲಿಟ್ಟಿದ್ದರು. ದಕ್ಷಿಣ ಆಫ್ರಿಕದಲ್ಲಿ ಬಂದಿಗಳಲ್ಲಿ ಬಿಳಿಯರು, ಕಪ್ಪು ಜನರು ಎಂದು ಎರಡೇ ಭೇದ. ಭಾರತೀಯರನ್ನು ನೀಗ್ರೋ ಜನರೊಂದಿಗೆ ಸೇರಿಸಿದರು. ಕಠಿಣ ಶಿಕ್ಷೆ ವಿಧಿಸಲಾದವರಿಗೆ ತಮ್ಮ ಬಟ್ಟೆಯನ್ನೇ ಉಪಯೋಗಿಸುವ ಅಧಿಕಾರವಿದೆ ಎಂದೂ, ಹಾಗೆ ಮಾಡಲಿಷ್ಟವಿಲ್ಲದವರಿಗೆ ಸೆರೆಮನೆಯಲ್ಲಿ ಬಟ್ಟೆ ಕೊಡುವುದಾಗಿಯೂ ಮಾರನೆ ದಿನ ನಮಗೆ ತಿಳಿಯಿತು. ನಮ್ಮ ಬಟ್ಟೆ ಉಪಯೋಗಿಸುವುದು ಸರಿಯಾದ್ದಲ್ಲವೆಂದೂ, ಸೆರೆಮನೆ ಉಡುಪುಧರಿಸಬೇಕಾದ್ದೇ ನ್ಯಾಯವೆಂದೂ ತೀರ್ಮಾನಿಸಿ ಅದೇ ರೀತಿ ಸೆರೆಮನೆ ಅಧಿಕಾರಿಗಳಿಗೆ ತಿಳಿಸಿದೆವು. ಆದ್ದರಿಂದ ಸಾದಾ ಶಿಕ್ಷೆ ಅನುಭವಿಸುತ್ತಿದ್ದ ನೀಗ್ರೋ ಬಂದಿಗಳಿಗೆ ಕೊಡುತ್ತಿದ್ದ ಬಟ್ಟೆಯನ್ನು ನಮಗೆ ಕೊಟ್ಟರು. ಸಾದಾ ಶಿಕ್ಷೆಯ ಭಾರತೀಯರು ಬರುತ್ತ ಹೋದಂತೆ ಸಾದಾ ಕೈದಿಗಳ ಬಟ್ಟೆ ಸಾಲದೆ ಬಂದವು. ಈ ವಿಷಯದಲ್ಲಿ ಅಷ್ಟು ಖಂಡಿತವಾಗಿರಲಿಲ್ಲವಾದ್ದರಿಂದ ಕಠಿಣ ಶಿಕ್ಷೆ ಬಂದಿಗಳ ಬಟ್ಟೆಯನ್ನೇ ಧರಿಸಲು ಒಪ್ಪಿದರು. ಕೊನೆಕೊನೆಗೆ ಬಂದ ಕೆಲವರು ಕಠಿಣಶಿಕ್ಷೆ ಬಂದಿಗಳ ಉಡುಪು ಧರಿಸುವುದಕ್ಕಿಂತ ತಮ್ಮ ಬಟ್ಟೆಯನ್ನೇ ಉಪಯೋಗಿಸಲು ಇಷ್ಟಪಟ್ಟರು. ಅದು ನನಗೆ ನ್ಯಾಯವೆಂದು ಕಾಣಲಿಲ್ಲ; ಆದರೆ ಈ ವಿಷಯದಲ್ಲಿ ಒಂದು ವಿಧಾಯಕ ಮಾರ್ಗದಲ್ಲಿ ನಡೆಯಬೇಕೆಂದು ಬಲಾತ್ಕರಿಸಲು ನಾನು ಇಷ್ಟಪಡಲಿಲ್ಲ.

ಎರಡನೆಯ ದಿನದಿಂದಲೊ ಮೂರನೆಯ ದಿನದಿಂದಲೊ ಸತ್ಯಾಗ್ರಹಿಗಳು ತಂಡತಂಡವಾಗಿ ಬರಲಾರಂಭಿಸಿದರು. ಅವರೆಲ್ಲ ತಾವೇ ಸೆರೆಮನೆ ಸೇರಿದವರು. ಅವರಲ್ಲಿ ಬಹುಜನ ಬೀದಿಯಲ್ಲಿ ಸಾಮಾನು ಹೊತ್ತು ಮಾರುವವರು. ದಕ್ಷಿಣ ಆಫ್ರಿಕದಲ್ಲಿ ಸಾಮಾನು ಹೊತ್ತು ಮಾರುವವರು ಬಿಳಿಯರಾಗಲಿ, ಕಪ್ಪು ಜನರಾಗಲಿ ರಹದಾರಿ

ಪಡೆದು ಮಾರಾಟ ಮಾಡಬೇಕಾಗಿತ್ತು. ರಹದಾರಿ ಹತ್ತಿರದಲ್ಲೆ ಇಟ್ಟುಕೊಂಡಿದ್ದು ಪೋಲೀಸರು ಕೇಳಿದಾಗ ತೋರಿಸಬೇಕು. ಪ್ರತಿನಿತ್ಯ ಯಾರಾದರೂ ಒಬ್ಬ ಪೋಲೀಸಿನವ ರಹದಾರಿ ಕೇಳುತ್ತಿದ್ದ. ರಹದಾರಿ ಇಲ್ಲದವರನ್ನು ಬಂಧಿಸುತ್ತಿದ್ದರು. ನಮ್ಮ ಬಂಧನವಾದ ಕೂಡಲೆ ಸೆರೆಮನೆ ತುಂಬ ಬೇಕೆಂದು ನಮ್ಮ ಜನ ನಿರ್ಧರಿಸಿದರು. ಇದರಲ್ಲಿ ಈ ಚಿಲ್ಲರೆ ಮಾರಾಟಗಾರರು ಮುಂದಾಳುಗಳಾದರು. ಬಂಧಿತರಾಗಲು ಅವರಿಗೆ ಬಹಳ ಸುಲಭ. ರಹದಾರಿ ತೋರಿಸಲು ನಿರಾಕರಿಸಿದರೆ ಸಾಕು, ಖಂಡಿತ ಬಂಧನವಾಗುತ್ತಿತ್ತು. ಈ ರೀತಿ ಒಂದು ವಾರದಲ್ಲೇ ಸತ್ಯಾಗ್ರಹಿಗಳ ಸಂಖ್ಯೆ ಒಂದು ನೂರನ್ನು ದಾಟಿತು. ಪ್ರತಿ ನಿತ್ಯ ಯಾರಾದರೂ ಹೊಸಬರು ಬರುತ್ತಲೇ ಇದ್ದುದರಿಂದ ವರ್ತಮಾನಪತ್ರವಿಲ್ಲದೆಯೆ ದಿನದಿನದ ವರ್ತಮಾನ ನಮಗೆ ಗೊತ್ತಾಗುತ್ತಿತ್ತು. ಸತ್ಯಾಗ್ರಹಿಗಳ ಸಂಖ್ಯೆ ಹೆಚ್ಚಾಗುತ್ತ ಬರಲು, ನ್ಯಾಯಧೀಶರು ತಾಳ್ಮೆ ಮೀರಿಯೊ, ಅಥವಾ ನಾವು ಯೋಚಿಸಿದಂತೆ ಸರ್ಕಾರದ ಪ್ರೇರಣೆಯಿಂದಲೊ, ಎಲ್ಲರಿಗೂ ಕಠಿಣಶಿಕ್ಷೆ ವಿಧಿಸಲು ಪ್ರಾರಂಭಿಸಿದರು. ಈಗಲೂ ನಮ್ಮ ಊಹೆಯೇ ಸರಿ ಎಂದು ತೋರುತ್ತದೆ. ಏಕೆಂದರೆ ಸಾದಾ ಸಜ ವಿಧಿಸಿದ ಮೊದಲನೆಯ ಕೆಲವು ಮೊಕದ್ದಮೆ ಬಿಟ್ಟರೆ, ಅಷ್ಟು ದೀರ್ಘಕಾಲ ನಡೆದ ಆ ಸತ್ಯಾಗ್ರಹದಲ್ಲಿ ಯಾರಿಗೂ ಸಾದಾ ಶಿಕ್ಷೆ ವಿಧಿಸಲಿಲ್ಲ. ಸ್ತ್ರೀಯರಿಗೆ ಸಹ ಕಠಿಣ ಶಿಕ್ಷೆ ವಿಧಿಸುತ್ತಿದ್ದರು. ಎಲ್ಲ ನ್ಯಾಯಾಧೀಶರಿಗೂ ಒಂದೇ ವಿಧವಾದ ಆಜ್ಞೆ ಇಲ್ಲದೆಯೆ, ಎಲ್ಲ ನ್ಯಾಯಾಧೀಶರೂ ಗಂಡಸರು ಹೆಂಗಸರೆಲ್ಲರಿಗೂ ಕಠಿಣಶಿಕ್ಷೆಯನ್ನೇ ವಿಧಿಸಬೇಕಾದರೆ ನಿಜವಾಗಿಯೂ ಅದೊಂದು ದೈವಲೀಲೆ.

ಸಾದಾಶಿಕ್ಷೆ ವಿಧಿಸಲಾದ ಬಂದಿಗಳಿಗೆ ಜೋಹಾನ್ಸ್ ಬರ್ಗ್‌ನಲ್ಲಿ ಬೆಳಗಿನ ಹೊತ್ತು 'ಗಂಜಿ ಊಟ' ಕೊಡುತ್ತಿದ್ದರು. ಅದಕ್ಕೆ ಉಪ್ಪು ಸೇರಿಸಿರುತ್ತಿರಲಿಲ್ಲ. ಪ್ರತ್ಯೇಕವಾಗಿ ಉಪ್ಪು ಕೊಡುತ್ತಿದ್ದರು. ಮಧ್ಯಾಹ್ನ ನಾಲ್ಕು ಔನ್ಸು ಅನ್ನ, ನಾಲ್ಕು ಔನ್ಸು ರೊಟ್ಟಿ, ಒಂದು ಔನ್ಸು ತುಪ್ಪ, ಸ್ವಲ್ಪ ಉಪ್ಪು; ಸಂಜೆಗೆ ಗಂಜಿ, ಸ್ವಲ್ಪ ತರಕಾರಿ, ಮುಖ್ಯವಾಗಿ ಆಲುಗಡ್ಡೆ–ಸಣ್ಣದಾದರೆ ಎರಡು, ದೊಡದಾದರೆ ಒಂದು–ಈ ರೀತಿ ಆಹಾರ ಕೊಡುತ್ತಿದ್ದರು. ಈ ಊಟದಿಂದ ನಮಗೆ ಯಾರಿಗೂ ಸಮಾಧಾನವಾಗಲಿಲ್ಲ. ಅನ್ನ ಬಹಳ ಮಿದುವಾಗಿರುತ್ತಿತ್ತು. ಭಾರತದಲ್ಲಿ ಸೆರೆಮನೆಗಳಲ್ಲಿ ಮಸಾಲೆ ಕೊಡುವುದಾಗಿಯೂ, ನಮಗೂ ಸ್ವಲ್ಪ ಮಸಾಲೆ ಕೊಡಬೇಕಾಗಿಯೂ ಸೆರೆಮನೆಯ ಅಧಿಕಾರಿಗಳನ್ನು ಕೇಳಿದೆವು. "ಇದು ಭಾರತವಲ್ಲ, ಸೆರೆಮನೆಯಲ್ಲಿ ನಿಮಗೆ ರುಚಿರುಚಿ ಊಟ ಹಾಕುವದಿಲ್ಲ. ಮಸಾಲೆ ಕೊಡಲು ಸಾಧ್ಯವಿಲ್ಲ" ಎಂದು ಉತ್ತರ ಬಂತು. ನಮಗೆ ಕೊಡುತ್ತಿದ್ದ ಆಹಾರದಲ್ಲಿ ಮಾಂಸಖಂಡಗಳ ಬೆಳವಣಿಗೆಗೆ ಸಾಕಾದಷ್ಟು ಪುಷ್ಟಿಕರವಾದ ಪದಾರ್ಥವಿಲ್ಲದ್ದರಿಂದ ಬೇಳೆ ಕೇಳಿದೆವು. "ಬಂದಿಗಳು ಆರೋಗ್ಯ ವಿಚಾರ ವಾದಮಾಡಬಾರದು. ಮುಸುಕಿನ ಜೋಳದ ಬದಲು ನಿಮಗೆ ವಾರಕ್ಕೆ ಎರಡು ಬಾರಿ ಬೇಯಿಸಿದ ಹುರುಳಿ ಕೊಡುವುದರಿಂದ ನಿಮಗೆ ಮಾಂಸಖಂಡ ಪುಷ್ಟಿಗೆ ಬೇಕಾದ ಆಹಾರಾಂಶ ದೊರೆಯುತ್ತದೆ" ಎಂದು ವೈದ್ಯರು ಹೇಳಿದರು. ಒಂದು ವಾರವೊ ಅಥವಾ ಹದಿನೈದು ದಿನಗಳಲ್ಲಿಯೊ ಬೇರೆ ಬೇರೆ ದಿನ ಒಮ್ಮೊಮ್ಮೆ ತೆಗೆದುಕೊಂಡ ಬೇರೆ ಬೇರೆ ಆಹಾರ ಪದಾರ್ಥಗಳಿಂದ,

ಅವಶ್ಯವಾದ ಬೇರೆ ಬೇರೆ ಆಹಾರ ದ್ರವ್ಯಗಳನ್ನು ಸಂಗ್ರಹಿಸಲು ಮಾನವ ಜಠರಕ್ಕೆ ಶಕ್ತಿಯೊಂದಿದ್ದರೆ ವೈದ್ಯನ ವಾದವು ಸರಿಯೆ. ಆದರೆ ನಮ್ಮ ಅನುಕೂಲ ನೋಡಬೇಕೆಂಬ ಉದ್ದೇಶ ನಿಜವಾಗಿಯೂ ಆತನಿಗೆ ಇರಲಿಲ್ಲ. ಸೂಪರಿಂಟೆಂಡೆಂಟರು ನಮ್ಮ ಅಡಿಗೆ ನಾವೇ ಮಾಡಿಕೊಳ್ಳಬಹುದೆಂದು ಅನುಮತಿ ಕೊಟ್ಟರು. ತಂಬಿ ನಾಯುಡು ನಮ್ಮ ಅಡಿಗೆಯವನಾದ. ನಮ್ಮ ಪರ ಆತನು ಎಷ್ಟೋ ಹೋರಾಟ ನಡೆಸಬೇಕಾಯಿತು. ನಮಗೆ ಕೊಡಬೇಕಾದ ಕಾಯಿಪಲ್ಯದ ತೂಕ ಕಡಿಮೆಯಾದರೆ, ವ್ಯಾಜ್ಯಮಾಡಿ ಸರಿಯಾದ ತೂಕ ತರುತ್ತಿದ್ದನು. ತರಕಾರಿ ಕೊಡುತ್ತಿದ್ದ ವಾರದಲ್ಲಿ ಎರಡು ದಿನ ನಾವು ಎರಡು ಹೊತ್ತು ಅಡಿಗೆ ಮಾಡುತ್ತಿದ್ದೆವು. ಉಳಿದ ದಿನ ಮಧ್ಯಾಹ್ನ ಮಾತ್ರ ಅಡಿಗೆ. ನಮ್ಮ ಅಡಿಗೆ ನಾವೇ ಮಾಡಿಕೊಳ್ಳಲು ಪ್ರಾರಂಭಿಸಿದ ಮೇಲೆ ನಮ್ಮ ಸ್ಥಿತಿ ಸ್ವಲ್ಪ ಉತ್ತಮವಾಯಿತು.

ಆದರೆ ಈ ಅನುಕೂಲ ದೊರೆಯಲಿ, ದೊರೆಯದಿರಲಿ, ಪ್ರತಿಯೊಬ್ಬರೂ ತಮ್ಮ ಶಿಕ್ಷೆಯ ಕಾಲವನ್ನು ಪೂರ್ಣ ಶಾಂತಿಯಿಂದಲೂ, ಸೌಖ್ಯದಿಂದಲೂ ಕಳೆಯಬೇಕೆಂದು ನಿಶ್ಚಯಿಸಿದೆವು. ಸತ್ಯಾಗ್ರಹಿಗಳ ಸಂಖ್ಯೆ ಕ್ರಮೇಣ ೧೫೦ಕ್ಕೆ ಏರಿತು. ನಾವೆಲ್ಲ ಸಾದಾಶಿಕ್ಷೆಯವರಾದ್ದರಿಂದ ಕೊಠಡಿಯನ್ನು ಶುಭ್ರವಾಗಿಡುವುದರ ಹೊರತು ಬೇರೆ ಕೆಲಸವಿರಲಿಲ್ಲ. ನಮಗೆ ಸ್ವಲ್ಪ ಕೆಲಸ ಕೊಡಬೇಕೆಂದು ಸೂಪರಿಂಟೆಂಡೆಂಟರನ್ನು ಕೇಳಿದೆವು. “ನಾನು ನಿಮಗೆ ಏನೂ ಕೆಲಸ ಕೊಡುವಂತೆ ಇಲ್ಲ. ಕೊಟ್ಟರೆ ತಪ್ಪಾಗುತ್ತದೆ. ಆದರೆ ಈ ಸ್ಥಳವನ್ನು ಚೊಕ್ಕಟವಾಗಿಡುವುದರಲ್ಲಿ ಎಷ್ಟು ಹೊತ್ತು ಬೇಕಾದರೂ ಕಳೆಯಬಹುದು” ಎಂದರು. ಕಠಿಣ ಶಿಕ್ಷೆ ಅನುಭವಿಸುತ್ತಿದ್ದ ನೀಗ್ರೋ ಬಂದಿಗಳಿಗೆ ಅವರ ಕಷ್ಟದ ಕೆಲಸದೊಂದಿಗೇ ಶರೀರವ್ಯಾಯಾಮ ಸಹ ಮಾಡಿಸುತ್ತಿದ್ದರು. ನಮಗೂ ಸ್ವಲ್ಪ ವ್ಯಾಯಾಮ ಮಾಡಲು ಅವಕಾಶಕೊಡಬೇಕೆಂದು ಕೇಳಿದೆವು. “ನಿಮ್ಮ ಬಂದೀಖಾನೆ ಕಾವಲುಗಾರನಿಗೆ ಅವಕಾಶವಿದ್ದು, ವ್ಯಾಯಾಮ ಮಾಡಿಸಲು ಅವನಿಗೆ ಇಷ್ಟವಿದ್ದರೆ ನನ್ನ ಅಡ್ಡಿ ಏನೂ ಇಲ್ಲ. ಈಗಾಗಲೇ ಅವನಿಗೆ ಕೆಲಸ ಬಹಳ ಇದೆ. ನಾನು ಒತ್ತಾಯ ಮಾಡುವಂತೆ ಇಲ್ಲ. ನೀವೇ ಬಹುಸಂಖ್ಯೆಯಲ್ಲಿ ಸೆರೆಮನೆಗೆ ಬಂದಿರುವುದರಿಂದ ಅವನ ಕೆಲಸ ಹೆಚ್ಚಿದೆ’ ಎಂದು ಹೇಳಿದರು. ಕಾವಲುಗಾರ ಬಹಳ ಒಳ್ಳೆಯ ಮನುಷ್ಯ, ಇಷ್ಟು ಹೇಳಿದ್ದೇ ಅವನಿಗೆ ಸಾಕಾಯಿತು. ಪ್ರತಿನಿತ್ಯ ಬಹಳ ಶ್ರದ್ಧೆಯಿಂದ ಬೆಳಗಿನ ಹೊತ್ತು ನಮಗೆ ವ್ಯಾಯಾಮ ಮಾಡಿಸಲು ಪ್ರಾರಂಭಿಸಿದ. ನಮ್ಮ ಕೊಠಡಿಗಳ ಮುಂದಿನ ಸಣ್ಣ ಆವರಣದಲ್ಲಿಯೇ ನಾವು ವ್ಯಾಯಾಮ ಮಾಡಬೇಕಾಗಿತ್ತಾದ್ದರಿಂದ ಅದು ಒಂದು ಆಟವಾಯಿತು. ಕಾವಲುಗಾರ ವ್ಯಾಯಾಮ ಮುಗಿಸಿ ಹೊರಗೆ ಹೋದೊಡನೆ ನಮ್ಮ ಗುಂಪಿನಲ್ಲಿದ್ದ ನವಾಜ್ ಖಾನ್ ಎಂಬ ಪಠಾಣ, ತನ್ನ ವಿಚಿತ್ರ ಇಂಗ್ಲಿಷ್ ಉಚ್ಚಾರಣೆಯಿಂದ ಆಜ್ಞೆ ಮಾಡಿ ನಗಿಸುತ್ತ ವ್ಯಾಯಾಮ ಮುಂದುವರಿಸುತ್ತಿದ್ದ. ‘ಸ್ಟಾಂಡ್ ಅಟ್ ಈಸ್’ ಎಂಬುದನ್ನು ‘ಸಂಡ್ಲೀಸ್’ ಎಂದು ಪರಿವರ್ತಿಸಿದ. ಇದು ಯಾವ ಹಿಂದೂಸ್ಥಾನಿ ಶಬ್ದವೋ ಎಂದು ಎಷ್ಟು ಹುಡುಕಿ ತಲೆ ಕೆಳಗಾದರೂ ನಮಗೆ ಅರ್ಥವಾಗಲಿಲ್ಲ. ಅದು ಹಿಂದೂಸ್ಥಾನಿ ಅಲ್ಲವೆಂದೂ ನವಾಬ್ ಖಾನೀ ಇಂಗ್ಲಿಷ್ ಎಂದೂ ಆಮೇಲೆ ತಿಳಿಯಿತು.

೨೧. ಮೊದಲನೆ ಒಪ್ಪಂದ

ನಾವು ಸೆರೆಮನೆ ಸೇರಿದ ಹದಿನೈದು ದಿನದಲ್ಲಿ ಹೊರಗಿನಿಂದ ಹೊಸದಾಗಿ ಬಂದ ಬಂದಿಗಳು ಸೆಕಾರದೊಂದಿಗೆ ರಾಜೀಪ್ರಯತ್ನ ನಡೆಯುತ್ತಿರುವುದಾಗಿ ತಿಳಿಸಿದರು. ಎರಡು ಮೂರು ದಿನಗಳ ಮೇಲೆ ಜೋಹಾನ್ಸ್ ಬರ್ಗ್ ದಿನಪತ್ರಿಕೆ 'ಟ್ರಾನ್ಸ್ ವಾಲ್ ಲೀಡರ್' ಸಂಪಾದಕರಾದ ಆಲ್ಬರ್ಟ್ ಕಾರ್ಟ್‌ರೈಟ್ ನನ್ನನ್ನು ನೋಡಲು ಬಂದರು.

ಜೋಹಾನ್ಸ್ ಬರ್ಗ್‌ನಲ್ಲಿ ಆಗ ಹೊರಡುತ್ತಿದ್ದ ಎಲ್ಲ ದಿನಪತ್ರಿಕೆಗಳೂ ಯೂರೋಪಿಯನ್ ಚಿನ್ನದ ಗಣಿ ಮಾಲಿಕರಿಗೆ ಸೇರಿದ್ದವು; ಈ ಬಂಡವಾಳಗಾರರ ಹಿತಕ್ಕೆ ವಿರೋಧವಿಲ್ಲದ ಸಾರ್ವಜನಿಕ ಪ್ರಶ್ನೆಗಳ ಮೇಲೆ ಸಂಪಾದಕರು ಸ್ವತಂತ್ರ ಅಭಿಪ್ರಾಯ ಕೊಡುತ್ತಿದ್ದರು. ಸುಪ್ರಸಿದ್ಧರೂ, ದಕ್ಷರೂ ಆದವರನ್ನು ಸಂಪಾದಕರನ್ನಾಗಿ ಆರಿಸುತ್ತಿದ್ದರು. 'ಡೇಲಿ ಸ್ಟಾರ್' ಸಂಪಾದಕರು ಮೊದಲ ಲಾರ್ಡ್ ಮಿಲ್ಲರ್‌ನ ಆಪ್ತಕಾರ್ಯದರ್ಶಿಯಾಗಿದ್ದರು; ಆಮೇಲೆ ಬಕ್ಕಲ್ಸ್ ರ ನಂತರ 'ಟೈಮ್ಸ್' ಸಂಪಾದಕರಾದ ಆಲ್ಬರ್ಟ್ ಕಾರ್ಟ್‌ರೈಟ್ ಎಷ್ಟು ಶಕ್ತರೋ ಅಷ್ಟು ಉದಾರಮನಸ್ಕರು. ಅವರ ಪತ್ರಿಕೆಯಲ್ಲಿ ಯಾವಾಗಲೂ ಭಾರತೀಯರ ಪ್ರಶ್ನೆಗೆ ಬೆಂಬಲ ಕೊಡುತ್ತಿದ್ದರು. ಅವರೂ ನಾನೂ ಒಳ್ಳೆಯ ಸ್ನೇಹಿತರಾದೆವು. ನಾನು ಸೆರೆಮನೆ ಸೇರಿದನಂತರ ಅವರು ಜನರಲ್ ಸ್ಮಟ್ಸ್‌ನನ್ನು ಕಂಡರು. ಜನರಲ್ ಸ್ಮಟ್ಸ್ ಅವರ ಮಧ್ಯಸ್ತಿಕೆಗೆ ಒಪ್ಪಿದ. ಆಮೇಲೆ ಅವರು ಭಾರತೀಯ ಮುಖ್ಯಸ್ಥರನ್ನು ನೋಡಿದಾಗ "ನಮಗೆ ಶಾಸನದ ತೊಡಕು ಯಾವುದೂ ತಿಳಿಯದು. ಗಾಂಧಿಯವರು ಸೆರೆಮನೆಯಲ್ಲಿರುವವರೆಗೂ ಸಂಧಾನದ ವಿಷಯ ಮಾತನಾಡುವ ಹಾಗಿಲ್ಲ. ನಮಗೂ ಒಪ್ಪಂದ ಬೇಕು. ಆದರೆ ನಮ್ಮ ಜನ ಸೆರೆಮನೆಯಲ್ಲಿರುವಾಗಲೇ ಒಪ್ಪಂದವಾಗಬೇಕೆಂದು ಸರಕಾರದ ಇಷ್ಟವಾದರೆ ನೀವು ಗಾಂಧಿಯವರನ್ನು ಕಾಣಬೇಕು. ಅವರು ಒಪ್ಪಿದ ಷರತ್ತುಗಳಿಗೆ ನಾವು ಸಮ್ಮತಿಸುತ್ತೇವೆ" ಎಂದು ತಿಳಿಸಿದರು.

ಆದ್ದರಿಂದ ಕಾರ್ಟ್‌ರೈಟ್ ನನ್ನನ್ನು ನೋಡಲು ಬಂದರು. ಜನರಲ್ ಸ್ಮಟ್ಸ್ ಬರೆಯಿಸಿದ ಅಥವಾ ಒಪ್ಪಿದ ರಾಜಿ ಷರತ್ತಿನ ಕರಡನ್ನು ನನಗೆ ತೋರಿಸಿದರು. ಆ ಒಪ್ಪಂದದ ಅಸ್ಪಷ್ಟ ಭಾಷೆ ನನಗೆ ಸರಿಬೀಳಲಿಲ್ಲ; ಆದರೂ ಒಂದು ಬದಲಾವಣೆಯೊಂದಿಗೆ ಸಹಿ ಹಾಕಲು ಸಿದ್ಧನಿದ್ದೆ. ಸೆರೆಮನೆ ಹೊರಗಿನ ಭಾರತೀಯರು ಒಪ್ಪಿದ್ದರೂ, ಸೆರೆಮನೆಯೊಳಗೆ ಇರುವ ನನ್ನ ಜೊತೆಯ ಬಂದಿಗಳ ಒಪ್ಪಿಗೆಯಿಲ್ಲದೆ ನಾನು ಸಹಿ ಹಾಕಲಾರೆನೆಂದು ತಿಳಿಸಿದೆ.

ರಾಜೀ ಷರತ್ತುಗಳ ಸಾರಾಂಶ ಇಷ್ಟು: 'ಭಾರತೀಯರೇ ಸ್ವಂತ ಇಚ್ಛೆಯಿಂದ ರಿಜಿಸ್ಟರ್ ಮಾಡಿಸಿಕೊಳ್ಳಬೇಕು; ಯಾವ ಶಾಸನದಂತೆಯೂ ಅಲ್ಲ. ಹೊಸ ರಹದಾರಿಗಳಲ್ಲಿ ಕಾಣಿಸಬೇಕಾದ ವಿಷಯಗಳನ್ನು ಭಾರತೀಯರ ಸಲಹೆ ಪಡೆದು ಸರಕಾರ ನಿರ್ಧರಿಸಬೇಕು. ಭಾರತೀಯರಲ್ಲಿ ಬಹುಸಂಖ್ಯಾಕರು ರಿಜಿಸ್ಟರ್ ಮಾಡಿಸಿಕೊಂಡರೆ ಈ ಕರಾಳಶಾಸನವನ್ನು

ಸರ್ಕಾರವು ರದ್ದುಗೊಳಿಸಬೇಕು; ಐಚ್ಛಿಕವಾಗಿ ಮಾಡಿಸಿದ ರಿಜಿಸ್ಟ್ರೇಷನ್ ಶಾಸನ ಸಮ್ಮತವಾಗಬೇಕು. ಆ ಕರಾಳ ಶಾಸನವನ್ನು ತೊಡೆಯಲು ಅವಶ್ಯವಾದ ಷರತ್ತು ಸ್ಪಷ್ಟವಾಗಿರಲಿಲ್ಲ. ನನ್ನ ದೃಷ್ಟಿಗೆ ಆ ಷರತ್ತು ನಿಸ್ಸಂದೇಹವಾಗಿರುವಂತೆ ಅವಶ್ಯ ಕಂಡ ತಿದ್ದು ಪಡಿ ಸೂಚಿಸಿದೆ.

ಕಾರ್ಪ್ ರೈಟ್ ಈ ಸಣ್ಣ ತಿದ್ದುಪಡಿಯನ್ನು ಒಪ್ಪಲಿಲ್ಲ. "ಜನರಲ್ ಸ್ಮಟ್ಸ್ ಈ ಷರತ್ತುಗಳೇ ಕೊನೆಯವೆಂದು ಹೇಳುತ್ತಾರೆ. ನಾನು ಅದಕ್ಕೆ ಒಪ್ಪಿದ್ದೇನೆ. ಅಲ್ಲದೆ ನೀವೆಲ್ಲ ಸ್ವಂತ ಇಚ್ಛೆಯಿಂದ ರಿಜಿಸ್ಟರ್ ಮಾಡಿಸಿಕೊಂಡರೆ ಈ ಕರಾಳ ಶಾಸನ ರದ್ದಾಗುವುದು ಖಂಡಿತವೆಂದು ಭರವಸೆಕೊಡುತ್ತೇನೆ" ಎಂದರು.

"ಒಪ್ಪಂದವಾಗಲಿ, ಆಗದಿರಲಿ ನೀವು ತೋರಿದ ದಯೆಗೆ, ಮಾಡಿದ ಸಹಾಯಕ್ಕೆ ನಾವು ಯಾವಾಗಲೂ ಕೃತಜ್ಞರು. ಈ ಮಸೂದೆಯಲ್ಲಿ ಅನವಶ್ಯವಾದ ಬದಲಾವಣೆ ಯಾವುದನ್ನೂ ಸೂಚಿಸಬೇಕೆಂದು ನನ್ನ ಅಭಿಮತವಲ್ಲ. ಸರಕಾರದ ಗೌರವ ಕಾಪಾಡುವ ಭಾಷಾಸರಣಿಗೆ ನನ್ನ ಅಡ್ಡಿ ಇಲ್ಲ. ಆದರೆ ನನಗೆ ಎಲ್ಲಿ ಅರ್ಥ ಸ್ಪಷ್ಟವಿಲ್ಲವೊ, ಅಲ್ಲಿ ಭಾಷೆ ಸ್ಪಷ್ಟವಾಗಿರಬೇಕಾದ್ದು ಅವಶ್ಯಕ. ಒಪ್ಪಂದವಾಗಬೇಕೆಂದು ನಿಜವಾಗಿ ಇಷ್ಟವಿದ್ದರೆ ಕರಡು ತಿದ್ದಲು ಉಭಯಪಕ್ಷದವರಿಗೂ ಸ್ವಾತಂತ್ರ್ಯವಿರಬೇಕು. ಇವೇ ಕೊನೆಯ ಷರತ್ತುಗಳೆಂದು ಜನರಲ್ ಸ್ಮಟ್ಸ್ ನಮ್ಮನ್ನು ಹೆದರಿಸಬೇಕಾದ್ದಿಲ್ಲ. ಈ ಕರಾಳಶಾಸನದಿಂದ ಜನರಲ್ ಸ್ಮಟ್ಸ್ ಈಗಾಗಲೇ ಭಾರತೀಯರ ಎದೆಗೆ ಬಂದೂಕು ಬಾರುಮಾಡಿದ್ದಾರೆ. ಎರಡನೆಯದೊಂದು ಗುರಿಯಿಡುವುದರಿಂದ ಅವರಿಗೆ ಬರುವ ಲಾಭವಾದರೂ ಏನು?" ಎಂದು ಹೇಳಿದೆ.

ಕಾರ್ಟ್‌ರೈಟ್‌ರಿಗೆ ನನ್ನ ಈ ವಾದಕ್ಕೆ ಏನೂ ಹೇಳಲು ತೋಚಲಿಲ್ಲ. ನನ್ನ ಸಲಹೆಯನ್ನು ಜನರಲ್ ಸ್ಮಟ್ಸ್ ಗೆ ತಿಳಿಸುವುದಾಗಿ ಹೇಳಿದರು.

ನಾನು ನನ್ನ ಜೊತೆ ಬಂದಿಗಳ ಸಲಹೆ ಪಡೆದೆ. ಅವರಿಗೂ ಆ ಭಾಷೆ ಸರಿ ಬೀಳಲಿಲ್ಲ. ನನ್ನ ತಿದ್ದುಪಡಿಗೆ ಜನರಲ್ ಸ್ಮಟ್ಸ್ ಒಪ್ಪಿದರೆ ಸಂಧಾನಕ್ಕೆ ತಮ್ಮದೂ ಸಮ್ಮತಿ ಎಂದರು. ಕಾಯದೆಗೆ ಯುಕ್ತವೆನಿಸಿದ ಯಾವ ಒಪ್ಪಂದಕ್ಕಾದರೂ ಬರಬಹುದೆಂದು ಹೊರಗಿದ್ದ ಮುಖಂಡರು ಹೊಸದಾಗಿ ಬಂದವರೊಡನೆ ಹೇಳಿ ಕಳಿಸಿದ್ದರು. ಆ ತಿದ್ದುಪಡಿ ಮಾಡಿದ ಕರಡಿಗೆ ನನ್ನೊಂದಿಗೆ ಲೆಂಗ್. ಕ್ವಿನ್ ಮತ್ತು ತಂಬಿ ನಾಯ್ಡು ಸಹಿ ಮಾಡಿ ಅದನ್ನು ಕಾರ್ಟ್ ರೈಟ್ ರಿಗೆ ಕೊಟ್ಟೆವು.

ಎರಡನೆಯ ದಿನವೊ ಮೂರನೆಯ ದಿನವೊ, ೧೯೦೮ನೆ ಜನವರಿ ೩೦ನೇ ದಿನ ಜೋಹಾನ್ಸ್ ಬರ್ಗ್ ಪೋಲೀಸ್ ಸೂಪರಿಂಟೆಂಡೆಂಟ್ ವೆರ್ ನಾನ್ ಬಂದು ಜನರಲ್ ಸ್ಮಟ್ಸ್‌ರನ್ನು ನೋಡಲು ನನ್ನನ್ನು ಪ್ರೆಟೋರಿಯಾಕ್ಕೆ ಕರೆದುಕೊಂಡು ಹೋದರು. ಜನರಲ್ ಸ್ಮಟ್ಸ್ ನನ್ನೊಂದಿಗೆ ಬಹಳ ಹೊತ್ತು ಮಾತನಾಡಿದ್ದರು. ತಮಗೂ ಕಾರ್ಪ್ ರೈಟ್ ರಿಗೂ ನಡೆದ ಸಂಭಾಷಣೆಯೆಲ್ಲ ತಿಳಿಸಿದರು. ನನ್ನ ಬಂಧನವಾದ ಮೇಲೂ ದೃಢನಿಶ್ಚಯದಿಂದ ಇದ್ದ ಭಾರತೀಯರನ್ನು ಅಭಿನಂದಿಸಿದರು. "ನಿಮ್ಮ ಜನರ ಮೇಲೆ ಎಂದಿಗೂ ನಾನು

ದ್ವೇಷಭಾವನೆ ಇಡಲಾರೆ. ನಾನೂ ಒಬ್ಬ ಬ್ಯಾರಿಸ್ಟರ್, ನಿಮಗೆ ಗೊತ್ತೇ ಇದೆ. ನಾನು ಓದುತ್ತಿದ್ದಾಗ ನನ್ನ ಜೊತೆಯಲ್ಲಿ ಕೆಲವರು ಭಾರತೀಯರು ಅಭ್ಯಾಸ ಮಾಡುತ್ತಿದ್ದರು. ಆದರೂ ನಾನು ನನ್ನ ಕರ್ತವ್ಯಪಾಲನೆ ಮಾಡಬೇಕು. ಯೂರೋಪಿಯನ್‌ರಿಗೆ ಈ ಶಾಸನ ಬೇಕಾಗಿದೆ. ಇವರಲ್ಲಿ ಬಹುಜನ ಬೋಅರ್ ಗಳಲ್ಲವೆಂದೂ, ಇಂಗ್ಲಿಷ್‌ನವರೆಂದೂ ನಿಮಗೂ ತಿಳಿದಿದೆ. ಮಸೂದೆಯಲ್ಲಿ ನೀವು ಸೂಚಿಸಿರುವ ತಿದ್ದುಪಡಿ ನಾನೂ ಒಪ್ಪುತ್ತೇನೆ. ನಾನು ಬೋಥಾರನ್ನೂ ಕಂಡಿದ್ದೇನೆ; ನಿಮ್ಮಲ್ಲಿ ಬಹುಜನ ರಿಜಿಸ್ಟರ್ ಮಾಡಿಸಿಕೊಂಡ ಒಡನೆ ಏಷಿಯಾಟಿಕ್ ಶಾಸನವನ್ನು ರದ್ದುಗೊಳ್ಳಿಸುವುದಾಗಿ ನಾನು ಭರವಸೆ ಕೊಡುತ್ತೇನೆ. ಅಂತಹ ರಿಜಿಸ್ಟ್ರೇಷನ್ ಶಾಸನಬದ್ಧವಾಗಲು ಅವಶ್ಯವಾದ ಮಸೂದೆ ಸಿದ್ಧವಾದೊಡನೆ ನಿಮ್ಮ ವಿಮರ್ಶೆಗಾಗಿ ಒಂದು ಪ್ರತಿ ಕಳುಹಿಸಿಕೊಡುತ್ತೇನೆ. ಈ ತೊಂದರೆ ಪುನಃ ತಲೆದೋರುವುದು ನನಗೆ ಇಷ್ಟವಿಲ್ಲ. ನಿಮ್ಮ ಜನರ ಅಭಿಪ್ರಾಯಗಳಿಗೆ ನಾನು ಗೌರವ ಕೊಡುತೇನೆ" ಎಂದು ಹೇಳಿ ಜನರಲ್ ಸ್ಮಟ್ಸ್ ಎದ್ದರು.

"ನಾನು ಎಲ್ಲಿಗೆ ಹೋಗಲಿ? ಉಳಿದ ಬಂದಿಗಳ ವಿಚಾರವೇನು?" ನಾನು ಕೇಳಿದೆ.

ಜನರಲ್ ಸ್ಮಟ್ಸ್ ನಗುತ್ತ "ನಿಮಗೆ ಈಗ ಬಿಡುಗಡೆಯಾಗಿದೆ. ನಾಳೆ ಬೆಳಗಿನ ಜಾವ ಉಳಿದ ಬಂದಿಗಳನ್ನೂ ಬಿಡಲು ಸೆರೆಮನೆ ಅಧಿಕಾರಿಗಳಿಗೆ ಫೋನ್ ಮಾಡುತ್ತೇನೆ. ಆದರೆ ಸಭೆ ಪ್ರದರ್ಶನಗಳನ್ನು ಹೆಚ್ಚು ಏರ್ಪಟಿಸಬಾರದೆಂದು ನಿಮ್ಮನ್ನು ಕೇಳುತ್ತೇನೆ. ಇಲ್ಲವಾದರೆ ಸರಕಾರದ ಪರಿಸ್ಥಿತಿ ಬಹಳ ಬಿಕ್ಕಟ್ಟಿಗೆ ಬರುತ್ತದೆ" ಎಂದು ಹೇಳಿದರು.

"ಸಭೆ ಮಾಡಬೇಕೆಂಬ ಉದ್ದೇಶದಿಂದಲೇ ನಾವು ಸಭೆ ಮಾಡುವುದಿಲ್ಲ. ಆದರೆ ಈ ಒಪ್ಪಂದ ಹೇಗೆ ಆಯಿತು, ಅದರ ಸ್ವಭಾವ, ಗುಣಾವಗುಣ ಏನು, ಅದರಿಂದ ನಮ್ಮ ಜವಾಬ್ದಾರಿ ಯಾವ ರೀತಿ ಹೆಚ್ಚಿದೆ ಎಂದು ತಿಳಿಯಹೇಳಲು ನಾನು ಸಭೆ ಮಾಡಬೇಕು" ಎಂದು ತಿಳಿಸಿದೆ.

"ಅಂಥ ಸಭೆ ಎಷ್ಟು ಬೇಕಾದರೂ ನಡೆಸಿ. ಈ ವಿಷಯದಲ್ಲಿ ನನ್ನ ಅಭಿಪ್ರಾಯ ಏನೆಂದು ತಿಳಿದುಕೊಂಡರೆ ಸಾಕು" ಎಂದು ಜನರಲ್ ಸ್ಮಟ್ಸ್ ಹೇಳಿದರು.

ಆಗ ಸಂಜೆ ಏಳು ಗಂಟೆ. ನನ್ನ ಹತ್ತಿರ ಒಂದು ಕಾಸೂ ಇರಲಿಲ್ಲ. ಜನರಲ್ ಸ್ಮಟ್ಸ್‌ರ ಕಾರ್ಯದರ್ಶಿ ಜೋಹಾನ್ಸ್ ಬರ್ಗ್ ವರೆಗೆ ನನಗೆ ರೈಲು ಖರ್ಚು ಕೊಟ್ಟ ಪ್ರೆಟೋರಿಯಾದಲ್ಲಿ ನಿಂತು ಒಪ್ಪಂದದ ವಿಷಯವನ್ನು ಅಲ್ಲಿನ ಭಾರತೀಯರಿಗೆ ತಿಳಿಸುವುದು ಅನಾವಶ್ಯಕವಾಗಿತ್ತು. ನಮ್ಮ ಕೇಂದ್ರ ಸ್ಥಳವಾದ ಜೋಹಾನ್ಸ್ ಬರ್ಗ್‌ನಲ್ಲಿ ಮುಖಂಡರೆಲ್ಲ ಸೇರಿದ್ದರು. ಜೋಹಾನ್ಸ್ ಬರ್ಗಗೆ ಒಂದು ರೈಲು ಮಾತ್ರ ಇತ್ತು, ಆ ರೈಲು ಹತ್ತಲು ನನಗೆ ಸಾಧ್ಯವಾಯಿತು.

೨೨. ವಿರೋಧ ಮತ್ತು ಅತ್ಯಾಚಾರ

ನಾನು ಜೋಹಾನ್ಸ್ ಬರ್ಗ್ ಸೇರಿದಾಗ ಬೆಳಿಗಿನ ಒಂಭತ್ತು ಗಂಟೆ; ನೇರವಾಗಿ ಅಧ್ಯಕ್ಷ ಸೇಠ್ ಇಸಾಫ್ ಮಿಯ್ಯಾರ ಮನೆಗೆ ಹೋದೆ. ನನ್ನನ್ನು ಪ್ರೆಟೋರಿಯಾಕ್ಕೆ

ಕರೆದೊಯ್ದ ವಿಷಯ ತಿಳಿದಿದ್ದ ಕಾರಣ ನನ್ನ ಆಗಮನವನ್ನೇ ಎಲ್ಲರೂ ನಿರೀಕ್ಷಿಸುತ್ತಿದ್ದರು. ನನ್ನ ಹಿಂದೆ ಕಾವಲುಗಾರನಿಲ್ಲದ್ದನ್ನು ನೋಡಿ ಅವರಿಗೂ ಉಳಿದವರಿಗೂ ಬಹಳ ಆಶ್ಚರ್ಯವಾಯಿತು. ಕೂಡಲೆ ಆದಷ್ಟು ಜನಕ್ಕೆ ತಿಳಿಸಿ ಸಾಧ್ಯವಾಧ ಮಟ್ಟಿಗೆ ಸಭೆಯೊಂದನ್ನೂ ಸೇರಿಸಬೇಕೆಂದು ಸೂಚನೆಕೊಟ್ಟೆ. ಅಧ್ಯಕ್ಷರೂ ಇತರ ಸ್ನೇಹಿತರೂ ಈ ಸಲಹೆ ಒಪ್ಪಿದರು. ಭಾರತೀಯರೆಲ್ಲ ಅಲ್ಲಿಯೇ ಸುತ್ತಲೂ ವಾಸವಾಗಿದ್ದರಿಂದ ಸಭೆಯ ವಿಷಯ ತಿಳಿಸಲು ಕಷ್ಟವಾಗಲಿಲ್ಲ. ಅಧ್ಯಕ್ಷರ ಮನೆಯ ಪಕ್ಕದಲ್ಲಿಯೇ ಮಸೀದಿ. ನಮ್ಮ ಸಭೆಗಳೆಲ್ಲ ಸಾಮಾನ್ಯವಾಗಿ ಸೇರುತ್ತಿದ್ದುದು ಮಸೀದಿಗಳಲ್ಲಿ. ಆದ್ದರಿಮದ ಸಭೆಗೆ ಹೆಚ್ಚಿನ ಸಿದ್ಧತೆ ಏನೂ ಅವಶ್ಯವಿರಲಿಲ್ಲ. ವೇದಿಕೆಯ ಮೇಲೆ ಒಂದು ದೀಪವಿದ್ದರೆ ಸಾಕಾಗಿತ್ತು. ಸಭೆ ಸೇರಿದಾಗ ರಾತ್ರಿ ೧೧ ಅಥವಾ ೧೨ ಗಂಟೆ ಇರಬಹುದು. ಹೆಚ್ಚು ಪ್ರಕಟನೆ ಇಲ್ಲದೆ ಅವೇಳೆಯಲ್ಲಿ ಸಭೆ ಸೇರಿದ್ದರೂ ಸುಮಾರು ಒಂದು ಸಾವಿರ ಜನ ಸಭೆಗೆ ಬಂದಿದ್ದರು.

ಸಭೆ ಸೇರುವ ಮುಂಚೆಯೇ ಒಪ್ಪಂದದ ಷರತ್ತುಗಳನ್ನು ಪ್ರಮುಖರಿಗೆ ತಿಳಿಸಿದ್ದೆ. ಕೆಲವರು ವಿರೋಧಿಸಿದರು; ಆದರೆ ನಾನು ಹೇಳಿದ್ದನ್ನು ಕೇಳಿ ಪರಿಸ್ಥಿತಿ ಅರಿತುಕೊಂಡರು. "ಜನರಲ್ ಸ್ಮಟ್ಸ್ ವಚನಭ್ರಷ್ಟರಾದರೆ ಮಾಡುವದೇನು? ಆಚರಣೆಗೆ ಬಾರದಿದ್ದರೂ ಕರಾಳಶಾಸನ ಮುಸುಕಿನೊಳಗಿನ ದೊಣ್ಣೆಯಂತೆ ಸದಾ ನಮ್ಮ ತಲೆಯ ಮೇಲೆ ತೂಗಾಡುತ್ತ ಇರುತ್ತದೆ. ಈ ಮಧ್ಯೆ ನಾವೇ ಇಚ್ಚೆ ಪಟ್ಟು ರಜಿಸ್ಟರ್ ಮಾಡಿಸಿಕೊಂಡರೆ ನಮ್ಮ ಎದುರಾಳಿಯ ಬಲೆಗೆ ಬೀಳುವುದಲ್ಲದೆ ನಮಗಿದ್ದ ಒಂದೇ ಅಸ್ತ್ರ ಸಹ ಕೆಳಗಿರಿಸಿದಂತಾಗುತ್ತದೆ. ಒಪ್ಪಂದವಾಗಬೇಕಾದ್ದು ಅವಶ್ಯವಾದರೆ ಮೊದಲು ಕರಾಳಶಾಸನ ರದ್ದಾಗಿ ಅನಂತರ ನಾವು ರಜಿಸ್ಟರ್ ಮಾಡಿಸಬೇಕಾದ್ದು ನ್ಯಾಯ" ಎಂದು ಮೊದಲಾಗಿ ಎಲ್ಲರ ಮನಸ್ಸಿನಲ್ಲೂ ಸಂಶಯ ತೋರಿತು.

ಈ ವಾದಸರಣಿಯನ್ನು ನಾನು ಮೆಚ್ಚಿದೆ. ನಮ್ಮ ಜನರ ಸೂಕ್ಷ್ಮ ಬುದ್ದಿಗೆ, ವಾದ ಹೂಡಿದವರ ಉತ್ಕಟ ಧೈರ್ಯಕ್ಕೆ ಹೆಮ್ಮೆಗೊಂಡು, ಅವು ನಿಜವಾದ ಸತ್ಯಾಗ್ರಹಿಯ ಗುಣಗಳೆಂದು ಅರಿತುಕೊಂಡೆ. ಆ ವಾದಕ್ಕೆ ಈ ರೀತಿ ಉತ್ತರ ಹೇಳಿದೆ: "ನಿಮ್ಮ ವಾದ ಅತ್ಯುತ್ತಮವಾದದ್ದು; ಎಲ್ಲರೂ ಪರ್ಯಾಲೋಚಿಸಬೇಕು. ಶಾಸನ ರದ್ದಾದ ಮೇಲೆ ನಾವು ರಿಜಿಸ್ಟರ್ ಮಾಡಿಸುವಂತಾದರೆ ಅದಕ್ಕಿಂತಲೂ ಪ್ರಿಯವಾದದ್ದೇನಿದೆ ನಮಗೆ? ಆದರೆ ಅದು ಒಪ್ಪಂದವಲ್ಲ. ಒಪ್ಪದವೆಂದರೆ–ತತ್ವಕ್ಕೆ ಲೋಪ ಬಾರದಂತೆ ಉಳಿದೆಲ್ಲ ವಿಷಯಗಳಲ್ಲೂ ಎರಡು ಪಕ್ಷದವರೂ ಉದಾರ ಮನಸ್ಸು ತೋರಬೇಕಾದ್ದು ನ್ಯಾಯ. ಈ ಕರಾಳಶಾಸನಕ್ಕೆ ತಲೆಬಾಗಬಾರದೆಂಬುದು ನಮ್ಮ ತತ್ವ, ಅನ್ಯಥಾ ಸಾಧುವಾದ ಕೆಲಸವನ್ನು ಸಹ ಈ ಶಾಸನಕ್ಕನುಗುಣವಾಗಿ ಮಾಡೆಂದರೆ ನಾನು ವಿರೋಧಿಸುತ್ತೇನೆ; ಈ ತತ್ವವನ್ನು ಎಲ್ಲ ಸಂದರ್ಭದಲ್ಲೂ ನಡೆಸುವುದು ನಮ್ಮ ಆದ್ಯ ಕರ್ತವ್ಯ. ರಹದಾರಿ ಪಡೆಯದೆ ಟ್ರಾನ್ಸ್ ವಾಲ್ ದೇಶದೊಳಗೆ ಭಾರತೀಯರು ಯಾರೂ ಪ್ರವೇಶಿಸದಂತೆ ಟ್ರಾನ್ ವಾಲ್ ದೇಶದ ಭಾರತೀಯರೆಲ್ಲ ತಮ್ಮ ಪರಿಚಯಚಿಹ್ನೆಯಿರುವ ಇತರರಿಗೆ ವರ್ಗಾಯಿಸಲಾಗದ ರಹದಾರಿ ಪಡೆಯಬೇಕೆಂದೂ ಆ ಮೂಲಕ ಯೂರೋಪಿಯನರ

ಸಂಶಯ ನಿವಾರಣೆಮಾಡಿ ಅವರ ಭಯಕ್ಕೆ ಬುಡವಿಲ್ಲವೆಂದು ತೋರಿಸಬೇಕೆಂದೂ ಸರಕಾರದ ತತ್ವ; ಸರಕಾರವು ಈ ತತ್ವವನ್ನು ಬಿಡಲು ಸಾಧ್ಯವೂ ಇಲ್ಲ. ಇದುವರೆಗೆ ನಮ್ಮ ನಡತೆಯಿಂದ ಸರಕಾರದ ಈ ತತ್ವವನ್ನು ನಾವು ಒಪ್ಪಿದ್ದೇವೆ; ಆದ್ದರಿಂದ ಅದನ್ನು ವಿರೋಧಿಸಲು ಬೇರೆ ಯಾವುದಾದರೂ ಪ್ರಬಲ ಕಾರಣವಿಲ್ಲದೆ ನಮ್ಮ ನೀತಿ ಬದಲಾಯಿಸಲು ಸಾಧ್ಯವಿಲ್ಲ. ನಮ್ಮ ಹೋರಾಟ ಈ ತತ್ವಕ್ಕೆ ವಿರೋಧವಾಗಿಯಲ್ಲ, ಆದರೆ ಈ ಕರಾಳಶಾಸನದಿಂದ ನಮ್ಮ ಜನಾಂಗಕ್ಕೆ ಬಂದ ಅಪಮಾನವನ್ನು ತೊಡೆದುಹಾಕಬೇಕೆಂದು. ಆದ್ದರಿಂದ ಈಗ ನಮ್ಮಲ್ಲಿ ಉಂಟಾಗಿರುವ ನವಚೈತನ್ಯವನ್ನು ಬೇರೊಂದು ಲಾಭಸಂಪಾದನೆಗೆ ಉಪಯೋಗಿಸಿಕೊಳ್ಳ ಬಯಸಿದರೆ ಅದು ಸತ್ಯಾಗ್ರಹಿಗಳೆನಿಸುವ ನಮಗೆ ಸಲ್ಲದ ಮಾತು ಅದೇ ಕಾರಣ ಈಗಿನ ಒಪ್ಪಂದವನ್ನು ನಾವು ವಿರೋಧಿಸುವ ಹಾಗಿಲ್ಲ. ಶಾಸನ ರದ್ದಾಗುವವರೆಗೆ ನಮ್ಮ ಆಯುಧ ಕೆಳಗಿಡಬಾರದೆಂಬ ಸಂಶಯವನ್ನೂ ಸುಲಭವಾಗಿ ನಿವಾರಿಸಬಹುದು. ಸತ್ಯಾಗ್ರಹಿಗೆ ಭಯವೆಂಬುದಿಲ್ಲ. ಅಂತೆಯೇ ಎದುರಾಳಿಯನ್ನು ನಂಬಲು ಸತ್ಯಾಗ್ರಹಿ ಎಂದೂ ಹೆದರುವುದಿಲ್ಲ. ಇಪ್ಪತ್ತು ಬಾರಿ ಸುಳ್ಳು ಹೇಳಿದರೂ, ಮತ್ತೊಂದು ಬಾರಿಯೂ ಎದುರಾಳಿಯನ್ನು ನಂಬಲು ಸತ್ಯಾಗ್ರಹಿ ಸಿದ್ಧನಿರಬೇಕು. ಮಾನವನ ಸಹಜ ಸದ್ಗುಣದಲ್ಲಿ ದೃಢವಿಶ್ವಾಸ ಸತ್ಯಾಗ್ರಹಿಯ ಧರ್ಮದ ತಿರುಳು. ಅಲ್ಲದೆ ಸರಕಾರವನ್ನು ನಂಬಿ ಅವರ ಬಲೆಗೆ ಬೀಳುತ್ತೇವೆಂದು ಹೇಳಿದರೆ ನಾವಿನ್ನೂ ಸತ್ಯಾಗ್ರಹದ ಮೂಲ ತತ್ವವನ್ನೇ ಗ್ರಹಿಸಿಲ್ಲವೆಂದಂತೆ. ನಾವು ಸ್ವಂತ ಇಚ್ಛೆಯಿಂದ ರಿಜಿಸ್ಟರ್ ಮಾಡಿಸಿದ ಮೇಲೆ ಸರಕಾರ ತಾನು ಕೊಟ್ಟ ವಚನ ಮುರಿದು ಕರಾಳಶಾಸನವನ್ನು ರದ್ದುಗೊಳಿಸಲಿಲ್ಲವೆಂದೇ ಭಾವಿಸೋಣ. ಪುನಃ ಸತ್ಯಾಗ್ರಹ ಪ್ರಾರಂಭಿಸಲು ಆಗುವುದಿಲ್ಲವೇನು? ಕೇಳಿದಾಗ ನಮ್ಮ ರಿಜಿಸ್ಟ್ರೇಷನ್ ಸರ್ಟಿಫಿಕೆಟ್ ತೋರಿಸದೆ ಹೋದರಾಯಿತು, ರಿಜಿಸ್ಟ್ರೇಷನ್ ಮಾಡಿಸಿಯೂ ವ್ಯರ್ಥ; ಆಗ ಮೋಸದಿಂದ ಟ್ರಾನ್ಸ್ ವಾಲ್ ಗೆ ಬರುವ ಭಾರತೀಯರಿಗೂ ನಮಗೂ, ವ್ಯತ್ಯಾಸ ಕಂಡುಹಿಡಿಯುವದೇ ಸರಕಾರಕ್ಕೆ ಕಷ್ಟವಾಗುತ್ತದೆ. ಶಾಸನವಿರಲಿ ಇಲ್ಲದಿರಲಿ, ನಮ್ಮ ಸಹಕಾರವಿಲ್ಲದೆ ಸರಕಾರ ನಮ್ಮ ಮೇಲೆ ಯಾವ ನಿರ್ಬಂಧವನ್ನೂ ಹಾಕಲು ಸಾಧ್ಯವಿಲ್ಲ. ಶಾಸನ ಆಚರಣೆಯಲ್ಲಿದೆ ಎಂದರೆ ಶಾಸನವಿರೋಧವಾಗಿ ವರ್ತಿಸಿದವರು ಶಾಸನವಿಧಿಯಂತೆ ಶಿಕ್ಷೆಗೆ ಸಿದ್ಧವಿರಬೇಕೆಂದು ಅರ್ಥ; ಈ ಶಿಕ್ಷೆಯ ಭಯದಿಂದಲೇ ಜನರು ಶಾಸನಕ್ಕೆ ತಲೆಬಾಗುವುದು. ಆದರೆ ಸತ್ಯಾಗ್ರಹಿಗೂ ಇತರರಿಗೂ ವ್ಯತ್ಯಾಸವಿದೆ; ಸತ್ಯಾಗ್ರಹಿ ಶಿಕ್ಷೆಗೆ ಒಳಗಾಗುವುದು ಸ್ವಂತ ಇಚ್ಛೆಯಿಂದ, ಭಯದಿಂದ ಅಲ್ಲ; ಆ ರೀತಿ ಶಿಕ್ಷೆಗೆ ಗುರಿಯಾಗುವದು ಜನತೆಯ ಕಲ್ಯಾಣಸಾಧನೆಗೆ ಅವಶ್ಯವೆಂದು ನಂಬಿ. ರಜಿಸ್ಟ್ರೇಷನ್ ವಿಷಯದಲ್ಲಿ ಸಹ ನನ್ನ ಅಭಿಪ್ರಾಯ ಒಂದೇ; ಸರಕಾರ ಎಷ್ಟೇ ವಚನಭ್ರಷ್ಟವಾಗಲಿ, ನಾವು ಮಾತ್ರ ತಪ್ಪು ದಾರಿ ಹಿಡಿಯಬಾರದು. ಈ ಪರಿಸ್ಥಿತಿಗೆ ನಾವೇ ಕಾರಣ, ಬದಲಾಯಿಸಲು ಸಹ ನಾವೇ ಶಕ್ತರು. ಸತ್ಯಾಗ್ರಹ' ಅಸ್ತ್ರ ಕೈಯಲ್ಲಿರುವವರೆಗೂ ನಾವು ನಿರ್ಭೀತರು, ಸ್ವತಂತ್ರರು. ನಮ್ಮ ಜನಾಂಗದ ಈಗ

ಕಾಣುವ ಶಕ್ತಿ ಮುಂದೆ ಬರಲಾರದೆಂದು ಹೇಳಿದರೆ ಆತ ಸತ್ಯಾಗ್ರಹಿಯೇ ಅಲ್ಲ; ಸತ್ಯಾಗ್ರಹವನ್ನೂ ಅರ್ಥಮಾಡಿಕೊಂಡಿಲ್ಲ. ನಮ್ಮ ಜನರ ಈ ಶಕ್ತಿ ನಿಜಶಕ್ತಿಯೆಲ್ಲ ತಾತ್ಕಾಲಿಕ ಉನ್ಮಾದದ ನೊರೆ ಎಂದಂತಾಗುತ್ತದೆ. ನಮ್ಮ ಇಂದಿನ ಶಕ್ತಿಯೆಲ್ಲ ತಾತ್ಕಾಲಿಕವಾದರೆ ಗೆಲುವಿಗೆ ನಾವು ಯೋಗ್ಯರೂ ಅಲ್ಲ; ಒಂದು ವೇಳೆ ದೊರೆತರೂ ಅದನ್ನು ಬಹುಕಾಲ ಅನುಭವಿಸಲಾರೆವು. ಸರ್ಕಾರ ಕರಾಳಶಾಸನ ರದ್ದು ಮಾಡಿತು; ಆಮೇಲೆ ನಾವು ರಿಜಿಸ್ಟರ್ ಮಾಡಿಸಿಕೊಂಡೆವು ಎಂದೇ ಭಾವಿಸೋಣ. ಸರ್ಕಾರ ಪುನಃ ಅದೇ ಶಾಸನವನ್ನು ಶಾಸನ ಕಡತಕ್ಕೇರಿಸಿ ಭಾರತೀಯರನ್ನು ರಿಜಿಸ್ಟರ್ ಮಾಡಿಸಿಕೊಳ್ಳಲು ಒತ್ತಾಯಪಡಿಸಬಹುದು. ಸರಕಾರ ಆ ರೀತಿ ವರ್ತಿಸದಂತೆ ತಡೆವವರು ಯಾರು? ಈ ದಿನ ನಮ್ಮ ಶಕ್ತಿಯಲ್ಲಿ ನಮಗೆ ಅಪನಂಬಿಕೆಯಿದ್ದರೆ ಮುಂದೆಯೂ ಇದ್ದೇ ಇರುತ್ತದೆ. ಯಾವ ದೃಷ್ಟಿಯಿಂದ ನೋಡಿದರೂ ನಮ್ಮ ಜನರಿಗೆ ಈ ಒಪ್ಪಂದದಿಂದ ನಷ್ಟವಿಲ್ಲ; ಅಷ್ಟೇ ಅಲ್ಲ, ನಿಜವಾಗಿಯೂ ಲಾಭವಿದೆ. ನಮ್ಮ ನಮ್ರತೆ, ನ್ಯಾಯಪರತೆ ಕಂಡು ನಮ್ಮ ಎದುರಾಳಿಗಳು ಸಂಪೂರ್ಣ ವಿರೋಧ ತ್ಯಜಿಸದೆ ಹೋದರೂ ಅದರ ಉಲ್ಬಣವಾದರೂ ಕಡಮೆಯಾಗುತ್ತದೆ."

ಈ ರೀತಿ ನಮ್ಮಲ್ಲಿ ವಿರೋಧ ತೋರಿದ ಒಬ್ಬಿಬ್ಬರನ್ನು ಸಂಪೂರ್ಣವಾಗಿ ಸಮಾಧಾನಗೊಳಿಸಿದೆ. ಆದರೆ ಆ ಮಧ್ಯರಾತ್ರಿ ಆ ಸಭೆಯಲ್ಲಿ ನನಗೆ ಕಾದಿದ್ದ ಚಂಡ ಮಾರುತವನ್ನು ನಾನು ಕನಸಿನಲ್ಲೂ ನಿರೀಕ್ಷಿಸಿರಲಿಲ್ಲ. ಆ ಸಭೆಗೆ ಒಪ್ಪಂದದ ಷರತ್ತುಗಳೆಲ್ಲ ವಿವರಿಸಿ ಈ ರೀತಿ ಹೇಳಿದೆ:

"ಈ ಒಪ್ಪಂದದಿಂದ ನಮ್ಮ ಜನರ ಜವಾಬ್ದಾರಿ ಬಹಳ ಹೆಚ್ಚಿದೆ. ನಾವೆಲ್ಲ ಸ್ವಂತ ಇಚ್ಛೆಯಿಂದ ರಿಜಿಸ್ಟರ್ ಮಾಡಿಸಿ ಕಳ್ಳತನದಿಂದ, ಮೋಸದಿಂದ ಯಾವ ಭಾರತೀಯನಿಗೂ ಟ್ರಾನ್ಸ್ ವಾಲ್ ಒಳಗೆ ಬರಲು ಇಷ್ಟವಿಲ್ಲವೆಂದು ನಾವು ತೋರಿಸಬೇಕು. ಯಾರಾದರೂ ರಿಜಿಸ್ಟರ್ ಮಾಡಿಸಿಕೊಳ್ಳದಿದ್ದರೆ ಆತನಿಗೆ ಈಗಲೇ ಶಿಕ್ಷೆಯಾಗುವದಿಲ್ಲ, ನಿಜ; ಆದರೆ ನಮ್ಮ ಜನರಿಗೆ ಒಪ್ಪಂದ ಬೇಕಿಲ್ಲವೆಂದು ತೋರಿಸಿದಂತಾಗುತ್ತದೆ. ಒಪ್ಪಂದಕ್ಕೆ ನೀವೂ ಸಮ್ಮತಿಸಿದ್ದೀರೆಂದು ತೋರಲು ನೀವು ಕೈ ಎತ್ತಬೇಕು. ಅಷ್ಟೇ ಸಾಲದು; ರಿಜಿಸ್ಟ್ರೇಷನ್ ಏರ್ಪಾಡಾದೊಡನೆ ಕೈ ಎತ್ತಿದ ಪ್ರತಿಯೊಬ್ಬನೂ ರಿಜಿಸ್ಟರ್ ಮಾಡಿಸಿ ರಹದಾರಿ ಪಡೆಯಬೇಕು. ಈ ಹಿಂದೆ ರಿಜಿಸ್ಟರ್ ಮಾಡಿಸಬಾರದೆಂದು ಪ್ರಚಾರಮಾಡಲು ಮುಂದೆ ಬಂದಂತೆ ಈಗ ಏಕೆ ರಿಜಿಸ್ಟರ್ ಮಾಡಿಸಬೇಕೆಂದು ತಿಳಿಸಲು ಮುಂದೆ ಬರಬೇಕು. ಈ ರೀತಿ ನಮ್ಮ ಕೆಲಸವನ್ನು ಯೋಗ್ಯ ರೀತಿ ಪೂರೈಸಿದಾಗಲೇ ನಮ್ಮ ಗೆಲುವಿನ ನಿಜವಾದ ಫಲವನ್ನು ನಾವು ಅನುಭವಿಸುವುದು."

ಭಾಷಣ ಮುಗಿದೊಡನೆ ಪಠಾಣ ಸ್ನೇಹಿತನೊಬ್ಬ ಎದ್ದುನಿಂತು ಪ್ರಶ್ನೆಗಳ ಸುರಿಮಳೆ ಸುರಿಸಿದ.

"ಈ ಒಪ್ಪಂದದಂತೆ ನಮ್ಮ ಹತ್ತೂ ಬೆರಳಿನ ಗುರುತು ಕೊಡಬೇಕಾಗುವುದೇನು?"

'ಹೌದೆಂದರೆ ಹೌದು, ಅಲ್ಲೆಂದರೆ ಅಲ್ಲ. ನನ್ನ ಅಭಿಪ್ರಾಯ, ಯಾರೂ ಹಿಂಜರಿಯದೆ ಬೆರಳುಗುರುತು ಕೊಡಬೇಕು. ಯಾರಿಗಾದರೂ ಧಾರ್ಮಿಕ ವಿರೋಧವಿದ್ದರೆ, ತಮ್ಮ

ಗೌರವಕ್ಕೆ ಹಾನಿ ಎಂದರೆ ಅವರು ಕೊಡಬೇಕಾದ್ದಿಲ್ಲ."

"ನೀವು ಏನು ಮಾಡುತ್ತೀರಿ?"

"ನನ್ನ ಹತ್ತು ಬೆರಳು ಗುರುತನ್ನೂ ಕೊಡಲು ನಿರ್ಧರಿಸಿದ್ದೇನೆ. ಇತರರಿಗೆ ಬೆರಳುಗುರುತು ಕೊಡಿರೆಂದು ಹೇಳುವ ನಾನೇ ಕೊಡದಿರುವುದಾದರೂ ಹೇಗೆ?"

"ಈ ಬೆರಳುಗುರುತಿನ ವಿಷಯ ನೀವು ಲೇಖನ ಬರೆದದ್ದೂ ಬರೆದದ್ದೆ. ಅಪರಾಧಿಗಳು ಮಾತ್ರ ಬೆರಳುಗುರುತು ಕೊಡಬೇಕೆಂದು ನೀವೇ ನಮಗೆ ಹೇಳುತ್ತಿದ್ದಿರಿ. ನಮ್ಮ ಹೋರಾಟವೆಲ್ಲ ಈ ಬೆರಳುಗುರುತಿಗಾಗಿ ಎಂದು ಹೇಳಿದವರೂ ನೀವೇ. ಇದೆಲ್ಲ ನಿಮ್ಮ ಇಂದಿನ ನಡತೆಯೊಂದಿಗೆ ಸರಿಹೋಗುವುದೇ?"

"ಬೆರಳುಗುರುತಿನ ವಿಷಯ ನಾನು ಈ ಹಿಂದೆ ಬರೆದುದೆಲ್ಲವನ್ನೂ ಈಗಲೂ ಒಪ್ಪುತ್ತೇನೆ. ಹಿಂದೂಸ್ಥಾನದಲ್ಲಿ ತಪ್ಪಿತಸ್ಥರಿಂದ ಮಾತ್ರ ತೆಗೆದುಕೊಳ್ಳುತ್ತಾರೆಂದು ಈಗಲೂ ಒಪ್ಪುತ್ತೇನೆ. ಈ ಕರಾಳಶಾಸನ ವಿಧಿಯಂತೆ ಬೆರಳುಗುರುತು ಹಾಗಿರಲಿ. ರುಜುಮಾಡುವದು ಸಹ ಪಾಪಕಾರ್ಯವೆಂದು ಹಿಂದೆ ಹೇಳಿದಂತೆ ಈಗಲೂ ಹೇಳುತ್ತೇನೆ. ಈ ಬೆರಳುಗುರುತು ವಿಷಯ ಹೆಚ್ಚು ಒತ್ತಾಯಪಡಿಸಿದ್ದೇನೆಂದೂ, ಆ ರೀತಿ ಒತ್ತಿ ಹೇಳಿದ್ದು ಸರಿಯೆಂದೂ ಈಗಲೂ ಒಪ್ಪುತ್ತೇನೆ. ಏಕೆಂದರೆ ನಮಗೆ ಮೊದಲೇ ಗೊತ್ತಿದ್ದ ಅಲ್ಪಕಾರಣಗಳಿಗಿಂತ ಆ ನೂತನಪದ್ಧತಿಯಿಂದ ಶಾಸನದ ವಕ್ರತೆಯನ್ನು ನಮ್ಮ ಜನರಿಗೆ ಸುಲಭವಾಗಿ ಮನದಟ್ಟು ಮಾಡಿಕೊಟ್ಟು ಅವರನ್ನು ಜಾಗೃತಗೊಳಿಸುವುದು ಸುಲಭವೆನಿಸಿತು. ಪರಿಸ್ಥಿತಿಯನ್ನು ಸುಲಭವಾಗಿ ಗ್ರಹಿಸಿದರೆಂದು ನನಗೆ ಅನುಭವಕ್ಕೆ ಬಂದಿತು. ಆದರೆ ಈಗ ಪರಿಸ್ಥಿತಿ ಬದಲಾಯಿಸಿದೆ. ನಿನ್ನೆಯ ದಿನ ಯಾವುದು ಪ್ರಜಾದ್ರೋಹವಾಗಿತ್ತೋ ಈ ದಿನ ಅದು ಸಭ್ಯತೆಯ ಚಿಹ್ನೆಯೆಂದು ಧೈರ್ಯದಿಂದ ಹೇಳುತ್ತೇನೆ. ಬಲಾತ್ಕಾರದಿಂದ ನಮಸ್ಕರಿಸಲು ಒತ್ತಾಯಪಡಿಸಿದರೆ, ನಾನು ನಿನ್ನ ಬೆದರಿಕೆಗೆ ಮನಸೋತರೆ ಜನರೆದುರು, ನಿನ್ನೆದುರು ನನ್ನೆದುರು ನನ್ನ ಗೌರವವನ್ನು ನಾನು ಮಣ್ಣು ಗೂಡಿಸಿದಂತೆ. ಆದರೆ ನಾನೇ ಸ್ವಯಂ ಸಹೋದರಭಾವದಿಂದ, ಸದ್ಗೃಹಸ್ಥನಂತೆ ನಿನಗೆ ನಮಸ್ಕರಿಸಿದರೆ ಅದು ನನ್ನ ನಮ್ರತೆ, ಸೌಜನ್ಯತೆಯ ಸೂಚನೆ, ದೇವರಿದಿರು ಧರ್ಮಾಚರಣೆಯಂತೆ" ಎಂದೆ.

"ನೀನು ಜನರಲ್ ಸ್ಮಟ್ಸ್‌ರಿಂದ ೧೫,೦೦೦ ಪೌಂಟು ಲಂಚ ತೆಗೆದುಕೊಂಡು ನಮ್ಮನ್ನು ಮಾರಿಕೊಂಡು ನಮಗೆ ದ್ರೋಹ ಮಾಡಿದ್ದೀ– ಎಂದು ಕೇಳಿದ್ದೇವೆ. ನಾವು ಬೆರಳುಗುರುತು ಕೊಡುವುದಿಲ್ಲ; ಕೊಡಲು ಯಾರಿಗೂ ಅವಕಾಶ ಕೊಡುವುದಿಲ್ಲ. ರಿಜಿಸ್ಟರ್ ಮಾಡಿಸಿಕೊಳ್ಳಲು ಮುಂದೆ ಬರುವವರು ಯಾರೇ ಆಗಲಿ ಅವನನ್ನು ಕೊಲ್ಲುವುದೇ ನಿಜ ಎಂದು ಅಲ್ಲಾ ಎದುರಿಗೆ ಪ್ರಮಾಣ ಮಾಡುತ್ತೇನೆ" ಎಂದ ಪಠಾಣ.

"ನನ್ನ ಪಠಾಣ ಸ್ನೇಹಿತನ ಮನೋಭಾವ ನನಗೆ ಅರ್ಥವಾಗುತ್ತದೆ. ನಮ್ಮ ಜನರನ್ನು ಮಾರಿಕೊಂಡಿದ್ದೇನೆಂದು ಇತರರು ಯಾರೂ ಭಾವಿಸುವದಿಲ್ಲವೆಂದು ನಂಬಿದ್ದೇನೆ. ಯಾರು ಬೆರಳುಗುರುತು ಕೊಡಲಾಗದೆಂದು ವಚನ ತೊಟ್ಟಿದ್ದರೊ ಅವರಿಂದ

ತೆಗೆದುಕೊಳ್ಳುವುದಿಲ್ಲವೆಂದೂ ಅವರ ಮನೋಧರ್ಮಕ್ಕೆ ವಿರೋಧ ಬಾರದಂತೆ ರಹದಾರಿ ದೊರೆಯುವದೆಂದೂ ಭರವಸೆ ಕೊಡುತ್ತೇನೆ. ಬೆರಳುಗುರುತಿಲ್ಲದೆ ರಿಜಿಸ್ಟರ್ ಮಾಡಿಸಬೇಕೆನ್ನುವ ಯಾವ ಪಠಾಣನಿಗೇ ಆಗಲಿ, ಇತರರಿಗೇ ಆಗಲಿ ರಹದಾರಿ ಪಡೆಯಲು ನನ್ನ ಸಂಪೂರ್ಣ ಸಹಾಯವಿದೆ. ಆದರೆ ಸಾವಿನ ಬೆದರಿಕೆ ಮಾತ್ರ ಒಪ್ಪುವುದಿಲ್ಲ. ದೇವರ ಹೆಸರಿನಲ್ಲಿ ಒಬ್ಬ ಮನುಷ್ಯ ಇನ್ನೊಬ್ಬನ ಪ್ರಾಣ ತೆಗೆಯಲು ಪ್ರತಿಜ್ಞೆ ಮಾಡುವುದು ತಪ್ಪು ಎಂದು ನಾನು ನಂಬಿದ್ದೇನೆ. ಆದ್ದರಿಂದ ಈ ನನ್ನ ಸ್ನೇಹಿತ ಮಾಡಿದ ಪ್ರತಿಜ್ಞೆ ತಾತ್ಕಾಲಿಕ ಭಾವೋದ್ರೇಕ. ಆತ ತನ್ನ ಪ್ರತಿಜ್ಞೆಯಂತೆ ನಡೆಯಲಿ, ನಡೆಯದಿರಲಿ ಈ ಒಪ್ಪಂದದ ಜವಾಬ್ದಾರಿ ಹೊರಲು ಮುಖ್ಯ, ನಮ್ಮ ಜನರ ಸೇವಕ ಆದ್ದರಿಂದ ಬೆರಳುಗುರುತು ಕೊಡುವವರಿಗೆ ನಾನೇ ಮಾರ್ಗದರ್ಶಕನಾಗಿ ಮೊದಲಿಗನಾಗಬೇಕಾದ್ದು ನನ್ನ ಕರ್ತವ್ಯ; ಈ ಕರ್ತವ್ಯ ಪಾಲನಶಕ್ತಿಯನ್ನು ನನಗೆ ಅನುಗ್ರಹಿಸಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಎಲ್ಲ ಜೀವನದ ಅಂತ್ಯವೂ ಸಾವಿನಲ್ಲಿ. ಕಾಹಿಲೆ ಅಥವಾ ಬೇರೆ ಕಾರಣಗಳಿಂದ ಸಾಯದೆ ನನ್ನ ಸಹೋದರನೊಬ್ಬನ ಕೈಯಲ್ಲಿ ಮರಣ ಪಡೆದರೆ ನನಗೆ ವ್ಯಸನವೇನಲ್ಲ. ಅಂತಹ ಸಂದರ್ಭದಲ್ಲಿ ನನ್ನ ಅತ್ಯಾಚಾರಿಯ ಮೇಲೆ ಕೊಪತಾಪಗಳಿಲ್ಲದಂತಾದರೆ ಅದೇ ನನ್ನ ಅನಂತ ಕಲ್ಯಾಣಕ್ಕೆ ನೆರವು; ಅತ್ಯಾಚಾರಿಯು ಸಹ ಕ್ರಮೇಣ ನಾನು ಪೂರ್ಣ ನಿರಪರಾಧಿ ಎಂದು ಅರಿತುಕೊಳ್ಳುತ್ತಾನೆ."

ಈ ಪ್ರಶ್ನೆ ಕೇಳಿದ ಕಾರಣ ತಿಳಿಸಬೇಕಾದ್ದು ಅವಶ್ಯಕ. ಈ ಕರಾಳಶಾಸನಕ್ಕೆ ತಲೆಬಾಗಿದವರ ಮೇಲೆ ದ್ವೇಷವೇನೂ ಇಲ್ಲದೆಹೋದರೂ, ಸಾರ್ವಜನಿಕ ಸಭೆಗಳಲ್ಲೂ ಮತ್ತು 'ಇಂಡಿಯನ್ ಓಪಿನಿಯನ್' ನಲ್ಲೂ ಅವರ ನಡತೆಯನ್ನು ಸ್ಪಷ್ಟವಾಗಿ ತೀವ್ರವಾಗಿ ಖಂಡಿಸಿದ್ದೆವು. ಆದ್ದರಿಂದ ಅವರ ಜೀವನ ಸುಖಮಯವಾಗಿರಲಿಲ್ಲ. ಬಹುಜನರು ಧೈರ್ಯದಿಂದ ಎದೆಗೊಟ್ಟು ನಿಂತು ಸರಕಾರವೇ ಸಂಧಾನಕ್ಕೆ ಬರುವಷ್ಟು ಧೈರ್ಯ ತೋರಿಸುತ್ತಾರೆಂದು ನಂಬಿರಲಿಲ್ಲ. ಆದರೆ ೧೫೦ ಜನ ಸತ್ಯಾಗ್ರಹಿಗಳು ಸೆರೆಮನೆ ಸೇರಿ, ಸಂಧಾನಪ್ರಯತ್ನ ನಡೆಸುವುದಾಗಿ ತಿಳಿಸಿದಾಗ ಈ ದ್ರೋಹಿಗಳ ಸಹನೆ ಮೀರಿತು. ಸಂಧಾನವಾಗಬಾರದೆಂಬವರೂ, ಆದರೂ ಅದನ್ನು ಮುರಿಯಬೇಕೆನ್ನುವವರೂ ಸಹ ಅವರಲ್ಲಿದ್ದರು.

ಟ್ರಾನ್ಸ್ ವಾಲ್ ನಲ್ಲಿ ವಾಸವಾಗಿದ್ದ ಪಠಾಣರ ಸಂಖ್ಯೆ ಅತ್ಯಲ್ಪ; ಸುಮಾರು ೫೦ ಜನ. ಕೆಲವರು ಬೋಅರ್ ಯುದ್ಧಕಾಲದಲ್ಲಿ ಸೈನಿಕರಾಗಿ ಬಂದಿದ್ದರು; ಯೂರೋಪಿಯನ್, ಭಾರತೀಯ ಸೈನಿಕರಂತೆ ಅವರೂ ಅಲ್ಲಿ ನೆಲಸಿದ್ದರು. ಕೆಲವರು ನನ್ನ ಕಕ್ಷಿಗಾರರು, ಇನ್ನಿತರ ಕಾರಣಗಳಿಂದಲೂ ಪರಿಚಯಸ್ಥರು. ಪಠಾಣರು ಸರಳ ಸ್ವಭಾವದ ಭೋಳೆ ಪ್ರಕೃತಿಯ ಮನುಷ್ಯರು. ಸ್ವಭಾವತಃ ಧೈರ್ಯಶಾಲಿಗಳು. ಸಾಯಿಸುವುದೂ, ಸಾವನ್ನು ಅಪ್ಪುವುದೂ ಅವರಿಗೆ ಸರ್ವಸಾಮಾನ್ಯ. ಯಾರ ಮೇಲಾದರೂ ಅವರಿಗೆ ಕೋಪ ಬಂದರೆ ಆತನನ್ನು ಸದೆಬಡಿಯುವದಲ್ಲದೆ ಅನೇಕ ವೇಳೆ ಪ್ರಾಣ ಸಹ ತೆಗೆದುಬಿಡುತ್ತಾರೆ. ಈ ವಿಷಯದಲ್ಲಿ ಮೇಲು ಕೀಳೆಂಬ ಭಾವನೆ ಸ್ವಲ್ಪವೂ ಅವರಲ್ಲಿ ಇಲ್ಲ. ರಕ್ತ ಪಾಲುಮಾಡಿಕೊಂಡು ಒಡಹುಟ್ಟಿದ ಸಹೋದರನಿಗೂ ಒಂದೇ ಮಣೆ.

ಟ್ರಾನ್ಸ್ ವಾಲ್ ನಲ್ಲಿ ಅವರ ಸಂಖ್ಯೆ ಅಲ್ಪವಾದರೂ ವ್ಯಾಜ್ಯ ಬಂದೊಡನೆ ಅವರೊಳಗೆ ದೊಡ್ಡ ಯುದ್ಧವೇ. ಅನೇಕ ವೇಳೆ ನಾನೇ ಮಧ್ಯಸ್ಥಿಕೆ ಮಾಡಿ ಜಗಳ ತೀರಿಸುತ್ತಿದ್ದೆ. ತನ್ನ ಎದುರಾಳಿ ದ್ರೋಹಮಾಡಿದ್ದಾನೆ ಅನಿಸಿದೊಡನೆ ಪಠಾಣನ ಕೋಪಕ್ಕೆ ಮಿತಿಯೇ ಇಲ್ಲ. ವೈಯಕ್ತಿಕ ಹಿಂಸೆಯಿಂದಲೇ ನ್ಯಾಯ ಸ್ಥಾಪನೆಯಾಗಬೇಕು. ಈ ಪಠಾಣರು ಸತ್ಯಾಗ್ರಹದಲ್ಲಿ ಸಂಪೂರ್ಣ ಭಾಗವಹಿಸಿದರು; ಯಾರೂ ಕರಾಳಶಾಸನಕ್ಕೆ ತಲೆ ಬಾಗಿರಲಿಲ್ಲ. ಅವರನ್ನು ಅಡ್ಡ ದಾರಿಗೆಳೆಯುವದು ಸುಲಭವಾಗಿತ್ತು. ಬೆರಳು ಗುರುತು ವಿಷಯ ಹೇಳಿ ಅವರ ಮನಸ್ಸು ಕದಡಿ ಉದ್ರೇಕಿಸುವದು ಸುಲಭವಾಗಿತ್ತು. 'ಲಂಚ ತೆಗೆದುಕೊಳ್ಳದೆ ಇದ್ದರೆ ಬೆರಳುಗುರುತು ಕೊಡಬೇಕೆಂದು ನಾನು ಪ್ರೋತ್ಸಾಹಿಸುವದಾದರೂ ಹೇಗೆ' ಎಂಬ ಒಂದು ಸಲಹೆಯ ಸಾಕು, ಅವರ ಮನಸ್ಸಿನಲ್ಲಿ ವಿಷಬೀಜ ಬಿತ್ತಲಿಕ್ಕೆ.

ಇದೂ ಅಲ್ಲದೆ ರಹದಾರಿ ಇಲ್ಲದೆ, ಮರೆಮಾಚಿ ಟ್ರಾನ್ಸ್ ವಾಲ್ ಪ್ರವೇಶ ಮಾಡಿದವರ ಸುಳ್ಳು ರಹದಾರಿಯ ಮೂಲಕ ಮೋಸದಿಂದ ಭಾರತೀಯರನ್ನು ತರುವವರ ಪಂಗಡ ಒಂದು ಟ್ರಾನ್ಸ್ ವಾಲ್‌ನಲ್ಲಿತ್ತು. ಸಂಧಾನ ತಮ್ಮ ಹಿತಕ್ಕೆ ಧಕ್ಕೆ ತರುವುದೆಂದು ಇವರಿಗೂ ಮನಗಂಡಿತು. ಹೋರಾಟ ನಡೆಯುತ್ತಿರುವವರೆಗೂ ಯಾರು ರಹದಾರಿ ತೋರಿಸಬೇಕಾಗಿರಲಿಲ್ಲ. ಆದ್ದರಿಂದ ಈ ಜನರಿಗೆ ತಮ್ಮ ದುರ್ವ್ಯಾಪಾರ ಮುಂದುವರಿಸಲು ಅನುಕೂಲವಾಯಿತಲ್ಲದೆ ಹೋರಾಟ ನಡೆದ ಕಾಲದಲ್ಲಿ ಸೆರೆಮನೆ ತಪ್ಪಿಸಿಕೊಳ್ಳುವುದೂ ಸುಲಭವಾಗಿತ್ತು. ಹೋರಾಟ ಎಷ್ಟು ದಿನ ನಡೆದರೆ ಅವರಿಗೆ ಅಷ್ಟು ಅನುಕೂಲ. ಆದ್ದರಿಂದ ಈ ಗುಂಪಿನವರೇ ಪಠಾಣರಿಗೆ ಚಿತಾವಣೆ ಮಾಡಿದ್ದರೂ ಮಾಡಿರಬಹುದು. ಪಠಾಣರು ಇದ್ದಕ್ಕಿದ್ದಂತೆ ಹೇಗೆ ಉದ್ರಿಕ್ತರಾದರೆಂದು ವಾಚಕರಿಗೆ ತಿಳಿಯುತ್ತದೆ.

ಪಠಾಣನ ಪ್ರಶ್ನೆ ಸಭೆಯ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ. ಒಪ್ಪಂದದ ಪರ ತಮ್ಮ ಅಭಿಪ್ರಾಯ ತಿಳಿಸಬೇಕೆಂದು ಸಭೆಯನ್ನು ಕೇಳಿದ್ದೆ. ಅಧ್ಯಕ್ಷರೂ ಇತರ ಮುಖಂಡರೂ ದೃಢನಿಶ್ಚಯಮಾಡಿದ್ದರು. ಪಠಾಣನೊಡನೆ ಆದ ವಾಗ್ವಾದದ ನಂತರ ಒಪ್ಪಂದದ ಷರತ್ತು ವಿವರಿಸಿ, ಒಪ್ಪಂದದಂತೆ ನಡೆಯಬೇಕಾದ ಅವಶ್ಯಕತೆಯನ್ನು ವಿಶದಗೊಳಿಸಿ ಅಧ್ಯಕ್ಷರು ಭಾಷಣಮಾಡಿದರು. ಸಭೆಯ ಅಭಿಪ್ರಾಯ ತೆಗೆದುಕೊಂಡಾಗ ಒಬ್ಬಿಬ್ಬರು ಪಠಾಣರ ವಿನಾ ಸಭೆ ಒಮ್ಮತದಿಂದ ಒಪ್ಪಂದಕ್ಕೆ ಮನ್ನಣೆ ಕೊಟ್ಟಿತು.

ನಾನು ಮನೆ ಸೇರಿದಾಗ ಬೆಳಿಗ್ಗೆ ೨–೩ ಗಂಟೆ. ಬೇಗ ಎದ್ದು ಸೆರೆಮನೆಗೆ ಹೋಗಿ ಉಳಿದವರನ್ನು ಬಿಡುಗಡೆ ಮಾಡಿಸಬೇಕಾಗಿದ್ದುದರಿಂದ ನಿದ್ರೆ ಬರುವಂತಿರಲಿಲ್ಲ. ಸೆರೆಮನೆಗೆ ಹೋದಾಗ ಬೆಳಿಗ್ಗೆ ೭ ಗಂಟೆ. ಸೂಪರಿಂಟೆಂಡೆಂಟ್‌ಗೆ ಪೋನ್ ಮೂಲಕ ಸುದ್ದಿ ಮುಟ್ಟಿತು; ನನಗಾಗಿ ಕಾದಿದ್ದರು. ಒಂದು ಗಂಟೆಯೊಳಗೇ ಎಲ್ಲ ಸತ್ಯಾಗ್ರಹಿಗಳ ಬಿಡುಗಡೆಯಾಯಿತು. ಅಧ್ಯಕ್ಷರೂ ಇತರ ಭಾರತೀಯರೂ ಅವರನ್ನು ಎದುರುಗೊಂಡು ಸಭೆ ಸೇರುವ ಸ್ಥಳಕ್ಕೆ ಹೋಗಿ ಇನ್ನೊಂದು ಸಭೆ ನಡೆಸಿದೆವು. ಆ ದಿನವೂ ಅನಂತರ ಎರಡು ಮೂರು ದಿನವೂ ಹಬ್ಬದ ದಿನಗಳಂತೆ ಒಪ್ಪಂದದ ವಿಚಾರ ಜನರಿಗೆ ತಿಳಿಸುವುದರಲ್ಲಿ ಕಳೆದೆವು. ದಿನ ಕಳೆದಂತೆಲ್ಲ ಒಂದು ಕಡೆ ಒಪ್ಪಂದದ ವಿಧಿಗಳು ಸ್ಪಷ್ಟಗೊಂಡಂತೆ ಇನ್ನೊಂದು ಕಡೆ ಪರಸ್ಪರ ಒಡಕು ಹೆಚ್ಚಲಾರಂಭಿಸಿದವು. ಒಡಕುಗಳ

ಕಾರಣವನ್ನು ಆಗಲೇ ಚರ್ಚೆ ಮಾಡಿದ್ದೇವೆ. ಅಲ್ಲದೆ ನಾವು ಜನರಲ್ ಸ್ಮಟ್ಸ್ ಗೆ ಬರೆದ ಕಾಗದವನ್ನೂ ಅಪಾರ್ಥಮಾಡಬಹುದಾಗಿತ್ತು. ಹೋರಾಟ ನಡೆಯುತ್ತಿದ್ದಾಗ ಒದಗಿದ ತೊಂದರೆಗಳಿಗಿಂತ ಸಭೆಯಲ್ಲಿ ಕೊಟ್ಟ ತೊಂದರೆ, ವಿವಿಧ ವಿರೋಧ ಭಾವನೆ ಎದುರಿಸುವುದು ಕಷ್ಟವಾಯಿತು. ಚಳುವಳಿಯ ದಿನಗಳಲ್ಲಿ ನಮಗೊದಗಿದ ತೊಂದರೆ ವಿರೋಧಿಗಳೊಡನೆ ಸಂಬಂಧದ ಪ್ರಶ್ನೆ ಮಾತ್ರ. ಆಗ ನಮ್ಮ ಅಂತಃಕಲಹ, ಪರಸ್ಪರ ವೈಷಮ್ಯ ಸಂಪೂರ್ಣ ಮರೆತುಹೋಗುತ್ತಿದ್ದವು. ನಮ್ಮೆಲ್ಲರ ಅಪಾಯದ ಎದುರಿನಲ್ಲಿ ಗಣನೆಗೆ ಬರುತ್ತಿರಲಿಲ್ಲ. ಆದರೆ ಹೋರಾಟ ಮುಗಿದೊಡನೆ ಅಂತಃಕಲಹ ಪುನಃ ಕಳೆಗೂಡುತ್ತವೆ. ಎದುರಾಳಿಯೊಂದಿಗೆ ಸ್ನೇಹಭಾವದಿಂದ ಸಂಧಾನ ಮಾಡಿಕೊಂಡರೆ ಸಂಧಾನವಿಧಿಗಳಲ್ಲಿ ತಪ್ಪು ಹುಡುಕುವುದು ಅತಿ ಸುಲಭ, ಜನಪ್ರಿಯವೂ ಹೌದು. ಪ್ರಜಾಸತ್ತೆಯ ಸಂಸ್ಥೆಗಳಲ್ಲಿ ದೊಡ್ಡವರಾಗಲಿ ಸಣ್ಣವರಾಗಲಿ ಎಲ್ಲರ ಪ್ರಶ್ನೆಗೂ ಉತ್ತರಕೊಟ್ಟು ಸಮಾಧಾನ ಮಾಡುವುದು ಅತ್ಯವಶ್ಯಕ. ಪರಸ್ಪರ ಭಿನ್ನಾಭಿಪ್ರಾಯ, ತಿಕ್ಕಾಟಗಳನ್ನು ಸರಿದೂಗಿಸುವುದರಲ್ಲಿ ಬರುವ ಅನುಭವದಿಂದ ಕಲಿಯಬೇಕಾದ ಪಾಠಗಳನ್ನು ಕೆಲವರು ಎದುರಾಳಿಯೊಡನೆ ಹೊರಾಡುವಾಗ ಸಹ ಕಲಿಯುವುದಿಲ್ಲ. ಶತ್ರುವನ್ನು ಎದುರಿಸಿದಾಗ ಒಂದು ಅಪೂರ್ವ ಉತ್ಸಾಹ, ಉನ್ಮಾದ ಇರುತ್ತದೆ. ಆದರೆ ಸ್ನೇಹಭಾವದಲ್ಲಿ ಪರಸ್ಪರ ಭಿನ್ನಾಭಿಪ್ರಾಯ ಬಹು ವಿರಳ; ಅದು ಹುಟ್ಟಿದಾಗ ಬಹು ವ್ಯಸನಾಗುತ್ತದೆ. ನಿಜವಾಗಿ ಮನುಷ್ಯನ ಸತ್ವ ಪರೀಕ್ಷೆ ಇಂತಹ ಸಂದರ್ಭಗಳಲ್ಲೆ. ಸಾಮಾನ್ಯವಾಗಿ ಎಲ್ಲ ಸಂದರ್ಭಗಳಲ್ಲೂ ಅದೇ ನನ್ನ ಅನುಭವ. ಈ ವಿಷಮ ಸನ್ನಿವೇಶಗಳನ್ನೂ ಎದುರಿಸಿದಾಗಲೇ ದೈವಿಕ ವಿಷಯಗಳಲ್ಲಿ ನನಗೆ ಹೆಚ್ಚು ಅನುಭವ ದೊರೆತಿದೆ. ಚಳವಳಿ ನಡೆಯುವಾಗ ಅರ್ಥ ತಿಳಿಯದ ಅನೇಕರು, ಒಪ್ಪಂದ ಮಾಡಿಕೊಂಡಾಗಲೂ, ಅನಂತರವೂ ಅದರ ಅರ್ಥ ತಿಳಿದುಕೊಂಡರು. ಹೆಚ್ಚು ವಿರೋಧಿಸಿದವರು ಪಠಾನರು ಮಾತ್ರ; ಆ ಸೋಂಕು ಬೇರೆ ಯಾರಲ್ಲೂ ಹರಡಲಿಲ್ಲ.

ನಾವೇ ಒಪ್ಪಿ ಮಾಡಿಕೊಂಡ ಒಪ್ಪಂದದ ಪ್ರಕಾರ ರಹದಾರಿ ಕೊಡಲು ಏಷ್ಯನ್ ರ ರಜಿಸ್ಟ್ರೇಷನ್ ಅಧಿಕಾರಿ ಕಚೇರಿ ಸಿದ್ಧವಾಯಿತು. ರಹದಾರಿ ಪತ್ರದ ನಮೂನೆ ಸತ್ಯಾಗ್ರಹಿಗಳ ಸಲಹೆಯಂತೆ ಸಂಪೂರ್ಣ ಬದಲಾವಣೆಯಾಗಿತ್ತು.

೧೯೦೮ ಫೆಬ್ರವರಿ ೧೦ ರ ಬೆಳಿಗ್ಗೆ ನಮ್ಮಲ್ಲಿ ಕೆಲವರು ರಹದಾರಿ ಪಡೆಯಲು ಹೊರಡಲನುವಾದೆವು. ಈ ರಿಜಿಸ್ಟ್ರೇಷನ್ ಕೆಲಸವನ್ನು ಅದಷ್ಟು ಜಾಗ್ರತೆ ಮುಗಿಸುವ ಅಗತ್ಯವನ್ನು ಎಲ್ಲರಿಗೂ ತಿಳಿಸಿದ್ದೆವು. ಅವಮಾನವಾದೀತೆಂಬ ಸಂಕೋಚ ಕಳೆಯಲಿಕ್ಕೂ, ಅಧಿಕಾರಿಗಳು ಗೌರವದಿಂದ ವರ್ತಿಸುತ್ತಾರೋ ಇಲ್ಲವೋ ನೋಡಲಿಕ್ಕೂ, ಸಾಮಾನ್ಯವಾಗಿ ಇತರ ವ್ಯವಸ್ಥೆ ಪರಿಶೀಲಿಸಲಿಕ್ಕೂ, ಮುಖಂಡರೆಲ್ಲ ಮೊದಲನೆ ದಿನವೇ ರಹದಾರಿ ಪಡೆಯಲು ಹೊರಡಬೇಕೆಂದು ತೀರ್ಮಾನಿಸಿದ್ದೆವು.

ನನ್ನ ಕಚೇರಿ ಸೇರಿದಾಗ–ಅದೇ ಸತ್ಯಾಗ್ರಹ ಸಮಿತಿ ಕಚೇರಿಯೂ ಆಗಿತ್ತು–ಮೀರ್ ಅಲಮ್‌ನನ್ನು, ಆತನ ಸ್ನೇಹಿತರನ್ನೂ ಹೊರಬಾಗಿಲಲ್ಲಿ ಕಂಡೆ. ಮೀರ್ ಆಲಮ್ ನನ್ನ ಹಳೆ ಕಕ್ಷಿಗಾರ, ಎಲ್ಲ ಸಂದರ್ಭಗಳಲ್ಲೂ ನನ್ನ ಸಲಹೆ ಪಡೆಯುತ್ತಿದ್ದ.

ಅನೇಕ ಪಠಾಣರು ಕೂಲಿಗಳನ್ನಿಟ್ಟು ಹುಲ್ಲು, ನಾರಿನ ಚಾಪೆ ಹೆಣೆಸಿ ಮಾರಿ ಒಳ್ಳೆ ಲಾಭ ಗಳಿಸುತ್ತಿದ್ದರು. ಮೀರ್ ಆಲಂಗೂ ಅದೇ ಕೆಲಸ. ಆರು ಅಡಿ ಎತ್ತರದ ಅಜಾನುಬಾಹು. ನನ್ನ ಕಚೇರಿಯ ಒಳಗೆ ಬರದೆ ಹೊರಗೆ ನಿಂತದ್ದು ಇದೇ ಮೊದಲು ಬಾರಿ. ನನ್ನನ್ನು ನೋಡಿಯೂ ನಮಸ್ಕರಿಸದಿದ್ದುದೂ ಇದೇ ಮೊದಲು ಬಾರಿ. ನಾನೇ ನಮಸ್ಕಾರ ಮಾಡಿದ್ದಕ್ಕೆ ಮರಳಿ ನಮಸ್ಕಾರ ಮಾಡಿದ. ಎಂದಿನಂತೆ "ಕ್ಷೇಮವೇ" ಎಂದು ಕೇಳಿದೆ. "ಕ್ಷೇಮ" ಎಂದು ಹೇಳಿದಂತೆ ನನಗೆ ಜ್ಞಾಪಕ; ಆದರೆ ಆತನ ಮುಖದಲ್ಲಿ ಸದಾ ಹೊಮ್ಮುತ್ತಿದ್ದ ನಗೆದಿಂಗಳು ಎಲ್ಲಿಯೋ ಮಾಯವಾಗಿತ್ತು. ಕೋಪೋದ್ರಿಕ್ತವಾದ ಆ ಕಣ್ಣು ನೋಡಿ ಮನಸ್ಸಿನಲ್ಲೇ ದಿಗಿಲುಪಟ್ಟೆ. ಏನೋ ಪ್ರಮಾದ ನಡೆಯಬಹುದು ಅನಿಸಿತು. ಕಚೇರಿಯೊಳಗೆ ಹೋದೆ. ಅಧ್ಯಕ್ಷ ಈಸೂಫ್ ಮಿಯ್ಯ, ಇತರ ಸ್ನೇಹಿತರು ಬಂದೊಡನೆ ಏಷಿಯಾಟಿಕ್ ಕಚೇರಿಗೆ ಹೊರಟೆವು. ಮೀರ್ ಅಲಂ, ಅವನ ಸ್ನೇಹಿತರು ನಮ್ಮನ್ನೇ ಹಿಂಬಾಲಿಸಿದರು.

ನನ್ನ ಕಚೇರಿಯಿಂದ ಸುಮಾರು ಒಂದು ಮೈಲಿಯ ಒಳಗೆ ಫಾನ್ ಬ್ರಾಂಡಿಸ್ ಚೌಕದಲ್ಲಿ ರಿಜಿಸ್ಟ್ರೇಷನ್ ಕಚೇರಿಯಿತ್ತು. ದಾರಿಯಲ್ಲ ರಾಜಮಾರ್ಗದಲ್ಲೇ ಅಲ್ಲಿಗೆ ಹೋಗಬೇಕಾಗಿತ್ತು. ಇನ್ನು ಮೂರು ನಿಮಿಷದಲ್ಲಿ ಸೇರಬಹುದು ಎನ್ನುವ ಹೊತ್ತಿಗೆ ಆರ್ನಾಟ್ ಮತ್ತು ಗಿಬ್ಸನ್ ಅಂಗಡಿ ಎದುರು ಫಾನ್ ಬ್ರಾಂಡಿಸ್ ಬೀದಿಯಲ್ಲಿ ಮೀರ್ ಆಲಂ ನನ್ನನ್ನು ಎದುರಿಸಿ, "ಎಲ್ಲಿಗೆ ಹೋಗುತ್ತೀ?" ಎಂದು ಕೇಳಿದ.

"ಬೆರಳುಗುರುತು ಕೊಟ್ಟು ರಿಜಿಸ್ಟ್ರೇಷನ್ ರಹದಾರಿ ಪಡೆಯಲು ಹೋಗುತ್ತಿದ್ದೇನೆ. ನೀನೂ ನನ್ನೊಂದಿಗೆ ಬಂದರೆ ನಿನಗೆ ಎರಡು ಹೆಬ್ಬೆಟ್ಟು ಗುರುತುಗಳಿಂದಲೇ ರಹದಾರಿ ಕೊಡಿಸಿ ಆಮೇಲೆ ನನ್ನ ಗುರುತುಕೊಟ್ಟು ರಹದಾರಿ ಪಡೆಯುತ್ತೇನೆ" ಎಂದೆ.

ಈ ಕೊನೆಯ ಮಾತು ಪೂರೈಸುವುದರೊಳಗೇ ಹಿಂದಿನಿಂದ ನನ್ನ ತಲೆಯ ಮೇಲೆ ಬಲವಾದ ಪೆಟ್ಟು ಬಿತ್ತು. "ಹೇರಾಮ" ಎನ್ನುತ್ತ ಮೂರ್ಛೆ ಬಿದ್ದುದು ನನಗೆ ಗೊತ್ತು; ಆಮೇಲೆ ಏನಾಯಿತೆಂಬುದು ತಿಳಿಯಲಿಲ್ಲ. ಮೀರ್ ಆಲಂ, ಆತನ ಸ್ನೇಹಿತರೂ ನನ್ನನ್ನು ಒದ್ದು ಹೊಡೆದರಂತೆ. ಇಸೂಫ್ ಮಿಯ್ಯಾ, ತಂಬಿ ನಾಯುಡು ಬಿಡಿಸಲು ಬಂದ ಕಾರಣ ಅವರಿಗೂ ಏಟು ಬಿದ್ದವು. ಗದ್ದಲ ಕೇಳಿ ಕೆಲವರು ಯೂರೋಪಿಯನ್ ರು ಅವರನ್ನು ಹಿಡಿದರು. ಪೋಲೀಸ್ ನವರು ಬಂದು ಅವರನ್ನು ತಮ್ಮ ವಶಪಡಿಸಿಕೊಂಡರು ನನ್ನನ್ನು ಜೆ.ಸಿ.ಗಿಬ್ಸನ್‌ರ ಕೋಣೆಗೆ ಕರೆದುಕೊಂಡು ಹೋದರು. ನನಗೆ ಎಚ್ಚರ ಬಂದಾಗ ಡೊಕ್ ನನ್ನ ಬಳಿ ಬಾಗಿ,

"ಈಗ ಹೇಗಿದ್ದೀರಿ?" ಎಂದು ಕೇಳಿದರು.

"ಈಗ ಸರಿಯಾಗಿದ್ದೇನೆ. ನನ್ನ ಹಲ್ಲುಗಳೂ, ಪಕ್ಕೆಯ ಎಲುಬುಗಳೂ ನೋಯುತ್ತಿವೆ. ಮೀರ್ ಆಲಂ ಎಲ್ಲಿದ್ದಾನೆ?" ಎಂದು ಕೇಳಿದೆ.

"ಆತನೂ ಆತನ ಸ್ನೇಹಿತರೂ ಬಂಧಿತರಾಗಿದ್ದರೆ."

"ಅವರ ಬಿಡುಗಡೆಯಾಗಬೇಕು."

'ಅದೆಲ್ಲ ಸರಿ. ತುಟಿ ಕೆನ್ನೆ ಹರಿದು ಗಾಯವಾಗಿ, ಈಗ ನೀವು ಪರಕೀಯರ

ಕಚೇರಿಯಲ್ಲಿದ್ದೀರಿ. ಪೋಲೀಸರು ನಿಮ್ಮನ್ನು ಆಸ್ಪತ್ರೆಗೆ ಕರೆದೊಯ್ಯಲು ಸಿದ್ಧರಾಗಿದ್ದಾರೆ. ಆದರೆ ನನ್ನ ಮನೆಗೆ ಬಂದರೆ ನನ್ನ ಹೆಂಡತಿಯೂ ನಾನೂ ನಿಮಗೆ ನಮ್ಮ ಕೈಲಾದ ಶುಶ್ರೂಷೆ ಮಾಡುತ್ತೇವೆ."

"ಹಾಗೇ ಆಗಲಿ, ನಿಮ್ಮ ಮನೆಗೇ ಕರೆದುಕೊಂಡು ಹೋಗಿರಿ. ಅವರ ಸಹಾಯಕ್ಕೆ ಪೋಲೀಸ್‌ರಿಗೆ ನನ್ನ ಕೃತಜ್ಞತೆ ಹೇಳಿ ನಿಮ್ಮ ಮನೆಗೆ ಹೋಗಲು ಇಷ್ಟಪಡುತ್ತೇನೆಂದು ತಿಳಿಸಿರಿ."

ಇಷ್ಟು ಹೊತ್ತಿಗೆ ಏಷಿಯಾಟಿಕ್ ರಿಜಿಸ್ಟ್ರೇಷನ್ ಅಧಿಕಾರಿಯಾದ ಚಾಮ್ನೆ ಅಲ್ಲಿಗೆ ಬಂದರು. ಸ್ಮಿಟ್ ರಸ್ತೆಯಲ್ಲಿದ್ದ ಈ ಪಾದ್ರಿಯ ಮನೆಗೆ ನನ್ನನ್ನು ಒಂದು ಗಾಡಿಯಲ್ಲಿ ಕರೆದೊಯ್ದರು. ಒಬ್ಬ ವೈದ್ಯರೂ ಬಂದರು. ಈ ಮಧ್ಯೆ ಚಾಮ್ನೆಯನ್ನು ಕರೆದು, "ನಿಮ್ಮ ಕಚೇರಿಗೆ ಬಂದು, ಹತ್ತು ಬೆರಳು ಗುರುತು ಕೊಟ್ಟು ಮೊದಲನೇ ರಹದಾರಿ ನಾನೇ ಪಡೆಯಬೇಕೆಂದು ಇದ್ದೆ; ಅದರೆ ದೈವೇಚ್ಛೆ ಬೇರೆಯಾಯಿತು. ಆದರೆ ಕಾಗದಪತ್ರ ಎಲ್ಲ ಇಲ್ಲಿಗೆ ತಂದು ರಿಜಿಸ್ಟರ್ ಮಾಡಿಸಿಕೊಳ್ಳಲು ನನಗೆ ಅನುಕೂಲ ಮಾಡಿಕೊಡಿರಿ. ನನಗೆ ಮುಂಚೆ ಬೇರೆ ಯಾರೂ ರಜಿಸ್ಟರ್ ಮಾಡಿಸಿಕೊಳ್ಳಲು ಅವಕಾಶ ಕೊಡಬೇಡಿರಿ."

"ಈಗ ಅದಕ್ಕೇನು ಅವಸರ? ಸದ್ಯದಲ್ಲೇ ವೈದ್ಯರು ಬರುತ್ತಾರೆ. ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿರಿ, ಎಲ್ಲವೂ ಸರಿ ಹೋಗುತ್ತದೆ. ನಿಮ್ಮ ಹೆಸರನ್ನೇ ಮೊದಲು ಬಿಟ್ಟು ಉಳಿದವರಿಗೆ ರಹದಾರಿ ಕೊಡುತ್ತೇನೆ." ಎಂದರು.

"ಅದಾಗದು. ದೇವರ ದಯೆ ಇದ್ದರೆ, ಜೀವದಿಂದಿದ್ದರೆ ನಾನೇ ಮೊದಲು ರಹದಾರಿ ಪಡೆಯಬೇಕೆಂದು ನನ್ನ ಸಂಕಲ್ಪ. ಆದ್ದರಿಂದ ಈಗಲೇ ಇಲ್ಲಿಗೆ ಅವಶ್ಯಕಾಗದಪತ್ರ ತರಬೇಕೆಂದು ನನ್ನ ಇಷ್ಟ."

ಇದಾದ ಮೇಲೆ ಚಾಮ್ನೆ ಹೋಗಿ ಕಾಗದ ಪತ್ರ ತಂದರು.

ಎರಡನೆಯಾದಾಗಿ ನನ್ನ ಮೇಲಿನ ಆತ್ಯಾಚಾರಕ್ಕೆ ಮೀರ್ ಆಲಂ, ಆತನ ಸ್ನೇಹಿತರು ಕಾರಣರಲ್ಲರೆಂದೂ, ಏನೇ ಆಗಲಿ ಅವರನ್ನು ವಿಚಾರಣೆಗೆ ಗುರಿಪಡಿಸಲು ಇಷ್ಟವಿಲ್ಲವೆಂದೂ, ನನಗಾಗಿ ಅವರನ್ನು ಬಿಡುಗಡೆ ಮಾಡಬೇಕೆಂದೂ ಅಟಾರ್ನಿ ಜನರಲ್‌ಗೆ ಒಂದು ಪತ್ರ ಬರೆದೆ. ಅಪರಾಧಿಗಳ ಶಿಕ್ಷೆ ವಿಚಾರದಲ್ಲಿ ನನ್ನ ಅಭಿಪ್ರಾಯ ಏನೇ ಇರಲಿ, ಅದು ದಕ್ಷಿಣ ಆಫ್ರಿಕಕ್ಕೆ ಅನ್ವಯಿಸುವದಿಲ್ಲವೆಂದು ಜೋಹಾನ್ಸ್ ಬರ್ಗ್‌ನ ಯೂರೋಪಿಯನ್‌ರು ಅಟಾರ್ನಿ ಜನರಲ್‌ಗೆ ಒತ್ತಾಯಮಾಡಿ ಪತ್ರ ಬರೆದರು. "ಗಾಂಧೀ ಕ್ರಮ ನಡೆಸದೆ ಇರಬಹುದು. ಆದರೆ ಅತ್ಯಾಚಾರ ನಡೆದದ್ದು ಖಾಸಗಿ ಸ್ಥಳದಲ್ಲಲ್ಲ; ಬಹಿರಂಗ ರಸ್ತೆಯಲ್ಲಿ. ಆದ್ದರಿಂದ ಅಪರಾಧವು ಸಾರ್ವಜನಿಕರಿಗೆ ಸಂಬಂಧಪಟ್ಟಿದ್ದು. ಅನೇಕ ಇಂಗ್ಲಿಷರು ಸಾಕ್ಷ್ಯ ಕೊಡಲು ಸಿದ್ಧರಿದ್ದಾರೆ; ಆದ್ದರಿಂದ ಅಪರಾಧಿಗಳ ವಿಚಾರಣೆಯಾಗಬೇಕು" ಎಂದು. ಇದಾದ ಮೇಲೆ ಅಟ್ನಾರಿ ಜನರಲ್, ಮೀರ್ ಆಲಂನನ್ನೂ ಆತನ ಸ್ನೇಹಿತನೊಬ್ಬನನ್ನೂ ಸೆರೆಹಿಡಿದು ವಿಚಾರಣೆಗೆ ಗುರಿಪಡಿಸಿದರು. ಅವರಿಗೆ ಮೂರು ತಿಂಗಳ ಕಠಿಣ ಶಿಕ್ಷೆಯಾಯಿತು. ನನ್ನನ್ನು ಮಾತ್ರ ಸಾಕ್ಷಿಯಾಗಿ ಕರೆಯಲಿಲ್ಲ.

ಇನ್ನು ನನ್ನ ಆರೈಕೆ ವಿಷಯ. ಚಾಮ್ನೆ ಕಾಗದಪತ್ರ ತರಲು ಹೋದ ಕಾಲದಲ್ಲಿ ಡಾಕ್ಟರ್ ತ್ವಯ್‌ಟೆ ಬಂದು ಪರೀಕ್ಷಿಸಿ ನನ್ನ ಕೆನ್ನೆ, ಮೇಲ್ತುಟಿಯ ಗಾಯಗಳನ್ನು ಹೊಲಿದರು. ಹೊಲಿಗೆ ತೆಗೆಯುವವರೆಗೂ ನಾನು ಮಾತನಾಡ ಬಾರದಾಗಿ ಅಪ್ಪಣೆ ಮಾಡಿದರು. ದ್ರವಾಹಾರ ಮಾತ್ರ, ಪ್ರಮಾದವೇನೂ ಇಲ್ಲ. ಒಂದು ವಾರದಲ್ಲಿ ಹಾಸಿಗೆ ಬಿಟ್ಟೆದ್ದು ಸಾಮಾನ್ಯ ಕೆಲಸ ಮಾಡಬಹುದು. ಆದರೆ ಎರಡು ತಿಂಗಳ ಕಾಲ ಹೆಚ್ಚಿನ ಶ್ರಮ ತೆಗೆದುಕೊಳ್ಳಬಾರದು ಎಂದು ಹೇಳಿ ಹೋದರು.

ಮಾತನಾಡಲು ಸಾಧ್ಯವಿಲ್ಲದಿದ್ದರೂ ನನ್ನ ಕೈ ಕಟ್ಟಿರಲಿಲ್ಲ. ಅಧ್ಯಕ್ಷರ ಮೂಲಕ ನಮ್ಮ ಜನರಿಗೆ ಒಂದು ಹೇಳಿಕೆ ಕೊಟ್ಟು ಪ್ರಕಟಣೆ ಕಳುಹಿಸಿದೆ.

"ಡೋಕ್ ದಂಪತಿಗಳ ಆರೈಕೆಯಲ್ಲಿ ಸುಖವಾಗಿದ್ದೇನೆ. ಸದ್ಯದಲ್ಲೆ ನನ್ನ ಕೆಲಸಕ್ಕೆ ಹಿಂದಿರುಗುತ್ತೇನೆ.

"ಈ ಕೃತ್ಯ ಮಾಡಿದವರು ತಿಳಿವಳಿಕೆ ಇಲ್ಲದೆ ಮಾಡಿದರು. ನಾನು ಹಿಡಿದ ಮಾರ್ಗ ತಪ್ಪೆಂದು ಭಾವಿಸಿದರು; ತಮಗೆ ತಿಳಿದ ರೀತಿ ಸೇಡು ತೀರಿಸಿಕೊಂಡರು. ಆದ್ದರಿಂದ ಅವರ ಮೇಲೆ ಕೈಮಾಡಲಾಗದು.

"ಮುಸಲ್ಮಾನರು ಈ ಕೃತ್ಯ ನಡೆಸಿದರೆಂದು ಹಿಂದೂಗಳು ಕೋಪಗೊಳ್ಳಬಾರದು. ಕೋಪಗೊಂಡರೆ ದೇವರಿದಿರು, ಪ್ರಪಂಚದಿದಿರು ಅನ್ಯಾಯ ಮಾಡಿದಂತೆ. ಈಗ ಚೆಲ್ಲಿದ ರಕ್ತದಿಂದ ಎರಡು ಕೋಮಿನ ಸೌಹಾರ್ದ ಬೆಳೆಯಲೆಂದೇ ನನ್ನ ಪ್ರಾರ್ಥನೆ. ನನ್ನ ಪ್ರಾರ್ಥನೆಯನ್ನು ದೇವರು ಲಾಲಿಸಲಿ.

"ಅತ್ಯಾಚಾರವಿರಲಿ ಇಲ್ಲದಿರಲಿ, ನನ್ನ ಸಲಹೆಯಲ್ಲಿ ವ್ಯತ್ಯಾಸವೇನೂ ಆಗಿಲ್ಲ. ಏಷ್ಯನರೆಲ್ಲ ತಮ್ಮ ಬೆರಳುಗುರುತು ಕೊಡಬೇಕು ಯಾರಿಗೆ ಧಾರ್ಮಿಕ ವಿರೋಧವಿದೆಯೋ ಅಂಥವರಿಗೆ ಸರಕಾರ ವಿನಾಯತಿ ಮಾಡುತ್ತದೆ. ಇದಕ್ಕೂ ಹೆಚ್ಚು ಕೇಳುವುದು ಹುಡುಗಾಟ.

"ಸತ್ಯಾಗ್ರಹವನ್ನು ಅರ್ಥ ಮಾಡಿಕೊಂಡವರು ದೇವರ ವಿನಾ ಬೇರೆ ಯಾರಿಗೂ ಭಯಪಡಬೇಕಾಗಿಲ್ಲ. ಭಾರತೀಯರಲ್ಲಿ ತಿಳಿದವರು ಯಾರೂ ಹೇಡಿತನದಿಂದ ಕರ್ತವ್ಯಪರಾಙ್ಮುಖರಾಗರೆಂದು ನಂಬಿದ್ದೇನೆ. ನಾವೇ ಸ್ವೇಚ್ಛೆಯಿಂದ ರಿಜಿಸ್ಟರ್ ಮಾಡಿಸಿಕೊಂಡರೆ ಕರಾಳಶಾಸನ ರದ್ದುಗೊಳಿಸುವದಾಗಿ ಭರವಸೆ ಬಂದಿರುವದರಿಂದ ಸರಕಾರಕ್ಕೂ, ವಲಸೆರಾಷ್ಟ್ರಕ್ಕೂ ಸಹಾಯಮಾಡಬೇಕಾದ್ದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ.'

ಚಾಮ್ನೆ ಕಾಗದ ಪತ್ರ ತಂದರು. ನನ್ನ ಬೆರಳುಗುರುತು ಕೊಟ್ಟೆ. ಆದರೆ ಬಹಳ ನೋವಾಯಿತು. ಚಾಮ್ನೆಯ ಕಣ್ಣು ನೀರು ತುಂಬಿದ್ದು ಕಂಡೆ. ಹಿಂದೆ ಅನೇಕ ವೇಳೆ ಆತನನ್ನು ಬಹು ಕಟುವಾಗಿ ಟೀಕೆ ಮಾಡಿದ್ದೆ. ಸನ್ನಿವೇಶ ವ್ಯತ್ಯಾಸದಿಂದ ಮನುಷ್ಯನ ಹೃದಯ ಹೇಗೆ ಪರಿವರ್ತನವಾಗುವದೆಂದು ಇದರಿಂದ ಗೊತ್ತಾಗುತ್ತದೆ.

ಇದೆಲ್ಲ ಕೆಲವು ನಿಮಿಷಕ್ಕಿಂತ ಹೆಚ್ಚು ಕಾಲ ಹಿಡಿಯಲಿಲ್ಲ. ಡೋಕ್ ರೂ ಅವರ ಪತ್ನಿಯೂ ನನಗೆ ಸಂಪೂರ್ಣ ವಿಶ್ರಾಂತಿ ದೊರೆಯಲೆಂದು ಕಾತುರರಾಗಿದ್ದರು; ಆದ್ದರಿಂದ ಗಾಯಗೊಂಡ ಮರುಕ್ಷಣದಲ್ಲೆ ನನ್ನ ಮನೋವ್ಯಾಕುಲತೆಗೆ ಬಹಳ ವ್ಯಸನಗೊಂಡರು.

ನನ್ನ ಚಟುವಟಿಕೆಯಿಂದ ನನ್ನ ಆರೋಗ್ಯ ಕಟ್ಟೀತೆಂದು ಭೀತಿಗೊಂಡರು. ಸಂಜ್ಞೆಯಿಂದಲೇ ನನ್ನ ಹಾಸಿಗೆ ಸುತ್ತುಮುತ್ತಲಿದ್ದ ಜನರನ್ನು ಹೊರಗೆ ಕಳಿಸಿ ನಾನು ಬರೆವಣಿಗೆ ಮುಂತಾದ ಕೆಲಸ ಏನೂ ಮಾಡಬಾರದಾಗಿ ತಿಳಿಸಿದರು. ಮಲಗುವ ಮುಂಚೆ, ಸುಖನಿದ್ರೆ ಬರುವಂತೆ ಆಗಿನ್ನೂ ಚಿಕ್ಕಹುಡುಗಿಯಾಗಿದ್ದ ಅವರ ಮಗಳು ಆಲಿವ್ ನನ್ನ ಮೆಚ್ಚಿನ ಇಂಗ್ಲಿಷ್ ಗೀತೆ 'ಕರುಣಾಳೂ ಬೆಳಕೆ' ಹಾಡಬೇಕೆಂದು ಬರೆದು ಕೇಳಿದೆ. ಡೋಕ್ ರು ಸಂತೋಷಗೊಂಡು ಮುಗುಳುನಗೆಯಿಂದ ನನ್ನ ಬೇಡಿಕೆಗೆ ಒಪ್ಪಿದರು. ಸಂಜ್ಞೆಯಿಂದಲೇ ಮಗಳನ್ನು ಕರೆದು ಬಾಗಿಲಲ್ಲಿ ನಿಂತು ಮೆಲುದನಿಯಲ್ಲಿ ಆ ಗೀತೆ ಹಾಡಲು ತಿಳಿಸಿದರು. ಈಗ ಇದನ್ನು ಹೇಳಿ ಬರೆಯಿಸುವಾಗ ಸಹ ಆ ಚಿತ್ರ ನನ್ನ ಕಣ್ಣಿಗೆ ಕಟ್ಟಿದಂತಿದೆ. ಆಲಿವ್‌ಳ ಚಿಕ್ಕ ಮೆಲುದನಿ ಇನ್ನೂ ನನ್ನ ಕಿವಿಯಲ್ಲಿ ಗಾನಗೈಯುತ್ತಿದೆ.

ನನ್ನ ಕಥೆಗೆ ಅನವಶ್ಯವಾದ ಅನೇಕ ವಿಷಯ ಅಧ್ಯಾಯದಲ್ಲಿ ಸೇರಿಸಿರುವೆನೆಂದು ವಾಚಕರಿಗೆ ತಿಳಿದಂತೆ ನನಗೂ ತಿಳಿದಿದೆ. ಆದರೆ ಇನ್ನೊಂದು ಪವಿತ್ರ ಸ್ಮರಣೆ ಮಾಡದೆ ಈ ಅಧ್ಯಾಯ ಮುಗಿಸುವಂತಿಲ್ಲ. ಡೋಕ್ ಮನೆಯವರು ನಮಗೆ ಸಲ್ಲಿಸಿದ ಅಪಾರ ಸೇವೆಯನ್ನು ಬಣ್ಣಿಸುವದಾದರೂ ಎಂತು?

ಜೋಸೆಫ್ ಡೋಕ್‌ರಿಗೆ ೪೬ ವರ್ಷ. ಬ್ಯಾಪ್ಟಿಸ್ಟ್ ಪಾದ್ರಿ, ದಕ್ಷಿಣ ಆಫ್ರಿಕಕ್ಕೆ ಬರು ಮೊದಲು ನ್ಯೂಜೀಲೆಂಡ್ ನಲ್ಲಿ ಇದ್ದರು. ನನ್ನ ಮೇಲೆ ನಡೆದ ಅತ್ಯಾಚಾರಕ್ಕೆ ಸುಮಾರು ೬ ತಿಂಗಳ ಮುಂಚೆ ನನ್ನ ಕಚೇರಿಗೆ ಬಂದು ನನ್ನನ್ನು ನೋಡಬಯಸಿದರು. ಅವರ ಹೆಸರಿನ ಮುಂದೆ 'ಪೂಜ್ಯ' {Reverend} ಎಂಬ ಪದ ನೋಡಿ ಪ್ರಾಯಶಃ ಇತರ ಪಾದ್ರಿಗಳಂತೆ ನನ್ನನ್ನು ಕ್ರೈಸ್ತಮತಕ್ಕೆ ಸೇರಿಸಲೊ, ನಿಮ್ಮ ಹೋರಾಟ ಬಿಡಿರೆಂದು ಬುದ್ಧಿ ಹೇಳಲೊ, ಅಥವಾ ನಮ್ಮ ಹೋರಾಟದೊಂದಿಗೆ ಒಣ ಸಹಾನುಭೂತಿ ತೋರಲೊ ಬಂದಿರಬಹುದೆಂದು ಭಾವಿಸಿದೆ. ಡೋಕ್ ಒಳಗೆ ಬಂದು ಸ್ವಲ್ಪ ಮಾತನಾಡುವದರಲ್ಲೇ ಅವರ ವಿಷಯ ತಪ್ಪು ತಿಳಿದೆನೆಂದು ಮನನೊಂದು ಪಶ್ಚಾತ್ತಾಪಪಟ್ಟೆ. ವರ್ತಮಾನಪತ್ರಿಕೆಗಳಲ್ಲಿ ಬಂದ ನಮ್ಮ ಹೋರಾಟದ ವಿಷಯವೆಲ್ಲ ಆತನಿಗೆ ತಿಳಿದಿತ್ತು.

"ಈ ಹೋರಾಟದಲ್ಲಿ ನಾನು ನಿಮ್ಮ ಸ್ನೇಹಿತನೆಂದು ಭಾವಿಸಿರಿ. ನಿಮಗೆ ನನ್ನ ಕೈಲಾದ ಸಹಾಯ ಮಾಡಬೇಕಾದದ್ದು ನನ್ನ ಪವಿತ್ರ ಕರ್ತವ್ಯವೆಂದು ಮನಗಂಡಿದ್ದೇನೆ. ಏಸುವಿನ ಜೀವನದಿಂದ ನಾನೇನಾದರೂ ಪಾಠ ಕಲಿತಿದ್ದರೆ ಪರರ ಕಷ್ಟದಲ್ಲಿ ಭಾಗಿಯಾಗಿ ಆ ಕಷ್ಟದ ಹೊರೆ ಕಡಮೆ ಮಾಡಬೇಕೆಂಬುದೇ ಆ ಪಾಠ."

ಈ ರೀತಿ ನಮ್ಮ ಪರಸ್ಪರ ಪರಿಚಯವಾಯಿತು. ದಿನ ಕಳೆದಂತೆಲ್ಲ ನಮ್ಮ ಸ್ನೇಹವೂ, ಪರಸ್ಪರ ಪ್ರೇಮವೂ ಆಗಾಧವಾಯಿತು. ಡೋಕ್ ರ ಹೆಸರು ಈ ಗ್ರಂಥದಲ್ಲಿ ಅನೇಕ ಬಾರಿ ಬರುತ್ತದೆ. ಅವರು ನನಗೆ ಮಾಡಿದ ಅಪಾರ ಶುಶ್ರೂಷೆ, ತೋರಿದ ಅಗಾಧ ಪ್ರೇಮವನ್ನು ವರ್ಣಿಸುವ ಮೊದಲು ವಾಚಕರಿಗೆ ಅವರ ಪರಿಚಯ ಅವಶ್ಯವೆಂದು ತೋರಿ ಈ ಎರಡು ಮಾತು ಹೇಳಿದ್ದೇನೆ.

ಹಗಲೂ ರಾತ್ರಿ ಅವರಲ್ಲಿ ಯಾರಾದರೊಬ್ಬರು ನನ್ನ ಬಳಿ ಇದ್ದೇ ಇರುತ್ತಿದ್ದರು.

ನಾನು ಅವರ ಮನೆಯಲ್ಲಿರುವ ವರೆಗೂ ಅದೊಂದು ಯಾತ್ರಾಸ್ಥಳವಾಯಿತು. ನನ್ನ ದೇಹಸ್ಥಿತಿ ವಿಚಾರಿಸಲು ಎಲ್ಲ ಜಾತಿಯ ಭಾರತೀಯರೂ ಅಲ್ಲಿಗೆ ಬರುತ್ತಿದ್ದರು; ನನ್ನನ್ನು ನೋಡಬಹುದೆಂಬ ವೈದ್ಯರು ಅನುಮತಿಕೊಟ್ಟ ಮೇಲಂತೂ ಧೂಳುಮಯ ಬೂಟ್ಸುಗಾಲು, ಕೊಳಕು ಬಟ್ಟೆ, ಕೈ ಬುಟ್ಟಿಯ ಬೀದಿ ಮಾರಾಟಗಾರನಿಂದ ಮೊದಲುಗೊಂಡು ಟ್ರಾನ್ಸ್ ವಾಲ್ ಬ್ರಿಟಿಷ್ ಭಾರತೀಯ ಸಂಸ್ಥೆಯ ಅಧ್ಯಕ್ಷರವರೆಗೂ ಎಲ್ಲರನ್ನೂ ಡೋಕ್ ರು ಒಂದೇ ವಿನಯದಿಂದ ಎದುರುಗೊಳ್ಳುತ್ತಿದ್ದರು. ನಾನು ಅವರ ಮನೆಯಲ್ಲಿರುವವರೆಗೂ ಅವರ ಕಾಲವೆಲ್ಲ ನನ್ನ ಶುಶ್ರೂಷೆಯಲ್ಲಿ, ಇಲ್ಲವೆ ನನ್ನನ್ನು ಕಾಣಬರುವ ನೂರಾರು ಜನರನ್ನು ಸ್ವಾಗತಿಸುವುದರಲ್ಲಿ ಕಳೆಯುತ್ತಿತ್ತು. ರಾತ್ರಿ ವೇಳೆ ಸಹ ಡೋಕ್ ರು ಎರಡು ಮೂರು ಬಾರಿ ನನ್ನ ಕೋಣೆಯೊಳಗೆ ಇಣಿಕಿ ನೋಡುತ್ತ ಇದ್ದರು. ಅವರ ಮನೆಯಲ್ಲಿರುವರೆಗೂ ನಾನು ನನ್ನ ಮನೆಯಲ್ಲಿ ಇಲ್ಲವಲ್ಲ, ನನ್ನ ಆಪ್ತರು ಅನುಬಂಧಿಗಳಾಗಿದ್ದರೆ ಇನ್ನೂ ಹೆಚ್ಚು ಆರೈಕೆ ಮಾಡುತ್ತಿದ್ದರಲ್ಲ– ಎಂದು ಒಂದು ದಿನವಾದರೂ ನನಗೆ ಅನಿಸಲಿಲ್ಲ.

ಭಾರತೀಯರ ಹೋರಾಟಕ್ಕೆ ಬೆಂಬಲವಿತ್ತುದರಿಂದಲೂ ನನಗೆ ತಮ್ಮ ಮನೆಯಲ್ಲಿ ಆಶ್ರಯವಿತ್ತುದರಿಂದಲೂ ಡೊಕ್‌ರಿಗೆ ಏನೂ ನಷ್ಟವಾಗಲಿಲ್ಲವೆಂದು ಯಾರೂ ಭಾವಿಸಲಾಗದು. ಡೋಕ್‌ರು ಬ್ಯಾಪ್ಟಿಸ್ಟ್ ಚರ್ಚಿನ ಪಾದ್ರಿ, ಅವರ ಜೀವನೋಪಾಯ ಆ ಚರ್ಚಿಗೆ ಬರುವ ಯೂರೋಪಿಯನ್‌ರನ್ನು ಅವಲಂಬಿಸಿತ್ತು. ಇವರೆಲ್ಲರಿಗೂ ಒಂದೇ ಬಗೆಯ ಉದಾರ ಮನೋಭಾವವಿರಲಿಲ್ಲ. ಇತರ ಯೂರೋಪಿಯನ್‌ರಲ್ಲಿ ಸಾಮಾನ್ಯವಾಗಿದ್ದಂತೆ ಭಾರತೀಯ ದ್ವೇಷವು, ಇವರಲ್ಲೂ ಇತ್ತು. ಆದರೆ ಡೋಕ್ ರು ಅದಕ್ಕೆ ಹೆದರಲಿಲ್ಲ. ನಮ್ಮ ಪರಿಚಯದ ಪ್ರಾರಂಭದಲ್ಲಿಯೇ ಈ ವಿಷಯವನ್ನು ಅವರೊಡನೆ ಚರ್ಚಿಸಿದ್ದೆ. ಅವರು "ಯೇಸುವಿನ ಧರ್ಮ ಏನೆಂದು ತಿಳಿದಿದ್ದೀರಿ? ಯಾರ ಪ್ರೇಮ ವಿಶ್ವವ್ಯಾಪಿಯೊ, ಯಾರು ತನ್ನ ಧರ್ಮಕ್ಕಾಗಿ ಸಂತೋಷದಿಂದ ಶಿಲುಬೆ ಏರಿದನೊ ಆತನ ನಮ್ರ ಅನುಯಾಯಿ ನಾನು. ಯೂರೋಪಿಯನ್‌ರಿಗೆ ನಾನು. ಯುರೋಪಿಯನ್‌ರಿಗೆ ನಾನು ಕ್ರೈಸ್ತನ ನಿಜವಾದ ಶಿಷ್ಯನೆಂದು ತೋರಿಸಬೇಕಾದರೆ ನಾನು ನಿಮ್ಮ ಹೋರಾಟದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಬೇಕು. ಅದಕ್ಕಾಗಿ ನನಗೆ ಶಿಕ್ಷೆ ಮಾಡಲು ಯುರೋಪಿಯನ್‌ರು ಬಹಿಷ್ಕಾರ ಹಾಕುತ್ತಾರೆಂದು ಹೆದರಿದ್ದೀರಿ. ಒಂದು ವೇಳೆ ಆ ರೀತಿ ಬಹಿಷ್ಕರಿಸಿದರೂ ನಾನು ಅವರನ್ನು ದೂರುವದಿಲ್ಲ. ಅವರಿಂದಲೇ ನನ್ನ ಜೀವನ ನಡೆಯಬೇಕಾಗಿದ್ದರೂ, ನನ್ನ ಜೀವನಕ್ಕಾಗಿ ನಾನು ಮಾರುಹೋಗಿದ್ದೇನೆಂದಾಗಲಿ, ಅವರು ನನ್ನ ಹಿತಚಿಂತಕರೆಂದಾಗಲಿ ನೀವು ಭಾವಿಸಬಾರದು. ನನ್ನ ಹಿತಚಿಂತಕ ದೇವರೊಬ್ಬನೆ. ಅವರೆಲ್ಲ ದೇವರ ಕೈಗೊಂಬೆಗಳು. ಅವರಾರೂ ನನ್ನ ಧಾರ್ಮಿಕ ಸ್ವಾತಂತ್ರ್ಯಕ್ಕೆ ಅಡ್ಡಿ ಬರಬಾರದೆಂದು ನಾನು ಅವರೊಡನೆ ಸಂಬಂಧ ಬೆಳೆಸುವ ಮುಂಚೆಯೇ ಒಪ್ಪಂದ ಮಾಡಿಕೊಂಡಿದ್ದೇನೆ. ಆದ್ದರಿಂದ ನನ್ನ ವಿಷಯ ಚಿಂತೆ ಬಿಡಿರಿ. ಭಾರತೀಯರ ಮನ್ನಣೆಗಾಗಿ ನಾನು ಈ ಹೋರಾಟದಲ್ಲಿ ಭಾಗ ವಹಿಸುತ್ತಿಲ್ಲ; ನನ್ನ ಪವಿತ್ರ ಕರ್ತವ್ಯವೆಂದು ಇದನ್ನು ನನ್ನ ಮೇಲಧಿಕಾರಿಯೊಂದಿಗೆ

ಆಗಲೇ ಚರ್ಚೆ ಮಾಡಿದ್ದೇನೆ. ಭಾರತೀಯರೊಂದಿನ ನನ್ನ ನಡತೆ ಅವರಿಗೆ ಸರಿ ಬೀಳದೆ ಹೋದರೆ ನನನ್ನನ್ನು ಕೆಲಸದಿಂದ ನಿವೃತ್ತಿ ಮಾಡಿ ಬೇರೊಬ್ಬರನ್ನು ನಿಯಮಿಸಬೇಕೆಂದು ಸಹ ಸಲಹೆ ಕೊಟ್ಟೆ. ಆದರೆ ಆ ಆಲೋಚನೆ ಬೇಕಿಲ್ಲವೆಂದು ಅಷ್ಟೇ ಅಲ್ಲ, ಪ್ರೋತ್ಸಾಹ ಸಹ ಕೊಟ್ಟಿದ್ದಾರೆ. ಅಲ್ಲದೆ ಎಲ್ಲ ಯೂರೋಪಿಯನ್‌ರೂ ನಿಮ್ಮ ಜನರನ್ನು ದ್ವೇಷಿಸುತ್ತಾರೆಂದು ಭಾವಿಸಬಾರದು. ನಿಮ್ಮ ಕಷ್ಟಗಳಲ್ಲಿ ಮೌನದಿಂದ ಅಜ್ಞಾತರಾಗಿ ಸಹಾನುಭೂತಿ ತೋರುವವರನೇಕರಿದ್ದಾರೆ. ನಿಮಗೆ ತಿಳಿಯದು, ನನ್ನ ಸ್ಥಾನಗೌರವದಿಂದ ನಾನು ತಿಳಿದಿದ್ದೇನೆ." ಈ ವಿವರಣೆಯ ನಂತರ ಪುನಃ ಅವರಲ್ಲಿ ಈ ವಿಷಯ ಪ್ರಸ್ತಾಪಿಸಿರಲಿಲ್ಲ. ಸತ್ಯಾಗ್ರಹ ಚಳವಳಿ ಇನ್ನೂ ನಡೆಯುತ್ತಿದ್ದಾಗ, ಡೋಕ್‌ರು ತಮ್ಮ ಪವಿತ್ರಕಾರ್ಯ ನಡೆಸುತ್ತಿರುವಾಗಲೇ ರ್ಹೋಡೀಷಿಯಾದಲ್ಲಿ ಪರಂಧಾಮವನ್ನೈದಿದರು. ಆಗ ಬ್ಯಾಪ್ಟಿಸ್ಟ್‌ರು ಅವರ ದೇವಾಲಯದಲ್ಲಿ ಶೋಕಸಭೆ ಸೇರಿಸಿ ನನ್ನನ್ನೂ ಕಾಛಲಿಯಾ ಮುಂತಾದ ಭಾರತೀಯರನ್ನೂ ಆಹ್ವಾನಿಸಿದರು; ಚರಮಗೀತೆ ಹಾಡಲು ಸಹ ನನ್ನನ್ನು ಕೇಳಿದರು.

ಹತ್ತು ದಿನಗಳ ನಂತರ ನನಗೆ ಗುಣವಾಗಿ ಓಡಾಡಲು ಶಕ್ತಿ ಬಂದ ಮೇಲೆ ದೇವಸಮಾನರಾದ ಡೋಕ್ ದಂಪತಿಗಳ ಅಪ್ಪಣೆ ಪಡೆದೆ. ಆ ವಿಯೋಗವ್ಯಥೆ ಅವರಿಗೆ ಹೇಗೆ ದುಃಖಪೂರ್ಣವಾಗಿತೋ, ನನಗೂ ಅಷ್ಟೇ ದುಃಖದಾಯಕವಾಗಿತ್ತು.

೨೩. ಯೂರೋಪಿಯನ್ ಸಹಾಯ

ಭಾರತೀಯ ಹೋರಾಟದಲ್ಲಿ ಪ್ರತ್ಯಕ್ಷ ಸಹಾಯಮಾಡಿದ ಯೂರೋಪಿಯನ್ ಸದ್ಗೃಹಸ್ಥರು ಸಂಖ್ಯೆ ಹೆಚ್ಚಾಗಿರುವುದರಿಂದ ಈ ಕಥೆ ಮುಂದುವರಿದಂತೆ ಅವರು ಅಪರಿಚಿತರಾಗಿರದಂತೆ ಇಲ್ಲಿಯೇ ಅವರ ಪರಿಚಯಮಾಡಿಕೊಟ್ಟರೆ ಒಳ್ಳೆಯದು. ಜನರ ಗೌರವದ ಗುರುತೆಂದು, ಸೇವೆಯ ಪ್ರಮಾಣವೆಂದು ಈ ಹೆಸರನ್ನು ಕ್ರಮವಾಗಿ ಪೋಣಿಸಿಲ್ಲ. ನನಗೆ ಈ ಸ್ನೇಹಿತರ ಪರಿಚಯ ಆದಂತೆ ನಮ್ಮ ಹೋರಾಟದ ವಿವಿಧ ಶಾಖೆಗಳಲ್ಲಿ ಅವರು ಭಾರತೀಯರ ಸಹಾಯಕ್ಕೊದಗಿದಂತೆ ಕ್ರಮಾನುಗತ ತಿಳಿಸಿದ್ದೇನೆ.

ಇವರಲ್ಲಿ ಮೊದಲಿಗರೆಂದರೆ ಆಲ್ಬರ್ಟ್ ವೆಸ್ಟ್, ಹೋರಾಟಕ್ಕಿಂತ ಮೊದಲೇ ನಮ್ಮ ಜನರಿಗೆ ಇವರ ಪರಿಚಯವಾಗಿತ್ತು; ನನಗೆ ಇನ್ನೂ ಮೊದಲೇ ಪರಿಚಿತರಾಗಿದ್ದರು. ಜೋಹಾನ್ಸ್ ಬರ್ಗ್‌ನಲ್ಲಿ ನನ್ನ ಕಚೇರಿ ಆರಂಭಿಸಿದಾಗ ನನ್ನ ಹೆಂಡತಿ ಬಂದಿರಲಿಲ್ಲ. ೧೯೦೩ರಲ್ಲಿ ದಕ್ಷಿಣ ಆಫ್ರಿಕದಿಂದ ಒಂದು ಕೇಬಲ್ ಬಂದದ್ದೂ, ಒಂದು ವರ್ಷದ ಒಳಗೇ ಹಿಂದಿರುಗಬಹುದೆಂದು ಒಬ್ಬನೇ ಭಾರತಬಿಟ್ಟಿದ್ದೂ ವಾಚಕರಿಗೆ ನೆನಪಿರಬಹುದು ನಾನು ಜೋಜಾನ್ಸ್‌ಬರ್ಗ್‌ನಲ್ಲಿ ಪ್ರತಿನಿತ್ಯ ಊಟಕ್ಕೆ ಹೋಗುತ್ತಿದ್ದ ನಿರಾಮಿಷ ಹೋಟಲಿಗೆ ವೆಸ್ಟ್ ಬರುತ್ತಿದ್ದ. ಆಗ ಪರಿಚಯವಾಯಿತು. ಆತ ಇನ್ನೊಬ್ಬ ಯೂರೋಪಿಯನ್‌ನೊಂದಿಗೆ ಪಾಲಿನ ಮೇಲೆ ಮುದ್ರಣಮಂದಿರ ನಡೆಸುತ್ತಿದ್ದ. ೧೯೦೪ ರಲ್ಲಿ ಜೋಹಾನ್ಸ್ ಬರ್ಗ್‌ನಲ್ಲಿ ಭಾರತೀಯರು ಪ್ಲೇಗಿನ ಉಲ್ಬಣಕ್ಕೆ ತುತ್ತಾದರು. ನಾನು ರೋಗಿಗಳಿಗೆ ಚಿಕಿತ್ಸೆ

ಮಾಡುವದರಲ್ಲಿ ತೊಡಗಿದ್ದರಿಂದ ಹೋಟಲಿಗೆ ಹೋಗುವುದು ಕಡಿಮೆಯಾಯಿತು. ಹೋದಾಗ ಸಹ ಬೇರೆ ಯಾರಿಗೂ ಸೋಂಕು ಹರಡಬಾರದೆಂದು ಎಲ್ಲರಿಗೂ ಮೊದಲೇ ಹೋಗುತ್ತಿದ್ದೆ. ಎರಡು ದಿನ ನನ್ನನ್ನು ಕಾಣದೆಹೋದ್ದರಿಂದಲೂ ನಾನು ಪ್ಲೇಗ್ ರೋಗಿಗಳ ಆರೈಕೆ ಮಾಡುತ್ತಿದ್ದೇನೆಂದು ವೃತ್ತಪತ್ರಿಕೆಗಳಲ್ಲಿ ಓದಿದ್ದರಿಂದಲೂ ವೆಸ್ಟ್ ತುಂಬ ಚಿಂತಾಮಗ್ನನಾದ. ಮೂರನೆ ದಿನ ಬೆಳಿಗ್ಗೆ ಆರು ಗಂಟೆಗೆ ನಾನು ಹೊರ ಹೊರಡಬೇಕೆನ್ನುವ ಹೊತ್ತಿಗೆ ಸರಿಯಾಗಿ ವೆಸ್ಟ್ ಬಂದು ಬಾಗಿಲು ತಟ್ಟಿದ. ಬಾಗಿಲು ತೆರೆದಾಗ ನಗುಮುಖದಿಂದ "ನಿಮ್ಮನ್ನು ನೋಡಿ ಬಹಳ ಸಂತೋಷವಾಯಿತು. ಎರಡು ದಿನಗಳಿಂದ ಹೋಟಲಿನಲ್ಲಿ ನಿಮ್ಮನ್ನು ಕಾಣದೆ ಬಹಳ ಯೋಚನೆಯಾಗಿತ್ತು. ನಿಮಗೆ ಏನಾದರೂ ಸಹಾಯ ಬೇಕಾದರೆ ತಿಳಿಸಿರಿ" ಎಂದ.

"ರೋಗಿಗಳ ಶುಶ್ರೂಷೆ ಮಾಡುತ್ತೀರಾ?" ಎಂದು ತಮಾಷೆಯಾಗಿ ಕೇಳಿದೆ.

"ಏಕೆ ಕೂಡದು? ನಾನು ಸಿದ್ಧ."

ನನ್ನ ಕಾರ್ಯಕ್ರಮವೆಲ್ಲ ಸಿದ್ಧವಾಗಿತ್ತು. ಆಗ ನಾನು "ನಿಮ್ಮಿಂದ ಬೇರೆ ಉತ್ತರ ನಿರೀಕ್ಷಿಸುವುದಾದರೂ ಹೇಗೆ? ಶುಶ್ರೂಷೆಯಲ್ಲಿ ಸಹಾಯ ಮಾಡಲು ಆಗಲೇ ಅನೇಕರು ಸಿದ್ಧರಿದ್ದಾರೆ. ನಿಮಗೆ ಇನ್ನೂ ಕಷ್ಟದ ಕೆಲಸ ಕೊಡಬೇಕೆಂದಿದ್ದೇನೆ. ಮದನಜಿತ್ ಪ್ಲೇಗ್ ಕೆಲಸದ ಮೇಲಿದ್ದಾನೆ. 'ಇಂಡಿಯನ್ ಓಪಿನಿಯನ್' ಮುದ್ರಣಮಂದಿರ ನೋಡಿಕೊಳ್ಳುವವರು ಯಾರೂ ಇಲ್ಲ. ನೀವು ದರ್ಬಾನ್‌ಗೆ ಹೋಗಿ ಮುದ್ರಣಮಂದಿರದ ಆಡಳಿತ ವಹಿಸಿಕೊಂಡರೆ ಬಹಳ ಸಹಾಯವಾಗುತ್ತದೆ. ನಿಮಗೆ ಭಾರಿ ಸಂಬಳ ಕೊಡಲು ನನಗೆ ಚೈತನ್ಯವಿಲ್ಲ. ತಿಂಗಳಿಗೆ ಹತ್ತು ಪೌಂಡು ಸಂಬಳ; ಲಾಭ ಏನಾದರೂ ಬಂದರೆ ಲಾಭದಲ್ಲಿ ಅರ್ಧ' ಇಷ್ಟು ಮಾತ್ರ ಕೊಡಬಲ್ಲೆ" ಎಂದು ಹೇಳಿದೆ.

"ಇದು ಕಷ್ಟದ ಕೆಲಸ. ನನ್ನ ಪಾಲುಗಾರನ ಅನುಮತಿ ಬೇಕು; ಅಲ್ಲದೆ ಕೆಲವು ಬಾಕಿ ವಸೂಲಿ ಇದೆ. ಆದರೂ ಚಿಂತೆಯಿಲ್ಲ. ನನ್ನ ಕೊನೆಯ ನಿರ್ಧಾರ ತಿಳಿಸಲು ಸಂಜೆವರೆಗೆ ಕಾಲ ಕೊಡುವಿರಾ?"

"ಆಗಲಿ, ಸಂಜೆ ಆರು ಗಂಟೆಗೆ ಉದ್ಯಾನದಲ್ಲಿ ಸೇರೋಣ." ಅದರಂತೆ ಸೇರಿದೆವು. ವೆಸ್ಟ್ ತನ್ನ ಪಾಲುದಾರನ ಅನುಮತಿ ಪಡೆದಿದ್ದ. ಬಾಕಿ ವಸೂಲಿಯನ್ನು ನನಗೆ ವಹಿಸಿ ಮಾರನೆ ದಿನ ಸಂಜೆಗೇ ರೈಲಿನಲ್ಲಿ ದರ್ಬಾನಿಗೆ ಹೊರಟ. ಒಂದು ತಿಂಗಳಲ್ಲಿಯೇ ಲಾಭವಲ್ಲ, ಮುದ್ರಣಮಂದಿರದಿಂದ ನಷ್ಟವಾಗುತ್ತಿದೆ ಎಂದು ಆತನ ವರದಿ ಬಂತು. ಬಾಕಿ ಬಹಳ ವಸೂಲ ಆಗಬೇಕಾಗಿತ್ತು. ಲೆಕ್ಕಪತ್ರ ಸರಿಯಾಗಿರಲಿಲ್ಲ. ಚಂದಾದಾರರ ಹೆಸರು, ವಿಳಾಸ ಸಹ ಪೂರ್ಣವಾಗಿರಲಿಲ್ಲ. ಇತರ ವಿಷಯಗಳಲ್ಲೂ ಇದೇ ರೀತಿ ಅವ್ಯವಸ್ಥೆ ಇತ್ತು. ದೋಷಾರೋಪಣೆಗಾಗಿ ವೆಸ್ಟ್ ಇದೆಲ್ಲ ಬರೆಯಲಿಲ್ಲ. ಲಾಭ ಮುಖ್ಯವಲ್ಲದ ಕಾರಣ, ತನ್ನ ಕೆಲಸ ಬಿಡುವದಿಲ್ಲವೆಂದೂ ಆದರೆ ಬಹಳ ಕಾಲದ ತನಕ ಪತ್ರಿಕೆ ಲಾಭದಾಯಕವಾಗದೆಂದೂ ತಿಳಿಸಿದ.

ಜೋಹಾನ್ಸ್ ಬರ್ಗ್‌ನಲ್ಲಿ ಚಂದಾದಾರರನ್ನು ಕೂಡಿಸುವ ಉದ್ದೇಶದಿಂದಲೂ

ಮುದ್ರಣಮಂದಿರದ ವ್ಯವಸ್ಥೆಯ ವಿಷಯ ಚರ್ಚಿಸಲೂ ಮದನ್‌ಜಿತ್ ಬಂದಿದ್ದ. ಪ್ರತಿ ತಿಂಗಳಲ್ಲೂ ಸ್ವಲ್ಪ ಹೆಚ್ಚು ಕಡಿಮೆ ನಷ್ಟ ತುಂಬುತ್ತಿದ್ದೆನಾದ್ದರಿಂದ ನನಗೆ ನಿಜ ಸ್ಥಿತಿ ತಿಳಿಯುವದು ಅವಶ್ಯವಿತ್ತು. ಮದನ್ ಜಿತ್‌ಗೆ ಮುದ್ರಣಮಂದಿರದ ಅನುಭವವಿರಲಿಲ್ಲ. ಯಾರಾದರೂ ಅನುಭವಸ್ಥನನ್ನು ಆತನ ಜೊತೆಗೆ ಕೊಡಬೇಕೆಂದಿದ್ದೆ. ಅಷ್ಟರಲ್ಲಿ ಪ್ಲೇಗ್ ಬಂತು; ಆ ಕೆಲಸದಲ್ಲಿ ಮದನ್‌ಜಿತ್‌ಗೆ ಅನುಭವ; ಆದ್ದರಿಂದ ಆತನನ್ನು ಪ್ಲೇಗ್ ಕೆಲಸಕ್ಕೆ ನೇಮಿಸಿದೆ. ವೆಸ್ಟ್‌ನ ಅನಿರೀಕ್ಷಿತ ಉಮೇದುವಾರಿಕೆ ಸ್ವೀಕರಿಸಿ ಪ್ಲೇಗ್ ಕೆಲಸಕ್ಕೆ ನೇಮಿಸಿದೆ. ವೆಸ್ಟ್‌ನ ಅನಿರೀಕ್ಷಿತ ಉಮೇದುವಾರಿಕೆ ಸ್ವೀಕರಿಸಿ ಪ್ಲೇಗ್ ಇರುವವರೆಗೆ ಮಾತ್ರವಲ್ಲ, ಕಾಯಂ ಕೆಲಸ ಎಂದು ಹೇಳಿ ಕಳುಹಿಸಿದೆ. ಆದ್ದರಿಂದ ವೆಸ್ಟ್ ಆ ರೀತಿ ಪತ್ರಿಕೆಯ ಆಗು ಹೋಗು ಕುರಿತು ವರದಿ ಮಾಡಿದ್ದು.

ಕೊನೆಕೊನೆಗೆ ಪತ್ರಿಕೆಯನ್ನೂ ಮುದ್ರಣಮಂದಿರವನ್ನೂ ಫೀನಿಕ್ಸ್‌ಗೆ ಹೇಗೆ ವರ್ಗಾಯಿಸಬೇಕಾಯಿತು, ವೆಸ್ಟ್‌ಗೆ ಮೊದಲು ತಿಳಿಸಿದ ಹತ್ತು ಪೌಂಡು ಬದಲು ಹೇಗೆ ಮೂರು ಪೌಂಡು ಸಂಬಳ ಕೊಡಬೇಕಾಯಿತು ಎಂಬುದು ವಾಚಕರಿಗೆ ತಿಳಿದಿದೆ. ಈ ಎಲ್ಲ ಮಾರ್ಪಾಟಿಗೂ ವೆಸ್ಟ್‌ರ ಸಮ್ಮತಿ ಇತ್ತು. ಅಷ್ಟರಲ್ಲಿ ಜೀವನ ನಡೆಸುವದು ಹೇಗೆ ಎಂಬ ಯೋಚನೆ ಒಂದು ದಿನವೂ ಅವರಿಗೆ ಬಂದಂತೆ ನಾನು ಕಾಣಲಿಲ್ಲ. ಸ್ವತಃ ಧರ್ಮಾರ್ಥಿ ಅಲ್ಲದಿದ್ದರೂ ಅವರಲ್ಲಿ ಅಗಾಧ ಧಾರ್ಮಿಕ ದೃಷ್ಟಿಯಿತ್ತು. ಸಂಪೂರ್ಣ ಸ್ವಾತಂತ್ರ್ಯದ ಮನೋಭಾವನೆ ಅವರದು. ಎಲ್ಲ ವಿಷಯಗಳಲ್ಲೂ ತಮಗೆ ತೋರಿದ್ದನ್ನು ನಿರ್ಭಯವಾಗಿ ಹೇಳತಕ್ಕವರು; ಕಂಡದ್ದನ್ನಾಡುವದರಲ್ಲಿ ಅಪ್ರತಿಮರು. ಬಹು ಸರಳ ಜೀವಿ. ನಾನು ಮೊದಲು ಅವರನ್ನು ನೋಡಿದಾಗ ಅವರಿಗೆ ಮದುವೆಯಗಿರಲಿಲ್ಲ; ನಿಷ್ಕಲುಷಿತ ಜೀವನ. ಕೆಲವು ದಿನದಮೇಲೆ ತಂದೆತಾಯಿಯರನ್ನು ನೋಡಲು ಇಂಗ್ಲೆಂಡಿಗೆ ಹೋಗಿ ಮದುವೆಯಾಗಿ ಬಂದರು. ನನ್ನ ಸಲಹೆಯಂತೆ ಅವರ ಹೆಂಡತಿಯೊಂದಿಗೆ ಅತ್ತೆಯನ್ನೂ, ಮದುವೆಯಾಗದ ನಾದಿನಿಯನ್ನೂ ಕರೆತಂದರು. ಇವರೆಲ್ಲ ಫೀನಿಕ್ಸ್ ನಲ್ಲಿ ಭಾರತೀಯರೊಂದಿಗೆ ಒಡಹುಟ್ಟಿದವರಂತೆ ಸರಳ ಜೀವಿಗಳಾಗಿ ವಾಸಮಾಡುತ್ತಿದ್ದರು. ಅಡಾವೆಸ್ಟ್ ಗೆ (ಈಕೆಯನ್ನು ನಾವು ದೇವಿಬೇನ್ ಎಂದು ಕರೆಯುತ್ತಿದ್ದೆವು) ಈಗ ೩೫ ವರ್ಷ. ಈಗಲೂ ಮದುವೆಯಾಗದೆ ಶುದ್ಧಾತ್ಮಳಾಗಿದ್ದಾಳೆ. ಫೀನಿಕ್ಸ್ ನಲ್ಲಿ ಮೊದಲು ನೆಲಸಿದ ಶ್ರದ್ಧಾಳುಗಳಿಗೆ ಆಕೆ ಮಾಡಿದ ಸೇವೆ ಕಡೆಗಣಿಸುವಂತಹದಲ್ಲ. ಒಂದಲ್ಲ ಒಂದು ಬಾರಿ ಮಕ್ಕಳನ್ನು ಆಡಿಸುವದು, ಅವರಿಗೆ ಇಂಗ್ಲಿಷ್ ಹೇಳಿಕೊಡುವುದು, ಅಡಿಗೆ ಮನೆಯಲ್ಲಿ ಅಡಿಗೆ ಮಾಡುವುದು, ಕಸಗುಡಿಸುವುದು, ಲೆಕ್ಕ ಬರೆಯುವುದು, ಮುದ್ರಣಮಂದಿರದಲ್ಲಿ ಅಚ್ಚು ಮಳೆ ಜೋಡಿಸುವುದು ಮುಂತಾಗಿ ಎಲ್ಲ ಕೆಲಸವನ್ನೂ ಮಾಡುತ್ತಿದ್ದಳು. ಯಾವ ಕೆಲಸವೇ ಬೀಳಲಿ, ಹಿಂದು ಮುಂದೆ ನೋಡದೆ ದುಡಿಯುವ ಸ್ವಭಾವ ಆಕೆಯದು. ಈಗ ಆಕೆ ಫೀನಿಕ್ಸ್ ನಲ್ಲಿ ಇಲ್ಲ; ಏಕೆಂದರೆ ನಾನು ಭಾರತಕ್ಕೆ ಹಿಂದಿರುಗಿದ ಮೇಲೆ ಆಕೆಯ ಅಲ್ಪ ವೆಚ್ಚಕ್ಕೆ ಹಣ ಒದಗಿಸಲು ಸಹ ಮುದ್ರಣ ಮಂದಿರಕ್ಕೆ ಸಾಧ್ಯವಾಗಿಲ್ಲ. ವೆಸ್ಟ್‌ರ ಅತ್ತೆಗೆ ಈಗ ಸುಮಾರು ಎಂಭತ್ತು ವರ್ಷ. ಹೊಲಿಗೆಯಲ್ಲಿ

ಬಲು ಜಾಣೆ, ನಮ್ಮ ಆಶ್ರಮಕ್ಕೆ ಆಕೆಯೇ ದರ್ಜಿಯಾದಳು. ಆಕೆಯನ್ನು ಎಲ್ಲರೂ ಅಜ್ಜಿ ಎನ್ನುತ್ತಿದ್ದೆವು; ಆಕೆಯೂ ಅದೇ ಭಾವ ಇಟ್ಟಿದ್ದಳು. ಸತಿ ವೆಸ್ಟ್ ವಿಷಯ ಹೆಚ್ಚು ಹೇಳಬೇಕಾಗಿಲ್ಲ. ಫೀನಿಕ್ಸ್ ಆಶ್ರಮದ ಸದಸ್ಯರೆಲ್ಲ ಸೆರೆಮನೆ ಸೇರಿದಾಗ ವೆಸ್ಟ್ ದಂಪತಿಗಳು ಮಗನ್ ಲಾಲ್ ಗಾಂಧಿಯೊಂದಿಗೆ ನಮ್ಮ ಆಶ್ರಮದ ಸರ್ವ ಆಡಳಿತ ನಡೆಸುತ್ತಿದ್ದರು. ಮುದ್ರಣಮಂದಿರ, ಪತ್ರಿಕೆ ವೆಸ್ಟ್ ನೋಡಿಕೊಳ್ಳುತ್ತಿದ್ದರು; ನಾನು ಇನ್ನಿತರರೂ ಇಲ್ಲದಿರುವಾಗ ದರ್ಬಾನ್‌ನಿಂದ ಗೋಖಲೆಯವರಿಗೆ ಕೇಬಲ್ ಸಹ ಕಳಿಸುತ್ತಿದ್ದರು. ವೆಸ್ಟ್ ದಸ್ತಗಿರಿಯಾದಾಗ (ಶೀಘ್ರವಾಗಿಯೇ ಬಿಡುಗಡೆಯಾದರು) ಗೋಖಲೆಯವರು ಭಯಗೊಂಡು ಆಂಡ್ರೂಸ್ ಮತ್ತು ಪಿಯರ್ಸನ್‌ರನ್ನು ಕಳುಹಿಸಿದರು.

ಇನ್ನೊಬ್ಬರು ರಿಚ್. ಇವರ ವಿಷಯ ಆಗಲೇ ತಿಳಿಸಿದ್ದೇನೆ. ಹೋರಾಟ ಪ್ರಾರಂಭವಾಗುವ ಮೊದಲೇ ಈತ ನನ್ನ ಕಚೇರಿ ಸೇರಿ, ನಾನಿಲ್ಲದಾಗ ನನ್ನ ಕೆಲಸ ನೋಡಲು ನ್ಯಾಯಶಾಸ್ತ್ರಾಭ್ಯಾಸ ಮಾಡಲು ಇಂಗ್ಲೆಂಡ್‌ಗೆ ಹೋದ. ಲಂಡನ್‌ನಲ್ಲಿ ದಕ್ಷಿಣ ಆಫ್ರಿಕದ ಬ್ರಿಟಿಷ್ ಭಾರತೀಯ ಸಮಿತಿಯ ಮುಖ್ಯ ಜೀವಾಳವೆಂದರೆ ಈತನೆ.

ಮೂರನೆಯವರು ಪೋಲಕ್. ವೆಸ್ಟರಂತೆ ಇವರ ಪರಿಚಯವೂ ನನಗೆ ಹೋಟಲಿನಲ್ಲಿ ಆಯಿತು. ಅವರೂ ಸಹ 'ಇಂಡಿಯನ್ ಓಪಿನಿಯನ್' ಸಿಬ್ಬಂದಿಯನ್ನು ಸೇರಲು 'ಟ್ರಾನ್ಸ್ ವಾಲ್ ಕ್ರಿಟಿಕ್' ಪತ್ರಿಕೆಯ ಉಪ ಸಂಪಾದಕತ್ವ ಬಿಟ್ಟುಕೊಟ್ಟರು. ನಮ್ಮ ಚಳವಳಿಗಾಗಿ ಭಾರತಕ್ಕೂ ಇಂಗ್ಲೆಂಡ್‌ಗೆ ಅವರು ಹೋಗಿ ಬಂದುದು ಎಲ್ಲರಿಗೂ ಗೊತ್ತಿದೆ. ರಿಚ್ ಇಂಗ್ಲೆಂಡ್‌ಗೆ ಹೋದ ಕಾಲದಲ್ಲಿ ಪೋಲಕ್‌ರನ್ನು ಫೀನಿಕ್ಸ್‌ನಿಂದ ಜೋಹಾನ್ಸ್ ಬರ್ಗ್‌ಗೆ ಕರೆಸಿದೆ. ಮೊದಲು ನನ್ನ ಗುಮಾಸ್ತರಾಗಿದ್ದು ಆ ಮೇಲೆ ಪೂರ್ಣ ನ್ಯಾಯವಾದಿಯಾಧರು. ಕೆಲವು ದಿನದ ಮೇಲೆ ಮದುವೆಯಾದರು. ಭಾರತೀಯರೆಲ್ಲರಿಗೂ ಶ್ರೀಮತಿ ಪೋಲಕ್‌ರ ಪರಿಚಯವಿದೆ. ತನ್ನ ಗಂಡನಿಗೆ ಈ ಚಳುವಳಿಯಲ್ಲಿ ಅಡ್ಡಿ ಬರಲಿಲ್ಲವಷ್ಟೇ ಅಲ್ಲ, ಹೋರಾಟದ ಕಾಲದಲ್ಲಿ ಗಂಡನಿಗೆ ಪ್ರತ್ಯಕ್ಷ ಸಹಾಯ ಮಾಡಿದಳು. ಅಸಹಕಾರ ಚಳುವಳಿಯಲ್ಲಿ ಪೋಲಕ್ ದಂಪತಿಗಳಿಗೂ ನಮಗೂ ಭಿನ್ನಾಭಿಪ್ರಾಯ ಬಂದರೂ, ಈಗಲೂ ತಮ್ಮ ಶಕ್ತಿ ಮೀರಿ ಅವರು ಭಾರತಕ್ಕೆ ಸಹಾಯ ಮಾಡುತ್ತಿದ್ದಾರೆ.

ಹರ್ಮನ್ ಕಾಲೆನ್‌ಬಾಕ್ ಇನ್ನೊಬ್ಬರು. ಇವರ ಪರಿಚಯವೂ ಚಳುವಳಿಗೆ ಮುಂಚೆಯೇ ಆಗಿತ್ತು. ಆತ ಜರ್ಮನಿ ದೇಶದವ, ಯುದ್ಧವಿಲ್ಲದಿದ್ದರೆ ಈಗ ಭಾರತದಲ್ಲಿರುತ್ತಿದ್ದ. ಖಚಿತ ಅಭಿಪ್ರಾಯದ ಆತನ ಸಹಾನುಭೂತಿಗೆ ಮಿತಿಯೇ ಇಲ್ಲ; ಮಗುವಿನಂತೆ ಸರಳ ಮನಸ್ಸು. ವೃತ್ತಿಯಲ್ಲಿ ಶಿಲ್ಪಿಯಾದರೂ ಯಾವ ಕೆಲಸ ಮಾಡುವದಕ್ಕೂ ಹಿಂದೆಗೆಯುತ್ತಿರಲಿಲ್ಲ . ನನ್ನ ಜೋಹಾನ್ಸ್ ಬರ್ಗ್ ಸಂಸಾರ ಮುಕ್ತಾಯಗೊಳಿಸಿದಾಗ, ಆತನ ಮನೆಯಲ್ಲೇ ವಾಸಮಾಡುತ್ತಿದ್ದೆ. ಆದರೆ ನನ್ನ ಪಾಲಿನ ವೆಚ್ಚ ಕೊಡಹೊದರೆ ಸಹಿಸಲಾರದ ವ್ಯಸನ ಸೂಚಿಸಿ, ತನ್ನ ಸಂಸಾರದ ಮಿತವ್ಯಯಕ್ಕೆ ನಾನೆ ಕಾರಣನೆಂದು ಹೇಳುತ್ತಿದ್ದ. ಇದೇನೋ ನಿಜ. ಆದರೆ ನನ್ನ ಯೂರೋಪಿಯನ್ ಸ್ನೇಹಿತರೊಂದಿಗೆ ನನಗಿದ್ದ ಸಂಬಂಧವನ್ನು ತಿಳಿಸಲು ಇದು ಸಮಯವಲ್ಲ. ಜೋಹಾನ್ಸ್ ಬರ್ಗ್

ಸತ್ಯಾಗ್ರಹಿ ಬಂದಿಗಳ ಸಂಸಾರಗಳಿಗೆ ಒಂದು ಕಡೆ ವಸತಿ ಕಲ್ಪಿಸಬೇಕೆಂದು ಯೋಚಿಸಿದಾಗ ಬಾಡಿಗೆ ಕೂಡ ಕೇಳದೆ ಕಾಲೆನ್ ಬಾಕ್ ತಮ್ಮ ದೊಡ್ಡ ಹಿಡುವಳಿಯನ್ನು ಬಿಟ್ಟು ಕೊಟ್ಟರು. ಈ ವಿಷಯ ಮುಂದೆ ವಿಶದವಾಗಿ ತಿಳಿಸುತ್ತೇನೆ ಗೋಖಲೆಯವರು ಹೋಹಾನ್ಸ್ ಬರ್ಗ್‌ಗೆ ಬಂದಾಗ ಅವರನ್ನು ಕಾಲೆನ್ ಬಾಕ್ ಕುಟೀರದಲ್ಲಿ ಇಳಿಸಲಾಯಿತು. ಅವರು ಬಹಳ ಆನಂದಪಟ್ಟರು. ಅವರನ್ನು ಬೀಳ್ಕೊಡಲು ಕಾಲೆನ್ ಬಾಕ್ ನನ್ನೊಂದಿಗೆ ಜಾಂಜಿಬಾರ್ ವರೆಗೂ ಬಂದಿದ್ದರು. ಪೋಲಕ್ ರೊಂದಿಗೆ ಕಾಲೆನ್ ಬಾಕ್ ಕೂಡ ದಸ್ತಗಿರಿಯಾಗಿ ಶಿಕ್ಷೆ ಅನುಭವಿಸಿದರು. ಕೊನೆಯದಾಗಿ ಗೋಖಲೆಯವರನ್ನು ಕಾಣಲು ನಾನು ದಕ್ಷಿಣ ಆಫ್ರಿಕದಿಂದ ಇಂಗ್ಲೆಂಡಿಗೆ ಹೋದಾಗ ನನ್ನೊಂದಿಗೆ ಕಾಲೆನ್ ಬಾಕ್‌ರೂ ಬಂದಿದ್ದರು. ಆದರೆ ನಾನು ಭಾರತಕ್ಕೆ ಹಿಂದಿರುಗಿದಾಗ ಯುದ್ಧದ ದೆಸೆಯಿಂದ ನನ್ನೊಂದಿಗೆ ಭಾರತಕ್ಕೆ ಬರಲು ಅವರಿಗೆ ಆಗಲಿಲ್ಲ. ಇತರ ಜರ್ಮನರಂತೆ ಇಂಗ್ಲೆಂಡ್‌ನಲ್ಲಿ ಅವರನ್ನು ಬಂಧಿಸಿದರು. ಯುದ್ಧ ಮುಗಿದ ನಂತರ ಕಾಲೆನ್ ಬಾಕ್ ಜೋಹಾನ್ಸ್ ಬರ್ಗ್‌ಗೆ ಹೋಗಿ ಪುನಃ ತಮ್ಮ ವೃತ್ತಿ ಅವಲಂಬಿಸಿದರು.

ಈಗ ಕುಮಾರಿ ಸೋಂಚಾ ಶ್ಲೇಜ಼ಿನ್ ಎಂಬ ಗುಣಾಢ್ಯ ಹುಡುಗಿಯೊಬ್ಬಳ ಪರಿಚಯ ಮಾಡಿಕೊಡುತ್ತೇನೆ. ಆಕೆಯ ನಡತೆಯ ಬಗ್ಗೆ ಗೋಖಲೆಯವರ ಅಭಿಪ್ರಾಯವನ್ನೇ ಇಲ್ಲಿ ತಿಳಿಸುತ್ತೇನೆ. ಅವರು ಜನರ ಬೆಲೆ ಕಟ್ಟುವದರಲ್ಲಿ ಬಹು ನಿಪುಣರು. ಡೆಲಗೋಕೊಲ್ಲಿಯಿಂದ ಜಾಂಜಿಬಾರ್ ವರೆಗೂ ನಾನು ಅವರೊಂದಿಗೆ ಪ್ರಯಾಣ ಮಾಡಿದ್ದೆ. ಹಡಗಿನಲ್ಲಿ ಇಬ್ಬರೇ ಕುಳಿತು ಸಂಭಾಷಣೆ ಮಾಡಲು ಒಳ್ಳೆಯ ಅವಕಾಶವಿತ್ತು. ದಕ್ಷಿಣ ಆಫ್ರಿಕದಲ್ಲಿ ಯೂರೋಪಿಯನ್ ಮತ್ತು ಭಾರತೀಯ ಮುಖಂಡರೆಲ್ಲರ ಪರಿಚಯವೂ ಗೋಖಲೆಯವರಿಗೆ ಆಗಿತ್ತು. ನಮ್ಮ ನಾಟಕದ ಮುಖ್ಯ ನಟರನ್ನೆಲ್ಲ ವಿಮರ್ಶೆ ಮಾಡುತ್ತ ಯೂರೋಪಿಯನ್ ಮತ್ತು ಭಾರತೀಯ ಮುಖಂಡರೆಲ್ಲರ ಪರಿಚಯವೂ ಗೋಖಲೆಯವರಿಗೆ ಆಗಿತ್ತು. ನಮ್ಮ ನಾಟಕದ ಮುಖ್ಯ ನಡರನ್ನೆಲ್ಲ ವಿಮರ್ಶೆಮಾಡುತ್ತ ಯೂರೋಪಿಯನ್, ಹಾಗೂ ಭಾರತೀಯರೆಲ್ಲರಲ್ಲಿ ಕುಮಾರಿ ಶ್ಲೇಜ಼ಿನ್‌ರಲ್ಲಿ ಕಾಣಬರುವ ನಿರ್ಮಲ ಚಾರಿತ್ರ್ಯ, ಏಕಾಗ್ರ ಕಾರ್ಯತತ್ಪರತೆ, ಮನೋನಿಶ್ಚಯ ನಾನು ಬೇರೆ ಯಾರಲ್ಲೂ ಕಂಡಿಲ್ಲ. ಯಾವ ಪ್ರತಿಫಲವನ್ನೂ ಬಯಸದೆ ಭಾರತೀಯ ಸಮಸ್ಯೆಗಾಗಿ ತನ್ನ ಸರ್ವಸ್ವ ತ್ಯಾಗ ಮಾಡಿದ ವೀರ ರಮಣಿ ಈಕೆ. ಜೊತೆಗೆ ಆಕೆಯ ಕಾರ್ಯದಕ್ಷತೆ, ಕಾರ್ಯಶಕ್ತಿ ಬೇರೆ. ನಿಮ್ಮ ಹೋರಾಟಕ್ಕೆ ಆಕೆಯೊಂದು ರತ್ನ. ಆಕೆಯನ್ನು ನೀವು ಪ್ರೋತ್ಸಾಹಿಸಬೇಕು" ಎಂದರು. ನನ್ನ ಬಳಿ ಕುಮಾರಿ ಡಿಕ್ ಎಂಬ ಸ್ಕಾಚ್ ಹುಡುಗಿಯೊಬ್ಬಳು ಶೀಘ್ರಲಿಪಿಗಾರಳಾಗಿದ್ದಳು. ಆಕೆ ವಿನಯ ಸೌಜನ್ಯದ ಮೂರ್ತಸ್ವರೂಪ. ನನ್ನ ಜೀವನದಲ್ಲಿ ಅನೇಕ ಕಹಿ ನೆನಪುಗಳಿವೆ. ಆದರೆ ಸದ್ಗುಣಿಗಳಾದ ಅನೇಕ ಯೂರೋಪಿಯನ್ ಮತ್ತು ಭಾರತೀಯ ವ್ಯಕ್ತಿಗಳು ನನ್ನ ಸಹೋದ್ಯೋಗಿಗಳಾಗಿದ್ದ ಸವಿ ನೆನಪುಗಳೂ ಇವೆ. ಮದುವೆ ಮಾಡಿಕೊಂಡ ಒಡನೆ ಕುಮಾರಿ ಡಿಕ್ ನನ್ನಲ್ಲಿ ಕೆಲಸ ಬಿಟ್ಟಳು. ಕಾಲೆನ್ ಬಾಕ್ ಆಗ ಕಾಲೆನ್‌ಬಾಕ್ ಆಗ ಕುಮಾರಿ ಶ್ಲೇಜಿನ್‌ಳ

ಪರಿಚಯ ಮಾಡಿಕೊಡುತ್ತ "ಈಕೆಯ ತಾಯಿ ಈಕೆಯನ್ನು ನನ್ನ ಪೋಷಣೆಗೆ ಒಪ್ಪಿಸಿದ್ದಾರೆ. ಒಳ್ಳೆಯ ಬುದ್ಧಿವಂತೆ, ಪ್ರಾಮಾಣಿಕಳು. ಆದರೆ ಬಲು ತುಂಟ ಹುಡುಗಿ; ಅಲ್ಲದೆ ದುಡುಕು ಸ್ವಭಾವ. ಪ್ರಾಯಶಃ ಸ್ವಲ್ಪ ಅಹಂಕಾರವೂ ಇದೆ. ಇವಳನ್ನು ಹಿಡಿತದಲ್ಲಿಡಲು ನಿಮ್ಮ ಕೈಲಾದರೆ ಕೆಲಸಕ್ಕೆ ಸೇರಿಸಿಕೊಳ್ಳಿ. ಬರೀ ಸಂಬಳಕ್ಕಾಗಿ ಈಕೆಯನ್ನು ನಿಮಗೆ ಬಿಡುತ್ತಿಲ್ಲ" ಎಂದರು. ಒಳ್ಳೆಯ ಶೀಘ್ರಲಿಪಿಗಾರಳಿಗೆ ನಾನು ತಿಂಗಳಿಗೆ ೨೦ ಪೌಂಡು ಸಂಬಳ ಕೊಡಲು ಸಿದ್ಧನಿದ್ದೆ; ಆದರೆ ಆಕೆಯ ಸಾಮರ್ಥ್ಯ ಇನ್ನೂ ತಿಳಿದಿರಲಿಲ್ಲ. ಪ್ರಾರಂಭದಲ್ಲಿ ತಿಂಗಳಿಗೆ ೬ ಪೌಂಡು ಸಾಕೆಂದು ಕಾಲೆನ್‌ಬಾಕ್ ಸಲಹೆಕೊಟ್ಟರು; ನಾನು ಒಪ್ಪಿದೆ. ಸ್ವಲ್ಪದರಲ್ಲಿಯೆ ಕುಮಾರಿ ಶ್ಲೇಜಿನ್‌ಳ ತುಂಟತನವೆಲ್ಲ ಪರಿಚಯವಾಯಿತು. ಆದರೆ ಒಂದು ತಿಂಗಳೊಳಗೇ ನನ್ನ ಮನಸ್ಸನ್ನು ಸಂಪೂರ್ಣ ಗೆದ್ದುಬಿಟ್ಟಳು. ಹಗಲು ರಾತ್ರಿ ಎನ್ನದೆ ಯಾವಾಗ ಏನು ಕೆಲಸ ಹೇಳದರೂ ಮಾಡಲು ಸಿದ್ಧ. ಕಷ್ಟ, ಅಸಾಧ್ಯ ಎಂಬುದರ ಅರಿವೇ ಆಕೆಗಿರಲಿಲ್ಲ. ಆಕೆಯ ವಯಸ್ಸು ಕೇವಲ ೧೬ ವರ್ಷ. ಆದರೂ ತನ್ನ ಸರಳ ಸ್ವಭಾವ, ಸೇವಾತತ್ಪರತೆಯಿಂದ ಸತ್ಯಾಗ್ರಹಿಗಳ, ನನ್ನ ಕಕ್ಷಿಗಾರರ ಮನಸ್ಸನ್ನು ಸೂರೆಗೊಂಡಿದ್ದಳು. ಈ ಚಿಕ್ಕ ಹುಡುಗಿ ನನ್ನ ಕಚೇರಿಯಲ್ಲಿ ಮಾತ್ರವಲ್ಲ, ಇಡೀ ಸತ್ಯಾಗ್ರಹ ಹೋರಾಟದಲ್ಲಿ ನೀತಿಯ ಧರ್ಮಾಧಿಕಾರಿಯಾಗಿ ನಿಂತಳು. ಮುಂದಿನ ನಡವಳಿಯ ನೈತಿಕ ಔಚಿತ್ಯದ ವಿಷಯದಲ್ಲಿ ಆಕೆಗೆ ಏನಾದರೂ ಸಂಶಯ ತೋರಿದರೆ ನನ್ನೊಂದಿಗೆ ನಿಸ್ಸಂಕೋಚವಾಗಿ ಚರ್ಚೆಮಾಡುತ್ತಿದ್ದಳು; ಮತ್ತು ಮನಸ್ಸು ಸಮಾಧಾನವಾಗುವವರೆಗೆ ಬಿಡುತ್ತಿರಲಿಲ್ಲ. ಸೇಠ್ ಕಾಛಲಿಯಾ ವಿನಾ ಉಳಿದೆಲ್ಲ ಮುಖಂಡರು ಸೆರೆಮನೆಯಲ್ಲಿದ್ದಾಗ ಹಣಕಾಸಿನ ಆಡಳಿತವೆಲ್ಲ ಕುಮಾರಿ ಶ್ಲೇಝಿನ್ ಕೈಯಲ್ಲಿತ್ತು. ಆಕೆಯೇ ಲೆಕ್ಕ ಬರೆಯಬೇಕಾಗಿತ್ತು. ವಿವಿಧ ಮನೋಭಾವನೆಯ ಕೆಲಸಗಾರರೊಂದಿಗೆ ಹೆಣಗಾಡಬೇಕಾಗಿತ್ತು. ಅನೇಕ ವೇಳೆ ಸೇಠ್ ಕಾಛಲಿಯಾ ಸಹ ಆಕೆಯ ಬಳಿ ಹೋಗಿ ಸಲಹೆ ಪಡೆಯುತ್ತಿದ್ದರು. ಆಗ ಡೋಕ್ 'ಇಂಡಿಯನ್ ಓಪಿನಿಯನ್' ಪತ್ರಿಕೆಗೆ ಬರೆದ ಲೇಖನಗಳನ್ನು ಆಕೆಗೆ ತೋರಿಸಿ ಒಪ್ಪಿಗೆ ಪಡೆಯುತ್ತಿದ್ದರು. ಅವರು ಒಂದು ದಿನ 'ಶ್ಲೇಝಿನ್ ಇಲ್ಲಿರದೆ ಇದ್ದರೆ ನನ್ನ ಕೆಲಸದಿಂದ ನನಗೇ ಸಮಾಧಾನವಾಗುತ್ತಿತ್ತೋ ಇಲ್ಲವೋ ತಿಳಿಯದು. ಆಕೆಯ ಸಹಾಯ ಇಷ್ಟೆಂದು ನಾನು ಹೇಳಲಾರೆ. ಆಕೆ ಸೂಚಿಸಿದ ತಿದ್ದುಪಡಿ, ಹೊಸ ವಿಷಯ ಬಹಳ ಉಚಿತವೆಂದು ಅನೇಕ ವೇಳೆ ನಾನು ಒಪ್ಪಿದ್ದೇನೆ" ಎಂದು ಹೇಳಿದರು. ಪಠಾನರು, ಪಟೇಲರು, ಅವಧಿಮುಕ್ತ ಕೂಲಿಗಳು, ಎಲ್ಲ ಬಗೆಯ ಎಲ್ಲ ವಯಸ್ಸಿನ ಭಾರತೀಯರು ಆಕೆಯ ಸಲಹೆ ಕೇಳಿ ಆದರಂತೆ ನಡೆಯುತ್ತಿದ್ದರು. ದಕ್ಷಿಣ ಆಫ್ರಿಕದ ಯೂರೋಪಿಯನ್‌ರು ಭಾರತೀಯರೊಮದಿಗೆ ಒಂದೇ ರೈಲುಗಾಡಿಯಲ್ಲಿ ಯಾವಾಗಲೂ ಪ್ರಯಾಣ ಮಾಡುತ್ತಿರಲಿಲ್ಲ. ಟ್ರಾನ್ಸ್ ವಾಲ್ ನಲ್ಲಿ ಆ ರೀತಿ ಮಾಡಬಾರದೆಂದು ಶಾಸನವೇ ಆಗಿದೆ. ಆದರೆ ಇತರ ಸತ್ಯಾಗ್ರಹಿಗಳಂತೆ ಶ್ಲೇಝಿನ್ ಭಾರತೀಯರ ಮೂರನೆಯ ತರಗತಿಯ ಗಾಡಿಯಲ್ಲೇ ಪ್ರಯಾಣ ಮಾಡುತ್ತಿದ್ದಳು. ರೇಲ್ವೆ ನೌಕರರು ಯಾರಾದರೂ ಆಕ್ಷೇಪಿಸಿದರೆ ಸಹಿಸುತ್ತಿರಲಿಲ್ಲ. ಆಕೆಯನ್ನು ಅವರ

ಎಂದಾದರೊಂದು ದಿನ ಸೆರೆಹಿಡಿಯಬಹುದೆಂದು ಆಕೆಯೂ ತಿಳಿದಿದ್ದಳು; ನನಗೂ ಭಯವಿತ್ತು. ಸತ್ಯಾಗ್ರಹ ನಡೆಸುವುದರಲ್ಲಿ ಆಕೆಗಿದ್ದ ಹತೋಟಿಯೆಲ್ಲ ಸರಕಾರಕ್ಕೆ ತಿಳಿದಿದ್ದರೂ, ಸರಕಾರ ಆಕೆಯನ್ನು ಸೆರೆಹಿಡಿಯಲಿಲ್ಲ. ತನ್ನ ೬ ಪೌಂಡು ಸಂಬಳಕ್ಕಿಂತ ಹೆಚ್ಚು ಹಣವನ್ನು ಆಕೆ ಯಾವಾಗಲೂ ಕೇಳಿದವಳಲ್ಲ. ಅಕೆಯ ವೆಚ್ಚವನ್ನರಿತ ಮೇಲೆ ೧೦ ಪೌಂಡು ಕೊಡಲು ಪ್ರಾರಂಭಿಸಿದೆ. ಇದನ್ನೂ ಬಹು ದಾಕ್ಷಿಣ್ಯದಿಂದ ಸ್ವೀಕರಿಸಿ ಅದಕ್ಕಿಂತ ಹೆಚ್ಚು ಬೇಡಬೆಂದಳು. "ನನಗೆ ಹೆಚ್ಚು ಹಣ ಬೇಕಿಲ್ಲ. ನನ್ನ ಅವಶ್ಯಕತೆಗಿಂತ ಹೆಚ್ಚು ತೆಗೆದುಕೊಂಡರೆ ಯಾವ ತತ್ವ ಮೆಚ್ಚಿ ನಿಮ್ಮ ಬಳಿ ಬಂದಿದ್ದೇನೆಯೋ ಆ ತತ್ವವನ್ನೇ ಮಾರುಗೊಟ್ಟಂತಾಗುತ್ತದೆ" ಎಂದು ಹೇಳಿ ನನ್ನ ಬಾಯಿ ಕಟ್ಟುತ್ತಿದ್ದಳು. ಇಷ್ಟೆಲ್ಲ ಹೇಳುವಾಗ ಆಕೆ ವಿದ್ಯಾವತಿಯೆ? ಎಂದು ವಾಚಕರು ಕೇಳಬಹುದು. ಕೇಪ್ ವಿಶ್ವವಿದ್ಯಾಲಯದ ಇಂಟರ್ ಮೀಡಿಯೆಟ್ ಪರೀಕ್ಷೆ ಮುಗಿಸಿ{ಷಾರ್ಟ್ ಹ್ಯಾಂಡ್} ಶೀಘ್ರಲಿಪಿ ಮುಂತಾದ ವಿಷಯಗಳಲ್ಲಿ ಪ್ರಥಮ ದರ್ಜೆಯ ಪ್ರಶಸ್ತಿ ಪತ್ರ ಪಡೆದಿದ್ದಳು. ನಮ್ಮ ಹೋರಾಟ ಮುಗಿದ ನಂತರ ಡಿಗ್ರಿ ಪಡೆದು ಇಗ ಟ್ರಾನ್ ವಾಲ್‌ನಲ್ಲಿ ಸರಕಾರಿ ಬಾಲಿಕಾ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿದ್ದಾಳೆ.

ಹರ್ಬರ್ಟ್ ಕಿಚಿನ್ ಒಬ್ಬ ಇಂಗ್ಲಿಷ್ ಎಲೆಕ್ಟ್ರಿಷಿಯನ್ {ವಿದ್ಯುತ್ ಶಾಸ್ತ್ರ ಪಂಡಿತ}. ಆತನ ಹೃದಯ ಸ್ಫಟಿಕದಂತೆ ಶುಭ್ರವಾದುದು. ಬೋಅರ್ ಯುದ್ಧ ಸಮಯದಲ್ಲಿ ನಮ್ಮೊಂದಿಗೆ ಕೆಲಸಮಾಡಿದನಲ್ಲದೆ ಕೆಲವು ಕಾಲ 'ಇಂಡಿಯನ್ ಓಪಿನಿಯನ್' ಸಂಪಾದಕನಾಗಿದ್ದ. ಆತ ಆಜನ್ಮ ಬ್ರಹ್ಮಚಾರಿ.

ಇದುವರೆಗೆ ತಿಳಿಸಿದವರೆಲ್ಲ ನಮಗೆ ತೀರ ಸಮೀಪ ಸಂಬಂಧವಿಟ್ಟುಕೊಂಡಿದ್ದವರು. ಇವರನ್ನು ಟ್ರಾನ್ಸ್ ವಾಲ್‌ನ ಯೂರೋಪಿಯನ್ ಮುಖಂಡರೆಂದು ಹೇಳುವಂತೆ ಇಲ್ಲ. ಆದರೂ ಮುಖಂಡರು ಸಹ ನಮಗೆ ತುಂಬ ಸಹಾಯ ಮಾಡಿದ್ದರು. ಇವರನ್ನು ಟ್ರಾನ್ಸ್ ವಾಲ್‌ನ ಯೂರೋಪಿಯನ್ ಮುಖಂಡರೆಂದು ಹೇಳುವಂತೆ ಇಲ್ಲ. ಆದರೂ ಮುಖಂಡರು ಸಹ ನಮಗೆ ತುಂಬ ಸಹಾಯ ಮಾಡಿದ್ದರು. ಇವರಲ್ಲಿ ಹೆಚ್ಚು ಪ್ರತಿಭಾಶಾಲಿಗಳೆಂದರೆ ದಕ್ಷಿಣ ಆಫ್ರಿಕ ವರ್ತಕ ಸಂಘಗಳ ಹಿಂದಿನ ಅಧ್ಯಕ್ಷರೂ ಟ್ರಾನ್ಸ್‌ವಾಲ್ ನ್ಯಾಯವಿಧಾಯಕ ಸಭೆಯ ಸದಸ್ಯರೂ ಆದ ಹಾಸ್ಕೆನ್. ಇವರ ಪರಿಚಯ ವಾಚಕರಿಗೆ ಆಗಲೇ ಮಾಡಿ ಕೊಟ್ಟಿದ್ದೇನೆ. ಸತ್ಯಾಗ್ರಹ ಚಳುವಳಿಯ ಬಗ್ಗೆ ಸಹಾನುಭೂತಿಯುಳ್ಳ ಯೂರೋಪಿಯನ್ ಸಮಿತಿಗೆ ಇವರು ಅಧ್ಯಕ್ಷರಾಗಿದ್ದರು. ಚಳವಳಿ ರಭಸದಿಂದ ನಡೆಯುವಾಗ ಸತ್ಯಾಗ್ರಹಿಗಳಿಗೂ ಸರಕಾರಕ್ಕೂ ನೇರವಾದ ವ್ಯವಹಾರ ಅಸಾಧ್ಯವಾಯಿತು. ಸತ್ಯಾಗ್ರಹಿಗಳಿಗೆ ತತ್ವತಃ ವಿರೋಧವಿತ್ತೆಂದಲ್ಲ. ಆದರೆ ಶಾಸನಭಂಗ ಮಾಡುವವರೊಂದಿಗೆ ಸರಕಾರ ವ್ಯವಹಾರ ನಡೆಸಲು ಇಷ್ಟಪಡಲಿಲ್ಲ. ಆಗ ಈ ಯೂರೋಪಿಯನ್ ಸಮಿತಿ ಸರಕಾರಕ್ಕೂ ಭಾರತೀಯರಿಗೂ ಮಧ್ಯಸ್ಥಿಕೆ ಮಾಡಿತು.

ಆಲ್ಬರ್ಟ್ ಕಾರ್ಟ್ ರೈಟ್ ರ ಪರಿಚಯ ಆಗಲೇ ಮಾಡಿಕೊಟ್ಟಿದ್ದೇನೆ. ಡೋಕ್‌ರಂತೆ ನಮ್ಮೊಂದಿಗೆ ಸೇರಿ ಸಹಾಯಮಾಡಿದ ಇನ್ನೊಬ್ಬರು ರೆವರೆಂಡ್ ಚಾರ್ಲ್ ಸ್ ಫಿಲಿಪ್ಸ್. ಫಿಲಿಪ್ಸ್ ಟ್ರಾನ್ಸ್‌ವಾಲ್ ನಲ್ಲಿ ಬಹುಕಾಲ ಕಾಂಗ್ರಿಗೇಷನಲ್ ಮಿನಿಸ್ಟರ್ ಆಗಿದ್ದರು.

ಹೆಂಡತಿ ಸಹ ನಮಗೆ ತುಂಬ ಉಪಕಾರ ಮಾಡಿದಳು. ಬ್ಲೂಮ್ ಫಾಂಟೇನ್ ದಿನಪತ್ರಿಕೆಯಾದ "ದಿ ಫ್ರೆಂಡ್" ಪತ್ರಿಕೆಯ ಸಂಪಾದಕತ್ವವನ್ನು ಬಿಟ್ಟು ಯೂರೋಪಿಯನ್‌ರ ವಿರೋಧವನ್ನೂ ಲೆಕ್ಕಿಸದೆ, ಭಾರತೀಯರ ಹೋರಾಟಕ್ಕೆ ಬೆಂಬಲವಾಗಿ ನಿಂತ ಮೂರನೆ ಕ್ರೈಸ್ತ ಧರ್ಮಬೋಧಕರೆಂದರೆ ರೆವೆರೆಂಡ್ ಡ್ಯೂಡ್ನೆ ಡ್ರೂ. ದಕ್ಷಿಣ ಆಫ್ರಿಕದಲ್ಲೆಲ್ಲ ಅವರು ಉತ್ತಮವಾಗ್ಮಿ. 'ಪ್ರೆಟೋರಿಯ ನ್ಯೂಸ್' ಸಂಪಾದಕರಾದ ವಿರೆಸ್ಟೆಂಟ್‌ರೂ ಅದೇ ರೀತಿ ಸ್ವಯಂ ಪ್ರೇರಿತರಾಗಿ ಸಹಾಯಕ್ಕೊದಗಿದರು. ಯೂರೋಪಿಯನ್‌ರು ಪ್ರೆಟೋರಿಯ ನಗರಭವನದಲ್ಲಿ ಪ್ರೆಟೋರಿಯ ಮೇಯರ್ ಅಧ್ಯಕ್ಷತೆಯಲ್ಲಿ ಕರಾಳಶಾಸನಕ್ಕೆ ಬೆಂಬಲಕೊಡಲೂ ಭಾರತೀಯರ ಚಳವಳಿ ಖಂಡಿಸಲೂ ದೊಡ್ಡ ಸಭೆ ಸೇರಿಸಿದರು. ಆ ಸಭೆಯಲ್ಲಿ ಬಹುಮತ ಭಾರತೀಯರಿಗೆ ವಿರೋಧವಿದ್ದರೂ ಅಧ್ಯಕ್ಷರು ಕುಳಿತುಕೊಳ್ಳಲು ಅಪ್ಪಣೆ ಮಾಡಿದರೂ ಬಹುಮತ ವಿರೋಧಿಸುವ ಧೈರ್ಯ ಮಾಡಿದರು ವಿರೆಸ್ಟೆಂಟ್ ಒಬ್ಬರೇ. ಯೂರೋಪಿಯನ್‌ರು ಅವರ ಮೇಲೆ ಕೈ ಮಾಡುವದಾಗಿ ಹೆದರಿಸಿದರು; ಆದರೂ ಸಿಂಹದಂತೆ ಎಲ್ಲರನ್ನೂ ತೃಣೀಕರಿಸಿ ಅಚಲರಾಗಿ ನಿಂತರು; ಕೊನೆಗೆ ಯಾವ ನಿರ್ಣಯವನ್ನೂ ಮಾಡದೆ ಸಭೆ ಚದರಬೇಕಾಯಿತು. ಯಾವ ಸಂಸ್ಥೆಗೂ ಸದಸ್ಯರಲ್ಲದಿದ್ದರೂ ನಮಗೆ ಉಪಕಾರ ಮಾಡುವ ಅವಕಾಶ ಕಳೆದುಕೊಳ್ಳದ ಯೂರೋಪಿಯನ್‌ರು ಅನೇಕರಿದ್ದರು. ಅವರೆಲ್ಲರ ಹೆಸರನ್ನೂ ಹೇಳದೆ ಎರಡು ಮೂರು ಜನ ಮಹಿಳೆಯರ ಪರಿಚಯ ಮಾಡಿಕೊಟ್ಟು ಈ ಅಧ್ಯಾಯ ಮುಗಿಸುತ್ತೇನೆ. ಲಾರ್ಡ್ ಹಾಟ್‌ಹೌಸ್‌ರ ಮಗಳಾದ ಕುಮಾರಿ ಹಾಟ್‌ಹೌಸ್ ಅವರಲ್ಲಿ ಒಬ್ಬಳು. ಲಾರ್ಡ್ ಮಿಲ್ನರ್ ಇಷ್ಟಕ್ಕೆ ವಿರೋಧವಾಗಿ ಬೋಅರ್ ಯುದ್ಧ ಕಾಲದಲ್ಲಿ ಆಕೆ ಟ್ರಾನ್ಸ್‌ವಾಲ್‌ಗೆ ಬಂದಳು. ಲಾರ್ಡ್‌ಕಿಚನರ್ ಟ್ರಾನ್ಸ್ ವಾಲ್ ಮತ್ತು ಫ್ರೀ ಸ್ಟೇಟ್‌ನಲ್ಲಿ "ಕಾನ್‌ಸೆನ್‌ಟ್ರೇಷನ್ ಕ್ಯಾಂಪ್" {ಸಾಮೂಹಿಕ ಸೆರೆಮನೆ} ಏರ್ಪಡಿಸಿ ದಬ್ಬಾಳಿಕೆ ನಡೆಸಿದಾಗ ಈಕೆ ಒಬ್ಬಳೇ ಬೋಅರ್ ಹೆಂಗಸರ ಮಧ್ಯೆ ಓಡಾಡಿ ಅವರಿಗೆ ಧೈರ್ಯಕೊಟ್ಟು ಹಿಮ್ಮೆಟ್ಟಬಾರದಾಗಿ ಪ್ರೋತ್ಸಾಹಿಸಿದಳು. ಬೋಅರ್ ಯುದ್ಧ ಸಂಬಂಧದಲ್ಲಿ ಇಂಗ್ಲಿಷ್‌ರ ನೀತಿ ತೀರ ಅನ್ಯಾಯವೆಂದು ಆಕೆ ನಂಬಿದ್ದಳು. ಆದ್ದರಿಂದ ದಿವಂಗತ ಸ್ಟೆಡ್‌ರಂತೆ ಇಂಗ್ಲಂಡ್‌ಗೆ ಯುದ್ಧದಲ್ಲಿ ಸೋಲಾಗಲೆಂದು ಆಕೆಯೂ ದೇವರಿಗೆ ಮೊರೆಯಿಟ್ಟು ಪ್ರಾರ್ಥಿಸಿದಳು. ಬೋಅರ್ ಗಳಿಗೆ ಈ ರೀತಿ ಸಹಾಯಮಾಡಿದ ಮೇಲೆ, ತಮ್ಮ ಸರ್ವಶಕ್ತಿಯಿಂದ ಅನ್ಯಾಯ ಎದುರಿಸಿದ ಬೋಅರ್ ರೇ ಈಗ ಅರ್ಥವಿಲ್ಲದ ದ್ವೇಷದಿಂದ ಭಾರತೀಯರಿಗೆ ಅನ್ಯಾಯ ಮಾಡಲಿದ್ದಾರೆಂದು ಕೇಳಿ ಆಕೆಗೆ ಸಿಡಿಲುಬಡಿದಂತಾಯಿತು. ಬೋಅರ್‌ರಿಗೆ ಆಕೆಯ ಮೇಲೆ ವಿಶೇಷ ಗೌರವ ಪ್ರೀತಿ ಇತ್ತು. ಜನರಲ್ ಬೋಥಾರವರಿಗೆ ಆಕೆಯಲ್ಲಿ ಬಹಳ ವಿಶ್ವಾಸ; ಈ ಕರಾಳ ಶಾಸನ ರದ್ದಾಗಲು ಬೋಅರರ ಸಹಾನುಭೂತಿ ಸಂಪಾದಿಸಲು ವಿಶೇಷ ಸಹಾಯ ಮಾಡಿದಳು.

ಎರಡನೆಯವಳು ಕುಮಾರಿ ಆಲಿವ್ ಷ್ರೀನರ್. ಈಕೆಯ ಪರಿಚಯ ಈ ಹಿಂದಿನ ಅಧ್ಯಾಯಗಳಲ್ಲಿ ಆಗಲೇ ಮಾಡಿಕೊಟ್ಟಿದ್ದೇನೆ. ದಕ್ಷಿಣ ಆಫ್ರಿಕದಲ್ಲಿ ಷ್ರೀನರ್ ಹೆಸರನ್ನು ಯಾರೂ ಅಲಕ್ಷ್ಯ ಮಾಡುವಂತೆ ಇಲ್ಲ. ಕುಮಾರಿ ಷ್ರೀನರ್ ಮದುವೆಯಾದಾಗ,

ಶ್ರೀನರ್ ಮನೆತನದೊಡನೆ ಆಕೆಗಿದ್ದ ಸಂಬಂಧ ದಕ್ಷಿಣ ಆಫ್ರಿಕದ ಯೂರೋಪಿಯನ್‌ರು ಮರೆಯದಂತೆ ಆಕೆಯ ಗಂಡನೇ 'ಶ್ರೀನರ್' ಎಂದು ಆಕೆಯ ಹೆಸರು ಇಟ್ಟುಕೊಂಡನಂತೆ. ಇದು ಒಣ ಜಂಭಕ್ಕಲ್ಲ; ಏಕೆಂದರೆ ಶ್ರೀನರ್ ಎಷ್ಟು ಪಂಡಿತಳೊ, ಅಷ್ಟು ನಿರಾಡಂಬರದ ಸರಳ ಹೃದಯ. ಆಕೆಯೊಂದಿಗೆ ನನಗೆ ವಿಶೇಷ ಸಲಿಗೆಯಿತ್ತು. ನೀಗ್ರೋಚಾಕರರಿಗೂ ತನಗೂ ಯಾವ ಭೇದಭಾವವನ್ನೂ ಎಣಿಸುತ್ತಿರಲಿಲ್ಲ. 'ಕನಸುಗಳು' ಮುಂತಾದ ಅನೇಕ ಪುಸ್ತಕ ಬರೆದಿದ್ದಳು. ಆದರ ಅಡಿಗೆ ಮಾಡಲು ಪಾತ್ರೆ ತೊಳೆಯಲೂ, ಪೊರಕೆ ಹಿಡಿದು ಗುಡಿಸಲೂ ಹಿಂಜರಿಯುತ್ತಿರಲಿಲ್ಲ. ಈ ಉಪಯುಕ್ತ ದೇಹಶ್ರಮದಿಂದ ತನಗೆ ತೊಂದರೆಯಾಗುವ ಬದಲು ತನ್ನ ಕಾವ್ಯ ಪ್ರತಿಭೆ ಹೆಚ್ಚಿ ತನ್ನ ಭಾಷಾಲಹರಿಗೆ, ವಿವೇಛನಾಶಕ್ತಿಗೆ ಪುಟ ದೊರೆಯುವುದೆಂದು ಆಕೆಯ ಅಭಿಪ್ರಾಯ. ದಕ್ಷಿಣ ಆಫ್ರಿಕದ ಯೂರೋಪಿಯನ್‌ರಲ್ಲಿ ಆಕೆಗಿದ್ದ ಪೂರ್ಣ ಪ್ರಭಾವವನ್ನೆಲ್ಲ ಈ ಸಾಧ್ವೀಮಣಿ ಭಾರತೀಯರಿಗಾಗಿ ಧಾರೆಯೆರೆದಳು.

ಕುಮಾರಿ ಮಾಲ್ಟಿನೊ ಮೂರನೆಯಾಕೆ. ದಕ್ಷಿಣ ಆಫ್ರಿಕದಲ್ಲಿ ಪ್ರಸಿದ್ಧ ಪುರಾತನ ವಂಶಸ್ಥಳಾದ ಈ ಸಾಧ್ವಿ ಭಾರತೀಯರಿಗೆ ತುಂಬ ಸಹಾಯ ಮಾಡಿದಳು.

ಯೂರೋಪಿಯನ್‌ರ ಈ ಸಹಾನುಭೂತಿಯಿಂದ ದೊರೆತ ಫಲವೇನು ಎಂದು ವಾದಕರು ಕೇಳಬಹುದು. ಅವರ ಸಹಾನುಭೂತಿಯ ಪ್ರತ್ಯಕ್ಷ ಪಲಾಫಲ ವಿವರಿಸಲು ಈ ಅಧ್ಯಾಯ ಬರೆಯಲಿಲ್ಲ. ಈ ನಮ್ಮ ಸ್ನೇಹಿತರು ಮೇಲೆ ಹೇಳಿದಂತೆ ಮಾಡಿದ ಕೆಲಸವೇ ನಮಗೆ ದೊರೆತ ಸಹಾಯಕ್ಕೆ ಸಾಕ್ಷಿ. ಸತ್ಯಾಗ್ರಹ ಚಳುವಳಿಯ ಫಲ ಚಳುವಳಿಯಲ್ಲೆ ಅಡಗಿರುವುದು ಸತ್ಯಾಗ್ರಹದ ಒಳಗುಟ್ಟು. ಸ್ವಾವಲಂಬನ, ತ್ಯಾಗಬುದ್ಧಿ, ದೇವರಲ್ಲಿ ನಂಬಿಕೆಯೇ ಸತ್ಯಾಗ್ರಹದ ತಳಹದಿ ಯೋರೋಪಿಯನ್ ಸಹಾಯಕರ ಹೆಸರು ಹೇಳುವದರಲ್ಲಿ ಸತ್ಯಾಗ್ರಹಿಗಳ ಕೃತಜ್ಞತೆ ಅರ್ಪಿಸುವುದದೇ ನನ್ನ ಉದ್ದೇಶ. ಇಲ್ಲವಾದರೆ ಈ ಚರಿತ್ರೆ ಅಪೂರ್ಣವಾದೀತು. ಈ ಪಟ್ಟಿಯಲ್ಲಿ ಎಲ್ಲರನ್ನೂ ತಿಳಿಸಿಲ್ಲ; ಮುಖ್ಯರಾದ ಕೆಲವರ ಹೆಸರು ಹೇಳಿ ಎಲ್ಲರಿಗೂ ನಮ್ಮ ವಂದನೆ ಅರ್ಪಿಸಿದ್ದೇನೆ. ಎರಡನೆಯಾದಾಗಿ ನಿರ್ಮಲ ಮನಸ್ಸಿನಿಂದ ಮಾಡಿದ ಎಲ್ಲ ಕಾರ್ಯವೂ ಫಲ ಕೊಟ್ಟೇಕೊಡುತ್ತದೆ ಎಂದು ಸತ್ಯಾಗ್ರಹಿಯಾದ ನನ್ನ ದೃಢವಿಶ್ವಾಸ. ಆ ಫಲ ನಮಗೆ ಗೋಚರವಾಗಬಹುದು, ಆಗದಿರಬಹುದು. ಕೊನೆಯಾದಾಗಿ–ಅಲ್ಪ ವಿಷಯವೇನಲ್ಲ– ಸತ್ಯವನ್ನವಲಂಬಿಸಿದ ಎಲ್ಲ ಚಳುವಳಿಗೂ ನಿರ್ಮಲ ಮನಸ್ಕರ ಅಪ್ರಾರ್ಥಿತ ಸಹಾಯ ತಾನಾಗಿಯೇ ಒದಗುತ್ತದೆಂದು ತೋರಿಸಲು ಪ್ರಯತ್ನಪಟ್ಟಿದ್ದೇನೆ. ಸತ್ಯಾವಲಂಬನ ಹೊರತು ಯೂರೋಪಿಯನ್ ಸಹಾಯ ಪಡೆಯಲು ನಾವು ಬೇರೆ ಯಾವ ಪ್ರಯತ್ನವನ್ನೂ ಮಾಡಲಿಲ್ಲವೆಂದರೆ ಅದು ಸ್ಪಷ್ಟವಾಗುತ್ತದೆ. ನಮ್ಮ ಹೋರಾಟದ ಅಂತಶ್ಶಕ್ತಿಯಿಂದ ಆಕರ್ಷಿತರಾಗಿಯೇ ಯೂರೋಪಿಯನ್ ಸ್ನೇಹಿತರು ನಮ್ಮ ಸಹಾಯಕ್ಕೆ ಒದಗಿದರು.

೨೪. ಹೆಚ್ಚು ಅಂತಃಕಲಹಗಳು

ನಮ್ಮೊಳಗಿನ ಒಡಕಿನ ಕೆಲವನ್ನು ೨೨ನೇ ಅಧ್ಯಾಯದಲ್ಲಿ ತಿಳಿಸಿದ್ದೇನೆ. ಜೋಹಾನ್ಸಬರ್ಗ್‌ನಲ್ಲಿ ನನ್ನ ಮೇಲೆ ಆತ್ಯಾಚಾರ ನಡೆದಾಗ ನನ್ನ ಮನೆಯವರು ಫೀನಿಕ್ಸ್‌ನಲ್ಲಿದ್ದರು. ಬಹಳ ಕಾತುರರಾದರೂ ಅಲ್ಲಿಂದ ಹೊರಟು ಬರಲು ದಾರಿವೆಚ್ಚಕ್ಕೆ ಇರಲಿಲ್ಲ. ಗುಣವಾದೊಡನೆ ನಾನೇ ಅಲ್ಲಿಗೆ ಹೋಗಬೇಕಾಯಿತು.

ನನ್ನ ಕೆಲಸಕ್ಕಾಗಿ ನಾನು ಟ್ರಾನ್ಸ್ ವಾಲಿಗೂ ನೇಟಾಲಿಗೂ ಪದೇ ಪದೇ ತಿರುಗಾಡಬೇಕಾಗಿತ್ತು. ನೇಟಾಲ್ ಸ್ನೇಹಿತರು ಅಲ್ಲೂ ನಮ್ಮ ಒಪ್ಪಂದಕ್ಕೆ ಅಪಾರ್ಥಮಾಡಿಕೊಂಡಂತೆ ಪತ್ರ ಬರೆದಿದ್ದರು. ಒಪ್ಪಂದವನ್ನು ಟೀಕಿಸುವ ಪತ್ರಗಳು 'ಇಂಡಿಯನ್ ಓಪಿನಿಯನ್'ಗೆ ಒಂದು ಹೊರೆ ಬಂದಿದ್ದವು. ಸತ್ಯಾಗ್ರಹ ಟ್ರಾನ್ಸ್ ವಾಲಿನಲ್ಲಿ ಮಾತ್ರ ನಡೆಯುತ್ತಿದ್ದರೂ, ನೇಟಾಲಿನ ಭಾರತೀಯರ ಸಹಾನುಭೂತಿ ಅತ್ಯವಶ್ಯವಾಗಿತ್ತು. ಟ್ರಾನ್ಸ್‌ವಾಲ್ ಚಳುವಳಿ ಕೇವಲ ಒಂದು ಸ್ಥಳೀಯ ಪ್ರಶ್ನೆಯಾಗಿರದೆ ನಿಜವಾಗಿಯೂ ದಕ್ಷಿಣ ಆಫ್ರಿಕದ ಎಲ್ಲ ಭಾರತೀಯರ ಯುದ್ಧವಾಗಿತ್ತು. ಆದ್ದರಿಂದ ದರ್ಬಾನಿಗೆ ಹೋಗಿ ಅಲ್ಲಿದ್ದ ಸಂಶಯ ನಿವಾರಿಸುವದು ಅವಶ್ಯವಾಯಿತು. ಅದಷ್ಟು ಶೀಘ್ರವಾಗಿ ದರ್ಬಾನ್‌ಗೆ ಹೊರಟೆ.

ದರ್ಬಾನ್‌ನಲ್ಲಿ ಭಾರತೀಯರ ಸಾರ್ವಜನಿಕ ಸಭೆ ಒಂದನ್ನು ಕರೆಯಲಾಯಿತು. ಈ ಸಭೆಯಲ್ಲೂ ನನ್ನ ಮೇಲೆ ಅತ್ಯಾಚಾರ ನಡೆಯಬಹುದೆಂದು ಕೆಲವು ಸ್ನೇಹಿತರು ಎಚ್ಚರ ಕೊಟ್ಟಿದ್ದರು. ಸಭೆಗೆ ಹೋಗಲೇಕೂಡದಾಗಿಯೂ ಹೋದರೆ ಅವಶ್ಯ ಸಿದ್ಧತೆ ಮಾಡಿಕೊಳ್ಳಬೇಕಾಗಿಯೂ ಸಲಹೆ ಕೊಟ್ಟರು. ಎರಡಕ್ಕೂ ನಾನು ಒಪ್ಪುವಂತೆ ಇರಲಿಲ್ಲ. ಯಜಮಾನ ಕರೆದಾಗ ಸೇವಕ ಹೆದರಿ ಹಿಂದೆ ಸರಿದರೆ ಸೇವಕನೆಂಬ ಹೆಸರು ನಿರರ್ಥಕ. ಯಜಮಾನ ಶಿಕ್ಷಿಸುತ್ತಾನೆಂದು ಹೆದರಿದರು ಸೇವಕನೆಂದೆಣಿಸಲು ಅಯೋಗ್ಯನಾಗುತ್ತಾನೆ. ಸಾರ್ವಜನಿಕ ಸೇವೆ ಮುಳ್ಳಿನ ಮೇಲೆ ನಡೆದಂತೆ. ಸೇವಕನಾದವನು ಕೀರ್ತಿ ಪಡೆಯಲು ಸಿದ್ಧನಿದ್ದರೆ ದೂರಿಗೆ ಹಿಂದೆಗೆಯಬಾರದು. ಆದ್ದರಿಂದ ನಿಯತ ಕಾಲಕ್ಕೆ ಸರಿಯಾಗಿ ನಾನು ಸಭೆ ಸೇರಿದೆ. ಒಪ್ಪಂದವಾದ ಬಗೆ ತಿಳಿಸಿ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಟ್ಟೆ. ಸಭೆ ಸೇರಿದಾಗ ಸಂಜೆ ಎಂಟು ಗಂಟೆಯಾಗಿತ್ತು. ಸಭೆ ಮುಗಿಯುವ ಹೊತ್ತಿಗೆ ಒಬ್ಬ ಪಠಾಣ ದೊಡ್ಡದೊಂದು ದೊಣ್ಣೆ ಹಿಡಿದು ವೇದಿಕೆಯ ಮೇಲೆ ನುಗ್ಗಿದ. ಅಷ್ಟು ಹೊತ್ತಿಗೆ ಸರಿಯಾಗಿ ದೀಪಗಳನ್ನೆಲ್ಲ ಆರಿಸಿದ. ಒಡನೆ ಪರಿಸ್ಥಿತಿಯನ್ನರಿತೆ. ಅಧ್ಯಕ್ಷರಾದ ಸೇಠ್ ದಾವುದ್ ಮಹಮದ್‌ರು ಮೇಜಿನ ಮೇಲೆ ನಿಂತು ಗಲಭೆ ಅಡಗಿಸಲು ಪ್ರಯತ್ನಪಟ್ಟರು. ವೇದಿಕೆಯ ಮೇಲಿದ್ದ ಕೆಲವರು ನನ್ನನ್ನು ಸುತ್ತುವರಿದು ಕಾವಲಾಗಿ ನಿಂತರು. ಅತ್ಯಾಚಾರ ನಡೆಯಬಹುದೆಂದು ಯೋಚಿಸಿದ ಸ್ನೇಹಿತರು ಕೆಲವರು ಎಲ್ಲಕ್ಕೂ ಸಿದ್ಧರಾಗಿಯೇ ಬಂದಿದ್ದರು. ಒಬ್ಬನ ಜೇಬಿನಲ್ಲಿ ಒಂದು ರಿವಾಲ್ವರ್ ಇತ್ತು; ಆದರಿಂದ ಒಂದು ಹುಸಿಗುಂಡು ಹಾರಿಸಿದರು. ಈ ಮಧ್ಯೆ ಪಾರ್ಸಿ

ರುಸ್ತುಂಜೀ ಸಭೆಯಲ್ಲಿ ಕಾರ್ಮೋಡ ಕವಿಯುವದು ಕಂಡು ಪೋಲೀಸ್ ಸ್ಟೇಷನ್ನಿಗೆ ಹೋಗಿ ಸೂಪರಿಂಟೆಂಡೆಂಟ್ ಅಲೆಗ್ಝಾಂಡರ್‌ರಿಗೆ ವರ್ತಮಾನ ಕೊಟ್ಟಿದ್ದರು. ಅವರು ಪೋಲೀಸ್ ಪಡೆ ಕಳುಹಿಸಿಕೊಟ್ಟರು. ಪೋಲೀಸಿನವರು ಗುಂಪಿನ ಮಧ್ಯೆ ನನ್ನ ಬಳಿ ಬಂದು ನನ್ನನ್ನು ಪಾರ್ಸಿ ರುಸ್ತುಂಜಿಯ ಮನೆಗೆ ಕರೆದುಕೊಂಡು ಹೋದರು.

ಮಾರನೆ ದಿನ ಬೆಳಿಗ್ಗೆ ಪಾರ್ಸಿ ರುಸ್ತುಂಜೀ ದರ್ಬಾನಿನ ಪಠಾಣರನ್ನೆಲ್ಲ ಕರೆಸಿ ಅವರ ಸಂದೇಹಗಳನ್ನೆಲ್ಲ ನನಗೆ ತಿಳಿಸಲು ಹೇಳಿದರು. ಅವರನ್ನು ಸಮಾಧಾನಪಡಿಸಲು ಯತ್ನ ಮಾಡಿದೆ; ಆದರೆ ಸಾಧ್ಯವಾಗಲಿಲ್ಲ. ನಾನು ದ್ರೋಹಿ ಎಂಬ ಭಾವನೆ ಅವರ ಮನಸ್ಸಿನಲ್ಲಿ ನಾಟಿ ಹೋಗಿತ್ತು; ಆ ವಿಷಬೀಜ ಹೋಗುವವರೆಗೂ ಅವರೊಂದಿಗೆ ಚರ್ಚೆ ನಿಷ್ಪ್ರಯೋಜನವೆನಿಸಿತು. ವಾದವಿವರಣೆಗಳಿಂದ ಸಂಶಯಪಿಶಾಚಿ ಗೆಲ್ಲಲು ಸಾಧ್ಯವಿಲ್ಲ.

ಅದೇ ದಿನ ಫೀನಿಕ್ಸ್‌ಗೆ ಹೋಗಲು ದರ್ಬಾನ್‌ನಿಂದ ಪ್ರಯಾಣ ಮಾಡಿದೆ. ಹಿಂದಿನ ದಿನ ನನ್ನನ್ನು ರಕ್ಷಿಸಿದ ಸ್ನೇಹಿತರು ಒಬ್ಬನನ್ನೇ ಕಳುಹಲು ಇಷ್ಟ ಪಡದೆ ಫೀನೀಕ್ಸ್ ವರೆಗೆ ಬರುವುದಾಗಿ ತಿಳಿಸಿದರು. "ಬೇಡವೆಂದರೂ ನೀವು ಹಟ ಹಿಡಿದರೆ ನನ್ನ ಯತ್ನವಿಲ್ಲ. ಆದರೆ ಫೀನಿಕ್ಸ್ ಒಂದು ಅರಣ್ಯ. ನಾವು ನಿಮಗೆ ಊಟಕ್ಕೆ ನೀಡಲು ಸಾಧ್ಯವಿಲ್ಲದಿದ್ದರೆ ಏನು ಮಾಡುತ್ತೀರಿ" ಎಂದೆ.

ಅದಕ್ಕೊಬ್ಬರು "ಆ ಭಯ ನಮಗೇನಿಲ್ಲ. ನಮ್ಮ ಪಾಡು ನಾವು ನೋಡಿಕೊಳ್ಳುತ್ತೇವೆ. ನಾವು ಯೋಧರಿರುವಾಗ ನಿಮ್ಮ ಅಡಿಗೆ ಮನೆ ಸೂರೆ ಮಾಡಲು ನಮಗೆ ಮಾಫಿ ತಾನೆ" ಎಂದರು. ಈ ರೀತಿ ಫೀನಿಕ್ಸ್ ವರೆಗೂ ಸುಖಪ್ರಯಾಣ ಮಾಡಿದೆವು.

ಈ ನನ್ನ ಸ್ವಯಂ ಪ್ರೇರಿತ ಅಂಗರಕ್ಷಕ ಪಡೆಯಲ್ಲಿ ನೇಟಾಲ್‌ನಲ್ಲಿಯೇ ಹುಟ್ಟಿದ ಜಾಕ್ ಮೊದಲಿ ಎಂಬ ತಮಿಳ ಮಲ್ಲಯುದ್ಧದಲ್ಲಿ ಗಟ್ಟಿಗನೆಂದು ಭಾರತೀಯರಲ್ಲಿ ಹೆಸರಾಗಿದ್ದ. ಬಿಳಿಯವನಾಗಲಿ ಬಣ್ಣದವನಾಗಲಿ ಮಲ್ಲಯುದ್ಧದಲ್ಲಿ ದಕ್ಷಿಣ ಆಫ್ರಿಕದಲ್ಲಿ ಆತನನ್ನು ಎದುರಿಸುವವರು ಯಾರೂ ಇಲ್ಲವೆಂದು ಆತನೂ ಆತನ ಸ್ನೇಹಿತರೂ ನಂಬಿದ್ದರು.

ದಕ್ಷಿಣ ಆಫ್ರಿಕದಲ್ಲಿ ಮಳೆ ಬಂದಾಗ ವಿನಾ ಸದಾ ಬಯಲಲ್ಲಿ ಮಲಗುವದೇ ನನ್ನ ಅಭ್ಯಾಸ. ಈಗ ಆ ಅಭ್ಯಾಸ ಬಿಡಲು ನಾನು ಸಿದ್ಧನಿರಲಿಲ್ಲ. ಆದ್ದರಿಂದ ನನ್ನ ದೇಹರಕ್ಷಕನು ರಾತ್ರಿಯೆಲ್ಲ ನನಗೆ ಪಹರೆಕೊಡಲು ನಿಶ್ಚಯಿಸಿದ. ಇವರ ಹೆದರಿಕೆಯನ್ನು ಗೇಲಿ ಮಾಡುತಲಿದ್ದರೂ ಅವರಿದಿರಿನಲ್ಲಿ ಮಾತ್ರ ನನಗೆ ನಿರ್ಭಯ. ಆ ರಕ್ಷಕರಿಲ್ಲದಿದ್ದರೆ ಅದೇ ಸಮಾಧಾನದಿಂದ ನಿದ್ರೆ ಮಾಡುತ್ತಿದ್ದನೇ ಎಂದು ಆಶ್ಚರ್ಯ ಪಡುತ್ತಿದ್ದೆ. ಏನಾದರೂ ಸ್ವಲ್ಪ ಸದ್ದಾದರೆ ಹೆದರುತ್ತಿದ್ದೆ. ದೇವರಲ್ಲಿ ನನಗೆ ಅಚಲ ವಿಶ್ವಾಸವಿದೆ ಎಂದು ಭಾವಿಸಿದ್ದೇನೆ. ನಮ್ಮ ಜೀವನದಲ್ಲಿ ಸಾವು ಒಂದು ವಿಶೇಷ ಪರಿವರ್ತನೆ; ಅದು ಎಂದು ಒದಗಿದರೂ ಅದನ್ನು ಸ್ವಾಗತಿಸಬೇಕು ಎಂಬ ತತ್ವಕ್ಕೆ ನಾನು ಅನೇಕ ವರ್ಷಗಳಿಂದ ಮನಸೋತಿದ್ದೇನೆ.

ನನ್ನ ಮನಸ್ಸಿನಲ್ಲಿ ಯಾವ ಭಯವೂ ಇರಲಾಗದೆಂದು-ಸಾವಿನ ಭಯ ಸಹ-ಮನಃಪೂರ್ವಕವಾಗಿ ಬಹಳ ಪ್ರಯತ್ನಪಟ್ಟಿದ್ದೇನೆ. ಆದರೂ ಬಹುದಿನಗಳಿಂದ ಕಳೆದುಳಿದ ಸ್ನೇಹಿತನನ್ನು ಕಂಡಂತೆ ಆನಂದದಿಂದ ಸಾವನ್ನಪ್ಪಲು ಸಮಯ ದೊರೆತಾಗ ನಾನು ಸಂತೋಷಪಡದ ಅನೇಕ ಸಂದರ್ಬ ನೆನಪಿನಲ್ಲಿವೆ. ಧೈರ್ಯಶಾಲಿಯಾಗಲು ಈ ರೀತಿ ಮನುಷ್ಯ ಎಷ್ಟೇ ಪ್ರಯತ್ನ ಪಟ್ಟರೂ ಇನ್ನೂ ಹೇಡಿಯಾಗಿಯೇ ಉಳಿದಿದ್ದಾನೆ. ರಕ್ತಗತವಾಗದ ಶುಷ್ಕ ತತ್ವೋಪದೇಶದಿಂದ ಜೀವನಸಂಗ್ರಾಮದ ಸಂದಿಗ್ಧ ಸನ್ನಿವೇಶಗಳಲ್ಲಿ ಯಾವ ಪ್ರಯೋಜನವೂ ಆಗುವುದಿಲ್ಲ. ಅಲ್ಲದೆ ಹೊರಗಿನ ಸಹಾಯ ಒದಗಿ ಅದನ್ನು ನಾವು ಸ್ವೀಕರಿಸಿದರೆ ನಮ್ಮ ಆತ್ಮಶಕ್ತಿ ಕುಂದುತ್ತದೆ. ಇಂತಹ ಆಶೆಯ ಬಲೆಗೆ ಬೀಳದಂತೆ ಸತ್ಯಾಗ್ರಹಿ ಸದಾ ಜಾಗೃತನಿರಬೇಕು.

ಫೀನಿಕ್ಸ್‌ನಲ್ಲಿದ್ದಾಗ ನಾನು ಮಾಡಿದ್ದು ಒಂದೇ ಕೆಲಸ. ನಮ್ಮ ಒಪ್ಪಂದದ ವಿಷಯವಾಗಿ ಸಂಶಯಗಳನ್ನು ನಿವಾರಿಸಲು ಅನೇಕ ಲೇಖನ ಬರೆದೆ; ಬಂದ ಆಕ್ಷೇಪಣೆ ಟೀಕೆಗಳಿಗೆ ವಿಶದವಾಗಿ ಉತ್ತರ ಹೇಳಿ 'ಇಂಡಿಯನ್ ಓಪಿನಿಯನ್'ಗೆ ಸಂಭಾಷಣೆರೂಪದಲ್ಲಿ ಸಹ ಒಂದು ಲೇಖನ ಬರೆದೆ. ಈ ಲೇಖನದಿಂದ ಒಳ್ಳೆಯ ಪರಿಣಾಮವಾಯಿತು. ಟ್ರಾನ್ಸ್‌ವಾಲ್ ಭಾರತೀಯರಲ್ಲಿದ್ದ ಸಂಶಯ ನಿವಾರಣೆ ಮಾಡದೆ ಹಾಗೇ ಬೆಳೆಯಲು ಅವಕಾಶ ಕೊಟ್ಟಿದ್ದರೆ ಬಹಳ ದುಷ್ಪರಿಣಾಮವಾಗುತ್ತಿತ್ತು. ಆ ಸಂಭಾಷಣೆ ರೂಪದ ಲೇಖನದ ಅನಂತರ ಅವರ ಸಂಶಯಗಳೆಲ್ಲ ಮಾಯವಾದವು. ಒಪ್ಪಂದವನ್ನು ಅನುಮೋದಿಸುವುದು ಬಿಡುವುದು ಟ್ರಾನ್ಸ್ ವಾಲ್ ಭಾರತೀಯರ ಕೆಲಸ. ಅವರೂ ಅವರ ನಾಯಕನೂ ಸೇವಕನೂ ಆದ ನಾನು ಒಳ್ಳೆಯ ತೊಡಕಿಗೆ ಸಿಕ್ಕಿದ್ದೆನು. ಕೊನೆಗೆ ತಾವೇ ರಿಜಿಸ್ಟರ್ ಮಾಡಿಸದ ಭಾರತೀಯರೇ ವಿರಳರಾದರು. ಏಕಕಾಲದಲ್ಲಿ ರಿಜಿಸ್ಟರ್ ಮಾಡಿಸಲು ಸಾವಿರಾರು ಅರ್ಜಿ ಬಂದ ಕಾರಣ ಅಧಿಕಾರಿಗಳಿಗೆ ನಿರ್ವಹಿಸಲು ಕಷ್ಟವಾಯಿತು. ಅತ್ಯಲ್ಪಕಾಲದಲ್ಲಿ ಭಾರತೀಯರು ತಮ್ಮ ವಚನ ಪಾಲಿಸಿದರು. ಸರಕಾರವೂ ಇದನ್ನು ಒಪ್ಪಬೇಕಾಯಿತು. ಒಡಕು ಏನಿದ್ದರೂ ಬಹಳ ಸ್ವಲ್ಪ ಜನರಲ್ಲಿ. ಕೆಲವು ಪಠಾಣರು ಪುಂಡಾಟಿಕೆ ನಡೆಸಿದಾಗ ಸ್ವಲ್ಪ ಗಲಭೆಗೆ ಅವಕಾಶವಾಯಿತು ನಿಜ. ಅಂಥ ಪುಂಡಾಟಕ್ಕೆ ಬೆಲೆ ಇಲ್ಲ. ಬರೀ ತಾತ್ಕಾಲಿಕ. ಆದರೂ ಇಂದಿನ ಪ್ರಪಂಚದಲ್ಲಿ ಹಿಂಸೆ ಅದ್ಭುತ ಶಕ್ತಿಯಾಗಿದೆ, ಅದರೆದುರು ವಿವೇಚನಾ ಶೂನ್ಯರಾಗುತ್ತೇವೆ. ಶಾಂತಚಿತ್ತರಾಗಿ ಯೊಚನೆ ಮಾಡಿದರೆ ವಿವೇಚನೆ ಕಳೆದುಕೊಳ್ಳುವ ಕಾರಣವಿಲ್ಲ. ಮೀರ್ ಆಲಂ ಮತ್ತು ಅವನ ಸ್ನೇಹಿತರು ನನಗೆ ಗಾಯಗೊಳಿಸುವ ಬದಲು ಪ್ರಾಣಹಾನಿ ಮಾಡಿದ್ದರೆಂದೇ ಭಾವಿಸೋಣ. ಅವರ ದೃಷ್ಟಿಯಲ್ಲಿ ಬೇರೆ ರೀತಿ ವರ್ತಿಸಲು ಸಾಧ್ಯವಿಲ್ಲವೆಂದರಿತು ಭಾರತೀಯರು ಪಠಾಣರನ್ನು ಕ್ಷಮಿಸಿ ಉದ್ರಿಕ್ತರಗಾದೆ ಶಾಂತ ಚಿತ್ತರಾಗಿದ್ದರೆಂದು ಭಾವಿಸೋಣ. ಆ ಉದಾರನೀತಿಯಿಂದ ಭಾರತೀಯ ಜನಾಂಗಕ್ಕೆ ಕೇಡಾಗುವ ಬದಲು ಮಹದುಪಕಾರವಾಗುತ್ತಿತ್ತು. ಎಲ್ಲ ಸಂಶಯಗಳು ನಿವಾರಣೆಯಾಗುತ್ತಿದ್ದವು. ಮೀರ್

ಆಲಂ ಮತ್ತು ಆತನ ಸ್ನೇಹಿತರಿಗೆ ತಮ್ಮ ತಪ್ಪು ಗೋಚರವಾಗುತ್ತಿತ್ತು. ನನಗಾದರೋ, ಸತ್ಯಾನ್ವೇಷಣೆಯಲ್ಲಿ–ಸತ್ಯಾಗ್ರಹ ನಡೆಯುತ್ತಿರುವಾಗ ಅನಿರೀಕ್ಷಿತ ಸಾವು ಒದಗಿದರೆ ಅದಕ್ಕಿಂತಲೂ ಹೆಚ್ಚಿನದೇನಿದೆ? ಆದರೆ ಎಲ್ಲಿ ದ್ವೇಷಕ್ಕೆಡೆ ಇಲ್ಲವೊ, ಎಲ್ಲಿ ಆತ್ಮಾವಲಂಬನವೇ ದೈನಂದಿನ ಚರ್ಯೆಯೊ, ಎಲ್ಲಿ ಯಾರು ಪರರ ಸಹಾಯಕ್ಕೆ ಕೈಯೊಡ್ಡುವದಿಲ್ಲವೊ, ಎಲ್ಲಿ ಯಾರು ನಾಯಕರಿಲ್ಲವೋ ಮತ್ತು ಆ ಕಾರಣದಿಂದ ಯಾರೂ ಅನುಯಾಯಿಗಳಲ್ಲವೋ ಅಥವಾ ಎಲ್ಲಿ ಎಲ್ಲರೂ ನಾಯಕರೋ ಮತ್ತು ಎಲ್ಲರೂ ಅನುಯಾಯಿಗಳೋ ಎಲ್ಲಿ ಹೋರಾಟಗಾರನ ಸಾವು, ಆತ ಉನ್ನತನಾದವನೇ ಇರಲ್ಲೊಲನೇಕೆ, ಹೋರಾಟವನ್ನು ಕುಗ್ಗಿಸುವ ಬದಲು ಹೋರಾಟವನ್ನು ಬಲಪಡಿಸಿತೋ ಅಂಥ ಸತ್ಯಾಗ್ರಹ ಸಂಗ್ರಾಮದಲ್ಲಿ ಮಾತ್ರ ಈ ಎಲ್ಲ ಸಂದರ್ಭಗಳೂ ಸಾಧ್ಯ.

ಸತ್ಯಾಗ್ರಹದ ಶುದ್ಧವಾದ ಹಾಗೂ ಪ್ರಧಾನವಾದ ಲಕ್ಷಣ ಅಂಥದು, ಆದರೆ ಅದು ಕಾರ್ಯತಃ ಸಾಧ್ಯವಾಗಿಲ್ಲ, ಏಕೆಂದರೆ ನಾವು ಪ್ರತಿಯೊಬ್ಬರು ದ್ವೇಷ ತೊರೆದಿಲ್ಲ. ವ್ಯವಹಾರದಲ್ಲಿ ಸತ್ಯಾಗ್ರಹದ ರಹಸ್ಯವನ್ನು ಎಲ್ಲರೂ ಅರಿತಿಲ್ಲ, ಕೆಲವರನ್ನು ಅನೇಕರು ಬುದ್ಧಿ ರಹಿತವಾಗಿ ಹಿಂಬಾಲಿಸುತ್ತಾರೆ. ಮತ್ತೆ ಟಾಲಸ್ಟಾಯ್ ಹೇಳಿದಂತೆ ಮಾನವರ ಸಮುದಾಯಕ್ಕೆ ಸತ್ಯಾಗ್ರಹ ತತ್ವವನ್ನು ಅನ್ವಯಿಸಿದ ಮೊದಲ ಪ್ರಯತ್ನ ಟ್ರಾನ್ಸ್ ವಾಲ್ ಹೋರಾಟ. ವಿಶುದ್ಧ ಸಾಮೂಹಿಕ ಸತ್ಯಾಗ್ರಹದ ಐತಿಹಾಸಿಕ ನಿದರ್ಶನ ನನಗೆ ಗೊತ್ತಿಲ್ಲ, ಏಕೆಂದರೆ ನನ್ನ ಇತಿಹಾಸ ಜ್ಞಾನ ಪರಿಮಿತ. ಆದರೆ ನಿಜವಾಗಿ ಐತಿಹಾಸಿಕ ಪೂರ್ವ ಸಂಗತಿಗಳ ಗೊಡವೆ ನಮಗೆ ಬೇಕೆಲ್ಲ. ಸತ್ಯಾಗ್ರಹದ ಮೂಲತತ್ವಗಳಿದ್ದಲ್ಲಿ ನಾನು ವಿವರಿಸಿರುವ ಪರಿಣಾಮಗಳು ರಾತ್ರಿಯನ್ನು ಹಗಲು ಹಿಂಬಾಲಿಸುವಂತೆ ತನ್ನಷ್ಟಕ್ಕೆ ತಾನೇ ಹಿಂಬಾಲಿಸಿಯಾವು. ಕಷ್ಟ, ಪ್ರಯೋಗ ಸಾಧ್ಯವಲ್ಲವೆಂದು ಹೇಳಿ ಇಂಥದೊಂದು ಅಮೂಲ್ಯ ಶಕ್ತಿಯನ್ನು ಬದಿಗೊತ್ತುವದು ಸಲ್ಲದು. ಸಾವಿರಾರು ವರ್ಷಗಳಿಂದ ಪಾಶವೀಶಕ್ತಿ ಜಗತ್ತನ್ನು ಆಳುತ್ತಿದೆ, ಮತ್ತು ಮಾನವಕುಲ ಅದರ ವಿಷಫಲವನ್ನು ಉಣ್ಣುತ್ತಿದೆ– ಎಂಬುದು ಕಣ್ಣಿದ್ದವರಿಗೆಲ್ಲ ಕಾಣಿಸುತ್ತದೆ. ಮುಂದೆಯೂ ಆದರಿಂದ ಒಳ್ಳೆಯದಾವುದೂ ಆಗುವ ಆಶೆಯಲ್ಲ. ಕತ್ತಲೆಯಿಂದ ಬೆಳಕು ಮೂಡಿಬರಬಲ್ಲುದಾದರೆ ಮಾತ್ರವೇ ದ್ವೇಷದಿಂದ ಪ್ರೇಮ ಹುಟ್ಟಿ ಬಂದೀತು.

೨೫. ಜನರಲ್ ಸ್ಮಟ್ಸ್‌ನ ವಿಶ್ವಾಸಘಾತ {?}

ನಮ್ಮನಮ್ಮೊಳಗಿನ ಒಡಕು ವಾಚಕರಿಗೆ ತಕ್ಕಷ್ಟು ಪರಿಚಯವಾಗಿದೆ. ಅವೆಲ್ಲ ನನ್ನ ಆತ್ಮಕಥೆಯ ಅನುಭವ; ಅನಿವಾರ್ಯ. ಏಕೆಂದರೆ ಸತ್ಯಾಗ್ರಹದಲ್ಲಿ ನನಗೊದಗಿದ ಸಮಸ್ಯಗಳೇ ಸತ್ಯಾಗ್ರಹಿಗಳಿಗೂ ಒದಗಿದವು. ಈಗ ಹೊರಗಿನ ಸಮಸ್ಯೆಗಳನ್ನು ನೋಡೋಣ.

ಇಲ್ಲಿ ಮಾನವಸ್ವಭಾವದ ವಿಕಾರವನ್ನು ವಿವರಿಸುವುದರಿಂದ ಈ ಅಧ್ಯಾಯದ ಶಿರೋನಾಮೆಯನ್ನೂ ಈ ಅಧ್ಯಾಯವನ್ನೂ ಬರೆಯಲು ನಾಚಿಕೆಯಾಗುತ್ತದೆ. ೧೯೦೮

ರಲ್ಲಿ ಜನರಲ್ ಸ್ಮಟ್ಸ್ ದಕ್ಷಿಣ ಆಫ್ರಿಕದ ಅತ್ಯಂತ ಪ್ರಮುಖ ವ್ಯಕ್ತಿ; ಈಗ ಪ್ರಪಂಚದಲ್ಲಿ, ಮುಖ್ಯವಾಗಿ ಬ್ರಿಟಿಷ್ ಸಾಮ್ರಾಜ್ಯದ ರಾಜಕಾರಣದಲ್ಲಿ ಅತ್ಯುನ್ನತ ಸ್ಥಾನ ಪಡೆದವರಲ್ಲಿ ಒಬ್ಬ. ಆತನ ಶಕ್ತಿ ಸಾಮರ್ಥ್ಯಗಳ ವಿಚಾರದಲ್ಲಿ ನನಗೆ ಸ್ವಲ್ಪವೂ ಅನುಮಾನವಿಲ್ಲ. ಒಳ್ಳೆಯ ನ್ಯಾಯವಾದಿಯಂತೆ ಜನರಲ್ ಸ್ಮಟ್ಸ್ ಒಳ್ಳೆಯ ಯೋಧನೂ ಹೌದು, ಆಡಳಿತಗಾರನೂ ಹೌದು. ದಕ್ಷಿಣ ಆಫ್ರಿಕದಲ್ಲಿ ಅನೇಕ ರಾಜಕೀಯ ಪಟುಗಳು ಬಂದು ಹೋಗಿದ್ದಾರೆ. ಆದರೆ ೧೯೦೭ ರಿಂದ ಇದುವರೆಗೂ ಸರಕಾರದ ಆಡಳಿತಸೂತ್ರವೆಲ್ಲ ಈತನ ಕೈಯಲ್ಲಿದೆ. ಈಗಲೂ ಆ ದೇಶದಲ್ಲಿ ಆತನಿಗೆ ಇರುವ ಸ್ಥಾನ ಯಾರಿಗೂ ಇಲ್ಲ. ದಕ್ಷಿಣ ಆಫ್ರಿಕದ ಜನ ಈಗ ಜನರಲ್ ಸ್ಮಟ್ಸ್‌ರನ್ನು ಏನೆಂದು ಕರೆಯುತ್ತಾರೊ ತಿಳಿಯದು. ಆತನ ಕ್ರಿಶ್ಚಿಯನ್ ಹೆಸರು ಜಾನ್ ಎಂದು; 'ಕಡ್ಡಿ ಜಾನಿ' ಎಂದು ದಕ್ಷಿಣ ಆಫ್ರಿಕದಲ್ಲಿ ಪ್ರಸಿದ್ಧನಾಗಿದ್ದ. ಜನರಲ್ ಸ್ಮಟ್ಸ್ ಬಹಳ ಬುದ್ಧಿವಂತ; ಮಾತಿನಲ್ಲಿ ಕಣಿಹೇಳುವವನಂತೆ ಬಹು ಚತುರ; ಆತನ ಮಾತು ಆತನಿಗೇ ಅರ್ಥವಾಗಬೇಕು. ಅನೇಕ ವೇಳೆ ಉಭಯುಪಕ್ಷದವರೂ ಅವರವರಿಗೆ ಅನುಕೂಲ ತೋರಿದಂತೆ ಅರ್ಥ ಮಾಡಿಕೊಳ್ಳಬಹುದಾಗಿತ್ತು. ಆದ್ದರಿಂದ ನನ್ನ ಇಂಗ್ಲಿಷ್ ಸ್ನೇಹಿತರು ಜನರಲ್ ಸ್ಮಟ್ಸ್‌ನೊಂದಿಗೆ ಬಹಳ ಎಚ್ಚರದಿಂದಿರಬೇಕೆಂದು ಮುಂಜಾಗ್ರತೆ ಕೊಟ್ಟಿದ್ದರು. ಅಂತಹ ಸಂದರ್ಭ ಒದಗಿದರೆ ಉಭಯ ಪಕ್ಷದವರ ವಾದವನ್ನೂ ಮೂಲೆಗೊತ್ತಿ ತನ್ನದೇ ಒಂದು ಹೊಸ ಅರ್ಥವಿವರಣೆ ಕೊಟ್ಟು ಅದನ್ನೇ ಕಾರ್ಯರೂಪಕ್ಕೆ ತರುತ್ತಿದ್ದ; ಮತ್ತು ಉಭಯಪಕ್ಷದವರೂ ತಮ್ಮ ಅಭಿಪ್ರಾಯವೇ ತಪ್ಪು, ಜನರಲ್ ಸ್ಮಟ್ಸ್ ನೇ ಸರಿ ಎನ್ನುವ ಮಟ್ಟಿಗೆ ಚತುರವಾಗಿ ವಾದಿಸಿ ಸಮರ್ಥಿಸುತ್ತಿದ್ದ. ಮುಂದೆ ವಿವರಿಸುವ ಘಟನೆಗಳು ನಡೆದಾಗ ಜನರಲ್ ಸ್ಮಟ್ಸ್ ನಮಗೆ ದ್ರೋಹ ಮಾಡಿದನೆಂದು ನಾವು ನಂಬಿದ್ದೆವು. ಅದೇ ರೀತಿ ಹೇಳಿಯೂ ಹೇಳಿದೆವು. ಭಾರತೀಯ ದೃಷ್ಟಿಯಿಂದ ಈಗಲೂ ಅದು ದ್ರೋಹವೆಂದು ನಾನು ಭಾವಿಸುತ್ತೇನೆ. ಆದರೂ ಈ ಅಧ್ಯಾಯದ ಶಿರೋನಾಮೆಯ ಮುಂದೆ ಒಂದು ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದೇನೆ; ಏಕೆಂದರೆ ಪ್ರಾಯಶಃ ಜನರಲ್ ಸ್ಮಟ್ಸ್ ರ ಕಾರ್ಯನೀತಿ ಉದ್ದೇಶಪೂರ್ವಕ ಮಾಡಿದ ದ್ರೋಹವಾಗಲಾರದು. ಉದ್ದೇಶವಿಲ್ಲದೆ ಇದ್ದರೆ ದ್ರೋಹವೆಂದು ಹೇಳಲಾಗದು. ೧೯೧೩–೧೪ ರಲ್ಲಿ ಜನರಲ್ ಸ್ಮಟ್ಸ್‌ರೊಂದಿನ ನನ್ನ ಅನುಭವ ಕಹಿಯಾಗಿರಲಿಲ್ಲ. ಹೆಚ್ಚು ಅನಾಸಕ್ತಿಯ ಭಾವದಿಂದ ಹಿಂದಿನ ಅನುಭವ ನೆನೆದರೆ ಈಗಲೂ ಕಹಿಯೆನಿಸುವುದಿಲ್ಲ. ೧೯೦೮ ರಲ್ಲಿ ಭಾರತೀಯರೊಡನೆ ಅವನ ನಡತೆ ಪ್ರಾಯಶಃ ಮನಃಪೂರ್ವಕ ದ್ರೋಹವಾಗಲಾರದು; ಆದ್ದರಿಂದ ಆತನು ನಿರಪರಾಧಿ ಇದ್ದರೂ ಇರಹುದು.

ಜನರಲ್ ಸ್ಮಟ್ಸ್‌ಗೆ ಅನ್ಯಾಯವಾಗದಂತೆಯೂ ಆತನ ವಿಷಯದಲ್ಲಿ 'ದ್ರೋಹ' ಎಂದು ನಾನು ಉಪಯೋಗಿಸಿರುವದನ್ನು ಸಮರ್ಥಿಸುವುದಕ್ಕೂ ಮುಂದಿನ ಅಧ್ಯಾಯದಲ್ಲಿ ನಾನು ಹೇಳುವ ವಿಷಯಕ್ಕೂ ಇಷ್ಟು ಮುನ್ನುಡಿ ಅಗತ್ಯ.

ಟ್ರಾನ್ಸಾವಾಲ್ ಸರ್ಕಾರಕ್ಕೆ ಒಪ್ಪಿಗೆಯಾಗುವಂತೆ ಭಾರತೀಯರು ಸ್ವಯಂ ಪ್ರೇರಿತರಾಗಿ ಹೇಗೆ ರಿಜಿಸ್ಟರ್ ಮಾಡಿಸಿಕೊಂಡರೆಂದು ನೋಡಿದ್ದೇವೆ. ಕರಾಳ ಶಾಸನ ತೆಗೆದುಹಾಕುವ

ಭಾರ ಈಗ ಸರಕಾರದ ಮೇಲೆ ಬಿತ್ತು. ತೆಗೆದುಹಾಕಿದ್ದರೆ ಸತ್ಯಾಗ್ರಹವೂ ಮುಗಿಯುತ್ತಿತ್ತು. ಅಲ್ಲಿಗೆ ಭಾರತೀಯರ ವಿರುದ್ಧ ಶಾಸನ ಎಲ್ಲ ಹೋಗುತ್ತಿದ್ದವು. ಭಾರತೀಯರ ಕಷ್ಟಗಳೆಲ್ಲ ನಿವಾರಣೆಯಾಗುತ್ತಿದ್ದವೆಂದಲ್ಲ; ಅದಕ್ಕಾಗಿ ಭಾರತೀಯರು ಶಾಸನಬದ್ಧ ಚಳುವಳಿ ನಡೆಸಲೇಬೇಕಾಗಿತ್ತು. ಕರಾಳಶಾಸನ ರೂಪದಲ್ಲಿ ಹೊಸದಾಗಿ ಬಂದ ಅಪಶಕುನಸೂಚಕ ಕಾರ್ಮೋಡ ಕರಗಿಸಲು ಮಾತ್ರ ಸತ್ಯಾಗ್ರಹ ಹೂಡಲಾಗಿತ್ತು. ಆ ಶಾಸನವನ್ನು ಒಪ್ಪಿದ್ದರೆ ಭಾರತೀಯರ ಅಪಮಾನವಾಗಿ ಮೊದಲು ಟ್ರಾನ್ಸ್‌ವಾಲ್‌ನಿಂದ ಆಮೇಲೆ ದಕ್ಷಿಣ ಆಫ್ರಿಕದಿಂದ ಸಂಪೂರ್ಣ ಉಚ್ಚಾಟನೆಗೆ ದಾರಿಯಾಗುತ್ತಿತ್ತು. ಆದರೆ ಆ ಶಾಸನ ತೊಡೆವ ಬದಲು ಜನರಲ್ ಸ್ಮಟ್ಸ್ ಇನ್ನೊಂದು ಹೊಸ ಹೆಜ್ಜೆ ಮುಂದಿಟ್ಟ. ಇವನ್ನು ಶಾಸನಕಡತದಲ್ಲಿಟ್ಟು, ಭಾರತೀಯರು ಸ್ವಯಂ ರಿಜಿಸ್ಟರ್ ಮಾಡಿಸಿಕೊಂಡುದು, ವಾಯಿದೆ ಮೀರಿ ಕೊಟ್ಟ ರಹದಾರಿಗಳನ್ನು ಶಾಸನ ಸಮ್ಮತ ಮಾಡುವದು, ಸ್ವಯಂ ರಹದಾರಿ ಪಡೆದವರನ್ನು ಶಾಸನದಿಂದ ವಿನಾಯಿತಿಮಾಡುವುದು, ಉಳಿದೆಲ್ಲ ಏಷ್ಯನ್ ರೂ ರಿಜಿಸ್ಟರ್ ಮಾಡಿಸುವುದು ಹೀಗೆ ಇನ್ನೊಂದು ಮಸೂದೆಯನ್ನು ತಂದ. ಈ ರೀತಿ ಒಂದೇ ಉದ್ದೇಶ ಸಾಧನೆಗೆ ಏಕಕಾಲದಲ್ಲಿ ಎರಡು ಶಾಸನ ಬಂದವು. ಹೊಸದಾಗಿ ಬರುವ ಭಾರತೀಯರೂ ವಾಯಿದೆಮೀರಿ ರಹದಾರಿಗೆ ಬಂದವರೂ ಎಲ್ಲರೂ ಆ ಕರಾಳ ಶಾಸನಕ್ಕೆ ತುತ್ತಾಗಬೇಕಾಯಿತು.

ಈ ಶಾಸನಮಸೂದೆ ಓದಿ ಸಿಡಿಲು ಬಡಿದಂತಾಯಿತು. ನಮ್ಮ ಜನರೆದುರು ಮುಖ ತೋರುವುದು ಹೇಗೆಂದು ತಿಳಿಯದಾಯಿತು. ನಡುರಾತ್ರಿ ಸಭೆಯಲ್ಲಿ ಕಟುವಾಗಿ ಟೀಕಿಸಿದ ನನ್ನ ಪಠಾಣಮಿತ್ರನಿಗೆ ಈಗ ಒಳ್ಳೆಯ ಅವಕಾಶ ದೊರೆಯಿತು. ಆದರೆ ಸತ್ಯಾಗ್ರಹದಲ್ಲಿ ನನಗಿದ್ದ ನಂಬಿಕೆ ಈ ಪೆಟ್ಟಿನಿಂದ ಸಡಿಲುವ ಬದಲು ಇನ್ನೂ ಬಲಗೊಂಡಿತು. ನಮ್ಮ ಸಮಿತಿಯ ಸಭೆ ಸೇರಿಸಿ ಈ ಹೊಸ ಸನ್ನಿವೇಶವನ್ನು ವಿಶದಪಡಿಸಿದೆ. "ಬೆಳ್ಳಗಿರುವುದೆಲ್ಲ ಹಾಲೆಂದು ನಂಬುವ ನೀನು ಯಾರು ಏನು ಹೇಳಿದರೂ ನಂಬುತ್ತಿ. ನಿನ್ನ ಸ್ವಂತ ವಿಷಯಗಳಲ್ಲಿ ಭೋಳೆತನ ತೋರಿಸಿದರೆ ಹೆಚ್ಚು ನಷ್ಟವಿಲ್ಲ; ಸಾರ್ವಜನಿಕ ವಿಷಯದಲ್ಲಿ ನಮ್ಮ ಜನರಲ್ಲಿ ಮತ್ತೆ ಹುಟ್ಟಿಸುವದು ಬಹಳ ಕಷ್ಟ. ಹುಮ್ಮಸ್ಸು ಇದ್ದಾಗ ಮಾಡಿದರೆ ಸರಿ; ಇಲ್ಲದಿದ್ದರೆ ನಮ್ಮ ದಿಟ್ಟತನ ನಿನಗೆ ತಿಳಿದೇ ಇದೆ. ಕಾದಾಗ ಕಬ್ಬಿಣ ಬಡಿಯಬೇಕು; ಇಲ್ಲದಿದ್ದರೆ ನಿನ್ನ ಅವಸ್ಥೆ ಮುಗಿದಂತೆಯೆ" ಎಂದು ಕೆಲವರು ಮೂದಲಿಸಿಯೂ ಬಿಟ್ಟರು.

ಅದರಲ್ಲಿ ಕಹಿ ಏನೂ ಇರಲಿಲ್ಲ. ಎಷ್ಟೋ ಸಲ ಹೀಗೆ ಅನ್ನಿಸಿಕೊಂಡಿದ್ದೆ. ನಾನು ನಗುತ್ತ "ನೀವು ಹೇಳುವ ಭೋಳೆತನ ನನಗೆ ರಕ್ತಗತವಾಗಿದೆ. ಅದು ಭೋಳೆತನವಲ್ಲ; ಮಾನವಸಹಜ ವಿಶ್ವಾಸ. ನಮ್ಮ ಸಹೋದ್ಯೋಗಿಗಳನ್ನು ನಂಬಬೇಕಾದ್ದು–ನನ್ನ ನಿಮ್ಮ ಮಾತ್ರ ಅಲ್ಲ– ನಮ್ಮೆಲ್ಲರ ಕರ್ತವ್ಯ. ಅದು ನನ್ನ ದೋಷ ಎಂದರೆ ನಿಮಗೆ ನನ್ನ ಅಗತ್ಯವಿದ್ದರೆ ನನ್ನ ಲೋಪದೋಷಗಳನ್ನೂ ಸಹಿಸಬೇಕು. ನಮ್ಮ ಜನರ ಉತ್ಸಾಹ ಕ್ಷಣಿಕವೆಂದು ನಾನು ನಂಬಲಾರೆ. ನೀವೂ ನಾನೂ ಅದೇ ಜನಾಂಗಕ್ಕೆ ಸೇರಿದವರು. ನನ್ನ ಉತ್ಸಾಹವನ್ನು ನೀವು ಆ ರೀತಿ ಭಾವಿಸಿದರೆ ಅದಕ್ಕಿಂತ ನನಗೆ ಬೇರೆ ಅಗೌರವವುಂಟೆ?

ನೀವು ಹೇಳುವ ನಿಯಮಕ್ಕೆ ನೀವು ಮಾತ್ರ ಹೊರತೆಂದು ಪ್ರಾಯಶಃ ನೀವು ತಿಳಿದಿರಬಹುದು. ಇಲ್ಲವಾದರೆ ನಿಮ್ಮಂತೆ ಎಲ್ಲರೂ ಹೇಡಿಗಳೆಂದು ಭಾವಿಸಿ ಅವರಿಗೆ ಅನ್ಯಾಯಮಾಡುತ್ತೀರಿ. ದೊಡ್ಡ ಹೋರಾಟಗಳಲ್ಲಿ ಏರಿಳಿತ ಇದ್ದೇ ಇರುತ್ತವೆ. ಎಷ್ಟೇ ಸ್ಪಷ್ಟ ಒಪ್ಪಂದವಿದ್ದರೂ ವಿಶ್ವಾಸದ್ರೋಹ ಮಾಡಲು ಇದಿರಾಳಿ ನಿಶ್ಚಯಿಸಿದರೆ ತಪ್ಪಿಸಲು ಯಾರಿಗೆ ಸಾಧ್ಯ ? ಪ್ರೋನೋಟು ಬರೆದುಕೊಡುತ್ತೇವೆ. ಪತ್ರಕ್ಕೆ ಸಹಿಮಾಡಿದ ಮೇಲೆ ಅದಕ್ಕಿಂತ ಹೆಚ್ಚಿನ ನಿಸ್ಸಂದೇಹ ಸಾಕ್ಷ್ಯ ಏನು ಬೇಕು? ಆದರೂ ಆತನ ಮೇಲೆ ದಾವೆ ಮಾಡಬೇಕು; ಆತನು ವಿರೋಧಿಸಿ ಇಲ್ಲದ ತಕರಾರು ಒಡ್ಡುತ್ತಾನೆ. ಕೊನೆಗೆ ಅಮಲ್ಜಾರಿ ನಡೆಸಿ ಜಪ್ತಿ ಮಾಡಿಸುವವರೆಗೆ ಎಷ್ಟು ಕಾಲಹರಣ, ಎಷ್ಟು ಧನವ್ಯಯ? ಈ ಹಟಮಾರಿತನ ತಪ್ಪಿಸಬಹುದೆಂದು ಯಾರು ಭರವಸೆಕೊಡಲು ಸಾಧ್ಯ? ಆದ್ದರಿಂದ ನಮ್ಮ ಮುಂದಿನ ಸಮಸ್ಯೆಯನ್ನು ಶಾಂತಿಯಿಂದ ಬಿಡಿಸಲೆತ್ನಿಸೋಣ. ಸತ್ಯಾಗ್ರಹ ಮತ್ತೊಮ್ಮೆ ಅನಿವಾರ್ಯವಾದರೆ ಇತರರು ಏನು ಮಾಡಲಿ ಬಿಡಲಿ ನಮ್ಮಲ್ಲಿ ಪ್ರತಿಯೊಬ್ಬ ಸತ್ಯಾಗ್ರಹಿಯೂ ಏನು ಮಾಡಲು ಸಾಧ್ಯ ಎಂಬುದನ್ನು ಪರ್ಯಾಲೋಚಿಸೋಣ. ನಮ್ಮಲ್ಲಿ ಪೂರ್ಣ ಆತ್ಮವಿಶ್ವಾಸವಿದ್ದರೆ ಇತರರು ಯಾರೂ ಹಿಂದೇಟು ಹಾಕಲಾರರೆಂದು ನನ್ನ ನಂಬಿಕೆ; ಒಂದು ವೇಳೆ ಸ್ವಲ್ಪ ಧೈರ್ಯಗುಂದಿದರೂ ನಮ್ಮ ಮೇಲ್ಪಂಕ್ತಿಯಿಂದ ಅವರೂ ಧೈರ್ಯಗೊಳ್ಳುತ್ತಾರೆ" ಎಂದೆ.

ಸತ್ಯಾಗ್ರಹ ಪುನಃ ಆರಂಭಮಾಡುವ ವಿಚಾರದಲ್ಲಿ ಅನುಮಾನಗೊಂಡಿದ್ದ ನನ್ನ ಮಿತ್ರರಿಗೆ ಇದರಿಂದ ಸಮಾಧಾನವಾಯಿತು. ಇದೇ ಸಮಯದಲ್ಲಿ ಕಾಛಲಿಯಾ ಮುಂದೆ ಬಂದು ತಮ್ಮ ಶಕ್ತಿ ತೋರಲು ಆರಂಭಿಸಿದರು. ಪ್ರತಿ ಪ್ರಶ್ನೆಯಮೇಲೂ ಮಿತಿವಚನದಲ್ಲಿ ತಮ್ಮ ನಿಶ್ಚಿತ ಅಭಿಪ್ರಾಯ ಹೇಳಿ ಮುಂದೆ ಏನೇ ಬರಲಿ ಅದರಂತೆ ನಡೆಯುತ್ತಿದ್ದರು. ನಮ್ಮ ಅಂತಿಮ ವಿಜಯದಲ್ಲಿ ಅವರು ಅನುಮಾನ, ದೌರ್ಬಲ್ಯ ವ್ಯಕ್ತಪಡಿಸಿದ್ದನ್ನು ನಾನು ಒಂದು ಬಾರಿಯೂ ನೋಡಲಿಲ್ಲ. ಯುಸೂಫ್ ಮಿಯ್ಯಾರು ನಾಯಕರಾಗಿ ನಿಂತು ನಮ್ಮ ನೌಕೆ ನಡೆಸಲಾಗದೆ ಕಷ್ಟ ಸಮಯವೂ ಬಂತು. ನಾವೆಲ್ಲ ಏಕಕಂಠದಿಂದ ಕಾಛಲಿಯಾರನ್ನೆ ನಾಯಕರನ್ನಾಗಿ ಆರಿಸಿದೆವು; ಅಂದಿನಿಂದ ಕೊನೆಯವರೆಗೂ ಸ್ವಲ್ಪವೂ ಎದೆಗುಂದದೆ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸಿದರು. ಅದೇ ಸ್ಥಾನದಲ್ಲಿ ಇನ್ನಾರಾದರೂ ಇದ್ದರೆ ಕಂಗೆಟ್ಟು ದಿಕ್ಕುಗಾಣದೆ ಓಡುತ್ತಿದ್ದರು; ಆದರೂ ಅವರು ಎದೆಗೆಡದೆ ಎಲ್ಲ ಕಷ್ಟವನ್ನೂ ಅನುಭವಿಸಿದರು. ಸತ್ಯಾಗ್ರಹ ಮುಂದುವರಿದಂತೆ ಕೆಲವರಿಗೆ ಸೆರೆಮನೆ ಸೇರಿ ವಿಶ್ರಾಂತಿ ಪಡೆಯುವುದು ಬಲು ಸುಲಭವಾಗಿತ್ತು; ಆದರೆ ಹೊರಗಿದ್ದು ಪ್ರತಿಯೊಂದು ಕೆಲಸವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿ, ತಕ್ಕ ವ್ಯವಸ್ಥೆ ಮಾಡಿ, ಕ್ಷಣ ಕ್ಷಣಕ್ಕೂ ಒದಗುವ ಪರಿಸ್ಥಿಗಿಯನ್ನೂ ಜನರನ್ನೂ ಹಿಡಿತದಲ್ಲಿಟ್ಟುಕೊಳ್ಳುವರು ಬಲು ಕಷ್ಟ.

ಸ್ವಲ್ಪ ದಿನದಲ್ಲಿಯೇ ಯೂರೋಪಿಯನ್ ಸಾಲಗಾರರು ಕಾಛಲಿಯಾರಿಗೆ ದೊಡ್ಡದೊಂದು ವಿಪತ್ತನ್ನೊಡ್ಡಿದರು. ಭಾರತೀಯ ವರ್ತಕರ ಸ್ವಂತ ಜವಾಬ್ದಾರಿಯ

ಮೇಲೆ ಯೂರೋಪಿಯನ್ ವರ್ತಕರು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಮಾಲು ಸಾಲಕೊಡುತ್ತಾರೆ. ಆದ್ದರಿಂದ ಅನೇಕ ಭಾರತೀಯ ವರ್ತಕರ ವ್ಯಾಪಾರ ಯೂರೋಪಿಯನ್ ವರ್ತಕರನ್ನೇ ಅವಲಂಬಿಸಿದೆ. ಭಾರತೀಯರ ವ್ಯಾವಹಾರಿಕ ಪ್ರಾಮಾಣಿಕತೆಗೆ ಯೂರೋಪಿಯನ್ ವರ್ತಕರು ಅವರಲ್ಲಿ ತೋರುತ್ತಿದ್ದ ಈ ನಂಬಿಕೆಯೇ ದೊಡ್ಡ ಸಾಕ್ಷಿ. ಅದೇ ರೀತಿ ಯೂರೋಪಿಯನ್ ವರ್ತಕರಿಗೆ ಕಾಛಲಿಯಾ ಸಾಲ ಸಲ್ಲಿಸಬೇಕಾಗಿತ್ತು. ಪ್ರತ್ಯಕ್ಷವಾಗಿರೋ ಪರೋಕ್ಷವಾಗಿಯೋ ಸರಕಾರದಿಂದ ಪ್ರೇರಿತರಾಗಿ ತತ್‌ಕ್ಷಣವೇ ಅವರು ಹಣಕ್ಕೆ ತಗಾದೆ ಮಾಡತೊಡಗಿದರು. ಆತನು ಸತ್ಯಾಗ್ರಹ ಚಳುವಳಿಗೆ ಸಹಾಯ ಮಾಡಿದ್ದರೆ ಅವಧಿ ಕೊಡುವದಾಗಿಯೂ ತಿಳಿಸಿದರು. ಇಲ್ಲವಾದರೆ ಸರಕಾರದವರು ಯಾವಾಗಲಾದರೂ ಕಾಛಲಿಯಾರನ್ನು ದಸ್ತಗಿರಿ ಮಾಡಬಹುದಾದ್ದರಿಂದ ತಮ್ಮ ಹಣ ಕಳೆದುಕೊಳ್ಳಲು ಇಷ್ಟವಿಲ್ಲವಾಗಿ ನಗದು ಪಾವತಿ ಮಾಡಬೇಕೆಂದು ಹಠ ಹಿಡಿದರು. ಭಾರತೀಯರ ಹೋರಾಟಕ್ಕೂ ತಮ್ಮ ವ್ಯಾಪಾರಕ್ಕೂ ಏನೂ ಸಂಬಂಧವಿಲ್ಲವೆಂದೂ ಅದು ತಮ್ಮ ಸ್ವಂತ ಪ್ರಶ್ನೆಯೆಂದೂ ಕಾಛಲಿಯಾ ಧೈರ್ಯದಿಂದ ಉತ್ತರಕೊಟ್ಟರು. ಅದು ತಮ್ಮ ಧರ್ಮ, ತಮ್ಮ ತಮ್ಮ ಜನರ ಆತ್ಮ ಗೌರವದ ಪ್ರಶ್ನೆ ಎಂದರು. ಅದುವರೆಗೆ ತಮಗೆ ಕೊಟ್ಟ ಪ್ರೋತ್ಸಾಹಕ್ಕೆ ಯೂರೋಪಿಯನ್ ವರ್ತಕರನ್ನು ವಂದಿಸಿದರು; ಆದರೆ ಆ ಪ್ರೋತ್ಸಾಹಕ್ಕಾಗಲಿ, ತಮ್ಮ ವ್ಯಾಪಾರಕ್ಕಾಗಲಿ ಹೆಚ್ಚಿನ ಮಹತ್ವ ಕೊಡಲಿಲ್ಲ. ಅವರ ದುಡ್ಡು ಎಲ್ಲಿಯೂ ಹೋಗುವಂತಿರಲಿಲ್ಲ. ತಾವು ಬದುಕಿರುವವರೆಗೂ ಒಂದು ಕಾಸೂ ಬಾಕಿ ನಿಲ್ಲದಂತೆ ಕೊಡುವುದಾಗಿಯೂ ತಮಗೇನಾದರೂ ವಿಪತ್ತು ಸಂಭವಿಸಿದರೂ ತಮ್ಮ ಆಸ್ತಿ, ವ್ಯವಹಾರದ ಬಾಕಿಯಿಂದ ಸಾಲ ತೀರಿಸಿಕೊಳ್ಳಬಹುದೆಂದಾಗಿಯೂ ಎಂದಿನಂತೆಯೇ ಸಾಲಗಾರರು ನಂಬಿಕೆ ಇಡಬಹುದಾಗಿತ್ತು; ಆದರೆ ಈಗ ಅವರ ಮನಸ್ಸಿನ ಮೇಲೆ ಯಾವ ಪರಿಣಾಮವೂ ಆಗುವಂತೆ ಇರಲಿಲ್ಲ. ನಿಜವಾಗಿ ನಿದ್ರಿಸುವವನನ್ನು ಎಚ್ಚರಗೊಳಿಸಬಹುದು. ಆದರೆ ನಿದ್ದೆಯ ಸೋಗುಹಾಕಿ ಮಲಗಿರುವವನನ್ನು ಎಚ್ಚೆಸುವದು ಹೇಗೆ? ಈ ಯೂರೋಪಿಯನ್ ವರ್ತಕರ ನಡತೆಯೂ ಅದೇ ರೀತಿ ಇತ್ತು. ಅವರ ಹಣಕ್ಕೆ ಏನೂ ಮೋಸವಿಲ್ಲದಿದ್ದರೂ ಕಾಛಲಿಯಾರನ್ನು ಹಿಂಸೆಪಡಿಸುವದೇ ಅವರ ಮುಖ್ಯ ಗುರಿಯಾಗಿತ್ತು.

೧೯೦೯ ಜನವರಿ ೨೨ನೇ ದಿನ ನನ್ನ ಕಚೇರಿಯಲ್ಲಿ ಸಾಲಗಾರರ ಸಭೆ ಸೇರಿತು. ಕಾಛಲಿಯಾರನ್ನು ಕೇವಲ ರಾಜಕೀಯ ಉದ್ದೇಶದಿಂದ ಆ ರೀತಿ ಒತ್ತಾಯಪಡಿಸುವದು ವ್ಯಾಪಾರಧರ್ಮಕ್ಕೆ ವಿರುದ್ಧವೆಂದು ನಾನು ಹೇಳಿದ್ದು ಅವರಿಗೆ ಸಹಿಸಲಿಲ್ಲ. ಕಾಛಲಿಯಾರ ಆಸ್ತಿಪಟ್ಟಿ ತೋರಿಸಿ ರೂಪಾಯಿಗೆ ಹದಿನಾರಾಣೆ ಸಾಲ ತೀರುವದೆಂದು ತೋರಿಸಿದೆ. ಕಾಛಲಿಯಾರ ಆಸ್ತಿ, ಲೆಕ್ಕದ ಬಾಕಿಯನ್ನು ಯಾರಾದರೂ ವಹಿಸಿಕೊಳ್ಳುವವರಿದ್ದರೆ ಮಾರಾಟ ಮಾಡಲು ಸಹ ಕಾಛಲಿಯಾ ಸಿದ್ಧರಿದ್ದರು. ಅದು ಒಪ್ಪಿಗೆಯಾಗದಿದ್ದರೆ ಅಸಲು ಬೆಲೆಗೇ ಮಾಲು ಕಟ್ಟಿಕೊಂಡು ಉಳಿದ ಹಣಕ್ಕೆ ಲೆಕ್ಕದ ಸಾಲ ಹಂಚಿಕೊಳ್ಳಬಹುದಾಗಿತ್ತು. ಈ ರೀತಿ ಒಪ್ಪಿದ್ದರೆ ಯೂರೋಪಿಯನ್ ವರ್ತಕರಿಗೆ

ಏನೂ ನಷ್ಟವಾಗುತ್ತಿರಲಿಲ್ಲ. ಕಷ್ಟಕ್ಕೆ ಸಿಕ್ಕಿದ್ದ ನನ್ನ ಕಕ್ಷಿಗಾರರು ಕೆಲವರಿಗೆ ಈ ರೀತಿ ಮಧ್ಯಸ್ಥಿಕೆ ಮಾಡಿ ರಾಜಿ ಮಾಡಿಸಿದ್ದೆ. ಆದರೆ ಈಗ ಯೂರೋಪಿಯನ್ ವರ್ತಕರಿಗೆ ನ್ಯಾಯ ಬೇಕಾಗಿರಲಿಲ್ಲ. ಕಾಛಲಿಯಾರನ್ನು ತುಳಿಯುವದೊಂದೇ ಮುಖ್ಯ ಉದ್ದೇಶವಾಗಿತ್ತು. ಕಾಛಲಿಯಾ ಬಗ್ಗಲಿಲ್ಲ. ಅವರ ಮೇಲೆ ದಿವಾಳಿ ಅರ್ಜಿ ಹೂಡಿದರು. ಸಾಲಕ್ಕಿಂತ ಮೂಲವೇ ಹೆಚ್ಚಿದ್ದರೂ ಪಾಪರ್ ಎಂದು ತೀರ್ಪುಕೊಟ್ಟರು.

ಆ ದಿವಾಳಿ ಮೊಕದ್ದಮೆಯಿಂದ ಅವರ ಕೀರ್ತಿ ಹೆಚ್ಚಿತೇ ಹೊರತು ಕುಂದಲಿಲ್ಲ. ಭಾರತೀಯರಿಗೆ ಅವರಲ್ಲಿ ಗೌರವ ಇಮ್ಮಡಿಯಾಯಿತು. ಎಲ್ಲರೂ ಅವರ ದಿಟ್ಟತನವನ್ನೂ ಧೈರ್ಯವನ್ನೂ ಕೊಂಡಾಡಿದರು. ಆದರೆ ಅಂಥ ಎದೆಗಾರರು ಬಹು ವಿರಳ. ದಿವಾಳಿ ಅರ್ಜಿಯಿಂದಲೇ ಒಬ್ಬ ಘನವ್ಯಕ್ತಿ ದಿವಾಳಿಯಾಗಲಾರ, ಗೌರವ ಕಳೆದುಕೊಳ್ಳಲಾರ ಎಂದು ಎಲ್ಲರಿಗೂ ಹೊಳೆವುದು ಕಷ್ಟ. ಆದರೆ ಕಾಛಲಿಯಾ ಮರುಕ್ಷಣದಲ್ಲಿಯೇ ಅರಿತರು. ದಿವಾಳಿ ಅರ್ಜಿಗಳ ಹೆದರಿಕೆಗಾಗಿಯೇ ಅನೇಕ ವರ್ತಕರು ಕರಾಳಶಾಸನಕ್ಕೆ ಬಾಗಿದ್ದರು. ಕಾಛಲಿಯಾ ಇಷ್ಟಪಟ್ಟಿದ್ದರೆ ಸತ್ಯಾಗ್ರಹ ಬಿಡದೆ ಭಾರತೀಯ ವರ್ತಕರಿಂದ ಸಾಲಪಡೆದು ದಿವಾಳಿ ಅರ್ಜಿ ತಪ್ಪಿಸಿಕೊಳ್ಳ ಬಹುದಿತ್ತು. ಈ ಸಂದರ್ಭದಲ್ಲಿ ಅವರ ಭಾರತೀಯ ವರ್ತಕ ಸ್ನೇಹಿತರೂ ಸಾಲ ಕೊಡುತ್ತಿದ್ದರು. ಆದರೆ ಆ ರೀತಿ ವ್ಯಾಪಾರವನ್ನು ಕಾಪಾಡಿಕೊಳ್ಳುವುದು ಅವರಿಗೆ ಸರಿಕಾಣಲಿಲ್ಲ. ತಮ್ಮಂತೆ ಎಲ್ಲ ಸತ್ಯಾಗ್ರಹಿಗಳನ್ನೂ ಎಂದಾದರೂ ಸೆರೆಹಿಡಿಯಬಹುದೆಂಬ ವಿಪತ್ತು ಅವರಿಗೆ ತಿಳಿದೇ ಇತ್ತು. ಆದ್ದರಿಂದ ಯೂರೋಪಿಯನ್ ವರ್ತಕರ ಸಾಲ ತೀರಿಸಲು ಮತ್ತೊಬ್ಬ ಸತ್ಯಾಗ್ರಹಿಯಿಂದ ಸಾಲಪಡೆಯಲು ಅವರಿಗೆ ಇಷ್ಟವಿರಲಿಲ್ಲ. ಅವರ ಸ್ನೇಹಿತರಲ್ಲಿ ಕೆಲವರು ದ್ರೋಹಿಗಳೂ ಇದ್ದರು; ಅವರು ಹಣ ಒದಗಿಸಲು ಸದಾ ಸಿದ್ಧರಿದ್ದರು; ಇಬ್ಬರು ಮೂವರು ಸಹಾಯ ಮಾಡುವದಾಗಿ ಮುಂದೆಯೊ ಬಂದರು. ಆದರೆ ಅವರ ಸಹಾಯ ಪಡೆಯುವದೂ ಆ ಶಾಸನಕ್ಕೆ ತಲೆಬಾಗುವದೂ ಒಂದೇ ಎಂದು ಅದನ್ನು ನಿರಾಕರಿಸಲು ನಿರ್ಧರಿಸಿದೆವು.

ಅಲ್ಲದೆ ಕಾಛಲಿಯಾ ಒಬ್ಬರು ದಿವಾಳಿ ಎಂದು ತೀರ್ಮಾನವಾದರೆ ಆದರಿಂದ ಉಳಿದ ವರ್ತಕರಿಗಾದರೂ ಅಪಾಯ ತಪ್ಪಬಹುದೆಂದು ಯೋಚಿಸಿದೆವು. ಮುಕ್ಕಾಲು ಮೂರುವೀಸ ಪಾಲು ದಿವಾಳಿ ಮೊಕದ್ದಮೆಗಳಲ್ಲಿ ಸಾಲ ಕೊಟ್ಟವನಿಗೆ ನಷ್ಟವೇ ಹೊರತು ಲಾಭವಾಗುವದಿಲ್ಲ. ರೂಪಾಯಿಗೆ ಎಂಟಾಣೆ ಬಂದರೆ ಹೆಚ್ಚು; ಹನ್ನೆರಡಾಣೆ ಬಂದರೆ ಹದಿನಾರು ಆಣೆ ಬಂದಂತೆಯೇ. ದಕ್ಷಿಣ ಆಫ್ರಿಕದಲ್ಲಿ ದೊಡ್ಡ ವರ್ತಕರು ಸೇಕಡ ೬/ ರಂತೆ ಅಲ್ಲ, ಸೇಕಡ ೨೫ ರಂತೆ ಲಾಭ ಸಂಪಾದಿಸುತ್ತಾರೆ. ಆದ್ದರಿಂದ ರೂಪಾಯಿಗೆ ಹನ್ನೆರಡಾಣೆ ಬಂದರೆ ಅವರಿಗೆ ಪೂರ್ತಿ ಹಣ ಬಂದಂತೆ. ಆದರೆ ಹದಿನಾರಣೆ ಹುಟ್ಟುವುದು ದುರ್ಲಭವಾದ್ದರಿಂದ ಸಾಲಕೊಟ್ಟವರು ತಮ್ಮ ಸಾಲಗಾರರ ಮೇಲೆ ದಿವಾಳಿ ಅರ್ಜಿಹಾಕುವ ಸಂಭವ ಕಡಮೆ. ಕಾಛಲಿಯಾರ ದಿವಾಳಿ ಅರ್ಜಿ ಸ್ಥಿರವಾದೊಡನೆ ಉಳಿದ ಸತ್ಯಾಗ್ರಹಿ ವರ್ತಕರ ಮೇಲೆ ದಿವಾಳಿ ಅರ್ಜಿ ಹಾಕುವ ಸಂಭವ ಕಡಮೆ ಇತ್ತು. ನಡೆದದ್ದೂ ಅದೇ ರೀತಿಯೆ. ಕಾಛಲಿಯಾ ಸತ್ಯಾಗ್ರಹ ಬಿಡಬೇಕು, ಇಲ್ಲವೆ ತಮ್ಮ ಪೂರಾ ಹಣವನ್ನು ನಗದು ಕೊಡಬೇಕು ಎಂದೇ ಯೂರೋಪಿಯನ್ ವರ್ತಕರ

ಹಟ. ಅವರ ಎರಡೂ ಅಭಿಲಾಷೆಗಳು ಈಡೇರಲಿಲ್ಲ. ಅವರು ಬಯಸಿದ್ದೊಂದು, ಆದುದು ಬೇರೊಂದು. ಒಬ್ಬ ಗೌರವಸ್ಥ ಭಾರತೀಯ ವರ್ತಕನು ದಿವಾಳಿ ಅರ್ಜಿ ಸ್ವಾಗತಿಸಿದ್ದು ಇದೇ ಮೊದಲು; ಅದನ್ನು ನೋಡಿ ಯೂರೋಪಿಯನ್ ವರ್ತಕರಿಗೆ ಅತ್ಯಾಶ್ಚರ್ಯವಾಯಿತು. ಮುಂದೆಂದೂ ಆ ರೀತಿ ವರ್ತಿಸಲಿಲ್ಲ. ಒಂದು ವರ್ಷದೊಳಗೆ ಕಾಛಲಿಯಾರ ಆಸ್ತಿಯಿಂದ ರೂಪಾಯಿಗೆ ಹದಿನಾರಣೆ ಸಾಲ ವಸೂಲಾಯಿತು. ದಿವಾಳಿ ಅರ್ಜಿಯಲ್ಲಿ ಸಾಲಗಾರನ ಆಸ್ತಿಯಿಂದ ಸಾಲವೆಲ್ಲ ತೀರಿದ್ದು ನನಗೆ ಗೊತ್ತಿರುವಂತೆ ದಕ್ಷಿಣ ಆಫ್ರಿಕದಲ್ಲಿ ಇದೊಂದೇ ಮೊಕದ್ದಮೆಯಲ್ಲಿ. ಈ ರೀತಿ ಹೋರಾಟ ನಡೆಯುತ್ತಿರುವಾಗ ಸಹ ಯೂರೋಪಿಯನ್ ವರ್ತಕರು ಕಾಛಲಿಯಾರಲ್ಲಿ ವಿಶೇಷ ಗೌರವ ತೋರಿಸಲು ಮೊದಲುಮಾಡಿದರು. ಸತ್ಯಾಗ್ರಹದಲ್ಲಿ ಮುಂದಾಳಾಗಿದ್ದರೂ ಎಷ್ಟು ಮಾಲು ಬೇಕಾದರೂ ಕಡ ಕೊಡಲು ಮುಂದೆ ಬಂದರು. ಆದರೆ ದಿನದಿನಕ್ಕೂ ಕಾಛಲಿಯಾರ ಶಕ್ತಿಯೂ, ಹೋರಾಟದಲ್ಲಿ ಅವರ ಶ್ರದ್ಧೆಯೂ ಹೆಚ್ಚುತ್ತ ಇದ್ದವು. ಎಷ್ಟು ದಿನ ಹೋರಾಟ ನಡದೀತೆಂದು ಯಾರೂ ಹೇಳುವಂತಿರಲಿಲ್ಲ. ಹೋರಾಟ ನಡೆಯುತ್ತಿರುವವರೆಗೂ ಕಾಛಲಿಯಾ ಹೆಚ್ಚು ವ್ಯವಹಾರ ನಡೆಸಲಾಗದೆಂದೂ ತಮ್ಮ ಜೀವನಕ್ಕೆ ಬೇಕಾಗುವಷ್ಟು ಮಾತ್ರ ವ್ಯಾಪಾರ ನಡೆಸಬೇಕೆಂದೂ ತೀರ್ಮಾನಿಸಿದೆವು. ಆದ್ದರಿಂದ ಯೂರೋಪಿಯನ್ ವರ್ತಕರು ಸಿದ್ದರಿದ್ದರೂ ಸೇಠರು ತಮ್ಮ ವ್ಯಾಪಾರ ಬೆಳೆಸಲಿಲ್ಲ.

ಕಾಛಲಿಯಾ ಸೇಠರ ಜೀವನದಲ್ಲಿ ಈ ಘಟನೆಗಳೆಲ್ಲ ಮೇಲೆ ಹೇಳಿದ ಸಭೆಯಾದೊಡನೆ ನಡೆಯಲಿಲ್ಲ. ಕಥಾರೂಪದಲ್ಲಿರಲೆಂದು ಇಲ್ಲಿ ನಿರೂಪಿಸಿದ್ದೇನೆ. ಸತ್ಯಾಗ್ರಹ ಪುನಃ ಪ್ರಾರಂಭವಾದ {೧೦.೯.೧೯೦೮} ಸ್ವಲ್ಪ ದಿನಗಳಲ್ಲಿ ಕಾಛಲಿಯಾ ಅಧ್ಯಕ್ಷರಾದರು. ಐದು ತಿಂಗಳ ಮೇಲೆ ಅವರ ದಿವಾಳಿ ಮೊಕದ್ದಮೆ ಆರಂಭವಾಯಿತು.

ಸಮಿತಿಯ ಸಭೆ ಮುಗಿದೊಡನೆ ಹೊಸ ಮಸೂದೆ ಒಪ್ಪಂದದ ಷರತ್ತುಗಳಿಗೆ ವಿರೋಧವಿರುವದಾಗಿಯೂ ಒಪ್ಪಂದವಾದ ಒಂದು ವಾರದ ಒಳಗೆ ರಿಚ್‌ಮಂಡ್‌ನಲ್ಲಿ ತಾವು ಮಾಡಿದ ಭಾಷಣ ಗಮನಿಸಬೇಕಾಗಿಯೂ ಜನರಲ್ ಸ್ಮಟ್ಸ್ ಗೆ ಪತ್ರ ಬರೆದ." ಶಾಸನ ಹೋಗುವರೆಗೂ ರಿಜಿಸ್ಟರ್ ಮಾಡಿಸಿಕೊಳ್ಳುವುದಿಲ್ಲವಾಗಿ ಭಾರತೀಯರ ಷರತ್ತು... ಆದರೆ ರಿಜಿಸ್ಟರ್ ಮಾಡಿಸಿಕೊಳ್ಳದ ಒಬ್ಬ ಏಷ್ಯಾಪ್ರಜೆಯಿದ್ದರೂ ಶಾಸನ ತೆಗೆಯಲು ಸಾಧ್ಯವಿಲ್ಲವೆಂದು ನಾನು ಹೇಳಿದ್ದೇನೆ. ದಕ್ಷಿಣ ಆಫ್ರಿಕೆಯ ಪ್ರತಿ ಭಾರತೀಯನೂ ರಿಜಿಸ್ಟರ್ ಮಾಡಿಸಿಕೊಳ್ಳದ ವಿನಾಶಾಸನ ರದ್ದು ಮಾಡುವುದಿಲ್ಲ" ಎಂದು ಹೇಳಿದ್ದ. ಸಂದೇಹಾಸ್ಪದ ಸಮಯದಲ್ಲಿ ರಾಜಕೀಯವೇತ್ತರು ಉತ್ತರ ಕೊಡುವದಿಲ್ಲ; ಕೊಟ್ಟರೂ ಏನೋ ಹೇಳಿ ನುಣುಚಿಕೊಳ್ಳುತ್ತಾರೆ. ಜನರಲ್ ಸ್ಮಟ್ಸ್ ಅಸಾಧ್ಯ ನುಣುಪು. ನೀವು ಎಷ್ಟೇ ಕಾಗದ ಬರೆಯಿರಿ, ಎಷ್ಟೇ ಭಾಷಣ ಮಾಡಿ ಉತ್ತರ ಕೊಡಬಾರದೆಂದು ಹಟ ಹಿಡಿದರೆ ಅಂಥವನನ್ನು ಬೈಲಿಗೆಳೆಯುವದು ಬ್ರಹ್ಮನಿಗೂ ಸಾಧ್ಯವಿಲ್ಲ. ಪತ್ರಕ್ಕೆ ಉತ್ತರ ಬರೆಯಬೇಕೆಂಬ ಸಭ್ಯತೆಗೆ ಸ್ಮಟ್ಸ್ ದೂರ. ನನ್ನ ಪತ್ರಗಳಿಗೆ ಯಾವ ಉತ್ತರವೂ ಬರಲಿಲ್ಲ.

ನಮ್ಮ ಮಧ್ಯಸ್ಥಗಾರ ಆಲ್ಬರ್ಟ್ ಕಾರ್ಟ್‌ರೈಟರನ್ನು ನೋಡಿದೆ. ಆಶ್ಚರ್ಯಚಕಿತರಾಗಿ "ಈತನ ನಡತೆಯೇ ನನಗೆ ಅರ್ಥವಾಗುವುದಿಲ್ಲ. ಏಷಿಯಾಟಿಕ್ ಮಸೂದೆ ರದ್ದು ಮಾಡುವುದಾಗಿ ವಚನಕೊಟ್ಟದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ. ನನ್ನ ಕೈಲಾದ ಪ್ರಯತ್ನ ಮಾಡುತ್ತೇನೆ. ಆದರೆ ಸ್ಮಟ್ಸ್ ಹಟಹಿಡಿದರೆ ಆತನನ್ನು ಕದಲಿಸುವುದು ಬಹು ಕಷ್ಟವೆ. ನಿಮಗೂ ಗೊತ್ತು. ಲೇಖನಗಳಿಂದ ಆತ ಸ್ವಲ್ಪವೂ ಬಗ್ಗುವುದಿಲ್ಲ. ನನ್ನಿಂದ ನಿಮಗೆ ಹೆಚ್ಚು ಉಪಯೋಗವಾಗಲಾರದು" ಎಂದರು. ನಾನು ಹಾಸ್ಕೆನ್ ರನ್ನೂ ನೋಡಿದೆ. ಅವರೂ ಸ್ಮಟ್ಸ್‌ಗೆ ಪತ್ರ ಬರೆದರು. ಅದಕ್ಕೆ ಬಂದ ಉತ್ತರ ಬಹು ಅತೃಪ್ತಿಕರವಾಗಿತ್ತು. "ಇಂಡಿಯನ್ ಓಪಿನಿಯನ್" ನಲ್ಲಿ ದ್ರೋಹ ಎಂದು ಲೇಖನ ಬರೆದೆ. ಆದರೆ ಆ ನಿಷ್ಕರುಣಿ ಸೇನಾನಿಗೆ ಅದೆಲ್ಲ ಏನು ಯೋಚನೆ ? ತತ್ವಜ್ಞಾನಿಗೂ ಹೃದಯ ಶೂನ್ಯನಿಗೂ ಏನು ಹೇಳಿದರೂ ಬೋರ್ಕಲ್ಲ ಮೇಲೆ ಮಳೆಗರೆದಂತೆ. ಅವರ ದಾರಿಯೇ ಅವರಿಗೆ. ಈ ಎರಡು ಪದಗಳಲ್ಲಿ ಜನರಲ್ ಸ್ಮಟ್ಸ್‌ಗೆ ಯಾವುದು ಅನ್ವಯಿಸುವುದೊ ನಾನು ಹೇಳಲಾರೆ. ಆತನಿಗೆ ಒಂದು ತತ್ವದೃಷ್ಟಿ ಇದೆ ಎಂದೂ ಒಪ್ಪುತ್ತೇನೆ. ಆತನೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದಾಗ, ಆತನನ್ನ ಟೀಕಿಸಿ ಲೇಖನ ಬರೆಯುತ್ತಿದ್ದಾಗ ಆತನನ್ನು ಹೃದಯಶೂನ್ಯನೆಂದೇ ಭಾವಿಸಿದ್ದೆ. ಆಗ ತನೆ ನಮ್ಮ ಹೋರಾಟ ಆರಂಭವಾಗಿತ್ತು; ಇನ್ನೂ ಎರಡು ವರ್ಷ ತುಂಬಿರಲಿಲ್ಲ; ಇನ್ನೂ ಎಂಟು ವರ್ಷ ನಡೆಯಬೇಕಾಗಿತ್ತು; ಈ ನಡುವೆ ಅನೇಕ ಬಾರಿ ಆತನನ್ನು ಭೇಟಿ ಮಾಡಬೇಕಯಿತು. ನಮ್ಮ ಮುಂದಿನ ಸಂಭಾಷಣೆಗಳಿಂದ, ಜನರಲ್ ಸ್ಮಟ್ಸ್‌ನ ಕುಯುಕ್ತಿಯ ವಿಷಯದಲ್ಲಿ ದಕ್ಷಿಣ ಆಫ್ರಿಕದ ಆಗಿನ ಜನಸಾಮಾನ್ಯರ ಭಾವನೆಯಿಂದ ಆತನಿಗೆ ಅನ್ಯಾಯವಾಗಿದೆ ಎಂದು ಅನೇಕವೇಲೆ ಅಭಿಪ್ರಾಯ ಪಟಿದ್ದೇನೆ. ಆದರೆ ಎರು ವಿಷಯ ಮಾತ್ರ ಧೈರ್ಯವಾಗಿ ಹೇಳಬಲ್ಲೆ. ರಾಜಕೀಯದಲ್ಲಿ ನೀತಿಬಾಹಿರವಲ್ಲದ ಕೆಲವು ತತ್ವಗಳಿವೆ ಎಂಬುದೊಂದು ಕುಯುಕ್ತಿಗೂ ಸಂದರ್ಭಬಿದ್ದರೆ ಸತ್ಯವನ್ನು ಮರೆಮಾಚುವುದಕ್ಕೂ ಅಲ್ಲಿ ಅವಕಾಶವಿದೆ ಎಂಬುದು ಇನ್ನೊಂದು.

೨೬. ಮತ್ತೆ ಹೋರಾಟ ಆರಂಭ

ಒಂದೆಡೆ ಒಪ್ಪಂದದಂತೆ ನಡೆಯಲು ಜನರಲ್ ಸ್ಮಟ್ಸ್‌ರನ್ನು ಪ್ರಚೋಚಿಸುತ್ತ ಇನ್ನೊಂದೆಡೆ ಒಳ್ಳೆ ಭರದಿಂದ ಹೋರಾಟ ಹೂಡಲು ನಮ್ಮ ಜನರಲ್ಲಿ ಪ್ರಚಾರಮಾಡುತ್ತ ಸಾಗಿದೆವು. ಎಲ್ಲೆಲ್ಲೂ ಜನರು ಹೋರಾಟ ಹೂಡಿ ಸೆರೆಮನೆ ಸೇರಲು ಸಿದ್ದರಾಗಿದ್ದರು. ಪ್ರತಿ ಸ್ಥಳದಲ್ಲೂ ಸಭೆ ಸೇರಿಸಿ ನಮಗೂ ಸರಕಾರಕ್ಕೂ ನಡೆಯುತ್ತಿದ್ದ ಪತ್ರವ್ಯವಹಾರವನ್ನು ವಿಶದಪಡಿಸುತ್ತಿದ್ದೆವು. 'ಇಂಡಿಯನ್ ಓಪಿನಿಯನ್'ದ ವಾರದ ದಿನಚರಿಯಲ್ಲಿ ಎಲ್ಲ ವಿಷಯವನ್ನೂ ಸಂಪೂರ್ಣ ತಿಳಿಸುತ್ತಿದ್ದೆವು. ಸರಕಾರ ಈ ಕರಾಳಶಾಸನವನ್ನು ಹಿಂತೆಗೆದುಕೊಳ್ಳದಿದ್ದರೆ ಸ್ವಯಂ ರಿಜಿಸ್ಟ್ರೇಷನ್ ತತ್ವ ಮಣ್ಣುಗೂಡುವುದಾಗಿಯೂ ಎಲ್ಲರೂ ರಿಜಿಸ್ಟ್ರೇಷನ್ ಪತ್ರ ಸುಟ್ಟುಹಾಕಲು ಸಿದ್ದರಿರಬೇಕಾಗಿಯೂ ಮುಂಜಾಗ್ರತೆ ಕೊಟ್ಟು ಆ

ಮೂಲಕ ನಮ್ಮ ಜನ ನಿರ್ಭೀತರೂ ದೃಢಮನಸ್ಕರೂ ಸೆರೆಗೆ ಸಿದ್ಧರೂ ಇರುವರೆಂದು ಸರಕಾರಕ್ಕೆ ಸೂಚನೆ ಕೊಡುತ್ತಿದ್ದೆವು. ದಹನಕ್ಕಾಗಿ ಎಲ್ಲೆಡೆಯಲ್ಲೂ ರಿಜಿಸ್ಟ್ರೇಷನ್ ಪತ್ರಗಳನ್ನು ಸಂಗ್ರಹಿಸಿದೆವು.

ಹಿಂದಿನ ಅಧ್ಯಾಯದಲ್ಲಿ ವಿವರಿಸಿದ ಶಾಸನವನ್ನು ನ್ಯಾಯವಿಧಾಯಕ ಸಭೆ ಒಪ್ಪದಿರುವ ಸಮಯದಲ್ಲಿಯೇ ಭಾರತೀಯರ ಪರ ಒಂದು ಅರ್ಜಿ ಕೊಟ್ಟೆವು; ಆದರಿಂದ ಪ್ರಯೋಜನವೇನೂ ಆಗಲಿಲ್ಲ. ಕೊನೆಗೆ ಸತ್ಯಾಗ್ರಹಿಗಳು ಸರಕಾರಕ್ಕೆ ಒಂದು ಕೊನೆಯ ಎಚ್ಚರಿಕೆ ಕಳುಹಿಸಿದರು. ನಾವೇನೂ ಕೊನೆ ಎಚ್ಚರಿಕೆ ಎಂದು ಹೇಳಿರಲಿಲ್ಲ. ಆದರೆ ನಮ್ಮ ಜನರ ತೀರ್ಮಾನ ತಿಳಿಸಿ ಬರೆದ ಆ ಕಾಗದಕ್ಕೆ ಜನರಲ್ ಸ್ಮಟ್ಸ್ ಆ ರೀತಿ ನಾಮಕರಣ ಮಾಡಿದರು, ಅಷ್ಟೆ! "ಸರಕಾರವನ್ನು ಬೆದರಿಸುವ ಇವರಿಗೆ ಸರಕಾರದ ಬಲ ಎಷ್ಟಿದೆಯೋ ತಿಳಿದಿಲ್ಲ. ಕೆಲವು ಚಳವಳಿಗಾರರು ಅನ್ಯಾಯವಾಗಿ ಬಡಭಾರತೀರಯರನ್ನು ಉದ್ರೇಕಗೊಳಿಸುತ್ತಿರುವುದಕ್ಕಾಗಿ ವ್ಯಥೆಯಾಗುತ್ತದೆ; ಚಳುವಳಿಗಾರರ ಬಲೆಗೆ ಬಿದ್ದರೆ ಅನ್ಯಾಯವಾಗಿ ಭಾರತೀಯರು ಹಾಳಾಗುತ್ತಾರೆ" ಎಂದು ಹೇಳಿದ. ಪತ್ರಿಕೆಯ ಸುದ್ದಿಗಾರ ತಿಳಿಸಿದಂತೆ ಟ್ರಾನ್ಸ್ ವಾಲ್ ನ್ಯಾಯವಿಧಾಯಕ ಸಭೆಯ ಸದಸ್ಯರನೇಕರು ನಮ್ಮ 'ಕೊನೆ ಎಚ್ಚರಿಕೆ' ನೋಡಿ ಕೆರಳಿ ಜನರಲ್ ಸ್ಮಟ್ಸ್‌ನ ಮಸೂದೆಗೆ ಹೃತ್ಪೂರ್ವಕವಾಗಿ ತಮ್ಮ ಒಮ್ಮತದ ಒಪ್ಪಿಗೆ ಕೊಟ್ಟರು.

ಆ 'ಕೊನೆಯ ಎಚ್ಚರಿಕೆ' ಈ ರೀತಿ ಇತ್ತು: "ಭಾರತೀಯರು ಸ್ವಯಂ ರಿಜಿಸ್ಟರ್ ಆಡಿಸಿಕೊಂಡರೆ ಅಂತಹ ರಿಜಿಸ್ಟ್ರೇಸನ ಶಾಸನ ಸಮ್ಮತವೆಂದು ತೀರ್ಮಾನಿಸಲು ಶಾಸನಸಭೆಯ ಮುಂದೆ ಮಸೂದೆ ತರುವುದಾಗಿಯೂ 'ಏಷಿಯಾಟಿಕ್ ಮಸೂದೆ' ಹಿಂತೆಗೆದುಕೊಳ್ಳುವುದಾಗಿಯೂ ಭಾರತೀಯರಿಗೂ ಜನರಲ್ ಸ್ಮಟ್ಸರಿಗೂ ಒಪ್ಪಂದವಾಗಿತ್ತು. ಸರಕಾರಕ್ಕೆ ತೃಪ್ತಿಯಾಗಿರುವಂತೆ ಭಾರತೀಯರೆಲ್ಲ ಸ್ವಯಂ ರಿಜಿಸ್ಟ್ರರ್ ಮಾಡಿಸಿಕೊಂಡಿದ್ದಾರೆ. ಆದ್ದರಿಂದ ಏಷಿಯಾಟಿಕ್ ಶಾಸನವನ್ನು ರದ್ದುಗೊಳಿಸಬೇಕು. ಭಾರತೀಯರು ಜನರಲ್ ಸ್ಮಟ್ಸ್‌ರಿಗೆ ಅನೇಕ ಪತ್ರ ಬರೆದು ಎಲ್ಲ ನ್ಯಾಯಬದ್ಧ ಕಾರ್ಯಕ್ರಮ ಕೈಗೊಂಡಿದ್ದರೂ ಏನೂ ಉಪಯೋಗವಾಗಿಲ್ಲ. ಶಾಸನಸಭೆಯ ಮುಂದೆ ಮಸೂದೆ ಇರುವಾಗಲೇ ಭಾರತೀಯರ ಅತ್ಮಪ್ತಿ ಪ್ರಬಲ ವಿರೋಧಗಳನ್ನು ಸರಕಾರಕ್ಕೆ ತಿಳಿಸಬೇಕಾದ್ದು ಮುಖಂಡರ ಕರ್ತವ್ಯ. ಒಪ್ಪಂದದ ನಿಯಮಗಳಂತೆ ಏಷಿಯಾಟಿಕ್ ಶಾಸನವನ್ನು ರದ್ದುಗೊಳಿಸದೆ ಹೋದರೆ, ಸರಕಾರದ ಆ ತೀರ್ಮಾನವನ್ನು ನಿರ್ದಿಷ್ಟಕಾಲದಲ್ಲಿ ಭಾರತೀಯರಿಗೆ ತಿಳಿಸದಿದ್ದರೆ ಭಾರತೀಯರು ಸಂಗ್ರಹಿಸಿರುವ ಎಲ್ಲ ರಿಜಿಸ್ಟ್ರೇಷನ್ ಪತ್ರಗಳನ್ನೂ ಸುಟ್ಟು, ಬರುವ ಕಷ್ಟಗಳಿಗೆಲ್ಲ ಎದೆಗೊಡಲು ವಿಧಿಯಿಲ್ಲದೆ ಮನಸ್ಸು ಮಾಡಿದ್ದಾರೆ."

ಕೊನೆ ಎಚ್ಚರಿಕೆ ಎಂದು ಕರೆಯಲು ಉತ್ತರಕ್ಕೊಂದು ಕಾಲ ಮಿತಿ ಹಾಕಿದ್ದು ಒಂದು ಕಾರಣ. ಯೂರೋಪಿಯನ್ ರು ಭಾರತೀಯರನ್ನು ದನ ಎಂದು ಭಾವಿಸಿದ್ದು ಇನ್ನೊಂದು ಕಾರಣ. ಭಾರತೀಯರು ತಮ್ಮ ಸಮಾನರೆಂದು ಯೂರೋಪಿಯನ್‌ರು ಗಣಿಸಿದ್ದರೆ, ನಮ್ಮ ಪತ್ರಕ್ಕೆ ತಕ್ಕ ಗೌರವಕೊಟ್ಟು, ಅದಕ್ಕೆ ಸರಿಯಾಧ ಗಮನಕೊಡುತ್ತಿದ್ದರು.

ಭಾರತೀಯರು ಅನಾಗರಿಕರೆಂಬ ಯೂರೋಪಿಯನ್‌ರ ಭಾವನೆಯೊಂದೇ ಪತ್ರ ಬರೆಯಲು ಸಾಕಷ್ಟು ಕಾರಣವಾಗಿತ್ತು. ಅನಾಗರಿಕರೆಂದು ಒಪ್ಪಿಕೊಂಡು ತಲೆಬಾಗುವುದು ಒಂದು; ಆ ಭಾವನೆಯನ್ನು ಮೂಲೋತ್ಪಾಟನಮಾಡಲು ಶೀಘ್ರ ಕಾರ್ಯಕ್ರಮ ಕೈಗೊಳ್ಳುವುದು ಇನ್ನೊಂದು; ಹೀಗೆ ಎರಡೇ ಮಾರ್ಗವಿದ್ದವು. ಆ ಕಾರ್ಯಕ್ರಮದ ಮೊದಲ ಹಂತವೇ ಈ ಪತ್ರ ಪತ್ರದಂತೆ ನಡೆಯಬೇಕೆಂಬ ಉಕ್ಕಿನ ಮನೋನಿಶ್ಚಯವಿಲ್ಲದಿದ್ದರೆ ಭಾರತೀಯರದು ದೌಷ್ಟ್ಯ, ವಿವೇಚನೆಯಿಲ್ಲದ ಅವಿವೇಕ ಎನ್ನುತ್ತಿದ್ದರು.

೧೯೦೬ ರಲ್ಲಿ ಸತ್ಯಾಗ್ರಹ ಪ್ರತಿಜ್ಞೆ ಸ್ವೀಕರಿಸಿದಾಗಲೆ ಅನಾಗರಿಕರೆಂಬ ದೂಷಣೆಗೆ ತಕ್ಕ ಪ್ರತ್ಯುತ್ತರ ಕೊಟ್ಟಿರಲಿಲ್ಲವೆ ಎಂದು ಕೇಳಬಹುದು. ಹಾಗಾದರೆ ಈ ಪತ್ರಕ್ಕೆ ಹೆಚ್ಚಿನ ಮಹತ್ವಕೊಡುವುದೂ ಮತ್ತು ಈ ಪತ್ರವೇ ಪ್ರತ್ಯುತ್ತರವೆಂದು ಹೇಳುವುದೂ ಅನಾವಶ್ಯಕವಾಗಿತ್ತು. ಇದು ಸ್ವಲ್ಪ ಮಟ್ಟಿಗೆ ಸರಿ; ಆದರೆ ನಿಜವಾಗಿ, ದೀರ್ಘವಾಗಿ ಯೋಚಿಸಿದರೆ ಸರಿಯಾದ ಉತ್ತರ ಕೊಟ್ಟದ್ದು ಈ ಪತ್ರದಿಂದಲೇ. ಸತ್ಯಾಗ್ರಹ ಪ್ರತಿಜ್ಞೆ ಅನಿರೀಕ್ಷಿತವಾಗಿ ಬಂತು. ಅದರ ಪರಿಣಾಮವಾಗಿ ಸೆರೆಮನೆವಾಸ ಅನಿವಾರ್ಯವಾಗಿತ್ತು. ಆದರಿಂದ ನಮ್ಮ ನೈತಿಕ ಅಂತಸ್ತು ಬಹುಮಟ್ಟಿಗೆ ಹೆಚ್ಚಿದರೂ ಅದು ಅನಪೇಕ್ಷಿತವಾಗಿ ಒದಗಿದ್ದು. ಈ ಪತ್ರ ಬರೆದಾಗ ನಮ್ಮ ಉನ್ನತ ಆತ್ಮಗೌರವ, ಪೂರ್ಣವಿಶ್ವಾಸಗಳನ್ನು ವ್ಯಕ್ತಪಡಿಸಿದ್ದೆವು. ಉದ್ದೇಶವೇನೊ ಮೊದಲೂ ಈಗಲೂ ಒಂದೇ–ಕರಾಳಶಾಸನದ ನಿರ್ನಾಮ. ಆದರೆ ಉಪಯೋಗಿಸಿದ ಭಾಷೆ, ಕಾರ್ಯವಿವರದ ಆಯ್ಕೆ, ಇನ್ನೂ ಕೆಲವು ವಿಷಯಗಳಲ್ಲಿ ವ್ಯತ್ಯಾಸವಿತ್ತು. ಗುಲಾಮ ಯಜಮಾನನಿಗೇ ನಮಸ್ಕಾರ ಮಾಡಲಿ, ಸ್ನೇಹಿತನಿಗೇ ನಮಸ್ಕಾರ ಮಾಡಲಿ ಇಬ್ಬರೂ ಕೈಮುಗಿಯುತ್ತಾರೆ; ಆಧರೆ ಎರಡಕ್ಕೂ ಅಜಗಜಾಂತರ. ಗುಲಾಮ ಯಾರು, ಸ್ನೇಹಿತ ಯಾರು ಎಂದು ನೋಡಿದೊಡನೆ ಯಾರಾದರೂ ಕಂಡುಹಿಡಿಯಬಹುದು.

ಈ ಎಚ್ಚರಿಕೆ ಕಳುಹಿಸುವಾಗ ನಮ್ಮಲ್ಲಿ ಬೇಕಾದಷ್ಟು ಚರ್ಚೆಯಾಯಿತು. ಇಷ್ಟು ದಿನಗಳಲ್ಲಿ ಉತ್ತರಕೊಡಬೇಕೆಂದು ಅವಧಿ ವಿಧಿಸುವುದು ಅಸಭ್ಯತೆಯ ಲಕ್ಷಣವಲ್ಲವೆ? ಸರಕಾರದ ಮನಸ್ಸು ಇನ್ನೂ ಕೆಟ್ಟು, ಒಪ್ಪಬಹುದಾದ ಸಲಹೆ ಸಹ ನಿರಾಕರಿಸುವಂತೆ ಕಠಿಣವಾಗಬಹುದಲ್ಲವೆ? ಸರಕಾರಕ್ಕೆ ಅದಷ್ಟು ಸೌಮ್ಯ ರೀತಿಯಲ್ಲಿ ನಮ್ಮ ನಿರ್ಧಾರ ತಿಳಿಸಿದರೆ ಮೇಲ್ಲವೆ? ಸರಕಾರಕ್ಕೆ ಅದಷ್ಟು ಸೌಮ್ಯರೀತಿಯಲ್ಲಿ ನಮ್ಮ ನಿರ್ಧಾರ ತಿಳಿಸಿದರೆ ಮೇಲಲ್ಲವೆ? ಇದೆಲ್ಲ ಆಮೂಲಾಗ್ರವಾಗಿ ಯೋಚಿಸಿ ನಮಗೆ ಸರಿತೋರಿದಂತೆ ಮಾಡಬೇಕೆಂದು ತೀರ್ಮಾನಿಸಿದೆವು. ಸರಕಾರ ನಮ್ಮ ಮೇಲೆ ಅಸಭ್ಯತೆಯ ದೂರನ್ನು ಹೊರಿಸಿ ಸಾಮಾನ್ಯವಾಗಿ ಒಪ್ಪಬಹುದಾದ ಸಲಹೆಗಳನ್ನು ಗಡಿಬಿಡಿಯಲ್ಲಿ ನಿರಾಕರಿಸಿದರೂ ಸಿದ್ಧವಾಗಿರಬೇಕೆಂದು ತೀರ್ಮಾನಿಸಿದೆವು. ಮಾನವ ವರ್ಗದಲ್ಲಿ ನಾವು ಯಾರಿಗೂ ಕಡಮೆಯಲ್ಲವೆಂಬ ಭಾವನೆಯೊಂದು ನಮ್ಮಲ್ಲಿ ನೆಲಸಿದರೆ, ಎಷ್ಟು ಕಾಲವಾದರೂ ಯಾವ ಕಷ್ಟವನ್ನಾದರೂ ಸಹಿಸಬಲ್ಲೆವೆಂಬ ದೃಢನಿಶ್ಚಯವಿದ್ದರೆ, ಹಿಂದೆ ಮುಂದೆ ನೋಡದೆ ನೇರವಾದ ಮಾರ್ಗವನ್ನೇ ನಾವು ಹಿಡಿಯಬೇಕು.

ಆದ್ದರಿಂದ ಈಗಿನ ನಮ್ಮ ಹೆಜ್ಜೆಯಲ್ಲಿ ಒಂದು ಹೊಸ ಬಗೆ, ವೈಶಿಷ್ಟ್ಯ ಇತ್ತೆಂದೂ ನ್ಯಾಯವಿಧಾಯಕ ಸಭೆಯಲ್ಲೂ ಹೊರಗೆ ಐರೋಪ್ಯ ಪಂಗಡದಲ್ಲೂ ಅದರ ಪ್ರತಿಧ್ವನಿ ಕೇಳಿಸಿತೆಂದೂ ಈಗ ವಾಚಕರಿಗೆ ಅರ್ಥವಾಗಬಹುದು. ಕೆಲವರು ಭಾರತೀಯರ ಧೈರ್ಯವನ್ನು ಅಭಿನಂದಿಸಿದರು; ಕೆಲವರು ಉದ್ರೇಕಗೊಂಡು ಭಾರತೀಯರ ಕೊಬ್ಬಿಗೆ ಬಿಸಿ ತಗಲುವಂತೆ ಉಗ್ರ ಶಿಕ್ಷೆ ಕೊಡಬೇಕೆಂದರು. ಇಬ್ಬರೂ ತಮ್ಮ ತಮ್ಮ ನಡತೆಯಲ್ಲಿ ಭಾರತೀಯರ ಹೊಸ ಹೆಜ್ಜೆಯ ನವೀನತೆ ಅರಿತರು. ಆರಂಭಿಸಿದಾಗ ಸತ್ಯಾಗ್ರಹವೇ ಹೊಸದಾಗಿದ್ದರೂ ಈ ಹೊಸ ಹೆಜ್ಜೆ ಸತ್ಯಾಗ್ರಹಕ್ಕಿಂತ ಹೆಚ್ಚು ಕೋಲಾಹಲವನ್ನೆಬ್ಬಿಸಿತು. ಕಾರಣವಿಷ್ಟೆ: ಸತ್ಯಾಗ್ರಹ ಆರಂಭವಾದಾಗ ಭಾರತೀಯರು ಏನು ಮಾಡಬಲ್ಲರು ಎಂದು ಯಾರಿಗೂ ತಿಳಿದಿರಲಿಲ್ಲ. ಆದ್ದರಿಂದ ಆರಂಭದೆಸೆಯಲ್ಲಿ ಇಂಥ ಪತ್ರ ಅಥವಾ ಅದರ ಭಾಷೆಯ ಔಚಿತ್ಯದ ಕಡೆಗೆ ಗಮನಕೊಡುತ್ತಿರಲಿಲ್ಲ. ಈಗ ನಮ್ಮ ಜನರಿಗೆ ಒಂದು ಭಾರಿ ಅಗ್ನಿಪ್ರವೇಶವಾಗಿತ್ತು. ತಮ್ಮ ಕುಂದುಕೊರತೆಗಳ ನಿವಾರಣೆಗೆ ಅವಶ್ಯವಾದ ಎಲ್ಲ ಕಷ್ಟಗಳನ್ನೂ ಸಹಿಸಲು ಭಾರತೀಯರಿಗಿದ್ದ ಶಕ್ತಿ ಎಲ್ಲರಿಗೂ ತಿಳಿದಿತ್ತು; ಆದ್ದರಿಂದ ನಮ್ಮ 'ಕೊನೆ ಎಚ್ಚರಿಕೆ'ಯ ಭಾಷೆ ನೈಜ ಬೆಳವಣಿಗೆಯಂತೆ ಸಹಜವಾಗಿತ್ತು, ಸಂದರ್ಭೋಚಿತವಾಗಿತ್ತು.

೨೭. ರಹದಾರಿಗಳ ದಹನ

ಶಾಸನ ಸಭೆಯಲ್ಲಿ ಹೊಸ ಮಸೂದೆ ಅಂಗೀಕೃತವಾಗುವ ದಿನವೇ ನಮ್ಮ ಅವಧಿ ಮುಗಿಯಿತು. ಅವಧಿ ಮುಗಿದ ಎರಡು ಗಂಟೆಗೆ ರಹದಾರಿಗಳ ಬಹಿರಂಗ ಹೋಳಿಗಾಗಿ ಸಭೆ ಸೇರಿಸಲಾಗಿತ್ತು. ಒಂದು ವೇಳೆ ಸರಕಾರ ಅನುಕೂಲವಾದ ಉತ್ತರ ಕೊಟ್ಟರೆ ಆ ವಿಷಯವನ್ನೆ ಸಭೆಗೆ ತಿಳಿಸುವುದು. ಅಂತೂ ಸಭೆ ನಿಷ್ಪ್ರಯೋಜನವಾಗುತ್ತಿರಲಿಲ್ಲ.

ನಮ್ಮ ಪತ್ರಕ್ಕೆ ಸರಕಾರ ಉತ್ತರವನ್ನೇ ಕೊಡುವುದಿಲ್ಲವೆಂದು ಸತ್ಯಾಗ್ರಹ ಸಮಿತಿ ನಂಬಿತ್ತು. ೧೯೦೮ ಆಗಸ್ಟ್ ೧೬ ರ ನಾಲ್ಕು ಗಂಟೆಗೆ ಜೋಹಾನ್ಸ್ ಬರ್ಗ್‌ನ ಹಮೀದಿಯಾ ಮಸೀದಿಯ ಆವರಣದಲ್ಲಿ ಸಭೆ ಸೇರಿಸಿ ನಾವೆಲ್ಲ ಸ್ವಲ್ಪ ಮುಂಚೆಯೇ ಸಭಾಸ್ಥಳದಲ್ಲಿದ್ದೆವು. ಸರಕಾರದಿಂದ ತಂತಿವರ್ತಮಾನ ಬಂದರೆ ಒಡನೆಯೆ ನಮಗೆ ತಲಪಿಸಲು ಏರ್ಪಾಟುಮಾಡಿದ್ದೆವು. ಆವರಣದಲ್ಲಿ ಎಲ್ಲಿಯೂ ಎಳ್ಳು ಹಾಕಲು ಸ್ಥಳವಿಲ್ಲದಂತೆ ಎಲ್ಲ ಬಗೆಯ ಭಾರತೀಯರೂ ನೆರೆದಿದ್ದರು. ದಕ್ಷಿಣ ಆಫ್ರಿಕದ ನೀಗ್ರೋ ಜನ ನಾಲ್ಕು ಕಾಲಿನ ಕಬ್ಬಿಣದ ಕಡಾಯಿಯಲ್ಲಿ ಊಟ ಮಾಡುತ್ತಾರೆ. ಒಬ್ಬ ಭಾರತೀಯ ವರ್ತಕನ ಅಂಗಡಿಯಿಂದ ಅದಷ್ಟು ದೊಡ್ಡ ಕಡಾಯಿ ಒಂದನ್ನು ಸಂಪಾದಿಸಿದ್ದೆವು. ಸಭಾಂಗಣದ ಒಂದು ಮೂಲೆಯಲ್ಲಿ ಎತ್ತರವಾದ ವೇದಿಕೆಯ ಮೇಲೆ ಆ ಕಡಾಯಿ ಇಟ್ಟಿದ್ದೆವು.

ಕಾರ್ಯಾರಂಭದ ಹೊತ್ತಿಗೆ 'ಭಾರತೀಯರ ತೀರ್ಮಾನಕ್ಕೆ ಸರಕಾರ ವ್ಯಸನಪಡುತ್ತದೆ; ಸರಕಾರ ತನ್ನ ಕಾರ್ಯನೀತಿಯಲ್ಲಿ ಏನೊಂದೂ ಬದಲಾವಣೆ ಮಾಡಲು ಸಾಧ್ಯವಿಲ್ಲ'

ಎಂದು ಬಂದ ತಂತೀ ವರ್ತಮಾನವನ್ನು ಒಬ್ಬ ಸ್ವಯಂಸೇವಕ ತಂದುಕೊಟ್ಟ. ಸರಕಾರವು ತಮ್ಮ ಬೇಡಿಕೆಗೆ ಒಪ್ಪಿದ್ದರೆ ರಹದಾರಿ ದಹನ ನಿಲ್ಲುತ್ತಿದ್ದುದು ತಪ್ಪಿತಲ್ಲ ಎಂಬ ಸಂತೋಷ ಜನರಲ್ಲಿ ವ್ಯಾಪಿಸಿತೇನೋ ಎಂಬಂತೆ ಆ ತಂತಿ ಓದಿ ಹೇಳಿದಾಗ ಎಲ್ಲರೂ ಹರ್ಷಧ್ವನಿಗೈದರು. ಪ್ರತಿಯೊಬ್ಬ ಸಭಿಕನ ಮನೋಭಾವನೆ ಅರಿಯದೆ ಇದು ತಪ್ಪೋ ಸರಿಯೋ ತೀರ್ಮಾನಿಸುವುದು ಕಷ್ಟ. ಈ ಹರ್ಷಘೋಷವು ಸಭೆಯ ಉತ್ಸಾಹದ ಶುಭಸೂಚನೆಯಾಗಿತ್ತೆಂದು ಮಾತ್ರ ಹೇಳಬಹುದು. ಭಾರತೀಯರಿಗೆ ಸ್ವಶಕ್ತಿಯ ಅರಿವು ಸ್ವಲ್ಪ ಮಟ್ಟಿಗೆ ಆಯಿತು.

ಸಭೆ ಆರಂಭವಾಯಿತು. ಅಧ್ಯಕ್ಷರು ಸಭೆಗೆ ಎಚ್ಚರಕೊಟ್ಟು, ಪರಿಸ್ಥಿತಿಯನ್ನೆಲ್ಲ ವಿವರಿಸಿದರು. ಸಂದರ್ಭೋಚಿತ ನಿರ್ಣಯಗಳಾದವು. ಅನೇಕ ದಿನಗಳಿಂದ ನಡೆದ ಸಂಧಾನವನ್ನೆಲ್ಲಾ ಸಭೆಗೆ ವಿವರಿಸಿ ನಾನು ಈ ರೀತಿ ಹೇಳಿದ: 'ದಹನಮಾಡಲು ಕೊಟ್ಟ ರಹದಾರಿ' ಹಿಂದಿರುಗಿ ಬೇಕಿದ್ದರೆ ಯಾರಾದರೂ ಧೈರ್ಯದಿಂದ ಮುಂದೆ ಬಂದು ತೆಗೆದುಕೊಳ್ಳಲಿ. ರಹದಾರಿ ಸುಟ್ಟ ಮಾತ್ರದಿಂದ ತಪ್ಪು ಮಾಡಿದಂತಾಗುವದಿಲ್ಲ. ಸೆರೆಮನೆಗೆ ಹೋದರೆ ಪುನಃ ರಹದಾರಿ ದೊರೆಯುವದಿಲ್ಲ. ರಹದಾರಿ ಸುಡುವುದರಿಂದ ಈ ಕರಾಳ ಶಾಸನಕ್ಕೆ ನಾವು ತಲೆಬಾಗುವುದಿಲ್ಲವೆಂಬ ನಮ್ಮ ಧೃಢನಿಶ್ಚಯ ವ್ಯಕ್ತಪಡಿಸುತ್ತೇವೆ. ರಹದಾರಿ ತೋರಿಸಲು ತೋರುವ ಅವಕಾಶ ಕಳೆದುಕೊಳ್ಳುತ್ತೇವೆ. ಆದರೆ ಇಂದು ಸುಟ್ಟ ರಹದಾರಿಯ ಪ್ರತಿಯನ್ನು ನಾಳೆ ಯಾರಾದರೂ ಪಡೆಯಬಹುದು. ಅಂಥ ಹೇಡಿ ಕೆಲಸಮಾಡುವವರು ಯಾರಾದರೂ ಇಲ್ಲಿದ್ದರೆ ಅಂಥವರು ಈಗಲೇ ರಹದಾರಿ ಹಿಂದಕ್ಕೆ ಪಡೆಯಲಿ; ಕೊಡುತ್ತೇವೆ. ಯಾರೂ ನಾಚಿಕೆಪಡಬೇಕಾದ್ದಿಲ್ಲ; ಅದಕ್ಕೂ ಒಂದು ಧೈರ್ಯ ಬೇಕು. ಅದನ್ನು ಬಿಟ್ಟು ರಹದಾರಿಯ ನಕಲು ಪಡೆದರೆ ನಾಚಿಕೆಗೇಡು ಮಾತ್ರವೇ ಅಲ್ಲ. ನಮ್ಮ ಜನರ ಹಿತಕ್ಕೆ ಕೊಡಲಿಪೆಟ್ಟು ಹಾಕಿದಂತೆ. ಅಲ್ಲದೆ ಈ ಹೋರಾಟ ಬಹಳಕಾಲ ನಡೆಯಬಹುದೆಂಬುದನ್ನು ಗಮನದಲ್ಲಿಡಿ. ಇದೆಲ್ಲ ಚೆನ್ನಾಗಿ ಯೋಚಿಸಿ ಇಂದಿನ ಮಹತ್ಕಾರ್ಯದಲ್ಲಿ ಧುಮುಕಬೇಕೆಂದು ನಾನು ಪ್ರಾರ್ಥಿಸುತ್ತೇನೆ."

ನಾನು ಭಾಷಣ ಮಾಡುವಾಗಲೇ "ನಮಗೆ ರಹದಾರಿ ಬೇಡ, ಸುಟ್ಟುಬಿಡಿ' ಎಂದು ಕೂಗು ಕೇಳಿಸುತ್ತಿತ್ತು. ಕೊನೆಯಲ್ಲಿ ನಿರ್ಣಯವಿರೋಧಿಗಳು ಇದ್ದರೆ ಬರಬೇಕಾಗಿ ತಿಳಿಸಿದೆ; ಯಾರೂ ಬರಲಿಲ್ಲ. ಮೀರ್ ಆಲಂ ಸಹ ಆ ಸಭೆಯಲ್ಲಿದ್ದ ನನ್ನ ಮೇಲೆ ಅತ್ಯಾಚಾರ ನಡಿಸಿದ್ದು ತಪ್ಪಾಯಿತೆಂದು ಹೇಳಿ ತನ್ನ ರಹದಾರಿಯನ್ನು ಸುಡಲು ಕೊಟ್ಟ. ಆತ ಸ್ವಇಚ್ಛೆಯಿಂದ ರಹದಾರಿ ಪಡೆದಿರಲಿಲ್ಲ. ಇದರಿಂದ ಸಭೆಗೆ ಅತ್ಯಾನಂದವಾಯಿತು. ನಾನೂ ಸಂತೋಷದಿಂದ ಆತನನ್ನಪ್ಪಿ ಕೈಕುಲಕಿದೆ. ಆತನ ಮೇಲೆ ನನಗೆ ಹಗೆ ಎಳ್ಳಷ್ಟೂ ಇಲ್ಲವೆಂದು ಮತ್ತೊಮ್ಮೆ ತಿಳಿಸಿದೆ.

ಹೋಳೀ ಉತ್ಸವಕ್ಕೆಂದು ಎರಡು ಸಾವಿರ ರಹದಾರಿ ಪತ್ರಗಳ ಸಮಿತಿಯ ವಶಕ್ಕೆ ಬಂದಿದ್ದವು. ಅವನ್ನೆಲ್ಲ ಎಣ್ಣೆಯಲ್ಲಿ ಅದ್ದಿ ಬಾಣಲೆಯಲ್ಲಿ ಹಾಕಿ ಈಸಾಫ್ ಮಿಯ್ಯಾ ಬೆಂಕಿ ಇಟ್ಟರು. ಈ ರೀತಿ ಅಗ್ನೀಶ್ವರನಿಗೆ ಆಹುತಿ ಕೊಟ್ಟಾಗ ಎಲ್ಲರೂ ಎದ್ದು ನಿಂತು

ಮಾಡಿದ ಜಯಘೋಷದಿಂದ ಆವರಣವೆಲ್ಲ ಮಾರ್ದನಿಗೊಟ್ಟಿತು. ರಹದಾರಿಯನ್ನು ತಮ್ಮಲ್ಲೇ ಇನ್ನೂ ಇಟ್ಟುಕೊಂಡಿದ್ದ ಅನೇಕರು ವೇದಿಕೆಯ ಮೇಲೆ ಬಂದು ಬೆಂಕಿಯಲ್ಲಿ ಹಾಕಲು ಆರಂಭಿಸಿದರು. ಈ ರೀತಿ ಕೊನೆಯಲ್ಲಿ ಕೊಟ್ಟುದೇಕೆಂದು ಕೇಳಿದ್ದಕ್ಕೆ, ಹೆಚ್ಚು ಪ್ರಾಶಸ್ತ್ಯ ಸಿಗಲಿಕ್ಕೆ, ನೋಡಿದವರ ಮೇಲೆ ವಿಶೇಷ ಪರಿಣಾಮವಾಗಲಿಕ್ಕೆ ಎಂದು ಒಬ್ಬರು ತಿಳಿಸಿದರು. ಇನ್ನೊಬ್ಬರು ಹೇಗೂ ಕೊನೆಗೆ ಸುಡುವುದಿಲ್ಲ ತಾನೇಕೆ ಸುಡಬೇಕು ಎಂದು ಇಟ್ಟುಕೊಂಡಂತೆ ಮನಬಿಚ್ಚಿ ತಮ್ಮ ಅಧೈರ್ಯವನ್ನು ಒಪ್ಪಿದರು. ಆದರೆ ದಹನಜ್ವಾಲೆ ಕಂಡು ಆವೇಶಗೊಂಡು ತಡೆಯದೆ ಹತ್ತು ಜನರಿಗಾದ್ದು ತನಗೂ ಆಗಲಿ ಎಂದು ಮೈನಡುಕ ಬಿಟ್ಟು ಮುನ್ನುಗ್ಗಿದರು. ನಮ್ಮ ಹೋರಾಟದಲ್ಲಿ ಇಂತಹ ಪ್ರಸಂಗ ಎಷ್ಟೋ ಅನುಭವವಾಗಿವೆ.

ನಮ್ಮ ಸಭೆಗೆ ಬಂದಿದ್ದ ಇಂಗ್ಲಿಷ್ ಪತ್ರಿಕೆಗಳ ಸುದ್ದಿಗಾರರ ಮೇಲೆ ಆ ದೃಶ್ಯ ವಿಶೇಷ ಪರಿಣಾಮ ಮಾಡಿತು; ತಮ್ಮ ಪತ್ರಿಕೆಗಳಲ್ಲಿ ಸಭೆಯ ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು. ಜೋಹಾನ್ಸ್ ಬರ್ಗ್ ಸುದ್ದಿಗಾರನೊಬ್ಬ ಸಭೆಯ ವಿವರಗಳನ್ನು ಲಂಡನ್ 'ಡೇಲಿ ಮೇಲ್' ಪತ್ರಿಕೆಗೆ ಕಳುಹಿಸಿ ಭಾರತೀಯರು ರಹದಾರಿ ಸುಟ್ಟುದನ್ನು ಬೋಸ್ಟನ್ ಚಹಾಪಾರ್ಟಿಗೆ ಹೋಲಿಸಿದ. ಭಾರತೀಯರ ದೃಷ್ಟಿಗೆ ಈ ಸಾಮ್ಯ ಅಷ್ಟು ಸಮಂಜಸವೆಂದು ಹೇಳಲಾರೆ. ಅಲ್ಲಿ ಅಮೇರಿಕಾದ ನೂರಾರು, ಸಾವಿರಾರು ಸಶಸ್ತ್ರ ಯೂರೋಪಿಯನ್‌ರು ಬ್ರಿಟಿಷ್ ಸಾಮ್ರಾಜ್ಯ ಶಕ್ತಿಯನ್ನು ಎದುರಿಸಿದರು; ಇಲ್ಲಿ ದಕ್ಷಿಣ ಆಫ್ರಿಕದ ೧೩,೦೦೦ ನಿರಾಯುಧ ಭಾರತೀಯರು ಬಲಿಷ್ಠ ಟ್ರಾನ್ಸ್ ವಾಲ್ ಸರಕಾರವನ್ನು ಎದುರಿಸಿದರು. ಭಾರತೀಯರು ಬಲಿಷ್ಠ ಟ್ರಾನ್ಸ್ ವಾಲ್ ಸರಕಾರವನ್ನು ಎದುರಿಸಿದವರು. ಭಾರತೀಯರಿಗಿದ್ದ ಏಕಮಾತ್ರ ಆಯುಧ ತಮ್ಮ ಬೇಡಿಕೆಯ ನ್ಯಾಯಪರತೆಯಲ್ಲಿ, ದೇವರಲ್ಲಿ ತಮಗಿದ್ದ ವಿಶ್ವಾಸ. ಶ್ರದ್ಧೆಯಿರುವವನಿಗೆ ಇದು ಸರ್ವಶಕ್ತ ಸರ್ವರೀತಿಯ ಆಯುಧ. ಸಾಮಾನ್ಯ ಮಾನವನ ಅಭಿಪ್ರಾಯ ಎಂದಿನವರೆಗೆ ಆ ಮಟ್ಟಕ್ಕೆ ಏರುವದಿಲ್ಲವೊ ಅಲ್ಲಿಯವರೆಗೆ ೧೩,೦೦೦ ನಿಶ್ಶಸ್ತ್ರ ಭಾರತೀಯರು ಅಮೇರಿಕಾದೇಶದ ಶಸ್ತ್ರಸಜ್ಜಿತ ಯೂರೋಪಿಯನ್‌ರ ಎದುರು ಅಲ್ಪರಾಗಿಯೇ ತೋರುತ್ತಾರೆ. ದೇವರೊಬ್ಬನೆ ದೀನಬಂಧು; ಆದ್ದರಿಂದಲೇ ಏನೋ ದೀನರನ್ನು ಇಡೀ ಜಗತ್ತೇ ಹೀನಯಿಸುತ್ತದೆ.

೨೮. ಹೊಸ ಸಮಸ್ಯೆ ಒಡ್ಡಿದ ಆಪಾದನೆ

ಕರಾಳಶಾಸನ ಶಾಸನಕಡತಕ್ಕೆ ಸೇರಿದ ವರ್ಷವೇ ಜನರಲ್ ಸ್ಮಟ್ಸರು ಶಾಸನಸಭೆ ಮುಂದೆ ಟ್ರಾನ್ಸ್ ವಾಲ್ ವಲಸೆಗಾರರ ಹತೋಟಿ ಮಸೂದೆ ಎಂಬ ಇನ್ನೊಂದು ಮಸೂದೆ ತಂದರು. ಮೇಲೆ ನೋಡಲು ಸಾರ್ವಜನಿಕವೆಂದು ತೋರಿದರೂ ಭಾರತೀಯರ ಮೇಲೆ ಗದಾಪ್ರಹಾರವೇ ಅದರ ಗುರಿ. ನೇಟಾಲ್ ಶಾಸನದ ನಕಲು ಅದು; ಆದರೆ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದೂ ಏಸಿಯಾಟಿಕ್ ಶಾಸನ ಪ್ರಕಾರ ರಹದಾರಿಗೆ ಅನರ್ಹರಾದವರು ವಲಸೆಗೆ ಅನರ್ಹರಾಗಿ ಮಾಡಿತು ಈ ಶಾಸನ. ಭಾರತೀಯರು ಯಾರೂ ಹೊಸದಾಗಿ ಬಾರದಂತೆ ತಡೆಯಲು ಇದು ಆಯುಧವಾಯಿತು.

ತಮ್ಮ ಹಕ್ಕುಗಳ ಮೇಲಿನ ಈ ಹೊಸ ದಾಳಿಯನ್ನು ಎದುರಿಸಬೇಕಾದ್ದು ಭಾರತೀಯರಿಗೆ ಅತ್ಯವಶ್ಯಕವಾಯಿತು; ಸತ್ಯಾಗ್ರಹ ಕದನದಲ್ಲಿ ಇದನ್ನೂ ಒಂದು ಕಾರಣವಾಗಿ ಮಾಡಿಕೊಳ್ಳಬೇಕೇ ಬೇಡವೆ ಎಂಬುದು ಮುಖ್ಯ ಪ್ರಶ್ನೆಯಾಯಿತು. ಸತ್ಯಾಗ್ರಹವನ್ನು ಇಂಥದಕ್ಕೆ ಇಂಥ ಸಮಯದಲ್ಲಿ ಹೂಡಬೇಕೆಂಬ ನಿರ್ಬಂಧವೇನೂ ಇರಲಿಲ್ಲ; ಆದರೆ ನಮ್ಮ ಸಹನಶಕ್ತಿ, ವಿವೇಚನೆಗಳ ಮಿತಿ ಮೀರದಂತೆ ನಿರ್ಧರಿಸಬೇಕಾಗಿತ್ತು. ಸಮಯೌಚಿತ್ಯ ಮೀರಿ ಸತ್ಯಾಗ್ರಹ ಹೂಡಿದರೆ ಅದು ದುರಾಗ್ರಹವಾಗುತ್ತದೆ. ಸ್ವಸಾಮರ್ಥ್ಯವನ್ನು ಅಳೆಯದೆ ಸತ್ಯಾಗ್ರಹ ಆರಂಭಿಸಿ ವಿಮುಖನಾದರೆ ತನಗೆ ಅವಮಾನವಾಗುವದಲ್ಲದೆ ತನ್ನ ಮೂಢತನದಿಂದ ಅಮೂಲ್ಯ ಅಸ್ತ್ರವಾದ 'ಸತ್ಯಾಗ್ರಹ' ಕ್ಕೆ ಕಳಂಕ ತಂದಂತಾಗುತ್ತದೆ.

ಭಾರತೀಯರ ಸತ್ಯಾಗ್ರಹ ಈ ಕರಾಳಶಾಸನದ ವಿರುದ್ಧ ಮಾತ್ರ ಎಂದು ಸತ್ಯಾಗ್ರಹ ಸಮಿತಿ ತಿಳಿದಿತ್ತು. ಕರಾಳಶಾಸನ ರದ್ದಾದರೆ ವಲಸೆಗಾರರ ಹತೋಟಿ ಶಾಸನದ ವಿಷಯವೂ ನಿಸ್ತೇಜವಾಗುವುದೆಂದು ಮನಗಂಡರು. ಹೊಸದೊಂದು ಚಳವಳಿ ಅನಾವಶ್ಯಕವೆಂದು ಈ ಹೊಸ ಮಸೂದೆಗೆ ಪ್ರತಿಭಟಿಸದೆ ಹೋದರೆ ಅವಕ್ಕೆ ಭಾರತೀಯರು ಒಪ್ಪಿರುವರೆಂದೂ ಅವರ ಮೌನವೇ ಅವರ ಒಪ್ಪಿಗೆಯೆಂದೂ ಮುಂದೆ ವಾದ ಹುಟ್ಟಿತು. ಆದ್ದರಿಂದ ಅದನ್ನು ಪ್ರತಿಭಟಿಸುವದು ಅಗತ್ಯವೆನಿಸಿತು; ಆದರೆ ಸತ್ಯಾಗ್ರಹ ಚಳುವಳಿಯಲ್ಲಿ ಇದನ್ನೂ ಸೇರಿಸಬೇಕೇ ಎಂಬುದು ಮುಖ್ಯ ಸಮಸ್ಯೆಯಾಯಿತು. ಚಳುವಳಿ ನಡೆಯುತ್ತಿರುವಾಗ ಭಾರತೀಯರ ಹಕ್ಕುಗಳಿಗೆ ಏನು ಹೊಸ ಧಕ್ಕೆ ಬಂದರೂ ಅದೆಲ್ಲಕ್ಕೂ ಸತ್ಯಾಗ್ರಹ ಅನ್ವಯಿಸಬೇಕೆಂದು ನಮ್ಮ ಜನರ ಮತ. ಸಾಮರ್ಥ್ಯವಿಲ್ಲದಿರುವುದು ಮತ್ತೊಂದು ವಿಷಯ. ಶಕ್ತಿ ಸಾಲದೆಂಬ ಕಾರಣದಿಂದ ಈ ವಲಸೆ ಹತೋಟಿ ಮಸೂದೆಯನ್ನು ಸುಮ್ಮನೆ ಬಿಡಲು ಮುಖಂಡರು ಒಪ್ಪಲಿಲ್ಲ. ಆದ್ದರಿಂದ ಸತ್ಯಾಗ್ರಹ ಚಳುವಳಿಯಲ್ಲಿ ಈ ಶಾಸನವೂ ಬರಬೇಕಾಯಿತು.

ಈ ವಿಷಯವಾಗಿ ಸರಕಾರದೊಡನೆ ಪತ್ರವ್ಯವಹಾರ ನಡೆಸಿದೆ. ಶಾಸನ ಬದಲಾವಣೆಗೆ ಜನರಲ್ ಸ್ಮಟ್ಸನನ್ನು ಒಪ್ಪಿಸಲು ಸಾಧ್ಯವಾಗಲಿಲ್ಲ; ಆದರೆ ನಮ್ಮ ಜನರನ್ನೂ, ಮುಖ್ಯವಾಗಿ ನನ್ನನ್ನೂ ಬೈಯಲು ಆತನಿಗೆ ಒಂದು ಹೊಸ ದಾರಿ ಸಿಕ್ಕಿತು. ಬಹಿರಂಗವಾಗಿ ಸಹಾಯ ಮಾಡುತ್ತಿದ್ದ ಯೂರೋಪಿಯನ್ ರಲ್ಲದೆ ಅನೇಕರು ನಮಗೆ ಪರೋಕ್ಷ ಸಹಾನುಭೂತಿ ತೋರಿಸುತ್ತಿದ್ದರೆಂದು ಜನರಲ್ ಸ್ಮಟ್ಸನಿಗೆ ತಿಳಿದಿತ್ತು. ಸಾಧ್ಯವಾದರೆ ಅವರ ಮನಸ್ಸನ್ನು ಕೆಡಿಸಬೇಕೆಂಬುದೇ ಅವನ ಉದ್ದೇಶ. ಈ ಹೊಸ ಸಮಸ್ಯೆ ಎತ್ತಿದೆನೆಂದು ನನ್ನ ಮೇಲೆ ಆಪಾದನೆ ಮಾಡಿ ನನ್ನ ವಿಷಯ ತಾನು ಅರಿತಿರುವಷ್ಟು ಯಾರೂ ಅರಿತಿಲ್ಲವೆಂದು ಅವರಿಗೆಲ್ಲ ಹೇಳಿದ್ದಲ್ಲದೆ ಪತ್ರ ಬರೆದ. ಬೆರಳು ಕೊಟ್ಟರೆ ಹಸ್ತ ನುಂಗುವವನು ನಾನು; ಆದ್ದರಿಂದ ಏಷಿಯಾಟಿಕ್ ಶಾಸನ ರದ್ದುಗೊಳಿಸುವುದಿಲ್ಲ. ಸತ್ಯಾಗ್ರಹದ ಆರಂಭದಲ್ಲಿ ಹೊಸ ವಲಸೆಗಾರರ ಪ್ರಶ್ನೆಯೇ ಇರಲಿಲ್ಲ. ಈಗ ಟ್ರಾನ್ಸ್ ವಾಲ್ ಹಿತದೃಷ್ಟಿಯಿಂದ ಭಾರತೀಯರು ಹೆಚ್ಚು ವಲಸೆ ಬಾರದಂತೆ ತಡೆಯಲು ಹೊಸ ಶಾಸನ ಮಾಡಹೋದರೆ ಅಲ್ಲಿಯೂ ನನಗೆ ಸತ್ಯಾಗ್ರಹದ ಬೆದರಿಕೆ. ನಾನು ಏನೇ ಮಾಡಲಿ, ಪ್ರತಿಯೊಬ್ಬ ಭಾರತೀಯನೂ ಹಾಳಾದರೂ ಸರಿ, ಏಷಿಯಾಟಿಕ್ ಶಾಸನ ಹಿಂದಕ್ಕೆ ನದಿ ಯಾವುದು

ತೆಗೆದುಕೊಳ್ಳಲಾಗುವದಿಲ್ಲ. ಟ್ರಾನ್ಸ್ ವಾಲ್ ಸರಕಾರವೂ ಭಾರತೀಯರ ವಿಷಯದಲ್ಲಿ ತಮ್ಮ ನೀತಿ ಬದಲಾಯಿಸುವದಿಲ್ಲ. ಈ ನ್ಯಾಯಸಮ್ಮತ ಮಾರ್ಗದಲ್ಲಿ ಪ್ರತಿಯೊಬ್ಬ ಯೂರೋಪಿಯನ್ನರೂ ಸರಕಾರಕ್ಕೆ ಬೆಂಬಲ ಕೊಡಬೇಕು.

ಈ ವಾದ ಎಷ್ಟು ಅನ್ಯಾಯವೋ ನೀತಿ ಬಾಹಿರವೋ ಸ್ವಲ್ಪ ಯೋಚಿಸಿದರೆ ಗೊತ್ತಾಗುತ್ತದೆ. ವಲಸೆಗಾರ ಹತೋಟಿ ಶಾಸನವೇ ಇಲ್ಲದಿರುವಾಗ ಭಾರತೀಯರಾಗಲಿ ನಾನಾಗಲಿ ವಿರೋಧಿಸುವುದೆಂತು? ನನ್ನ ಕುಯುಕ್ತಿ ತನಗೆ ಅನುಭವವಾಗಿದೆಯೆಂದು ಜನರಲ್ ಸ್ಮಟ್ಸನು ಏನೇನೋ ಹರಟೆ ಕೊಚ್ಚಿದ; ಒಂದಾದರೂ ನಿದರ್ಶನ ಕೊಟ್ಟು ತನ್ನ ಹೇಳಿಕೆ ಸಮರ್ಥಿಸಲು ಸಾಧ್ಯವಾಗಲಿಲ್ಲ. ದಕ್ಷಿಣ ಆಫ್ರಿಕದಲ್ಲಿ ಅಷ್ಟು ವರ್ಷ ಒಂದು ಸಲವಾದರೂ ನಾನು ಕುಯುಕ್ತಿಯಿಂದ ನಡೆದಂತೆ ನನಗೆ ಜ್ಞಾಪಕವಿಲ್ಲ. ನನ್ನ ಜೀವಮಾನದಲ್ಲಿಯೇ ನಾನು ಯಾವಾಗಲೂ ಕುಯುಕ್ತಿ ಉಪಯೋಗಿಸಿಲ್ಲವೆಂದು ನಿಸ್ಸಂಕೋಚವಾಗಿ ಹೇಳಬಲ್ಲೆ. ಕುಯುಕ್ತಿ ನೀತಿಬಾಹ್ಯ; ಅಷ್ಟೇ ಅಲ್ಲ, ರಾಜಕೀಯ ದೃಷ್ಟಿಯಿಂದಲೂ ಅನುಚಿತ; ಆದ್ದರಿಂದ ಕಾರ್ಯದೃಷ್ಟಿಯಿಂದ ಸದಾ ಅದನ್ನು ಖಂಡಿಸಿದ್ದೇನೆ. ಈ ವಿಷಯ ಹೆಚ್ಚು ವಾದ ಮಾಡಬೇಕಾಗಿಲ್ಲ. ಯಾರಿಗಾಗಿ ಇದನ್ನು ಬರೆಯುತ್ತಲಿದ್ದೇನೊ ಅವರೆದುರು ವಾದ ಹೂಡಲು ಸಹ ನನಗೆ ಸಂಕೋಚ. ನನ್ನಲ್ಲಿ ಕುಯುಕ್ತಿಯೇನೂ ಇಲ್ಲ ಎಂದು ಅವರು ಈಗಲೂ ಮನಗಾಣದಿದ್ದರೆ ನಾನು ವಾದ ಹೂಡಿದರೂ ತೃಪ್ತಿಗೊಳಿಸುವುದು ಅಸಾಧ್ಯ. ಸತ್ಯಾಗ್ರಹ ಚಳುವಳಿಯಲ್ಲಿ ನಮಗೆ ಏನೇನು ತೊಂದರೆ ಒದಗಿದವು, ನೇರವಾದ, ಕಡಿದಾದ ಮಾರ್ಗದಿಂದ ಭಾರತೀಯರು ಒಂದು ಕೂದಲೆಳೆ ಸರಿದಿದ್ದರೂ ನಮ್ಮ ಹೋರಾಟಕ್ಕೆ ಏನು ವಿಪತ್ತು ಕಾದಿತ್ತು ಎಂದು ತಿಳಿಸಲು ಈ ವಿಷಯವನ್ನಿಲ್ಲಿ ಬರೆದಿದ್ದೇನೆ. ಇಪ್ಪತ್ತು ಅಡಿ ಎತ್ತರದಲ್ಲಿ ಕಟ್ಟಿದ ಹಗ್ಗದ ಮೇಲೆ ಕುಣಿಯು ಆಟಗಾರ ತನ್ನ ದೃಷ್ಟಿಯನ್ನೆಲ್ಲ ಹಗ್ಗದ ಮೇಲೆಯೇ ಕೇಂದ್ರಿಕರಿಸಬೇಕು. ಎಳ್ಳಷ್ಟು ತಪ್ಪಿದರೂ ಯಾವ ಕಡೆ ಹೊರಳಿದರೂ ಸಾವು ಸಿದ್ಧ. ದಕ್ಷಿಣ ಆಫ್ರಿಕದ ನನ್ನ ಎಂಟು ವರುಷಗಳ ಸತ್ಯಾಗ್ರಹದ ಅನುಭವದಿಂದ ಸತ್ಯಾಗ್ರಹಿಯು ಅವನಿಗಿಂತ ಹೆಚ್ಚು ಏಕಮನಸ್ಕನಾಗಿರಬೇಕೆಂದು ಪಾಠ ಕಲಿತಿದ್ದೇನೆ. ಜನರಲ್ ಸ್ಮಟ್ಸ ಯಾರ ಮನಸ್ಸು ಮುರಿಯಲು ಈ ಆಪಾದನೆ ಹೂಡಿದನೋ ಅವರೆಲ್ಲ ನನ್ನನ್ನು ಚೆನ್ನಾಗಿ ತಿಳಿದವರು. ಅವರ ಮುಂದೆ ಆತನ ಬೇಳೆ ಬೇಯಲಿಲ್ಲ. ನನ್ನನ್ನಾಗಲಿ, ನಮ್ಮ ಚಳುವಳಿಯನ್ನಾಗಲಿ ಅವರು ಬಿಟ್ಟುಕೊಡಲಿಲ್ಲ. ಅದಕ್ಕೆ ಪ್ರತಿಯಾಗಿ ನಮಗೆ ಸಹಾಯ ಮಾಡಲು ಹೆಚ್ಚು ಶ್ರದ್ಧೆ ವಹಿಸಿದರು. ವಲಸೆಗಾರರ ಶಾಸನವನ್ನು ಸತ್ಯಾಗ್ರಹದಲ್ಲಿ ಸೇರಿಸದಿದ್ದರೆ ಇನ್ನೂ ಹೆಚ್ಚಿನ ಅಪಘಾತವಾಗುತ್ತಿತ್ತೆಂದು ಭಾರತೀಯರಿಗೆ ಮನದಟ್ಟಾಯಿತು.

ಪ್ರತಿಯೊಂದು ಧಾರ್ಮಿಕ ಹೋರಾಟದಲ್ಲಿಯೂ ಬರಬರುತ್ತ ಶಕ್ತಿ ಅಭಿವೃದ್ಧಿ ಹೊಂದುತ್ತದೆ. ಇದು ಅನುಭವಸಿದ್ದ ಸತ್ಯ. ಸತ್ಯಾಗ್ರಹದಲ್ಲಿ ಯಾದರೂ ಅದೇ ನಿಯಮ. ಗಂಗಾಪ್ರವಾಹ ಮುಂದುವರಿದಂತೆ ಅನೇಕ ಉಪನದಿಗಳು ಬಂದು ಸೇರುತ್ತವೆ; ನದೀಮುಖದಲ್ಲಿ ಇಕ್ಕೆಲದ ದಡಗಳೂ ಕಾಣದಂತೆ, ನದಿಯ ಮೇಲಿನ ನಾವಿಕನಿಗೆ

ಸಮುದ್ರ ಯಾವುದು ಎಂದು ತೋರದಷ್ಟು ಪಾತ್ರ ವಿಸ್ತಾರವಾಗುತ್ತದೆ. ಸತ್ಯಾಗ್ರಹ ಮುಂದುವರಿದಂತೆ ಅನೇಕ ಉಪಸಮಸ್ಯೆಗಳು ಅದರ ಶಕ್ತಿ ವಾಹಿನಿಯನ್ನು ಉಬ್ಬಿಸುತ್ತವೆ; ಅಂತ್ಯಪರಿಣಾಮವೂ ವಿಶೇಷ ಫಲದಾಯಕವಾಗುತ್ತದೆ. ಸತ್ಯಾಗ್ರಹದ ಮೂಲ ತತ್ವಗಳಲ್ಲಿ ಅಡಗಿರುವ ಈ ಪರಿಣಾಮ ನಿಜವಾಗಿ ಅನಿವಾರ್ಯ, ಸತ್ಯಾಗ್ರಹದಲ್ಲಿ ಯಾವುದು ಅಣೋರಣೀಯವೋ ಅದೇ ಮಹತೋಮಹೀಯ. ಅತ್ಯಲ್ಪದಿಂದಲೇ ಪ್ರಾರಂಭಿಸಿದರೆ ಹಿಮ್ಮೆಟ್ಟುವ ಪ್ರಶ್ನೆಯೇ ಇಲ್ಲ; ಮುಂದುವರಿಯುವುದೊಂದೇ ಗಮನ–ಗತಿ. ಇತರ ಹೋರಾಟಗಳಲ್ಲಿ ಧರ್ಮಸಮ್ಮತವಿದ್ದರೂ ಅವಶ್ಯಕಂಡರೆ ಸ್ವಲ್ಪ ಕಡಿಮೆ ಮಾಡಿದರಾದೀತೆಂದು ಮೊದಲು ಹೆಚ್ಚು ಕೇಳುವ ಸಂಭವವಿದೆ. ಅಂತಹ ಸಂದರ್ಭಗಳಲ್ಲಿ ಮುಂದುವರಿಯುತ್ತ ಶಕ್ತಿ ಬೆಳೆಯುವದಿಲ್ಲ. ಸತ್ಯಾಗ್ರಹದಲ್ಲಿ ಕನಿಷ್ಠ ಪರಿಣಾಮವೂ ಮಹತ್ ಪರಿಮಾಣವೂ ಒಂದೇ ಆಗಿರುವಾಗ ಅಭಿವೃದ್ಧಿ ನಿಯಮ ಹೇಗೆ ಕೆಲಸಮಾಡುತ್ತದೆಯೊ ಸ್ವಲ್ಪ ವಿವರಿಸುತ್ತೇನೆ. ಗಂಗಾಪ್ರವಾಹ ಮೂಲದಿಂದ ಹೊರಡುವಾಗ ಉಪನದಿಗಳನ್ನು ಅರಸಿ ಹೊರಡುವುದಿಲ್ಲ. ಸತ್ಯಾಗ್ರಹಿ ಸಹ ತನ್ನ ಅಸಿಧಾರಾವ್ರತದಿಂದ ಕದಲುವುದಿಲ್ಲ. ಗಂಗಾಪ್ರವಾಹ ಮುಂದುವರಿದಂತೆ ಉಪನದಿಗಳು ತಾವೇ ಬಂದು ಗಂಗೆಯನ್ನು ಸೇರುವಂತೆ ಸತ್ಯಾಗ್ರಹಪ್ರವಾಹವೂ ಪುಷ್ಟಿಗೊಳ್ಳುತ್ತದೆ. ವಲಸೆಗಾರರ ಹತೋಟಿ ಶಾಸನಕ್ಕೆ ಸತ್ಯಾಗ್ರಹವನ್ನು ಅನ್ವಯಿಸಿದ್ದರಿಂದ ಟ್ರಾನ್ಸ್ ವಾಲ್‌ನ ಎಲ್ಲ ಭಾರತೀಯ ವಿರುದ್ಧ ಶಾಸನಗಳನ್ನೂ ಸತ್ಯಾಗ್ರಹ ಚಳುವಳಿಗೆ ಸೇರಿಸಬೇಕೆಂದು, ಸತ್ಯಾಗ್ರಹ ತತ್ವವನ್ನರಿಯದ ಕೆಲವು ಭಾರತೀಯರು ಸೂಚಿಸಿದರು. ಇನ್ನೂ ಕೆಲವರು ದಕ್ಷಿಣ ಆಫ್ರಿಕದ ಎಲ್ಲ ಭಾರತೀಯರು ಸೂಚಿಸಿದರು. ಇನ್ನೂ ಕೆಲವರು ದಕ್ಷಿಣ ಆಫ್ರಿಕದ ಎಲ್ಲ ಭಾರತೀಯರನ್ನೂ ಒಟ್ಟು ಗೂಡಿಸಬೇಕೆಂದೂ, ಟ್ರಾನ್ಸ್ ವಾಲ್ ಹೋರಾಟ ನಡೆಯುತ್ತಿರುವಾಗಲೇ ನೇಟಾಲ್, ಕೇಪ ಕಾಲೋನಿ, ಆರೇಂಜ ಫ್ರೀ ಸ್ಟೇಟ ಮುಂತಾದ ಪ್ರಾಂತಗಳ ಎಲ್ಲ ಭಾರತೀಯ ವಿರುದ್ಧ ಶಾಸನಗಳಿಗೂ ಸತ್ಯಾಗ್ರಹ ಹೂಡಬೇಕೆಂದು ಸಲಹೆ ತಂದರು. ಎರಡು ಸಲಹೆಗಳೂ ನಮ್ಮ ತತ್ವಕ್ಕೆ ದೂರ. ಸತ್ಯಾಗ್ರಹ ಆರಂಭಿಸಿದಾಗ ನಮ್ಮ ದೃಷ್ಟಿಯಲ್ಲಿಲ್ಲದ ಒಂದು ಹೊಸ ಹೆಜ್ಜೆಯನ್ನು ಅವಕಾಶ ದೊರೆತಿದೆ ಎಂದು ಈಗ ಹಾಕಿದರೆ ಅದು ಪ್ರಾಮಾಣಿಕತನವಲ್ಲವೆಂದು ಸ್ಪಷ್ಟಗೊಳಿಸಿದೆ. ನಮ್ಮ ಶಕ್ತಿ ಎಷ್ಟೇ ಇರಲಿ ಯಾವ ಉದ್ದೇಶಕ್ಕಾಗಿ ಈ ಹೋರಾಟ ಆರಂಬಿಸಿದೆವೊ ಆ ಉದ್ದೇಶ ಸಪಲವಾದರೆ ಹೋರಾಟ ಮುಗಿಯಬೇಕು. ಈ ಒಂದು ತತ್ವ ನಾವು ಅವಲಂಬಿಸದಿದ್ದರೆ ನಮಗೆ ಉದ್ದದ್ದೂ ಸೋಲಾಗುತ್ತಿತ್ತು. ಅಲ್ಲದೆ ನಮಗೆ ದೊರತ ಸಹಾನುಭೂತಿಯೂ ಮಾಯವಾಗುತ್ತಿತ್ತು. ಅದಕ್ಕೆ ಪ್ರತಿಯಾಗಿ ನಮ್ಮ ಹೋರಾಟ ನಡೆಯುತ್ತಿರುವಾಗ ದಾರಿಯಲ್ಲಿ ಎದುರಾಳಿ ನಮಗೆ ಹೊಸ ತೊಂದರೆ ಒಡ್ಡಿದರೆ ಅವು ಮಾತ್ರ ಸತ್ಯಾಗ್ರಹದಲ್ಲಿ ಅಡಕವಾಗುತ್ತವೆ. ತನ್ನ ದಾರಿ ಹಿಡಿದು ನಡೆಯುವಾಗ ಅಡ್ಡಬಂದ ಹೊಸ ಕಷ್ಟಗಳನ್ನು ಉಪೇಕ್ಷೆ ಮಾಡಿದರೆ ಸತ್ಯಾಗ್ರಹಿ ದ್ರೋಹ ಮಾಡಿದಂತಾಗುತ್ತದೆ. ಎದುರಾಳಿ ಸತ್ಯಾಗ್ರಹಿಯಲ್ಲ. ಸತ್ಯಾಗ್ರಹಕ್ಕೆ ವಿರೋಧವಾಗಿ ಮತ್ತೊಂದು ಸತ್ಯಾಗ್ರಹ ಎಂದೂ ಸಾಧ್ಯವಿಲ್ಲ.

ಕನಿಷ್ಠ ಮಹತ್ ಎಂಬ ಪ್ರಮಾಣ ಮಿತಿಯಿಲ್ಲ. ಆದ್ದರಿಂದ ಹೊಸ ಸಮಸ್ಯೆಗಳನ್ನೊಡ್ಡಿ ಸತ್ಯಾಗ್ರಹಿಯನ್ನು ಬೆದರಿಸಲು ಯತ್ನಿಸಬಹುದು. ಆದರೆ ಸತ್ಯಾಗ್ರಹಿಗಳಿಗೆ ಭಯವೆಂಬುದಿಲ್ಲ. ಮೊದಲಿನ ಸಮಸ್ಯೆಗಳಂತೆ ನೂತನ ಸಮಸ್ಯೆಗಳನ್ನೂ ಬಿಡಿಸಲೆತ್ನಿಸುವನು. ಎಷ್ಟು ಕಷ್ಟ ಒದಗಿದರೂ ತನ್ನ ಗುರಿ ಮುಟ್ಟಲು ಎಲ್ಲವೂ ಸಹಕಾರಿಯೇ. ಎದುರಾಳಿಯ ದೆಸೆಯಿಂದ ಸತ್ಯಾಗ್ರಹ ಮುಂದುವರಿದಷ್ಟೂ ಎದುರಾಳಿಗೇ ನಷ್ಟ; ಸತ್ಯಾಗ್ರಹಿಗೆ ಲಾಭ. ನಮ್ಮ ಹೋರಾಟ ಮುಂದುವರಿದಂತೆ ಈ ನಿಯಮದ ಸತ್ಯಾಂಶಕ್ಕೆ ಅನೇಕ ನಿದರ್ಶನ ದೊರೆಯುತ್ತವೆ.

೨೯. ಸೊಹರಾಬ್ಜಿ ಷಾಪೂರ್ಜಿ ಅಡಾಜನಿಯಾ*

ವಲಸೆಗಾರರ ಹತೋಟಿ ಶಾಸನ ಸಹ ಸತ್ಯಾಗ್ರಹದ ಕಾರಣವಾದ ಮೇಲೆ ವಿದ್ಯಾವಂತ ಭಾರತೀಯರು ಟ್ರಾನ್ಸ್ ವಾಲ್‌ಗೆ ಹೋಗಬಹುದೆ ಇಲ್ಲವೆ ಎಂದು ಪರೀಕ್ಷಿಸಬೇಕಾಯಿತು. ಈ ಪರೀಕ್ಷೆಗೆ ಸಾಮಾನ್ಯ ಭಾರತೀಯರನ್ನು ಕಳುಹಿಸಲಾಗದೆಂದು ಸತ್ಯಾಗ್ರಹ ಸಮಿತಿ ನಿರ್ಧರಿಸಿತು. ಶಾಸನದಲ್ಲಿ "ನಿಷೇಧಿತ ವಲಸೆಗಾರ" ಎಂಬ ಪದಕ್ಕೆ ನಾವು ಕೊಟ್ಟ ಅರ್ಥವಿವರಣೆ ಅನ್ವಯಿಸದ ಭಾರತೀಯರು ಟ್ರಾನ್ಸ್‌ವಾಲ್ ಗೆ ಹೋಗಿ ದಸ್ತಗಿರಿಯಾಗಬೇಕೆಂದು ಸತ್ಯಾಗ್ರಹ ಸಮಿತಿ ನಿರ್ಧರಿಸಿತು. ಆತ್ಮಸಂಯಮದ ಅಭಿವೃದ್ಧಿಯ ಅಂಕುರವೂ ಸತ್ಯಾಗ್ರಹ ಶಕ್ತಿಯಲ್ಲಿ ಅಡಗಿದೆ ಎಂದು ಈ ರೀತಿ ತೋರಿಸಿದೆವು. ಯಾವುದಾದರೂ ಯೂರೋಪಿಯನ್ ಭಾಷೆ ಬಾರದಿದ್ದರೆ ಆತ 'ನಿರೋಧಿತ ವಲಸೆಗಾರ' ನೆಂದು ಒಂದು ವಿಧಿ ಆ ಶಾಸನದಲ್ಲಿತ್ತು. ಆದ್ದರಿಂದ ಇಂಗ್ಲೀಷ್ ತಿಳಿದ, ಮುಂಚೆ ಟ್ರಾನ್ಸ್ ವಾಲ್‌ಗೆ ಹೋಗದ ಭಾರತೀಯನೊಬ್ಬನು ಟ್ರಾನ್ಸ್‌ವಾಲ್ ಪ್ರವೇಶ ಮಾಡಬೇಕೆಂದು ಸಮಿತಿ ನಿರ್ಧರಿಸಿತು. ಅನೇಕ ಭಾರತೀಯ ಯುವಕರು ಮುಂದೆ ಬಂದರು. ಅವರಲ್ಲಿ ಆರಿಸಲ್ಪಟ್ಟವರು ಸೊರಹಾಬ್ಜಿ ಷಾಪೂರ್ಜಿ ಅಡಾಜನಿಯಾ.

ಸೊಹರಾಬ್ಜಿ ಪಾರಸಿ. ದಕ್ಷಿಣ ಆಫ್ರಿಕದಲ್ಲೆಲ್ಲ ಪಾರಸಿಗಳ ಸಂಖ್ಯೆ ನೂರಕ್ಕೆ ಹೆಚ್ಚಿರಲಿಲ್ಲ. ಪಾರಸಿಗಳ ವಿಷಯದಲ್ಲಿ ಭಾರತದಲ್ಲಿ ನನಗೆ ಯಾವ ಅಭಿಪ್ರಾಯವಿದೆಯೊ ದಕ್ಷಿಣ ಆಫ್ರಿಕದಲ್ಲೂ ಅದೇ ಅಭಿಪ್ರಾಯವಿತ್ತು. ಪ್ರಪಂಚದಲ್ಲೆಲ್ಲ ಪಾರಸಿಗಳು ಒಂದು ಲಕ್ಷಕ್ಕೆ ಮೀರಿ ಇಲ್ಲ. ಇಷ್ಟು ಸಣ್ಣ ಜನಾಂಗ ತನ್ನ ಘನತೆ, ಧರ್ಮ ಕಾಪಾಡಿಕೊಂಡು ಔದಾರ್ಯದಲ್ಲಿ ಯಾರಿಗೂ ಕಡಿಮೆ ಇಲ್ಲದಿರುವುದನ್ನು ನೋಡಿದರೆ ಅವರ ಉನ್ನತ ಚಾರಿತ್ರ್ಯ ವ್ಯಕ್ತವಾಗುತ್ತದೆ. ಸೊಹರಾಬ್ಜಿ ಅಪರಂಜಿಯಂತಹ ಮನುಷ್ಯ. ಸತ್ಯಾಗ್ರಹಕ್ಕೆ ಸೇರಿದಾಗ ಆತನ ವಿಷಯ ನನಗೆ ಹೆಚ್ಚು ತಿಳಿದಿರಲಿಲ್ಲ. ಸತ್ಯಾಗ್ರಹದಲ್ಲಿ ಭಾಗವಹಿಸಲು ಆತ ಬರೆದ ಪತ್ರಗಳು ನನ್ನ ಮೇಲೆ ಒಳ್ಳೆ ಪ್ರಭಾವ ಬೀರಿದವು. ಪಾರಸಿಗಳ ಉನ್ನತ

ಗುಣಗಳನ್ನು ಮೆಚ್ಚಿದ ನನಗೆ ಅವರ ಲೋಪದೋಷಗಳೂ ತಿಳಿದಿವೆ. ಈಗಲೂ

---

* ಅಡಾಜನಿಯಾ–ಇದೇ ಅವರ ಹೆಸರಿನ ಸರಿಯಾದ ಉಚ್ಚಾರವೆಂದು ಈ ಪುಸ್ತಕದ ಹಿಂದೀ ಭಾಷಾಂತರದಿಂದ ತಿಳಿಯುತ್ತದೆ. ಗುಜರಾತಿ ಮೂಲದಿಂದ ಹಿಂದೀಗೆ ನೇರಾಗಿ ಅನುವಾಧ ಮಾಡಿದ್ದಾರೆ.

ಮರೆತಿಲ್ಲ. ಆದ್ದರಿಂದ ಸೋಹರಾಬ್ಜಿಯನ್ನು ನಂಬಲು ಸತ್ಯಾಗ್ರಹ ಸಮಿತಿಗೆ ಸಲಹೆ ಕೊಟ್ಟೆ. ಸೊಹರಾಬ್ಜಿ ಪ್ರಥಮ ಶ್ರೇಣಿಯ ಸತ್ಯಾಗ್ರಹಿ ಎಂದು ಕೊನೆಗೆ ತೋರಿಸಿ ಕೊಟ್ಟ. ಬಹುಕಾಲ ಶಿಕ್ಷೆ ಅನುಭವಿಸಿದುದೊಂದೆ ಅಲ್ಲ; ಸತ್ಯಾಗ್ರಹದ ಗಾಢವಾದ ಅಭ್ಯಾಸಬಲದಿಂದ ಆತ ಕೊಡುತ್ತಿದ್ದ ಸಲಹೆಗಳಿಗೆ ಎಲ್ಲರೂ ಗೌರವ ಕೊಡುತ್ತಿದ್ದರು. ಆತನ ಸಲಹೆಗಳಲ್ಲಿ ದೃಢನಿಶ್ಚಯ, ವಿವೇಕ, ಔದಾರ್ಯಯೋಚನಾಶಕ್ತಿ ಮೂಡಿ ಕಾಣುತ್ತಿದ್ದವು. ದುಡುಕಿ ಯಾವ ಅಭಿಪ್ರಾಯವನ್ನೂ ಹೊರಗೆಡಹುತ್ತಿರಲಿಲ್ಲ. ಆದರೆ ಒಮ್ಮೆ ಒಂದು ಅಭಿಪ್ರಾಯಕ್ಕೆ ಬಂದರೆ ಬದಲಿಸುವುದೂ ಕಷ್ಟವಾಗಿತ್ತು. ಪಾರಸಿ ಎಂದು ಆತನಿಗೆ ಎಷ್ಟು ಅಭಿಮಾನವಿತ್ತೊ ಭಾರತೀಯನೆಂದೂ ಅಷ್ಟೇ ಅಭಿಮಾನವಿತ್ತು. ಸಂಕುಚಿತ ಕೋಮುವಾರು ಭಾವನೆ ಲೇಶಮಾತ್ರವೂ ಇರಲಿಲ್ಲ. ಸತ್ಯಾಗ್ರಹ ಮುಗಿದ ಮೇಲೆ ಯಾರಾದರೊಬ್ಬ ಒಳ್ಳೆಯ ಸತ್ಯಾಗ್ರಹಿ ಇಂಗ್ಲೆಂಡ್‌ಗೆ ಹೋಗಿ ನ್ಯಾಯವಾದಿಯಾಗಿ ಬರಲೆಂದು ಡಾಕ್ಟರ್ ಮೆಹತಾ ಒಂದು ವಿದ್ಯಾರ್ಥಿವೇತನವನ್ನು ಕೊಟ್ಟರು. ಆ ಆಯ್ಕೆಯ ಭಾರವೂ ನನ್ನ ಪಾಲಿಗೇ ಬಂತು. ಇಬ್ಬರು ಮೂವರು ಒಳ್ಳೆ ಉಮೇದುವಾರರಿದ್ದರು. ಬುದ್ಧಿಚಾತುರ್ಯದಲ್ಲಿ ವಿಚಾರ ವಿನಿಮಯದಲ್ಲಿ ಸೊಹರಾಬ್ಜಿಗೆ ಸರಿತೂಗುವವರು ಯಾರೂ ಇಲ್ಲವೆಂದು ಎಲ್ಲರೂ ಒಪ್ಪಿದ್ದರಿಂದ ಆತನನ್ನೇ ಆರಿಸಿದೆವು. ಮುಖ್ಯ ಉದ್ದೇಶ ದಕ್ಷಿಣ ಆಫ್ರಿಕಾಕ್ಕೆ ಹಿಂದಿರುಗಿದ ಮೇಲೆ, ಆತ ನನ್ನ ಸ್ಥಾನದಲ್ಲಿ ನಿಂತು ನಮ್ಮ ಜನರಿಗೆ ಸೇವೆ ಸಲ್ಲಿಸಲಿ ಎಂದು ಎಲ್ಲರ ಆಶೀರ್ವಾದ ಪಡೆದು ಸೊಹರಾಬ್ಜಿ ಇಂಗ್ಲೆಂಡಿಗೆ ಹೋಗಿ ನ್ಯಾಯವಾದಿಯಾಗಿ ಹಿಂದಿರುಗಿದ. ದಕ್ಷಿಣ ಆಫ್ರಿಕದಲ್ಲಿರುವಾಗಲೇ ಆತನಿಗೆ ಗೋಖಲೆಯವರ ಪರಿಚಯವಾಗಿತ್ತು; ಇಂಗ್ಲೆಂಡಿನಲ್ಲಿ ಈ ಬಾಂಧವ್ಯ ಮತ್ತಷ್ಟು ಬೆಳೆಯಿತು. ಗೋಖಲೆಯವರು ಸೋಹರಾಬ್ಜಿಗೆ ಮನಸೋತು ಭಾರತ ಕ್ಕೆ ಹಿಂದಿರುಗಿದ ಮೇಲೆ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯನ್ನು ಸೇರಬೇಕೆಂದು ಸಹ ಆತನನ್ನು ಕೇಳಿದರು. ವಿದ್ಯಾರ್ಥಿಗಳಿಗಂತೂ ಸೊಹರಾಬ್ಜಿ ಪ್ರೇಮಪುತ್ಥಳಿಯಾದ. ಎಲ್ಲರ ಕಷ್ಟದಲ್ಲೂ ಭಾಗಿಯಾಗುತ್ತಿದ್ದ. ಇಂಗ್ಲಂಡಿನ ಕೃತಕ ವಿಲಾಸಜೀವನ ಆತನ ಆತ್ಮವನ್ನು ಸೂರೆಗೊಳ್ಳಲಿಲ್ಲ. ಇಂಗ್ಲಂಡಿಗೆ ಹೋದಾಗ ಆತನಿಗೆ ಮೂವತ್ತು ವರ್ಷ; ಅಲ್ಪ ಸ್ವಲ್ಪ ಇಂಗ್ಲೀಷ್ ಜ್ಞಾನವಿತ್ತು. ಆದರೆ ಆತ್ಮನಿಷ್ಠೆ ಇರುವವನಿಗೆ ಎಲ್ಲ ತೊಂದರೆಗಳೂ ಕರಗಿ ಮಾಯವಾಗುತ್ತವೆ. ಆದರ್ಶ ವಿದ್ಯಾರ್ಥಿ ಜೀವನದಿಂದ ಸೊಹರಾಬ್ಜಿ ಎಲ್ಲ ಪರೀಕ್ಷೆಗಳಲ್ಲೂ ಉತ್ತೀರ್ಣನಾದ. ನಾನು ಇಂಗ್ಲಂಡಿಗೆ ಹೋದಾಗ ನ್ಯಾಯವಾದಿ ಪರೀಕ್ಷೆ ಬಹು ಸಲಭವಿತ್ತು. ಈಗ ನ್ಯಾಯವಾದಿಗಳು ತುಂಬ ಅಭ್ಯಾಸ ಮಾಡಬೇಕಾಗಿದೆ. ಆದರೆ ಸೊಹರಾಬ್ಜಿಗೆ ಸೋಲೆಂಬುದೇ ತಿಳಿಯದು. ಇಂಗ್ಲಂಡ್‌ನಲ್ಲಿ ಸಹಾಯದಳವನ್ನು ಏರ್ಪಡಿಸಿದಾಗ ಈತನೇ ಮೊದಲು ಸೇರಿದವನು; ಕೊನೆಯವರೆಗೂ ಸೇವೆ ಮಾಡಿದ. ಈ ಪಡೆಯವರೂ ಸತ್ಯಾಗ್ರಹ ಆಚರಿಸಬೇಕಾಗಿ ಬಂತು; ಎಷ್ಟೋ ಜನ ಹಿಂದೆ ಸರಿದರೂ ಸೋಹರಾಬ್ಜಿ ಮಾತ್ರ ಯಾವಾಗಲೂ ಮುಂದೆಯೆ. ಈ ಸಹಾಯಕ ದಳದ ಸತ್ಯಾಗ್ರಹದಲ್ಲೂ ಸಂಪೂರ್ಣ ವಿಜಯ ದೊರಕಿತು.

ಸೋಹರಾಬ್ಜಿ ನ್ಯಾಯವಾದಿಯಾಗಿ ಜೋಹಾನ್ಸ್ ಬರ್ಗ್‌ಗೆ ಹಿಂದಿರುಗಿ ಅಲ್ಲಿ ನೆಲಸಿ ತನ್ನ ಜನರ ಸೇವೆ ಮಾಡಲು ಆರಂಭಿಸಿದ. ದಕ್ಷಿಣ ಆಫ್ರಿಕದಿಂದ ನನಗೆ ಬಂದ ಪ್ರತಿಯೊಂದು ಕಾಗದದಲ್ಲೂ, "ಮೊದಲಿನಂತೆ ಸರಳಜೀವಿ, ಸ್ವಲ್ಪವೂ ಅಹಂಕಾರಿಲ್ಲ, ಬಡವರು ಬಲ್ಲಿದರು ಎಂಬ ಭೇದವಿಲ್ಲದೆ ಎಲ್ಲರ ಸಂಗಡಲೂ ಬೆರೆಯುತ್ತಾನೆ" ಎಂದು ಸೊಹರಾಬ್ಜಿಯ ಮೆಚ್ಚುಗೆಯೆ ಇರುತ್ತಿತ್ತು. ಆದರೆ ದೇವರು ಎಷ್ಟು ದಯಾಮಯನೊ ಅಷ್ಟೇ ಕ್ರೂರ ಎಂದು ತೋರುತ್ತದೆ. ಕೆಲವು ತಿಂಗಳಲ್ಲೆ ಸೋಹರಾಬ್ಜಿಗೆ ಉಲ್ಬಣ ಕ್ಷಯರೋಗ ಬಂದು ತೀರಿಕೊಂಡು ಭಾರತೀಯರನ್ನೆಲ್ಲ ಶೋಕಸಾಗರದಲ್ಲಿ ಮುಳುಗಿಸಿದ. ಈ ರೀತಿ ಅತ್ಯಲ್ಪ ಕಾಲದಲ್ಲಿ ದೇವರು ಪ್ರಮುಖ ಭಾರತೀಯರನ್ನು { ಕಾಛಲಿಯಾ ಮತ್ತು ಸೋಹರಾಬ್ಜಿ} ಆಹುತಿ ತೆಗೆದುಕೊಂಡ ಈ ಇಬ್ಬರಲ್ಲಿ ಯಾರು ಉತ್ತಮರು ಎಂದು ಹೇಳಲು ನನಗೆ ಸಾಧ್ಯವಿಲ್ಲ. ಅವರವರ ಕ್ಷೇತ್ರದಲ್ಲಿ ಇಬ್ಬರೂ ಉನ್ನತ ಪುರುಷರೇ. ಕಾಛಲಿಯಾ ಹೇಗೆ ಒಳ್ಳೆ ಮುಸಲ್ಮಾನನೊ ಉನ್ನತ ಭಾರತೀಯನಾಗಿದ್ದನೊ ಹಾಗೆಯೇ ಸೊಹರಾಬ್ಜಿ ಉನ್ನತ ಪಾರಸಿಯಾಗಿ ಉನ್ನತ ಭಾರತೀಯನೂ ಆಗಿದ್ದ.

ಈ ರೀತಿ ಸೊಹರಾಬ್ಜಿ ವಲಸೆಗಾರ ಹತೋಟಿ ಶಾಸನದ ಪ್ರಕಾರ ಟ್ರಾನ್ಸ್ ವಾಲ್‌ನಲ್ಲಿ ವಾಸಿಸಲು ತನಗೆ ಇರುವ ಹಕ್ಕನ್ನು ಪರೀಕ್ಷಿಸುವುದಾಗಿ ಮುಂಚೆಯೇ ಸರಕಾರಕ್ಕೆ ತಿಳಿಸಿ ಟ್ರಾನ್ಸವಾಲ್ ಪ್ರವೇಶ ಮಾಡಿದ. ಸರಕಾರ ಈ ಹೊಸ ಸನ್ನಿವೇಶಕ್ಕೆ ಸಿದ್ಧವಾಗಿರಲಿಲ್ಲ; ಬಹಿರಂಗವಾಗಿ ಗಡಿ ದಾಟಿ ದೇಶದೊಳಗೆ ಬಂದ ಸೊಹರಾಬ್ಜಿಯನ್ನು ಏನು ಮಾಡಬೇಕೆಂದು ಅವರಿಗೆ ತೋರಲಿಲ್ಲ. ವಲಸೆ ಅಧಿಕಾರಿಗೆ ಸೊಹರಾಬ್ಜಿಯ ಪರಿಚಯುವಿತ್ತು. ಪರೀಕ್ಷಾರ್ಥವಾಗಿ ಉದ್ದೇಶ ಪೂರ್ವಕ ಟ್ರಾನ್ಸವಾಲ್ ಪ್ರವೇಸಿಸುತ್ತಿರುವುದಾಗಿಯೂ ಇಂಗ್ಲಿಷ್ ನಲ್ಲಿ ಪರೀಕ್ಷೆ ಮಾಡಬಹುದಾಗಿಯೂ ತಿಳಿಸಿದ. ಸೊಹರಾಬ್ಜಿಯ ಇಂಗ್ಲಿಷ್ ಪರಿಚಯ ತನಗೆ ತಿಳಿದಿದ್ದುದರಿಂದ ಪರೀಕ್ಷೆಯ ಪ್ರಶ್ನೆಯೇ ಇಲ್ಲವೆಂದೂ ದಸ್ತಗಿರಿ ಮಾಡಲು ತನಗೆ ಆಜ್ಞೆ ಇಲ್ಲವೆಂದೂ ಸೊಹರಾಬ್ಜಿ ಟ್ರಾನ್ಸ್ ವಾಲ್ ಪ್ರವೇಶಿಸಬಹುದೆಂದೂ ಬೇಕಾದರೆ ಇದ್ದಲ್ಲಿಯ ಸರಕಾರ ದಸ್ತಗಿರಿ ಮಾಡುವುದೆಂದೂ ಆ ಅಧಿಕಾರಿ ತಿಳಿಸಿದ.

ಈ ರೀತಿ ನಮ್ಮ ಯೋಜನೆಗೆ ವ್ಯತಿರಿಕ್ತವಾಗಿ ಸೊಹರಾಬ್ಜಿ ಜೋಹಾನ್ಸ್ ಬರ್ಗ್ ಬಂದು ಸೇರಿದ; ನಾವೆಲ್ಲ ಆತನನ್ನು ಸ್ವಾಗತಿಸಿದೆವು. ಸರಹದ್ದಿನಲ್ಲಿದ್ದ ವೋಲ್ಕ್ಸ ರಸ್ಟ್‌ನಿಂದ ಮುಂದೆ ಅಡಿಯಿಡಲು ಸರಕಾರ ಅವಕಾಶ ಕೊಡುವುದೆಂದು ನಾವು ಯಾರೂ ಭಾವಿಸಿರಲಿಲ್ಲ. ನಾವು ಉದ್ದೇಶಪೂರ್ವಕಾವಾಗಿ ಧೈರ್ಯದಿಂದ ಮುಂದುವರಿದರೆ ಅನೇಕ ವೇಳೆ ಸರಕಾರ ನಮ್ಮನ್ನು ಎದುರಿಸಲು ಸಿದ್ದವಾಗಿರುವದಿಲ್ಲ. ಇದಕ್ಕೆ ಕಾರಣ ಸರಕಾರದ ಸ್ವಭಾವದಲ್ಲೇ ಇದೆ. ಸರಕಾರಿ ಅಧಿಕಾರಿಗೆ ಸಾಮಾನ್ಯವಾಗಿ ತನ್ನ ಕೆಲಸದಲ್ಲಿ ತಲ್ಲೀನತೆ ಇರುವುದಿಲ್ಲ. ಪ್ರತಿಯೊಂದು ವಿಷಯವನ್ನು ಮುಂಚೆ ಯೋಚನೆ ಮಾಡಿ ಅಭಿಪ್ರಾಯ ರೂಪುಗೊಳಿಸಿ ಅದರಂತೆ ಪೂರ್ವಸಿದ್ಧತೆ ಮಾಡಿಕೊಂಡಿರುವುದಿಲ್ಲ. ಅಲ್ಲದೆ ಒಂದಲ್ಲ, ಅನೇಕ ವಿಷಯಗಳ ಕಡೆ ಗಮನ ಕೊಡಬೇಕಾದ್ದರಿಂದ ಆತನ ಮನಸ್ಸು ಎಲ್ಲ ಕಡೆಗೂ ಓಡಬೇಕಾಗಿರುತ್ತದೆ. ಮೂರನೆಯದಾಗಿ ಅಧಿಕಾರಮದ ಬೇರೆ. ಆದ್ದರಿಂದ ಏನು

ಚಳುವಳಿ ಎದ್ದರೂ ಸುಲಭವಾಗಿ ಮಟ್ಟಹಾಕಬಹುದೆಂಬ ಅಜಾಗರೂಕತೆಯಿಂದಿರುತ್ತಾನೆ. ಸಾರ್ವಜನಿಕ ಸೇವಕನಿಗಾದರೆ ತನ್ನ ಗುರಿಯೂ ಸಾಧನೆಯ ಮಾರ್ಗವೂ ಗೊತ್ತಿರುತ್ತದೆ. ನಿರ್ದಿಷ್ಟ ಯೋಜನೆ ಇದ್ದರೆ ಕಾರ್ಯ ರೂಪಕ್ಕೆ ತರಲು ಆತನು ಸದಾ ಸಿದ್ಧ. ಹಗಲು ರಾತ್ರಿ ಆತನಿಗೆ ತನ್ನ ಕಾರ್ಯ ಸಾಧನೆಯ ಯೋಚನೆಯೊಂದೇ. ನಿರ್ದಿಷ್ಟ ಧ್ಯೇಯದಿಂದ ಸರಿಯಾದ ಮಾರ್ಗದಲ್ಲಿ ಹೆಜ್ಜೆಯಿಟ್ಟರೆ ಸರಕಾರ ಯಾವಾಗಲೂ ಹಿಂದೆ ಬೀಳುತ್ತದೆ. ಅನೇಕ ಚಳುವಳಿ ವಿಫಲವಾಗುವುದು ಸರಕಾರಗಳ ಅದ್ಭುತ ಶಕ್ತಿಯಿಂದಲ್ಲ, ಮುಖಂಡರುಗಳಲ್ಲಿ ಮೇಲೆ ವಿವರಿಸಿದ ಗುಣ ಇಲ್ಲದ್ದರಿಂದ.

ಒಟ್ಟಿನಲ್ಲಿ ಸರಕಾರದ ಅಜಾಗರೂಕತೆಯಿಂದಲೊ, ಅಥವಾ ತಿಳಿಯದೆಯೋ ತಿಳಿದೋ ಸೊಹರಾಬ್ಜಿ ಜೊಹಾನ್ಸ್ ಬರ್ಗ್ ಸೇರಿದನು. ಇಂಥ ಸಂದರ್ಭದಲ್ಲಿ ಏನು ಮಾಡಬೇಕೋ ಸ್ಥಳೀಯ ಅಧಿಕಾರಿಗೆ ತಿಳಿದಿರಲಿಲ್ಲ; ಮೇಲಿನವರೂ ಏನೂ ತಿಳಿಸಿರಲಿಲ್ಲ. ಸೋರಹಾಬ್ಜಿಯ ಆಗಮನದಿಂದ ನಮ್ಮ ಉತ್ಸಾಹಕ್ಕೆ ಪಾರವೇ ಇಲ್ಲದಂತಾಯಿತು. ಸರಕಾರ ಸೋತಿತು, ನಮ್ಮೊಂದಿಗೆ ಸಂಧಾನಕ್ಕೆ ಬರುತ್ತದೆ ಎಂದು ಕೆಲವರು ಯುವಕರು ಭಾವಿಸಿದರು. ಸ್ವಲ್ಪದರಲ್ಲೆ ಅವರ ಆಶೆ ನಿರಾಶೆಯಾಯಿತು. ಅನೇಕ ಯುವಕರ ಆತ್ಮಯಜ್ಞವಿಲ್ಲದೆ ಯಾವ ಒಪ್ಪಂದವೂ ಸಾಧ್ಯವಿಲ್ಲವೆಂದು ಮನಗಂಡರು.

ತನಗೆ ಸಾಧಾರಣ ಇಂಗ್ಲಿಷ್ ಬರುವುದಾಗಿಯೂ ಬೇಕಾದರೆ ಪರೀಕ್ಷೆಗೆ ಸಿದ್ಧನಿರುವುದಾಗಿಯೂ ಹೊಸ ವಲಸೆಗಾರರ ಹತೋಟಿ ಶಾಸನದಂತೆ ಟ್ರಾನ್ಸ್‌ವಾಲ್‌ನಲ್ಲಿರಲು ತನಗೆ ಅಧಿಕಾರವಿರುವುದಾಗಿಯೂ ಸೊಹರಾಬ್ಜಿ ಜೋಹಾನ್ಸ್ ಬರ್ಗ್ ಪೋಲೀಸ್ ಸೂಪರಿಂಟೆಂಡೆಂಟರಿಗೆ ತಿಳಿಸಿದನು. ಇದಕ್ಕೆ ಯಾವ ಉತ್ತರವೂ ಬರಲಿಲ್ಲ. ಕೆಲವು ದಿನಗಳ ಮೇಲೆ ಒಂದು ಸಮನ್ ಬಂತು.

೧೯೦೮ ರ ಜುಲೈ ೮ನೇ ದಿನ ನ್ಯಾಯಾಸ್ಥಾನದಲ್ಲಿ ಸೊಹರಾಜ್ಜಿಯ ಮೊಕದ್ದಮೆ ಆರಂಭವಾಗುವ ಮುಂಚೆ ನ್ಯಾಯಾಸ್ಥಾನದ ಆವರಣದಲ್ಲಿಯೇ ಒಂದು ಭಾರತೀಯರ ಸಭೆ ಸೇರೆಸಿದೆವು; ಜಯ ಲಭಿಸುವವರೆಗೆ ಎಷ್ಟು ಬಾರಿಯಾದರೂ ಸೆರೆಮನೆಗೆ ಹೋಗುತ್ತೇನೆ, ಏನು ಕಷ್ಟ ಅಪಾಯ ಒದಗಿದರೂ ಸಹಿಸುತ್ತೇನೆ ಎಂದು ಸೊಹರಾಬ್ಜಿ ಉಜ್ವಲವಾಗಿ ಭಾಷಣ ಮಾಡಿದ. ಈ ಮಧ್ಯೆ ನನಗೂ ಸೊಹರಾಬ್ಜಿಗೂ ಗಾಢಪರಿಚಯ ಬೆಳೆದಿತ್ತು; ಭಾರತೀಯರ ಗೌರವ ಹೆಚ್ಚಿಸುತ್ತಾನೆಂಬ ನಂಬುಗೆಯೂ ದೃಢವಾಗಿತ್ತು. ಯಥಾಕಾಲದಲ್ಲಿ ನ್ಯಾಯಾಧೀಶನು ವಿಚಾರಣೆಗೆ ಪ್ರಾರಂಭಿಸಿದ. ಸೊಹರಾಬ್ಜಿಯ ಪರ ನಾನೇ ವಕಾಲತ್ತು ವಹಿಸಿ ಸಮನ್ಸ್ ಕ್ರಮಬದ್ಧವಲ್ಲದ ಕಾರಣ ಆತನನ್ನು ಬಿಡುಗಡೆ ಮಾಡಬೇಕೆಂದು ವಾದಿಸಿದೆ. ಪಬ್ಲಿಕ್ ಪ್ರಾಸಿಕ್ಯೂಟರನ ವಾದವೂ ಆಯಿತು. ಮರುದಿನ ನನ್ನ ವಾದ ಸರಿಯೆಂದು ನ್ಯಾಯಾಧೀಶ ಸೋಹರಾಬ್ಜಿಯನ್ನು ಬಿಡುಗಡೆ ಮಾಡಿದ. ಮಾರನೇ ದಿನವೇ ಕೋರ್ಟಿಗೆ ಬರಬೇಕೆಂದು ಸೊಹರಾಬ್ಜಿಗೆ ಪುನಃ ಎಚ್ಚರಿಕೆ ಬಂತು.

೧೦ ನೇ ತಾರೀಖು. ನ್ಯಾಯಾಧೀಶ ಸೊಹರಾಬ್ಜಿ ಒಂದು ವಾರದಲ್ಲಿ ಟಾನ್ಸ್‌ವಾಲ್

ಬಿಟ್ಟು ಹೊರಡಬೇಕೆಂದು ಅಪ್ಪಣೆ ಮಾಡಿದ. ಸೊಹರಾಬ್ಜಿಗೆ ತೀರ್ಪು ತಿಳಿದೊಡನೆ, ಟ್ರಾನ್ಸ್ ವಾಲ್‌ನಿಂದ ಹೊರಡುವುದು ತನಗೆ ಇಷ್ಟವಿಲ್ಲವೆಂದು ಪೋಲೀಸ್ ಸೂಪರಿಂಟೆಂಡೆಂಟರಾದ ಜೆ.ಎ.ಜಿ.ವೆರ್ನ್ಯಾನ್‌ರಿಗೆ ತಿಳಿಸಿದ. ಪುನಃ ೨೦ನೇ ತಾರೀಖು ನ್ಯಾಯಾಸ್ಥಾನದಲ್ಲಿ ತಂದು ನಿಲ್ಲಿಸಿ ನ್ಯಾಯಾಧೀಶರ ಆಜ್ಞೆ ಉಲ್ಲಂಘಿಸಿದ ಆಪಾದನೆಯ ಮೇಲೆ ಒಂದು ತಿಂಗಳು ಸಶ್ರಮ ಶಿಕ್ಷೆ ವಿಧಿಸಿದರು. ಹೆಚ್ಚು ಬಂಧನ ಮಾಡಿದಷ್ಟೂ ಭಾರತೀಯರ ಉತ್ಸಾಹ ಅಧಿಕವಾಗುವುದೆಂದು ಸರಕಾರ ಸ್ಥಳೀಯ ಭಾರತೀಯರನ್ನು ದಸ್ತಗಿರಿ ಮಾಡಲಿಲ್ಲ. ಅಲ್ಲದೆ ಅನೇಕ ಮೊದದ್ದಮೆಗಳಲ್ಲಿ ಕ್ರಮಲೋಪದಿಂದ ಅನೇಕ ಭಾರತೀಯರ ಬಿಡುಗಡೆಯಾಗುತ್ತಿತ್ತು. ಇದೂ ನಮ್ಮ ಜನರ ಉತ್ಸಾಹ ಹೆಚ್ಚಿಸಿತು. ಸರಕಾರ ತಮಗೆ ಬೇಕಾದ ಎಲ್ಲ ಭಾರತೀಯರ ವಿರುದ್ಧ ಶಾಸನಗಳಿಗೂ ಶಾಸನಸಭೆಯ ಒಪ್ಪಿಗೆ ಪಡೆಯಿತು. ಅನೇಕ ಭಾರತೀಯರು ತಮ್ಮ ರಿಜಿಸ್ಟ್ರೇಷನ್ ರಹದಾರಿಗಳನ್ನು ಸುಟ್ಟು ಹಾಕಿದ್ದರು. ಆದರೆ ರಿಜಿಸ್ಟ್ರೇಷನ್‌ನಿಂದ ದೇಶದಲ್ಲಿರಲು ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಂಡಿದ್ದರು. ಆದ್ದರಿಂದ ಮೊಕದ್ದಮೆ ಹೂಡಿ ಸೆರೆಮನೆ ತುಂಬಲು ಅವಕಾಶ ಕೊಡುವುದು. ಅವಿವೇಕವೆಂದೂ ಸುಮ್ಮನಿದ್ದರೆ ಭಾರತೀಯರು ತಮ್ಮಷ್ಟಕ್ಕೆ ತಾವೇ ತಣ್ಣಗಾಗುವರೆಂದೂ ಸರಕಾರ ಯೋಚಿಸಿತು. ಆದರೆ ಅದೊಂದು ಭ್ರಮೆಯಾಯಿತು. ಸರಕಾರದ ತಾಳ್ಮೆಯನ್ನು ಪರೀಕ್ಷಿಸಲು ಭಾರತೀಯರು ಬೇರೆ ಕಾರ್ಯಕ್ರಮ ಕೈಗೊಂಡರು; ಸರಕಾರದ ತಾಳ್ಮೆಯೂ ಮೀರಿತು.

೩೦. ಸೇಠ್ ದಾವುದ್ ಮಹಮ್ಮದ್ ಮುಂತಾದವರ ಸತ್ಯಾಗ್ರಹ ಪ್ರವೇಶ

ವಿಳಂಬ ನೀತಿಯಿಂದ ದಣಿಸಿ ಸರಕಾರ ತಮ್ಮ ಬಲ ಮುರಿಯಬಯಸಿದೆಯೆಂದು ಭಾರತೀಯರಿಗೆ ತಿಳಿಯಿತು. ಒಡನೆ ಬೇರೆ ಉಪಾಯ ಹುಡುಕಿದರು. ಕಷ್ಟ ಸಹಿಸಬಲ್ಲತನಕ ಸತ್ಯಾಗ್ರಹಿಗೆ ಆಯಾಸವೇ ಇಲ್ಲ. ಆದ್ದರಿಂದ ಸರಕಾರದ ಲೆಕ್ಕಾಚಾರ ತಲೆಕೆಳಗೆ ಮಾಡಬಲ್ಲವರಾದರೂ ಭಾರತೀಯರು. ಟ್ರಾನ್ಸ್ ವಾಲ್‌ನಲ್ಲಿ ನೆಲೆಸಲು ಪೂರ್ವದಿಂದ ಹಕ್ಕುಳ್ಳ ಅನೇಕ ಭಾರತೀಯರು ನೇಟಾಲ್‌ನಲ್ಲಿದ್ದರು. ವ್ಯಾಪಾರಕ್ಕಾಗಿ ಅವರು ಟ್ರಾನ್ಸ್‌ವಾಲ್‌ಗೆ ಹೋಗಬೇಕಾಗಿರಲಿಲ್ಲ; ದೇಶದೊಳಗೆ ಹೋಗಲು ಅವರಿಗೆ ಹಕ್ಕುಂಟೆಂದು ನಾವು ತೀರ್ಮಾನಿಸಿದೆವು. ಅವರಿಗೆ ಸ್ವಲ್ಪ ಇಂಗ್ಲಿಷ್ ಪರಿಚಯವೂ ಇತ್ತು. ಅಲ್ಲದೆ ಸೊಹರಾಬ್ಜಿಯಂತಹ ವಿದ್ಯಾವಂತರು ಟ್ರಾನ್ಸ್‌ವಾಲ್ ಪ್ರವೇಶ ಮಾಡುವುದು ಸತ್ಯಾಗ್ರಹ ತತ್ವಕ್ಕೆ ವಿರೋಧವಾಗಿರಲಿಲ್ಲ. ಪೂರ್ವದಿಂದ ನೆಲಸುವ ಹಕ್ಕುಳ್ಳವರು, ಇಂಗ್ಲಿಷ್ ವಿದ್ಯಾವಂತರು ಈ ರೀತಿ ಇಬ್ಬಗೆಯ ಭಾರತೀಯರು ಟ್ರಾನ್ಸ್‌ವಾಲ್ ಪ್ರವೇಶ ಮಾಡಬೇಕೆಂದು ನಿರ್ಧರಿಸಿದೆವು.

ಇವರಲ್ಲಿ ಸೇಠ್ ದಾವುದ್ ಮಹಮ್ಮದರೂ, ಪಾರ್ಸಿ ರುಸ್ತುಂಜಿಯವರೂ ಭಾರಿ ವರ್ತಕರು; ಸುರೇಂದ್ರನಾಥ ಮೇಢ್, ಪ್ರಾಗ್ಜಿ ಖಂಡುಭಾಯ್ ದೇಸಾಯ್; ರಿಪನ್ಸಿ ಮೂಲ್ಜಿ ಸೋಢಾ, ಹರಿಲಾಲ್ ಗಾಂಧಿ ಮುಂತಾದವರು ವಿದ್ಯಾವಂತರು. ಹೆಂಡತಿಗೆ

ಕಾಯಿಲೆಯಾಗಿ ವಿಷಮಾವಸ್ಥೆಯಲ್ಲಿದ್ದರೂ ದಾವುದ್ ಸೇಠರು ಸತ್ಯಾಗ್ರಹಕ್ಕೆ ಮುನ್ನುಗ್ಗಿದರು.

ಸೇಠ್ ದಾವುದ್ ಮಹಮ್ಮದರ ಪರಿಚಯ. ಸ್ವಲ್ಪ ಮಾಡಿಕೊಡುತ್ತೇನೆ. ಅವರು ನೇಟಾಲ್ ಇಂಡಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರು; ದಕ್ಷಿಣ ಆಫ್ರಿಕೆಗೆ ವ್ಯಾಪಾರಕ್ಕಾಗಿ ಬಂದ ವರ್ತಕರಲ್ಲಿ ಬಹು ಹಳಬರಲ್ಲಿ ಒಬ್ಬರು. ಸೂರತ್ತಿನ ಸುನ್ನಿವೋರಾ ಪಂಗಡದವರು. ಕಾರ್ಯಕುಶಲತೆಯಲ್ಲಿ ಅವರನ್ನೂ ಮೀರಿಸುವವರು ನನಗೆ ತಿಳಿದಮಟ್ಟಿಗೆ ದಕ್ಷಿಣ ಆಫ್ರಿಕದ ಭಾರತೀಯರಲ್ಲಿ ಯಾರೂ ಇರಲಿಲ್ಲ. ಅಸದೃಶ ಗ್ರಹಣಶಕ್ತಿಯುಳ್ಳವರು. ಹೆಚ್ಚಿನ ಅಕ್ಷರ ಶಿಕ್ಷಣವಿಲ್ಲದಿದ್ದರೂ ಇಂಗ್ಲಿಷ್, ಡಚ್ ಪರಿಶ್ರಮವಿತ್ತು. ಯೂರೋಪಿಯನ್ ವರ್ತಕರೊಡನೆ ವ್ಯಾಪಾರ ವ್ಯವಹಾರದಲ್ಲಿ ಅಸಾಧಾರಣ ಚಾತುರ್ಯವಿತ್ತು. ದಾನದಲ್ಲಿ ಕರ್ಣ, ಮನೆಯಲ್ಲಿ ೫೦ ಜನರಾದರೂ ಊಟಕ್ಕಿಲ್ಲದ ದಿನವಿಲ್ಲ. ಭಾರತೀಯ ನಿಧಿಗೆ ಕೊಡುಗೈಯ ಪ್ರಮುಖರಲ್ಲಿ ಒಬ್ಬರು. ರತ್ನಪ್ರಾಯನಾದ ಒಬ್ಬನೇ ಮಗ. ನಡತೆಯಲ್ಲಿ ತಂದೆಯನ್ನು ಮೀರಿಸುವಾತ. ಶುಭ್ರಸ್ಫಟಿಕದಂತೆ ನಿರ್ಮಲಹೃದಯ. ತನ್ನ ಮಗನ ಆಶೋತ್ತರಗಳಿಗೆ ದಾವುದ್ ಸೇಠರು ಎಂದೂ ಎದುರುಬಂದವರಲ್ಲ. ತಂದೆ ಮಗನನ್ನೇ ಪೂಜಿಸುತ್ತಿದ್ದರೆಂದು ಹೇಳಿದರೂ ಉತ್ಪ್ರೇಕ್ಷೆಯಲ್ಲ. ತನ್ನ ಲೋಪ ಯಾವುದೂ ಮಗನಲ್ಲಿರಬಾರದೆಂದು ವಿದ್ಯಾಭ್ಯಾಸಕ್ಕೆ ಇಂಗ್ಲಂಡಿಗೆ ಕಳುಹಿಸಿದರು. ಆದರೆ ಮುತ್ತಿನಂಥ ಮಗನನ್ನು ಹರೆಯದಲ್ಲೇ ದಾವುದ್ ಸೇಠರು ಕಳೆದುಕೊಂಡರು. ಹುಸೇನ್ ಕ್ಷಯರೋಗದ ಬಾಯಿಗೆ ತುತ್ತಾದ. ಈ ಅಪಾರ ದುಃಖದಿಂದ ಸೇಠರು ಪಾರಾಗಲೇ ಇಲ್ಲ. ಹುಸೇನನ ಮರಣದಿಂದ ಭಾರತೀಯರ ಆಶೆಗಳೆಲ್ಲ ಮಣ್ಣುಗೂಡಿದವು. ಬಲು ಪ್ರಾಮಾಣಿಕ ಹುಡುಗ. ಹಿಂದೂ ಮುಸ್ಲಿಮರಿಬ್ಬರೂ ಆತನಿಗೆ ಎಡಗಣ್ಣು ಬಲಗಣ್ಣುಗಳಂತೆ. ಈಗ ದಾವುದ್ ಸೇಠರೂ ನಮ್ಮನ್ನಗಲಿದ್ದಾರೆ. ಸಾವಿನ ದವಡೆಗೆ ಸಿಲುಕದವರಾರು ?

ಪಾರ್ಸಿ ರುಸ್ತುಂಜಿ ಪರಿಚಯ ಆಗಲೇ ತಿಳಿಸಿದ್ದೇನೆ. ಟಿಪ್ಪಣಿ ಇಟ್ಟುಕೊಂಡು ಈ ಇತಿಹಾಸ ಬರೆಯುತ್ತಿಲ್ಲ. ಆದ್ದರಿಂದ ಈ ದಂಡಯಾತ್ರೆಯಲ್ಲಿ ಸೇರಿದ್ದ ಅನೇಕ ಮಿತ್ರರ ಹೆಸರು ಬಿಟ್ಟುಹೋಗಿವೆ; ಅವರ ಕ್ಷಮೆ ಬೇಡುತ್ತೇನೆ. ವ್ಯಕ್ತಿ ಪ್ರಶಸ್ತಿಗಾಗಿಯಲ್ಲ, ಸತ್ಯಾಗ್ರಹದ ಗುಟ್ಟು ತಿಳಿಸುವದಕ್ಕೂ, ಸತ್ಯಾಗ್ರಹಕ್ಕೆ ಎದುರುಬಂದ ಅನೇಕ ತೊಂದರೆ ಮಾಯವಾಗಿ, ಸತ್ಯಾಗ್ರಹ ಹೇಗೆ ಜಯಪ್ರದವಾಯಿತೆಂದು ತಿಳಿಸುವದಕ್ಕೂ ಈ ಗ್ರಂಥ ಬರೆಯುತ್ತಿದ್ದೇನೆ. ಅವಿದ್ಯಾವಂತರೆನಿಸಿದವರು ಸಹ ಹೇಗೆ ಮುಂದಾಳುಗಳಾಗಿ ಬಂದು ಕೀರ್ತಿ ಪಡೆದರು, ಹಿಂದು, ಮುಸಲ್ಮಾನ, ಪಾರ್ಸಿ, ಕ್ರಿಶ್ಚಿಯನ್ ಎಲ್ಲಾ ಏಕೀಭವಿಸಿ ಕೆಲಸಮಾಡಿದರು, ವರ್ತಕರು, ವಿದ್ಯಾವಂತರು ಇತರರು ಕಾರ್ಯತತ್ಪರತೆ ವ್ಯಕ್ತಗೊಳಿಸಿದರು ಎಂದು ವಿಶದಗೊಳಿಸಲು ಮಾತ್ರ ಅಲ್ಲಲ್ಲಿ ಕೆಲವು ಹೆಸರು ತಿಳಿಸಿದ್ದೇನೆ. ಒಬ್ಬ ಮಹಾವ್ಯಕ್ತಿಯ ಹೆಸರನ್ನು ತಿಳಿಸಿದ್ದರೆ ಅದು ಆತನ ಸ್ತೋತ್ರಕ್ಕಾಗಿಯಲ್ಲ, ಆತನ ಗುಣವನ್ನು ತಿಳಿಸಲಿಕ್ಕೆ.

ಈ ರೀತಿ ದಾವುದ್ ಸೇಠರು ತಮ್ಮ ಸತ್ಯಾಗ್ರಹ ಸೇನೆಯೊಂದಿಗೆ ಟ್ರಾನ್ಸ್‌ವಾಲ್ ಗಡಿಗೆ ಬಂದೊಡನೆ ಸರಕಾರ ಆತನನ್ನು ಎದುರಿಸಲು ಸಿದ್ಧವಾಗಿತ್ತು. ಅಷ್ಟು ದೊಡ್ಡ ಗುಂಪನ್ನು ಟ್ರಾನ್ಸ್‌ವಾಲಿನೊಳಗೆ ಬಿಟ್ಟರೆ ಸರಕಾರ ನಗೆಗೀಡಾಗುತ್ತಿತ್ತು; ಆದ್ದರಿಂದ ದಸ್ತಗಿರಿ ಮಾಡಲೇಬೇಕಾಯಿತು. ದಸ್ತಗಿರಿಮಾಡಿ ೧೯೦೮ ಆಗಸ್ಟ್ ೧೮ ರಲ್ಲಿನಡೆದವರೇ

ನ್ಯಾಯಾಧೀಶರ ಮುಂದೆ ನಿಲ್ಲಿಸಿದರು; ನ್ಯಾಯಾಧೀಶನು ಏಳು ದಿನದೊಳಗೆ ಟ್ರಾನ್ಸ್‌ವಾಲ್ ಬಿಡಬೇಕೆಂದು ಆಜ್ಞೆ ಮಾಡಿದ. ಯಥಾವಿಧಿಯಾಗಿ ಎಲ್ಲರೂ ಆಜ್ಞೆ ಉಲ್ಲಂಘಿಸಿದರು. ೨೮ ರಲ್ಲಿ ಪ್ರೆಟೋರಿಯಾದಲ್ಲಿ ಪುನಃ ದಸ್ತಗಿರಿ ಮಾಡಿ ವಿಚಾರಣೆಯಿಲ್ಲದೆಯೆ ಎಲ್ಲರನ್ನೂ ಗಡಿಪಾರು ಮಾಡಿದರು. ೩೧ ಕ್ಕೆ ಪುನಃ ಎಲ್ಲರೂ ಟ್ರಾನ್ಸ್‌ವಾಲ್ ಪ್ರವೇಶಮಾಡಿದರು. ಕೊನೆಗೆ ಸಪ್ಟೆಂಬರ್ ೮ನೇ ದಿನ ವೋಲ್ಕ್ಸ್ ರಸ್ಟ್‌ನಲ್ಲಿ ಅವರಿಗೆಲ್ಲ ೫೦ ಪೌಂಡ್ ದಂಡ, ತಪ್ಪಿದರೆ ೩ ತಿಂಗಳ ಕಠಿಣಶಿಕ್ಷೆ ವಿಧಿಸಿದರು. ಎಲ್ಲರೂ ಸಂತೋಷದಿಂದ ಸೆರೆಮನೆಗೆ ಹೋಗಲು ನಿರ್ಧರಿಸಿದರು.

ಟ್ರಾನ್ಸ್‌ವಾಲ್ ಭಾರತಿಯರು ಈಗ ಬಹಳ ಎಚ್ಚತ್ತರು. ತಮ್ಮ ನೇಟಾಲ್ ಬಂಧುಗಳನ್ನು ಬಂಧನ ಮುಕ್ತರಾಗಿಸಲು, ಅಸಾಧ್ಯವಾದರೆ ಅವರೊಂದಿಗೆ ಸೆರೆಮನೆಯಾದರೂ ಸೇರುವದು. ಅನಿವಾರ್ಯವಾಯಿತು. ಸೆರೆಮನೆ ಸೇರುವ ಉಪಾಯ ಹುಡುಕಲಾರಂಬಿಸಿದರು. ಅವರ ಇಷ್ಟಸಿದ್ಧಿಗೆ ಅನೇಕ ದಾರಿಗಳಿದ್ದವು. ವಲಸೆಗಾರ ಭಾರತೀಯನು ತನ್ನ ರಿಜಿಸ್ಟ್ರೇಷನ್ ರಹದಾರಿ ತೋರಿಸದಿದ್ದರೆ ಆತನಿಗೆ ವ್ಯಾಪಾರಕ್ಕೆ ಅನುಮತಿ ಪತ್ರ ದೊರೆಯುತ್ತಿರಲಿಲ್ಲ; ಅನುಮತಿ ಪತ್ರವಿಲ್ಲದ ವ್ಯಾಪರ ಒಂದು ಅಪರಾಧ. ನೇಟಾಲ್‌ನಿಂದ ಟ್ರಾನ್ಸ್‌ವಾಲ್ ಪ್ರವೇಶ ಮಾಡಲು ಸಹ ರಹದಾರಿ ತೋರಿಸಬೇಕಾಗಿತ್ತು; ರಹದಾರಿ ಇಲ್ಲದಿದ್ದರೆ ದಸ್ತಗಿರಿ. ರಹದಾರಿಗಳನ್ನೆಲ್ಲ ಆಗಲೇ ಸುಟ್ಟು ಹಾಕಿದ್ದರಿಂದ ಮುಂದಿನ ಮಾರ್ಗ ಸುಲಭವಿತ್ತು. ಭಾರತೀಯರು ಈ ಎರಡು ಮಾರ್ಗಗಳನ್ನೂ ಅವಲಂಬಿಸಿದರು. ಕೆಲವರು ರಹದಾರಿ ಇಲ್ಲದೆ ವ್ಯಾಪಾರ ಆರಂಭಿಸಿದರು. ಇನ್ನು ಕೆಲವರು ರಹದಾರಿ ತೋರಿಸದೆ ಟ್ರಾನ್ಸ್‌ವಾಲ್ ಗಡಿ ದಾಟಿ ದಸ್ತಗಿರಿಗೆ ಗುರಿಯಾದರು.

ಚಳವಳಿ ಈಗ ಉಗ್ರರೂಪ ತಾಳಿತು. ಪ್ರತಿಯೊಬ್ಬರಿಗೂ ಪರೀಕ್ಷೆ ಸಮಯ ಬಂತು ನೇಟಾಲಿನ ಇತರ ಭಾರತೀಯರ ಸೇಠ್ ದಾವುದರ ಮಾರ್ಗ ಅನುಸರಿಸಿದರು. ಜೋಹಾನ್ಸ್ ಬರ್ಗ್‌ನಲ್ಲೂ ದಸ್ತಗಿರಿಗಳಾದವು. ಇಷ್ಟಪಟ್ಟವರೆಲ್ಲ ಸೆರೆಯಾಗಬಹುದಾದ ಪರಿಸ್ಥಿತಿ. ನೇಟಾಲ್‌ನಿಂದ ದಂಡಯಾತ್ರೆ ಬಂದವರಿಗೆ ಮೂರು ತಿಂಗಳು, ಅನುಮತಿಯಿಲ್ಲದೆ ವ್ಯಾಪಾರ ಮಾಡಿದವರಿಗೆ ನಾಲ್ಕು ದಿನದಿಂದ ಮೂರು ತಿಂಗಳವರೆಗೆ ಶಿಕ್ಷೆ. ಸೆರೆಮನೆಗಳೆಲ್ಲ ತುಂಬಿದವು.

ಈ ರೀತಿ ಸೆರೆ ಸೇರಿದವರಲ್ಲಿ ನಮ್ಮ ಇಮಾಮ್ ಸಾಹೇಬರೂ ಒಬ್ಬರು. ಇಮಾಮ್ ಅಬ್ದುಲ್ ಖಾದರ್ ಬವಾಜೀರ್ ರಹದಾರಿ ಇಲ್ಲದೆ ವ್ಯಾಪಾರ ಮಾಡಿದರೆಂದು ದಸ್ತಗಿರಿ ಮಾಡಿ ೧೯೦೮, ಜುಲೈ ೨೧ ರಲ್ಲಿ ನಾಲ್ಕು ದಿನ ಸಶ್ರಮ ಶಿಕ್ಷೆ ವಿಧಿಸಿದರು. ಇಮಾಮ್ ಸಾಹೇಬರ ದೇಹಸ್ಥಿತಿ ಬಹಳ ಸೂಕ್ಷ್ಮವಾಗಿದ್ದುದರಿಂದ ಅವರು ದಸ್ತಗಿರಿಯಾಗುವರೆಂದು ತಿಳಿದು ಅನೇಕರು ನಗಲಾರಂಬಿಸಿದರು. ಅನೇಕರು ನನ್ನಲ್ಲಿ ಬಂದು ಆತನು ನಮ್ಮ ಜನರಿಗೆ ಅಪಕೀರ್ತಿ ತರಬಹುದಾದ್ದರಿಂದ ಆತನನ್ನು ಸತ್ಯಾಗ್ರಹಕ್ಕೆ ಸೇರಿಸಕೂಡದಾಗಿ ಸಹ ತಿಳಿಸಿದರು. ಅದಕ್ಕೆ ನಾನು ಲಕ್ಷ್ಯ ಕೊಡಲಿಲ್ಲ. ಇಮಾಮ್ ಸಾಹೇಬರು ಬರಿಗಾಲಿನಲ್ಲಿ

ಅಲ್ಲ, ಭೋಗಪ್ರಿಯರು; ಕಿರಿಹೆಂಡತಿ, ಸುಸಜ್ಜಿತವಾದ ಮನೆ, ಸದಾ ಕುದುರೆ ಗಾಡಿಯಲ್ಲೇ ಅವರ ಓಡಾಟ. ಇದೆಲ್ಲ ನಿಜವಿದ್ದರೂ ಅವರ ಮನದಾಳ ಅಳೆಯ ಬಲ್ಲವರಾರು? ಅವರ ಬಿಡುಗಡೆಯಾಧ ಮೇಲೆ ಇಮಾಮ್ ಸಾಹೇಬರು ಪುನಃ ಸೆರೆಮನೆಗೆ ಹೋಗಿ ಕಠಿನ ಶ್ರಮ ಮಾಡಿ ಕೊಟ್ಟ ಊಟ ಉಂಡು ಆದರ್ಶ ಬಂದಿಯಂತೆ ಬಾಳಿದರು. ಮನೆಯಲ್ಲಿ ಅವರಿಗೆ ಪ್ರತಿದಿನವೂ ರುಚಿರುಚಿಯಾದ ಹೊಸಹೊಸ ಅಡಿಗೆಯಾಗಬೇಕು; ಸೆರೆಮನೆಯಲ್ಲಿ ದೇವರು ಕೊಟ್ಟ ಹಿಟ್ಟಿನ ಗಂಜಿಯನ್ನೇ ಕುಡಿದು ಧನ್ಯರಾದರು. ಸೆರೆಯ ಅನುಭವದಿಂದ ಅವರ ಮನೋದಾರ್ಢ್ಯವಂತೂ ಮುರಿಯಲಿಲ್ಲ; ಅವರ ಜೀವನವೆ ಸರಳವಾಯಿತು. ಬಂದಿಯಾಗಿ ಕಲ್ಲು ಒಡೆದರು, ಕಸ ಗುಡಿಸಿದರು, ಇತರ ಎಲ್ಲ ಬಂದಿಗಳೊಂದಿಗೆ ವ್ಯಾಯಾಮಿಗೆ ನಿಲ್ಲುತ್ತಿದ್ದರು. ಫೀನಿಕ್ಸ್‌ನಲ್ಲಿ ನೀರು ಹೊರುತ್ತಿದ್ದರು. ಅಚ್ಚುಕೂಟ ಮೊಳೆ ಜೋಡಿಸುತ್ತಿದ್ದರು. ಫೀನಿಕ್ಸ್ ಆಶ್ರಮದಲ್ಲಿ ಪ್ರತಿಯೊಬ್ಬರೂ ಮೊಳೆಜೋಡಣೆ ಕಲಿಯಬೇಕಾಗಿತ್ತು. ತಮ್ಮ ಶಕ್ತಿ ಮೀರಿ ಇಮಾಮ್ ಸಾಹೇಬರು ಕಲಿತರು. ಈಗ ಭಾರತದಲ್ಲಿ ತಮ್ಮ ಶಕ್ತಿ ಮೀರಿ ಸಹಾಯಮಾಡುತ್ತಿದ್ದಾರೆ.

ಜೋಸೆಫ್ ರಾಯಪ್ಪನ್ ಎಂಬಾತ ಕೇಂಬ್ರಿಜ್ ಪದವೀದರ, ನ್ಯಾಯವಾದಿ. ಆತನ ತಂದೆತಾಯಿ ನೇಟಾಲ್ಗೆ ಕೂಲಿಗಾರರಾಗಿ ಬಂದವರು. ಆದರೂ ಈತ ಮಾತ್ರ ಯೂರೋಪಿಯನ್‌ರಂತೆ ಜೀವನ ನಡೆಸಿದ ಇಮಾಮ್ ಸಾಹೇಬರು ಪ್ರಾರ್ಥನೆಗಾದರೂ ಕಾಲುತೊಳೆದು ಬರಿಗಾಲಿನಲ್ಲಿ ಪ್ರಾರ್ಥನೆ ಮಾಡಬೇಕಾಗಿತ್ತು. ರಾಯಪ್ಪನ್ ತನ್ನ ಮನೆಯಲ್ಲಿ ಸಹ ಬೂಟು ಬಿಚ್ಚುತ್ತಿರಲಿಲ್ಲ. ಶಾಸನಗ್ರಂಥಗಳನ್ನೆಲ್ಲಾ ಬದಿಗಿಟ್ಟು, ಹೆಗಲ ಮೇಲೆ ತರಕಾರಿ ಬುಟ್ಟಿ ಹಾಕಿಕೊಂಡು ರಹಕಾರಿ ಇಲ್ಲದ ವ್ಯಾಪಾರಗಾರನೆಂದು ರಾಯಪ್ಪನ್ ಬಂಧಿತನಾದ. ಆತನಿಗೂ ಶಿಕ್ಷೆಯಾಯಿತು. “ನಾನು ಮೂರನೆ ತರಗತಿಯಲ್ಲಿ ಹೋಗಬೇಕೆ” ಎಂದ. “ನೀನೇ ಮೊದಲನೆ ಎರಡನೆ ತರಗತಿಯಲ್ಲಿ ಹೋದರೆ ಉಳಿದವರನ್ನು ಮೂರನೆ ತರಗತಿಯಲ್ಲಿ ಹೋಗಿರೆಂದು ಹೇಳುವುದು ಹೇಗೆ? ಸೆರೆಮನೆಯಲ್ಲಿ ನಿನ್ನ ಬ್ಯಾರಿಸ್ಟರ್ ಗಿರಿಯನ್ನಾರು ನೋಡುತ್ತಾರೆ?'' ಎಂದು ಹೇಳಿದೆ. ಅಷ್ಟರಿಂದ ರಾಯಪ್ಪನ್ ತೃಪ್ತನಾದ.

ಸೆರೆಮನೆ ಸೇರಿದವರಲ್ಲಿ ಹದಿನಾರು ವರ್ಷದ ಹುಡುಗರು ಎಷ್ಟೋ ಜನ ಇದ್ದರು. ಮೊಹನಲಾಲ್ ಮಣಿ ಫಲಾನಿ ಎಂಬ ಹುಡುಗನಿಗೆ ಹದಿನಾಲ್ಕೇ ವರ್ಷ.

ಭಾರತೀಯರ ಮಗ್ಗಲು ಮುರಿಯಲು ಸೆರೆಮನೆ ಅಧಿಕಾರಿಗಳು ಸ್ವಲ್ಪವೂ ಹಿಂದೆಗೆಯಲಿಲ್ಲ. ಝಾಡಮಾಲಿ ಕೆಲಸಕೊಟ್ಟರು; ಅದನ್ನೂ ಸಂತೋಷದಿಂದ ನಗೆಮುಖದಿಂದ ಪೂರೈಸುತ್ತಿದ್ದರು. ಕಲ್ಲು ಒಡೆಯಲು ಹೇಳಿದಾಗ ಅಲ್ಲಾ–ರಾಮ ಎಂದು ಧ್ಯಾನ ಮಾಡುತ್ತ ಕಲ್ಲು ಒಡೆಯುತ್ತಿದ್ದರು. ಹಳ್ಳ ತೋಡುವದು, ಕಲ್ಲುನೆಲವನ್ನು ಪಿಕಾಸಿಯಿಂದ ಅಗಿಯುವುದು, ಇಂಥ ಕಷ್ಟದ ಕೆಲಸದಲ್ಲಿ ಅವರ ಕೈ ದಡ್ಡು ಕಟ್ಟಿದವು ಈ ಅಮಾನುಷ ಸಹಿಸಲಾರದೆ ಕೆಲವರು ಮೂರ್ಛೆ ಬಿದ್ದರು; ಆದರೆ ಯಾರೂ ಧೈರ್ಯಗೆಡಲಿಲ್ಲ.

ಸೆರೆಮನೆಯಲ್ಲಿ ಅಸೂಯೆ, ಅಂತಃಕಲಹ ಇರಲಿಲ್ಲವೆಂದು ಯಾರೂ ಭಾವಿಸಬಾರದು. ಹೊಟ್ಟೆಯೇ ಎಲ್ಲ ಕಚ್ಚಾಟಕ್ಕೂ ಮೂಲಕಾರಣ, ಆದರೆ ಈ ಅನ್ನದ ಅಸೂಯೆ ಎದುರಿಸಿ ಅಂತಃಕಲಹ ತಡೆದೆವು.

ನನಗೂ ಪುನಃ ಬಂಧನವಾಯಿತು. ಒಂದು ಬಾರಿ ವೋಲ್ಕ್ಸ್ ರಸ್ಟ್‌ನಲ್ಲಿ ೭೫ ಜನ ಭಾರತೀಯ ಬಂದಿಗಳಿದ್ದರು. ನಮ್ಮ ಅಡಿಗೆ ನಾವೇ ಮಾಡುತ್ತಿದ್ದೆವು. ಬಂದಿಗಳಿಗೆ ಕೊಟ್ಟ ಆಹಾರವನ್ನು ಹಂಚಿ ಪರಸ್ಪರ ವ್ಯಾಜ್ಯ ನಿವಾರಿಸುವುದು ನನಗೆ ಮಾತ್ರ ಸಾಧ್ಯವಿತ್ತಾಗಿ ನಾನೇ ಅಡಿಗೆಭಟ್ಟನಾದೆ. ಸಕ್ಕರೆ ಹಾಕದೆ ಮಾಡಿದ, ಅರ್ಧಮರ್ಧ ಬೆಂದ ಅಂಬಲಿಯನ್ನು ಸಹ ನನ್ನ ಮೇಲಿನ ಪ್ರೇಮದಿಂದ ನನ್ನ ಸ್ನೇಹಿತರು ಗೊಣಗುಟ್ಟದೆ ತಿನ್ನುತ್ತಿದ್ದರು.

ಉಳಿದ ಬಂದಿಗಳಿಂದ ನನ್ನನ್ನು ಪ್ರತ್ಯೇಕಿಸಿದರೆ ಪ್ರಾಯಶಃ ನನ್ನ ಮೇಲೂ ಅವರ ಮೇಲೂ ಪರಿಣಾಮವಾಗಬಹುದೆಂದು ಸರಕಾರ ಯೋಚಿಸಿತು. ನನ್ನನ್ನು ಪ್ರೆಟೋರಿಯಾ ಸೆರೆಮನೆಗೊಯ್ದು ಭಯಂಕರ ಕೈದಿಗಳಂತೆ ಒಂಟಿಕೋಣೆಯಲ್ಲಿ ಕೂಡಿಸಿದರು. ವ್ಯಾಯಾಮಕ್ಕೆಂದು ದಿನಕ್ಕೆರಡು ಬಾರಿ ಹೊರಗೆ ಕರೆದುಕೊಂಡು ಹೋಗುತ್ತಿದ್ದರು. ವೊಲ್ಕ್ಸ್ ರಸ್ಟ್‌ನಲ್ಲಿ ಕೊಡುತ್ತಿದ್ದಂತೆ ಪ್ರೆಟೋರಿಯಾದಲ್ಲಿ ಭಾರತೀಯರಿಗೆ ತುಪ್ಪ ಕೊಡುತ್ತಿರಲಿಲ್ಲ. ಸೆರೆಯ ಕಷ್ಟಗಳನ್ನೆಲ್ಲ ಇಲ್ಲಿ ಹೇಳ ಬಯಸುವದಿಲ್ಲ; ಬೇಕಾದವರು 'ದಕ್ಷಿಣ ಆಫ್ರಿಕದಲ್ಲಿ ನನ್ನ ಸೆರೆಯ ಅನುಭವ' ಎಂಬ ಪುಸ್ತಕ ಓದಬಹುದು.

ಆದರೂ ಭಾರತೀಯರು ಜಗ್ಗಲಿಲ್ಲ. ಸರಕಾರಕ್ಕೆ ದಿಕ್ಕು ತೋಚದಾಯಿತು. ಎಷ್ಟು ಜನ ಭಾರತೀಯರನ್ನು ಈ ರೀತಿ ಸೆರೆಮನೆಗೆ ಸೇರಿಸುವುದು? ಖರ್ಚು ಎಷ್ಟು? ಈ ಸಮಸ್ಯೆಯನ್ನು ಬಿಡಿಸಲು ಸರಕಾರ ಬೇರೆ ಉಪಾಯ ಹುಡುಕಲಾರಂಭಿಸಿತು.

೩೧. ಗಡಿಪಾರುಗಳು

ಆ ದುಷ್ಟ ಶಾಸನದ ಪ್ರಕಾರ ದಂಡ, ಸೆರೆಮನೆ, ಗಡಿಪಾರು ಈ ರೀತಿ ಮೂರುವಿಧ ಶಿಕ್ಷೆ ವಿಧಿಸಬಹುದಾಗಿತ್ತು. ಒಟ್ಟಿಗೆ ಮೂರು ಶಿಕ್ಷೆ ವಿಧಿಸಲೂ ಅವಕಾಶವಿತ್ತು. ಅತ್ಯಧಿಕ ಶಿಕ್ಷೆ ವಿಧಿಸಲು ಎಲ್ಲ ನ್ಯಾಯಾಧೀಶರಿಗೂ ಅಧಿಕಾರ ಕೊಡಲಾಗಿತ್ತು. ಮೊದಮೊದಲು ಗಡಿಪಾರ ಎಂದರೆ ಟ್ರಾನ್ಸ್ ವಾಲ್‌ನಿಂದಾಚೆ ನೇಟಾಲ್, ಆರೆಂಜ್ ಫ್ರೀ ಸ್ಟೇಟ್ ಅಥವಾ ಪೋರ್ತುಗೀಸ್ ಪೂರ್ವ ಆಫ್ರಿಕಾದಲ್ಲಿ ಕರೆದೊಯ್ದು ಬಿಡುತ್ತಿದ್ದರು. ನೇಟಾಲ್‌ನಿಂದ ಬಂದವರನ್ನು ವೊಲ್ಕ್ಸ್ ರಸ್ಟ್ ಆಚೆ ಕರೆದೊಯ್ದು ಅವರ ಪಾಡಿಗೆ ಅವರನ್ನು ಬಿಡುತ್ತಿದ್ದರು. ಗಡಿಪಾರು ತುಂಬ ಹಾಸ್ಯಾಸ್ಪದವಾಯಿತು. ಕೊಂಚ ತೊಂದರೆಯಾಯಿತಲ್ಲದೆ ಭಾರತೀಯರು ಧೈರ್ಯಗೆಡಲಿಲ್ಲ ಅದಕ್ಕೆ ಪ್ರತಿಯಾಗಿ ಅವರ ಉತ್ಸಾಹ ಇಮ್ಮಡಿಯಾಯಿತು.

ಆದ್ದರಿಂದ ಸ್ಥಳೀಯ ಸರಕಾರ ಭಾರತೀಯರಿಗೆ ಹಿಂಸೆ ಕೊಡಲು ಬೇರೆ ಉಪಾಯ ಹುಡುಕತೊಡಗಿತು. ಸೆರೆಮನೆಗಳೆಲ್ಲ ತುಂಬಿಹೋಗಿದ್ದವು. ಭಾರತೀಯರನ್ನೆಲ್ಲ ಭಾರತಕ್ಕೆ ಗಡಿಪಾರು ಮಾಡಿದರೆ ಭಾರತೀಯರ ನೈತಿಕ ಬಲ ಮುರಿದು ದಾರಿಗೆ ಬರುವರೆಂದು ಸರಕಾರ ಯೋಚಿಸಿತು. ಸರಕಾರದ ಈ ಭಾವನೆಗೆ ಸ್ವಲ್ಪ ಅವಕಾಶವಿತ್ತಾದ್ದರಿಂದ

ಭಾರತೀಯರ ದೊಡ್ಡ ಗುಂಪೊಂದನ್ನು ಭಾರತಕ್ಕೆ ಗಡಿಪಾರು ಮಾಡಿದರು. ಈ ರೀತಿ ಗಡಿಪಾರಾದವರು ಅನೇಕ ಕಷ್ಟಕ್ಕೀಡಾದರು. ಹಡಗುಗಳಲ್ಲಿ ಸರಕಾರ ಕೊಟ್ಟ ಆಹಾರದ ಹೊರತು ಬೇರೆ ಏನೂ ದೊರೆಯಲಿಲ್ಲ. ಎಲ್ಲರನ್ನೂ ಹಡಗಿನ ಹೊರಭಾಗದಲ್ಲಿ ತುಂಬುತ್ತಿದ್ದರು. ಅನೇಕರಿಗೆ ದಕ್ಷಿಣ ಆಫ್ರಿಕದಲ್ಲಿ ಹೊಲಮನೆ, ಆಸ್ತಿಪಾಸ್ತಿ, ವ್ಯಾಪಾರ, ಹೆಂಡಿರು ಮಕ್ಕಳು ಇದ್ದರು; ಕೆಲವರು ಸಾಲವಂದಿಗರು. ಎಲ್ಲಾ ಕಳೆದುಕೊಂಡು ಭಿಕಾರಿಗಳಾಗಲು ಅನೇಕರು ಸಿದ್ದರಿರಲಿಲ್ಲ.

ಇಷ್ಟೆಲ್ಲ ಕಷ್ಟಬಂದರೂ ಭಾರತೀಯರನೇಕರು ಎದೆಗೆಡಲಿಲ್ಲ. ಕೆಲವರು ಧೈರ್ಯಗುಂದಿ ಸೆರೆಮನೆಗೆ ಹೋಗುವುದನ್ನು ನಿಲ್ಲಿಸಿದರು; ಆದರೆ ಸುಟ್ಟು ಹಾಕಿದ ರಹದಾರಿಯನ್ನು ಮತ್ತೆ ಪಡೆಯುವಷ್ಟು ಯಾರೂ ಧೃತಿಗೆಡಲಿಲ್ಲ. ಕೆಲವರಿಗೆ ಹೊಸ ರಹದಾರಿ ಪಡೆಯುವಂತೆ ಹಿಂಸೆಯನ್ನೂ ಕೊಟ್ಟರಾಗಲಿ, ನಗೆಮುಖದಿಂದ ಗಲ್ಲಿಗೇರಲೂ ಸಿದ್ಧರಿದ್ದ ಧೈರ್ಯಶಾಲಿಗಳನೇಕರು ಇನ್ನೂ ಇದ್ದರೆಂದು ನನ್ನ ನಂಬಿಕೆ. ಜೀವನದ ಹಂಗೇ ಇಲ್ಲದಿರುವಾಗ ಆಸ್ತಿಯ ಹಂಗೇತರದು?

ಭಾರತಕ್ಕೆ ಗಡಿಪಾರಾದವರೆಲ್ಲ ಕಡುಬಡವರು. ಕೇವಲ ಒಂದು ಮೂಕ ಭಕ್ತಿಯಿಂದ ಚಳುವಳಿಗೆ ಸೇರಿದ ಸರಳ ಜೀವಿಗಳು. ಈ ಬಡಪಾಯಿಗಳಿಗೆ ಕೊಟ್ಟ ಅಮಾನುಷ ಕಷ್ಟವನ್ನು ನೋಡುವುದೂ ಅಸಾಧ್ಯವಾಯಿತು. ಅದನ್ನು ಎದುರಿಸಲು ದಾರಿ ದುಸ್ಸಾಧ್ಯವಾಗಿತ್ತು. ನಮ್ಮಲ್ಲಿದ್ದ ಹಣ ಅತ್ಯಲ್ಪ. ಎಲ್ಲರಿಗೂ ಧನ ಸಹಾಯ ಕೊಡಲಾರಂಭಿಸಿದರೆ ನಮ್ಮ ಹೋರಾಟ ಇಳಿಮುಖವಾಗುವ ಅಪಾಯವೂ ಇತ್ತು. ಹಣಸಹಾಯದ ಆಸೆಗಾಗಿ ಚಳವಳಿ ಸೇರಲು ಯಾರಿಗೂ ಅವಕಾಶ ಕೊಡುತ್ತಿರಲಿಲ್ಲ. ಇಲ್ಲದಿದ್ದರೆ ಸ್ವಾರ್ಥಿಗಳೇ ತುಂಬಿ ನಮ್ಮ ಹೋರಾಟವೇ ಕುಸಿದುಬೀಳುವ ಸಂಭವವಿತ್ತು. ಆದರೆ ಗಡಿಪಾರು ಆದವರಿಗೆ ನಮ್ಮ ಸಹಾನುಭೂತಿ ತೋರುವದು ನಮ್ಮ ಕರ್ತವ್ಯವೆಂದು ಭಾವಿಸಿದೆವು.

ಸೋದರಭಾವ, ಮೃದುವಚನ, ದಯಾದೃಷ್ಟಿಗಳಿಗೆ ಹಣ ಎಂದಿಗೂ ಸರಿದೂಗಲಾರದೆಂದು ನನ್ನ ಅನುಭವ. ಹಣ ಬೇಕೆಂಬುವನು ಹಣವಂತನ ಸಹಾನುಭೂತಿ ಇಲ್ಲದೆ ಹಣಪಡೆದರೆ ಕಟ್ಟಕಡೆಗೆ ಹಣವಂತನು ದೂರವಾಗುವುದೇ ಖಂಡಿತ. ಪ್ರೀತಿಯಿಂದ ಒಲಿಸಿಕೊಂಡರೆ ಏನೇ ಕಷ್ಟ ಬಂದರೂ ಒಲಿದನೂ ಒಲಿಸಿಕೊಂಡವನೊಂದಿಗೆ ಕಷ್ಟಸಹಿಸಲೂ ಸಿದ್ಧನಾಗುತ್ತಾನೆ.

ಆದ್ದರಿಂದ ಗಡಿಪಾರಾದವರಿಗೆ ಎಲ್ಲ ಸಹಾಯವನ್ನೂ ಒದಗಿಸಲು ನಿರ್ಧರಿಸಿದೆವು. ಭಾರತದಲ್ಲಿ ಅವರಿಗೆ ಉಚಿತ ವ್ಯವಸ್ಥೆ ಮಾಡುವುದಾಗಿ ಭರವಸೆಕೊಟ್ಟು ಸಮಾಧಾನ ಪಡಿಸಿದೆವು. ಅನೇಕರು ಮೊದಲು ವಾಯಿದೆ ಕೂಲಿಗಾರರಾಗಿ ಬಂದು ಆಫ್ರಿಕದಲ್ಲಿ ನೆಲಸಿದವರಾದ್ದರಿಂದ ಭಾರತದಲ್ಲಿ ಅವರಿಗೆ ಬಂಧುಗಳು ಯಾರೂ ಇರಲಿಲ್ಲ. ಅನೇಕರು ಆಫ್ರಿಕದಲ್ಲೆ ಹುಟ್ಟಿದವರು. ಎಲ್ಲರಿಗೂ ಭಾರತ ಪರದೇಶವಾಗಿಯೇ ತೋರಿತು. ಈ ನಿಸ್ಸಹಾಯ ಜನರನ್ನು ಭಾರತಕ್ಕೆ ಕರೆದೊಯ್ದು ಪರದೇಶಿಗಳಾಗಿ ಬಿಡುವುದು ಅತಿ

ಕ್ರೂರ ಕೆಲಸ. ಆದ್ದರಿಂದ ಭಾರತದಲ್ಲಿ ಅವರಿಗೆ ಎಲ್ಲ ಸಹಾಯ ಒದಗಿಸುವುದಾಗಿ ಧೈರ್ಯ ಹೇಳಿದೆವು.

ಆದರೆ ಇಷ್ಟರಿಂದಲೇ ತೃಪ್ತಿಯಾಗಲಿಲ್ಲ. ಜೊತೆಯಲ್ಲಿ ಮಾರ್ಗದರ್ಶಿಯಂತೆ ಯಾರನ್ನಾದರೂ ಕಳುಹಿಸುವವರೆಗೆ ಅವರಿಗೆ ಸಮಾಧಾನವಾಗುವಂತಿರಲಿಲ್ಲ. ಅದೇ ಗಡಿಪಾರಾದವರ ಮೊದಲ ಪಡೆ; ಇನ್ನು ಕೆಲವು ಗಂಟೆಗಳಲ್ಲೇ ಹಡಗು ಹೊರಡಬೇಕು. ಯೊಚನೆಗೆ ಅವಕಾಶವೂ ಇರಲಿಲ್ಲ. ನನ್ನ ಸಹೋದ್ಯೋಗಿಗಳಲ್ಲಿ ಒಬ್ಬನಾದ ಪಿ.ಕೆ.ನಾಯುಡುರನ್ನು ಕರೆದು–"ಈ ಬಡ ಸಹೋದರರೊಡನೆ ಭಾರತಕ್ಕೆ ಹೋಗುತ್ತಿಯಾ?" ಎಂದು ಕೇಳಿದೆ.

"ಏಕಾಗಬಾರದು?"

"ಹಡಗು ಈಗಲೇ ಹೊರಡುತ್ತದೆ."

"ಹೊರಡಲಿ."

"ನಿನಗೆ ಬಟ್ಟೆ, ಆಹಾರ ಬೇಡವೆ?"

"ನಾನು ಧರಿಸಿರುವ ಬಟ್ಟೆಯೇ ಸಾಕು. ಹಡಗಿನಲ್ಲೇ ಊಟ ನೋಡಿ ಕೊಳ್ಳುತ್ತೇನೆ."

ಇದರಿಂದ ನನಗೆ ವಿಸ್ಮಯವೂ ಆನಂದವೂ ಆಯಿತು. ಈ ಸಂಭಾಷಣೆ ನಡೆದದ್ದು ಪಾರ್ಸಿ ರುಸ್ತುಂಜಿ ಮನೆಯಲ್ಲಿ. ಅಲ್ಲಿಯೇ ನಾಯುಡುಗೆ ಸ್ವಲ್ಪ ಬಟ್ಟೆ ಕಂಬಳಿ ಕೊಟ್ಟು ಆತನನ್ನು ಬೀಳ್ಕೊಟ್ಟೆ.

"ಜಾಗರೂಕನಾಗಿರು. ದಾರಿಯಲ್ಲಿ ಇವರನ್ನು ಎಚ್ಚರದಿಂದ ನೋಡಿಕೊ. ಅವರ ಸೌಲಭ್ಯಗಳಿಗೆ ಗಮನ ಕೊಟ್ಟಮೇಲೆ ನಿನ್ನ ಸುಖ ನೋಡಿಕೊ. ಮದರಾಸಿಗೆ ನಟೇಶನ್‌ರಿಗೆ ತಂತಿ ಕಳಿಸಿದ್ದೇನೆ. ಅವರು ಹೇಳಿದಂತೆ ಕೇಳು" ಎಂದು ಹೇಳಿದೆ.

"ನಿಜವಾದ ಯೋಧನಂತೆ ನಡೆಯಲು ಯತ್ನಿಸುತ್ತೇನೆ" ಎಂದು ಪಿ.ಕೆ. ನಾಯುಡು ಬಂದರಿಗೆ ಹೊರಟ. ಇಂಥ ವೀರಯೋಧರಿರುವಾಗ ಗೆಲವು ಶತಸ್ಸಿದ್ಧ ಎಂದು ಕೊಂಡೆ. ನಾಯುಡು ದಕ್ಷಿಣ ಆಫ್ರಿಕದಲ್ಲಿ ಹುಟ್ಟಿದವನು, ಭಾರತವನ್ನು ನೋಡಿಯೇ ಇರಲಿಲ್ಲ. ನಟೇಶನ್‌ರಿಗೆ ಪತ್ರ ಬರೆದು ಆತನ ಕೈಲಿ ಕೊಟ್ಟು ಒಂದು ತಂತಿಯನ್ನೂ ಕಳುಹಿಸಿದೆ.

ಹೊರದೇಶಗಳ ಭಾರತೀಯರ ಕಷ್ಟಗಳನ್ನರಿತುಕೊಳ್ಳಲು ಪ್ರಯತ್ನಿಸಿ ಅಮೂಲ್ಯ ಸೇವೆ ಮಾಡಿ, ಅವರ ಸಮಸ್ಯೆಗಳನ್ನು ಪದೇ ಪದೇ ವಿಮರ್ಶಿಸಿ ಪ್ರಚಾರ ಮಾಡುತ್ತಿದ್ದವರೆಂದರೆ ಭಾರತದಲ್ಲಿ ನಟೇಶನ್ ಒಬ್ಬರೇ. ಅವರೊಂದಿಗೆ ನಾನು ಕ್ರಮವಾದ ಪತ್ರವ್ಯವಹಾರ ಇಟ್ಟುಕೊಂಡಿದ್ದೆ. ಗಡಿಪಾರಾದವರು ಮದರಾಸು ತಲಪಿದೊಡನೆ ನಟೇಶನ್ ಎಲ್ಲ ಸಹಾಯವನ್ನೂ ಒದಗಿಸಿದರು. ಇವರಲ್ಲಿ ನಾಯುಡುರಂಥ ಕಾರ್ಯದಕ್ಷರಿದ್ದ ಕಾರಣ ಅವರ ಶ್ರಮವೂ ಸುಲಭಸಾಧ್ಯವಾಯಿತು. ಸ್ಥಳದಲ್ಲಿಯೇ ಹಣ ಸಂಗ್ರಹ ಮಾಡಿ ಇವರಿಗೆ ಗಡಿಪಾರಾದವರು ತಾವು ಎಂಬ ಭಾವನೆ ಸಹ ಬರದಂತೆ ಆದರಿಸಿದರು.

ಟ್ರಾನ್ಸ್‌ವಾಲಿನ ಈ ಗಡಿಪಾರು ಆಜ್ಞೆಗಳು ತೀರ ನ್ಯಾಯರಹಿತ, ಕ್ರೂರ. ಸರಕಾರಗಳು ತಾವು ಮಾಡಿದ ಶಾಸನವನ್ನು ತಾವೇ ಮನಸಾರೆ ಮುರಿಯುವುದು ಸಾಮಾನ್ಯವಾಗೂ

ಎಲ್ಲರಿಗೂ ತಿಳಿದಿದೆ. ವಿಷಮ ಪರಿಸ್ಥಿತಿಯೊದಗಿದಾಗ ನೂತನ ಶಾಸನ ರಚನೆಗೆ ಕಾಲ ಕಡಿಮೆ. ಆದ್ದರಿಂದ ಸರಕಾರಗಳೇ ಶಾಸನಭಂಗ ಮಾಡಿ, ಲಂಗು, ಲಗಾಮಿಲ್ಲದೆ ವರ್ತಿಸುತ್ತವೆ. ತರುವಾಯ ಹೊಸ ಶಾಸನ ಮಾಡುತ್ತಾರೆ. ಅಥವಾ ತಮ್ಮ ಹದ್ದು ಮೀರಿದ ವರ್ತನೆಯನ್ನು ಜನ ಮರೆಯುವಂತೆ ಮಾಡುತ್ತಾರೆ.

ಸ್ಥಳೀಯ ಸರಕಾರದ ಈ ಅನ್ಯಾಯದ ವರ್ತನೆಯನ್ನು ಎದುರಿಸಲು ಭಾರತೀಯರು ಪ್ರಚಂಡ ಚಳುವಳಿ ಹೂಡಿದರು. ಭಾರತದಲ್ಲಿಯೂ ಕಟುಟೀಕೆಯಾಗಿ ಕೊನೆಕೊನೆಗೆ ಭಾರತಕ್ಕೆ ಗಡಿಪಾರು ಮಾಡುವದು ಬಹಳ ಕಷ್ಟವಾಯಿತು. ಭಾರತೀಯರು ನ್ಯಾಯಬದ್ಧವಾಗಿ ಏನೇನು ಪ್ರಯತ್ನ ಮಾಡಬೇಕೋ ಎಲ್ಲವನ್ನೂ ಮಾಡಿ, ಕೊನೆಗೆ ಮೇಲಿನ ನ್ಯಾಯಾಸ್ಥಾನಕ್ಕೆ ಅಪೀಲು ಸಹ ಮಾಡಿದರು. ಆದ್ದರಿಂದ ಗಡಿಪಾರು ಪದ್ಧತಿಯನ್ನು ಕಡೆಗೆ ನಿಲ್ಲಿಸಬೇಕಾಯಿತು.

ಆದರೆ ಗಡಿಪಾರು ನೀತಿ ಸತ್ಯಾಗ್ರಹ ಸೈನ್ಯದ ಮೇಲೆ ಕೊಂಚ ಪರಿಣಾಮ ಮಾಡಿತು. ಎಲ್ಲರೂ ಗಡಿಪಾರು ಆಜ್ಞೆಯ ಭೀತಿಯಿಂದ ಮುಕ್ತರಾಗಲಿಲ್ಲ. ಅನೇಕರು ಹಿಂದೇಟು ಹಾಕಿ ನಿಜವಾದ ಕಾದಾಳುಗಳು ಮಾತ್ರ ಉಳಿದುಕೊಂಡರು.

ನಮ್ಮ ಜನರ ಉತ್ಸಾಹ ಮುರಿಯಲು ಸರಕಾರ ಇನ್ನೂ ಕೆಲವು ದಾರಿ ಹುಡುಕಿತು. ಮೊದಲೇ ತಿಳಿದಂತೆ ಸತ್ಯಾಗ್ರಹಿಗಳಿಗೆ ಕಲ್ಲು ಒಡೆಯುವದು ಮುಂತಾದ ಸಲ್ಲದ ಕಷ್ಟ ಕೊಟ್ಟು ಅವರ ನೀತಿ ಬಲ ಮುರಿಯಲು ಹವಣಿಸಿದರು. ಇಷ್ಟೇ ಅಲ್ಲ, ಮೊದಮೊದಲು ಎಲ್ಲರನ್ನೂ ಒಂದೇ ಕಡೆ ಇಡುತ್ತಿದ್ದರು. ಈಗ ಅವರನ್ನೆಲ್ಲ ಬೇರೆ ಬೇರೆ ಇಟ್ಟು ಪ್ರತಿ ಸೆರೆಮನೆಯಲ್ಲೂ ಸರ್ವವಿಧವಾದ ಕಷ್ಟಕೊಡುತ್ತಿದ್ದರು. ಟ್ರಾನ್ಸ್ ವಾಲ್ ಚಳಿಗಾಲ ದುರ್ಧರ. ಬೆಳಗಿನ ಹೊತ್ತು ಕೈ ಸೆಟೆಯುತ್ತದೆ. ಕೆಲವರನ್ನು ಜನ ಸಂಚಾರವಿಲ್ಲದ ರಸ್ತೆಗಳಲ್ಲಿ ಗುಡಾರ ಕಟ್ಟಿ ಬಂಧಿಸಿಟ್ಟಿದ್ದರು. ಇವರಲ್ಲೊಬ್ಬ ಸ್ವಾಮಿ ನಾಗಪ್ಪನ್‌ಗೆ ಕೇವಲ ೧೮ ವರ್ಷ ವಯಸ್ಸು. ಅವನು ಸೆರೆಮನೆಯ ನಿಯಮಗಳಿಗೆ ಚಾಚೂ ತಪ್ಪದೆ ಕೊಟ್ಟ ಕೆಲಸವನ್ನೆಲ್ಲ ಪೂರೈಸುತ್ತಿದ್ದ. ಬೆಳಗಾಗುವ ಮುಂಚೆಯೇ ರಸ್ತೆಯ ಮೇಲೆ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದುದರಿಂದ ಪುಪ್ಪುಸ ಜ್ವರವಾಗಿ ಬಿಡುಗಡೆಯಾದೊಡನೆ ೧೯೦೯ನೇ ಜುಲೈ ೭ ರಲ್ಲಿ ಮೃತನಾದ. ಪ್ರಾಣಹೋಗುವಾಗಲೂ ನಾಗಪ್ಪನ್ ಸತ್ಯಾಗ್ರಹವನ್ನೇ ಚಿಂತಿಸುತ್ತಿದ್ದನಂತೆಂದು ಆತನ ಗೆಳೆಯರು ಹೇಳುತ್ತಾರೆ. ಸೆರೆಮನೆಗೆ ಹೊದುದಕ್ಕೆ ಸ್ವಲ್ಪವೂ ವ್ಯಸನಪಡಲಿಲ್ಲ; ಸ್ನೇಹಿತನನ್ನಪ್ಪುವಂತೆ ಸಾವನ್ನಪ್ಪಿದ. ನಮ್ಮ ಲೆಕ್ಕಕ್ಕೆ ನಾಗಪ್ಪನ್ ವಿದ್ಯಾವಂತನಲ್ಲ; ವ್ಯವಹಾರದ ಪೂರ್ತಿ ಇಂಗ್ಲಿಷ್, ಜೂಲೂ ಬರುತ್ತಿತ್ತು. ಅಪ್ಪಿ ತಪ್ಪಿ ಸ್ವಲ್ಪ ಇಂಗ್ಲಿಷ್ ಬರೆಯುತ್ತಿದ್ದ. ವಿದ್ಯಾವಂತನಲ್ಲದಿದ್ದರೂ ಆತನ ಸಹನಶಕ್ತಿ, ದೇಶಪ್ರೇಮ, ಸಾವಿಗೂ ಅಂಜದ ಮನೋಧೈರ್ಯಗಳಿಗಿಂತ ಹೆಚ್ಚೇನು ಬಯಸಬೇಕು? ವಿದ್ಯಾಪ್ರಶಸ್ತಿ ಪಡೆದವರು ಸತ್ಯಾಗ್ರಹಕ್ಕೆ ಸೇರದಿದ್ದರೂ ಸತ್ಯಾಗ್ರಹ ಯಶಸ್ವಿಯಾಗಿ ನಡೆಯಿತು. ಆದರೆ ನಾಗಪ್ಪನ್ ನಂಥ ಯೋಧರಿಲ್ಲದಿದ್ದರೆ ಸತ್ಯಾಗ್ರಹ ಎಲ್ಲಿರುತ್ತಿತ್ತು?

ಏನು ಹೇಳಿದರೂ ಗೋರ್ಕಲ್ಲ ಮೇಲೆ ಮಳೆಗರೆದಂತೆ. ಆದರೆ ಆ ನಿಷ್ಕರುಣಿ ಸೇನಾನಿಗೆ ಅದೆಲ್ಲ ಏನು ಯೋಚನೆ? ತತ್ವ ಜ್ಞಾನಿಗೂ ಹೃದಯ ಶೂನ್ಯನಿಗೂ ಏನು ಹೇಳಿದರೂ ಗೋರ್ಕಲ್ಲ ಮೇಲೆ ಮಳೆಗರೆಂದರೆ. ಅವರ ದಾರಿಯೇ ಅವರಿಗೆ. ಈ ಎರಡು ಪದಗಳಲ್ಲಿ ಜನರಲ್ ಸ್ಮಟ್ಸ್‌ಗೆ ಯಾವುದೂ ಅನ್ವಯಿಸುವುದೊ ನಾನು ಹೇಳಲಾರೆ. ಆತನಿಗೆ ಒಂದು ತತ್ವ ದೃಷ್ಟಿ ಇದೆ ಎಂದೂ ಒಪ್ಪುತ್ತೇನೆ. ಆತನೊಂದಿಗೆ ಪತ್ರ ವ್ಯವಹಾರ ನಡೆಸುತ್ತಿದ್ದಾಗ, ಆತನನ್ನು ಟೀಕಿಸಿ ಲೇಖನ ಬರೆಯುತ್ತಿದ್ದಾಗ ಆತನನ್ನು ಹೃದಯ ಶೂನ್ಯನೆಂದೇ ಭಾವಿಸಿದ್ದೆ. ಆಗ ತಾನೆ ನಮ್ಮ ಹೋರಾಟ ಆರಂಬವಾಗಿತ್ತು; ಇನ್ನೂ ಎರಡು ವರ್ಷ ತುಂಬಿರಲಿಲ್ಲ; ಇನ್ನೂ ಎಂಟು ವರ್ಷ ನಡೆಯಬೇಕಾಗಿತ್ತು; ಈ ನಡುವೆ ಅನೇಕ ಬಾರಿ ಆತನನ್ನು ಭೇಟಿ ಮಾಡಬೇಕಾಗಿತ್ತು. ನಮ್ಮ ಮುಂದಿನ ಸಂಭಾಷಣೆಗಳಿಂದ, ಜನರಲ್ ಸ್ಮಟ್ಸ್‌ನ ಕುಯುಕ್ತಿಯ ವಿಷಯದಲ್ಲಿ ದಕ್ಷಿಣ ಆಫ್ರಿಕಾದ ಆಗಿನ ಜನಸಾಮಾನ್ಯರ ಭಾವನೆಯಿಂದ ಆತನಿಗೆ ಅನ್ಯಾಯವಾಗಿದೆ ಎಂದು ಅನೇಕ ವೇಳೆ ಅಭಿಪ್ರಾಯ ಪಟ್ಟಿದ್ದೇನೆ. ಆದರೆ ಎರಡು ವಿಷಯ ಮಾತ್ರ ಧೈರ್ಯವಾಗಿ ಹೇಳಬಲ್ಲೆ. ರಾಜಕೀಯದಲ್ಲಿ ನೀತಿಬಾಹಿತವಲ್ಲದ ಕೆಲವು ತತ್ವಗಳಿವೆ ಎಂಬುದೊಂದು; ಕುಯುಕ್ತಿಗೂ ಸಂದರ್ಭವಿದ್ದರೆ ಸತ್ಯವನ್ನು ಮರೆ ಮಾಚುವದಕ್ಕೂ ಅಲ್ಲಿ ಅವಕಾಶವಿದೆ ಎಂಬುದು ಇನ್ನೊಂದು.

ಸೆರೆಮನೆಯ ಹಿಂಸೆಯಿಂದ ನಾಗಪ್ಪನ್ ಸತ್ತಂತೆ, ಗಡಿಪಾರು ಆಜ್ಞೆ ಕಷ್ಟದಿಂದ ೧೯೧೦ ನೇ ಅಕ್ಟೋಬರ್ ೧೦ ರಲ್ಲಿ ನಾರಾಯಣಸ್ವಾಮಿ ಮರಣ ಹೊಂದಿದ. ಅಷ್ಟು ಹೊತ್ತಿಗೆ ಜೊಳ್ಳು ಹಾರಿಹೋಗಿ ಗಟ್ಟಿ ಮಾತ್ರ ಉಳಿಯಿತು. ಆ ಜೊಳ್ಳು ಸಹ ತಮ್ಮ ಕೈಲಾದ ಕೆಲಸಮಾಡಿದರು. ಅವರನ್ನು ಅಲ್ಲಗೆಳೆಯುವದು ಧರ್ಮವಲ್ಲ. ಮುಂದೆ ನುಗ್ಗುವವರು ಸಾಮಾನ್ಯವಾಗಿ ಹಿಂದುಳಿದವರನ್ನು ಅಲ್ಲಗಳೆದು ತಾವೇ ಶೂರರೆಂದು ತಿಳಿದುಕೊಂಡಿರುತ್ತಾರೆ. ಇದು ಶುದ್ಧ ತಪ್ಪು. ೫೦ ರೂಪಾಯಿ ಕೊಡಬಲ್ಲವನು ಇಪ್ಪತ್ತೈದು ರೂಪಾಯಿ ಕೊಟ್ಟು, ಐದು ರೂಪಾಯಿ ಕೊಡಬಲ್ಲವನು ಐದು ರೂಪಾಯಿ ಪೂರಾ ಸಲ್ಲಿಸಿದರೆ, ಐದು ರೂಪಾಯಿ ಕೊಡಬಲ್ಲವನು ಐದು ರೂಪಾಯಿ ಪೂರಾ ಸಲ್ಲಿಸಿದರೆ, ಐದು ರೂಪಾಯಿ ಕೊಟ್ಟವನು ತನಗೆ ಐದರಷ್ಟು ಕೊಟ್ಟಾತನಿಗಿಂತ ತಾನು ಉತ್ತಮನೆಂಬುದು ಒಣ ಹೆಮ್ಮೆ. ಇದೇ ರೀತಿ, ಶಕ್ತಿ ಮೀರಿ ಸಹಾಯ ಮಾಡಿ, ಅಶಕ್ತತೆಯಿಂದ ಹಿಂದೆ ಬಿದ್ದವನು, ಶ್ರದ್ಧೆಯಿಲ್ಲದೆಯೆ ತನ್ನನ್ನು ಹಿಂದೆ ಬಿಟ್ಟು ಮುಂದುವರಿದವನಿಗಿಂತ ಸಾವಿರಪಾಲು ಉತ್ತಮ, ಆದ್ದರಿಂದ ತಮಗೆ ಸಾಧ್ಯವಿಲ್ಲವೆಂದು ಹಿಂದುಳಿದವರು ಸಹ ಬೆಂಬಲ ಕೊಟ್ಟರು. ಕೊನೆಗೆ ನಮ್ಮ ತಾಳ್ಮೆಯನ್ನೂ ಧೈರ್ಯವನ್ನೂ ನಿಜವಾಗಿ ಒರೆಗೆ ಹಚ್ಚುವ ಕಾಲವೂ ಒದಗಿತು. ಟ್ರಾನ್ಸ್‌ವಾಲ್ ಭಾರತೀಯರು ಆಗಲೂ ಜಗ್ಗಲಿಲ್ಲ. ಆ ಧೀರರು ಎಲ್ಲ ತ್ಯಾಗಕ್ಕೂ ಸಿದ್ದರಾಗಿ ತಮ್ಮ ಸ್ಥಾನಗಳಲ್ಲಿ ಕದಲದೇ ನಿಂತರು.

ಈ ರೀತಿ ದಿನದಿನಕ್ಕೂ ಭಾರತೀಯರ ಕಷ್ಟ ಹೆಚ್ಚಿತು. ನಮ್ಮ ಜನರ ಧೈರ್ಯ ಹೆಚ್ಚಿದಂತೆ ಸರಕಾರದ ದಬ್ಬಾಳಿಕೆಯೂ ಉಗ್ರರೂಪ ತಾಳಿತು. ಅಪಾಯಕರ

ಬಂದಿಗಳನ್ನೂ, ಯಾರನ್ನು ಧೈರ್ಯಗೆಡಿಸಬೇಕೆಂದಿದ್ದರೊ ಅವರನ್ನೂ ಬಂಧನದಲ್ಲಿಡಲು ಎಲ್ಲ ಕಡೆಯಲ್ಲೂ ಕೆಲವು ಪ್ರತ್ಯೇಕ ಸೆರೆಮನೆಗಳಿರುವಂತೆ ಟ್ರಾನ್ಸ್‌ವಾಲ್‌ನಲ್ಲೂ ಇದ್ದವು. ಡೀಪ್ಕ್ಲೂಫ್ ಅಂತಹದೊಂದು. ಅಲ್ಲಿಯ ಅಧಿಕಾರಿ ಬಹು ಕ್ರೂರ; ಅವನು ಬಂದಿಗಳಿಗೆ ಕೊಡುತ್ತಿದ್ದ ಕೆಲಸವಂತೂ ಅಸಹನೀಯ. ಆದರೆ ಅಲ್ಲಿಯೂ ಭಾರತೀಯರು ವಿಧಿಸಿದ ಎಲ್ಲ ಕೆಲಸವನ್ನೂ ಮಾಡುತ್ತಿದ್ದರು. ಅಷ್ಟು ಹಿಂಸೆ ಸಹಿಸುತ್ತಿದ್ದರೂ, ಅಧಿಕಾರಿಯಿಂದ ತಮಗೆ ಕಿಂಚಿತ್ತು ಅವಮಾನವಾದರೂ ಸಹಿಸುತ್ತಿರಲಿಲ್ಲ. ಅದಕ್ಕಾಗಿ ಉಪವಾಸ ಮಾಡಿದರು. ಆ ಅಧಿಕಾರಿಯ ವರ್ಗವಾಗಬೇಕು, ಇಲ್ಲವೆ ತಮ್ಮನ್ನು ವರ್ಗಮಾಡಬೇಕು; ಅಲ್ಲಿಯ ತನಕ ಆಹಾರ ತೆಗೆದುಕೊಳ್ಳುವದಿಲ್ಲವಾಗಿ ಹಟ ಹಿಡಿದರು. ಈ ಮುಷ್ಕರ ಪೂರ್ಣ ನ್ಯಾಯಮ್ಮತವಾಗಿತ್ತು. ಮುಷ್ಕರಕಾರರೆಲ್ಲ ಪ್ರಾಮಾಣಿಕರು; ಯಾರೂ ಕದ್ದು ಊಟ ಮಾಡುವವರಿರಲಿಲ್ಲ. ಇಂಥ ಬಿಕ್ಕಟ್ಟಿನಿಂದ ಭಾರತದಲ್ಲಿ ಸಾರ್ವಜನಿಕ ಪರಿಣಾಮವಾಗುವಂತೆ ಟ್ರಾನ್ಸ್ ವಾಲ್‌ನಲ್ಲಿ ಆಗಲು ಅನುಕೂಲ ವಾತಾವರಣವಿರಲಿಲ್ಲ. ಅಲ್ಲದೆ ಟ್ರಾನ್ಸ್‌ವಾಲ್ ಸೆರೆಮನೆಯ ನಿಯಮಗಳು ಬಹುಕ್ರೂರ. ಇಂಥ ಸಂದರ್ಭದಲ್ಲಿ ಸಹ ಹೊರಗಿನವರು ಬಂದಿಗಳನ್ನು ನೋಡಲು ಯತ್ನಿಸಲಿಲ್ಲ. ಸೆರೆಮನೆಯಲ್ಲಿ ಕಾಲಿಟ್ಟ ಮೇಲೆ ಸತ್ಯಾಗ್ರಹಿಯ ಪಾಡು ಅವನದೇ. ಸತ್ಯಾಗ್ರಹ ನಡೆದದ್ದು ಬಡಜನರಿಗಾಗಿ; ನಡೆದದ್ದೂ ಬಡತನದಲ್ಲಿ. ಆದ್ದರಿಂದ ಈ ಮುಷ್ಕರಕಾರರ ಪ್ರತಿಜ್ಞೆಯಿಂದ ಬಹಳ ಅಪಾಯವಾಗುವ ಸಂಭವವಿತ್ತು. ಆದರೂ ಕೊನೆಯವರೆಗೆ ಕದಲದೆ, ಏಳು ದಿನ ಉಪವಾಸ ನಡೆಸಿ, ತಮ್ಮನ್ನು ಬೇರೆ ಸೆರೆಮನೆಗೆ ಕರೆದೊಯ್ಯುವಂತೆ ಮಾಡಿ ಕೃತಕೃತ್ಯರಾದರು. ಉಪವಾಸ ಮುಷ್ಕರ ಆಗ ಬಹು ವಿರಳವಾದ್ದರಿಂದ ಮೊದಲಿಗರಾದ {ನವೆಂಬರ್ ೧೯೧೦} ಈ ಸತ್ಯಾಗ್ರಹಿಗಳಿಗೆ ವಿಶೇಷ ಗೌರವ ಕೊಡುತ್ತೇನೆ.

೩೨. ಎರಡನೆ ನಿಯೋಗಗೋಷ್ಠಿ

ಈ ರೀತಿ ಸತ್ಯಾಗ್ರಹಿಗಳ ಬಂಧನ, ಗಡಿಪಾರು ಆಗುತ್ತಲೇ ಇತ್ತು. ಒಂದು ಸಲ ತಣ್ಣಗಿದ್ದು ಮತ್ತೊಂದು ಸಲ ಕಾವೇರುತ್ತಿತ್ತು; ಆದರೆ ಎರಡು ಕಡೆಯೂ ಸ್ವಲ್ಪ ಆಯಾಸ ಕಾಣುತ್ತಿತ್ತು. ಸೆರೆಮನೆಗೆ ಕಳಿಸಿ ಸತ್ಯಾಗ್ರಹಿ ವೀರರ ಬಲ ಮುರಿಯವದು ಅಸಾಧ್ಯವೆಂದು ಸರಕಾರಕ್ಕೆ ಮನವರಿಕೆಯಾಯಿತು; ಗಡಿಪಾರಿನಿಂದ ಸರಕಾರವೇ ಇಕ್ಕಟ್ಟಿಗೆ ಸಿಕ್ಕಿತು. ನ್ಯಾಯಾಸ್ಥಾನದಲ್ಲಿ ಕೆಲವು ಮೊಕದ್ದಮೆಗಳಲ್ಲಿ ಸರಕಾರಕ್ಕೆ ಸೋಲಾಯಿತು. ಭಾರತೀಯರೂ ದೊಡ್ಡ ಚಳವಳಿ ನಡೆಸುವಂತೆ ಇರಲಿಲ್ಲ. ಅದಕ್ಕೆ ಬೇಕಾದಷ್ಟು ಸತ್ಯಾಗ್ರಹಿಗಳು ಸಿದ್ಧರಿರಲಿಲ್ಲ; ಕೆಲವರು ಆಗಲೇ ದಣಿದಿದ್ದರು; ಕೆಲವರಿಗೆ ಸತ್ಯಾಗ್ರಹದಲ್ಲಿ ಪೂರ್ಣವಿಶ್ವಾಸ. ಅಳಿದು ಸತ್ಯಾಗ್ರಹಿಗಳನ್ನು ಹುಚ್ಚರೆಂದು ಜರಿಯುತ್ತಿದ್ದರು. ಹುಚ್ಚರಿಗೆ ಮಾತ್ರ ತಮ್ಮ ದಾರಿಯೇ ಸರಿ ಅನಿಸಿತ್ತು ; ದೇವರಲ್ಲೂ ತಮ್ಮ ಧ್ಯೇಯದಲ್ಲೂ ಆ ಧ್ಯೇಯ ಸಾಧನೆಯ ಮಾರ್ಗದಲ್ಲೂ ಪೂರ್ಣ ನಂಬಿಕೆ ಇತ್ತು. ಸತ್ಯವೇ ಶ್ರೇಷ್ಠ. ಸತ್ಯಕ್ಕೇ ಕೊನೆಗೆ ಜಯ ಎಂದು ದೃಢವಾಗಿ ನಂಬಿದ್ದರು.

ಈ ಮಧ್ಯೆ ದಕ್ಷಿಣ ಆಫ್ರಿಕದ ರಾಜಕೀಯದಲ್ಲಿ ಆಂದೋಲನವಿದ್ದೇ ಇತ್ತು. ಆ ಮಹಾ ಉಪಖಂಡದ ಬೇರೆ ಬೇರೆ ವಲಸೆ ರಾಷ್ಟ್ರಗಳನ್ನು ಸಂಯೋಜನೆ ಮಾಡಿ

ವಿಶೇಷ ಅಧಿಕಾರ ಪಡೆಯಲು ಬ್ರಿಟಿಷರೂ, ಬೋಅರ್‌ರೂ ಕಾತರರಾಗಿದ್ದರು. ಬ್ರಿಟಿಷರೊಡನೆ ಏನೂ ಸಂಬಂಧವಿರಕೂಡದೆಂದು ಜನರಲ್ ಹರ್ಟ್‌ಜೋಗನ ಮತ. ಬ್ರಿಟಿಷ್ ಚಕ್ರಾಧಿಪತ್ರದೊಂದಿಗೆ ನಾಮ ಮಾತ್ರ ಸಂಬಂಧವಿರಬೇಕೆಂದು ಇನ್ನು ಕೆಲವರ ಅಭಿಪ್ರಾಯ. ಬ್ರಿಟಿಷ್ ಸಂಬಂಧವನ್ನು ಸಂಪೂರ್ಣ ತೊಡೆದು ಹಾಕಲು ಇಂಗ್ಲಿಷರು ಎಂದಿಗೂ ಒಪ್ಪುವುದಿಲ್ಲ. ಅವರಿಗೆ ಏನು ವಿಶೇಷ ಅಧಿಕಾರ ದೊರೆತರೂ ಬ್ರಿಟಿಷ್ ಪಾರ್ಲಿಮೆಂಟಿನಿಂದಲೇ ಬರಬೇಕು. ಆದ್ದರಿಂದ ಬೋಅರರೂ, ಬ್ರಿಟಿಷರೂ ಇಂಗ್ಲಂಡಿಗೆ ನಿಯೋಗ ಹೋಗಿ ಬ್ರಿಟಿಷ್ ಮಂತ್ರಿ ಮಂಡಲದ ಮುಂದೆ ತಮ್ಮ ವಾದ ತಿಳಿಸಲು ತೀರ್ಮಾನಿಸಿದರು.

ಎಲ್ಲ ರಾಷ್ಟ್ರಗಳೂ ಸಂಯೋಜಿತವಾದರೆ ತಮ್ಮ ಸ್ಥಿತಿ ಮೊದಲಿಗಿಂತ ಹದಗೆಡುವುದೆಂದು ಭಾರತೀಯರು ಮನಗಂಡರು. ಭಾರತೀಯರನ್ನು ಮಟ್ಟ ಹಾಕುವದರಲ್ಲಿ ಎಲ್ಲ ರಾಷ್ಟ್ರಗಳ ಮನಸ್ಸೂ ಒಂದೇ ಇತ್ತು. ಅವೆಲ್ಲ ಒಂದುಗೂಡಿದರೆ ತಾವು ಬದುಕುವುದು ಕಷ್ಟವೆಂದು ಭಾರತೀಯರು ಅರಿತರು. ಬ್ರಿಟಿಷ್, ಬೋಅರ್ ಸಿಂಹಗರ್ಜನೆಯಲ್ಲಿ ತಮ್ಮ ಕೂಗು ಕೇಳುವದು ಅಸಂಭವವೆಂದು ಅರಿತಿದ್ದರು. ಯಾವ ದಾರಿಯನ್ನೂ ತುಳಿಯದೆ ಬಿಡಬಾರದೆಂದು ಭಾರತೀಯರೂ ಒಂದು ನಿಯೋಗಗೋಷ್ಠಿ ಕಳುಹಿಸಲು ನಿರ್ಧರಿಸಿದರು. ಈ ನಿಯೋಗಗೋಷ್ಠಿಯಲ್ಲಿ ಪೋರಬಂದರಿನ ಮೆಮನ್ ಸದ್ಗೃಹಸ್ಥ ಸೇಠ್ ಹಾಜಿ ಹಬೀಬರು ನನ್ನೊಂದಿಗೆ ಹೊರಡಬೇಕೆಂದು ತೀರ್ಮಾನವಾಯಿತು. ಸೇಠರಿಗೆ ಟ್ರಾನ್ಸ್‌ವಾಲ್‌ನಲ್ಲಿ ಅಪಾರ ವ್ಯಾಪಾರ ವ್ಯವಹಾರವಿತ್ತು; ತುಂಬ ಅನುಭವಸ್ಥರು. ಇಂಗ್ಲಿಷ್ ಶಿಕ್ಷಣವಿರದಿದ್ದರೂ ಇಂಗ್ಲಿಷ್, ಡಚ್, ಜೂಲು, ಇನ್ನು ಕೆಲವು ಭಾಷೆಗಳ ಪರಿಚಯವಿತ್ತು. ಸತ್ಯಾಗ್ರಹಿಗಳ ಮೇಲೆ ಪೂರ್ಣ ಅಭಿಮಾನವಿದ್ದರೂ ಪೂರ್ಣ ಸತ್ಯಾಗ್ರಹಿಯಾಗಿರಲಿಲ್ಲ. ಕೇಪ್ ಟೌನ್ ನಿಂದ ೧೯೦೯ ನೇ ಜೂನ್ ೨೩ ರಲ್ಲಿ ಇಂಗ್ಲೆಂಡಿಗೆ ಹೊರಟ 'ಕೆನಿಲ್‌ವರ್ತ್ ಕ್ಯಾಸಲ್' ಎಂಬ ಹಡಗಿನಲ್ಲಿ ಪ್ರಯಾಣ ಬೆರೆಸಿದೆವು. ದಕ್ಷಿಣ ಆಫ್ರಿಕದ ಪ್ರಸಿದ್ಧ ರಾಜಕೀಯ ವ್ಯಕ್ತಿಗಳಾದ ಮೆರಿಮನ್‌ರೂ ಅದರಲ್ಲೇ ಹೊರಟಿದ್ದರು. ವಲಸೆ ರಾಷ್ಟ್ರಗಳನ್ನೆಲ್ಲ ಒಂದು ಗೂಡಿಸಲೆಂದು ಅವರು ಹೊರಟಿದ್ದರು. ಜನರಲ್ ಸ್ಮಟ್ಸ್ ಮುಂತಾದವರು ಆಗಲೇ ಇಂಗ್ಲೆಂಡಿನಲ್ಲಿದ್ದರು. ಇದೇ ಸಮಯದಲ್ಲಿ ತಮ್ಮ ವಿಶೇಷ ಕಷ್ಟನಿವಾರಣೆಗಾಗಿ ನೇಟಾಲ್ ಭಾರತೀಯರ ನಿಯೋಗ ಗೋಷ್ಠಿಯೂ ಒಂದು ಇಂಗ್ಲೆಂಡಿಗೆ ಹೊರಟಿತ್ತು.

ಈ ಸಮಯದಲ್ಲಿ ವಲಸೆ ರಾಷ್ಟ್ರಗಳಿಗೆ ಲಾರ್ಡ್ ಕ್ರ್ಯೂ, ಭಾರತಕ್ಕೆ ಲಾರ್ಡ್ ಮಾರ್ಲೆ ಕಾರ್ಯದರ್ಶಿಗಳಾಗಿದ್ದರು. ಅನೇಕ ಚರ್ಚೆ ನಡೆದವು, ಅನೇಕರನ್ನು ಭೇಟಿಮಾಡಿದೆವು. ಪಾರ್ಲಿಮೆಂಟ್ ಸದಸ್ಯರಲ್ಲಿ, ಪತ್ರಿಕಾಕರ್ತರಲ್ಲಿ ಯಾರು ಯಾರನ್ನು ನೋಡಬಹುದಾಗಿತ್ತೊ, ಅವರಲ್ಲಿ ಯಾರನ್ನೂ ಬಿಡಲಿಲ್ಲ. ಲಾರ್ಡ್‌ಆಮ್ಟ್ ಹಿಲ್ ನಮಗೆ ಅಮೋಘ ಸಹಾಯ ಮಾಡಿದರು. ಅವರು ಮೆರೆಮನ್, ಜನರಲ್ ಬೋಥಾ ಮುಂತಾದವರನ್ನು ನೋಡುತ್ತಿದ್ದರು. ಕಡೆಯಲ್ಲಿ ಜನರಲ್ ಬೋಥಾರಿಂದ ಒಂದು ಸಂದೇಶ ತಂದರು.

"ಜನರಲ್ ಬೋಥಾ ನಿಮ್ಮ ಅಭಿಪ್ರಾಯವನ್ನು ಅರಿತಿದ್ದಾರೆ. ಚಿಕ್ಕಪುಟ್ಟ ಬೇಡಿಕೆ ಪೂರೈಸಲು ಒಪ್ಪುತ್ತಾರೆ. ಆದರೆ ಏಷಿಯಾಟಿಕ್ ಮಸೂದೆಯನ್ನಾಗಲಿ, ವಲಸೆಗಾರ ಹತೋಟಿ ಶಾಸನವನ್ನಾಗಲಿ ರದ್ದುಗೊಳಿಸಲೂ ತಿದ್ದಲೂ ಒಪ್ಪುವುದಿಲ್ಲ. ವರ್ಣಭೇದ ಸಮರ್ಥನೆ ಜನರಲ್ ಬೋಥಾರಿಗೆ ಒಂದು ಧರ್ಮ. ಅವರು ಒಂದು ವೇಳೆ ಒಪ್ಪಿದರೂ ದಕ್ಷಿಣ ಆಫ್ರಿಕದ ಯೂರೋಪಿಯನ್ನರು ಎಂದೂ ಒಪ್ಪುವುದಿಲ್ಲ. ವರ್ಣಭೇದ ಸಮರ್ಥನೆ ಜನರಲ್ ಬೋಥಾರಿಗೆ ಒಂದು ಧರ್ಮ. ಅವರು ಒಂದು ವೇಳೆ ಒಪ್ಪಿದರೂ ದಕ್ಷಿಣ ಆಫ್ರಿಕದ ಯೂರೋಪಿಯನ್ನರು ಎಂದೂ ಒಪ್ಪುವುದಿಲ್ಲ. ಜನರಲ್ ಬೋಥಾರವರ ಅಭಿಪ್ರಾಯಕ್ಕೆ ಜನರಲ್ ಸ್ಮಟ್ಸ್‌ರೂ ಪೂರ್ಣ ಸಮ್ಮತಿಸುತ್ತಾರೆ. ಇದೇ ಅವರ ಕಡೆಯ ನಿರ್ಧಾರ, ಸಂದೇಶ. ಇದಕ್ಕೂ ಹೆಚ್ಚು ಕೇಳಬಯಸಿದರೆ ನಿಮಗೂ ನಿಮ್ಮ ಜನರಿಗೂ ಕೇಡು ಖಂಡಿತ. ಆದ್ದರಿಂದ ನೀವು ಮುಂದಿನ ಕಾರ್ಯನೀತಿ ನಿಶ್ಚಯಿಸುವಾಗ ಬೋಅರ್ ಮುಖಂಡರ ಈ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ನಿರ್ಧರಿಸಿರಿ. ಇದನ್ನು ನಿಮಗೆ ತಿಳಿಸಬೇಕೆಂದೂ, ನಿಮಗೆ ನಿಮ್ಮ ಜವಾಬ್ದಾರಿ ತಿಳಿಸಬೇಕೆಂದೂ ಜನರಲ್ ಬೋಥಾ ಹೇಳಿದ್ದಾರೆ."

ಈ ಸಂದೇಶ ತಿಳಿಸಿ ಲಾರ್ಡ್ ಆಮ್ಪ್‌ಹಿಲ್‌ರು "ಜನರಲ್ ಬೋಥಾ ನಿಮ್ಮ ಎಲ್ಲ ಸಾಮಾನ್ಯ ಬೇಡಿಕೆಗಳಿಗೂ ಒಪ್ಪಿದ್ದಾನೆ. ವ್ಯವಹಾರದಲ್ಲಿ ತಗ್ಗಿ ನಡೆಯುವದು ಒಳ್ಳೆಯದು. ನಾವು ಕೇಳಿದ್ದೆಲ್ಲ ನಮಗೆ ದೊರೆಯದು. ಈ ಸಲಹೆಗೆ ನೀವು ಒಪ್ಪಬೇಕೆಂದು ನನ್ನ ಅಗ್ರಹದ ಬುದ್ಧಿವಾದ. ಒಂದು ತತ್ವದಂತೆಯಾದರೆ ಆ ಹೋರಾಟ ಮುಂದೆ ನಡೆಸಬಹುದು. ನೀವೂ ಸೇಠ್‌ರೂ ಇದನ್ನು ಕೂಲಂಕಷವಾಗಿ ಯೋಚಿಸಿ ನಿಮಗೆ ಸೂಕ್ತ ಕಂಡಾಗ ನಿಮ್ಮ ಅಭಿಪ್ರಾಯ ತಿಳಿಸಿರಿ" ಎಂದರು.

ಇದನ್ನು ಕೇಳಿ ಸೇಠ್ ಹಾಜಿ ಹಬೀಬರ ಕಡೆ ನೋಡಿದೆ. ಅವರು "ಸಂಧಾನಾಸಕ್ತರ ಪರವಾಗಿ ಜನರಲ್ ಬೋಥಾರ ಸಲಹೆಯನ್ನು ನಾನು ಒಪ್ಪುತ್ತೇನೆ. ಈ ರಿಯಾಯಿತಿ ಕೊಟ್ಟರೆ ಸದ್ಯಕ್ಕೆ ನಾವು ಒಪ್ಪೋಣ. ತತ್ವಕ್ಕಾಗಿ ಮುಂದೆ ಹೋರಾಡೋಣ. ನಮ್ಮವರು ಇನ್ನೂ ಹೆಚ್ಚು ಕಷ್ಟ ಪಡುವುದು ನನಗೆ ಇಷ್ಟವಿಲ್ಲ. ಭಾರತೀಯರಲ್ಲಿ ನನ್ನನ್ನು ಆರಿಸಿದವರೇ ಬಹುಸಂಖ್ಯಾತರು. ನಮ್ಮ ಜನರ ಐಶ್ವರ್ಯದ ಬಹುಭಾಗವೆಲ್ಲ ಅವರ ಕೈಲಿದೆ" ಎಂದರು.

ಸೇಠರ ವಾಕ್ಯಗಳನ್ನು ಪದಶಃ ನಾನು ಅನುವಾದಮಾಡಿದೆ. ಸತ್ಯಾಗ್ರಹಿಗಳ ಪರವಾಗಿ ನಾನು "ನೀವು ತೆಗೆದುಕೊಂಡ ಶ್ರಮಕ್ಕೆ ನಾವು ಚಿರಋಣಿಗಳು. ನನ್ನ ಮಿತ್ರರು ಬಹುಮತದ ಆಸ್ತಿವಂತರ ಪ್ರತಿನಿಧಿ ಎಂದು ಒಪ್ಪುತ್ತೇನೆ. ನಾನು ಕಡುಬಡವರಾದ ಅಲ್ಪ ಸಂಖ್ಯಾತರ ಪ್ರತಿನಿಧಿ. ಆದರೆ ಅವರು ಸಾವಿಗೂ ಅಂಜರು. ಅವರು ಹೋರಾಡುತ್ತಿರುವುದು ಸೌಲಭ್ಯಗಳಿಗೆ ಮಾತ್ರ ಅಲ್ಲ; ತತ್ವ ಸಾಧನೆಗಾಗಿ. ಇದರಲ್ಲಿ ಏನಾದರೂ ತ್ಯಾಗ ಮಾಡ ಹೇಳಿದರೆ ತಮ್ಮ ಸ್ವಸುಖವನ್ನದರೂ ತ್ಯಾಗ ಮಾಡಿ ತತ್ವಕ್ಕಾಗಿ ಹೋರಾಟ ಮುಂದುವರಿಸಿಯಾರು. ಜನರಲ್ ಬೋಥಾರ ಶಕ್ತಿ ನಮಗೆ ತಿಳಿದಿದೆ. ಆದರೆ ನಮ್ಮ ಪ್ರತಿಜ್ಞೆಗೆ ಇನ್ನೂ ಹೆಚ್ಚು ಬೆಲೆ ಕೊಡುತ್ತೇವೆ. ಪ್ರತಿಜ್ಞಾಪಾಲನೆಯಲ್ಲಿ ಏನೇ ಕಷ್ಟ ಒದಗಿದರೂ

ಸಹಿಸುತ್ತೇವೆ. ನಮ್ಮ ಪವಿತ್ರ ಪ್ರತಿಜ್ಞೆಗೆ ಭಂಗ ತಾರದೆ ಎದೆಗೊಟ್ಟು ನಿಂತರೆ ಯಾರ ಹೆಸರಿನಲ್ಲಿ ಪ್ರತಿಜ್ಞೆ ತೆಗೆದುಕೊಂಡೆವೊ ಆ ಪರಮಾತ್ಮನೆ ಅದನ್ನು ಕೈಗೊಡುವಂತೆ ಮಾಡುತ್ತಾನೆಂಬ ಭರವಸೆ ನಮಗಿದೆ.

" ನಿಮ್ಮ ವಾದ ನನಗೆ ಪೂರಾ ಅರ್ಥವಾಗುತ್ತದೆ. ನೀವು ನಮಗೆ ಬಹಳ ಉಪಕಾರ ಮಾಡಿದ್ದೀರಿ. ಉಳಿದ ಅಲ್ಪ ಜನ ಸತ್ಯಾಗ್ರಹಿಗಳಿಗೆ ಈಗ ನಿಮ್ಮ ಸಹಾಯ ತಪ್ಪಿದರೆ ನಾವು ನಿಮ್ಮನ್ನು ನಿಂದಿಸಲಾರೆವು. ಇದುವರೆಗಿನ ನಿಮ್ಮ ಸಹಾಯಕ್ಕೆ ನಾವು ಬಹಳ ಉಪಕೃತರು. ಆದರೆ ನಿಮ್ಮ ಬುದ್ಧಿವಾದದಂತೆ ನಡೆಯಲು ಸಾಧ್ಯವಿಲ್ಲವಾಗಿ ನಿಮ್ಮ ಕ್ಷಮೆ ಬೇಡುತ್ತೇನೆ. ಜನರಲ್ ಬೋಥಾರ ಸಲಹೆಗಳಿಗೆ ನಾನೂ ಸೇಠರೂ ಅಭಿಪ್ರಾಯ ಪಟ್ಟೆವೆಂದು ಅವರಿಗೆ ತಿಳಿಸಿ, ಸತ್ಯಾಗ್ರಹಿಗಳು ನಾಲ್ಕೇ ಜನರಿದ್ದರೂ ತಮ್ಮ ಪ್ರತಿಜ್ಞೆ ಮೀರಲಾರರೆಂದೂ, ತಮ್ಮ ಕಷ್ಟ ಸಹನೆಯಿಂದ ಕೊನೆಗಾದರೂ ಅವರ ಹೃದಯ ಪರಿವರ್ತನೆ ಮಾಡಿ ಏಷಿಯಾಟಿಕ್ ಶಾಸನ ರದ್ದುಗೊಳಿಸುವಂತೆ ಮಾಡಲು ಯತ್ನಿಸುತ್ತಾರೆಂದೂ ತಿಳಿಸಿರಿ" ಎಂದು ಹೇಳಿದೆ.

ಲಾರ್ಡ್ ಆಮ್ಟ್ ಹಿಲ್ "ನಿಮ್ಮನ್ನು ಕೈಬಿಡುತ್ತೇನೆಂದು ಭಾವಿಸಬೇಡಿ. ನಾನೂ ಗೌರವಸ್ಥ. ಒಮ್ಮೆ ಕೈಗೊಂಡ ಕೆಲಸವನ್ನು ಏಕಾಏಕಿ ಬಿಡಲು ಯಾವ ಆಂಗ್ಲನೂ ಒಪ್ಪುವುದಿಲ್ಲ. ನಿಮ್ಮ ಹೋರಾಟದಲ್ಲಿ ನ್ಯಾಯವಿದೆ. ನಿಮ್ಮ ಅಸ್ತ್ರ ಪರಿಶುದ್ಧವಾದುದು. ನಿಮ್ಮನ್ನು ನಾನು ಕೈಬಿಡುವುದು ಹೇಗೆ ಸಾಧ್ಯ? ಆದರೆ ನನ್ನ ನಾಜೂಕು ಸ್ಥಿತಿ ಸ್ವಲ್ಪ ತಿಳಿದುಕೊಳ್ಳಿ. ಏನು ಕಷ್ಟ ಒದಗಿದರೂ ಸಹಿಸುವವರು ನೀವು. ಸಂದರ್ಭೋಚಿತ ಒಪ್ಪಂದಕ್ಕೆ ಬರಲು ಸಲಹೆಕೊಡಬೇಕಾದದ್ದು ನನ್ನ ಕರ್ತವ್ಯ. ಆದರೆ ಕಷ್ಟಕ್ಕೆ ಎದೆಗೊಡುವ ನೀವು ಒಂದು ತತ್ವಕ್ಕಾಗಿ ಯಾವ ತೊಂದರೆ ಬಂದರೂ ಸಹಿಸಲು ಸಿದ್ಧರಿರುವಾಗ ನಿಮ್ಮನ್ನು ವಿರೋಧಿಸುವುದು ಹಾಗಿರಲಿ ಅಭಿನಂದಿಸಬೇಕಾದ್ದು ನನ್ನ ಕರ್ತವ್ಯ. ಆದ್ದರಿಂದ ನಿಮ್ಮ ಸಮಿತಿಯ ಅಧ್ಯಕ್ಷನಾಗಿದ್ದು, ನನ್ನ ಕೈಲಾದ ಸಹಾಯ ಮಾಡುತ್ತೇನೆ. ಆದರೆ ಲಾರ್ಡ್ಸ್ ಸಭೆಯಲ್ಲಿ ನಾನಿನ್ನೂ ಹೊಸಬ, ನನಗೆ ಹೆಚ್ಚು ಪರಿಚಯವಿಲ್ಲ. ಆದರೂ ನನ್ನ ಸರ್ವಶಕ್ತಿಯನ್ನೂ ಸದಾ ನಿಮ್ಮ ಸಹಾಯಕ್ಕಾಗಿ ಉಪಯೋಗಿಸುತ್ತೇನೆಂಬ ಭರವಸೆ ಕೊಡಬಲ್ಲೆ" ಎಂದರು.

ಈ ಮನಮೆಚ್ಚುವ ಮಾತು ಕೇಳಿ ನಮ್ಮಿಬ್ಬರಿಗೂ ಅತ್ಯಾನಂದವಾಯಿತು. ಈ ಭೇಟಿಯ ಸಂತೋಷದ ಸಂಗತಿಯೊಂದನ್ನು ಓದುಗರು ಮರೆಯಲಾಗದು. ಮೊದಲೇ ತಿಳಿಸಿದಂತೆ ಸೇಠರ ಅಭಿಪ್ರಾಯವೂ ನನ್ನ ಅಭಿಪ್ರಾಯವೂ ಉತ್ತರ ದಕ್ಷಿಣ ಧ್ರುವಗಳಂತೆ. ಆದರೂ ನಮ್ಮ ಸ್ನೇಹಕ್ಕೂ, ಪರಸ್ಪರ ವಿಶ್ವಾಸಕ್ಕೂ ಚ್ಯುತಿ ಬರಲಿಲ್ಲ. ತಮ್ಮ ವಿರೋಧಾಭಿಪ್ರಾಯವನ್ನು ಸೇಠರು ನನ್ನ ಮೂಲಕವೇ ತಿಳಿಸುತ್ತಿದ್ದರು. ಲಾರ್ಡ್ ಆಮ್ಟಹಿಲ್‌ರಿಗೆ ತಮ್ಮ ಅಭಿಪ್ರಾಯ ತಿಳಿಸಲು ನನ್ನಲ್ಲಿ ಪೂರ್ಣ ಭರವಸೆ ಇಟ್ಟಿದ್ದರು.

ಇನ್ನೊಂದು ವಿಷಯ ಹೇಳಿ ಈ ಅಧ್ಯಾಯ ಮುಗಿಸುತ್ತೇನೆ . ಇಂಗ್ಲಂಡಿನಲ್ಲಿದ್ದಾಗ ನನಗೆ ಅನೇಕ ಭಾರತೀಯ ಕ್ರಾಂತಿಕಾರರ ಪರಿಚಯವಾಯಿತು. ಅವರ ವಾದಕ್ಕೆ

ಉತ್ತರವಾಗಿ, ಅದೇ ಅಭಿಪ್ರಾಯದ ಕೆಲವು ದಕ್ಷಿಣ ಆಫ್ರಿಕದ ಭಾರತೀಯರ ಸಂಶಯ ನಿವಾರಣೆಗಾಗಿ, ಇಂಗ್ಲಂಡ್‌ನಿಂದ ಹಿಂದಿರುಗುವಾಗ 'ಕಿಲ್ಡೊನನ್ ಕ್ಯಾಸಲ್' ಹಡಗಿನಲ್ಲಿ ೧೯೦೮ ನೇ ನವೆಂಬರ್ ನಲ್ಲಿ ನನ್ನ "ಹಿಂದ್ ಸ್ವರಾಜ್ಯ" ಎಂಬ ಪುಸ್ತಕ ಬರೆದು, 'ಇಂಡಿಯನ್ ಓಪಿನಿಯನ್'ನಲ್ಲಿ ಪ್ರಕಟಿಸಿದೆ. ದಕ್ಷಿಣ ಆಫ್ರಿಕದ ನನ್ನ ಕೆಲಸದ ಬಗ್ಗೆ ನನ್ನ ಅಭಿಪ್ರಾಯ ಹೊರಗೆಡಹದೆ, ಲಾರ್ಡ್ ಆಮ್ಟ್‌ಹಿಲ್‌ರ ಹೆಸರನ್ನೂ ಅಭಿಪ್ರಾಯಗಳನ್ನೂ ದುರುಪಯೋಗಪಡಿಸಿಕೊಂಡೆನೆಂದು ಅವರು ತಿಳಿದುಕೊಳ್ಳದಿರಲೆಂದು, ಈ ಪುಸ್ತಕದ ವಿಷಯ ಇಂಗ್ಲಂಡಿನಲ್ಲಿದ್ದಾಗಲೇ ಅವರೊಂದಿಗೆ ಚರ್ಚಿಸಿದ್ದೆ. ಲಾರ್ಡ್ ಆಮ್ಟ್ ಹಿಲ್‌ರೊಂದಿನ ಆ ಚರ್ಚೆಯ ಸವಿನೆನಪು ಇನ್ನು ಅಚ್ಚಳಿಯದೆ ಮೂಡಿದೆ. 'ಹಿಂದ್ ಸ್ವರಾಜ್'ದ ನನ್ನ ಅಭಿಪ್ರಾಯಕ್ಕೆ ಅವರು ಒಪ್ಪುತ್ತಿರಲಿಲ್ಲವಾದರೂ ಮನೆಯಲ್ಲಿ ಕಾಹಿಲೆ ಇದ್ದರೂ ಬಿಡುವು ಮಾಡಿಕೊಂಡು ನನಗೆ ಭೇಟಿಗೆ ಅವಕಾಶ ಕೊಡುತ್ತಿದ್ದರು. ಕೊನೆಯವರೆಗೂ ನಮ್ಮ ಹೋರಾಟಕ್ಕೆ ಬೆಂಬಲವಾಗಿ ನಿಂತರು. ನನ್ನ ಅವರ ಬಾಂಧವ್ಯ ಯಾವಾಗಲೂ ಮಧುರವಾಗಿತ್ತು.

೩೩. ಟಾಲ್ ಸ್ಟಾಯ್ ಆಶ್ರಮ-೧

ಇಂಗ್ಲಂಡಿನಿಂದ ಹಿಂದಿರುಗಿದ ನಿಯೋಗಗೋಷ್ಠಿ ಶುಭ ಸಮಾಚಾರ ತರಲಿಲ್ಲ. ನಮ್ಮ, ಲಾರ್ಡ್ ಆಮ್ಟ್‌ಹಿಲ್‌ರ ಸಂಭಾಷಣೆ ನಮ್ಮ ಜನರ ಮೇಲೆ ಏನು ಪರಿಣಾಮ ಉಂಟು ಮಾಡೀತೆಂದು ನಾನು ಹೆಚ್ಚು ಕಾತರನಾಗಲಿಲ್ಲ. ನಮ್ಮೊಡನೆ ಕೊನೆಯವರೆಗೂ ನಿಲ್ಲುವವರಾರೆಂದು ತಿಳಿದಿತ್ತು. ಈ ಹೊತ್ತಿಗೆ ಸತ್ಯಾಗ್ರಹದ ವಿಷಯದಲ್ಲಿ ನನ್ನ ಅಭಿಪ್ರಾಯಗಳು ಪರಿಪಕ್ವವಾಗಿದ್ದವು. ಅದರ ಸಾರ್ವತ್ರಿಕ ಉಪಯೋಗದಲ್ಲೂ ಶ್ರೇಷ್ಠತೆಯಲ್ಲೂ ದೃಢನಂಬಿಕೆ ಹುಟ್ಟಿತ್ತು. ಆದ್ದರಿಂದ ನಾನು ಸ್ವಲ್ಪವೂ ಕಳವಳಗೊಳ್ಳಲಿಲ್ಲ. ಸತ್ಯಾಗ್ರಹದ ಮಹಾಶಕ್ತಿಯನ್ನು ತೋರಿಸಲೆಂದೇ ನಾನು " ಹಿಂದ್ ಸ್ವರಾಜ್ಯ" ಬರೆದದ್ದು. ಸತ್ಯಾಗ್ರಹದ ಕಾರ್ಯ ಸಾಧನಶಕ್ತಿಯಲ್ಲಿದ್ದ ನನ್ನ ದೃಢನಂಬಿಕೆಗೆ ಆ ಹೊತ್ತಿಗೆಯೇ ಅಳತೆಗೋಲು. ನಮ್ಮ ಸಂಗ್ರಾಮದ ಭಟರ ಸಂಖ್ಯೆ ನನ್ನನ್ನು ಬಾಧಿಸಲಿಲ್ಲ.

ಆದರೆ ಹಣದ ವಿಷಯ ಸ್ವಲ್ಪ ಯೋಚನೆಗಿಟ್ಟಿತು. ಧನಸಹಾಯವಿಲ್ಲದೆ ದೀರ್ಘಕಾಲ ನಡೆಸುವದು ಕಷ್ಟ. ಹಣವಿಲ್ಲದೆ ಹೋರಾಟ ನಡೆಸಬಹುದು; ಹಣದಿಂದ ಧಾರ್ಮಿಕ ಯುದ್ಧ ಅಪರಿಶುದ್ಧವಾಗುತ್ತದೆ. ಸತ್ಯಾಗ್ರಹಿ ಅಥವಾ ಮುಮುಕ್ಷುವಿಗೆ ದೇವರು ಅವಶ್ಯಕತೆಗಿಂತ ಹೆಚ್ಚು ಸಹಾಯ ಒದಗಿಸುವುದಿಲ್ಲ ಎಂಬ ಈಗಿನ ನಂಬಿಕೆ ಆಗ ಇನ್ನೂ ನನ್ನಲ್ಲಿ ಮೂಡಿರಲಿಲ್ಲ. ಆದರೆ ದೇವರಲ್ಲಿ ಪೂರ್ಣ ವಿಶ್ವಾಸವಿದ್ದುದರಿಂದ ಆತ ನನ್ನನ್ನು ಕೈಬಿಡಲಿಲ್ಲ. ಅಲ್ಲದೆ ನಿರಾಶೆಯ ಮಡುವಿನಿಂದ ಸಹ ಪಾರು ಮಾಡಿದ. ದಕ್ಷಿಣ ಆಫ್ರಿಕದಲ್ಲಿ ಹಡಗಿಳಿದೊಡನೆ ನಮ್ಮ ರಾಯಭಾರ ನಿರರ್ಥಕವೆಂದು ಹೇಳುತ್ತಿರುವಾಗಲೇ ದೇವರು ಹಣದ ಅಭಾವದಿಂದ ನಮ್ಮನ್ನು ಪಾರುಮಾಡಿದ. ನಾನು ಕೇಪ್‌ಟೌನ್‌ನಲ್ಲಿ ಕಾಲಿಟ್ಟಾಗಲೇ ರತನ್ ಜಿ ಜಾಮೆಷಡ್ಜಿ ತಾತಾ ಸತ್ಯಾಗ್ರಹದ

ಸಹಾಯಕ್ಕಾಗಿ ೨೫,೦೦೦ ರೂಪಾಯಿ ದಾನ ಮಾಡಿದರೆಂದು ಕೇಬಲ್ ಬಂತು. ಕೂಡಲೆ ನಾವು ಮಾಡಬೇಕಾದ ಕೆಲಸಕ್ಕೆ ಈ ಹಣ ಸಾಕಾದ್ದರಿಂದ ನಮ್ಮ ಹೋರಾಟ ಮುಂದುವರಿಯಿತು. ಆದರೆ ಇದರಿಂದ ಅಥವಾ ಇನ್ನೂ ಹೆಚ್ಚಿನ ಧನಸಹಾಯದಿಂದ ಸತ್ಯಾಗ್ರಹ ಮುಂದುವರಿಯಲು ಸಾಧ್ಯವಿರಲಿಲ್ಲ. ಮುಖ್ಯವಾಗಿ ಆತ್ಮಶಕ್ತಿ, ಆತ್ಮಶುದ್ಧಿ ಬೇಕು ಸತ್ಯಸಂಗ್ರಾಮಕ್ಕೆ, ನಿತಿಭಂಡಾರ ತುಂಬದ ಹೊರತು, ಸತ್ಯಾಗ್ರಹಸಮರ ಅಸಾಧ್ಯ. ನೀತಿ ಬಾಹಿರನ ಸಂಪತ್ತೆಲ್ಲ ಪಾಳುಬಿದ್ದ ಅರಮನೆಯಂತೆ. ಹೋರಾಟ ಎಷ್ಟು ದಿನ ನಡೆಯಬಹುದೊ ಹೇಳಲು ಸಾಧ್ಯವಿಲ್ಲವೆಂದು ಸತ್ಯಾಗ್ರಹಿಗಳು ಅರಿತು. ಒಂದು ಕಡೆ ಕೂದಲೆಳೆಯೂ ಕದಲಬಾರದೆಂಬ ಬೋಅರ್ ಸೇನಾನಿಗಳು, ಇನ್ನೊಂದು ಕಡೆ ಜಯಿಸಬೇಕು ಇಲ್ಲವೆ ಮಡಿಯಬೇಕು ಎಂಬ ಸತ್ಯಾಗ್ರಹಿಗಳ ಸಣ್ಣ ತಂಡ, ಒಂದೊಂದು ಪಾದದಿಂದ ಲಕ್ಷಾಂತರ ಜೀವಿಗಳನ್ನು ಧ್ವಂಸ ಮಾಡುವ ಆನೆಗಳ ಎದುರು ಇರುವೆಗಳು ಯುದ್ಧಹೂಡಿದಂತಿತ್ತು. ಸತ್ಯಾಗ್ರಹಿಗಳು ಸತ್ಯಾಗ್ರಹಕ್ಕೆ ಯಾವ ಕಾಲಮಿತಿಯನ್ನೂ ಹಾಕಲಿಲ್ಲ. ಒಂದು ವರ್ಷವೊ, ಅನೇಕ ವರ್ಷಗಳೋ ಎಲ್ಲಾ ಒಂದೇ. ಹೊರಾಟವೇ ಅವರ ವಿಜಯ. ಹೋರಾಟವೆಂದರೆ ಸೆರೆಮನೆ, ಗಡಿಪಾರು. ಈ ಮಧ್ಯೆ ಅವರ ಸಂಸಾರಗಳ ಗತಿ? ಹಗಲೆಲ್ಲ ಸೆರೆಮನೆಗೆ ಹೋಗುವವನಿಗೆ ಕೆಲಸ ಕೊಡುವವರು ಯಾರು? ಬಿಡುಗಡೆಯಾದ ಮೇಲೆ ಕುಟುಂಬ ರಕ್ಷಣೆ ಹೇಗೆ? ಇರುವುದೆಲ್ಲಿ? ಬಾಡಿಗೆಗೆ ದುಡ್ಡು? ನಿತ್ಯಾನ್ನಕ್ಕಾಗಿ ಸಂಕಟಪಡಬೇಕಾದರೆ ಸತ್ಯಾಗ್ರಹಿಯಾದರೂ ಕ್ಷಮಾರ್ಹನೆ. ತಾವು ಕಷ್ಟಪಡುವುದಲ್ಲದೆ ತಮ್ಮ ಇಷ್ಟ ಮಿತ್ರರನ್ನೂ ಕಷ್ಟಕ್ಕೀಡುಮಾಡಿ ನಿಶ್ಶಂಕೆಯಿಂದ ಹೋರಾಡುವ ಒಳ್ಳೆಯ ಯೋಧರು ವಿರಳ.

ಇದುವರೆಗೆ ಸೆರೆಮನೆಗೆ ಹೋದ ಸತ್ಯಾಗ್ರಹಿಗಳ ಕುಟುಂಬದವರಿಗೆ ಅತ್ಯಾವಶ್ಯಕವಾದಷ್ಟು ಮಾಸಾಶನ ಕೊಟ್ಟು ಸಹಾಯ ಮಾಡುತ್ತಿದ್ದೆವು. ಎಲ್ಲರಿಗೂ ಒಂದೇ ರೀತಿ ಸಹಾಯಮಾಡಿದರೆ ಆಗುತ್ತಿರಲಿಲ್ಲ. ಯಾವ ಸಂಸಾರದ ಜವಾಬ್ದಾರಿಯೂ ಇಲ್ಲದ ಬ್ರಹ್ಮಚಾರಿಯನ್ನು ಐದು ಜನರ ಜೀವನ ನಡೆಸಬೇಕಾದ ಸಂಸಾರಿಯೊಂದಿಗೆ ಹೋಲಿಸಲಾಗದು; ನಮ್ಮ ಸೈನ್ಯಕ್ಕೆ ಬರೀ ಬ್ರಹ್ಮಚಾರಿಗಳನ್ನೇ ಸೇರಿಸಲು ಸಾಧ್ಯವಿರಲಿಲ್ಲ. ಪ್ರತಿಯೊಂದು ಕುಟುಂಬವೂ ತನ್ನ ಅತ್ಯಗತ್ಯಗಳನ್ನು ಮಾತ್ರ ತಿಳಿಸಬೇಕಾಗಿತ್ತು. ಅದನ್ನು ನಂಬಿ ಧನಸಹಾಯ ಮಾಡುವ ಪದ್ಧತಿಯಿಟ್ಟಿದ್ದೆವು. ಕೆಲವರು ಕಳ್ಳತನದಿಂದ ದುರುಪಯೋಗಪಡಿಸಿ ಮೋಸಮಾಡುವ ಸಂಭವವೂ ಇತ್ತು. ಮೇಲ್ಮಟ್ಟದ ಜೀವನ ನಡೆಸುವ ಕೆಲವರು ಪ್ರಾಮಾಣಿಕರಾಗಿದ್ದರೂ ಅದೇ ಅಂತಸ್ತಿನ ಸಹಾಯ ಅಪೇಕ್ಷಿಸುತ್ತಿದ್ದರು. ಈ ರೀತಿ ಸಹಾಯ ಮಾಡುತ್ತ ಹೋದರೆ ಚಳುವಳಿಯನ್ನು ದೀರ್ಘಕಾಲ ನಡೆಸಲು ಸಾಧ್ಯವಿಲ್ಲವೆಂದು ಮನಗಂಡೆ. ಯೋಗ್ಯರಿಗೆ ಅನ್ಯಾಯವಾಗುವದನ್ನೂ, ನೀತಿಬಾಹಿರರು ವಿಶೇಷ ಸೌಲಭ್ಯ ಪಡೆಯುವದನ್ನೂ ತಪ್ಪಿಸಲು ಅಸಾಧ್ಯವಾಗಿತ್ತು. ಇದಕ್ಕೆ ಒಂದೇ ಉಪಾಯ: ಎಲ್ಲ ಕುಟುಂಬಗಳನ್ನೂ ಒಂದೇ ಕಡೆ ಸೇರಿಸಿ, ಒಂದು ವಿಧವಾದ ಪರಸ್ಪರ ಸಹಕಾರಿ ಸಂಸ್ಥೆಯನ್ನೇರ್ಪಡಿಸುವದು. ಅಲ್ಲಿ ಮೋಸಕ್ಕೂ ಅನ್ಯಾಯಕ್ಕೂ

ಎಡೆಯಿರುವದಿಲ್ಲ. ಸಾರ್ವಜನಿಕ ಹಣವನ್ನು ಬಹುಮಟ್ಟಿಗೆ ಉಳಿಸಬಹುದು. ಸತ್ಯಾಗ್ರಹಿಗಳ ಕುಟುಂಬದವರೆಲ್ಲ, ಪರಸ್ಪರ ಅನ್ಯೋನ್ಯತೆಯಿಂದ ಹೊಸ ಸರಳಜೀವನ ನಡೆಸಲು ಅನುಕೂಲ. ಬೇರೆ ಬೇರೆ ಪ್ರಾಂತಗಳ ಭಿನ್ನ ಭಿನ್ನ ಮತಗಳ ಭಾರತೀಯರು ಒಟ್ಟಿಗೆ ಕಲೆತು ಜೀವಿಸಲು ಅವಕಾಶವಾದೀತು.

ಆದರೆ ಅಂತಹ ಪ್ರಯೋಗಕ್ಕೆ ಅನುಕೂಲ ಸ್ಥಳ ಎಲ್ಲಿ? ಪಟ್ಟಣದಲ್ಲಿರುವದು. ಆನೆ ಹೋದ ಮೇಲೆ ಬಾಲಕ್ಕೆ ಬಡಿದಾಡಿದಂತೆ ಊಟಕ್ಕಾದಷ್ಟು ವೆಚ್ಚ ಮನೆ ಬಾಡಿಗೆಗೆ ಆಗುತ್ತಿತ್ತು. ಪಟ್ಟಣದ ಆಕರ್ಷಕ ಹವ್ಯಾಸಗಳ ಮಧ್ಯೆ ಸರಳ ಜೀವನವೂ ಕಷ್ಟ. ಎಲ್ಲ ಕುಟುಂಬದವರೂ ತಮ್ಮ ಮನೆಯಲ್ಲಿಯೇ ಇದ್ದು ಉಪಯುಕ್ತ ಕೈಗಾರಿಕೆ ಅವಲಂಬಿಸಲು ಅನುಕೂಲವಾದ ವಿಶಾಲಸ್ಥಳ ಪಟ್ಟಣದಲ್ಲಿ ದೊರೆಯುವುದೂ ಕಷ್ಟ. ಆದ್ದರಿಂದ ನಮ್ಮ ಸ್ಥಳ ಪಟ್ಟಣದಿಂದ ಬಹು ದೂರವೂ ಇರಬರದು, ಬಹು ಸಮೀಪವೂ ಇರಬಾರದು. 'ಇಂಡಿಯನ್ ಓಪಿನಿಯನ್' ಅಚ್ಚಾಗುತ್ತ, ಸ್ವಲ್ಪ ವ್ಯವಸಾಯವೂ ನಡೆಯುತ್ತಿದ್ದ ಫೀನಿಕ್ಸ್ ಇತ್ತು. ಫೀನಿಕ್ಸ್‌ನಲ್ಲಿ ಇನ್ನೂ ಇತರ ಅನೇಕ ಅನುಕೂಲಗಳೂ ಇದ್ದವು. ಆದರೆ ಜೋಹಾನ್ಸ್ ಬರ್ಗ್‌ನಿಂದ ೩೦೦ ಮೈಲು ದೂರ, ೩೦ ಗಂಟೆಗಳ ಪ್ರಯಾಣ. ಅಷ್ಟು ದೂರ ಕುಟುಂಬಗಳನ್ನು ಸಾಗಿಸುವುದೂ, ಹಿಂದಕ್ಕೆ ಕರೆತರುವುದೂ ಬಹಳ ಕಷ್ಟ, ಬಹಳ ನಷ್ಟ. ತಮ್ಮ ಮನೆ ಮಾರು ಬಿಟ್ಟು ಅಷ್ಟು ದೂರ ಹೋಗಲು ಯಾವ ಕುಟುಂಬವೂ ಒಪ್ಪುತ್ತಿರಲಿಲ್ಲ. ಆ ಸ್ಥಳ ಟ್ರಾನ್ಸ್ ವಾಲ್‌ನಲ್ಲಿಯೇ ಜೋಹಾನ್ಸ್ ಬರ್ಗ್ ಸಮೀಪದಲ್ಲಿರಬೇಕು.

ಕಾಲೆನ್ ಬಾಕ್‌ರ ಪರಿಚಯ ಆಗಲೇ ಮಾಡಿಕೊಟ್ಟಿದ್ದೇನೆ. ಅವರು ೧,೧೦೦ ಎಕರೆಗಳ ಒಂದು ಆಸ್ತಿ ಕೊಂಡು ಯಾವ ಬಾಡಿಗೆಯನ್ನೂ ಕೇಳದೆ ೧೯೧೦ನೇ ಮೇ ೩೦ ರಲ್ಲಿ ಸತ್ಯಾಗ್ರಹಿಗಳ ಉಪಯೋಗಕ್ಕೆ ಕೊಟ್ಟರು. ಆ ತೋಟದಲ್ಲಿ ಫಲಕೊಡುವ ಸಾವಿರ ಹಣ್ಣಿನ ಗಿಡ, ಗುಡ್ಡದ ತಪ್ಪಲಲ್ಲಿ ೬-೭ ಜನ ವಾಸಮಾಡಬಹುದಾದ ಒಂದು ಮನೆ ಇದ್ದವು. ನೀರಿಗಾಗಿ ಎರಡು ಬಾವಿ, ಒಂದು ಊಟೆ ಇದ್ದವು. ಲಾಲೆ ರೈಲ್ವೆ ನಿಲ್ದಾಣ ಒಂದು ಮೈಲಿ ದೂರದಲ್ಲಿತ್ತು. ಜೋಹಾನ್ಸ್ ಬರ್ಗ್ ೨೧ ಮೈಲು ದೂರ. ಈ ತೋಟದಲ್ಲಿ ಮನೆ ಕಟ್ಟಿ, ಸತ್ಯಾಗ್ರಹಿಗಳ ಕುಟುಂಬದವರನ್ನು ವಾಸಕ್ಕೆ ಕರೆಯಲು ತೀರ್ಮಾನಿಸಿದೆವು.

೩೪. ಟಾಲ್ ಸ್ಟಾಯ್ ಆಶ್ರಮ-೨

ಈ ತೋಟದಲ್ಲಿ ಕಿತ್ತಲೆ, ಸಕ್ಕರೆ ಬಾದಾಮಿ, ದ್ರಾಕ್ಷೆಹಣ್ಣು ಹೇರಳವಾಗಿ ದೊರೆಯುತ್ತಿದ್ದವು. ಸುಗ್ಗಿ ಕಾಲದಲ್ಲಿ ಸತ್ಯಾಗ್ರಹಿಗಳು ತಿಂದು ತೇಗಿ ಉಳಿಯುವಷ್ಟು ಸಮೃದ್ಧಿಯಾಗಿತ್ತು. ನಮ್ಮ ಮನೆಗಳಿಗೆ ೫೦೦ ಗಜ ದೂರದಲ್ಲಿ ಬುಗ್ಗೆ ಇತ್ತು. ಅಡ್ಡೆ ಹೊತ್ತು ನೀರು ತರುತ್ತಿದ್ದೆವು.

ಮನೆಗೆಲಸಕ್ಕಾಗಲಿ, ವ್ಯವಸಾಯ, ಮನೆಕಟ್ಟುವ ಕೆಲಸಕ್ಕಾಗಲಿ ಸೇವಕರನ್ನು ನೇಮಿಸಲಾಗದೆಂದು ತೀರ್ಮಾನಿಸಿದೆವು. ಅಡಿಗೆ ಮನೆಯಿಂದ ಕಕ್ಕಸು ಗುಡಿಸುವವರೆಗೆ

ಎಲ್ಲ ಕೆಲಸವನ್ನೂ ನಾವೇ ಮಾಡುತ್ತಿದ್ದೆವು. ಕುಟುಂಬವಾಸಕ್ಕೆ ಗಂಡಸರಿಗೆ ಬೇರೆ, ಹೆಂಗಸರಿಗೆ ಬೇರೆ ವಾಸಸ್ಥಾನ ನಿರ್ಮಾಣ ಮಾಡಲು ತೀರ್ಮಾನಿಸಿದೆವು. ಆದ್ದರಿಂದ ಸ್ವಲ್ಪ ದೂರದಲ್ಲಿ ಎರಡು ಸಾಲು ಮನೆ ಕಟ್ಟಿದೆವು. ಮೊದಲು ಹತ್ತು ಜನ ಹೆಂಗಸರಿಗೂ, ಅರವತ್ತು ಜನ ಗಂಡಸರಿಗೂ ವಾಸಕ್ಕೆ ಅನುಕೂಲ ಮಾಡಿದರೆ ಸಾಕೆಂದು ಯೋಚಿಸಿದೆವು. ಅಲ್ಲದೆ ಕಾಲೆನ್‌ಬಾಕ್‌ರಿಗೆ ಒಂದು ಮನೆ, ಒಂದು ಪಾಠಶಾಲೆ, ಬಡಗಿಕೆಲಸ, ಜೋಡು ಹೊಲಿಯುವುದು ಮುಂತಾದ ಕೈಗಾರಿಕೆ ಕಲಿಸಲು ಒಂದು ಉದ್ಯೋಗ ಮಂದಿರ ಸಹ ಕಟ್ಟಬೇಕಾಗಿತ್ತು.

ಗುಜರಾತ್, ತಮಿಳುನಾಡು, ಆಂಧ್ರ, ಉತ್ತರ ಹಿಂದುಸ್ತಾನ ಮುಂತಾದ ಎಲ್ಲ ಕಡೆಯ ಜನರೂ ವಾಸಕ್ಕೆ ಬಂದರು. ಅವರಲ್ಲಿ ಹಿಂದೂ, ಮುಸಲ್ಮಾನ್, ಪಾರ್ಸಿ, ಕ್ರಿಶ್ಚಿಯನ್ ಎಲ್ಲ ಮತಾನುಯಾಯಿಗಳೂ ಇದ್ದರು. ೪೦ ಜನ ಯುವಕರು, ಇಬ್ಬರು ಮೂವರು ಮುದುಕರು, ಐವರು ಹೆಂಗಸರು, ೨೦–೩೦ ಜನ ಹುಡುಗರು, ೪–೫ ಜನ ಹುಡುಗಿಯರೂ ಇದ್ದರು.

ಕ್ರೈಸ್ತರೂ ಉಳಿದ ಹೆಂಗಸರೂ ಮಾಂಸಾಹಾರಿಗಳು. ಆಶ್ರಮದಲ್ಲಿ ಮಾಂಸಾಹಾರ ಕೂಡದೆಂದು ನಾನು ಕಾಲೆನ್ ಬಾಕ್‌ರೂ ನಿರ್ಧರಿಸಿದೆವು. ಆದರೆ ಮಾಂಸಾಹಾರಕ್ಕೆ ಯಾವ ಆಕ್ಷೇಪಣೆಯೂ ಇಲ್ಲದೆ, ಬಾಲ್ಯದಿಂದ ಅಭ್ಯಾಸವಿದ್ದು ಕಷ್ಟಕಾಲವೆಂದು ಇಲ್ಲಿಗೆ ಬಂದ ಜನರಿಗೆ ತಾತ್ಕಾಲಿಕವಾಗಿಯೇ ಆದರೂ, ಮಾಂಸಾಹಾರ ಬಿಡಲು ಹೇಳುವುದು ಹೇಗೆ? ಮಾಂಸ ಕೊಡುವುದಾದರೆ ಜೀವನದ ವೆಚ್ಚ ಹೆಚ್ಚದೆ? ಗೋಮಾಂಸ ತಿನ್ನುವವರಿಗೆ ಅದನ್ನೂ ಕೊಡಬೇಕೆ? ಈ ರೀತಿ ಮಾಡುತ್ತ ಹೋದರೆ ಎಷ್ಟಾಗಬೇಕು ಅಡಿಗೆ ಮನೆ? ನನ್ನ ಕರ್ತವ್ಯವೇನು? ಈ ಸಂಸಾರಗಳಿಗೆ ಮೊದಲೇ ಧನಸಹಾಯ ಮಾಡಿ ಸಹಕರಿಸಿದ್ದೆ; ಹಾಗೆ ನೋಡಿದರೆ ಒಂದು ದೃಷ್ಟಿಯಿಂದ ಮಾಂಸಾಹಾರಕ್ಕೂ–ಗೋಮಾಂಸಭಕ್ಷಣೆಗೂ ನಾನು ಒಪ್ಪಿಗೆಕೊಟ್ಟಿದ್ದೆ. ಮಾಂಸಾಹಾರಿಗೆ ಸಹಾಯಮಾಡಲಾಗದೆಂದು ತೀರ್ಮಾನಿಸಿದ್ದರೆ ಸಸ್ಯಾಹಾರಿಗಳಿಂದಲೇ ಸತ್ಯಾಗ್ರಹ ನಡೆಸಬೇಕಾಗಿತ್ತು. ಎಲ್ಲ ಭಾರತೀಯರ ಪರವಾಗಿ ಸತ್ಯಾಗ್ರಹ ಹೂಡಿದ್ದ ಕಾರಣ ಅದು ಸಾಧ್ಯವಿರಲಿಲ್ಲ. ಇಂಥ ಸಂದರ್ಭಗಳಲ್ಲಿ ನನ್ನ ಕರ್ತವ್ಯ ನಿರ್ಧರಿಸಲು ನಾನು ಬಹಳ ಕಾಲ ತೆಗೆದುಕೊಳ್ಳಲಿಲ್ಲ. ಕ್ರೈಸ್ತರೂ ಮುಸಲ್ಮಾನರೂ ಗೋಮಾಂಸ ಕೇಳಿದರೆ ಒದಗಿಸಲೇಬೇಕು. ಆಶ್ರಮಕ್ಕೆ ಸೇರಿಸುವುದಿಲ್ಲವೆಂದು ಹೇಳುವದಂತೂ ಸಾಧ್ಯವೇ ಇರಲಿಲ್ಲ.

ಆದರೆ ಪ್ರೇಮವಿದ್ದೆಡೆ ಪರಮಾತ್ಮನ ಸಾನಿಧ್ಯ. ಸಸ್ಯಾಹಾರವೆ ಸಾಕೆಂದು ಮುಸಲ್ಮಾನ್ ಸ್ನೇಹಿತರು ಮೊದೇ ನನಗೆ ಮಾತುಕೊಟ್ಟಿದ್ದರು. ತಮ್ಮ ಗಂಡಂದಿರನ್ನೂ ಮಕ್ಕಳನ್ನೂ ಸೆರೆಮನೆಗೆ ಕಳಿಸಿದ ಕ್ರೈಸ್ತ ಸೋದರಿಯರ ಅನುಮತಿ ಬೇಕಿತ್ತು. ಸೆರೆಯಲ್ಲಿದ್ದ ಕ್ರೈಸ್ತ ಭ್ರಾತೃಗಳೊಂದಿಗೆ ನಿಕಟ ಬಾಂಧವ್ಯ ಬೆಳೆದೇ ಇತ್ತು. ಇಂಥ ಪ್ರಸಂಗದಲ್ಲಿ ಸಸ್ಯಾಹಾರಕ್ಕೆ ಅವರೂ ಒಪ್ಪಿದ್ದರು. ಆದರೆ ಗಂಡಸರಿಲ್ಲದಾಗ, ಅವರ ಮನೆಯವರೊಡನೆ ಆಪ್ತ ವ್ಯವಹಾರ ನಡೆಸಿದ್ದು ಇದೇ ಮೊದಲ ಅನುಭವ ನನಗೆ. ವಸತಿಗೂ ಹಣಕ್ಕೂ

ನಮಗಿದ್ದ ಕಷ್ಟವನ್ನು ತಿಳಿಸಿ ಆಹಾರದ ವಿಷಯದಲ್ಲಿ ನಮ್ಮ ಮನೋಭಾವನೆಯನ್ನು ಆ ಕ್ರೈಸ್ತ ಸೋದರಿಯರಿಗೆ ವಿವರಿಸಿದೆ. ಅವರು ಬೇಕೆಂದರೆ ಗೋಮಾಂಸವನ್ನೂ ಒದಗಿಸುವೆನೆಂದೆ. ಆ ಸೋದರಿಯರು ಮಾಂಸಾಹಾರ ಬಿಡಲು ಒಪ್ಪಿದರು. ಅಡಿಗೆಯ ಕೆಲಸವನ್ನು ಅವರಿಗೇ ಒಪ್ಪಿಸಿದೆವು. ನಾನೋ ನನ್ನ ಜೊತೆಗೆ ಇನ್ನೊಬ್ಬರೋ ಅವರಿಗೆ ನೆರವಾಗುತ್ತಿದ್ದೆವು. ನನ್ನ ಇದಿರು ಸಣ್ಣ ವಿಷಯಗಳಿಗಾಗಿ ವ್ಯಾಜ್ಯ ನಡೆಯುತ್ತಿರಲಿಲ್ಲ. ಆಹಾರವನ್ನು ಅದಷ್ಟು ಸುಲಭಮಾಡಿ ಊಟದ ಕಾಲ, ಪರಿಮಿತಿಗಳನ್ನು ನಿರ್ಧರಿಸಿದೆವು. ಒಂದೇ ಅಡಿಗೆ ಮನೆ. ಎಲ್ಲರೂ ಒಂದೇ ಪಙ್ತಿ. ಅವರವರ ತಟ್ಟೆ ಇತ್ಯಾದಿ ಅವರವರೇ ತೊಳೆಯಬೇಕು. ಅಡಿಗೆ ಮನೆಯ ಪಾತ್ರೆಗಳನ್ನು ಎಲ್ಲರೂ ಸರದಿಯಂತೆ ತೊಳೆಯುತ್ತಿದ್ದೆವು. ಸತ್ಯಾಗ್ರಹಿಗಳು ಟಾಲ್ ಸ್ಟಾಯ್ ಆಶ್ರಮದಲ್ಲಿ ಬಹುಕಾಲ ಇದ್ದರು; ಆದರೂ ಹೆಂಗಸಾಗಲಿ, ಗಂಡಸಾಗಲಿ ಯಾರೂ ಮಾಂಸ ಕೇಳಲಿಲ್ಲ. ಪಾನೀಯ, ಹೊಗೆಸೊಪ್ಪು ಪೂರ್ಣ ವರ್ಜ್ಯವಾಗಿತ್ತು.

ಮೊದಲೇ ತಿಳಿಸಿದಂತೆ ಮನೆ ಕಟ್ಟಲು ಸಹ ಸಾಧ್ಯವಿದ್ದಷ್ಟು ಸ್ವಾವಲಂಬಿಗಳಾದೆವು. ಕಾಲೆನ್‌ಬಾಕ್‌ರೇ ನಮ್ಮ ವಿಶ್ವಕರ್ಮ. ಒಬ್ಬ ಯೂರೋಪಿಯನ್ ಗಾರೆ ಕೆಲಸಗಾರನನ್ನು ಕರೆತಂದರು. ನಾರಾಯಣದಾಸ್ ದಾಮಾನಿಯಾ ಎಂಬ ಗುಜರಾತಿ ಬಡಗಿ ಕೂಲಿಯಿಲ್ಲದೆ ಕೆಲಸ ಮಾಡಲೊಪ್ಪಿ ಕಡಮೆ ಕೂಲಿಯ ಕೆಲವು ಬಡಗಿಗಳನ್ನೂ ಕರೆತಂದ. ಕಷ್ಟವಾದ ಕೆಲಸಕ್ಕೆಲ್ಲ ನಾವೇ ಕೈಹಚ್ಚುತ್ತಿದ್ದೆವು. ನಮ್ಮಲ್ಲಿ ಚುರುಕಾಗಿದ್ದ ಕೆಲವರು ಅದ್ಭುತ ಕಾರ್ಯಗಳನ್ನು ಮಾಡಿದರು. ವಿಹಾರಿ ಎಂಬ ಸತ್ಯಾಗ್ರಹಿ ಅರ್ಧ ಬಡಗಿ ಕೆಲಸವನ್ನೆಲ್ಲ ತಾನೇ ಮಾಡಿದ. ಸಿಂಹ ಸ್ವರೂಪಿಯಾದ ತಂಬಿನಾಯುಡುಗೆ ಝಾಡಮಾಲಿ ಕೆಲಸ, ಜೋಹಾನ್ಸ್ ಬರ್ಗ್‌ಗೆ ಹೋಗಿ ಅಂಗಡಿ ಸಾಮಾನು ತರುವ ಕೆಲಸ ಸಿಕ್ಕಿತು.

ಹುಟ್ಟಿದಂದಿನಿಂದ ಕಷ್ಟವನ್ನೇ ಅರಿಯದ ಪರಾಗ್ಜೀ ಖಂಡುಭಾಯಿ ದೇಸಾಯಿ ನಮ್ಮ ಆಶ್ರಮವಾಸಿಗಳಲ್ಲೊಬ್ಬರು. ಆಶ್ರಮದಲ್ಲಿ ಹಲ್ಲುಚಳಿಸುವ ಚಳಿ, ಉರಿಬಿಸಿಲು, ಕಲ್ಲುಕಟ್ಟಿ ಸುರಿಯುವ ಮಳೆ ಎಲ್ಲಾ ಸಹಿಸಬೇಕಾಗಿತ್ತು. ಪ್ರಾರಂಭದಲ್ಲಿ ಮನೆಕಟ್ಟುವ ಕೆಲಸ ನಡೆದಿದ್ದಾಗ ಎರಡು ತಿಂಗಳು ಡೇರೆಗಳಲ್ಲಿ ವಾಸಮಾಡಿದೆವು. ತಗಡಿನ ಮನೆಗಳಾದ್ದರಿಂದ ಕಟ್ಟಲು ಬಹಳ ದಿನ ಬೇಕಾಗಲಿಲ್ಲ. ಸಿದ್ಧವಾದ ಮರದ ಸಾಮಾನು ದೊರೆಯಿತು. ಅಳತೆಗೆ ಸರಿಯಾಗಿ ಕೊಯ್ದು ಉಪಯೋಗಿಸಿದೆವು. ಅತ್ಯಲ್ಪಕಾಲದಲ್ಲಿ ಅನೇಕ ಮನೆ ಕಟ್ಟಿದೆವು. ಈ ಕಷ್ಟ ಕೆಲಸಗಳಿಂದ ಪ್ರಾಗ್ಜೀಗೆ ತುಂಬಾ ಆಯಾಸವಾಯಿತು. ಆಶ್ರಮದ ಕೆಲಸ ಸೆರೆಮನೆಯ ಕೆಲಸಕ್ಕಿಂತ ಕಷ್ಟವಾಗಿತ್ತು. ಬಿಸಿಲಿನ ತಾಪ, ಆಯಾಸದಿಂದ ಒಂದು ದಿನ ಪ್ರಾಗ್ಜೀ ಪ್ರಜ್ಞೆ ತಪ್ಪಿದ. ಆದರೂ ಜಗ್ಗಲಿಲ್ಲ; ಆಶ್ರಮದಲ್ಲಿ ದುಡಿದು ತನ್ನ ದೇಹ ದಂಡಿಸಿ ಕೊನೆಕೊನೆಗೆ ನಮ್ಮ ಅತ್ಯುತ್ತಮ ಕೆಲಸಗಾರರಲ್ಲಿ ಯಾರಿಗೂ ಕಡಮೆ ಇಲ್ಲದಂತೆ ಶ್ರಮಪಡುತ್ತಿದ್ದ.

ಬ್ಯಾರಿಸ್ಟರಾಗಿದ್ದರೂ ಜೋಸೆಫ್ ರಾಯಪ್ಪನ್‌ಗೆ ಬ್ಯಾರಿಸ್ಟರೆಂಬ ಅಹಂಕಾರ ಸ್ವಲ್ಪವೂ ಇರಲಿಲ್ಲ. ಕಷ್ಟದ ಕೆಲಸ ಆತನಿಗೆ ಸಾಧ್ಯವಿರಲಿಲ್ಲ. ರೈಲಿನಿಂದ ಮೂಟೆ ಇಳಿಸಿ ಗಾಡಿಗೆ ಹೇರುವುದು ಕಷ್ಟವಾದರೂ ತನ್ನ ಶಕ್ತಿ ಮೀರಿ ಸಾಮಾನು ಹೊರುತ್ತಿದ್ದ.

ಟಾಲ್ ಸ್ಟಾಯ್ ಆಶ್ರಮದಲ್ಲಿ ನಿರ್ಬಲರು ಪ್ರಬಲರಾದರು. ರೆಟ್ಟೆ ಮರಿದು ಕೆಲಸಮಾಡುವುದು ಎಲ್ಲರಿಗೂ ದಿವ್ಯೌಷಧವಾಯಿತು.

ಏನು ಕೆಲಸ ಬಿದ್ದರೂ ಎಲ್ಲರೂ ಜೋಹಾನ್ಸ್ ಬರ್ಗ್‌ಗೆ ಹೋಗಲು ಸಿದ್ಧವಾಗಿರಬೇಕು; ಹುಡುಗರಿಗೆ ಇದು ಒಂದು ಆಟವಾಯಿತು. ಕೆಲಸಬಿದ್ದಾಗ ನಾನೂ ಹೋಗುತ್ತಿದ್ದೆ. ಸಂಸ್ಥೆಯ ಪರವಾಗಿ ಸಾರ್ವಜನಿಕ ಕೆಲಸಕ್ಕೆ ಹೋದಾಗ ಮಾತ್ರ ಮೂರನೆ ತರಗತಿ ರೈಲಿನಲ್ಲಿ ಹೋಗಬಹುದೆಂದೂ, ಮನರಂಜನೆಗೆಂದು ಹೋದಾಗ ತಮ್ಮ ತಮ್ಮ ಫಲಾಹಾರ ಸಮೇತ ನಡೆದು ಹೋಗಬೇಕೆಂದೂ ವಿಧಿಸಿದೆವು. ಅಲ್ಲಿ ಊಟಕ್ಕಾಗಿ ವೆಚ್ಚಮಾಡಲು ಯಾರಿಗೂ ಅವಕಾಶವಿರಲಿಲ್ಲ. ಇಷ್ಟು ಕಟ್ಟುನಿಟ್ಟಾಗಿರದಿದ್ದರೆ ಹಳ್ಳಿಯಲ್ಲಿದ್ದು ಉಳಿಸಿದ ಹಣವೆಲ್ಲಾ ರೈಲು ವೆಚ್ಚಕ್ಕೂ ತಿಂಡಿಗೂ ಹೋಗುತ್ತಿತ್ತು. ತಿಂಡಿ ಒಯ್ದರೂ ಮಿತವಾಗಿ. ಮನೆಯಲ್ಲಿ ಬೀಸಿದ ಗೋಧಿಹಿಟ್ಟಿನ ರೊಟ್ಟಿ, ಸೇಂಗಾ ತುಪ್ಪ, ಮನೆಯಲ್ಲಿ ಮಾಡಿದ ರಸಾಯನ–ನಮ್ಮ ಫಲಾಹಾರ. ಗೋಧಿ ಬೀಸಲು ಕೈಯಂತ್ರವೊಂದನ್ನು ಕೊಂಡೆವು. ಸೇಂಗಾಯಿ ಹುರಿದು ತಿರುವಿ ಬೆಣ್ಣೆ ಮಾಡುತ್ತಿದ್ದೆವು. ಹಸುವಿನ ಬೆಣ್ಣೆಗಿಂತ ನಾಲ್ಕು ಪಾಲು ಬೆಲೆಯಾಗುತ್ತಿತ್ತು. ಕಿತ್ತಲೆ ಹಣ್ಣು ತೋಟದಲ್ಲೆ ಸಮೃದ್ಧಿಯಾಗಿತ್ತು. ಆಶ್ರಮದಲ್ಲಿ ಹಸುವಿನ ಹಾಲು ದೊರೆಯುತ್ತಿರಲಿಲ್ಲ. ಸಾಮಾನ್ಯವಾಗಿ ಹಾಲಿನಪುಡಿಯನ್ನೇ ಉಪಯೋಗಿಸುತ್ತಿದ್ದೆವು.

ಜೋಹಾನ್ಸ್‌ಬರ್ಗ್‌ಗೆ ವಾರಕ್ಕೆರಡು ಬಾರಿ ಹೋಗಬಹುದಾಗಿತ್ತು; ಹೋದರೂ ಆ ಹೊತ್ತೇ ಹಿಂದಿರುಗಬೇಕು. ೨೧ ಮೈಲಿ ಹೋಗಿ ಬರಬೇಕು. ಈ ಕಾಲುನಡಿಗೆ ಪ್ರಯಾಣದಿಂದ ನೂರಾರು ರೂಪಾಯಿ ಉಳಿತಾಯವಾಯಿತು. ನಡೆದವರಿಗೂ ಒಳ್ಳೆಯದಾಯಿತು. ಕೆಲವರು ನಡಿಗೆಯ ರೂಢಿಯನ್ನು ಹೊಸದಾಗಿ ಕಲಿತರು. ಬೆಳಗಿನ ಜಾವ ಎರಡು ಗಂಟೆಗೆ ಎದ್ದು ಎರಡೂವರೆಗೆ ಪ್ರಯಾಣ ಹೊರಡುವುದು ಸಾಮಾನ್ಯ ಪದ್ಧತಿ. ಆರು, ಏಳು ಗಂಟೆಗಳಲ್ಲಿ ಜೋಹಾನ್ಸ್‌ಬರ್ಗ್ ಸೇರುತ್ತಿದ್ದೆವು. ಅತ್ಯಲ್ಪಕಾಲದಲ್ಲಿ ಆ ಪ್ರಯಾಣ ಮುಗಿಸಿದ್ದೆಂದರೆ ನಾಲ್ಕು ಗಂಟೆ ಹದಿನೆಂಟು ನಿಮಿಷದಲ್ಲಿ.

ಈ ಶಿಸ್ತಿನಿಂದ ಆಶ್ರಮವಾಸಿಗಳಿಗೆ ತೊಂದರೆಯಾಯಿತೆಂದು ಭಾವಿಸಬಾರದು. ಎಲ್ಲರೂ ಸಂತೋಷದಿಂದ ಶಿಸ್ತು ಕಾಪಾಡುತ್ತಿದ್ದರು. ಬಲಾತ್ಕಾರದಿಂದ ಒಬ್ಬ ಆಶ್ರಮವಾಸಿಯೂ ನಿಲ್ಲುತ್ತಿರಲಿಲ್ಲ. ಆಶ್ರಮದ ಕೆಲಸ ಮಾಡಲಿಕ್ಕೂ ಪಟ್ಟಣಕ್ಕೆ ಹೋಗಲಿಕ್ಕೂ ಯುವಕರಿಗೆ ತುಂಬ ಉತ್ಸಾಹ. ವಿಶ್ವಾಸದಿಂದ ಸಂತೋಷದಿಂದ ಎಷ್ಟು ಮಾಡುತ್ತಿದ್ದರೋ ಅಷ್ಟೇ ಕೊಡುತ್ತಿದ್ದೆವು. ಈ ರೀತಿ ಕೆಲಸವೂ ಸಾಗುತ್ತಿತ್ತು; ಚೆನ್ನೂ ಆಗುತ್ತಿತ್ತು.

ನಮ್ಮ ಸಫಾಯಿ ವಿಷಯ ಎರಡು ಮಾತು ಹೇಳುತ್ತೇನೆ. ಬಹುಜನ ಆಶ್ರಮವಾಸಿಗಳಿದ್ದರೂ ಆಶ್ರಮದಲ್ಲಿ ಕೊಳೆಯಾಗಲಿ ಕಸವಾಗಲಿ ಎಲ್ಲೂ ಕಾಣುತ್ತಿರಲಿಲ್ಲ. ಎಲ್ಲ ಕಸವನ್ನೂ ಗೊಬ್ಬರಕ್ಕಾಗಿ ತೋಡಿದ ಗುಂಡಿಗಳಲ್ಲಿ ಹಾಕಿ ಮುಚ್ಚುತ್ತಿದ್ದೆವು. ರಸ್ತೆಗಳ ಮೇಲೆ ನೀರನ್ನೂ ಚೆಲ್ಲುತ್ತಿರಲಿಲ್ಲ. ಬಚ್ಚಲು ನೀರನ್ನೆಲ್ಲ ಕಡಾಯಿಗಳಲ್ಲಿ ತುಂಬಿ ಗಿಡಗಳಿಗೆ ಹೊಯ್ಯುತ್ತಿದ್ದೆವು. ಎಂಜಲು, ಕಾಯಿಪಲ್ಯ ಚೂರನ್ನು ಗೊಬ್ಬರಕ್ಕೆ ಉಪಯೋಗಿಸುತ್ತಿದ್ದೆವು.

ಮಲವಿಸರ್ಜನೆಗೆ ಪ್ರತಿ ಮನೆಯ ಬಳಿಯಲ್ಲೂ ಒಂದೂವರೆ ಅಡಿ ಆಳದ ಚೌಕದ ಗುಂಡಿ ತೋಡಿತ್ತು. ವಿಸರ್ಜನೆಯೊಡೊಡನೆ ಮಣ್ಣಿನಿಂದ ಮುಚ್ಚುತ್ತಿದ್ದೆವು. ಅದರಿಂದ ವಾಸನೆ ಬರುತ್ತಿರಲಿಲ್ಲ; ನೊಣಗಳ ಬಾಧೆಯೂ ಇರಲಿಲ್ಲ. ಅಲ್ಲಿ ಕಶ್ಮಲ ಮುಚ್ಚಿರುವುದು ತಿಳಿಯುತ್ತಿರಲಿಲ್ಲ. ಈ ವ್ಯವಸ್ಥೆಯಿಂದ ಕೊಳೆಯೂ ತಪ್ಪಿತು; ಒಳ್ಳೆಯ ಗೊಬ್ಬರವೂ ಆಯಿತು. ಮಲವನ್ನು ಈ ರೀತಿ ಸರಿಯಾಗಿ ಉಪಯೋಗಿಸಿದರೆ ಲಕ್ಷಾಂತರ ರೂಪಾಯಿ ಬೆಲೆಬಾಳುವ ಗೊಬ್ಬರವಾಗುತ್ತದೆ; ಅನೇಕ ರೋಗ ನಿವಾರಣೆಯಾಗುತ್ತದೆ. ನಮ್ಮ ದುರಭ್ಯಾಸದಿಂದ ಪವಿತ್ರ ನದೀತಲಗಳನ್ನು ಹೊಲಸು ಮಾಡಿ ನೊಣಗಳ ಉತ್ಪತ್ತಿಗೆ ಒಳ್ಳೆ ಅವಕಾಶ ಕೊಡುತ್ತೇವೆ. ನಮ್ಮೀ ಅನರ್ಥಕರ ಅಜಾಗರೂಕತೆಯಿಂದ, ಮಲದ ಮೇಲೆ ಕುಳಿತ ನೊಣ ಬಂದು ಸ್ನಾನಾನಂತರ ನಮ್ಮ ಮೈಯನ್ನೆ ಮತ್ತೆ ಹೊಲಸು ಮಾಡುತ್ತವೆ. ಈ ಮಹಾ ರೋಗ ನಿವಾರಣೆಗೆ ಬೇಕಾದ್ದು ಒಂದು ಸಣ್ಣ ಕೈಗುದ್ದಲಿ, ಮಲ ಮುಚ್ಚದಿರುವುದು, ದಾರಿಯ ಮೇಲೆ ಸೀನುವುದು ಉಗುಳುವುದು ಲೋಕಕ್ಕೆ ಮಾತ್ರವಲ್ಲ, ದೇವರಲ್ಲಿ ಕೂಡ ಮಹಾಪರಾಧ; ಪರಹಿತದಲ್ಲಿ ನಮಗಿರುವ ಅಸಡ್ಡೆಗೆ ಗುರುತು. ತನ್ನ ಮಲವನ್ನು ಮಣ್ಣಿನಿಂದ ಮರೆಮಾಡದವನು ಕಾಡಿನಲ್ಲಿದ್ದರೂ ಶಿಕ್ಷಾರ್ಹ.

ನಮ್ಮ ಆಶ್ರಮವನ್ನು ಉದ್ಯೋಗ ಕೇಂದ್ರವಾಗಿ ಮಾಡಿ, ಅಲ್ಲಿದ್ದ ಕುಟುಂಬಗಳನ್ನೆಲ್ಲ ಸ್ವಾವಲಂಬಿಯಾಗಿ ಮಾಡಬೇಕೆಂದು ನಮ್ಮ ಉದ್ದೇಶ. ಈ ಒಂದು ಉದ್ದೇಶ ಸಾಧಿಸಿದರೆ ಎಷ್ಟು ದಿನವಾದರೂ ಟ್ರಾನ್ಸ್‌ವಾಲ್ ಸರಕಾರದೊಂದಿಗೆ ಹೋರಾಟ ನಡೆಸಬಹುದಾಗಿತ್ತು. ಬೂಟುಗಳಿಗೆ ಸ್ವಲ್ಪ ಹಣ ವೆಚ್ಚವಾಗುತ್ತಿತ್ತು. ಉಷ್ಣದೇಶಗಳಲ್ಲಿ ಬೂಟು ಉಪಯೋಗ ಒಳ್ಳೆಯದಲ್ಲ. ಕಾಲಿಗೆ ಬೆವರು ಅಂಟಿಕಾಲು ಶಕ್ತಿಗುಂದುತ್ತದೆ. ಭಾರತದಲ್ಲಿ ಬೇಕಾದಂತೆ ಟ್ರಾನ್ಸ್‌ವಾಲ್‌ನಲ್ಲಿ ಕಾಲು ಚೀಲಗಳೂ ಬೇಕಿರಲಿಲ್ಲ. ಆದರೆ ಕಲ್ಲುಮುಳ್ಳಿಗೆ ರಕ್ಷಣೆ ಅವಶ್ಯ. ಆದ್ದರಿಂದ ಮೋಚಿಕೆಲಸ ಕಲಿಯಲು ನಿರ್ಧರಿಸಿದೆವು. ಫೈನ್ ಟೌನ್ ಬಳಿ ಮೇರಿಯಾನ್ ಹಿಲ್‌ನಲ್ಲಿ 'ಟ್ರ್ಯಾಪಿಸ್ಟ್ಸ್' ಎಂಬ ಜರ್ಮನ್ ಕ್ಯಾಥೊಲಿಕ್ ಪಾದ್ರಿಗಳ ನಿಲಯವಿತ್ತು. ಅಲ್ಲಿ ಈ ಕೈಗಾರಿಕೆ ಕಲಿಸುತ್ತಿದ್ದರು. ಕಾಲೆನ್‌ಬಾಕ್ ಅಲ್ಲಿ ಹೋಗಿ ಮೆಟ್ಟು ಹೊಲಿಯಲು ಕಲಿತು ಬಂದು ನನಗೆ ಕಲಿಸಿದರು. ನಾನು ಇತರರಿಗೆ ಕಲಿಸಿದೆ. ಈ ರೀತಿ ಅನೇಕ ಯುವಕರು ಮೆಟ್ಟು ತಯಾರಿಸ ತೊಡಗಿದರು. ನಮ್ಮ ಸ್ನೇಹಿತರಿಗೆ ಮೆಟ್ಟು ಮಾರಲುಪಕ್ರಮಿಸಿದೆವು. ನನ್ನ ವಿದ್ಯಾರ್ಥಿಗಳನೇಕರು ನನ್ನನ್ನೇ ಮೀರಿಸಿದರು. ನಾವು ಕಲಿತ ಇನ್ನೊಂದು ಉದ್ಯೋಗ ಬಡಗಿ ಕೆಲಸ. ಒಂದು ಊರನ್ನೇ ಕಟ್ಟಿದ್ದರಿಂದ ನಮಗೆ ಬೆಂಚು, ಪೆಟ್ಟಿಗೆ, ಅನೇಕ ಸಣ್ಣ ದೊಡ್ಡ ಮರದ ಸಾಮಾನುಗಳು ಬೇಕಾದವು. ಅವೆಲ್ಲವನ್ನೂ ನಾವೇ ತಯಾರಿಸಿದೆವು. ಆಗಲೇ ಪರಿಚಯ ಮಾಡಿಕೊಟ್ಟ ನಿಸ್ವಾರ್ಥಿ ಬಡಗಿಗಳು ನಮಗೆ ಅನೇಕ ತಿಂಗಳು ಸಹಾಯಕರಾದರು. ಮರಗೆಲಸದ ಶಾಖೆಗೆ ಕಾಲೆನ್ ಬಾಕ್ ರೇ ಅಧಿಕಾರಿ. ಪ್ರತಿನಿಮಿಷದಲ್ಲೂ ಅವರ ಕಾರ್ಯಕುಶಲತೆ ನಿಖರತೆಗಳನ್ನು ನೋಡಬಹುದಿತ್ತು.

ಯುವಕರಿಗೂ ಮಕ್ಕಳಿಗೂ ಒಂದು ವಿದ್ಯಾಮಂದಿರ ಅವಶ್ಯವಾಗಿತ್ತು. ಇದೇ ನಮಗೆ ದೊಡ್ಡ ಕಷ್ಟವಾಯಿತು. ಈ ವಿಷಯದಲ್ಲಿ ನಾವು ಕೊನೆಗೂ ಕೃತಕೃತ್ಯರಾಗಲಿಲ್ಲ.

ವಿದ್ಯಾಭ್ಯಾಸದ ಹೊಣೆಯನ್ನೆಲ್ಲ ನಾನೂ ಕಾಲೆನ್ ಬಾಕ್ ವಹಿಸಿಕೊಂಡೆವು. ಶಾಲೆ ನಡೆಸಲು ಮಧ್ಯಾಹ್ನ ಮಾತ್ರ ಅವಕಾಶ. ಅಷ್ಟು ಹೊತ್ತಿಗೆ ಬೆಳಗಿನ ಆಯಾಸದಿಂದ ನಮಗೂ ವಿದ್ಯಾರ್ಥಿಗಳಿಗೂ ಆಯಾಸವಾಗಿರುತ್ತಿತ್ತು. ಅನೇಕ ವೇಳೆ ಎಲ್ಲರೂ ತೂಕಡಿಸುತ್ತ, ಕಣ್ಣಿಗೆ ನೀರು ಹಚ್ಚಿಕೊಳ್ಳುತ್ತಿದ್ದೆವು. ಮಕ್ಕಳೊಡನೆ ಆಟವಾಡಲು ಯತ್ನಿಸಿ, ಅವರೂ ನಾವೂ ಎಚ್ಚರದಿಂದಿರಲು ಪ್ರಯತ್ನಿಸಿದೆವು. ಅನೇಕ ವೇಳೆ ಇದಾವುದೂ ನಡೆಯುತ್ತಿರಲಿಲ್ಲ. ದೇಹ ವಿಶ್ರಾಂತಿ ಬಯಸಿ, ತಡೆಗಟ್ಟಿದರೆ ಕೇಳುತ್ತಿರಲಿಲ್ಲ.

ಹುಡುಗರು ಗುಜರಾತಿ, ತಮಿಳು, ತೆಲುಗು ಮೂರು ಭಾಷೆಗಳಾಡುತ್ತಿದ್ದರು. ಯಾವುದನ್ನು ಹೇಳಬೇಕು? ಯಾವುದನ್ನೂ ಬಿಡಬೇಕು? ಹೇಳುವುದು ತಾನೆ ಹೇಗೆ? ಮಾತೃಭಾಷೆಯ ಮೂಲಕವೇ ಶಿಕ್ಷಣ ನಡೆಯಬೇಕೆಂದು ನನ್ನ ಮತ. ನನಗೆ ಸ್ವಲ್ಪ ತಮಿಳುಬರುತ್ತಿತ್ತು; ತೆಲುಗು ಬರುತ್ತಿರಲಿಲ್ಲ ಈ ಪ್ರಸಂಗದಲ್ಲಿ ಒಬ್ಬ ಉಪಾಧ್ಯಾಯನಿಂದ ಏನಾದೀತು? ಕೆಲವು ಯುವಕರು ಬಹು ತುಂಟರು. ಸೋಮಾರಿಗಳಾಗಿ ಪುಸ್ತಕಗಳನ್ನೇ ಮುಟ್ಟುತ್ತಿರಲಿಲ್ಲ. ಅಂಥ ಶಿಷ್ಯರಿಗೆ ಶಿಕ್ಷೆ ಕೊಡಲು ಯಾವ ಗುರುವಿಗೆ ಸಾಧ್ಯ? ಅಲ್ಲದೆ ಪಾಠ ಪ್ರವಚನಗಳಲ್ಲೂ ಒಂದು ಕ್ರಮ ತರಲು ನಮಗೆ ಸಾಧ್ಯವಿರಲಿಲ್ಲ. ನಾನೂ ಕಾಲೆನ್‌ಬಾಕ್‌ರೂ ಇಬ್ಬರೂ ಅನೇಕ ವೇಳೆ ಜೋಹಾನ್ಸ್ ಬರ್ಗ್‌ಗೆ ಹೋಗಬೇಕಾಗುತ್ತಿತ್ತು.

ಮತ್ತೊಂದು ಸಮಸ್ಯೆ ಧಾರ್ಮಿಕ ಶಿಕ್ಷಣ. ಮುಸಲ್ಮಾನರು 'ಕೊರಾನ'ನ್ನೂ, ಪಾರಸಿಗಳು 'ಅವೆಸ್ತಾ'ವನ್ನೂ ಕಲಿಯಬೇಕೆಂದು ನನ್ನ ಅಭಿಪ್ರಾಯ. ಒಂದು ಖೋಜಾ ಮಗು ಇತ್ತು. ಅದರ ತಂದೆ ಅವರ ಒಂದು ಸಣ್ಣ 'ಪೋಥಿ'ಯನ್ನು ಆ ಮಗುವಿಗೆ ಕಲಿಸಲು ನನಗೆ ಹೇಳಿದ್ದ. ಇಸ್ಲಾಮ್, ಜೊರಾಸ್ಟರ್ ಮತಗ್ರಂಥಗಳನ್ನು ಶೇಖರಿಸಲು ಆರಂಭಿಸಿದೆ. ಹಿಂದೂ ಧರ್ಮದ ಮೂಲ ತತ್ವಗಳ ವಿಚಾರವಾಗಿ ನನ್ನ ದೃಷ್ಟಿಗೆ ಭಾಸವಾದಂತೆ ಒಂದು ಗ್ರಂಥ ಬರೆದೆ. ಅದು ನನ್ನ ಮಕ್ಕಳಿಗಾಗಿಯೋ ಆಶ್ರಮವಾಸಿಗಳಿಗಾಗಿಯೋ ನನಗೆ ಜ್ಞಾಪಕ ಸಾಲದು. ಆ ಪುಸ್ತಕ ಈಗ ನನ್ನಲ್ಲಿದ್ದರೆ ಆಗಿನ ನನ್ನ ಧಾರ್ಮಿಕೋನ್ನತಿಯ ಮಟ್ಟವನ್ನು ತಿಳಿಸಲು ಈ ಗ್ರಂಥದಲ್ಲಿ ಸೇರಿಸುತ್ತಿದ್ದೆ. ಆದರೆ ನನ್ನ ಜೀವನಯಾತ್ರೆಯಲ್ಲಿ ಅಂಥ ಅನೇಕ ಲೇಖನಗಳನ್ನು ಎಸೆದೋ ಸುಟ್ಟೋ ಉಳಿಸುವುದು ಅನವಶ್ಯವೆಂದೋ, ನನ್ನ ವಿಸ್ತರಿತ ಕಾರ್ಯಕ್ಷೇತ್ರದಲ್ಲಿ ಸ್ಥಳವಿಲ್ಲವೆಂದೂ ನಾನೇ ಹಾಳು ಮಾಡಿದ್ದೇನೆ. ಅದೆಲ್ಲ ಇಟ್ಟಿದ್ದರೆ ನನಗೆ ವಿಶೇಷ ಹೊರೆಯೂ ವೆಚ್ಚವೂ ತಗಲುತ್ತಿದ್ದುದರಿಂದ ನಾನೇನೂ ವ್ಯಸನಪಡುವುದಿಲ್ಲ. ಅವುಗಳಿಗೆಲ್ಲ ಪೆಟ್ಟಿಗೆ, ಕಪಾಟು ಒದಗಿಸಬೇಕು. ಬಡತನದ ವ್ರತ ಹಿಡಿದಿರುವ ನನ್ನ ಕಣ್ಣಿಗೆ ಆ ಕೋರೆ ನೋಟ ಏಕೆ?

ಈ ವಿದ್ಯಾಭ್ಯಾಸ ಪ್ರಯೋಗ ನಿಷ್ಫಲವಾಗಲಿಲ್ಲ. ಮಕ್ಕಳಲ್ಲಿ ಅಸಹನೆಯ ವ್ಯಾಧಿ ಬರಲಿಲ್ಲ. ಪರಧರ್ಮದಲ್ಲೂ ರೀತಿ ನೀತಿಗಳಲ್ಲೂ ಉದಾರಭಾವದ ದೃಷ್ಟಿ ಮೂಡಿತು. ಬೆನ್ನಲ್ಲಿ ಬಿದ್ದ ಅಣ್ಣ ತಮ್ಮಂದಿರಂತೆ ಕೂಡಿ ಇರುವದನ್ನು ಕಲಿತರು. ಪರಸ್ಪರ ಸೇವೆ, ಗೌರವ, ಸಹಾಯದಲ್ಲಿ ನಿಷ್ಣಾತರಾದರು. ಟಾಲ್ ಸ್ಟಾಯ್ ಆಶ್ರಮದ ಮಕ್ಕಳು ಮುಂದೆ ಹೇಗೆ ವರ್ತಿಸಿದರೆಂಬುದನ್ನು ಗಮನಿಸಿ ಅಲ್ಲಿ ಅವರಿಗೆ ಕೊಟ್ಟ ಶಿಕ್ಷಣ

ನಿರರ್ಥಕವಾಗಲಿಲ್ಲವೆಂದು ಖಚಿತವಾಗಿ ಹೇಳುತ್ತೇನೆ. ಅಪೂರ್ಣವಾದರೂ ಅದೊಂದು ಪ್ರಗತಿಪರ ಧಾರ್ಮಿಕ ಪ್ರಯೋಗ. ಟಾಲ್‌ಸ್ಟಾಯ್ ಆಶ್ರಮದ ಸವಿ ನೆನಪುಗಳಲ್ಲಿ ಈ ಶಿಕ್ಷಣ ಪ್ರಯೋಗವೂ ಅತ್ಯಂತ ಆನಂದದಾಯಕವಾದುದು.

ಆ ಸವಿ ನೆನಪುಗಳಿಗೆ ಇನ್ನೊಂದು ಅಧ್ಯಾಯ.

೩೫. ಟಾಲ್ ಸ್ಟಾಯ್ ಆಶ್ರಮ–೩

ಈ ಅಧ್ಯಾಯದಲ್ಲಿ ಟಾಲ್‌ಸ್ಟಾಯ್ ಆಶ್ರಮದ ಕೆಲವು ಅನುಭವ ತಿಳಿಸುತ್ತೇನೆ. ಸ್ವಲ್ಪ ಅಸಂಬದ್ಧವಾದರೆ ಓದುಗರು ಕ್ಷಮಿಸಬೇಕು.

ನನಗೆ ದೊರೆತ ಶಿಷ್ಯರು ಪ್ರಾಯಶಃ ಬೇರೆ ಯಾವ ಗುರುವಿಗೂ ದೊರೆತಿರಲಾರರು. ಏಳು ವರ್ಷದಿಂದ ಇಪ್ಪತ್ತು ವರ್ಷದ ಗಂಡುಹುಡುಗರೂ ಹನ್ನೆರಡು ಹದಿಮೂರು ವರ್ಷದ ಹುಡುಗಿಯರೂ ಇದ್ದರು. ಕೆಲವು ಹುಡುಗರು ತುಂಬ ಒರಟರು. ತುಂಟರು.

ಇಂಥ ಬೆರಕೆ ಗುಂಪಿಗೆ ನಾನು ಪಾಠ ಹೇಳುವುದು ಹೇಗೆ? ಎಲ್ಲ ವಿದ್ಯಾರ್ಥಿಗಳಿಗೂ ಎಲ್ಲವನ್ನೂ ತಿಳಿಸುವದು ಹೇಗೆ? ಯಾವ ಭಾಷೆಯಲ್ಲಿ ಮಾತಾಡಿಸಬೇಕು? ತಮಿಳು ತೆಲುಗು ವಿದ್ಯಾರ್ಥಿಗಳಿಗೆ ತಮ್ಮ ಮಾತೃಭಾಷೆ, ಇಂಗ್ಲಿಷ್, ಸ್ವಲ್ಪ ಡಚ್ ಬರುತ್ತಿತ್ತು. ಅವರೊಡನೆ ಮಾತಾಡಲು ಇಂಗ್ಲಿಷ್ ಒಂದೇ ಸಾಧನ. ತರಗತಿಯನ್ನು ಎರಡು ಭಾಗ ಮಾಡಿದೆ. ಗುಜರಾತಿಗಳನ್ನು ಗುಜರಾತಿ ಭಾಷೆಯಲ್ಲೂ, ಇತರರನ್ನು ಇಂಗ್ಲಿಷ್‌ನಲ್ಲೂ ಮಾತಾಡಿಸುತ್ತಿದ್ದೆ. ಸ್ವಾರಸ್ಯವಾದ ಕಥೆ ಹೇಳುವುದು, ಓದುವುದು, ಪಾಠಕ್ರಮದ ಮುಖ್ಯ ಅಂಗವಾಗಿತ್ತು. ಅವರವರಲ್ಲಿ ಪರಸ್ಪರ ಅನ್ಯೋನ್ಯವನ್ನುಂಟು ಮಾಡಿ ಸ್ನೇಹ, ಸೇವಾದೃಷ್ಟಿ ಹುಟ್ಟುವಂತೆ ಪ್ರೋತ್ಸಾಹಿಸುತ್ತಿದ್ದೆ. ಕೆಲವರಿಗೆ ಸ್ವಲ್ಪ ಚರಿತ್ರೆ, ಭೂಗೋಳ, ಗಣಿತದ ಪರಿಚಯವನ್ನೂ ಮಾಡಿಕೊಡಬೇಕಾಗಿತ್ತು. ಪ್ರಾರ್ಥನೆಗಾಗಿ ಭಜನೆ ಹೇಳಿಕೊಟ್ಟೆ, ತಮಿಳು ಹುಡುಗರನ್ನು ಭಜನೆ ಕಲಿಯುವಂತೆ ಆಕರ್ಷಿಸಿದೆ.

ಹುಡುಗ ಹುಡುಗಿಯರು ನಿರಾತಂಕವಾಗಿ ಸೇರುತ್ತಿದ್ದರು. ಟಾಲ್ ಸ್ಟಾಯ್ ಆಶ್ರಮದಲ್ಲಿ ನಾನು ನಡೆಸಿದ ಅತ್ಯಂತ ಧೈರ್ಯದ ಪ್ರಯೋಗ ಸಹ ವಿದ್ಯಾಭ್ಯಾಸದ್ದು. ಹುಡುಗರೆಲ್ಲ ಸಂತೋಷದಿಂದಿರಲೆಂದು ಟಾಲ್ ಸ್ಟಾಯ್ ಆಶ್ರಮದಲ್ಲಿ ಕೊಟ್ಟ ಅವಕಾಶವನ್ನೂ ಶಿಕ್ಷಣವನ್ನೂ ಈಗ ಕೊಡುವ ಧೈರ್ಯವಿಲ್ಲ. ಆಗ ನನ್ನ ಮನಸ್ಸು ಬಹಳ ತಿಳಿಯಾಗಿತ್ತು; ಪ್ರಾಯಶಃ ಅಜ್ಞಾನವಿದ್ದರೂ ಇರಬಹುದು. ಈಚೆಗೆ ಅನೇಕ ಕಟು ಅನುಭವ ಬಂದಿವೆ. ಕೆಲವು ಸಲ ಬಹಳ ಕೈಸುಟ್ಟುಕೊಂಡಿದ್ದೇನೆ. ಯಾರನ್ನು ಪರಿಶುದ್ಧರೆಂದು ನಂಬಿದ್ದೆನೊ ಅವರೇ ಪತಿತರಾಗಿದ್ದಾರೆ. ನನ್ನ ಸ್ವಭಾವದಲ್ಲೇ ಆಳವಾದ ವಿಷದ ಬೇರು ಕಂಡಿದ್ದೇನೆ. ಹೇಡಿತನಕ್ಕೆ ಮಾರುಹೋಗಿದ್ದೇನೆ.

ಆ ಪ್ರಯೋಗಕ್ಕೆ ನಾನು ವ್ಯಸನಪಡುವುದಿಲ್ಲ. ಆದರಿಂದ ಯಾವ ಅನಾಹುತವೂ ನಡೆಯಲಿಲ್ಲ; ಮನಸ್ಸಾಕ್ಷಿಯಾಗಿ ನಂಬಿದ್ದೇನೆ. ಆದರೆ ಬಿಸಿ ತುಪ್ಪ ನುಂಗಿ ಗಂಟಲು ಸುಟ್ಟುಕೊಂಡ ಮಗುವಿನಂತೆ, ತಣ್ಣೀರು ಆರಿಸಿ ಕುಡಿವವನಂತೆ ಈಗ ಬಹಳ ಜಾಗರೂಕನಾಗಿದ್ದೇನೆ.

ನಂಬಿಕೆ, ಧೈರ್ಯ ಒಬ್ಬರು ತುಂಬಿದರೆ ಬಾರದು. ಗೀತಾಮಣಿಯಂತೆ 'ಸಂಶಯಾತ್ಮಾ ವಿನಶ್ಯತಿ.' ನನ್ನ ನಂಬಿಕೆ, ಧೈರ್ಯ ಪರಮಾವಧಿ ಮುಟ್ಟಿದ್ದು ಟಾಲ್ ಸ್ಟಾಯ್ ಆಶ್ರಮದಲ್ಲಿ. ಅದೇ ಮಟ್ಟಕ್ಕೆ ಏರಲು ಶಕ್ತಿ ಕೊಡೆಂದು ಪರಮಾತ್ಮನಲ್ಲಿ ಮೊರೆಯಿಡುತ್ತಿದ್ದೇನೆ. ನನ್ನ ಮೊರೆ ಇನ್ನೂ ಕೇಳಿಸಿಲ್ಲ; ನನ್ನಂತೆ ಮೊರೆಯಿಡುವವರು ಎಷ್ಟು ಜನರೊ? ಒಂದು ಸಮಾಧಾನವೇನೆಂದರೆ– ಎಷ್ಟು ಜನ ಮೊರೆಯಿಡುತ್ತಾರೋ ಎಲ್ಲರನ್ನೂ ದೇವರು ಕೇಳುತ್ತಾನೆ; ಎಂದು ಪರಮಾತ್ಮನ ಕರುಣೆಗೆ ಪಾತ್ರನಾಗುತ್ತೇನೋ ಅಂದು ನನ್ನ ಮೊರೆ ಲಾಲಿಸಿದನೆಂದು ತಿಳಿದು ಪರಮಾತ್ಮನಲ್ಲಿ ಪೂರ್ಣವಿಶ್ವಾಸ ಇಟ್ಟಿದ್ದೇನೆ.

ಇದೇ ನಾನು ನಡೆಸಿದ ಪ್ರಯೋಗ. ತುಂಟ ಹುಡುಗರನ್ನೂ ಏನೂ ಅರಿಯದ ಹುಡುಗಿಯರನ್ನೂ ಒಂದೇ ಕಡೆ ಒಟ್ಟಿಗೆ ಸ್ನಾನಕ್ಕೆ ಕಳಿಸಿದೆ. ಸತ್ಯಾಗ್ರಹತತ್ವ ಪರಿಚಯವಿದ್ದ ಅವರಿಗೆ ಇಂದ್ರಿಯನಿಗ್ರಹ ತಮ್ಮ ಕರ್ತವ್ಯವೆಂದು ತಿಳಿಸಿದ್ದೆ. ಅವರನ್ನು ತಾಯಿಯಂತೆ ಪ್ರೀತಿಸುತ್ತಿದ್ದೆ. ಅವರಿಗೂ ಅದು ಗೊತ್ತು. ಅಡಿಗೆಮನೆಗೆ ಸ್ವಲ್ಪ ದೂರದಲ್ಲಿ ಒಂದು ಬುಗ್ಗೆಯಿತ್ತೆಂದು ಹೇಳಲಿಲ್ಲವೆ? ಹುಡುಗರನ್ನು ಅಲ್ಲಿಗೆ ಸ್ನಾನಕ್ಕೆ ಕಳುಹಿಸಿದ್ದೂ ಅವರೆಲ್ಲರೂ ಪರಿಶುದ್ಧ ಮನಸ್ಕರೆಂದು ಭಾವಿಸಿದ್ದೂ ಒಂದು ತಪ್ಪೇ? ತಾಯ ಕಣ್ಣು ಯಾವಾಗಲೂ ಮಗಳ ಮೇಲೇ ಇರುವಂತೆ ನನ್ನ ದೃಷ್ಟಿ ಯಾವಾಗಲೂ ಹುಡುಗಿಯರ ಮೇಲೇ ಇತ್ತು. ಸ್ನಾನಕ್ಕೆ ಹೊರಡುವ ವೇಳೆ ನಿರ್ಧರಿಸಿತ್ತು. ಅವರೆಲ್ಲ ಒಟ್ಟಿಗೆ ಹೋಗುವುದರಲ್ಲಿ ಕ್ಷೇಮವೂ ಇತ್ತು. ಏಕಾಕಿಗಳಾಗಿರಲು ಅವಕಾಶವಿರಲಿಲ್ಲ. ಆ ವೇಳೆಗೆ ನಾನೂ ಸಾಮಾನ್ಯವಾಗಿ ಬುಗ್ಗೆಯ ಬಳಿ ಇರುತ್ತಿದ್ದೆ.

ನಾವೆಲ್ಲ ಮಲಗುತ್ತಿದ್ದದು ಒಂದು ವಿಶಾಲವಾದ ಕೈಸಾಲೆಯಲ್ಲಿ; ಸುತ್ತಲೂ ಹುಡುಗರೂ ಹುಡುಗಿಯರೂ ಹಾಸಿಗೆ ಹಾಸಿಕೊಳ್ಳುತ್ತಿದ್ದರು. ಮಧ್ಯೆ ಮೂರು ಅಡಿಗಿಂತ ಹೆಚ್ಚು ಸ್ಥಳ ಇರುತ್ತಿರಲಿಲ್ಲ. ಹಾಸಿಗೆ ಹಾಸುವುದರಲ್ಲಿ ಒಂದು ಕ್ರಮವಿತ್ತು; ದುರ್ಭಾವನೆಯಿದ್ದರೆ ಯಾವ ಕ್ರಮದಿಂದ ತಾನೆ ಏನು ಪ್ರಯೋಜನ? ಈಗ ಯೋಚಿಸಿದರೆ ಆ ಹುಡುಗ ಹುಡುಗಿಯರ ಮಾನ ಉಳಿದುದು ದೈವಚಿತ್ತವೆನ್ನಬೇಕು. ಹುಡುಗ ಹುಡುಗಿಯರು ಯಾವ ತೊಂದರೆಗೂ ಈಡಾಗದಿರಲೆಂದು ಈ ರೀತಿ ಪ್ರಯೋಗ ನಡೆಸಿದೆ. ನನ್ನಲ್ಲಿ ಅಪಾರ ವಿಶ್ವಾಸವಿಟ್ಟು ಅವರ ತಂದೆತಾಯಿಯರು ನನ್ನ ಈ ಪ್ರಯೋಗಕ್ಕೆ ಅಡ್ಡಿ ಬರಲಿಲ್ಲ.

ಒಂದು ದಿನ ಇಬ್ಬರು ಹುಡುಗಿಯರಿಗೆ ಒಬ್ಬ ಹುಡುಗ ಕುಚೇಷ್ಟೆ ಮಾಡಿದ. ಹುಡುಗಿಯರೊ, ಬೇರೊಂದು ಮಗುವೋ ನನಗೀ ವಿಷಯ ತಿಳಿಸಿದರು. ಕೇಳಿ ಮೈನಡುಗಿತು. ವಿಚಾರಿಸಿದರೆ ನಿಜವೆಂದು ತಿಳಿಯಿತು. ಯುವಕನಿಗೆ ಬುದ್ಧಿ ಹೇಳಿದೆ. ಆದರೆ ಅಷ್ಟೇ ಸಾಲದಾಗಿತ್ತು. ಆ ಹುಡುಗಿಯರ ಮೇಲೆ ಯಾರೂ ಕಣ್ಣುಹಾಕದಂತೆ, ಪ್ರತಿಯೊಬ್ಬ ಯುವಕನೂ ಎಚ್ಚರಗೊಳ್ಳುವಂತೆ ಆ ಹುಡುಗಿಯರ ಮೈಮೇಲೆ ಏನಾದರೂ ಗುರುತಿರಬೇಕೆಂದು ಯೋಚಿಸಿದೆ. ಅವರ ಮಾನ ಹರಿಸಲು ಯಾರಿಗೂ ಧೈರ್ಯಬಾರದಂತೆ ಪ್ರತಿಯೊಬ್ಬ ಹುಡುಗಿಗೂ ಪಾಠವಾಗಿರಬೇಕಾಗಿತ್ತು. ರಾಮ

ಸಾವಿರಾರು ಮೈಲಿಗಳ ದೂರವಿದ್ದರೂ ಕಾಮುಕ ರಾವಣ ಸೀತೆಯ ಕೂದಲೆಳೆ ಮುಟ್ಟಲಾಗಲಿಲ್ಲ. ಹುಡುಗಿಯರಿಗೆ ಒಂದು ಧೈರ್ಯದ ಅಸ್ತ್ರವಾಗಿ, ಕಾಮುಕನ ದೃಷ್ಟಿಗೆ ಭಯದ ಗುರುತಾಗಬಲ್ಲದ್ದು ಯಾವುದು? ಈ ಯೋಚನೆಯಲ್ಲೇ ರಾತ್ರಿಯೆಲ್ಲಾ ಕಳೆದೆ. ಬೆಳಗ್ಗೆ ಏಳುತ್ತಲೆ ತಮ್ಮ ತಲೆಯ ನೀಳ ಕೇಶರಾಶಿಯನ್ನು ಕತ್ತರಿಸಿ ಹಾಕಲು ಆ ಹುಡುಗಿಯರಿಗೆ ಹೇಳಿದೆ. ಆಶ್ರಮದಲ್ಲಿ ನಮ್ಮ ಆಯುಷ್ಕರ್ಮ ನಾವೇ ಮಾಡಿಕೊಳ್ಳುತ್ತಿದ್ದೆವು; ಆದ್ದರಿಂದ ಕತ್ತರಿ, ಕೂದಲು ಕತ್ತರಿಸುವ ಯಂತ್ರ ನಮ್ಮಲ್ಲೇ ಇದ್ದವು. ಮೊದಲು ಹುಡುಗಿಯರು ಒಪ್ಪಲಿಲ್ಲ. ಹಿರಿಯ ಹೆಂಗಸರಿಗೆ ಮುಂಚೆಯೆ ಪರಿಸ್ಥಿತಿ ತಿಳಿಸಿದ್ದೆ. ಮೊದಲು ಅವರೂ ಸಮ್ಮತಿಸಲಿಲ್ಲ; ನನ್ನ ಉದ್ದೇಶ ತಿಳಿದು ಕೊನೆಗೆ ನನ್ನ ಸಲಹೆಗೆ ಬೆಂಬಲಕೊಟ್ಟರು. ಆ ಇಬ್ಬರು ಹುಡುಗಿಯರೂ ಕುಲೀನರು. ಒಬ್ಬಾಕೆ ಈಗ ಬದುಕಿಲ್ಲ. ಆಕೆ ಮಹಾ ಚತುರೆ, ಹಸನ್ಮುಖಿ. ಇನ್ನೊಬ್ಬಾಕೆ ತನ್ನ ಕುಟುಂಬದ ಒಡತಿಯಾಗಿ ಬದುಕಿದ್ದಾಳೆ. ಕೊನೆಗೆ ಆ ಹುಡುಗಿಯರೂ ಒಪ್ಪಿದರು. ಈ ಕಥೆ ಬರೆಯುವ ಕೈಯೇ ಅವರ ಕೂದಲನ್ನೆಲ್ಲಾ ಕತ್ತರಿಸಿ ಹಾಕಿತು. ಇದನ್ನೆಲ್ಲ ವಿದ್ಯಾರ್ಥಿಗಳಿಗೆ ವಿಮರ್ಶಾ ಪೂರ್ವಕ ವಿಶದಗೊಳಿಸಿದೆ. ಉತ್ತಮ ಪರಿಣಾಮವಾಯಿತು. ಪುನಃ ಕುಚೇಷ್ಟೆಯ ದೂರು ಕೇಳಲೇ ಇಲ್ಲ. ಆ ಹುಡುಗಿಯರಿಗೆ ಇದರಿಂದ ಏನೂ ನಷ್ಟವಾಗಲಿಲ್ಲ. ಅವರ ಧೈರ್ಯ ಹೆಚ್ಚಾಯಿತು. ಯುವಕರು ಈ ಸನ್ನಿವೇಶವನ್ನು ನೆನೆದು ಪಾಪ ದೂರವಾಗಲಿ.

ಎಲ್ಲರೂ ಅನುಕರಿಸಲೆಂದು ನನ್ನ ಪ್ರಯೋಗಗಳ ವಿವರ ಕೊಡುತ್ತಿಲ್ಲ. ಹಾಗೆ ಮಾಡುವ ಗುರು ಬಹಳ ಅಪಾಯಕ್ಕೀಡಾದಾನು. ಸತ್ಯಾಗ್ರಹದ ಪರಿಶುದ್ಧತೆ ಒತ್ತಿ ಹೇಳಲು, ಇಂಥ ಸಂದರ್ಭಗಳಲ್ಲಿ ಒಬ್ಬ ಮನುಷ್ಯ ಎಷ್ಟು ದೂರ ಸಾಗಬಹುದೆಂದು ತಿಳಿಸಲು ಈ ವಿಷಯ ಹೇಳುತ್ತಿದ್ದೇನೆ. ವಿಜಯಕ್ಕೆ ಭರವಸೆ ಈ ಪರಿಶುದ್ಧತೆ. ಈ ಪ್ರಯೋಗ ಪ್ರಾರಂಭಿಸುವ ಮೊದಲು ಗುರುವು ಶಿಷ್ಯರಿಗೆ ತಾಯಿತಂದೆಯಾಗಬೇಕು; ಎಲ್ಲ ಫಲಕ್ಕೂ ಸಿದ್ಧನಿರಬೇಕು. ಉತ್ತಮ ಸಂಯಮಿಗೆ ಮಾತ್ರ ಇಂಥ ಪ್ರಯೋಗ ಸಾಧ್ಯ.

ಈ ನನ್ನ ಪ್ರಯೋಗದಿಂದ ಆಶ್ರಮವಾಸಿಗಳ ಇಡೀ ಜೀವನದ ಮೇಲೆ ಪ್ರಭಾವ ಬೀಳದಿರಲಿಲ್ಲ. ಸಾಧ್ಯವಾದಷ್ಟು ಮಿತವ್ಯಯ ಮಾಡಬೇಕೆಂದು ಉಡಿಗೆ ಬದಲಿಸಿದೆವು. ಪಟ್ಟಣಗಳಲ್ಲಿ ಸತ್ಯಾಗ್ರಹಿಗಳೂ ಎಲ್ಲ ಭಾರತೀಯಾ ಯೂರೋಪಿಯನ್ ಬಟ್ಟೆ ತೊಡುತ್ತಿದ್ದರು. ಆಶ್ರಮದಲ್ಲಿ ಅಷ್ಟು ಹೆಚ್ಚು ಬಟ್ಟೆ ಅನವಶ್ಯಕ. ನಾವೆಲ್ಲ ಕೂಲಿಗಾರರಾದ್ದರಿಂದ, ಯೂರೋಪಿಯನ್ ಕೂಲಿಗಳಂತೆ, ಸೆರೆಮನೆ ಬಂದಿಗಳಂತೆ ಒಂದು ಷರಾಯಿ, ಒಂದು ಅಂಗಿ ಧರಿಸುತ್ತಿದ್ದೆವು. ಸುಲಭವಾಗಿ ದೊರೆಯುತ್ತಿದ್ದ ದಪ್ಪನಾದ ನೀಲಿ ಬಟ್ಟೆಯಲ್ಲಿ ಉಡುಪು ಹೊಲಿಸುತ್ತಿದ್ದೆವು. ಆಶ್ರಮದ ಹೆಂಗಸರು ಹೊಲಿಗೆಯಲ್ಲಿ ಎತ್ತಿದ ಕೈಯಾದ್ದರಿಂದ ಅವರೇ ಹೊಲಿದರು.

ಅನ್ನ, ಬೇಳೆಸಾರು, ಕಾಯಿಪಲ್ಯ; ಆಗಾಗ ರೊಟ್ಟಿ, ಅಂಬಲಿ: ಇದು ನಮ್ಮ ಆಹಾರ. ಸೆರೆಮನೆಯಲ್ಲಿ ಬಂದಿಗಳಿಗೆ ಕೊಡುತ್ತಿದ್ದಂಥ ತಟ್ಟೆಯಲ್ಲಿ–ತಟ್ಟೆಯಲ್ಲ, ದುಂಡುಪಾತ್ರೆಯಲ್ಲಿ–ಬಡಿಸುತ್ತಿದ್ದೆವು. ನಾವೇ ಮರದ ಚಮಚ ಮಾಡಿಕೊಂಡೆವು. ದಿನಕ್ಕೆ ಮೂರು ಊಟ. ಬೆಳಿಗ್ಗೆ ಆರು ಗಂಟೆಗೆ ರೊಟ್ಟಿ, ಗೋಧಿ ಕಾಫಿ* ಹನ್ನೊಂದು ಗಂಟೆಗೆ ಅನ್ನ, ಹುಳಿ, ಪಲ್ಯ; ಸಂಜೆ ಐದೂವರೆ ಗಂಟೆಗೆ ಗೋದಿ ಗಂಜಿ, ಹಾಲು ಅಥವಾ ರೊಟ್ಟಿ, ಕಾಫಿ. ಸಂಜೆ ಊಟವಾದ ಮೇಲೆ ಏಳು ಅಥವಾ ಏಳೂವರೆ ಗಂಟೆಗೆ ಪ್ರಾರ್ಥನೆ. ಕೀರ್ತನೆಗಳನ್ನು ಹಾಡುತ್ತಿದ್ದೆವು; ಕೆಲವು ವೇಳೆ ರಾಮಾಯಣ ಅಥವಾ ಮಹಮ್ಮದೀಯ ಗ್ರಂಥಗಳ ಶ್ಲೋಕಪಠಣೆ. ಭಜನೆಗಳು ಇಂಗ್ಲಿಷ್, ಹಿಂದಿ ಅಥವಾ ಗುಜರಾತಿಯಲ್ಲಿರುತ್ತಿದ್ದವು. ಕೆಲವು ವೇಳೆ ಒಂದೊಂದು ಭಾಷೆಯಲ್ಲಿ ಒಂದೊಂದು, ಕೆಲವು ಸಲ ಒಂದೇ ಭಜನೆಗಳು ಇಂಗ್ಲಿಷ್, ಹಿಂದಿ ಅಥವಾ ಗುಜರಾತಿಯಲ್ಲಿರುತ್ತಿದ್ದವು. ಕೆಲವು ವೇಳೆ ಒಂದೊಂದು ಭಾಷೆಯಲ್ಲಿ ಒಂದೊಂದು, ಕೆಲವು ಸಲ ಒಂದೇ ಭಜನೆ. ಒಂಭತ್ತು ಗಂಟೆಗೆ ಎಲ್ಲರೂ ಮಲಗುತ್ತಿದ್ದೆವು.

ಉಪವಾಸದಲ್ಲಿ ತುಂಬ ಅನುಭವವಿದ್ದ ಪಿ.ಕೆ.ಶರ್ಮರು ನಮ್ಮೊಟ್ಟಿಗೆ ಬಂದರು. ಕೆಲವರು ಚಾತುರ್ಮಾಸದಲ್ಲಿ ಅವರೊಂದಿಗೆ ಉಪವಾಸಕ್ಕೆ ಸೇರಿಕೊಂಡರು. ಅಷ್ಟರಲ್ಲೆ ರಮ್‌ಜಾನ್ ಸಹ ಬಂತು ನಮ್ಮಲ್ಲಿ ಮುಸಲ್ಮಾನ್ ಯುವಕರೂ ಇದ್ದರು. ಉಪವಾಸವಾಚರಿಸಲು ಅವರನ್ನು ಪ್ರೋತ್ಸಾಹಿಸಲು ಯೋಚಿಸಿದೆವು. ಸಂಜೆ ಬೆಳಗಿನ ಜಾವ ಅವರಿಗೆ ಊಟಕ್ಕೆ ಏರ್ಪಾಟು ಮಾಡಿದೆವು. ಸಂಜೆಗೆ ಗಂಜಿ ಮಾಡಿಸುತ್ತಿದ್ದೆವು. ಮಾಂಸವಂತೂ ಇಲ್ಲ ; ಯಾರೂ ಕೇಳುತ್ತಲೂ ಇರಲಿಲ್ಲ. ನಮ್ಮ ಮುಸಲ್ಮಾನ್ ಸಹೋದರರ ಜೊತೆಗಿರಲು ನಾವೂ ಸಹ ದಿನವೂ ಸಂಜೆಗೊಂದೇ ಊಟ ಮಾಡುತ್ತಿದ್ದೆವು. ಆದ್ದರಿಂದ ಮುಸಲ್ಮಾನ್ ಹುಡುಗರು ಊಟಕ್ಕೆ ಕೊಡುವ ಹೊತ್ತಿಗೆ ಇತರರು ಮುಗಿಸುತ್ತಿದ್ದುದೊಂದೇ ವ್ಯತ್ಯಾಸ. ಆ ಹುಡುಗರು ಉಪವಾಸ ಮಾಡುತ್ತಿದ್ದರೂ ಯಾರಿಗೂ ತೊಂದರೆ ಕೊಡುತ್ತಿರಲಿಲ್ಲ. ಅವರ ಉಪವಾಸದಲ್ಲಿ ಮುಸಲ್ಮನೇತರ ಮಕ್ಕಳೂ ಪ್ರೋತ್ಸಾಹ ಕೊಟ್ಟಿದ್ದು ಎಲ್ಲರಲ್ಲೂ ಸತ್ಪರಿಣಾಮ ಉಂಟುಮಾಡಿತು. ಧರ್ಮದ

ಟೀ. ಕಾಫಿ, ಕೋಕೋಗಳಿಗೆ ಬದಲಾಗಿ ದುಷ್ಪರಿಣಾಮವಿಲ್ಲದ ಪುಷ್ಟಿಯಾದ ಪಾನೀಯ ಈ ರೀತಿ ಮಾಡಬಹುದು. ಕಾಫಿ ರುಚಿಯಲ್ಲಿ ಅತ್ಯಂತ ಅನುಭವಸ್ಥರಿಗೆ ಕೂಡ ವ್ಯತ್ಯಾಸ ಕಂಡು ಹಿಡಿಯಲು ಸಾಧ್ಯವಿಲ್ಲ. ಗೋಧಿ ಚೆನ್ನಾಗಿ ಶುದ್ಧ ಮಾಡಿ ಕೆಂಪು ಹತ್ತಿ ಕಪ್ಪುಬಣ್ಣಕ್ಕೆ ತಿರುಗುವವರೆಗೂ ಹುರಿಯಬೇಕು. ಆ ಮೇಲೆ ಕಾಫಿಯಂತೆ ಪುಡಿ ಮಾಡಬೇಕು. ಒಂದು ಲೋಟಾದಲ್ಲಿ ಒಂದು ಚಮಚ ಪುಡಿ ಹಾಕಿ ಅದರ ಮೇಲೆ ಮರಳುವ ನೀರು ಸುರಿಯಬೇಕು. ಒಂದು ನಿಮಿಷ ಒಲೆಯ ಮೇಲೆ ಮರಳಿಸಿದರೆ ಉತ್ತಮ. ರುಚಿಗೆ ತಕ್ಕಂತೆ ಹಾಲು ಸಕ್ಕರೆ ಹಾಕಿ ಕುಡಿಯಬಹುದು. ಇಲ್ಲವೆ. ಹಾಗೇನೇ ಕುಡಿಯಬಹುದು.

–ಗಾಂಧೀಜಿಯವರ 'ಆರೋಗ್ಯ' ಎಂಬ ಗುಜರಾತಿ ಪುಸ್ತಕದಿಂದ.

ಹೆಸರಿನಲ್ಲಿ ಹಿಂದೂ, ಮುಸಲ್ಮಾನ್ ಹುಡುಗರೊಳಗೆ ವ್ಯಾಜ್ಯವಾಗಲಿ ಒಡಕಾಗಲಿ ಹುಟ್ಟಿದ್ದು ನನಗೆ ನೆನಪಿಲ್ಲ. ಅವರವರು ಅವರವರ ಧರ್ಮಾಚರಣೆಯಲ್ಲಿ ಪರಸ್ಪರ ಗೌರವ ತೋರಿ, ಪರಸ್ಪರ ಮತಾನುಷ್ಠಾನಗಳಲ್ಲಿ ಸಹಾಯಕರಾದರು.

ಪಟ್ಟಣದಿಂದ ನಾವು ಬಹುದೂರದಲ್ಲಿದ್ದರೂ ಚಿಕಿತ್ಸೆಗಾಗಿ ಸಾಮಾನ್ಯ ವೈದ್ಯ ಸಲಕರಣೆಗಳನ್ನೂ ಇಟ್ಟುಕೊಂಡಿರಲಿಲ್ಲ. ಆ ಕಾಲದಲ್ಲಿ ಮಕ್ಕಳ ನಿಷ್ಕಲ್ಮಷತೆಯಲ್ಲಿ ನನಗೆ ಹೇಗೆ ನಂಬುಗೆಯಿತ್ತೋ ಹಾಗೆ ಔಷಧಿಗಳ ಸಹಾಯವಿಲ್ಲದೆ ಸ್ವಾಭಾವಿಕವಾಗಿ ರೋಗನಿವಾರಣೆ ಮಾಡಬಹುದೆಂದೂ ನಂಬಿಕೆ ಇತ್ತು. ಸರಳ ಜೀವನದಲ್ಲಿ ಕಾಯಿಲೆಗೆ ಕಾರಣವೇ ಇಲ್ಲವೆಂದೂ, ಬಂದರೂ ಗುಣಮಾಡಬಹುದೆಂದೂ ಧೈರ್ಯವಿತ್ತು; ಆರೋಗ್ಯದ ಬಗ್ಗೆ ನಾನು ಬರೆದ ಪುಸ್ತಕ ಆ ಕಾಲದ ನನ್ನ ಪ್ರಯೊಗಗಳ, ಆತ್ಮೀಯ ವಿಶ್ವಾಸದ ಪ್ರತಿಬಿಂಬ. ನನಗಂತೂ ರೋಗಿಯಾಗಲು ಅಸಾಧ್ಯವೆಂದು ಆಗ ನನ್ನ ಹೆಮ್ಮೆ. ಎಲ್ಲ ರೋಗಗಳನ್ನೂ ಮಣ್ಣು, ನೀರು, ಉಪವಾಸ ಆಹಾರ ವ್ಯತ್ಯಾಸಗಳಿಂದ ಗುಣ ಮಾಡಬಹುದೆಂದು ನಾನು ನಂಬಿದ್ದೆ. ಆಶ್ರಮದಲ್ಲಿ ಯಾವ ಕಾಯಿಲೆಗೂ ಔಷಧಿ ಉಪಯೊಗಿಸಲಿಲ್ಲ, ವೈದ್ಯರನ್ನು ಕರೆಸಲಿಲ್ಲ. ಉತ್ತರ ಹಿಂದೂಸ್ತಾನದ ಎಪ್ಪತ್ತು ವರ್ಷದ ಮುದುಕನೊಬ್ಬನಿಗೆ ಗೂರಲೂ ಕೆಮ್ಮೂ ಇತ್ತು. ಆಹಾರ ವ್ಯತ್ಯಾಸದಿಂದಲೂ ನೀರಿನ ಉಪಯೋಗದಿಂದಲೂ ಆತನ ಕಾಯಿಲೆ ವಾಸಿಮಾಡಿದೆ. ಈಗ ನನಗೆ ಆ ಧೈರ್ಯವಿಲ್ಲ. ಈಚೆಗೆ ಎರಡು ಸಲ ಕಾಯಿಲೆ ಬಿದ್ದು ಆ ಪ್ರಯೋಗ ನಡೆಸುವ ಸಾಮರ್ಥ್ಯ ಕಳೆದುಕೊಂಡಿದ್ದೇನೆ.

ನಾವು ಆಶ್ರಮದಲ್ಲಿರುವಾಗಲೇ ಗೋಖಲೆ ದಕ್ಷಿಣ ಆಫ್ರಿಕಕ್ಕೆ ಬಂದರು. ಅವರ ಸಂಚಾರದ ವಿಷಯ ಇನ್ನೊಂದು ಅಧ್ಯಾಯದಲ್ಲಿ ತಿಳಿಸುತ್ತೇನೆ. ಆದರೆ ಅರೆ ಕಹಿ, ಅರೆಸವಿ ಆದ ಒಂದು ಅನುಭವವನ್ನು ಇಲ್ಲಿ ತಿಳಿಸುತ್ತೇನೆ. ನಮ್ಮ ಜೀವನಕ್ರಮದ ಪರಿಚಯ ತಕ್ಕಷ್ಟು ಮಾಡಿಕೊಟ್ಟಿದ್ದೇನೆ. ಆಶ್ರಮದಲ್ಲಿ ಮಂಚ ಇರಲಿಲ್ಲ; ಗೋಖಲೆಯವರಿಗೆಂದು ಒಂದನ್ನು ಎರವು ತಂದೆವು. ಏಕಾಂತವಾಗಿ ಪೂರ್ಣ ವಿಶ್ರಾಂತಿ ಪಡೆಯಲು ಒಂದು ಕೋಣೆಯೂ ಇರಲಿಲ್ಲ. ಕುಳಿತುಕೊಳ್ಳಲು ಶಾಲೆಯ ಬೆಂಚು ವಿನಾ ಬೇರೇನೂ ಇರಲಿಲ್ಲ. ಹೀಗಿದ್ದರೂ ಗೋಖಲೆಯವರ ದೇಹಾರೋಗ್ಯ ಸೂಕ್ಷ್ಮವಿದ್ದರೂ, ಆಶ್ರಮಕ್ಕೆ ಕರೆಯದಿರಲಾದೀತೆ? ಒಂದು ರಾತ್ರಿ ಮಟ್ಟಿಗೆ ಗೋಖಲೆಯವರು ನಮ್ಮ ಆಶ್ರಮ ನೋಡದೆ ಹೋದಾರೆ? ಒಂದು ರಾತ್ರಿ ಮಟ್ಟಿಗೆ ಗೋಖಲೆಯವರು ನಮ್ಮ ತೊಂದರೆಗಳನ್ನು ಸಹಿಸಬಹುದೆಂದೂ ರೈಲು ನಿಲ್ದಾಣದಿಂದ ಆಶ್ರಮಕ್ಕೆ ಒಂದೂವರೆ ಮೈಲಿ ನಡಿಯಬಹುದೆಂದೂ ಯೋಚಿಸಿ ನಾನು ಬೆಪ್ಪು ಕೆಲಸ ಮಾಡಿದೆ. ನಾನು ಮೊದಲೇ ತಿಳಿಸಿದ್ದೆ. ಆದರೆ ಅವರ ಸರಳ ಸ್ವಭಾವದಿಂದ, ನನ್ನ ಮೇಲಿನ ಅಪಾರ ವಿಶ್ವಾಸದಲ್ಲಿ ಯಾವುದನ್ನೂ ಯೋಚಿಸದೆ ಎಲ್ಲಕ್ಕೂ ಒಪ್ಪಿದ್ದರು. ದುರದೃಷ್ಟವಶಾತ್ ಆ ದಿನ ಮಳೆ ಬೇರೆ ಬಂತು; ಏಕಾಏಕಿ ಹೆಚ್ಚಿನ ಏರ್ಪಾಟುಮಾಡಲು ಸಾಧ್ಯವಾಗಲಿಲ್ಲ. ನನ್ನ ಮೂಢಪ್ರೇಮದ ಭರದಲ್ಲಿ ಆ ದಿನ ಗೋಖಲೆಯವರಿಗೆ

ಕೊಟ್ಟ ತೊಂದರೆಯನ್ನೆಂದಿಗೂ ಮರೆಯಲಾರೆ. ಅವರಿಂದ ಸಹಿಸಲಾಗದೆ ಶೀತವಾಯಿತು. ಅಡಿಗೆ ಮನೆಗೂ ಊಟದಮನೆಗೂ ಕರೆದುಕೊಂಡು ಹೋಗುವಂತಿರಲಿಲ್ಲ. ಕಾಲೆನ್ ಬಾಕ್‌ರ ಕೊಠಡಿಯಲ್ಲಿ ಅವರನ್ನು ಇಳಿಸಿದ್ದೆವು. ಅಡಿಗೆ ಮನೆಯಿಂದ ಅವರ ಕೋಣೆಗೆ ಊಟ ತರುವ ಹೊತ್ತಿಗೆ ತಣ್ಣಗಾಗುತ್ತಿತ್ತು. ಅವರಿಗಾಗಿ ನಾನು ಬೇರೆ ಸಾರನ್ನೂ, ಕೊತ್ವಾಲರು ರೊಟ್ಟಿಯನ್ನೂ ಮಾಡಿದ್ದೆವು; ಆದರೆ ಬಿಸಿಯಾಗಿ ಒಯ್ಯಲಾಗಲಿಲ್ಲ. ಎಷ್ಟು ಸಾಧ್ಯವೋ ಅಷ್ಟು ಮಾಡಿದೆವು. ಗೋಖಲೆಯವರು ಒಂದು ಮಾತೂ ಆಡಲಿಲ್ಲ. ಆದರೆ ಅವರ ಮುಖ ನೋಡಿದೊಡನೆ ನನ್ನ ತಪ್ಪು ಗೊತ್ತಾಯಿತು. ನಾವೆಲ್ಲಾ ನೆಲದ ಮೇಲೆ ಮಲಗುತ್ತೇವೆಂದು ಕೇಳಿ ಅವರೂ ತಮ್ಮ ಹಾಸಿಗೆಯನ್ನೂ ನೆಲದ ಮೇಲೆ ಹಾಸಿಕೊಂಡರು. ಆ ರಾತ್ರಿಯೆಲ್ಲಾ ವ್ಯಸನದಿಂದ ತಳಮಳಿಸಿದೆ. ಗೋಖಲೆಯವರ ಒಂದು ಅಭ್ಯಾಸ ಮಾತ್ರ ನನಗೆ ಸರಿಬೀಳಲಿಲ್ಲ. ಪರಿಚಾರಕನನ್ನು ಹೊರತು ಬೇರೆ ಯಾರನ್ನೂ ಅವರು ತಮ್ಮ ಸೇವೆ ಮಾಡಲು ಬಿಡುತ್ತಿರಲಿಲ್ಲ. ಈ ಪ್ರವಾಸದಲ್ಲಿ ಅವರ ಜೊತೆಗೆ ಸೇವಕನಾರೂ ಇರಲಿಲ್ಲ. ಅವರ ಕಾಲು ಹಿಚುಕಲು ನಾನೂ ಕಾಲೆನ್‌ಬಾಕ್‌ರೂ ಬಹಳ ಕೇಳಿಕೊಂಡೆವು. ಸ್ವಲ್ಪ ಹಾಸ್ಯದಿಂದ ಸ್ವಲ್ಪ ಸಿಟ್ಟಿನಿಂದ "ನೀವು ಹುಟ್ಟಿರುವುದು ಕಷ್ಟ, ಅನನುಕೂಲ ಸಹಿಸಲಿಕ್ಕೆ. ನನ್ನಂಥವರು ಇರುವದು ನಿಮ್ಮಿಂದ ಸೇವೆಮಾಡಿಸಿಕೊಳ್ಳುವದಕ್ಕೆ ಎಂದು ತಿಳಿದಿದ್ದೀರಿ. ಆ ತಪ್ಪಿಗೆ ಈಗ ಶಿಕ್ಷೆ ಅನುಭವಿಸಿರಿ. ನನ್ನನ್ನು ನೀವು ಮುಟ್ಟಲು ನಾನು ಒಪ್ಪುವದಿಲ್ಲ. ದೇಹಬಾಧೆಗಾಗಿ ನೀವೇನೋ ಬಹಿರ್ದೇಶಕ್ಕೆ ಹೋಗಿ, ನನಗೆ ಮಾತ್ರ ಇಲ್ಲಿಯೇ ಹೊಲಸುಮಾಡಲು ಹೇಳುತ್ತಿರೇನು? ಎಷ್ಟು ಕಷ್ಟವಾದರೂ ನಾನು ಸಹಿಸುತ್ತೇನೆ; ನಿಮಗೆ ಬುದ್ಧಿ ಕಲಿಸುತ್ತೇನೆ" ಎಂದು ಹೇಳಿ ತಮ್ಮ ಮೈಮುಟ್ಟಲು ಅವಕಾಶ ಕೊಡಲಿಲ್ಲ. ಈ ಮಾತಿನಿಂದ ನಮಗೆ ಸಿಡಿಲು ಬಡಿದಂತಾಗಿ ನಾನೂ ಕಾಲೆನ್ ಬಾಕ್ ರೂ ಬಹಳ ವ್ಯಸನಪಟ್ಟೆವು. ಗೋಖಲೆಯವರು ಸದಾ ಹಸನ್ಮುಖಿಗಳಾಗಿದ್ದುದೇ ನಮಗೊಂದು ತೃಪ್ತಿ. ಪರಮಾತ್ಮನೆಂದರಿಯದೆ, ತನ್ನ ಅಪಾರ ಪ್ರೇಮಭರದಲ್ಲಿ ಶ್ರೀಕೃಷ್ಣನನ್ನು ಅರ್ಜುನ ಅನೇಕ ಬಾರಿ ಕೆರಳಿಸುತ್ತಿದ್ದ. ಆದರೆ ಮರುಕ್ಷಣದಲ್ಲೇ ಸ್ವಾಮಿ ಅದನ್ನೆಲ್ಲ ಮರೆಯುತ್ತಿದ್ದ. ತಮ್ಮ ಸೇವೆಗೆ ಅವಕಾಶ ಕೊಡದಿದ್ದರೂ, ಗೋಖಲೆಯವರು ತಮ್ಮ ಸೇವಾಕಾತರತೆಯನ್ನು ಮರೆಯಲಿಲ್ಲ. ಮೊಂಬಾಸದಿಂದ ಅವರು ಬರೆದ ಅಗಾಧ ಪ್ರೇಮ ಪೂರ್ಣ ಪತ್ರ ಇನ್ನೂ ನನ್ನ ಹೃದಯದಲ್ಲಿ ಅಚ್ಚಳಿಯದೆ ಮೂಡಿದೆ. ಗೋಖಲೆಯವರು ಎಲ್ಲಾ ಕಷ್ಟಗಳನ್ನೂ ಆನಂದದಿಂದ ಅನುಭವಿಸಿದರು. ಕೊನೆಯವರೆಗೂ ತಮ್ಮ ಸೇವೆಗೆ ನಮಗೆ ಅವಕಾಶ ಕೊಡಲಿಲ್ಲ. ನಮ್ಮ ಕೈಯಿಂದ ಊಟ ಮಾತ್ರ ಮಾಡುತ್ತಿದ್ದರು. ಅದು ಅನಿರ್ವಾಹ ಪಕ್ಷ.

ಮರು ಬೆಳಿಗ್ಗೆ ತಾವೂ ವಿಶ್ರಾಂತಿ ತೆಗೆದುಕೊಳ್ಳಲಿಲ್ಲ; ನಮಗೂ ಕೊಡಲಿಲ್ಲ. ಗ್ರಂಥರೂಪದಲ್ಲಿ ನಾವು ಪ್ರಕಟಿಸಬೇಕೆಂದ ಅವರ ಭಾಷಣಗಳನ್ನೆಲ್ಲ ತಿದ್ದಿಕೊಟ್ಟರು. ಏನಾದರೂ ಬರೆಯುವಾಗ, ಓಡಾಡುತ್ತ ಯೋಚನೆ ಮಾಡುವ ಅಭ್ಯಾಸ ಅವರಿಗೆ. ಒಂದು ಸಣ್ಣ ಕಾಗದ ಬರೆಯಬೇಕಾಗಿತ್ತು. ಬೇಗ ಮುಗಿಸುತ್ತಾರೆಂದೆಣಿಸಿದೆ. ಇಲ್ಲ; ಅವರನ್ನು ನಾನು ಹಾಸ್ಯ ಮಾಡಿದಾಗ ಒಂದು ಗಾದೆ ಹೇಳುತ್ತ " ನನ್ನ ಜೀವನರೀತಿ

ನೀನು ಅರಿಯೆ; ಅವಸರದಲ್ಲಿ ನಾನು ಏನನ್ನೂ ಮಾಡುವುದಿಲ್ಲ. ಚೆನ್ನಾಗಿ ಯೋಚಿಸಿ, ತಿರುಳು ಏನು ಎಂದು ನಿರ್ಧರಿಸುತ್ತೇನೆ. ವಿಷಯಕ್ಕೆ ಅನುಗುಣವಾದ ಭಾಷೆ ಯೋಚಿಸಿ ಅನಂತರ ಬರೆಯುತ್ತೇನೆ. ಎಲ್ಲರೂ ನನ್ನಂತೆ ಮಾಡಿದರೆ ಎಷ್ಟು ಕಾಲ ಉಳಿಸಬಹುದೋ? ಅಪಕ್ವ ಭಾವನೆಗಳಿಂದ ರಾಷ್ಟ್ರವನ್ನು ಕಾಪಾಡಬಹುದು."

ಗೋಖಲೆಯವರ ಭೇಟಿಯ ವಿವರವಿಲ್ಲದೆ ಟಾಲ್ ಸ್ಟಾಯ್ ಆಶ್ರಮದ ಅನುಭವ ಎಷ್ಟು ಅಪೂರ್ಣವೋ ಹಾಗೆಯೆ ಕಾಲೆನ್‌ಬಾಕ್‌ರ ಗುಣನಡತೆಗಳ ಪರಿಚಯವೂ ಅತ್ಯಾವಶ್ಯಕ. ನಮ್ಮ ಪೈಕಿ ಒಬ್ಬರಂತೆ ಟಾಲ್ ಸ್ಟಾಯ್ ಆಶ್ರಮದಲ್ಲಿ ನಮ್ಮ ಜನರ ನಡುವೆ ಅವರು ಹೇಗೆ ವಾಸವಾಡಿದರೊ ಆಶ್ಚರ್ಯ. ಸರ್ವಸಾಮಾನ್ಯ ವಸ್ತುಗಳಿಂದ ಗೋಖಲೆಯವರ ಮನವೊಲಿಸುವುದು ಸಾಧ್ಯವಿರಲಿಲ್ಲ, ಆದರೆ ಕಾಲೆನ್‌ಬಾಕ್‌ರ ಜೀವನದ ಕ್ರಾಂತಿಯಿಂದ ಗೋಖಲೆಯವರೂ ತುಂಬ ಆಕರ್ಷಿತರಾದರು. ಕಾಲೆನ್ ಬಾಕ್‌ರು ಆಗರ್ಭ ಶ್ರೀಮಂತರು. ಕನಸಿನಲ್ಲಿಯೂ ಕಷ್ಟ ಕಂಡರಿಯರು. ಅವರಿಗೆ ಧರ್ಮದ ಒಲುಮೆ. ಜೀವನದ ಸರ್ವಸುಖವನ್ನೂ ಅನುಭವಿಸಿದವರು. ಐಶ್ವರ್ಯದಿಂದ ದೊರೆಯಬಹುದಾದ ಯಾವ ಸುಖವನ್ನೂ ಅನುಭವಿಸದೆ ಬಿಟ್ಟಿರಲಿಲ್ಲ.

ಇಂತಹ ವ್ಯಕ್ತಿ ಟಾಲ್‌ಸ್ಟಾಯ್ ಆಶ್ರಮದಲ್ಲಿ ವಾಸಮಾಡಿ, ಬಾಳು ನಡೆಸುವದು ಸುಲಭವಲ್ಲ. ಭಾರತೀಯರಿಗೆ ಅದೇ ಆಶ್ಚರ್ಯ. ಕೆಲವು ಯೂರೋಪಿಯನ್‌ರು ಕಾಲೆನ್‌ಬಾಕ್‌ನನ್ನು ಹುಚ್ಚನೆಂದರು; ಇನ್ನು ಕೆಲವರು ಆತನ ತ್ಯಾಗಬುದ್ಧಿಯನ್ನು ಗೌರವಿಸಿದರು. ಕಾಲೆನ್‌ಬಾಕ್ ಈ ತ್ಯಾಗಕ್ಕಾಗಿ ಎಂದೂ ವ್ಯಸನಪಟ್ಟವನಲ್ಲ. ಮೊದಲಿನ ಭೋಗಜೀವನದಂತೆ ಈ ತ್ಯಾಗಜೀವನದಲ್ಲೂ ಆನಂದಪಟ್ಟನು. ಸರಳಜೀವನದ ಸೌಖ್ಯ ಬಣ್ಣಿಸುವಾಗ ತಲ್ಲೀನರಾಗಿ ಮೈಮರೆಯುತ್ತಿದ್ದರು. ಕೇಳಿದವರಿಗೆ ಆ ಸಮಯಕ್ಕಾದರೂ ಸರಳ ಜೀವನ ಅವಲಂಬಿಸಬೇಕೆಂಬ ಭಾವನೆ ಬರುತ್ತಿತ್ತು. ಚಿಕ್ಕವರು ದೊಡ್ಡವರೆನ್ನದೆ ಎಲ್ಲರೊಂದಿಗೂ ಪ್ರೀತಿಯಿಂದ ಬೆರೆಯುತ್ತಿದ್ದರು. ಅವರು ಸ್ವಲ್ಪ ಹೊತ್ತು ಕಣ್ಮರೆಯಾದರೂ ನಮ್ಮ ಜೀವನದಲ್ಲಿ ಏನೋ ಕಳೆದುಕೊಂಡಂತೆ ಅನಿಸುತ್ತಿತ್ತು. ಕಾಲೆನ್ ಬಾಕ್‌ರಿಗೆ ಹಣ್ಣುಗಿಡಗಳ ಮೇಲೆ ಬಹಳ ಮಮತೆ. ತೋಟದ ಕೆಲಸ ಅವರೇ ಇಟ್ಟುಕೊಂಡರು. ಪ್ರತಿ ದಿನ ಬೆಳಗ್ಗೆ ಮಕ್ಕಳನ್ನೂ ದೊಡ್ಡವರನ್ನೂ ಕರೆದುಕೊಂಡು ಹಣ್ಣಿನ ಗಿಡಗಳ ಆರೈಕೆ ಮಾಡುತ್ತಿದ್ದರು. ಪಟ್ಟು ಹಿಡಿದು ಕೆಲಸ ತೆಗೆದುಕೊಳ್ಳುತ್ತಿದ್ದರು. ಆತನ ಸ್ನೇಹಪರತೆ, ಹಸನ್ಮುಖದಿಂದ ಎಲ್ಲರಿಗೂ ಆತನೊಂದಿಗೆ ಕೆಲಸ ಮಾಡಲು ಉತ್ಸಾಹವೆ. ಬೆಳಗಿನ ಜಾವ ಎರಡು ಗಂಟೆಗೆ ಜೋಹಾನ್ಸ್ ಬರ್ಗ್‌ಗೆ ಯಾರಾದರೂ ಆಶ್ರಮದಿಂದ ಹೊರಟರೆ ಜೊತೆಗೆ ಕಾಲೆನ್‌ಬಾಕ್ ಸದಾ ಸಿದ್ಧ.

ಕಾಲೆನ್ ಬಾಕ್, ನಾನು ಧರ್ಮದ ಬಗ್ಗೆ ಸಾಮಾನ್ಯವಾಗಿ ಅಹಿಂಸೆ ಅಥವಾ ಪ್ರೇಮ, ಸತ್ಯ ಮುಂತಾದ ಮೂಲತತ್ವಗಳ ಬಗ್ಗೆ ಪದೇ ಪದೇ ಚರ್ಚಿಸುತ್ತಿದ್ದೆವು. ಹಾವು ಮೊದಲಾದ ದುಷ್ಟಜಂತುಗಳನ್ನು ಕೊಲ್ಲುವುದು ಕೂಡ ಪಾಪವೆಂದು ನಾನು ಹೇಳಿದಾಗ ಕಾಲೆನ್‌ಬಾಕ್‌ರಿಗೂ ಇತರ ಯೂರೋಪಿಯನ್ ಗೆಳೆಯರಿಗೂ ದಿಗ್ಭ್ರಾಂತಿಯಾಯಿತು. ಆದರೆ ಕೊನೆಯಲ್ಲಿ ಕೇವಲ ತಾತ್ವಿಕ ದೃಷ್ಟಿಯಿಂದ ನನ್ನ ಅಭಿಪ್ರಾಯಕ್ಕೆ ಸಮ್ಮತಿಸಿದರು.

ನನ್ನ ಪರಿಚಯವಾದ ಪ್ರಾರಂಭದಲ್ಲೆ, ತನಗೆ ಮನವೊಪ್ಪಿದ ತತ್ವಗಳನ್ನೆಲ್ಲ ಅನುಷ್ಠಾನಕ್ಕೆ ತರುವುದು ತನ್ನ ಧರ್ಮ, ಕರ್ತವ್ಯವೆಂದು ತಿಳಿಸಿದರು. ಒಂದು ಕ್ಷಣವೂ ಹಿಂದೆ ಮುಂದೆ ನೋಡದೆ ತನ್ನ ಜೀವನಕ್ರಮದಲ್ಲಿ ಅಸಾಧ್ಯ ಪರಿವರ್ತನ ಮಾಡಲು ಸಾಧ್ಯವಾಯಿತು. ಹಾವನ್ನು ಕೊಲ್ಲುವುದು ತಪ್ಪಾದರೆ, ಅದರ ಸ್ನೇಹ ಸಂಪಾದಿಸಬೇಕೆಂದು ಕಾಲೆನ್ ಬಾಕ್ ಯೋಚಿಸಿದರು. ಹಾವಿನ ಜಾತಿ ಕಂಡು ಹಿಡಿಯಲು ಹಾವಿನ ಬಗ್ಗೆ ಗ್ರಂಥಗಳನ್ನು ಸಂಗ್ರಹಿಸಿದರು. ಓದಿ ಅಭ್ಯಾಸಮಾಡಿ ಎಲ್ಲ ಹಾವುಗಳೂ ವಿಷಪೂರಿತವಲ್ಲವೆಂದೂ ಕೆಲವು ಹಾವು ಪೈರನ್ನು ರಕ್ಷಿಸುತ್ತವೆಂದೂ ತಿಳಿದರು. ಬೇರೆ ಬೇರೆ ಜಾತಿ ಹಾವನ್ನು ಗುರುತಿಸಲು ನಮಗೆ ಹೇಳಿಕೊಟ್ಟರು. ಕಟ್ಟಕಡೆಗೆ ನಮ್ಮ ಆಶ್ರಮದಲ್ಲಿದ್ದ ಒಂದು ದೊಡ್ಡ ನಾಗರಹಾವನ್ನು ಪಳಗಿಸಿದರು. ಪ್ರತಿದಿನವೂ ತನ್ನ ಕೈಯಿಂದಲೇ ಅದಕ್ಕೆ ಆಹಾರ ತಿನಿಸುತ್ತಿದ್ದರು. ಒಂದು ದಿನ ಈ ರೀತಿ ಹೇಳಿದೆ: "ನೀನೇನೊ ಸ್ನೇಹಭಾವದಿಂದ ಈ ರೀತಿ ಮಾಡಿದರೂ, ನಿನ್ನ ದಯೆ ಭೀತಿಮಿಶ್ರಿತವಾಗಿದೆ. ಹಾವಿಗೆ ನಿನ್ನ ಸ್ನೇಹಭಾವನೆ ಹೇಗೆ ತಿಳಿಯಬೇಕು? ಅದು ಸ್ವೇಚ್ಛೆಯಿಂದಿದ್ದರೆ ಅದರೊಂದಿಗೆ ಸರಸವಾಡಲು ನಿನಗೆ ಧೈರ್ಯವಿಲ್ಲ. ನನಗೂ ಧೈರ್ಯವಿಲ್ಲ. ನಿಜವಾಗಿಯೂ ನಾವು ಅಂಥ ಧೈರ್ಯ ಪಡೆಯಬೇಕು. ಇದರಲ್ಲಿ ಸ್ನೇಹಭಾವವಿದ್ದರೂ ಪ್ರೇಮವಿಲ್ಲ. ಹಾವಿಗೂ ನಮ್ಮ ನಡತೆ ತಿಳಿಯುವಂತೆ ವರ್ತಿಸಬೇಕು. ಎಲ್ಲ ಪ್ರಾಣಿಗಳೂ ಇದಿರಿಗಿರುವ ಪ್ರಾಣಿ ತಮ್ಮನ್ನು ಪ್ರೀತಿಯಿಂದ ಕಾಣುತ್ತದೆಯೋ ಹೆದರಿಕೆಯಿಂದ ನೋಡುತ್ತದೆಯೋ ಗಮನಿಸುತ್ತವೆ; ನಿತ್ಯವೂ ನೋಡಬಹುದು. ಅಲ್ಲದೆ ನಾಗರಹಾವು ವಿಷಪೂರಿತವೆಂದು ನೀನು ·ಭಾವಿಸುವದಿಲ್ಲ. ಅದರ ಜೀವನ ರೀತಿ, ರೂಢಿಗಳನ್ನು ತಿಳಿಯಲು ಅದನ್ನು ಬಂಧಿಸಿದೀಯೆ. ನಿಜವಾದ ಸ್ನೇಹಕ್ಕೆ ಸ್ವಾರ್ಥ ಕೂಡದು.

ಕಾಲೆನ್ ಬಾಕ್ ಗೆ ನನ್ನ ವಾದ ಸರಿತೋರಿತು; ಆದರೂ ಹಾವನ್ನೂ ಬಿಡಲು ಒಡನೆಯೇ ಧೈರ್ಯಮಾಡಲಿಲ್ಲ. ನಾನೂ ಒತ್ತಾಯ ಮಾಡಲಿಲ್ಲ. ಆ ಹಾವಿನ ಜೀವನಕ್ರಮದಲ್ಲಿ ನನಗೂ ಆಸಕ್ತಿ ಹುಟ್ಟಿತು; ಮಕ್ಕಳಿಗಂತೂ ಆಟವಾಯಿತು. ಹಾವನ್ನೂ ರೇಗಿಸಲು ಯಾರಿಗೂ ಅವಕಾಶ ಕೊಡುತ್ತಿರಲಿಲ್ಲ. ಆದರೂ ಅದು ತಪ್ಪಿಸಿಕೊಳ್ಳಲು ದಾರಿ ಹುಡುಕುತ್ತಲೇ ಇತ್ತು. ಅಜಾಗರೂಕತೆಯಿಂದ ಹಾವು ಗೂಡಿನ ಬಾಗಿಲು ಮುಚ್ಚಲಿಲ್ಲವೋ, ಅಥವಾ ಹಾವೇ ತೆಗೆಯಿತೊ, ಅಂತೂ ಒಂದು ದಿನ ಬೆಳಿಗ್ಗೆ ಕಾಲೆನ್ ಬಾಕ್ ಯಾರೋ ಸ್ನೇಹಿತನನ್ನು ನೋಡಲು ಹೋದಾಗ ಗೂಡು ಬರಿದಾಗಿತ್ತು. ಕಾಲೆನ್ ಬಾಕ್‌ಗೂ ನನಗೂ ಇಬ್ಬರಿಗೂ ಸಂತೋಷವಾಯಿತು. ಈ ಹಾವು ಸಾಕಿದ ಪ್ರಯೋಗದಿಂದ ನಾವು ಹಾವಿನ ವಿಷಯ ಪದೇ ಪದೇ ಚರ್ಚಿಸುತ್ತಿದ್ದೆವು. ಆಲ್ ಬ್ರೆಕ್ಟ್ ಎಂಬ ಜರ್ಮನನನ್ನು ಕಾಲೆನ್ ಬಾಕ್ ಆಶ್ರಮಕ್ಕೆ ಕರೆತಂದರು. ಆತ ಅಂಗವಿಕಲ, ಬಡವ, ಗೂನು; ಕೋಲಿಲ್ಲದೆ ನಡೆಯಲಾಗುತ್ತಿರಲಿಲ್ಲ. ಆದರೆ ಧೈರ್ಯಕ್ಕೆ ಮಿತಿಯೆ ಇರಲಿಲ್ಲ, ವಿದ್ಯಾವಂತನಾದ್ದರಿಂದ ಜಟಿಲ ಪ್ರಶ್ನೆಗಳಲ್ಲಿ ಅಸಾಧಾರಣ ಉತ್ಸಾಹ ತೋರುತ್ತಿದ್ದ. ಭಾರತೀಯರಿಗೆ ತುಂಬ ಬಳಕೆಯಾಗಿ ಆತ್ಮೀಯನಾದ. ಹಾವುಗಳೊಂದಿಗೆ ನಿರ್ಭಯವಾಗಿ

ಆಟವಾಡಲು ಮೊದಲುಮಾಡಿದ. ಕೈಯಲ್ಲಿ ಸಣ್ಣಹಾವು ಹಿಡಿತಂದು ಅಂಗೈಮೇಲೆ ಆಡಿಸುತ್ತಿದ್ದ. ಇನ್ನೂ ಕೆಲವು ದಿನ ಟಾಲ್ ಸ್ಟಾಯ್ ಆಶ್ರಮದಲ್ಲೇ ನಾವು ಇದ್ದಿದ್ದರೆ ಆಲ್ ಬ್ರೆಕ್ಟ್‌ನ ಪ್ರತಾಪದಿಂದ ಏನೇನಾಗುತ್ತಿತ್ತೋ ದೇವರೇ ಬಲ್ಲ.

ಈ ಎಲ್ಲ ಅನುಭವಗಳಿಂದ ನಾವು ಮೊದಲಿನಂತೆ ಹಾವಿಗೆ ಹೆದರುತ್ತಿರಲಿಲ್ಲ. ಆದರೆ ಯಾರೂ ಹೆದರುತ್ತಿರಲಿಲ್ಲವೆಂದೂ, ಹಾವೂ ಕೊಲ್ಲುವುದನ್ನೆ ನಿಷೇಧಸಿದ್ದೆವೆಂದೂ ಭಾವಿಸಬಾರದು. ಯಾವುದೊ ಒಂದು ನಡತೆ ಹಿಂಸೆ ಪಾಪ ಎಂದು ನಂಬುವುದು ಒಂದು ಮಾತು; ಅದರಂತೆ ನಡೆಯುವದು ಬೇರೆ ಮಾತು. ಹಾವಿಗೆ ಹೆದರುವವನು, ಪ್ರಾಣತ್ಯಾಗಕ್ಕೆ ಸಿದ್ಧನಿಲ್ಲದವನು ಅವಶ್ಯಬಿದ್ದಾಗ ಹಾವು ಕೊಲ್ಲಲೇಬೇಕು. ಆಶ್ರಮದಲ್ಲಿ ಒಂದು ಪ್ರಸಂಗ ಬಂತು. ಬೇಕಾದಷ್ಟು ಹಾವು ಇದ್ದವೆಂದು ತಿಳಿಸಿದ್ದೇನೆ. ಮೊದಲು ನಾವು ಹೋದಾಗ ಅಲ್ಲಿ ಯಾರೂ ವಾಸವಿರಲಿಲ್ಲ. ತೋಟ ಅಸಡ್ಡೆಯಾಗಿತ್ತು. ಒಂದು ದಿನ ಕಾಲೆನ್‌ಬಾಕರ ಕೋಣೆಯಲ್ಲಿ ಒಂದು ಹಾವು ಬಂತು. ಅದನ್ನು ಹೊಡೆಯಲಿಕ್ಕೂ, ಹೊರಗೆ ಓಡಿಸಲಿಕ್ಕೂ ಆಗದಂಥ ಇಕ್ಕಟ್ಟು ಸ್ಥಳದಲ್ಲಿ ಸೇರಿಕೊಂಡಿತ್ತು. ಒಬ್ಬ ಹುಡುಗ ಅದನ್ನು ನೋಡಿ ನನ್ನನ್ನು ಕರೆದು ಏನು ಮಾಡಬೇಕೆಂದು ಕೇಳಿದ. ಅದನ್ನು ಕೊಲ್ಲಲು ನನ್ನ ಅಪ್ಪಣೆ ಕೇಳಿದ. ಆತನ ಮಟ್ಟಿಗೆ ಯಾರ ಅನುಜ್ಞೆಯೂ ಬೇಕಿರಲಿಲ್ಲ. ಆದರೆ ಆಶ್ರಮವಾಸಿಗಳು–ಹುಡುಗರಾಗಲಿ ದೊಡ್ಡವರಾಗಲಿ–ನನ್ನ ಸಲಹೆ ಕೇಳದೆ ಅಂಥ ಕೆಲಸ ಮಾಡುತ್ತಿರಲಿಲ್ಲ. ಹಾವು ಕೊಲ್ಲಲು ಹುಡುಗನಿಗೆ ಅನುಮತಿ ಕೊಡುವುದು ನನ್ನ ಕರ್ತವ್ಯವೆಂದು ಭಾವಿಸಿ ಅನುಮತಿ ಕೊಟ್ಟೆ. ಈಗ ಇದನ್ನು ಬರೆಯುವಾಗಲೂ ಆ ರೀತಿ ಅನುಮತಿ ಕೊಟ್ಟದ್ದು ತಪ್ಪೆನಿಸದು. ಆ ಹಾವನ್ನು ಕೈಯಲ್ಲಿ ಹಿಡಿಯಲಿಕ್ಕಾಗಲಿ, ಬೇರೆ ರೀತಿ ಭಯ ತಪ್ಪಿಸಲಿಕ್ಕಾಗಲಿ ನನಗೆ ಧೈರ್ಯವಿರಲಿಲ್ಲ. ಈಗಲೂ ಆ ಧೈರ್ಯ ಪಡೆದಿಲ್ಲ.

ಕೆಲವರು ಸೆರೆಮನೆಯಿಂದ ಬಿಡುಗಡೆಯಾದರು; ಕೆಲವರು ಇನ್ನೂ ಹೋಗುವವರು– ಅಂತೂ ಸತ್ಯಾಗ್ರಹಿಗಳು ಆಶ್ರಮಕ್ಕೆ ತಂಡತಂಡವಾಗಿ ಬರುತ್ತಿದ್ದರು, ಹೋಗುತ್ತಿದ್ದರು. ಒಂದು ಸಲ ಸ್ವಂತ ಜಾಮೀನಿನ ಮೇಲೆ ಬಿಡುಗಡೆಯಾದ ಇಬ್ಬರು ಸತ್ಯಾಗ್ರಹಿಗಳು ಬಂದರು. ಮಾರನೆ ದಿನ ತೀರ್ಪಿಗಾಗಿ ನ್ಯಾಯಾಲಯಕ್ಕೆ ಅವರು ಹೋಗಬೇಕಾಗಿತ್ತು. ಚರ್ಚಾಮಗ್ನರಾಗಿ ಕುಳಿತದ್ದರಿಂದ ರೈಲು ಹೊರಡುವ ಕಾಲ ಸಮೀಪಿಸಿತ್ತು. ಇಬ್ಬರೂ, ಯುವಕರು ದೃಢಾಂಗಿಗಳು. ರೈಲು ಸಿಗುವದು ಅನುಮಾನವಾಗಿ ಬೀಳ್ಕೊಡಲು ಹೋದ ಅವರೊಂದಿಗೆ ಉಸಿರುಕಟ್ಟಿ ಓಡಿದರು. ಮಧ್ಯಮಾರ್ಗದಲ್ಲೇ ಗಾಡಿ ಬಂದ ಸಿಳ್ಳು ಕೇಳಿಸಿತು. ಹೊರಡುವ ಸಿಳ್ಳು ಕೇಳುವ ಹೊತ್ತಿಗೆ ನಿಲ್ದಾಣದ ಆವರಣದೊಳಗಿದ್ದೆವು. ಕ್ಷಣಕ್ಷಣಕ್ಕೂ ಆ ಯುವಕರು ಮುಂದೆ ಮುಂದೆ ಓಡುತ್ತಿದ್ದರು. ನಾನು ಹಿಂದೆ ಬಿದ್ದೆ. ಗಾಡಿ ಹೊರಟೇಬಿಟ್ಟಿತು. ಓಡಿ ಬರುತ್ತಿದ್ದ ಆ ಯುವಕರನ್ನು ಕಂಡು ಸ್ಟೇಷನ್ ಮೇಷ್ಟರು ಗಾಡಿ ನಿಲ್ಲಿಸಿ ಅವರನ್ನು ಹತ್ತಿಸಿದ. ನಿಲ್ದಾಣ ಸೇರಿ ಆತನಿಗೆ ನನ್ನ ವಂದನೆ ಅರ್ಪಿಸಿದೆ. ಈ ಸನ್ನಿವೇಶದಿಂದ ಎರಡು ಅಂಶ ಸ್ಪಷ್ಟವಾಗುತ್ತವೆ. ಮೊದಲನೆಯದು: ಸೆರೆಮನೆ

ಸೇರಲು ಸತ್ಯಾಗ್ರಹಿಗಳಿಗಿದ್ದ ಆಸಕ್ತಿ; ಎರಡನೆಯದು ಸ್ಥಳೀಯ ಅಧಿಕಾರಿಗಳಿಗೆ ಅವರ ಮೇಲಿದ್ದ ಗೌರವ. ಗಾಡಿ ತಪ್ಪಿದ್ದರೆ ಅವರು ನ್ಯಾಯಾಸ್ಥಾನಕ್ಕೆ ಹೋಗಲು ಆಗುತ್ತಿರಲಿಲ್ಲ. ಅವರಿಂದ ಬೇರೆ ಯಾವ ಜಾಮೀನನ್ನೂ ಕೇಳಿರಲಿಲ್ಲ. ಹಣ ಕಟ್ಟಿಸಿಕೊಂಡಿರಲಿಲ್ಲ. ವಚನದ ಭರವಸೆ ಮೇಲೆ ಬಿಟ್ಟಿದ್ದರು. ಸೆರೆಮನೆಗೆ ಹೋಗುವಾಗ ನ್ಯಾಯಾಧೀಶರು ಜಾಮೀನು ಸಹ ಅಪೇಕ್ಷಿಸದಷ್ಟು ಮಟ್ಟಿಗೆ ಸತ್ಯಾಗ್ರಹಿಗಳ ಗೌರವ ಹೆಚ್ಚಿತ್ತು. ಆದ್ದರಿಂದ ಗಾಡಿ ತಪ್ಪೀತೆಂದು ಸತ್ಯಾಗ್ರಹಿಗಳು ಬಹಳ ವ್ಯಸನಗೊಂಡು ವಾಯುವೇಗದಿಂದ ಓಡಿದರು. ಸತ್ಯಾಗ್ರಹದ ಆರಂಭದಲ್ಲಿ ಅಧಿಕಾರಿಗಳು ಸತ್ಯಾಗ್ರಹಿಗಳ ಮೇಲೆ ಕ್ರೂರದಬ್ಬಾಳಿಕೆ ನಡೆಸಿದರು. ಕೆಲವು ಕಡೆಯಂತೂ ಸೆರೆಮನೆಯ ಅಧಿಕಾರಿಗಳು ವಿಚಿತ್ರ ಹಿಂಸೆ ಕೊಟ್ಟರು. ಆದರೆ ನಮ್ಮ ಹೋರಾಟ ಸಾಗಿದಂತೆ ಅಧಿಕಾರಿಗಳ ಕಠಿಣ ಮನಸ್ಸು ಕರಗಿ, ಕೆಲವು ಸಂದರ್ಭಗಳಲ್ಲಿ ಪ್ರೇಮ ಮೂಡಿತು. ಅನೇಕ ದಿನದ ಪರಿಚಯವಿದ್ದೆಡೆ ಸ್ಟೇಷನ್ ಮೇಷ್ಟ್ರಂತೆ ಸಹಾಯ ಕೂಡ ಮಾಡುತ್ತಿದ್ದರು. ಈ ಸೌಲಭ್ಯಗಳಿಗಾಗಿ ಸತ್ಯಾಗ್ರಹಿಗಳು ಅಧಿಕಾರಿಗಳಿಗೆ ಯಾವ ರೂಪದಲ್ಲೂ ಲಂಚಕೊಡುತ್ತಿರಲಿಲ್ಲ. ಈ ರೀತಿ ಸೌಲಭ್ಯ ಪಡೆಯಲು ಅವರಿಗೆ ಇಷ್ಟವೂ ಇರಲಿಲ್ಲ. ಆದರೆ ಗೌರವದಿಂದ ಒದಗಿದಾಗ ತಿರಸ್ಕರಿಸುತ್ತಿರಲಿಲ್ಲ. ಅನೇಕ ಕಡೆ ಈ ರೀತಿ ಸೌಲಭ್ಯ ದೊರೆಯಿತು. ಸ್ಟೇಷನ್ ಅಧಿಕಾರಿ ನೀಚನಾದರೆ ಶಾಸನನಿಯಮ ಮೀರದೆ ಪ್ರಯಾಣಿಕರಿಗೆ ಎಷ್ಟೋ ತೊಂದರೆ ಕೊಡಬಹುದು. ಆಗ ಯಾವ ದೂರೂ ಹೇಳುವ ಹಾಗಿಲ್ಲ. ಅಧಿಕಾರಿ ಉತ್ತಮನಾಧರೆ ಶಾಸನನಿಯಮ. ಮೀರದೆಯೆ ಎಷ್ಟೋ ಅನುಕೂಲ ಕಲ್ಪಿಸಿಕೊಡಬಹುದು. ಲಾಲೆ ಸ್ಟೇಷನ್ ಅಧಿಕಾರಿಯಿಂದ ಈ ಎಲ್ಲ ಅನುಕೂಲಗಳು ನಮಗೆ ದೊರೆತವು. ಇದೇ ಸತ್ಯಾಗ್ರಹಿಗಳ ಮಾದರಿ ನಡತೆ, ತಾಳ್ಮೆ , ಕಷ್ಟಸಹಿಷ್ಣುತೆಗಳ ಪ್ರಭಾವ.

ಇನ್ನೊಂದು–ಅಪ್ರಕೃತ ವಿಷಯ–ಇಲ್ಲಿಯೇ ತಿಳಿಸಿಬಿಡುತ್ತೇನೆ. ಕಳೆದ ಮೂವತ್ತು ವರ್ಷಗಳಿಂದ ಧಾರ್ಮಿಕ, ಆರ್ಥಿಕ, ಆರೋಗ್ಯದೃಷ್ಟಿಯಿಂದ ಆಹಾರದಲ್ಲಿ ನೂತನ ಪ್ರಯೋಗ ಮಾಡುತ್ತಲೇ ಇದ್ದೇನೆ. ಆಹಾರ ಸುಧಾರಣೆಯ ಈ ಆಸಕ್ತಿ ಇನ್ನೂ ಹೋಗಿಲ್ಲ. ನನ್ನ ಪ್ರಯೋಗಗಳ ಪ್ರಭಾವ ನನ್ನ ಸುತ್ತಲಿದ್ದವರ ಮೇಲೆಯೂ ಬೀಳುತ್ತಿತ್ತು. ಔಷಧಿಗಳಿಲ್ಲದೇ ಬರೀ ಮಣ್ಣು, ನೀರಿನಿಂದ ರೋಗಚಿಕಿತ್ಸೆಯ ಪ್ರಯೋಗವನ್ನು ನಡೆಸುತ್ತಿದ್ದೆ. ವಕೀಲನಾಗಿದ್ದಾಗ ನನಗೂ ನನ್ನ ಕಕ್ಷಿಗಾರರಿಗೂ ಅತ್ಯಂತ ವಿಶ್ವಾಸ ಬೆಳೆದು ನನ್ನನ್ನು ತಮ್ಮ ಮನೆಯವನೆಂದೇ ಅವರು ಭಾವಿಸಿದ್ದರು. ಅವರ ಸುಖದುಃಖಗಳಲ್ಲಿ ನಾನು ಭಾಗಿಯಾದೆ. ನನ್ನ ಸ್ವಾಭಾವಿಕ ರೋಗ ನಿವಾರಣೆ ವಿಧಾನ ತಿಳಿದು ಆಗಾಗ ಅವರು ನನ್ನ ಸಲಹೆಗೆ ಬರುತ್ತಿದ್ದರು. ಕೆಲವು ವೇಳೆ ಇಂತಹ ರೋಗಿಗಳೂ ಆಶ್ರಮಕ್ಕೆ ಬರುತ್ತಿದ್ದರು. ನನ್ನ ಕಕ್ಷಿಗಾರನಾದ ವೃದ್ಧ ಲುಟವಾನ್ ಇಂಥ ಒಬ್ಬ. ಉತ್ತರ ಹಿಂದುಸ್ಥಾನದಿಂದ ಮೊದಲು ಕೂಲಿಯಾಗಿ ಬಂದವ. ಎಪ್ಪತ್ತು ವರ್ಷ ವಯಸ್ಸು. ಗೂರಲು, ಕೆಮ್ಮು ಬಲುದಿನದಿಂದ ಬೆನ್ನು ಹತ್ತಿದ್ದವು. ವೈದ್ಯರ ಗುಳಿಗೆ, ಡಾಕ್ಟರರ ಔಷಧಿ ತಿಂದು ಕುಡಿದು ಮುಪ್ಪಾಗಿದ್ದ. ನನ್ನ ರೋಗ ನಿವಾರಣೆಯ ವಿಧಾನದಲ್ಲಿ ಆಗ ನನಗೆ ಅಚಲ ವಿಶ್ವಾಸವಿತ್ತು.

ಆದ್ದರಿಂದ ಆಶ್ರಮದಲ್ಲಿದ್ದು ನಾನು ಹೇಳಿದಂತೆ ನಡೆದರೆ ಔಷಧಿ ಕೊಟ್ಟು ಆತನ ಮೇಲೆ ನನ್ನ ಪ್ರಯೋಗ ನಡೆಸಲು ಒಪ್ಪಿದೆ. ನಾನು ಹೇಳಿದಂತೆ ನಡೆಯಲು ಲುಟವಾನ್ ಒಪ್ಪಿದ. ಆತನು ಬಹಳವಾಗಿ ಸೇವಿಸುತ್ತಿದ್ದ ತಂಬಾಕನ್ನು ಮೊದಲು ಬಿಡಿಸಿದೆ. ಇಪ್ಪತ್ತು ನಾಲ್ಕು ಗಂಟೆ ಉಪವಾಸ ಮಾಡಿಸಿದೆ. ಹವೆ ಅಷ್ಟೇನೂ ಶಾಖವಾಗಿರಲಿಲ್ಲವಾದ್ದರಿಂದ ನಿತ್ಯವೂ ಮಧ್ಯಾಹ್ನ ಹನ್ನೆರಡು ಗಂಟೆಗೆ ಕೊನ್ಹೆ ಪದ್ಧತಿಯಂತೆ ಆತಪಸ್ನಾನ ಮಾಡಿಸುತ್ತಿದ್ದೆ. ಅನ್ನ, ಹಿಪ್ಪೆಎಣ್ಣೆ, ಜೇನುತುಪ್ಪ, ಜೇನುತುಪ್ಪದ ಜೊತೆಗೆ ಗಂಜಿ, ಕಿತ್ತಲೆಹಣ್ಣು, ಇನ್ನು ಕೆಲವು ಬಾರಿ ದ್ರಾಕ್ಷಿ, ಗೋಧಿ ಕಾಫಿ ಕೊಡುತ್ತಿದ್ದೆ. ಉಪ್ಪು ಮುಂತಾದ ಎಲ್ಲ ಮಸಾಲೆ ಪದಾರ್ಥ ತ್ಯಾಜ್ಯವಾದವು. ಲುಟವಾನ್ ನಾನು ಮಲಗುತ್ತಿದ್ದ ಮನೆಯಲ್ಲೆ ಒಳಗೆ ಮಲಗುತ್ತಿದ್ದ. ಹೊದೆಯಲು ಒಂದು, ಹಾಸಲು ಒಂದು ಎರಡು ಕಂಬಳಿ; ತಲೆದಿಂಬಿಗೆ ಒಂದು ಮರದ ತುಂಡು, ಎಲ್ಲರಿಗೂ ಕೊಟ್ಟಿದ್ದೆವು. ಒಂದು ವಾರ ಕಳೆಯಿತು. ಲುಟವಾನ್‌ಗೆ ಎಷ್ಟೋ ಕಳೆ ಏರಿತು. ಗೂರಲು, ಕೆಮ್ಮು ಅಷ್ಟು ಬಾಧಿಸುತ್ತಿರಲಿಲ್ಲ. ಆದರೆ ಹಗಲಿಗಿಂತ ರಾತ್ರಿ ಹೆಚ್ಚುತ್ತಿತ್ತು. ಎಲ್ಲೊ ಕದ್ದು ತಂಬಾಕು ಸೇದುತ್ತಿರಬೇಕೆಂದು ನನಗೆ ಅನುಮಾನ ತೋರಿತು. ಲುಟವಾನ್ ಇಲ್ಲವೆಂದ. ಇನ್ನೆರಡು ದಿನವಾಧರೂ ಉತ್ತಮಗೊಳ್ಳಲಿಲ್ಲ. ಲುಟವಾನ್‌ನನ್ನು ಗುಪ್ತವಾಗಿ ಪರೀಕ್ಷಿಸಿದೆ. ಎಲ್ಲರೂ ನೆಲದ ಮೇಲೆ ಮಲಗುತ್ತಿದ್ದರು; ಹಾವು ಬೇಕಾದಷ್ಟಿದ್ದವು. ಆದ್ದರಿಂದ ಕಾಲೆನ್ ಬಾಕ್ ನನಗೊಂದು ವಿದ್ಯುತ್ ಕೈದೀಪ ಕೊಟ್ಟು ತಮ್ಮಲ್ಲೂ ಒಂದು ಇಟ್ಟುಕೊಂಡಿದ್ದರು. ಈ ದೀಪ ಯಾವಾಗಲೂ ನನ್ನ ಪಕ್ಕದಲ್ಲೇ ಇರುತ್ತಿತ್ತು. ಒಂದು ರಾತ್ರಿ ಜಾಗರಣೆ ಮಾಡಲು ನಿರ್ಧರಿಸಿದೆ. ಬಾಗಿಲು ಬಳಿ ಕೈಸಾಲೆಯಲ್ಲಿ ಹೊರಗೆ ನನ್ನ ಹಾಸಿಗೆ, ಒಳಗೆ ಲುಟವಾನನ ಹಾಸಿಗೆ. ಮಧ್ಯರಾತ್ರಿ ಲುಟವಾನ್ ಕೆಮ್ಮಿದ; ಒಂದು ಸಿಗರೇಟ್ ಹಚ್ಚಿ ಸೇದಲು ಪ್ರಾರಂಭಿಸಿದ. ಮೆಲ್ಲಗೆ ಅವನ ಹಾಸಿಗೆಯ ಬಳಿ ಹೋಗಿ ದೀಪ ಹಾಕಿದೆ. ಲುಟವಾನ್ ಎಲ್ಲಾ ಅರ್ಥಮಾಡಿಕೊಂಡು ನಡುಗಲು ಪ್ರಾರಂಭಿಸಿದ. ಸಿಗರೇಟ್ ಬೀಸಾಡಿ, ಎದ್ದುನಿಂತು ಕಾಲುಮುಟ್ಟಿ ನಮಸ್ಕಾರ ಮಾಡಿದ. "ನಾನು ಮಹಾಪರಾಧಿ, ಇನ್ನು ಮುಂದೆ ತಂಬಾಕು ಸೇದುವುದಿಲ್ಲ. ನಿಮಗೆ ಮೋಸಮಾಡಿದೆ. ದಯವಿಟ್ಟು ಕ್ಷಮಿಸಿ" ಎನ್ನುತ್ತ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ. ತಂಬಾಕು ಬಿಡುವುದು ಆನಿಗೇ ಒಳ್ಳೆಯದೆಂದು ಸಮಾಧಾನ ಮಾಡಿದೆ. ನನ್ನ ಲೆಕ್ಕದಂತೆ ಆ ಮೊದಲೇ ಆತನಿಗೆ ವಾಸಿಯಾಗಬೇಕಿತ್ತು. ಇನ್ನೂ ಗುಣವಾಗದ್ದು ನೋಡಿ ಕದ್ದು ತಂಬಾಕು ಸೇದಬಹುದೆಂದು ಅನುಮಾನ ಪಟ್ಟೆ. ಮುಂದೆ ಲುಟಾವಾನ್ ಸಂಪೂರ್ಣ ತಂಬಾಕು ಬಿಟ್ಟು ಬಿಟ್ಟ. ಎರಡು ಮೂರು ದಿನದಲ್ಲೆ ಆತನ ಗೂರಲೂ, ಕೆಮ್ಮೂ ಕಡಮೆಯಾಯಿತು. ಒಂದು ತಿಂಗಳಲ್ಲಿ ಪೂರ್ತಿ ಗುಣವಾಯಿತು. ಚೆನ್ನಾಗಿ ಶಕ್ತಿ ಪಡೆದು ಆಶ್ರಮದಿಂದ ಹೋದ.

ಸ್ಟೇಷನ್ ಮೇಷ್ತ್ರ ಎರಡು ವರ್ಷದ ಮಗುವಿಗೆ ಸನ್ನಿಪಾತ ಜ್ವರ ಬಂತು. ಆತನಿಗೆ ನನ್ನ ಚಿಕಿತ್ಸೆಯ ಪರಿಚಯವಿದ್ದುದರಿಂದ, ನನ್ನ ಸಲಹೆ ಕೇಳಿದ. ಮೊದಲನೆ ದಿನ ಮಗುವಿಗೆ ಏನೂ ಆಹಾರ ಕೊಡಲಿಲ್ಲ. ಎರಡನೆ ದಿನದಿಂದ ಅರ್ಧ ಬಾಳೆಹಣ್ಣನ್ನು

ಹಿಪ್ಪೆ ಎಣ್ಣೆಯಲ್ಲಿ ಬೆರೆಸಿ ಕೆಲವು ತೊಟ್ಟು ಕಿತ್ತಲೆ ಹಣ್ಣಿನ ರಸ ಸೇರಿಸಿಕೊಡುತ್ತಿದ್ದೆ. ರಾತ್ರಿ ಹೊಟ್ಟೆಯ ಮೇಲೆ ತಣ್ಣೀರಲ್ಲಿ ಕಲಸಿದ ಮಣ್ಣಿನ ಪಟ್ಟು ಹಾಕುತ್ತಿದ್ದೆ. ಈ ಮಗುವಿಗೂ ಗುಣವಾಯಿತು. ಪ್ರಾಯಶಃ ವೈದ್ಯನ ಪರೀಕ್ಷೆ ತಪ್ಪಿದ್ದರೂ ಇರಬಹುದು; ಅಂತೂ ಅದು ಸನ್ನಿಪಾತ ಜ್ವರವಲ್ಲ.

ಆಶ್ರಮದಲ್ಲಿ ಇಂಥ ಅನೇಕ ಪ್ರಯೋಗ ನಡೆಸಿದೆ. ಒಂದು ಸಲವಾದರೂ ವಿಫಲನಾದ್ದು ನನಗೆ ನೆನಪಿಲ್ಲ. ಈಗ ಅದೇ ಪ್ರಯೋಗ ನಡೆಸಲು ನನಗೆ ಧೈರ್ಯಸಾಲದು. ಸನ್ನಿಪಾತ ಜ್ವರ ಬಂದ ಮಗುವಿಗೆ ಬಾಳೆಹಣ್ಣು ಹಿಪ್ಪೆ ಎಣ್ಣೆ ಕೊಡಲು ಮೈ ನಡಗುತ್ತದೆ. ೧೯೧೮ ರಲ್ಲಿ ನನಗೇ ಆಮಶೌಚವಾದಾಗ ಗುಣಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ದಕ್ಷಿಣ ಆಫ್ರಿಕದಲ್ಲಿ ಪರಿಣಾಮಕಾರಿಯಾದ ಚಿಕಿತ್ಸೆ ಇಲ್ಲಿ ಆಗದಿರಲು, ವಾಯುಗುಣದ ವ್ಯತ್ಯಾಸವೊ ನನ್ನ ಆತ್ಮ ವಿಶ್ವಾಸದ ಅಭಾವವೊ ಹೇಳಲಾರೆ. ಆದರೆ ಟಾಲ್ ಸ್ಟಾಯ್ ಆಶ್ರಮದ ನಮ್ಮ ಸರಲ ಜೀವನ, ಸುಲಭ ರೋಗಚಿಕಿತ್ಸೆಗಳಿಂದ ಸಾರ್ವಜನಿಕ ನಿಧಿಯಲ್ಲಿ ಎರಡು ಮೂರು ಲಕ್ಷ ರೂಪಾಯಿ ಉಳಿತಾಯವಾಯಿತು. ಆಶ್ರಮವಾಸಿಗಳೆಲ್ಲ ಒಂದೇ ಕುಟುಂಬದವರೆಂಬ ಭಾವನೆ ಮೂಡಿತು; ಸತ್ಯಾಗ್ರಹಿಗಳಿಗೆ ಒಂದು ನೆಲೆಯಾಯಿತು; ಮೋಸಕ್ಕೂ ಅಹಂಕಾರಕ್ಕೂ ನೆಲೆ ಇಲ್ಲದಂತಾಯಿತು, ಗಟ್ಟಿ ಉಳಿದು ಜೊಳ್ಳು ತೂರಲು ಅನುಕೂಲವಾಯಿತು. ಈ ಆಹಾರ ಪ್ರಯೊಗಗಳನ್ನೆಲ್ಲ ಆರೋಗ್ಯದೃಷ್ಟಿಯಿಂದ ಮಾಡಿದೆ, ಆದರೆ ಧಾರ್ಮಿಕದೃಷ್ಟಿಯಿಂದ ಇನ್ನೊಂದು ಮುಖ್ಯ ಪ್ರಯೋಗ ನಡೆಸಿದೆ.

ಸಸ್ಯಾಹಾರಿಗಳಾಗಿ ನಾವು ಹಾಲು ತೆಗೆದುಕೊಳ್ಳಬಹುದೇ ಎಂದು ಅನುಮಾನ ಹುಟ್ಟಿ ಅನೇಕ ಗ್ರಂಥ ಅಭ್ಯಾಸ ಮಾಡಿ ತುಂಬ ಯೋಚನೆ ಮಾಡಿದೆ. ಕಲ್ಕತ್ತಾದಲ್ಲಿ ಹಸುವಿನ ಹಾಲು ಹಿಂಡಲು ಅವಲಂಬಿಸುತ್ತಿದ್ದ ಅತಿ ಕ್ರೂರವೂ ಅಸಹ್ಯವೂ ಆದ 'ಫೂಕ್' ಎಂಬ ಹಿಂಸಾಪದ್ಧತಿ ವಿವರಿಸುವ ಒಂದಲ್ಲ ಒಂದು ಪ್ರತಿಕೆ ಆಶ್ರಮದಲ್ಲಿ ನನ್ನ ಕೈಗೆ ಸಿಗುತ್ತಿತು. ಹಾಲಿನ ಅವಶ್ಯಕತೆಯ ವಿಷಯ ಕಾಲೆನ್ ಬಾಕ್‌ರೊಡನೆ ಒಮ್ಮೆ ಚರ್ಚೆ ಮಾಡುವಾಗ ಈ ದುಷ್ಟ ಪದ್ಧತಿಯನ್ನೂ, ಹಾಲನ್ನು ತ್ಯಜಿಸುವದರಿಂದ ಆಗುವ ಅನೇಕ ಪಾರಮಾರ್ಥಿಕ ಪ್ರಯೋಜನಗಳನ್ನೂ ತಿಳಿಸಿ ಸಾಧ್ಯವಾದರೆ ಹಾಲನ್ನು ಬಿಡುವದು ಒಳ್ಳೆಯದೆಂದು ಹೇಳಿದೆ. ನನ್ನ ಅಭಿಪ್ರಾಯ ಆತನಿಗೆ ಒಪ್ಪಿ ಸ್ವಾಭಾವಿಕ ಉತ್ಸಾಹದಿಂದ ಕೂಡಲೇ ಪ್ರಯತ್ನ ಮಾಡಬೇಕೆಂದ. ಅದೇ ದಿನ ಆತನೂ ನಾನೂ ಹಾಲು ಬಿಟ್ಟೆವು. ಕೊನೆ ಕೊನೆಗೆ ಬೇಯಿಸಿದ ಆಹಾರ ಬಿಟ್ಟು ಬರೀ ಹಣ್ಣು ಒಣಗಿದ್ದು, ಹಸಿಯದು-ತಿಂದು ಇರತೊಡಗಿದೆವು. ಈ ಅಭ್ಯಾಸದ ಪರ್ಯವಸಾನ ಏನಾಯಿತೊ, ಅದನ್ನು ಏಕೆ ಬಿಟ್ಟೆನೋ ಹೇಳುವದಿಲ್ಲ; ಆದರೆ ಹಣ್ಣಿನಿಂದಲೇ ಜೀವಿಸಿದ ಆ ಐದು ವರ್ಷದಲ್ಲಿ ಅಶಕ್ತತೆ ಎಂದೂ ಕಾಣಲಿಲ್ಲ. ಯಾವ ರೋಗವೂ ಹತ್ತಿರ ಸುಳಿಯಲಿಲ್ಲ. ನನ್ನ ದೇಹಶಕ್ತಿ ಅತ್ಯಧಿಕವಾಗಿದ್ದುದೂ ಅದೇ ಕಾಲದಲ್ಲಿ. ಸಾಮಾನ್ಯವಾಗಿ ದಿನಕ್ಕೆ ನಲವತ್ತು ಮೈಲಿ ನಡೆಯುತ್ತಿದ್ದೆ; ಒಂದು ದಿನ ಐವತ್ತೈದು ಮೈಲಿ ಕಾಲುನಡಿಗೆ ನಡದೆ. ಇದರಿಂದ ನನ್ನ ಆತ್ಮಶಕ್ತಿಯೂ ಉತ್ತಮಗೊಂಡಿತೆಂದು ನನ್ನ ಅಭಿಪ್ರಾಯ. ನನ್ನ ಹಣ್ಣಿನ ಆಹಾರ

ವ್ಯತ್ಯಾಸಗೊಳಿಸಬೇಕಾಗಿ ಬಂದದ್ದು ನನ್ನ ದುರದೃಷ್ಟ. ರಾಜಕೀಯ ಚಟುವಟಿಕೆಗಳಿಂದ ದೂರನಾಗಿದ್ದರೆ, ಈ ವಯಸ್ಸಿನಲ್ಲೂ– ದೇಹಕ್ಕೆ ಸ್ವಲ್ಪ ತೊಂದರೆಯಾದರೂ– ಪುನಃ ಹಣ್ಣು ತಿಂದು ಅದರ ಆಧ್ಯಾತ್ಮಿಕ ಪರಿಣಾಮ ಪರೀಕ್ಷಿಸಲು ಇಷ್ಟವಿದೆ. ಡಾಕ್ಟರರ ವೈದ್ಯರ ಆಧ್ಯಾತ್ಮಿಕ ದೃಷ್ಟಿಯ ಅಭಾವವೂ ನನಗೊಂದು ದೊಡ್ಡ ಆತಂಕ.

ಅತಿ ಮುಖ್ಯವೂ, ಸುಖಮಯವೂ ಆದ ಅನುಭವಗಳ ಅಧ್ಯಾಯ ಇಲ್ಲಿಗೆ ಮುಗಿಯಬೇಕು. ಆತ್ಮಶುದ್ಧಿಯೇ ಮುಖ್ಯ ಗುರಿಯಾದ ಹೋರಾಟದಲ್ಲಿ ಮಾತ್ರ ಅಪಾಯಕರ ಪ್ರಯೋಗಗಳಿಗೆ ಅವಕಾಶವಿದೆ. ಟಾಲ್ ಸ್ಟಾಯ್ ಆಶ್ರಮ ನಮ್ಮ ಅಂತಿಮ ಹೋರಾಟಕ್ಕೆ ಅಗತ್ಯವಾದ ಆತ್ಮಶುದ್ಧಿ, ಯಜ್ಞದೀಕ್ಷೆಗೆ ಕೇಂದ್ರವಾಯಿತು. ಅದು ಇಲ್ಲದಿದ್ದರೆ ಎಂಟು ವರ್ಷದ ಅಖಂಡ ಹೋರಾಟವೂ, ಇನ್ನೂ ಹೆಚ್ಚಾದ ಧನಸಹಾಯವೂ, ಕೊನೆಯಲ್ಲಿ ಬಂದು ಸೇರಿದ ಸಾವಿರಾರು ಜನರ ಸಹಕಾರವೂ ದೊರೆಯುತ್ತಿತ್ತೋ ಇಲ್ಲವೋ ಹೇಳಲಾರೆ. ಟಾಲ್ ಸ್ಟಾಯ್ ಆಶ್ರಮಕ್ಕೆ ನಾವು ಹೆಚ್ಚಿನ ಪ್ರಶಸ್ತಿ ಕೊಡಲಿಲ್ಲ; ಆದರೆ ಸ್ವಯಂ ಪ್ರತಿಭೆಯಿಂದಲೇ ಸಾರ್ವಜನಿಕ ಮನ್ನಣೆ ಪಡೆಯಿತು. ತಾವು ಅಸಾಧ್ಯ, ಕಷ್ಟತಮವೆಂದು ಭಾವಿಸಿದ ಕೆಲಸಗಳನ್ನೆಲ್ಲ ಆಶ್ರಮವಾಸಿಗಳು ಸಂತೋಷದಿಂದ ಮಾಡುತ್ತಿದ್ದುದನ್ನು ಭಾರತೀಯರು ಕಣ್ಣಾರೆ ಕಂಡರು. ೧೯೧೩ ರಲ್ಲಿ ನಮ್ಮ ಚಳುವಳಿ ಪುನರ್ವ್ಯವಸ್ಥೆಯಿಂದ ವಿರಾಡ್ರೂಪ ತಾಳಿದಾಗ ಸಾರ್ವಜನಿಕರ ಈ ಅಪಾರ ವಿಶ್ವಾಸವೇ ನಮ್ಮ ಶಕ್ತಿ ಸಂಪತ್ತಾಯಿತು. ಇಂತಹ ಶಕ್ತಿಗಳು ಕಾರ್ಯರಂಗಕ್ಕಿಳಿಯುತ್ತವೆಯೇ ಇಳಿದರೆ ಯಾವಾಗ–ಹೇಳಲು ಯಾರಿಗೂ ಸಾಧ್ಯವಿಲ್ಲ. ಆದರೆ ಈ ಅಂತರ್ಮುಖಶಕ್ತಿ ದೈವೇಚ್ಛೆಯ ಪರ್ವಕಾಲ ಒದಗಿದಾಗ ಒಂದುಗೂಡಿ ವಿರಾಡ್ರೂಪಿಯಾಗಿ ಹೊರಹೊಮ್ಮುವುದರಲ್ಲಿ ಅನುಮಾನವೇ ಇಲ್ಲ. ಓದುಗರೂ ಅದೇ ನಂಬಿಕೆ ಪಡೆಯಬೇಕೆಂದು ನನ್ನ ಪ್ರಾರ್ಥನೆ.

೩೬. ಗೋಖಲೆಯವರ ಪ್ರವಾಸ

ಕಾಲಗರ್ಭದಲ್ಲಿದ್ದ ತಮ್ಮ ಭವಿಷ್ಯವನ್ನು ಯೋಚಿಸದೆ ಸತ್ಯಾಗ್ರಹಿಗಲು ಈ ರೀತಿ ಟಾಲ್ ಸ್ಟಾಯ್ ಆಶ್ರಮದಲ್ಲಿ ತಮ್ಮ ವಿಧಿವತ್ತಾದ ಜೀವನವನ್ನು ಮುಂದುವರಿಸುತ್ತಿದ್ದರು. ಹೋರಾಟ ಎಂದಿಗೆ ಮುಕ್ತಾಯವಾಗುವುದೇ ತಿಳಿದಿರಲಿಲ್ಲ. ತಿಳಿಯಲು ಇಷ್ಟವೂ ಇರಲಿಲ್ಲ. ಕರಾಳಶಾಸನಕ್ಕೆ ತಲೆಬಾಗಬಾರದೆಂಬ ಪ್ರತಿಜ್ಞೆಯೊಂದೇ ಅವರಿಗೆ ಗೊತ್ತು. ಆ ಪ್ರತಿಜ್ಞಾಪಾಲನೆಯಲ್ಲಿ ಏನು ಕಷ್ಟ ಒದಗಿದರೂ ಸಹಿಸಲು ಸಿದ್ಧರಿದ್ದರು. ಒಳ್ಳೆ ಯೋಧನಿಗೆ ಕಾದುವದರಲ್ಲೇ ತೃಪ್ತಿ. ಯುದ್ಧವೇ ಆತನಿಗೆ ವಿಜಯಲಕ್ಷ್ಮಿ. ಯುದ್ಧ ಮುಂದುವರಿಯಲೂ ಬಿಡಲೂ ತಾನೇ ಕಾರಣ; ಆದ್ದರಿಂದ ಜಯಾಪಜಯಗಳೂ ಸುಖದುಃಖಗಳೂ ತನ್ನನ್ನೇ ಅವಲಂಬಿಸಿವೆಯೆಂದು ಅವನು ನಂಬುತ್ತಾನೆ. ದುಃಖ ಅಪಜಯ ಆತನ ನಿಘಂಟುವಿನಲ್ಲೇ ಇಲ್ಲ. ಗೀತೆಯ ಮಾತಿನಲ್ಲಿ ಸುಖದುಃಖ ಜಯಾಪಜಯ ಎರಡೂ ಆತನಿಗೆ ಒಂದೇ.

ಅಲ್ಲಲ್ಲಿ ಸತ್ಯಾಗ್ರಹಿಗಳ ಬಂಧನವಾಗುತ್ತಿತ್ತು. ಬಂಧನವಿಲ್ಲದಾಗ ಆಶ್ರಮದ ಬಾಹ್ಯ ಜೀವನ ನೋಡಿ ಅಲ್ಲಿ ಸತ್ಯಾಗ್ರಹಿಗಳಿದ್ದರೆಂದಾಗಲಿ, ಸತ್ಯಾಗ್ರಹ ಸಿದ್ಧತೆ ನಡೆಯುತ್ತಿದೆಯೆಂದಾಗಲಿ ಯಾರೂ ಹೇಳುವಂತಿರಲಿಲ್ಲ. ಯಾರಾದರೂ ಸಂಶಯಾತ್ಮಾ ಬಂದರೆ ಸ್ನೇಹಿತನಾದರೆ ಮರಗುತ್ತಿದ್ದ, ವಿರೋಧಿಯಾದರೆ ತಪ್ಪು ಹುಡುಕುತ್ತಿದ್ದ. "ಸೋಮಾರಿಗಳಾಗಿ, ಈ ಏಕಾಂತವಾಸದಲ್ಲಿರುವುದು ಇವರ ಕರ್ಮಫಲ, ಸೆರೆಮನೆಗೆ ಹೋಗಿ ಸೋತಿದ್ದಾರೆ. ಪಟ್ಟಣದ ಗದ್ದಲದಿಂದ ದೂರವಾಗಿ ಈ ತೋಟದಲ್ಲಿ ಸೇರಿ ಹಣ್ಣು ತಿಂದು ಸುಖವಾಗಿದ್ದಾರೆ" ಎನ್ನುತ್ತಿದ್ದ. ನೀತಿ ಧರ್ಮ ಮೀರಿ ಸತ್ಯಾಗ್ರಹ ಸೆರೆಮನೆ ಸೇರಲು ಸಾಧ್ಯವಿಲ್ಲ; ಈ ಶಾಂತಿ, ಆತ್ಮಸಂಯಮವೇ ಆತನ ಯುದ್ಧ ಸನ್ನದ್ಧತೆ; ಅನ್ಯರ ಸಹಾಯ ಬಯಸದೆ ಸತ್ಯಾಗ್ರಹಿ ತನ್ನ ನೆರವಿಗೆ ದೈವಸಹಾಯ ಮಾತ್ರ ನಂಬಿದ್ದಾನೆಂದು ಈ ವಿಮರ್ಶಕನಿಗೆ ಸ್ಪಷ್ಟಗೊಳಿಸುವುದು ಹೇಗೆ? ಅಂತ್ಯದಲ್ಲಿ ಅನಿರೀಕ್ಷಿತ ಸನ್ನಿವೇಶಗಳೊದಗಿದವು; ದೇವರೇ ಒದಗಿಸಿದ. ಅನಿರೀಕ್ಷಿತ ಸಹಾಯವೂ ಒದಗಿತು. ಏಕಾಏಕಿ ಅನಿರೀಕ್ಷಿತ ಸತ್ವ ಪರೀಕ್ಷಾ ಸಮಯವೂ ಬಂತು. ಕಟ್ಟಕಡೆಗೆ ವಿಜಯವೂ ಲಭಿಸಿತು. ಯಜ್ಞಕುಂಡದಲ್ಲಿ ಧುಮುಕಿದ್ದವರಿಗೆಲ್ಲ ಆ ವಿಜಯದ ಮಹತ್ವ ಗೊತ್ತು.

ಗೋಖಲೆ ಮುಂತಾದ ಪ್ರಮುಖರಿಗೆ ದಕ್ಷಿಣ ಆಫ್ರಿಕಕ್ಕೆ ಬಂದು ಕಣ್ಣಾರೆ ಭಾರತೀಯರ ಸ್ಥಿತಿಗತಿ ನೋಡಬೇಕೆಂದು ಪ್ರಾರ್ಥಿಸುತ್ತಿದ್ದೆ. ನಿಜವಾಗಿ ಯಾರಾದರೂ ಬಂದರೆ ಎಂದು ಅನುಮಾನವಿತ್ತು. ಯಾರಾದರೂ ಬರಬೇಕೆಂದು ರಿಚ್ ರೂ ಪ್ರಯತ್ನ ನಡೆಸಿದ್ದರು. ಆದರೆ ಸತ್ಯಾಗ್ರಹ ಇಳಿಮುಖವಾಗಿದ್ದಾಗ ಬರಲು ಯಾರಿಗೆ ಇಷ್ಟ? ೧೯೧೧ ರಲ್ಲಿ ಗೋಖಲೆ ಇಂಗ್ಲೆಂಡಿನಲ್ಲಿದ್ದರು. ದಕ್ಷಿಣ ಆಫ್ರಿಕದ ಹೋರಾಟ ವಿಷಯ ಅಭ್ಯಾಸಮಾಡಿದ್ದರು. ಭಾರತ ಶಾಸನಸಭೆಯಲ್ಲಿ ಚರ್ಚೆ ನಡೆಸಿ, ಭಾರತೀಯ ಕೂಲಿಗಾರರನ್ನು ನೇಟಾಲ್‌ಗೆ ಕಳಿಸುವುದನ್ನು ನಿಲ್ಲಿಸಬೇಕೆಂದು ೧೯೧೦ ನೇ ಫೆಬ್ರುವರಿ ೨೫ ರಲ್ಲಿ ನಿರ್ಣಯ ತಂದಿದ್ದರು. ನಿರ್ಣಯಕ್ಕೆ ಒಪ್ಪಿಗೆ ದೊರೆತಿತ್ತು. ಆಗ ನಾನು ಅವರೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದೆ. ಭಾರತ ಕಾರ್ಯದರ್ಶಿಯನ್ನು ಕಂಡು ದಕ್ಷಿಣ ಆಫ್ರಿಕಕ್ಕೆ ಹೋಗಿ ತಾವೇ ಅಲ್ಲಿನ ಸ್ಥಿತಿಗತಿ ಅರಿತುಕೊಳ್ಳುವುದಾಗಿ ತಿಳಿಸಿದರು. ಗೋಖಲೆಯವರ ಸಲಹೆಗೆ ಆತ ಒಪ್ಪಿದ. ಆರು ವಾರದ ಪ್ರವಾಸಕ್ಕೆ ಏರ್ಪಾಟು ಮಾಡಬೇಕೆಂದೂ ದಕ್ಷಿಣ ಆಫ್ರಿಕ ಇಂಥ ದಿನ ಬಿಡಬೇಕೆಂದೂ ನಿಷ್ಕರಿಸಿ ಗೋಖಲೆ ನನಗೆ ಪತ್ರ ಬರೆದರು. ನಮ್ಮ ಆನಂದಕ್ಕೆ ಪಾರವೇ ಇಲ್ಲವಾಯಿತು. ಆ ಮೊದಲು ದಕ್ಷಿಣ ಆಫ್ರಿಕಕ್ಕೆ ಯಾವ ಭಾರತೀಯ ಮುಖಂಡರೂ ಬಂದಿರಲಿಲ್ಲ; ಭಾರತೀಯರು ವಲಸೆ ಹೋದ ಯಾವ ದೇಶಕ್ಕೂ ಅವರ ಸ್ಥಿತಿಗತಿ ವಿಚಾರಿಸಲು ಯಾರೂ ಬಂದಿರಲಿಲ್ಲ. ಆದ್ದರಿಂದ ಗೋಖಲೆಯಂಥ ಮಾನ್ಯ ಮುಖಂಡರ ಭೇಟಿಯ ಮಹತ್ವ ಅರಿತು, ದಕ್ಷಿಣ ಆಫ್ರಿಕದ ಮುಖ್ಯ ಪಟ್ಟಣಗಳಿಗೆಲ್ಲ ಕರೆದುಕೊಂಡು ಹೋಗಿ ರಾಜಾಧಿರಾಜರಿಗೂ ಅಲಭ್ಯವಾದ ಸ್ವಾಗತಕೊಡಲು ನಿಶ್ಚಯಿಸಿದೆವು. ಸತ್ಯಾಗ್ರಹಿಗಳೂ ಇತರರೂ ಅದ್ಭುತ

ಸ್ವಾಗತಕೊಡಲು ಸಿದ್ಧ ಮಾಡತೊಡಗಿದರು. ಈ ಏರ್ಪಾಡಿನಲ್ಲಿ ಭಾಗಿಗಳಾಗಲು ಯೂರೋಪಿಯನ್‌ರನ್ನೂ ಆಹ್ವಾನಿಸಿದೆವು. ಸಾಮಾನ್ಯವಾಗಿ ಅವರೂ ಬಂದು ಸೇರಿದರು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ನಗರಭವನಗಳಲ್ಲಿಯೇ ಸಾರ್ವಜನಿಕ ಸಭೆ ಸೇರಬೇಕೆಂದೂ ಒಪ್ಪಿದರೆ ಆಯಾ ನಗರಗಳ ಪೌರಸಭಾಧ್ಯಕ್ಷರೇ ಸಭೆಯ ಅಧ್ಯಕ್ಷತೆ ವಹಿಸಬೇಕೆಂದೂ ಏರ್ಪಾಟು ಮಾಡಿದೆವು. ರೈಲುದಾರಿಯ ಮುಖ್ಯ ನಿಲ್ದಾಣಗಳನ್ನು ಸಿಂಗರಿಸಲು ನಿರ್ಧರಿಸಿದೆವು. ಅನೇಕ ಕಡೆ ಅಪ್ಪಣೆಯೂ ದೊರೆಯಿತು. ಸಾಮಾನ್ಯವಾಗಿ ಈ ಅನುಮತಿ ದೊರೆಯುವದು ಕಷ್ಟ. ಈ ನಮ್ಮ ಸಿದ್ಧತೆ ಅಧಿಕಾರಿಗಳ ಮೇಲೂ ಸತ್ಪರಿಣಾಮ ಮಾಡಿತು. ಅವರೂ ಸಾಧ್ಯವಾದ ಸಹಾನುಭೂತಿ ತೋರಿಸಿದರು. ಉದಾಹರಣೆಗಾಗಿ ಜೋಹಾನ್ಸಬರ್ಗ್‌ನಲ್ಲಿ ಪಾರ್ಕ್‌ಸ್ಟೇಷನ್ ಒಂದನ್ನಲಂಕರಿಸುವುದಕ್ಕೇ ಹದಿನೈದು ದಿನ ಹಿಡಿದವು. ಕಾಲೆನ್‌ಬಾಕ್ ಹಾಕಿಕೊಟ್ಟ ನಕ್ಷೆಯಂತೆ ದೊಡ್ಡದೊಂದು ಸುಸಜ್ಜಿತ ಸ್ವಾಗತಮಂಟಪ ರಚಿಸಿದೆವು.

ಆಫ್ರಿಕದ ಬಿಸಿ ಇಂಗ್ಲೆಂಡಿನಲ್ಲಿರುವಾಗಲೇ ಗೋಖಲೆಯವರಿಗೆ ಸ್ವಲ್ಪ ತಗಲಿತು. ಭಾರತ ಕಾರ್ಯದರ್ಶಿ ಗೋಖಲೆಯವರ ಉನ್ನತಸ್ಥಾನ, ಸಾಮ್ರಾಜ್ಯದಲ್ಲಿ ಅವರಿಗಿದ್ದ ಮನ್ನಣೆ ಮುಂತಾದವನ್ನೆಲ್ಲ ಮೊದಲೇ ಯೂನಿಯನ್ ಸರ್ಕಾರಕ್ಕೆ ತಿಳಿಸಿದ್ದ. ಆದರೆ ಅವರಿಗೆ ಹಡಗಿನ ಟಿಕೆಟ್ ತಂದು ಕೊಡುವವರೂ ಹಡಗಿನಲ್ಲಿ ಒಳ್ಳೇ ಕೋಣೆ ಕೊಡಿಸುವವರೂ ಯಾರು? ಗೋಖಲೆಯವರ ದೇಹ ಸ್ಥಿತಿ ಸೂಕ್ಷ್ಮವಾಗಿದ್ದುದರಿಂದ ಸ್ವಲ್ಪ ಏಕಾಂತವಾಸ, ವಿಶ್ರಾಂತಿಗೆ ಅನುಕೂಲವಾದ ಕೋಣೆ ಅವಶ್ಯವಾಗಿತ್ತು. ಹಡಗಿನ ಕಂಪನಿ ಅಧಿಕಾರಿಗಳು ಅಂತಹ ಕೋಣೆ ಇಲ್ಲವೆಂದು ನಿರ್ದಾಕ್ಷಿಣ್ಯವಾಗಿ ಹೇಳಿಬಿಟ್ಟರು. ಗೋಖಲೆಯವರೊ ಅವರ ಸ್ನೇಹಿತರೊಬ್ಬರೊ–ಸರಿಯಾಗಿ ಜ್ಞಾಪಕವಿಲ್ಲ–ಈ ವಿಷಯವನ್ನು ಭಾರತದ ಕಚೇರಿಗೆ ತಿಳಿಸಿದರು. ಭಾರತದ ಕಚೇರಿಯಿಂದ ಕಂಪನಿ ಡೈರೆಕ್ಟರುಗಳಿಗೆ ಒಂದು ಪತ್ರ ಹೋಯಿತು. ಕೋಣೆಯೇ ಇಲ್ಲವೆಂದ ಹಡಗಿನಲ್ಲಿ ಅತ್ಯಂತ ಅನುಕೂಲವಾದ ಕೋಣೆ ಗೋಖಲೆಯವರಿಗೆ ಮೀಸಲಾಯಿತು. ಈ ಆರಂಭದ ಅಪಸ್ವರದಿಂದ ಒಳಿತೇ ಆಯಿತು. ಗೋಖಲೆಯವರನ್ನು ಗೌರವದಿಂದ ಕಾಣಬೇಕೆಂದು ಹಡಗಿನ ಕ್ಯಾಪ್ಟನ್‌ಗೆ ಎಚ್ಚರಿಕೆ ಬಂತು. ಆದ್ದರಿಂದ ಗೋಖಲೆಯವರ ದಕ್ಷಿಣ ಆಫ್ರಿಕ ಪ್ರಯಾಣ ಸುಖಮಯವೂ ಶಾಂತಿಯುತವೂ ಆಯಿತು. ಗೋಖಲೆಯವರು ಎಷ್ಟು ಗಂಭೀರರೊ ಅಷ್ಟೇ ಹರ್ಷಚಿತ್ತರು, ಹಾಸ್ಯಭರಿತರು. ಹಡಗಿನ ಆಟಪಾಟ ವಿನೋದಗಳಲ್ಲಿ ಭಾಗಿಗಳಾಗುತ್ತ ಇದ್ದುದರಿಂದ ಶೀಘ್ರದಲ್ಲಿಯೇ ಪ್ರವಾಸಿಗರ ಪ್ರೀತಿ ಗಳಿಸಿದರು. ಪ್ರೆಟೋರಿಯಾದಲ್ಲಿ ತಮ್ಮ ಅತಿಥಿಗಳಾಗಿರಲು ಯೂನಿಯನ್ ಸರಕಾರ ಆಹ್ವಾನಿಸಿ, ಅವರ ಉಪಯೋಗಕ್ಕಾಗಿ ಸರಕಾರದ ರೈಲುಗಾಡಿಯನ್ನು ಕೊಟ್ಟಿತು. ಈ ವಿಷಯದಲ್ಲಿ ನನ್ನ ಸಲಹೆ ಪಡೆದು ಆ ಮೇಲೆ ಸರಕಾರದ ಆಹ್ವಾನ ಸ್ವೀಕರಿಸಿದರು.

೧೯೧೨ನೇ ಅಕ್ಟೋಬರ್ ೨೨ ರಲ್ಲಿ ಗೋಖಲೆ ಕೇಪ್ ಟೌನ್‌ನಲ್ಲಿ ಇಳಿದರು. ಅವರ ಆರೋಗ್ಯ ನಾನು ನಿರೀಕ್ಷಿಸಿದ್ದಕ್ಕಿಂತ ಸೂಕ್ಷ್ಮವಿತ್ತು. ಒಂದೇ ವಿಧವಾದ ಆಹಾರ

ಮಾತ್ರ ತೆಗೆದುಕೊಳ್ಳುತ್ತಿದ್ದರು. ಹೆಚ್ಚು ಆಯಾಸವಾಗುವಂತೆ ಇತ್ತು. ಆದ್ದರಿಂದ ಪ್ರವಾಸವನ್ನು ಆದಷ್ಟು ಮೊಟಕು ಮಾಡಿದೆ. ಕಡಮೆ ಮಾಡಲು ಸಾಧ್ಯವಿಲ್ಲವಾದರೆ ಮೊದಲಿನಂತೆ ಪೂರ್ಣ ಪ್ರವಾಸ ಮುಗಿಸಲು ಗೋಖಲೆಯವರು ಸಿದ್ದರಿದ್ದರು. ಅವರನ್ನು ಕೇಳದೆ ಮನಸ್ಸು ಬಂದಂತೆ ಕಾರ್ಯಕ್ರಮ ನಿರ್ಧರಿಸಿದ ನನ್ನ ತಪ್ಪಿಗೆ ಬಹಳ ವ್ಯಸನಪಟ್ಟೆ. ಗೋಖಲೆಯವರಿಗೆ ಸಂಪೂರ್ಣ ಏಕಾಂತವಾಸ ಬೇಕೆಂಬುದು ನನಗೆ ತಿಳಿದಿರಲಿಲ್ಲ. ಅದನ್ನು ಏರ್ಪಡಿಸುವುದು ಬಹು ಕಷ್ಟವಾಯಿತು. ನಿಜ ಹೇಳಬೇಕಾದರೆ ದೇಹಾಲಸ್ಯ ಉಳ್ಳವರ, ಹಿರಿಯರ ಸೇವೆ ಮಾಡಲು ನನಗೆ ತುಂಬಾ ಇಷ್ಟ. ಅನುಭವ. ಆ ರೀತಿ ಮಾಡಿದ್ದೆ. ಆದರೆ ನನ್ನ ತಪ್ಪು ಗೊತ್ತಾದ ಕೂಡಲೆ ಎಲ್ಲ ಏರ್ಪಾಟೂ ಬದಲಾಯಿಸಿ ಗೋಖಲೆಯವರಿಗೆ ಅದಷ್ಟು ಏಕಾಂತವಾಸ ವಿಶ್ರಾಂತಿ ದೊರೆಯುವಂತೆ ಮಾಡಿದೆ. ಪ್ರವಾಸ ಮುಗಿವವರೆಗೂ ನಾನೇ ಅವರ ಕಾರ್ಯದರ್ಶಿಯಾದೆ. ಸ್ವಯಂ ಸೇವಕರು– ಅವರಲ್ಲಿ ಕಾಲೆನ್ ಬಾಕ್ ಒಬ್ಬ–ಸದಾ ಸಿದ್ಧರಾಗಿರುತ್ತಿದ್ದರು ಗೋಖಲೆಯವರು ಯಾವಾಗಲೂ ತೊಂದರೆಗೀಡಾಗಲಿಲ್ಲ. ಸಹಾಯಕ್ಕೆ ಕೊರತೆಯಿರಲಿಲ್ಲ. ಕೇಪ್‌ಟೌನ್‌ನಲ್ಲಿ ಪ್ರಚಂಡ ಸಭೆ ಏರ್ಪಾಟಾಗಬೇಕಾದ ಅಗತ್ಯವಿತ್ತು. ಶ್ರೀನರ್ ಮನೆಯ ವಿಷಯ ಆಗಲೇ ತಿಳಿಸಿದ್ದೇನೆ. ಅವರಲ್ಲಿ ಹಿರಿಯರಾದ ಸೆನೆಟರ್ ಡಬ್ಲ್ಯು.ಪಿ.ಶ್ರೀನರನ್ನು ಆ ಸಭೆಗೆ ಅಧ್ಯಕ್ಷರಾಗಲು ಪ್ರಾರ್ಥಿಸಿದೆ. ಅವರು ಅಭಿಮಾನವಿಟ್ಟು ಒಪ್ಪಿದರು. ಸಭೆಯಲ್ಲಿ ಭಾರತೀಯರೂ ಯೂರೋಪಿಯನ್ ರೂ ಕಿಕ್ಕಿರಿದು ತುಂಬಿದ್ದರು. ಶ್ರೀನರ್ ಒಳ್ಳೆ ಮಾತಿನಲ್ಲಿ ಗೋಖಲೆಯವರಿಗೆ ಸ್ವಾಗತ ಬಯಸಿ ದಕ್ಷಿಣ ಆಫ್ರಿಕದ ಭಾರತೀಯರಲ್ಲಿ ಸಹಾನುಭೂತಿ ವ್ಯಕ್ತಪಡಿಸಿದರು. ಪೂರ್ಣ ವಿವೇಕಯುತವೂ ಗೌರವಯತವೂ ನಿರ್ದಾಕ್ಷಿಣ್ಯವೂ ಆದ ಸಣ್ಣ ಭಾಷಣಮಾಡಿ ಗೋಖಲೆ ಭಾರತೀಯರ ಮನ ಒಲಿಸಿದರು. ದಕ್ಷಿಣ ಆಫ್ರಿಕದಲ್ಲಿ ಕಾಲಿಟ್ಟ ದಿನವೇ ಗೋಖಲೆಯವರು ಅಲ್ಲಿನ ನಾನಾ ಜನಾಂಗಗಳ ಅಂತಃಕರಣ ಸೂರೆಗೊಂಡರು.

ಗೋಖಲೆಯವರು ಜೋಹಾನ್ಸ್ ಬರ್ಗ್‌ಗೆ ಎರಡು ದಿನ ರೈಲು ಪ್ರಯಾಣ ಮಾಡಬೇಕಾಯಿತು. ಟ್ರಾನ್ಸ್‌ವಾಲ್ ನಮ್ಮ ರಣಕ್ಷೇತ್ರ. ಕೇಪ್‌ಟೌನ್ ಬಿಟ್ಟ ಮೇಲೆ ಟ್ರಾನ್ಸ್‌ವಾಲ್ ಗಡಿಯಲ್ಲಿ ಮೊದಲನೆ ದೊಡ್ಡ ಸ್ಟೇಷನ್ ಕ್ಲರ್ಕ್ಸ್ ಡ್ರಾಪ್. ಇಲ್ಲೆಲ್ಲ ತುಂಬ ಭಾರತೀಯರಿದ್ದ ಕಾರಣ ಕ್ಲರ್ಕ್ಸ್ ಡ್ರಾಪ್‌ನಲ್ಲೂ, ಮಧ್ಯೆ ಪಾಟ್‌ಷೆಫ್ ಸ್ಟೂಮ್, ಕ್ರೂಗರ್ಸ್ ಡ್ರಾಪ್‌ಗಳಲ್ಲಿ ಒಂದೊಂದು ದಿನವಿದ್ದು ಸಭೆ ನಡೆಸಿ ಮುಂದೆ ಹೋಗಬೇಕಾಯಿತು. ಆದ್ದರಿಂದ ಕ್ಲರ್ಕ್ಸ್‌ಡ್ರಾಪ್‌ನಿಂದ ಸ್ಪೆಷಲ್ ರೈಲಿನಲ್ಲಿ ಹೊರಟರು. ಆ ಸ್ಥಳಗಳ ಪೌರಸಭಾಧ್ಯಕ್ಷರೇ ಅಲ್ಲಿ ಅಧ್ಯಕ್ಷತೆ ವಹಿಸಿದ್ದರು. ಎಲ್ಲಿಯೂ ರೈಲು ಒಂದು ಎರಡು ಗಂಟೆಗೆ ಹೆಚ್ಚು ನಿಲ್ಲುತ್ತಿರಲಿಲ್ಲ. ಕಾಲಕ್ಕೆ ಸರಿಯಾಗಿ ಗಾಡಿ ಜೋಹಾನ್ಸ್ ಬರ್ಗ್ ಸೇರಿತು. ನಿಲ್ದಾಣದಲ್ಲಿ ಒಂದು ವೇದಿಕೆ ಕಟ್ಟಿ ಬೆಲೆ ಬಾಳುವ ರತ್ನಗಂಬಳಿ ಹಾಸಿದ್ದರು. ಇತರ ಯೂರೋಪಿಯನ್‌ರಲ್ಲದೆ ಜೋಹಾನ್ಸ್ ಬರ್ಗ್ ಮೇಯರಾದ ಎಲ್ಲಿಸ್ಸರೂ ಬಂದಿದ್ದರು. ಜೋಹಾನ್ಸ್ ಬರ್ಗ್‌ನಲ್ಲಿರುವವರೆಗೂ ಗೋಖಲೆಯವರ ಉಪಯೋಗಕ್ಕೆ ಎಲ್ಲಿಸ್ಸರು

ತಮ್ಮ ಮೋಟಾರು ಕೊಟ್ಟರು. ರೈಲ್ವೆ ನಿಲುಮನೆಯಲ್ಲಿಯೇ ಗೋಖಲೆಯವರಿಗೆ ಮಾನಪತ್ರ ಅರ್ಪಿಸಲಾಯಿತು. ಎಲ್ಲ ಕಡೆಗಳಲ್ಲೂ ಮಾನಪತ್ರ ಕೊಡಲಾಯಿತು. ಆದರೆ ಜೋಹಾನ್ಸ್ ಬರ್ಗ್ ಮಾನಪತ್ರವನ್ನು ರ್‍ಹೊಡೇಷಿಯನ್ ತೇಗದ ಮರದಲ್ಲಿ ಜೋಡಿಸಿದ ರ್‍ಯಾಂಡ್ ಭಂಗಾರ ಸಿಂಹಳದ್ವೀಪಗಳ ನಕ್ಷೆಯಿತ್ತು ಎರಡು ಕಡೆಗಳಲ್ಲಿ ಎರಡು ಬಂಗಾರದ ಚಿತ್ರಗಳಿದ್ದವು. ಒಂದು ಕಡೆ ತಾಜಮಹಲ್ ಚಿತ್ರ, ಇನ್ನೊಂದು ಕಡೆ ಭಾರತದ ಪ್ರಕೃತಿ. ಮರದ ಚೌಕಟ್ಟಿನ ಮೇಲೂ ಅಂದವಾಗಿ ಭಾರತೀಯ ಚಿತ್ರ ಬಿಡಿಸಲಾಗಿತ್ತು. ಸ್ವಾಗತಿಸಲು ಬಂದವರ ಪರಿಚಯ, ಮಾನಪತ್ರ ಓದುವದು, ಗೋಖಲೆಯವರ ಉತ್ತರ, ಇತರ ಮಾನಪತ್ರಗಳ ಸಮರ್ಪಣೆ (ಓದಿದಂತೆ ಭಾವಿಸಿ)–ಎಲ್ಲ ಇಪ್ಪತ್ತು ನಿಮಿಷಗಳಲ್ಲಿ ಮುಗಿಯಿತು. ಮಾನಪತ್ರ ಇದೇ ನಿಮಿಷಗಳಲ್ಲಿ ಓದಿ ಮುಗಿಸುವಷ್ಟು ಚಿಕ್ಕದಾಗಿತ್ತು. ಗೋಖಲೆಯವರ ಉತ್ತರವೂ ಐದು ನಿಮಿಷಕ್ಕಿಂತ ಹೆಚ್ಚು ಹಿಡಿಯಲಿಲ್ಲ. ಸ್ವಯಂಸೇವಕರು ಉತ್ತಮ ಶಿಸ್ತಿನಿಂದ ವ್ಯವಸ್ಥೆ ಕಾಪಾಡಿದರು. ನಿಲ್ದಾಣದಲ್ಲಿ ಎಷ್ಟು ಜನ ನಿಲ್ಲಬಹುದಿತ್ತೋ ಅಷ್ಟು ಜನರಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ಕೊಟ್ಟಿದ್ದರು. ಹೊರಗೆ ವಿಶೇಷ ಜನಸಂದಣಿ ಇದ್ದರೂ ನಿಶ್ಯಬ್ದವಾಗಿತ್ತು; ಯಾರಿಗೂ ಓಡಾಟಕ್ಕೆ ತೊಂದರೆಯಾಗಲಿಲ್ಲ.

ಜೋಹಾನ್ಸ್ ಬರ್ಗ್ ಗೆ ಐದು ಮೈಲಿ ದೂರ ಒಂದು ಗುಡ್ಡದ ಮೇಲಿದ್ದ ಕಾಲೆನ್ ಬಾಕ್‌ರ ಸುಂದರ ಭವನವೊಂದರಲ್ಲಿ ಗೋಖಲೆ ಬಿಡಾರ ಮಾಡಿದರು. ಮನಮೋಹಕ ಪ್ರಕೃತಿ ಸೌಂದರ್ಯ, ಶಾಂತ ವಾತಾವರಣ, ನಿರಾಡಂಬರವಾದರೂ ಕಲಾಪೂರ್ಣ ಭವನ. ಗೋಖಲೆಯವರು ಆ ಸ್ಥಳವನ್ನು ಬಹಳ ಮೆಚ್ಚಿದರು. ಭೇಟಿಗೆ ಬಂದರವನ್ನು ನೋಡಲು ನಗರದಲ್ಲೇ ಒಂದು ವಿಶೇಷ ಕಚೇರಿ ತೆರೆದೆವು. ಗೋಖಲೆಯವರ ವಿಶ್ರಾಂತಿಗೆ ಒಂದು, ಭೇಟಿಗೆ ಒಂದು ಬಂದವರು ಕುಳಿತು ಕಾದಿರಲು ಒಂದು–ಈ ರೀತಿ ಮೂರು ಕೊಠಡಿಗಳಿದ್ದವು. ನಗರದ ಕೆಲವು ಪ್ರಮುಖ ವ್ಯಕ್ತಿಗಳನ್ನು ಸಂದರ್ಶಿಸಲು ಗೋಖಲೆಯವರನ್ನೇ ಕರೆದುಕೊಂಡು ಹೋದೆವು. ಯೂರೋಪಿಯನ್ ಅಭಿಪ್ರಾಯ ತಿಳಿಯಲು ಯೂರೋಪಿಯನ್‌ರದೇ ಒಂದು ಸಭೆ ಸೇರಿಸಿದೆವು. ಇದಲ್ಲದೆ ಗೋಖಲೆಯವರ ಗೌರವಾರ್ಥ ಒಂದು ಭೋಜನಕೂಟ ಏರ್ಪಡಿಸಿ ನೂರೈವತ್ತು ಜನ ಯೂರೋಪಿಯನ್‌ರೂ ಸೇರಿ ನಾಲ್ಕನೂರು ಜನರಿಗೆ ಆಹ್ವಾನ ಕಳಿಸಿದ್ದೆವು. ಭಾರತೀಯರಿಗೆ ಟಿಕೆಟ್‌ಗೆ ಒಂದು ಗಿನಿಯಂತೆ ವಿಧಿಸಿದೆವು. ಈ ಏರ್ಪಾಟಿನಿಂದ ಔತಣವೆಚ್ಚವಹಿಸಲು ಅನುಕೂಲವಾಯಿತು. ಅಡಿಗೆಯೆಲ್ಲಾ ಸಸ್ಯಾಹಾರದ್ದು. ಮಾದಕ ಪದಾರ್ಥಗಳನ್ನು ಬಹಿಷ್ಕರಿಸಿದೆವು. ಸ್ವಯಂ ಸೇವಕರೇ ಎಲ್ಲಾ ಅಡಿಗೆ ಮಾಡಿದರು ಅದೆಲ್ಲಾ ಇಲ್ಲಿ ವಿವರಿಸಲು ಕಷ್ಟ. ದಕ್ಷಿಣ ಆಫ್ರಿಕದಲ್ಲಿ ಹಿಂದೂ ಮುಸಲ್ಮಾನರ ಸಹಪಜ್ತೆಗೆ ಆತಂಕವಿರಲಿಲ್ಲ. ಸಸ್ಯಾಹಾರಿಗಳು ಮಾತ್ರ ಮಾಂಸ ಮುಟ್ಟುತ್ತಿರಲಿಲ್ಲ. ಭಾರತೀಯರಲ್ಲಿ ಕೆಲವರು ಕ್ರಿಶ್ಚಿಯನ್‌ರು. ಉಳಿದವರಂತೆ ಅವರಲ್ಲೂ ನನಗೆ ತುಂಬ ಬಳಿಕೆ ಇತ್ತು. ಈ ಕ್ರಿಶ್ಚಿಯನ್‌ರೆಲ್ಲ ಕೂಲಿಗಾರರಾಗಿ ಬಂದವರ ಸಂತಾನ. ಹೊಟಲುಗಳಲ್ಲಿ ಚಾಕರರಾಗಿ ಜೀವನ ನಡೆಸುತ್ತಿದ್ದರು. ಹದಿನೈದು ಭಕ್ಷ್ಯ ಮಾಡಿ ದೊಡ್ಡ ಔತಣ ಮಾಡಿಸಲು ಇವರ

ಸಹಾಯದಿಂದ ಸಾಧ್ಯವಾಯಿತು. ಒಂದೇ ಕಡೆ ಅಷ್ಟು ಜನ ಭಾರತೀಯರೊಂದಿಗೆ ಕುಳಿತು ಮಾದಕ ದ್ರವ್ಯಗಳಿಲ್ಲದೆ ಬರೀ ಸಸ್ಯಾಹಾರ ಊಟಮಾಡಿದ್ದು ಯೂರೋಪಿಯನ್‌ರಿಗೆ ಇದೇ ಮೊದಲ ಅನುಭವ. ಅವರು ಬಹಳ ವಿಸ್ಮಿತರಾದರು. ಅನೇಕರಿಗೆ ಈ ಎಲ್ಲ ಅನುಭವವೂ ಹೊಸದು. ಎಲ್ಲರಿಗೂ ಇದರಲ್ಲಿ ಎರಡಂತೂ ಹೊಸ ಅನುಭವ.

ದಕ್ಷಿಣ ಆಫ್ರಿಕದಲ್ಲಿ ಗೋಖಲೆಯವರು ಬಹಳ ಮುಖ್ಯವೂ ದೀರ್ಘವೂ ಆದ ಭಾಷಣಮಾಡಿದ್ದು ಈ ಔತಣದಲ್ಲಿ. ಈ ಭಾಷಣ ಸಿದ್ಧಗೊಳಿಸುವ ಮುಂಚೆ ನಮ್ಮನ್ನು ತೀಕ್ಷ್ಣವಾಗಿ ಪ್ರಶ್ನಿಸಿದರು. ಸ್ಥಳೀಯ ಅಭಿಪ್ರಾಯವನ್ನು ತಿರಸ್ಕರಿಸದೆ ತಮ್ಮ ಕೈಲಾದ ಮಟ್ಟಿಗೆ ಆ ಅಭಿಪ್ರಾಯಕ್ಕೆ ಮನ್ನಣೆ ಕೊಡುವುದು ತಮ್ಮ ಅಭ್ಯಾಸವೆಂದೂ, ಆದ್ದರಿಂದ ನಮ್ಮ ದೃಷ್ಟಿಯಲ್ಲಿ ತಾವು ಏನು ಭಾಷಣ ಮಾಡಬೇಕೆಂದು ನಾನು ತಿಳಿಸಬೇಕೆಂದೂ ಕೇಳಿದರು. ಅದನ್ನೆಲ್ಲ ಬರವಣಿಗೆಯಲ್ಲಿ ಕೊಡಬೇಕು, ಆ ಕರಡಿನಿಂದ ತಾವು ಒಂದು ಅಂಶವನ್ನೂ ಉಪಯೋಗಿಸದಿದ್ದರೂ ನಾನು ಅಸಮಾಧಾನಪಡಬಾರದು, ಕರಡು ಚಿಕ್ಕದೂ ಇರಬಾರದು ದೊಡ್ಡದೂ ಇರಬಾರದು; ಆದರೆ ಮುಖ್ಯವಾದ ಯಾವ ಅಂಶವನ್ನೂ ನಾನು ಬಿಟ್ಟಿರಬಾರದು ಎಂದು ತಿಳಿಸಿದರು. ಗೋಖಲೆಯವರು ನನ್ನ ಭಾಷೆಯನ್ನೂ ಉಪಯೋಗಿಸಲೆ ಇಲ್ಲ. ಗೋಖಲೆಯಂಥ ಪ್ರತಿಭಾಶಾಲಿಗಳು ನನ್ನ ಇಂಗ್ಲಿಷ್ ಒಕ್ಕಣೆ ಉಪಯೋಗಿಸಬೇಕೆ? ನನ್ನ ಭಾವನೆಗಳನ್ನೂ ಉಪಯೋಗಿಸಲಿಲ್ಲ. ನನ್ನ ಅಭಿಪ್ರಾಯ ಒಪ್ಪಿ ಪ್ರಾಮುಖ್ಯತೆ ಕೊಟ್ಟದ್ದರಿಂದ ಅವುಗಳನ್ನು ತಮ್ಮ ಭಾಷಣದಲ್ಲಿ ಹೇಗಾದರೂ ಸೇರಿಸುತ್ತಾರೆಂದು ಭಾವಿಸಿದೆ. ಆದರೆ ಗೋಖಲೆಯವರ ಅದ್ಭುತ ಭಾಷಣ ಸರಣಿಯಿಂದ ನಾವು ಕೊಟ್ಟ ಸೂಚನೆ ಅದರಲ್ಲಿ ಸೇರಿವೆಯೆ ಇಲ್ಲವೆ ಎಂದು ಯಾರೂ ಹೇಳುವಂತೆ ಇರಲಿಲ್ಲ. ಗೋಖಲೆಯವರ ಭಾಷಣವನ್ನು ನಾನು ಗಮನಿಸಿ ಕೇಳುತ್ತಿದ್ದೆ. ಈ ವಿಷಯ ಮರೆತರು, ಈ ಶಬ್ದ ತಪ್ಪು ಎಂದು ಹೇಳಬಹುದಾದ ಒಂದು ಸನ್ನಿವೇಶವೂ ನನಗೆ ನೆನಪಿಲ್ಲ. ಅವರ ಭಾಷಣಗಳು ಸತ್ಯಾನ್ವೇಷಣೆಯ ಅಚಲಭಕ್ತಿ, ಸತತ ಪ್ರಯತ್ನದ ಫಲವಾದ್ದರಿಂದ ಯಾವಾಗಲೂ ಸ್ಪಷ್ಟವಾಗಿ ಬಿಗಿಯಾಗಿ ಗಂಭೀರವಾಗಿ ಇರುತ್ತಿದ್ದವು.

ಜೋಹಾನ್ಸ್ ಬರ್ಗ್‌ನಲ್ಲಿ ಭಾರತೀಯರದೇ ಒಂದು ಸಭೆ ಸೇರಿಸಬೇಕಾಯಿತು. ಯಾವಾಗಲೂ ಮಾತೃಭಾಷೆ ಅಥವಾ ಭಾರತದ ರಾಷ್ಟ್ರಭಾಷೆ ಹಿಂದೂಸ್ತಾನಿಯಲ್ಲಿ ಭಾಷಣ ಮಾಡಬೇಕೆಂದು ನಾನು ಒತ್ತಾಯ ಮಾಡಿದ್ದೇನೆ. ಈ ನಿರ್ಧಾರದಿಂದ ದಕ್ಷಿಣ ಆಫ್ರಿಕದ ಭಾರತೀಯರಲ್ಲಿ ನಿಕಟ ಬಾಂಧವ್ಯ ಬೆಳೆಸಲು ನನಗೆ ಬಹಳ ಅನುಕೂಲವಾಯಿತು. ಗೋಖಲೆಯವರೂ ಹಿಂದೂಸ್ತಾನಿಯಲ್ಲೇ ಭಾಷಣಮಾಡಬೇಕೆಂದು ನನ್ನ ಆಶೆ. ಈ ವಿಷಯದಲ್ಲಿ ಗೋಖಲೆಯವರ ಅಭಿಪ್ರಾಯ ನನಗೆ ಗೊತ್ತು. ಅರ್ಧಮರ್ಧ ಹಿಂದೀ ಮಾತನಾಡಲು ಅವರು ಒಪ್ಪಲಿಲ್ಲ; ಮರಾಠಿ ಅಥವಾ ಇಂಗ್ಲಿಷ್‌ನಲ್ಲಿ ಭಾಷಣ ಮಾಡುವುದಾಗಿ ಹೇಳಿದರು. ದಕ್ಷಿಣ ಆಫ್ರಿಕದಲ್ಲಿ ಮರಾಠಿ ಮಾತನಾಡುವುದು ಕೃತಕವಾಗಿರುತ್ತಿತ್ತು. ಮರಾಠಿಯಲ್ಲಿ ಮಾತನಾಡಿದರೂ ಉತ್ತರ ಹಿಂದೂಸ್ತಾನದ ಭಾರತೀಯರ ಗುಜರಾತಿಗಳು ಉಪಯೋಗಾರ್ಥ ಹಿಂದೂಸ್ತಾನಿ ಅನುವಾದ ಬೇಕಾಗಿತ್ತು.

ಹೀಗಿರುವಾಗ ಇಂಗ್ಲಿಷ್‌ನಲ್ಲೆ ಏಕೆ ಭಾಷಣ ಮಾಡಬಾರದು? ಆದರೆ ಮರಾಠಿಯಲ್ಲೇ ಮಾತನಾಡಬೇಕೆಂದು ಸಲಹೆ ಕೊಡಲು ಇನ್ನೊಂದು ಮುಖ್ಯ ಕಾರಣವಿತ್ತು. ಜೋಹಾನ್ಸ್ ಬರ್ಗ್‌ನಲ್ಲಿ ಕೆಲವು ಮಹಾರಾಷ್ಟ್ರ ಹಿಂದುಗಳೂ ಕೊಂಕಣಿ ಮುಸಲ್ಮಾನರೂ ಇದ್ದರು. ಅವರಿಗೆಲ್ಲ ಗೋಖಲೆಯವರು ಮರಾಠಿಯಲ್ಲೇ ಮಾತನಾಡಲೆಂದು ಇಷ್ಟ. ತಮ್ಮ ಮಾತೃಭಾಷೆಯಲ್ಲೇ ಮಾತನಾಡಲು ಗೋಖಲೆಯವರನ್ನು ಪ್ರಾರ್ಥಿಸಲು ನನಗೆ ತಿಳಿಸಿದರು. ಮರಾಠಿಯಲ್ಲಿ ಮಾತನಾಡಿದರೆ ಆ ನನ್ನ ಸ್ನೇಹಿತರೆಲ್ಲ ಆನಂದಪಡುವರೆಂದೂ, ನಾನು ಹಿಂದೂಸ್ತಾನಿಗೆ ಅನುವಾದ ಮಾಡುವೆನೆಂದೂ ತಿಳಿಸಿದೆ. ಗೋಖಲೆಯವರು "ನಿನಗೆ ಬರುವ ಹಿಂದೂಸ್ತಾನಿ ನನಗೆ ಗೊತ್ತಿದೆ. ನೀನೇನು ಜಂಭ ಕೊಚ್ಚಿಕೊಳ್ಳುವಹಾಗಿಲ್ಲ. ಈಗ ಮರಾಠಿಯನ್ನು ಹಿಂದೂಸ್ತಾನಿಗೆ ಅನುವಾದ ಮಾಡುವುದಾಗಿ ಬೇರೆ ಹೇಳುತ್ತೀ. ಇಷ್ಟು ಮರಾಠಿ ಪಾಂಡಿತ್ಯ ಎಲ್ಲಿ ಸಂಪಾದಿಸಿದೆ" ಎಂದು ಹೇಳುತ್ತ ಘೊಳ್ಳೆಂದು ನಗಲಾರಂಭಿಸಿದರು.

"ಹಿಂದೂಸ್ತಾನಿಯಲ್ಲಿರುವ ಪಾಂಡಿತ್ಯ ನನಗೆ ಮರಾಠಿಯಲ್ಲೂ ಇದೆ. ಮರಾಠಿ ಒಂದು ಮಾತೂ ಆಡಲು ಬಾರದಿದ್ದರೂ, ನಿಮ್ಮ ಮರಾಠಿ ಭಾಷಣದ ಸಾರಾಂಶ ಗ್ರಹಿಸುವ ಸಾಮರ್ಥ್ಯವಿದೆ. ಏನೇ ಆಗಲಿ, ತಪ್ಪು ತಿಳಿಸುವುದಿಲ್ಲ. ಮರಾಠಿ ಚೆನ್ನಾಗಿ ತಿಳಿದು ಅನುವಾದ ಮಾಡಲು ಶಕ್ತರದವರು ಇದ್ದಾರೆ. ಆದರೆ ಅವರು ನಿಮಗೆ ಒಪ್ಪಿಗೆಯಾಗಲಾರರು. ಆದ್ದರಿಂದ ನನ್ನ ಮಾತು ಲಾಲಿಸಿ, ಮರಾಠಿಯಲ್ಲೇ ಮಾತನಾಡಿ. ನನ್ನ ಕೊಂಕಣಿ ಸ್ನೇಹಿತರಂತೆ ನನಗೂ ನಿಮ್ಮ ಮರಾಠಿ ಭಾಷಣ ಕೇಳಲು ಕುತೂಹಲ" ಎಂದೆ.

"ಯಾವಾಗಲೂ ನಿನ್ನದೇ ದಾರಿ ಈಗ ನಿನ್ನ ಕೈಲಿ ಸಿಕ್ಕಿದ್ದೇನೆ; ಬೇರೆ ಉಪಾಯವಿಲ್ಲ" ಎಂದು ಹೇಳಿ ಗೋಖಲೆ ಒಪ್ಪಿದರು. ಅಲ್ಲಿಂದ ಜಾಂಜಿಬಾರ್‌ವರೆಗೆ ಅಂಥ ಸಂದರ್ಭಗಳಲ್ಲಿ ಮರಾಠಿಯಲ್ಲೇ ಮಾತನಾಡುತ್ತ ಬಂದರು. ನಾನೇ ಅನುವಾದಕ. ಶುದ್ಧ ಸಾಂಪ್ರದಾಯಿಕ ಸರಣಿ ಇಂಗ್ಲಿಷ್‌ನಲ್ಲಿ ಮಾತನಾಡುವುದಕ್ಕಿಂತ ಮಾತೃಭಾಷೆ ಅಥವಾ ವ್ಯಾಕರಣ ರಹಿತ ಅಶುದ್ಧ ಹಿಂದಿಯಲ್ಲಾದರೂ ಮಾತನಾಡುವುದು ಒಳ್ಳೆಯದೆಂಬ ನನ್ನ ಅಭಿಪ್ರಾಯಕ್ಕೆ ಗೋಖಲೆಯವರನ್ನು ಒಲಿಸಿದೆನೊ ಇಲ್ಲವೊ ತಿಳಿಯದು. ದಕ್ಷಿಣ ಆಫ್ರಿಕದಲ್ಲಿ ನನ್ನ ಪ್ರೀತಿಗಾಗಿ ಮರಾಠಿ ಮಾತನಾಡಿದರೋ? ಅದೂ ತಿಳಿಯದು. ಕೆಲವು ಭಾಷಣಗಳಾದ ಮೇಲೆ ಅದರ ಪರಿಣಾಮ ನೋಡಿ ಅವರೂ ಸಂತೋಷಪಟ್ಟರು. ತತ್ವಭೇದವಿಲ್ಲದ ಸಂದರ್ಭಗಳಲ್ಲಿ ತಮ್ಮ ಅನುಯಾಯಿಗಳ ಮನ ಒಲಿಸುವದು ಒಳ್ಳೆಯದೆಂದು ಗೋಖಲೆಯವರು ದಕ್ಷಿಣ ಆಫ್ರಿಕದಲ್ಲಿ ಅನೇಕ ಬಾರಿ ತೋರಿಸಿ ಕೊಟ್ಟರು.

೩೭. ಗೋಖಲೆಯವರ ಪ್ರವಾಸ

ಜೊಹಾನ್ಸ್ ಬರ್ಗ್ ಮುಗಿಸಿ ಗೋಖಲೆ ನೇಟಾಲ್‌ಗೆ ಭೇಟಿಕೊಟ್ಟು ಆ ಮೇಲೆ ಪ್ರೆಟೋರಿಯಾಕ್ಕೆ ಹೋದರು. ಅಲ್ಲಿ ಯೂನಿಯನ್ ಸರಕಾರದವರು ಅವರನ್ನು ಟ್ರಾನ್ಸ್‌ವಾಲ್ ಹೋಟೆಲಿನಲ್ಲಿ ಇಳಿಸಿದರು. ಅಲ್ಲಿಯೇ ಜನರಲ್ ಬೋಥಾ, ಜನರಲ್ ಸ್ಮಟ್ಸ್ ಮುಂತಾದ ಸರ್ಕಾರದ ಮಂತ್ರಿಗಳನ್ನು ನೋಡಬೇಕಾಗಿತ್ತು. ಗೋಖಲೆಯವರೇ

ಕೇಳಿದರೆ ಹಿಂದಿನ ಸಾಯಂಕಾಲ, ಇಲ್ಲವಾದರೆ ಪ್ರತಿದಿನ ಬೆಳಿಗ್ಗೆ ಆಯಾ ದಿನದ ಕಾರ್ಯಕ್ರಮ ಅವರಿಗೆ ತಿಳಿಸುವದು ನನ್ನ ರೂಢಿ. ಯೂನಿಯನ್ ಮಂತ್ರಿಗಳ ಭೇಟಿ ಅತಿ ಮುಖ್ಯ ಕಾರ್ಯಕ್ರಮ. ಗೋಖಲೆಯವರೊಂದಿಗೆ ನಾನು ಹೋಗಕೂಡದಾಗಿಯೂ, ಬರುವದಾಗಿ ಸಹ ಅವರಿಗೆ ತಿಳಿಸಬಾರದಾಗಿಯೂ ತೀರ್ಮಾನಿಸಿದೆವು. ನಾನು ಇದ್ದರೆ ಗೋಖಲೆಯವರಿಗೂ ಮಂತ್ರಿಗಳಿಗೂ ಮಧ್ಯೆ ಅಡ್ಡಗೋಡೆಯಾದೀತು. ಭಾರತೀಯರ, ನನ್ನ ತಪ್ಪುಗಳನ್ನು ಮನಬಿಚ್ಚಿ ತಿಳಿಸಲು ಅವರು ಸಂಕೋಚ ಪಡಬಹುದು. ತಮ್ಮ ಮುಂದಿನ ನೀತಿ ತಿಳಿಸಲು ಬಯಸಿಯೂ ಹಿಂಜರಿಯಬಹುದು. ಈ ಎಲ್ಲ ಕಾರಣದಿಂದ ಗೋಖಲೆಯವರೊಬ್ಬರೇ ಹೋಗಬೇಕಾಗಿ ಬಂದು ಅವರ ಜವಾಬ್ದಾರಿಯೂ ಹೆಚ್ಚಿತು. ಅಜಾಗರೂಕತೆಯಿಂದ ಯಾವುದಾದರೂ ವಿಷಯದಲ್ಲಿ ಗೋಖಲೆಯವರು ತಪ್ಪು ಮಾಡಿದರೆ, ಮುಂಚೆ ನಾವು ಅವರ ಗಮನಕ್ಕೆ ಸಳೆದ, ಮಂತ್ರಿಗಳೇ ಯಾವುದಾದರೂ ಹೊಸ ವಿದ್ಯಮಾನ ಗಮನಕ್ಕೆ ತಂದಾಗ ಗೋಖಲೆಯವರು ನಿರುತ್ತರರಾದರೆ, ಜವಾಬ್ದಾರಿಯುತ ಭಾರತೀಯ ಮುಖಂಡರಿಲ್ಲದೆ ಭಾರತೀಯರ ಪರ ಗೋಖಲೆಯವರು ಏನಾದರೂ ಒಪ್ಪಂದಮಾಡಿಕೊಳ್ಳುವ ಸಂದರ್ಭ ಒದಗಿದರೆ ಏನು ಮಾಡಬೇಕು? ಗೋಖಲೆಯವರು ಒಂದೇ ಮಾತಿನಲ್ಲಿ ಈ ಎಲ್ಲ ತೊಂದರೆ ನಿವಾರಿಸಿದರು. ಅದುವರೆಗಿನ ಭಾರತೀಯರ ಸ್ಥಿತಿಗತಿಯ ಸಂಕ್ಷಿಪ್ತ ಇತಿಹಾಸವನ್ನೂ ಒಪ್ಪಂದವಾಗಲು ಅಗತ್ಯವಾದ ಅಪರಿಹಾರ್ಯ ಅಂಶಗಳನ್ನೂ ಬರೆದುಕೊಡಬೇಕೆಂದು ಹೇಳಿದರು. ಆ ಪಟ್ಟಿಯಲ್ಲಿಲ್ಲದ ಯಾವುದಾದರೂ ಹೊಸ ಸಮಸ್ಯೆ ಬಂದರೆ ತಮಗೆ ಗೊತ್ತಿಲ್ಲವೆಂದು ತಿಳಿಸುವದಾಗಿ ಹೇಳಿ ನಿಶ್ಚಿಂತರಾದರು. ತಮ್ಮ ಪೂರ್ವೇತಿಹಾಸ ಬರೆದು ಅವರಿಗೆ ತೋರಿಸುವ ಕಾರ್ಯ ಒಂದೇ ಉಳಿಯಿತು. ನಾಲ್ಕು ಪ್ರಾಂತಗಳ ಭಾರತೀಯರ ಹದಿನೆಂಟು ವರ್ಷಗಳ ಚರಿತ್ರೆಯ ಏರಿಳಿತಗಳನ್ನು ಕೇವಲ ಹತ್ತಿಪ್ಪತ್ತು ಪುಟಗಳಲ್ಲಿ ಬರೆಯುವದು ಅಸಾಧ್ಯವಾಯಿತು. ಗೋಖಲೆಯವರಿಗೆ ಅದನ್ನು ನೋಡಲು ಬಿಡುವೂ ಇರಲಿಲ್ಲ. ಓದಿ ಅನುಮಾನ ಪರಿಹಾರಕ್ಕೆ ಅನೇಕ ಪ್ರಶ್ನೆ ಕೇಳಬೇಕಾಗಿತ್ತು. ಆದರೆ ಗೋಖಲೆಯವರಿಗೆ ಅಸಾಧಾರಣ ಜ್ಞಾಪಕಶಕ್ತಿ; ಕಷ್ಟ ಸಹಿಸಲು ಅಪಾರ ಸಾಮರ್ಥ್ಯ ಇತ್ತು. ರಾತ್ರಿಯೆಲ್ಲ ನಮ್ಮೊಂದಿಗೆ ನಿದ್ದೆ ಗೆಟ್ಟು ಪ್ರತಿಯೊಂದು ಸಮಸ್ಯೆಯನ್ನೂ ಅರಿತರು. ಸರಿಯೇ ತಪ್ಪೇ ಎಂದು ಸಂದೇಹ ನಿವೃತ್ತಿಗಾಗಿ ಎಲ್ಲ ವಿಷಯಗಳನ್ನೂ ಪುನಃ ಅವಲೋಕನ ಮಾಡಿದರು. ಕೊನೆಗೆ ಅವರಿಗೆ ಸಮಾಧಾನವಾಯಿತು; ನನಗಂತೂ ಯಾವ ಅನುಮಾನವೂ ಇರಲಿಲ್ಲ.

ಗೋಖಲೆಯವರು ಮಂತ್ರಿಗಳೊಡನೆ ಎರಡು ಗಂಟೆಕಾಲ ಮಾತನಾಡಿದರು. ಹೊರಗೆ ಬಂದಾಗ "ಇನ್ನು ಒಂದು ವರ್ಷದಲ್ಲಿ ನೀನು ಭಾರತಕ್ಕೆ ಹಿಂದಿರುಗಬೇಕು. ಎಲ್ಲವೂ ತೀರ್ಮಾನವಾಗಿದೆ. ಕರಾಳಶಾಸನ ರದ್ದಾಗುತ್ತದೆ. ವಲಸೆಗಾರರ ಶಾಸನಗಳ ವರ್ಣಭೇದ ತೆಗೆದುಹಾಕಲಾಗುತ್ತದೆ. ಮೂರು ಪೌಂಡು ತಲೆಗಂದಾಯ ಹೋಗುತ್ತದೆ" ಎಂದು ಹೇಳಿದರು.

"ನನಗೇನೊ ಅನುಮಾನ. ಈ ಮಂತ್ರಿಗಳ ಅನುಭವ ನನಗಿರುವಷ್ಟು ನಿಮಗಿನ್ನೂ ಆಗಿಲ್ಲ. ನಾನೂ ಆಶಾವಾದಿಯೇ ಆದ್ದರಿಂದ ನಿಮ್ಮ ಆಶಾವಾದಿತ್ವವನ್ನು ಮೆಚ್ಚುತ್ತೇನೆ. ಆದರೆ ನಿರಾಶೆಯಲ್ಲಿ ಮುಳುಗಿರುವ ನನಗೆ ನಿಮಗಿರುವ ಭರವಸೆಯಿಲ್ಲ, ಅಧೈರ್ಯವೂ

ಇಲ್ಲ. ಮಂತ್ರಿಗಳಿಂದ ನೀವು ಇಷ್ಟು ಭರವಸೆ ಪಡೆದದ್ದು ಸಾಕು. ಎಲ್ಲಿ ಅವಶ್ಯವೋ ಅಲ್ಲಿ ಹೋರಾಡಬೇಕಾದ್ದೂ, ನಮ್ಮ ಹೋರಾಟ ನ್ಯಾಯಸಮ್ಮತವೆಂದು ತೋರಿಸಬೇಕಾದ್ದೂ ನಮ್ಮ ಕರ್ತವ್ಯ. ನಮ್ಮ ಬೇಡಿಕೆಗಳೆಲ್ಲ ನ್ಯಾಯವಾದುವೆಂದು ಸಾರಲು ನಿಮಗೆ ಕೊಟ್ಟ ಉತ್ಸಾಹ ಇಮ್ಮಡಿಯಾಗುತ್ತದೆ. ಆದರೆ ಇನ್ನೂ ಅನೇಕ ಭಾರತೀಯರು ಸೆರೆಮನೆ ಸೇರದೆ ನಾನು ಒಂದು ವರ್ಷದಲ್ಲಿ ಭಾರತಕ್ಕೆ ಹಿಂದಿರುಗುವದು ಸಾಧ್ಯವೆಂದು ನಂಬಲಾರೆ" ಎಂದು ತಿಳಿಸಿದೆ.

" ನಾನು ಹೇಳಿದಂತೆ ಆಗೇ ಆಗುತ್ತದೆ. ಕರಾಳಶಾಸನ ರದ್ದುಗೊಳಿಸುವುದಾಗಿಯೂ, ಮೂರು ಪೌಂಡು ತಲೆಗಂದಾಯ ತೆಗೆದುಹಾಕುವುದಾಗಿಯೂ ಜನರಲ್ ಬೋಥಾರೇ ಹೇಳಿದರು. ಒಂದು ವರ್ಷದಲ್ಲಿ ನೀನು ಭಾರತಕ್ಕೆ ಹಿಂದಿರುಗಬೇಕು. ನಿನ್ನ ಕಾರಣ ಯಾವುದನ್ನೂ ನಾನು ಕೇಳುವುದಿಲ್ಲ" ಎಂದರು.

ನೇಟಾಲ್‌ಗೆ ಭೇಟಿಕೊಟ್ಟಾಗ ಡರ್ಬಾನ್, ಮಾರಿಷ್ ಬರ್ಗ್ ಮುಂತಾದ ಕಡೆ ಗೋಖಲೆಯವರಿಗೆ ಅನೇಕ ಯೂರೋಪಿಯನ್‌ರ ಪರಿಚಯವಾಯಿತು. ಕಿಂಬರ್ಲಿ ವಜ್ರದ ಗಣಿಗಳನ್ನು ಸಂದರ್ಶಿಸಿದರು. ಅಲ್ಲಿಯೂ ಡರ್ಬಾನ್‌ನಲ್ಲೂ ಸ್ವಾಗತ ಸಮಿತಿಯವರು ಸಾರ್ವಜನಿಕ ಔತಣ ಏರ್ಪಡಿಸಿದ್ದರು. ಅನೇಕ ಯೂರೋಪಿಯನ್‌ರೂ ಬಂದಿದ್ದರು. ಈ ರೀತಿ ಭಾರತೀಯರ ಮತ್ತು ಯೂರೋಪಿಯನ್ ರೂ ಬಂದಿದ್ದರು. ಈ ರೀತಿ ಭಾರತೀಯರ ಮತ್ತು ಯೂರೋಪಿಯನ್‌ರ ಹೃದಯ ಸೂರೆಗೊಂಡು ೧೯೧೨ನೇ ನವೆಂಬರ್ ೧೭ರಲ್ಲಿ ಗೋಖಲೆ ದಕ್ಷಿಣ ಆಫ್ರಿಕದಿಂದ ಹಿಂದಿರುಗಿದರು. ಅವರ ಇಷ್ಟದಂತೆ ನಾನೂ ಕಾಲೆನ್ ಬಾಕ್ ರೂ ಜಾಂಜಿಬಾರ್ ವರೆಗೆ ಅವರೊಡನೆ ಹೋದೆವು. ಹಡಗಿನಲ್ಲಿ ಅವರಿಗೆ ತಕ್ಕ ಊಟದ ವ್ಯವಸ್ಥೆ ಮಾಡಿದೆವು. ಹಿಂದಿರುಗುವಾಗ ಡೆಲಿಗೋವ ಕೊಲ್ಲಿ, ಇನ್‌ಹ್ಯಾಂಬೇನ್, ಜಾಂಜಿಬಾರ್ ಮುಂತಾದ ಬಂದರುಗಳಲ್ಲಿ ಅವರಿಗೆ ಸ್ವಾಗತ ಸಮಾರಂಭ ನಡೆದವು.

ಹಡಗಿನಲ್ಲಿ ಭಾರತ ಮಾತೃಭೂಮಿಗಾಗಿ ನಮ್ಮ ಕರ್ತವ್ಯವೇನೆಂದು ಮಾತನಾಡಿದೆವು. ಅವರ ಪ್ರತಿಯೊಂದು ಮಾತಿನಲ್ಲೂ ಅವರ ಸರಳ ಹೃದಯ, ಸತ್ಯನಿಷ್ಠೆ, ದೇಶಪ್ರೇಮ ಎದ್ದುಕಾಣುತ್ತಿತ್ತು. ಹಡಗಿನಲ್ಲಿ ಆಡುತ್ತಿದ್ದ ಆಟಗಳಲ್ಲಿ ಸಹ ದೇಶಾಭ್ಯುದಯ ದೃಷ್ಟಿಯೆತ್ತೇ ವಿನಾ ಬರೀ ವಿಲಾಸಕ್ಕಾಗಿರಲಿಲ್ಲ. ಅಲ್ಲಿಯೂ ಅವರ ಗುರಿ ಅತ್ಯುನ್ನತ.

ಹಡಗಿನಲ್ಲಿ ಮನದಣಿಯೆ ಮಾತನಾಡಲು ಅವಕಾಶ ದೊರೆಯಿತು. ಈ ಸಂಭಾಷಣೆಗಳಿಂದ ಗೋಖಲೆಯವರು ನನ್ನನ್ನು ಭಾರತದ ಸೇವೆಗೆ ಅಣಿಗೊಳಿಸಿದರು. ಭಾರತದ ಎಲ್ಲ ಪ್ರಮುಖ ವ್ಯಕ್ತಿಗಳ ಸೂಕ್ಷ್ಮ ಪರಿಚಯ ಮಾಡಿ ಕೊಟ್ಟರು. ಅದು ಎಷ್ಟು ನಿಕರವಿತ್ತೆಂದರೆ ಅವರು ಆಗ ಕೊಟ್ಟ ಅಭಿಪ್ರಾಯಕ್ಕೂ, ಈಚೆಗೆ ನನ್ನ ಸ್ವಂತ ಅಭಿಪ್ರಾಯಕ್ಕೂ, ಏನೂ ವ್ಯತ್ಯಾಸವೇ ಇಲ್ಲ.

ಗೋಖಲೆಯವರ ಪ್ರವಾಸದ ಅನೇಕ ಸವಿನೆನಪು ಇವೆ. ಅವನ್ನು ಇಲ್ಲಿಯೇ ತಿಳಿಸುತ್ತೇನೆ. ಸತ್ಯಾಗ್ರಹದ ಇತಿಹಾಸಕ್ಕೆ ಅವು ಸಂಬಂಧಿಸದ್ದರಿಂದ ಸ್ವಲ್ಪ ಕೈಹಿಡಿದು ಬರೆಯಬೇಕಾಗಿದೆ. ಜಾಂಜಿಬಾರ್ ನಲ್ಲಿ ವಿಯೋಗ ದುಃಖ ಸಹಿಸಲು ನನಗೂ ಕಾಲೆನ್‌ಬಾಕರಿಗೂ ಅಸಾಧ್ಯವಾಯಿತು. ಆದರೆ ನಶ್ವರ ಜೀವನದ ಮಾನವ ಪ್ರೇಮ

ಎಷ್ಟೇ ಗಾಢವಾದರೂ ಸಾವೇ ಕೊನೆ ಎಂದರಿತು ಹೇಗೋ ಸಮಾಧಾನಹೊಂದಿದೆವು. ಗೋಖಲೆಯವರ ಭವಿಷ್ಯವಾಣಿ ನಿಜವಾಗಬಹುದುದೆಂದೂ, ಒಂದು ವರ್ಷದಲ್ಲಿ ನಾವಿಬ್ಬರೂ ಭಾರತಕ್ಕೆ ಹೊಗಬಹುದೆಂದೂ ಆಶೆಗೊಂಡೆವು. ಆದರೆ ಮುಂದೆ ಆದುದೇ ಬೇರೆ.

ಏನೇ ಆಗಲಿ ಗೋಖಲೆಯವರ ಪ್ರವಾಸದಿಂದ ನಮ್ಮ ಪ್ರತಿಜ್ಞೆ ಇನ್ನೂ ದೃಢವಾಯಿತು. ನಮ್ಮ ಹೋರಾಟ ಮುಂದುವರಿದಾಗ ಅವರ ಪ್ರವಾಸದ ಮಹತ್ವ ಇನ್ನೂ ಚೆನ್ನಾಗಿ ವ್ಯಕ್ತವಾಯಿತು. ಗೋಖಲೆಯವರು ದಕ್ಷಿಣ ಆಫ್ರಿಕಕ್ಕೆ ಬಾರದೆ ಇದ್ದರೆ, ಯೂನಿಯನ್ ಸರಕಾರದ ಮಂತ್ರಿಗಳನ್ನು ನೋಡದೆ ಹೋಗಿದ್ದರೆ ಮೂರು ಪೌಂಡು ತಲೆಗಂದಾಯ ತೆಗೆಯುವ ಮಾತು ನಮ್ಮ ಹೋರಾಟದಲ್ಲಿ ಸೇರಲು ಅವಕಾಶವಿರಲಿಲ್ಲ.

ಕರಾಳಶಾಸನ ರದ್ದಾಗಿ ನಮ್ಮ ಸತ್ಯಾಗ್ರಹ ಮುಗಿದಿದ್ದರೆ, ಆ ಮೂರು ಪೌಂಡು ತಲೆಗಂದಾಯಕ್ಕಾಗಿ ಹೊಸ ಹೋರಾಟ ಆರಂಭವಾಗಬೇಕಾಗಿತ್ತು. ಭಾರತೀಯರು ಅಪಾರ ಕಷ್ಟಕ್ಕೆ ಸಿಗುವುದು ಹಾಗಿರಲಿ; ಪುನಃ ಮತ್ತೊಂದು ಯಜ್ಞಕ್ಕೆ ಸಿದ್ಧರಾಗುತ್ತಿದ್ದರೇ ಎಂಬ ಅನುಮಾನವೂ ಇತ್ತು. ಆ ತೆರಿಗೆಯನ್ನು ರದ್ದುಗೊಳಿಸಬೇಕಾದ್ದು ಸ್ವತಂತ್ರ ಭಾರತೀಯರ ಕರ್ತವ್ಯ. ನಾವು ಮಾಡಿದ ಶಾಸನಬದ್ಧ ಚಳವಳಿಯೆಲ್ಲ ನಿಷ್ಪ್ರಯೋಜನವಾಗಿತ್ತು. ೧೮೯೫ರಿಂದಲೂ ಈ ಕಂದಾಯ ವಸೂಲು ಮಾಡುತ್ತಿದ್ದರು. ಆದರೆ ಎಷ್ಟೇ ಅನಿಷ್ಟವಿರಲಿ, ಅನೇಕ ದಿನಗಳಿಂದ ಆಚರಣೆಗೆ ಬಂದರೆ ಆ ದುಷ್ಟಪದ್ಧತಿ ಜನಕ್ಕೆ ಒಗ್ಗುತ್ತದೆ. ಆಗ, ಅದನ್ನು ವಿರೋಧಿಸುವದು ತಮ್ಮ ಕರ್ತವ್ಯ ಎಂಬ ಭಾವನೆ ಹುಟ್ಟಿಸಿ ಜನರನ್ನು ಹುರಿಗೊಳಿಸುವುದು ಬಹು ಕಷ್ಟ ಅದು ನೀಚ ಪದ್ಧತಿಯೆಂದು ಲೋಕವನ್ನು ಒಪ್ಪಿಸುವುದಂತೂ ಇನ್ನೂ ಕಷ್ಟ. ಗೋಖಲೆಯವರಿಗೆ ಕೊಟ್ಟ ಭರವಸೆಯಿಂದ ಸರಕಾರ ತಲೆದಂಡ ತೆಗೆದುಹಾಕಬೇಕು; ವಚನಭ್ರಷ್ಟರಾದರೆ, ಸತ್ಯಾಗ್ರಹ ಮುಂದುವರಿಸಲು ಅದೇ ಕಾರಣ ಸಾಕು. ಯೋಚಿಸಿದಂತೆಯೇ ಆಯಿತು. ಒಂದು ವರ್ಷದಲ್ಲಿ ಸರಕಾರ ತಲೆಗಂದಾಯ ತೆಗೆಯಲಿಲ್ಲ. ತೆಗೆಯಲು ಆಗುವುದಿಲ್ಲವೆಂದೇ ಹೇಳಿತು.

ಗೋಖಲೆಯವರ ಪ್ರವಾಸದಿಂದ ಈ ಮೂರು ಪೌಂಡು ತೆರಿಗೆ ನಮ್ಮ ಸತ್ಯಾಗ್ರಹದ ಗುರಿಯಾದದ್ದು ಮಾತ್ರವೇ ಅಲ್ಲ, ದಕ್ಷಿಣ ಆಫ್ರಿಕ ಪ್ರಶ್ನೆಯಲ್ಲಿ ಗೋಖಲೆಯವರು ಅಧಿಕೃತ ವ್ಯಕ್ತಿಗಳಾದರು. ದಕ್ಷಿಣ ಆಫ್ರಿಕದ ಭಾರತೀಯರ ಪ್ರತ್ಯಕ್ಷ ಪರಿಚಯದಿಂದ ಆ ಸಮಸ್ಯಗಳ ಬಗ್ಗೆ ಅವರ ಅಭಿಪ್ರಾಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಲಾರಂಭಿಸಿತು. ತಮ್ಮ ಜವಾಬ್ದಾರಿ ತಿಳಿದು. ಭಾರತದಲ್ಲಿ ಭಾರತೀಯರು ಏನು ನಡೆಸಬೇಕೆಂದು ಸಲಹೆ ಕೊಡತೊಡಗಿದರು. ನಮ್ಮ ಸತ್ಯಾಗ್ರಹ ಪುನಃ ಆರಂಭವಾದಾಗ ಭಾರತದಿಂದ ಸತ್ಯಾಗ್ರಹ ನಿಧಿಗೆ ಅಪಾರ ಧನಸಹಾಯ ಒದಗಿತು. ೧೯೧೩ ನೇ ಡಿಸೆಂಬರ್‌ನಲ್ಲಿ ಲಾರ್ಡ್ ಹಾರ್ಡಿಂಜ್ ತಮ್ಮ ಅಪಾರವಾದ ಅತ್ಯುತ್ಕಟ. ಸಹಾನುಭೂತಿ ವ್ಯಕ್ತಗೊಳಿಸಿ ಸತ್ಯಾಗ್ರಹಿಗಳಿಗೆ ಧೈರ್ಯ ಕೊಟ್ಟರು. ಆಂಡ್ರೂಸ್ ರೂ, ಪಿಯರ್‌ಸನ್‌ರೂ ಭಾರತದಿಂದ ದಕ್ಷಿಣ ಆಫ್ರಿಕೆಗೆ ಬಂದರು. ಗೋಖಲೆಯವರ ಪ್ರಚಾರವಿಲ್ಲದೆ ಇದಾವುದೂ ಸಾಧ್ಯವಾಗುತ್ತಿರಲಿಲ್ಲ.

ಮಂತ್ರಿಗಳ ವಚನಭಂಗ, ಅದರ ಪರಿಣಾಮ ಮುಂದಿನ ಅಧ್ಯಾಯದಲ್ಲಿ ತಿಳಿಸುತ್ತೇನೆ.

೩೮. ವಚನ ಭಂಗ

ಸತ್ಯಾಗ್ರಹದ ಮುನ್ನಡೆಯಲ್ಲಿ ಭಾರತೀಯರು ತತ್ವವಿರೋಧವಾದ ಒಂದು ಹೆಜ್ಜೆಯನ್ನೂ ಇಡದಂತೆ ಬಹು ಜಾಗರೂಕರಾಗಿದ್ದರು. ಸರಕಾರದ ವಿರುದ್ಧ ಯಾವ ಪ್ರಸಂಗವನ್ನೂ ದುರುಪಯೋಗಪಡಿಸಿಕೊಳ್ಳುವ ಇಷ್ಟವಿರಲಿಲ್ಲ. ಉದಾಹರಣೆಗೆ; ಕರಾಳಶಾಸನ ಟ್ರಾನ್ಸ್‌ವಾಲ್ ಭಾರತೀಯರಿಗೆ ಮಾತ್ರ ಅನ್ವಯಿಸುತ್ತಿತ್ತು; ಆದ್ದರಿಂದ ಟ್ರಾನ್ಸ್ ವಾಲ್ ಭಾರತೀಯರನ್ನು ಮಾತ್ರ ಸತ್ಯಾಗ್ರಹಕ್ಕೆ ಸೇರಿಸಿದ್ದೆವು. ನೆಟಾಲ್, ಕೇಪ್ ಕಾಲೊನಿ ಮುಂತಾದ ಪ್ರಾಂತಗಳಿಂದ ಸತ್ಯಾಗ್ರಹಿಗಳನ್ನು ಕರೆಯುತ್ತಿರಲಿಲ್ಲ. ತಾವಾಗಿ ಬಂದವರನ್ನು ಹಿಂದಕ್ಕೆ ಕಳಿಸಿದೆವು. ಆ ಶಾಸನ ತೆಗೆದುಹಾಕಲು ಮಾತ್ರ ಸತ್ಯಾಗ್ರಹ ನಡೆಸಿದೆವು. ಭಾರತೀಯರೂ, ಯೂರೋಪಿಯನ್‌ರೂ ಇಬ್ಬರೂ ಈ ಪರಿಮಿತಿ ಅರಿಯಲಿಲ್ಲ. ಮೊದಲು ಮೊದಲು ಕರಾಳ ಶಾಸನವಲ್ಲದೆ ಇತರ ತೊಂದರೆಗಳನ್ನೂ ಸತ್ಯಾಗ್ರಹದಲ್ಲಿ ಸೇರಿಸಬೇಕೆಂದು ಹೇಳುತ್ತಿದ್ದರು. ಅದು ಸತ್ಯಕ್ಕೆ ವಿರುದ್ಧವೆಂದೂ, ಸತ್ಯವನ್ನವಲಂಬಿಸಿ ಸತ್ಯ ಮಾರ್ಗದಲ್ಲೇ ನಡೆಯುತ್ತಿರುವ, ಹೋರಾಟದಲ್ಲಿ, ಆ ಯೋಚನೆಗೆ ಸಹ ಅವಕಾಶವಿಲ್ಲವೆಂದೂ ಅವರಿಗೆ ತಾಳ್ಮೆಯಿಂದ ವಿಶದಪಡಿಸಿದೆ. ಪರಿಶುದ್ಧ ಕದನದಲ್ಲಿ, ಒಂದು ಬಾರಿ ಗುರಿ ನಿರ್ಧರಿಸಿದ ಮೇಲೆ, ಹೋರಾಟ ಮುಂದುವರಿದಂತೆ ಶಕ್ತಿ ವೃದ್ಧಿಯಾದರೂ ಮೊದಲು ನಿರ್ಧರಿಸಿದ ಗುರಿ ಮೀರಲಾಗದು. ಅದೇ ರೀತಿ ಬಲಹೀನವಾದರೂ ಗುರಿಯನ್ನು ಬಿಟ್ಟು ಕೊಡುವುದಿಲ್ಲ. ಈ ಎರಡು ತತ್ವಗಳನ್ನೂ ದಕ್ಷಿಣ ಆಫ್ರಿಕದಲ್ಲಿ ಅಕ್ಷರಶಃ ಪಾಲಿಸಿದೆವು. ಕದನ ಪ್ರಾರಂಭದಲ್ಲಿ ನಮ್ಮ ಧ್ಯೇಯ ಸಾಧನೆಗೆ ನಿರೀಕ್ಷಿಸಿದ ಸಹಾಯ ಕ್ರಮೇಣ ನಮ್ಮ ಜನರಿಂದ ಒದಗಲಿಲ್ಲ. ಆದರೂ ಕೊನೆಗೆ ಉಳಿದ ಕೆಲವರು ಸತ್ಯಾಗ್ರಹಿಗಳು ಒಂದು ಹೆಜ್ಜೆಯೂ ಹಿಮ್ಮೆಟ್ಟಲಿಲ್ಲ. ಒಂಟಿಯಾಗಿ ಬಂದ ಕಷ್ಟಗಳನ್ನೆಲ್ಲ ಎದುರಿಸಿ ಕಾದುವುದು ಸುಲಭ. ಅಧಿಕ ಸಹಾಯ ಒದಗಿದಾಗ ಹೆಚ್ಚು ಆತ್ಮ ಸಂಯಮ ತೋರಿ ಗುರಿಯ ಎಲ್ಲೆ ಮೀರದಂತೆ ಹೋರಾಡುವದು ಬಹಳ ಕಷ್ಟ. ದಕ್ಷಿಣ ಆಫ್ರಿಕದಲ್ಲಿ ಅಂಥ ಸಂದರ್ಭ ಅನೇಕ ಬಂದವು. ಆದರೆ ಒಂದು ಬಾರಿಯೂ ನಾವು ಮನಸೋಲಲಿಲ್ಲವೆಂದು ಧೈರ್ಯವಾಗಿ ಹೇಳಬಲ್ಲೆ. ಸತ್ಯಾಗ್ರಹಿಗೆ ಒಂದೇ ಒಂದು ಗುರಿ; ಆ ಗುರಿಯಿಂದ ಹಿಂಜರಿಯುವಂತೆಯೂ ಇಲ್ಲ, ಮೀರಿ ಮುಂದುವರಿಯುವಂತೆಯೂ ಇಲ್ಲ; ಏರಿಸುವಂತೆಯೂ ಇಲ್ಲ, ಇಳಿಸುವಂತೆಯೂ ಇಲ್ಲವೆಂದು ಅನೇಕ ಬಾರಿ ಹೇಳಿದ್ದೇನೆ. ನಾವು ಅಳೆಯುವ ಮೊಳದಿಂದಲೇ ಪ್ರಂಚವೂ ನಮ್ಮನ್ನು ಅಲೆಯುತ್ತದೆ. ಸತ್ಯಾಗ್ರಹಿಗಳು ಈ ಉದಾತ್ತ ತತ್ವವನ್ನು ಅನುಸರಿಸಲಿದ್ದಾರೆಂದು ಸರಕಾರ ಅರಿತೊಡನೆ, ಅದೇ ತತ್ವಗಳಿಗೆ ಒರೆಹಚ್ಚಿ ಅವರನ್ನು ಪರೀಕ್ಷಿಸತೊಡಗಿತು. ತಾನು ಮಾತ್ರ ಯಾವ ತತ್ವವನ್ನೂ ಅನುಸರಿಸದಿದ್ದರೂ. ಸತ್ಯಾಗ್ರಹಿಗಳನ್ನು ತತ್ವಬಾಹಿರರೆಂದು ದೂರತೊಡಗಿತು. ಕರಾಳ ಶಾಸನದ ನಂತರ ಭಾರತೀಯರ ವಿರುದ್ಧವಾದ ಯಾವ ಹೊಸ ಶಾಸನ ಬಂದರೂ ಅದು ಸತ್ಯಾಗ್ರಹದಲ್ಲಿ ಸೇರಲೇಬೇಕಾದ್ದೆಂದು ಎಳೆಯ ಮಗುವೂ ಹೇಳಬಲ್ಲದು. ಆದರೂ ಭಾರತಿಯರ ವಲಸೆ ಹಕ್ಕಿಗೆ ಹೊಸ ನಿರ್ಬಂಧ ಸೇರಿ ನಮ್ಮ ಕಾರ್ಯಕ್ರಮ ಮಾರ್ಪಡಿಸುವ ಸಂದರ್ಭ ಕಲ್ಪಿಸಿ, ನಾವೇ ಹೊಸ ಸಮಸ್ಯೆ ಒಡ್ಡುತ್ತಿದ್ದೇವೆಂದು ಕೇವಲ ಅಯೋಗ್ಯ ಆಪಾದನೆ ಮಾಡಿತು. ಸರಕಾರ

ಹೊಸದಾಗಿ ಬಂದ ಭಾರತೀಯರ ಮೇಲೆ ಹೊಸ ನಿರ್ಬಂಧ ಹಾಕಿದರೆ ಅವರೂ ನಮ್ಮ ಚಳವಳಿಗೆ ಸೇರಬೇಕಾಯಿತು. ಅದೇ ರೀತಿ ಸೊಹರಾಬ್ಜಿ ಮುಂತಾದವರು ಟ್ರಾನ್ಸ್‌ವಾಲ್ ಪ್ರವೇಶಿಸಿದರು. ಸರಕಾರಕ್ಕೆ ಸಹನೆಯಾಗಲಿಲ್ಲ. ಆದರೆ ನಿಷ್ಪಕ್ಷಪಾತಿಗಳಾದ ಅನೇಕರಿಗೆ ನಮ್ಮದು ಸರಿಯೆಂದು ತೋರಿಸಿಕೊಟ್ಟಿದ್ದೇನೆ. ಗೋಖಲೆಯವರು ಬಂದು ಹೋದ ಮೇಲೆ ಅಂಥದೇ ಇನ್ನೊಂದು ಪ್ರಸಂಗ ಒದಗಿತು. ಒಂದು ವರ್ಷದಲ್ಲಿ ಮೂರು ಪೌಂಡು ತಲೆಗಂದಾಯ ಹೋಗುವುದೆಂದೂ, ಮುಂದಿನ ಶಾಸನಸಭೆಯಲ್ಲಿ ಹಾಗೆ ಮಸೂದೆ ಬರುವುದೆಂದೂ ಗೋಖಲೆ ನಂಬಿದ್ದರು. ಅದಕ್ಕೆ ಪ್ರತಿಯಾಗಿ ನೇಟಾಲ್ ಯೂರೋಪಿಯನ್‌ರು ಅದಕ್ಕೆ ಒಪ್ಪುವುದಿಲ್ಲವಾದ್ದರಿಂದ ಯೂನಿಯನ್ ಸರಕಾರ ಯಾವ ಶಾಸನವನ್ನೂ ಮಾಡುವಂತಿಲ್ಲವೆಂದು ಶಾಸನ ಸಭೆಯಲ್ಲಿ ಜನರಲ್ ಸ್ಮಟ್ಸ್ ತಿಳಿಸಿದ. ಅದು ಶುದ್ಧ ಸುಳ್ಳು. ನಾಲ್ಕು ಸೀಮೆಯ ಪ್ರತಿನಿಧಿಗಳ ಆ ಸಭೆಯಲ್ಲಿ ನೇಟಾಲ್‌ದ ಸದಸ್ಯರಿಗೆ ಬಾಲವಲ್ಲಾಡಿಸಲು ಸಾಧ್ಯವಾಗಲಿಲ್ಲ. ಅದು ಅಲ್ಲದೆ ಮಂತ್ರಿಮಂಡಲದ ಪರ ಜನರಲ್ ಸ್ಮಟ್ಸ್ ಒಂದು ಮಸೂದೆ ತಂದು ಅದರ ಹಣೇಬರಹ ಪರೀಕ್ಷಿಸಬೇಕಾದ್ದು ಕರ್ತವ್ಯವಾಗಿತ್ತು. ಆ ರೀತಿ ಮಾಡದೆ ತಲೆಗಂದಾಯ ಪ್ರಶ್ನೆಯನ್ನೂ ನಮ್ಮ ಸತ್ಯಾಗ್ರಹದಲ್ಲಿ ಸೇರಿಸಲು ಅವಕಾಶ ಕಲ್ಪಿಸಿಕೊಟ್ಟ. ಇದಕ್ಕೆ ಎರಡು ಕಾರಣಗಳಿದ್ದವು; ಮೊದಲನೆಯದು, ಚಳುವಳಿ ನಡೆಯುತ್ತಿರುವಾಗ ಸರಕಾರ ವಾಗ್ದಾನ ಮಾಡಿ ವಚನ ಮುರಿಯಿತು; ಎರಡನೆಯದು, ಗೋಖಲೆಯವರಂಥ ಭಾರತ ಮುಖಂಡರಿಗೆ ಕೊಟ್ಟ ಮಾತು ಮುರಿಯುವುದೆಂದರೆ ಗೋಖಲೆಯವರಿಗೆ ಮಾತ್ರವಲ್ಲ, ಅಖಂಡ ಭಾರತಕ್ಕೇ ಅಗೌರವ. ಯಾರೂ ಸುಮ್ಮನೆ ಸೈರಿಸುವಂತಿರಲಿಲ್ಲ. ಮೊದಲ ಕಾರಣಕ್ಕಾಗಿ ಸತ್ಯಾಗ್ರಹ ನಡೆಸಲು ಸಾಧ್ಯವಿಲ್ಲೆಂದು ಸತ್ಯಾಗ್ರಹಿಗಳು ಹಿಂದೇಟು ಹಾಕಿದ್ದರೆ ಮನ್ನಿಸಿದರೂ ಮನ್ನಿಸಬಹುದಾಗಿತ್ತು. ಆದರೆ ತಾಯಿನಾಡಿಗಾದ ಅವಮಾನ ಸಹಿಸಲು ಸ್ವಲ್ಪವೂ ಸಾಧ್ಯವಿರಲಿಲ್ಲ. ಆದ್ದರಿಂದ ಇದನ್ನೂ ಸತ್ಯಾಗ್ರಹದಲ್ಲಿ ಸೇರಿಸುವುದು ನಮ್ಮ ಕರ್ತವ್ಯವೆನಿಸಿತು. ಈ ತಲೆಗಂದಾಯದ ಪ್ರಶ್ನೆ ಕಾರ್ಯಕ್ರಮದೊಳಗೆ ಬಂದೊಡನೆ ಅವಧಿ ಕೂಲಿಗಾರರು ಸತ್ಯಾಗ್ರಹಕ್ಕೆ ಸೇರಲು. ಇಂಬು ದೊರೆಯಿತು. ಇದುವರೆಗೂ ಇವರನ್ನು ಸತ್ಯಾಗ್ರಹಕ್ಕೆ ಸೇರಿಸಿರಲಿಲ್ಲ. ಈ ಹೊಸ ವಿಧಾನದಿಂದ ಒಂದು ಕಡೆ ನಮ್ಮ ಜವಾಬ್ದಾರಿ ಹೆಚ್ಚಿತು; ಇನೊಂದು ಕಡೆ ಸತ್ಯಾಗ್ರಹ ಸೈನ್ಯಕ್ಕೆ ಜನರನ್ನು ಕೂಡಿಸಲು ಹೊಸ ಅವಕಾಶ ದೊರೆಯಿತು.

ಇದುವರೆಗೆ ಅವಧಿ ಕೂಲಿಗಾರರು ಸತ್ಯಾಗ್ರಹದ ಮಾತು ಕೂಡ ಆಡುತ್ತಿರಲಿಲ್ಲ; ಪಾಲುಗೊಳ್ಳಲು ಶಿಕ್ಷಣವಂತೂ ಮೊದಲೇ ಇರಲಿಲ್ಲ. ನಿರಕ್ಷರ ಕುಕ್ಷಿಗಳಾದ್ದರಿಂದ 'ಇಂಡಿಯನ್ ಓಪಿನಿಯನ್' ಅಥವಾ ಬೇರಾವ ಪತ್ರಿಕೆಯನ್ನೂ ಓದುತ್ತಿರಲಿಲ್ಲ. ಆದರೂ ಈ ಬಡಜನ ಬಹು ಜಾಗರೂಕತೆಯಿಂದ ನಮ್ಮ ಹೋರಾಟವನ್ನು ಗಮನಿಸುತ್ತ ಅರ್ಥಮಾಡಿಕೊಂಡಿದ್ದರು. ಇನ್ನು ಕೆಲವರು ಸೇವೆ ಸಲ್ಲಿಸಲು ತಮಗೂ ಅವಕಾಶವಿಲ್ಲವೆಂದು ನೊಂದಿದ್ದರು. ಯೂನಿಯನ್ ಮಂತ್ರಿಗಳು ವಚನಭ್ರಷ್ಟರಾದ ಮೇಲೆ, ಈ ತಲೆಗಂದಾಯ ಸತ್ಯಾಗ್ರಹ ಪ್ರಶ್ನೆಯಾದ ಮೇಲೆ ಅವರಲ್ಲಿ ಯಾರು ನಮ್ಮ ಸಂಗ್ರಾಮಕ್ಕೆ ನುಗ್ಗುತ್ತಾರೆಂದು ನನಗೆ ತಿಳಿಯಲಿಲ್ಲ.

ಈ ವಚನಭಂಗವನ್ನು ಗೋಖಲೆಯವರಿಗೆ ತಿಳಿಸಿದೆ, ಅವರು ಬಹಳ ನೊಂದುಕೊಂಡರು. ಚಿಂತಿಸಬಾರದೆಂದೂ, ಪ್ರಾಣಹೋಗುವವರೆಗೂ ಕಾದಾಡಿ

ಕಪಿಮುಷ್ಟಿಯ ಟ್ರಾನ್ಸ್‌ವಾಲ್ ಸರಕಾರವನ್ನು ಕದಲಿಸಿ ತಲೆಗಂದಾಯ ತೆಗೆಸಿ ಹಾಕುವೆನೆಂದೂ ಪತ್ರ ಬರೆದೆ. ಒಂದು ವರ್ಷದಲ್ಲಿ ಭಾರತಕ್ಕೆ ಹಿಂದಿರುಗುವ ಆಶೆಯಂತೂ ದೂರವಾಯಿತು; ಎಂದು ಹಿಂದಿರುಗುವೆನೋ ಊಹಿಸಲೂ ಅಸಾಧ್ಯವಾಯಿತು. ಅಂಕಿ ಅಂಶಗಳಿಲ್ಲದೆ ಗೋಖಲೆಯವರ ಬಳಿ ಮಾತೇ ಇಲ್ಲ. ಹೆಸರು ಕೊಟ್ಟು ನಮ್ಮ ಶಾಂತಿಸೇನೆಯ ಅಧಿಕ ಪ್ರಮಾಣ ೬೫-೬೬ ಜನವೆಂದೂ, ಕನಿಷ್ಠ ಪ್ರಮಾಣ ೧೬ ಜನವೆಂದೂ, ಅಷ್ಟು ಸ್ವಲ್ಪ ಜನರ ಹೋರಾಟಕ್ಕೆ ಭಾರತದಿಂದ ಧನಸಹಾಯ ನಿರೀಕ್ಷಿಸುವುದಿಲ್ಲವೆಂದೂ ತಿಳಿಸಿದೆ. ಅಧೈರ್ಯ ಪಡಬಾರದೆಂದೂ, ವೃಥಾ ದೇಹಶ್ರಮ ತೆಗೆದುಕೊಳ್ಳಬಾರದೆಂದೂ ತಿಳಿಸಿದೆ. ದಕ್ಷಿಣ ಆಫ್ರಿಕದಿಂದ ಬೊಂಬಾಯಿಗೆ ಹಿಂದಿರುಗಿದೊಡನೆ ಹಿಂದೇಟು ಹಾಕುತ್ತಿದ್ದಾರೆಂಬ ಆಪಾದನೆ ಗೋಖಲೆಯವರ ಮೇಲೆ ಬಂದಿತೆಂದು ಪತ್ರಿಕೆಗಳಿಂದಲೂ ಇತರ ಕಡೆಯಿಂದಲೂ ವರ್ತಮಾನ ತಿಳಿದಿತ್ತು. ಆದ್ದರಿಂದ ಭಾರತದಲ್ಲಿ ಗೋಖಲೆಯವರು ನಮಗಾಗಿ ಯಾವ ಹಣವನ್ನೂ ಶೇಖರಿಸಲಾಗದೆಂದು ನನ್ನ ಅಭಿಪ್ರಾಯ. ಆದರೆ ಅವರ ಉತ್ತರ "ದಕ್ಷಿಣ ಆಫ್ರಿಕದಲ್ಲಿ ನಿನ್ನ ಕರ್ತವ್ಯ ಏನೆಂದು ನೀನು ತಿಳಿದಿರುವಂತೆ, ಭಾರತದಲ್ಲಿ ನಮ್ಮ ಕರ್ತವ್ಯವೂ ನಮಗೆ ತಿಳಿದಿದೆ. ನಮ್ಮ ಕರ್ತವ್ಯದ ನ್ಯಾಯಾನ್ಯಾಯ ವಿಮರ್ಶಿಸಲು ನಿನಗೆ ಅವಕಾಶವಿಲ್ಲ. ದಕ್ಷಿಣ ಆಫ್ರಿಕದ ಸ್ಥಿತಿ ಅರಿತುಕೊಳ್ಳಬಯಸಿ ನಿನಗೆ ಪತ್ರ ಬರೆದೆ. ನಮ್ಮ ಕರ್ತವ್ಯದಲ್ಲಿ ನಿನ್ನ ಸಲಹೆ ಕೇಳಲಿಕ್ಕಲ್ಲ" ಎಂದು ಕಟುವಾಗಿತ್ತು. ಗೋಖಲೆಯವರ ಮನೋಭಾವವರಿತು ಈ ವಿಷಯವಾಗಿ ಮತ್ತೆಂದೂ ಅವರಿಗೆ ಸಲಹೆ ಕೊಡಲು ಹೋಗಲಿಲ್ಲ. ಅದೇ ಕಾಗದದಲ್ಲಿ ನನಗೆ ಧೈರ್ಯವನ್ನೂ ಎಚ್ಚರಿಕೆಯನ್ನೂ ಸೂಚಿಸಿದ್ದರು. ವಚನಭಂಗದ ದೆಸೆಯಿಂದ ಹೋರಾಟ ಬಹು ದೀರ್ಘಕಾಲ ನಡೆಯಬೇಕಾಗಬಹುದೆಂದೂ ಅಷ್ಟು ಅತ್ಯಲ್ಪ ಸಂಖ್ಯೆಯ ಸತ್ಯಾಗ್ರಹಿಗಳು ಕೊಬ್ಬಿದ ಯೂನಿಯನ್ ಸರಕಾರದ ಪಾಶವೀಬಲದೊಡನೆ ಎಷ್ಟು ಕಾಲ ಹೋರಾಡಬಲ್ಲರೆಂದೂ ಗಾಬರಿಗೊಂಡರು. ದಕ್ಷಿಣ ಆಫ್ರಿಕದಲ್ಲಿ ನಮ್ಮ ಸಿದ್ಧತೆಗಳಿಗೆ ಮೊದಲಾಯಿತು. ಬರಲಿರುವ ಹೋರಾಟದಲ್ಲಿ ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವೇ ಇರಲಿಲ್ಲ. ದೀರ್ಘಕಾಲ ಕಾರಾಗ್ರಹವಾಸವಾಗಬಹುದೆಂದು ಯೋಚಿಸಿ ಟಾಲ್ ಸ್ಟಾಯ್ ಆಶ್ರಮ ಮುಚ್ಚಲು ನಿರ್ಧರಿಸಿದೆವು. ದುಡಿವವರು ಬಿಡುಗಡೆಯಾದೊಡನೆ ಕೆಲವು ಕುಟುಂಬಗಳು ತಮ್ಮ ಮನೆಗಳಿಗೆ ತೆರಳಿದವು. ಉಳಿದವರೆಲ್ಲ 'ಫೀನಿಕ್ಸ್' ನಲ್ಲಿದ್ದವರು. ಆದ್ದರಿಂದ ಪೀನಿಕ್ಸ್ ಇನ್ನು ಮುಂದೆ ಸತ್ಯಾಗ್ರಹಿಗಳ ಕಾರ್ಯರಂಗವಾಯಿತು. ಫೀನಿಕ್ಸನ್ನೇ ಆರಿಸಲು ಇನ್ನೊಂದು ಮುಖ್ಯ ಕಾರಣ. ಅವಧಿ ಕೂಲಿಗಾರರೇನಾದರೂ ಮುಂದೆ ಸತ್ಯಾಗ್ರಹ ಸೇರಿದರೆ ಅವರನ್ನು ವಿಚಾರಿಸಿಕೊಳ್ಳಲು ಅಲ್ಲಿಂದ ಸುಲಭವಾಗಿತ್ತು.

ಈ ರೀತಿ ಇನ್ನೊಮ್ಮೆ ಸತ್ಯಾಗ್ರಹ ಹೂಡಲು ಸಿದ್ಧತೆಯಾಗುತ್ತಿದ್ದಾಗ ಹೋರಾಟದಲ್ಲಿ ಸ್ತ್ರೀಯರೂ ತಮ್ಮ ಸೇವೆ ಸಲ್ಲಿಸಲು ಅನುಕೂಲವಾಗುವಂತೆ ಇನ್ನೊಂದು ಹೊಸ ಸಂದರ್ಭ ಬಂತು. ಕೆಲಸವು ವೀರ ರಮಣಿಯರು ಸತ್ಯಾಗ್ರಹಿಗಳಾಗಲು ಮೊದಲೇ ಮುಂದೆ ಬಂದಿದ್ದರು. ರಹದಾರಿ ಇಲ್ಲದೆ ವ್ಯಾಪಾರ ಮಾಡಿ ಗಂಡಂದಿರು ಕಾರಾಗೃಹ ಸೇರಿದಾಗ ತಾವೂ ಅವರನ್ನು ಹಿಂಬಾಲಿಸುವುದಾಗಿ ಅವರ ಹೆಂಡಂದಿರು ಮುಂದೆ ಬಂದರು. ವಿದೇಶದಲ್ಲಿ ಸ್ತ್ರೀಯರನ್ನು ಸೆರೆಗೆ ತಳ್ಳುವುದು ಸರಿಯೆಂದು ತೋರಲಿಲ್ಲ,

ರಣರಂಗಕ್ಕೆ ಕಾದಾಡಲು ಕಳುಹಲು ಸರಿಯೆನಿಸಿರಲಿಲ್ಲ; ಕರೆದೊಯ್ಯಲು ನನಗಂತೂ ಧೈರ್ಯ ಬರಲಿಲ್ಲ. ಅದೂ ಅಲ್ಲದೆ ಗಂಡಸರಿಗೆ ವಿಧಿಸಿದ ಶಾಸನ ಎದುರಿಸುವುದರಲ್ಲಿ ಹೆಂಗಸರನ್ನು ಮುಂದೆ ಬಿಟ್ಟರೆ ನಮ್ಮ ಗಂಡಸುತನಕ್ಕೇ ಅವಮಾನವೆಂದು ಭಾವಿಸಿದೆವು. ಆದರೆ ಹೆಂಗಸರಿಗೇ ಅಪಮಾನವಾದ ಹೊಸ ಪ್ರಸಂಗ ಒಂದು ಮೊಳೆತು ಅವರನ್ನೂ ಕಷ್ಟಸಹನೆಗೆ ಅನುಕೊಳಿಸುವುದು ನ್ಯಾಯವೆಂದು ನಿರ್ಧರಿಸಿದೆವು.

೩೯. ವಿವಾಹವು ವಿವಾಹವಲ್ಲ

ಯಾರಿಗೂ ಗೋಚರವಾಗದಂತೆ ದೇವರೇ ಭಾರತೀಯರ ವಿಜಯಕ್ಕೆ ದಾರಿ ಮಾಡುತ್ತಿದ್ದಂತೆ, ದಕ್ಷಿಣ ಆಫ್ರಿಕದ ಯೂರೋಪಿಯನ್‌ರ ಅನ್ಯಾಯವನ್ನು ಪ್ರಪಂಚಕ್ಕೆ ಸಾರಲೆಂಬಂತೆ, ಕನಸಿನಲ್ಲೂ ಎಣಿಸದ ವಿಚಿತ್ರ ಪ್ರಸಂಗವೊಂದು ನಡೆಯಿತು. ದಕ್ಷಿಣ ಆಫ್ರಿಕಕ್ಕೆ ಬಂದ ಭಾರತೀಯರಲ್ಲಿ ಅನೇಕರಿಗೆ ಮೊದಲೇ ಮದುವೆಯಾಗಿತ್ತು. ಕೆಲವರು ದಕ್ಷಿಣ ಆಫ್ರಿಕದಲ್ಲಿ ಮದುವೆಯಾದವರು. ಮದುವೆಯಾದವರು ರಿಜಿಸ್ಟರ್ ಮಾಡಿಸಬೇಕೆಂದು ಭಾರತದಲ್ಲಿ ಶಾಸನವಿಲ್ಲ. ಮತಪದ್ಧತಿಯಂತೆ ಮದುವೆಯಾದರೆ ಸಾಕು. ದಕ್ಷಿಣ ಆಫ್ರಿಕದಲ್ಲೂ ಭಾರತೀಯರಿಗೆ ಅದೇ ಕಾನೂನು ಅನ್ವಯಿಸಬೇಕು. ದಕ್ಷಿಣ ಆಫ್ರಿಕದಲ್ಲಿ ನೆಲೆಸಿ ೪೦ ವರ್ಷವಾದರೂ, ಅವರವರ ಮತಾನುಸಾರ ಭಾರತದಲ್ಲಿ ನಡೆದ ವಿವಾಹಗಳನ್ನು ಪ್ರಶ್ನಿಸುವ ಪರಿಸ್ಥಿತಿ ಯಾವಾಗಲೂ ಒದಗಿರಲಿಲ್ಲ. ಸಮಯಕ್ಕೆ ಸರಿಯಾಗಿ ಕೇಪ್ ಸುಪ್ರೀಮ್ ಕೋರ್ಟಿನ ನ್ಯಾಯಮೂರ್ತಿ ಸರ್ಲ್ ಎಂಬಾತ ಕ್ರೈಸ್ತಧರ್ಮಕ್ಕನುಸಾರ ನಡೆಯದ ರಿಜಿಸ್ಟರಾಗದ ಯಾವ ವಿವಾಹವೂ ದಕ್ಷಿಣ ಆಫ್ರಿಕದಲ್ಲಿ ನ್ಯಾಯಸಮ್ಮತವಲ್ಲವೆಂದು ೧೯೧೩ ಮಾರ್ಚ್ ೧೪ ರಲ್ಲಿ ಒಂದು ಮೊಕದ್ದಮೆಯಲ್ಲಿ ತೀರ್ಪು ಕೊಟ್ಟ. ಈ ವಿಚಿತ್ರ ತೀರ್ಪಿನಿಂದ ದಕ್ಷಿಣ ಆಫ್ರಿಕದಲ್ಲಿ ಹಿಂದೂ, ಮುಸಲ್ಮಾನ್, ಜೊರಾಸ್ಟರ್ ಮತಪದ್ಧತಿಗಳ ಪ್ರಕಾರ ನಡೆದ ವಿವಾಹಗಳೆಲ್ಲ ಒಂದೇ ಏಟಿಗೆ ನ್ಯಾಯವಿರುದ್ಧವಾದವು. ಈ ದಕ್ಷಿಣ ಆಫ್ರಿಕದ ಅನೇಕ ಭಾರತ ಮಹಿಳೆಯರು ಧರ್ಮಪತ್ನೀ ಸ್ಥಾನದಿಂದ ವೇಶ್ಯೆಯರ ಸ್ಥಾನಕ್ಕೆ ತಳ್ಳಲ್ಪಟ್ಟರು. ಅವರ ಮಕ್ಕಳಿಗೆ ಪೈತ್ರಿಕ ಆಸ್ತಿಯಲ್ಲಿ ಹಕ್ಕಿಲ್ಲವಾಯಿತು. ಹೆಣ್ಣೇನು, ಗಂಡೇನು ಎಲ್ಲರಿಗೂ ಇದು ಅಸಹನೀಯವಾಗಿ ಭಾರತೀಯರೆಲ್ಲ ಕಂಗೆಟ್ಟರು.

ಯಥಾ ರೀತಿ, ಸರ್ಲ್ ತೀರ್ಪು ಸರಕಾರಕ್ಕೆ ಸಮ್ಮತವೇ. ನ್ಯಾಯಶಾಸನದ ಆ ಅರ್ಥವಿವರಣೆ ಸರಿ ಎಂದು ಸರಕಾರದ ಅಭಿಪ್ರಾಯವಾದರೆ ಅವರವರ ಮತ ಧರ್ಮಕ್ಕನುಸಾರ ನಡೆದು, ಭಾರತದಲ್ಲಿ ನ್ಯಾಯಸಮ್ಮತವಾದ ಭಾರತೀಯ ವಿವಾಹಗಳನ್ನು ಶಾಸನಸಮ್ಮತ ಮಾಡಲು ಶಾಸನ ತಿದ್ದುಪಡಿ ಏನಾದರೂ ಮಾಡುತ್ತಾರೆಯೇ ಎಂದು ಸರಕಾರಕ್ಕೆ ಪತ್ರ ಬರೆದೆ. ಆಗ ಸರಕಾರ ಯಾವ ಮಾತನ್ನೂ ಕೇಳುವ ಸ್ಥಿತಿಯಲ್ಲಿರಲಿಲ್ಲ. ನನ್ನ ಬೇಡಿಕೆಗೆ ಕಿವಿಗೊಡಲಿಲ್ಲ.

ಸತ್ಯಾಗ್ರಹ ಸಂಸ್ಥೆಯವರು ಸಭೆ ಸೇರಿ ಸರ್ಲ್ ತೀರ್ಪಿನ ಮೇಲೆ ಅಪೀಲು ಮಾಡಬೇಕೆ ಬೇಡವೆ ಎಂದು ಚರ್ಚೆ ಮಾಡಿ, ಅಂಥ ಸಂದರ್ಭದಲ್ಲಿ ಅಪೀಲು ಅನುಚಿತವೆಂದು ತೀರ್ಮಾನಿಸಿದರು. ಹಾಕುವುದಾದರೆ ಸರಕಾರ ಅಪೀಲು ಹಾಕಬೇಕು; ಸರಕಾರವೇ ಭಾರತೀಯರ ಪರ ವಹಿಸಿ ಅಟಾರ್ನಿ ಜನರಲ್ ಮೂಲಕ ಭಾರತೀಯರಿಂದ ಅಪೀಲು ಹಾಕಿಸಬೇಕು. ನಾವೇ ಅಪೀಲು ಮಾಡಿದರೆ ಭಾರತೀಯ ವಿವಾಹಗಳು ಶಾಸನ

ಸಮ್ಮತವಲ್ಲವೆಂದು ಒಂದು ರೀತಿ ನಾವು ಒಪ್ಪಿದಂತೆಯೇ ಸರಿ. ಅಪೀಲು ವಿರುದ್ಧವಾದರೆ ಹೇಗೂ ಸತ್ಯಾಗ್ರಹ ಹೂಡಲೇ ಬೇಕು. ಆದ್ದರಿಂದ ಈ ಹೇಳಲಸಹ್ಯವಾದ ಅಪಮಾನಕ್ಕೆ ಅಪೀಲು ಹಾಕದಿರುವುದೇ ಉತ್ತಮವೆಂದು ತೋರಿತು.

ಶುಭದಿನ ಅಥವಾ ಸಮುಹೂರ್ತ ಎಂದು ಕಾಯಲಾಗದ ಪರಿಸ್ಥಿತಿ ಒದಗಿತು. ನಮ್ಮ ಸಹೋದರಿಯರಿಗೆ ಮಾಡಿದ ಅಪಮಾನದಿದುರು ತಾಳ್ಮೆ ಅಸಾಧ್ಯವಾಯಿತು. ಯೋಧರು ಎಷ್ಟೇ ಕಡಿಮೆ ಇರಲಿ, ಪ್ರಚಂಡ ಸತ್ಯಾಗ್ರಹ ಹೂಡಲೇಬೇಕೆಂದು ನಿರ್ಧರಿಸಿದೆವು. ಹೋರಾಟದಲ್ಲಿ ಮಹಿಳೆಯರನ್ನು ತಡೆಗಟ್ಟಲಾಗಲಿಲ್ಲ; ಅವರೂ ಸೇರಬಹುದೆಂದು ನಾವೇ ಆಹ್ವಾನವಿತ್ತೆವು. ಪ್ರಾರಂಭದಲ್ಲಿ ಟಾಲ್ ಸ್ಟಾಯ್ ಆಶ್ರಮದ ಸಹೋದರಿಯರಿಗೆ ಆಹ್ವಾನವಿತ್ತೆವು. ಅವರು ಹೋರಾಟದಲ್ಲಿ ಭಾಗವಹಿಸಲು ಬಹಳ ಕಾತರರಾಗಿದ್ದರು. ಅದರಲ್ಲಿ ಇರುವ ಅಪಾಯಗಳನ್ನೆಲ್ಲ ವಿವರಿಸಿದೆ. ಅನ್ನ, ವಸ್ತ್ರ, ವ್ಯಕ್ತಿಸ್ವಾತಂತ್ರ್ಯ ಮೊಟಕಾಗುವುದೆಂದೂ, ಸೆರೆಮನೆಯಲ್ಲಿ ಕಠಿಣ ಕೆಲಸ ಮಾಡಬೇಕಾಗಬಹುದೆಂದೂ, ಬಟ್ಟೆ ಒಗೆಯಬೇಕಾಗಬಹುದೆಂದೂ, ಸೆರೆಮನೆ ವಾರ್ಡರುಗಳು ಅವಮಾನ ಮಾಡಬಹುದೆಂದೂ ತಿಳಿಸಿದೆ. ಆ ಸಹೋದರಿಯರೆಲ್ಲ ವೀರನಾರಿಯರು. ಯಾವುದಕ್ಕೂ ಅವರು ಹೆದರಲಿಲ್ಲ. ಒಬ್ಬಾಕೆ ಗರ್ಭಿಣಿ, ಉಳಿದ ಆರುಮಂದಿಯ ಕೈಲೂ ಸಣ್ಣ ಕೂಸುಗಳಿದ್ದವು. ಆದರೆ ಸತ್ಯಾಗ್ರಹ ಸೇರಲು ಎಲ್ಲರೂ ಉತ್ಸಾಹ ತೋರಿಸಿದ್ದರಿಂದ ಬೇಡವೆನ್ನಲು ನನಗೆ ಮನಸ್ಸು ಬರಲಿಲ್ಲ. ಒಬ್ಬಾಕೆ ಹೊರತು ಎಲ್ಲರೂ ತಮಿಳು ದೇಶದವರು. ಅವರ ಹೆಸರು: ೧. ಶ್ರೀಮತಿ ತಂಬಿನಾಯುಡು ೨. ಶ್ರೀಮತಿ. ಎನ್.ಪಿಳ್ಳೆ ೩. ಶ್ರೀಮತಿ.ಮುರುಗೇಶ ಪಿಳ್ಳೆ ೪. ಶ್ರೀಮತಿ.ಎ.ಪೆರುಮಾಳ್ ನಾಯುಡು ೫. ಶ್ರೀಮತಿ.ಪಿ.ಕೆ.ನಾಯುಡು ೬. ಶ್ರೀಮತಿ.ಕೆ.ಚಿನ್ನಸ್ವಾಮಿ ಪಿಳ್ಳೆ ೭. ಶ್ರೀಮತಿ.ಎನ್.ಎಸ್.ಪಿಳ್ಳೆ ೮. ಶ್ರೀಮತಿ.ಆರ್.ಎ.ಮುದಲಿಂಗಂ ೯. ಶ್ರೀಮತಿ.ಭವಾನಿ ದಯಾಳ್ ೧೦. ಕುಮಾರಿ ಮೀನಾಕ್ಷಿ ಪಿಳ್ಳೆ ೧೧. ಕುಮಾರಿ ಬೈಕುಂ ಮುರುಗೇಶ ಪಿಳ್ಳೆ.

ತಪ್ಪು ಮಾಡಿ ಸೆರೆಮನೆಗೆ ಹೋಗುವುದು ಸುಲಭ; ನಿರಪರಾಧಿಯಾಗಿ ಹೋಗುವುದು ಕಷ್ಟ. ಅಪರಾಧಿ ತಪ್ಪಿಸಿಕೊಳ್ಳಲು ಯತ್ನಿಸುವುದರಿಂದ ಪೋಲೀಸ್ ನವರು ಹುಡುಕಿ ಹಿಡಿಯುತ್ತಾರೆ. ನಿರಪರಾಧಿಯಾಗಿ ಸೆರೆಮನೆ ಸೇರಬೇಕೆನ್ನುವವನನ್ನು ಅನಿವಾರ್ಯವಾಗಿ ಬಂದರೆ ಮಾತ್ರ ಬಂಧಿಸುತ್ತಾರೆ. ಈ ಸಹೋದರಿಯರ ಪ್ರಥಮ ಪ್ರಯತ್ನ ಸಫಲವಾಗಲಿಲ್ಲ. ರಹದಾರಿ ಇಲ್ಲದೆ ವೆರೀನಿಗಿಂಗ್ ಬಳಿ ಟ್ರಾನ್ಸ್‌ವಾಲ್ ಪ್ರವೇಶ ಮಾಡಿದರು. ಅವರನ್ನು ಬಂಧಿಸಲಿಲ್ಲ. ರಹದಾರಿ ಇಲ್ಲದೆ ವ್ಯಾಪಾರ ಮಾಡಿದರು. ಆಗಲೂ ಪೋಲೀಸಿನವರು ಅಲಕ್ಷ್ಯ ಮಾಡಿದರು. ಬಂಧನಕ್ಕೊಳಗಾಗುವುದೇ ಅವರಿಗೊಂದು ಸಮಸ್ಯೆಯಾಯಿತು. ಸೆರೆಮನೆಗೆ ಹೋಗಲು ಬಹಳ ಜನ ಗಂಡಸರು ಸಿದ್ಧರಿರಲಿಲ್ಲ. ಸಿದ್ಧರಿದ್ದವರನ್ನು ಬಂಧಿಸುತ್ತಿರಲಿಲ್ಲ.

ಕೊನೆಯ ಹೆಜ್ಜೆ ಎಂದು ಮೀಸಲಾಗಿಟ್ಟ ಕಾರ್ಯಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಿದೆ. ಅದರಿಂದ ನಮ್ಮ ಇಷ್ಟವೂ ನೆರವೇರಿತು. ವಿಷಮ ಪರಿಸ್ಥಿತಿ ಒದಗಿದಾಗ ಫೀನಿಕ್ಸ್‌ನ ಎಲ್ಲ ಕೆಲಸಗಾರರನ್ನೂ ಬಲಿಕೊಡಬೇಕೆಂದು ಯೋಚಿಸಿದ್ದೆ. ಸತ್ಯದೇವನಿಗೆ ಅದೇ ನನ್ನ ಅಂತ್ಯ ಆಜ್ಯ. ಫೀನಿಕ್ಸ್ ಆಶ್ರಮವಾಸಿಗಳೆಲ್ಲ ನನ್ನ ಆಪ್ತ ಕೆಲಸಗಾರರು, ಬಂಧುಗಳು, 'ಇಂಡಿಯನ್ ಓಪಿನಿಯನ್' ನಡೆಸಲು ಅಗತ್ಯವಾದವರು, ಹದಿನಾರು ವರ್ಷದೊಳಗಿನ

ಹುಡುಗರು ವಿನಾ ಎಲ್ಲರನ್ನೂ ಸೆರೆಮನೆಗೆ ಕಳಿಸಬೇಕೆಂದು ತೀರ್ಮಾನಿಸಿದೆ. ಆಗ ಸಾಧ್ಯವಾದ ಅತ್ಯಧಿಕ ತ್ಯಾಗ ಇದೇ. ಗೋಖಲೆಯವರ ಪತ್ರದಲ್ಲಿ ಬರೆದ ಆ ಹದಿನಾರು ಜನರೇ ಈ ಫೀನಿಕ್ಸ್‌ನ ಮೂಲವಾಸಿಗಳು. ಈ ಸ್ನೇಹಿತರು ಗಡಿ ದಾಟಿ ಟ್ರಾನ್ಸ್ ವಾಲ್ ಪ್ರವೇಶವಾಡಬೇಕೆಂದೂ, ರಹದಾರಿ ಇಲ್ಲದೆ ಪ್ರವೇಶಮಾಡಿದ್ದಕ್ಕಾಗಿ ಬಂಧನಕ್ಕೊಳಗಾಗಬೇಕೆಂದೂ ತೀರ್ಮಾನಿಸಿದೆವು. ನಮ್ಮ ಉದ್ದೇಶವನ್ನು ಮೊದಲೇ ತಿಳಿಸಿದರೆ ಸರಕಾರ ಬಂಧಿಸಲಾರದೆಂದು ಹೆದರಿ ಒಬ್ಬಿಬ್ಬರು ಆಪ್ತರ ಹೊರತು ಯಾರಿಗೂ ತಿಳಿಸಿರಲಿಲ್ಲ. ಈ ಮುಂದಾಳುಗಳು ಟ್ರಾನ್ಸ್‌ವಾಲ್ ಪ್ರವೇಶ ಮಾಡಿದೊಡನೆ ಪೋಲೀಸ್ ಅಧಿಕಾರಿ ಅವರ ಹೆಸರು ಕೇಳುತ್ತಾನೆ, ತಿಳಿಸಿದರೆ ಪರಿಚಯ ಗೊತ್ತಾಗಿ ನನ್ನವರೆಂದು ತಿಳಿದು ಪೋಲೀಸರು ಬಂಧಿಸದಿರಬಹುದೆಂದು ಹೆಸರು ವಿಳಾಸ ತಿಳಿಸಬಾರದೆಂದು ಹೇಳಿದ್ದೆವು. ಅಧಿಕಾರಿಗಳಿಗೆ ಹೆಸರು ವಿಳಾಸ ಕೊಡದಿರುವುದೂ ಒಂದು ಅಪರಾಧ. ಫೀನಿಕ್ಸ್ ಗುಂಪು ಟ್ರಾನ್ಸ್ ವಾಲ್ ಪ್ರವೇಶಿಸುವ ಹೊತ್ತಿಗೆ, ಟ್ರಾನ್ಸ್ ವಾಲ್ ಪ್ರವೇಶಮಾಡಿ ಬಂಧನಕ್ಕೊಳಗಾಗಲು ವಿಫಲರಾದ ಸಹೋದರಿಯರು ನೇಟಾಲ್ ಪ್ರವೇಶಿಸಬೇಕೆಂದು ತೀರ್ಮಾನಮಾಡಿ ನೇಟಾಲ್‌ನಿಂದ ರಹದಾರಿ ಇಲ್ಲದೆ ಟ್ರಾನ್ಸ್‌ವಾಲ್ ಪ್ರವೇಶ ಮಾಡಿದರೆ ಹೇಗೆ ಅಪರಾಧವೋ, ಟ್ರಾನ್ಸ್‌ವಾಲ್‌ನಿಂದ ನೇಟಾಲ್ ಪ್ರವೇಶಿಸಿದರೂ ಅಷ್ಟೇ. ನೇಟಾಲ್ ಪ್ರವೇಶ ಮಾಡಿದೊಡನೆ ಈ ಸಹೋದರಿಯರ ದಸ್ತಗಿರಿಯಾದರೆ ಒಳಿತೇ ಆಯಿತು. ಆಗದಿದ್ದರೆ ನೇಟಾಲ್‌ನ ದೊಡ್ಡ ಕಲ್ಲಿದ್ದಲು ಗಣಿ ಕೇಂದ್ರವಾದ ನ್ಯೂಕ್ಯಾಸಲ್‌ಗೆ ಹೋಗಿ ಅಲ್ಲಿನ ಭಾರತೀಯ ಅವಧಿ ಕೂಲಿಗಾರರಿಗೆ ಮುಷ್ಕರ ಹಿಡಿಯಲು ಪ್ರೋತ್ಸಾಹಿಸಬೇಕೆಂದು ತಿಳಿಸಿದ್ದೆವು. ಅವರ ತಾಯಿನುಡಿ ತಮಿಳು, ಸ್ವಲ್ಪ ಹಿಂದೂಸ್ತಾನಿಯೂ ಬರುತ್ತಿತ್ತು. ಕಲ್ಲಿದ್ದಲು ಗಣಿಗಳ ಕೂಲಿಗಳು ಬಹುಜನ ಮದರಾಸು ಪ್ರಾಂತದಿಂದ ಬಂದವರು. ತಮಿಳು ಅಥವಾ ತೆಲಗು ಸ್ವಲ್ಪ ಹಿಂದೂಸ್ತಾನಿಯೂ ಬರುತ್ತಿತ್ತು. ಕಲ್ಲಿದ್ದಲು ಗಣಿಗಳ ಕೂಲಿಗಳು ಬಹುಜನ ಮದರಾಸು ಪ್ರಾಂತದಿಂದ ಬಂದವರು. ತಮಿಳು ಅಥವಾ ತೆಲುಗು ಮಾತನಾಡುವವರು. ಉತ್ತರ ಹಿಂದೂಸ್ತಾನದವರು ಬಹಳ ಜನರಿರಲಿಲ್ಲ. ಈ ಸಹೋದರಿಯರ ಉಪದೇಶದಂತೆ ಕೂಲಿಗಾರರು ಮುಷ್ಕರ ಹಿಡಿದರೆ ಕೂಲಿಗಾರರ ಜೊತೆಯಲ್ಲಿ ಇವರನ್ನೂ ಸರಕಾರದವರು ಬಂಧಿಸಲೇಬೇಕು. ಅಷ್ಟಾದರೆ ಕೂಲಿಗಾರರ ಉತ್ಸಾಹಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯುತ್ತದೆ. ಹೀಗೆ ಯೋಚಿಸಿ ಟ್ರಾನ್ಸವಾಲ್ ಸಹೋದರಿಯರ ಮುಂದಿಟ್ಟೆ.

ಫೀನಿಕ್ಸ್‌ಗೆ ಹೋಗಿ ಅವರಿಗೆ ಈ ಯೋಚನೆ ತಿಳಿಸಿದೆ. ಮೊದಲು ಅಲ್ಲಿದ್ದ ಸೋದರಿಯರೊಡನೆ ಆಪ್ತಾಲೋಚನೆ ಮಾಡಿದೆ. ಹೆಂಗಸರನ್ನು ಸೆರೆಮನೆಗೆ ಕಳುಹಿಸುವುದರಲ್ಲಿ ಬಹಳ ಅಪಾಯವಿದೆಯೆಂದು ನನಗೆ ತಿಳಿದಿತ್ತು. ಫೀನಿಕ್ಸ್‌ನ ಸೋದರಿಯರಿಗೆಲ್ಲ ಗುಜರಾತಿ ಬರುತ್ತಿತ್ತು. ಟ್ರಾನ್ಸ್‌ವಾಲ್ ಸೋದರಿಯರ ಶಿಕ್ಷಣವೂ ಪರಿಶ್ರಮವೂ ಅವರಿಗಿರಲಿಲ್ಲ. ಅನೇಕ ನನ್ನ ಬಂಧುಗಳು ನನ್ನ ಒತ್ತಾಯಕ್ಕಾಗಿ ಸೆರೆಮನೆಗೆ ಹೋಗಲು ಒಪ್ಪಬಹುದು. ಆ ಮೇಲೆ ಕಷ್ಟಕ್ಕೆ ಹಿಂಜರಿದರೆ, ಸಹಿಸಲು ಅಶಕ್ತರಾದರೆ ಕ್ಷಮೆ ಬೇಡಬೇಕಾಗಿ ಬರಬಹುದು. ಆದರಿಂದ ನನಗೂ ಅಸಮಾಧಾನ, ಚಳವಳಿಗೂ ದೊಡ್ಡ ಅಪಾಯ. ನಾನು ಏನೂ ಹೇಳಿದರೂ ಇಲ್ಲವೆನ್ನುತ್ತಿದ್ದಿಲ್ಲವಾದ್ದರಿಂದ ನನ್ನ ಹೆಂಡತಿಗೆ ಹೇಳಬಾರದೆಂದು ತೀರ್ಮಾನಿಸಿದೆ. ಆಗಲಿ ಎಂದರೆ ಅದಕ್ಕೆ ಬೆಲೆ ಕಟ್ಟಲು

ನನಗೆ ಅಸಾಧ್ಯವಾಗಿತ್ತು, ಇಂಥ ವಿಷಮ ಪರಿಸ್ಥಿತಿಯಲ್ಲಿ ತನ್ನ ಬುದ್ಧಿಗೆ ಸರಿತೋರಿದ ಮಾರ್ಗ ಹಿಡಿಯಲೆಂದು ಬಿಟ್ಟುಬಿಡುವುದು ಗಂಡನ ಕರ್ತವ್ಯ. ಆಕೆ ಯಾವ ಮಾರ್ಗ ಅನುಸರಿಸದಿದ್ದರೂ ಸಿಟ್ಟಾಗಬಾರದು. ಇತರ ಸೋದರಿಯರೊಂದಿಗೆ ಮಾತನಾಡಿದಾಗ ಅವರು ತತ್‌ಕ್ಷಣ ನನ್ನ ಸಲಹೆಗೆ ಒಪ್ಪಿ ಸೆರೆಮನೆಗೆ ಹೋಗಲು ಸಿದ್ಧರೆಂದು ತಿಳಿಸಿದರು. ಏನೇ ಬರಲಿ ಅವಧಿ ಮುಗಿಸಿಕೊಂಡೇ ಸೆರೆಮನೆಯಿಂದ ಹೊರಗೆ ಬರುವುದಾಗಿ ತಿಳಿಸಿದರು. ಆ ಸೋದರಿಯರೊಂದಿಗೆ ನಾನು ನಡೆಸಿದ ಸಂಭಾಷಣೆಯನ್ನು ಕೇಳಿ ನನ್ನ ಹೆಂಡತಿ "ಈ ವಿಷಯವನ್ನು ನನಗೆ ತಿಳಿಸಿದೆ ಇದ್ದುದಕ್ಕೆ ವ್ಯಸನವಾಗುತ್ತದೆ. ಸೆರೆಮನೆಗೆ ಹೋಗಲು ಅಯೋಗ್ಯಳೆನ್ನಲು ನನ್ನಲ್ಲಿ ಏನು ತಪ್ಪಿದೆ? ಇತರರಿಗೆ ನೀವು ತೋರಿಸುವ ದಾರಿಯಲ್ಲಿ ನಾನೂ ನಡೆಯಲು ಇಷ್ಟಪಡುತ್ತೇನೆ" ಎಂದಳು.

"ನಿನ್ನ ಮನಸ್ಸು ನೋಯಿಸಲು ನನಗೆ ಇಷ್ಟವಿಲ್ಲ; ನಿನಗೆ ಗೊತ್ತು. ಅಪನಂಬಿಕೆಯ ಪ್ರಶ್ನೆಯೇ ಇಲ್ಲ. ನೀನೂ ಸೆರೆಮನೆಗೆ ಹೋಗುವುದಾದರೆ ನನಗೆ ಬಹಳ ಸಂತೋಷ. ಆದರೆ ನನ್ನ ಬಲಾತ್ಕರಕ್ಕಾಗಿ ನೀನು ಹೋಗಬಾರದು. ಇಂಥ ವಿಷಯದಲ್ಲಿ ಎಲ್ಲರೂ ಅವರವರ ಶಕ್ತಿ, ಧೈರ್ಯ ಅಳತೆ ಮಾಡಿ ಕರ್ತವ್ಯವನ್ನು ನಿರ್ಧರಿಸಬೇಕು. ನಾನು ಹೇಳಿದರೆ ನನಗಾಗಿ ನೀನು ಸೆರೆಮನೆಗೆ ಹೋಗಲು ಒಪ್ಪಬಹುದು. ನ್ಯಾಯಾಸ್ಥಾನದಲ್ಲಿ ನಡುಗಲು ಪ್ರಾರಂಭಿಸಿದರೆ, ಸೆರೆಮನೆಯ ಕಷ್ಟಗಳಿಗೆ ಹೆದರಿದರೆ ನಿನ್ನಲ್ಲಿ ತಪ್ಪೆಣಿಸಲಾರೆ. ಆದರೆ ನಾನು ಹೇಗೆ ಸಹಿಸಲಿ? ನಿನಗೆ ಈಗ ಆಸರೆ ಕೊಟ್ಟು ಜನರಿಗೆ ಆಗ ಏನು ಉತ್ತರ ಕೊಡಲಿ? ಈ ಎಲ್ಲ ಭಯಗಳಿಂದ ಸೆರೆಮನೆಗೆ ಹೋಗು ಎಂದು ಹೇಳಲು ಹಿಂಜರಿದೆ" ಎಂದೆ.

"ಸೆರೆಯ ಕಷ್ಟ ಸಹಿಸಲಾರದೆ ಕ್ಷಮಾಪಣೆ ಕೇಳಿ ಹೊರಗೆ ಬಂದರೆ ನನ್ನನ್ನು ಹತ್ತಿರ ಸೇರಿಸಬೇಡಿ. ನೀವು ಕಷ್ಟ ಸಹಿಸಬಹುದು, ನನ್ನ ಮಕ್ಕಳು ಸಹಿಸಬಹುದು, ನಾನೇಕೆ ಕೂಡದು? ನಾನೂ ಸತ್ಯಾಗ್ರಹ ಸೇರುವದು ಖಂಡಿತ" ಎಂದಳು.

"ಹಾಗಾದರೆ ನಿನ್ನನ್ನು ಸೇರಿಸಲೇಬೇಕು. ಆದರೆ ನನ್ನ ಷರತ್ತುಗಳೂ ಗೊತ್ತಿವೆ. ನನ್ನ ಸ್ವಭಾವವೂ ಗೊತ್ತಿದೆ. ಈಗಲೂ ಮತ್ತೆ ಯೋಚನೆ ಮಾಡು. ಚೆನ್ನಾಗಿ ಯೋಚಿಸಿ, ಸತ್ಯಾಗ್ರಹಕ್ಕೆ ಸೇರಬಾರದೆಂದು ಇಷ್ಟಪಟ್ಟರೆ ಈಗಲೂ ಹಿಂದೆ ನಿಲ್ಲಬಹುದು. ಈಗಲೂ ನಿನ್ನ ಮನಸ್ಸು ಬದಲಾಯಿಸಿದರೆ ಅದರಲ್ಲಿ ಏನೂ ಅವಮಾನವಿಲ್ಲ" ಎಂದೆ.

"ಯೋಚಿಸಬೇಕಾದ್ದೇನೂ ಇಲ್ಲ. ಆಗಲೇ ತೀರ್ಮಾನ ಮಾಡಿದ್ದೇನೆ" ಎಂದಳು.

ಪ್ರತಿಯೊಬ್ಬರೂ ಯಾರ ಸಲಹೆಗೂ ಲಕ್ಷ್ಯಕೊಡದೆ ಅವರವರೇ ತೀರ್ಮಾನಕ್ಕೆ ಬರಬೇಕೆಂದು ಹೆಂಗಸು ಗಂಡಸು, ಪ್ರತಿಯೊಬ್ಬ ಆಶ್ರಮವಾಸಿಗೂ ತಿಳಿಸಿದೆ. ಹೋರಾಟ ಅಲ್ಪಕಾಲ ನಡೆಯಲಿ ದೀರ್ಘಕಾಲ ನಡೆಯಲಿ, ಫೀನಿಕ್ಸ್ ಆಶ್ರಮ ಉಳಿಯಲಿ ಅಳಿಯಲಿ, ಸೆರೆಮನೆಯಲ್ಲಿ ಹೆಂಗಸಾಗಲಿ ಗಂಡಸಾಗಲಿ ಆರೋಗ್ಯದಿಂದಿರಲಿ, ಅನಾರೋಗ್ಯದಿಂದಿರಲಿ ಇಟ್ಟ ಹೆಜ್ಜೆ ಕದಲಿಸದಿರುವುದು ಅತಿ ಮುಖ್ಯವೆಂದು ಪದೇಪದೇ ವಿಧವಿಧವಾಗಿ ಒತ್ತಾಯ ಮಾಡಿ ಹೇಳಿದೆ. ಎಲ್ಲರೂ ಯುದ್ಧಸನ್ನದ್ಧರಾದರು. ಈ ಗುಂಪಿನಲ್ಲಿ ಫೀನಿಕ್ಸ್‌ನವರಲ್ಲದವರೆಂದರೆ ರುಸ್ತುಂಜಿ ಜೀವನಜೀ ಘೋರ್ ಖೋಡು. ಅವರಿಗೂ ಎಲ್ಲಾ ತಿಳಿಸಿದ್ದೆವು. ಅವರನ್ನು ಪ್ರೀತಿಗಾಗಿ ಕಾಕಾಜಿ ಎಂದು ಕರೆಯುತ್ತಿದ್ದೆವು. ಇಂಥ ಸಂರ್ಭದಲ್ಲಿ

ಅವರು ಹಿಂದೆ ನಿಲ್ಲುವ ವ್ಯಕ್ತಿಯೇ ಅಲ್ಲ. ಆಗಲೇ ಒಂದು ಬಾರಿ ಸೆರೆಮನೆ ಯಾತ್ರೆ ಆಗಿತ್ತು. ಪುನಃ ಹೋಗಬೇಕೆಂದು ಹಟ ಹಿಡಿದರು.

ಮುತ್ತಿಗೆ ಹಾಕಿದ ಗುಂಪಿನಲ್ಲಿದ್ದವರು: ಶ್ರೀಮತಿ ಕಸ್ತೂರಬಾ ಗಾಂಧೀ, ಜಯಾಕುಮಾರಿ ಮಣಿಲಾಲ್ ಡಾಕ್ಟರ್, ಕಾಶೀ ಛಗನಲಾಲ್ ಗಾಂಧೀ ಸಂತೋಷ್ ಮಗನ್‌ಲಾಲ್ ಗಾಂಧೀ, ಶ್ರೀ ಪಾರ್ಸಿ ರುಸ್ತುಂಜಿ ಜೀವನಜೀ ಘೋರ್ ಖೋಡು, ಛಗನ್‌ಲಾಲ್‌ಕುಶಾಲ್ ಚಂದ ಗಾಂಧೀ, ರಾವ್‌ಜಿಬಾಯಿ, ಮಣಿಭಾಯಿ ಪಟೇಲ್, ಮಗನ್ ಭಾಯಿ ಹರಿಭಾಯಿ ಪಟೇಲ, ಸಾಲೋಮನ್ ರಾಯಪ್ಪನ್, ರಾಜು ಗೋವಿಂದು, ರಾಮದಾಸ್ ಮೋಹನದಾಸ್ ಗಾಂಧಿ, ಶಿವಪೂಜನ್ ಬದರಿ, ವಿ.ಗೋವಿಂದರಾಜಲು, ಕಪ್ಪುಸ್ವಾಮಿ ಮೂನ್‌ಲೈಟ್ ಮೊದಲಿಯಾರ್, ಗೋಕುಲದಾಸ್ ಹಂಸರಾಜ್, ರೇವಾಶಂಕರ್ ರತನ್‌ಸಿ ಸೋಧಾ.

ಮುಂದಿನ ಕಥೆ ಇನ್ನೊಂದು ಅಧ್ಯಾಯದಲ್ಲಿ.

೪೦. ಸೆರೆಮನೆಯಲ್ಲಿ ಸ್ತ್ರೀಯರು

ಈ ಮುತ್ತಿಗೆಕಾರರು ರಹದಾರಿಯಿಲ್ಲದೆ ಗಡಿ ದಾಟಿದ್ದಕ್ಕೂ, ಟ್ರಾನ್ಸ್‌ವಾಲ್ ಪ್ರವೇಶಮಾಡಿದ್ದಕ್ಕೂ ಸೆರೆಮನೆಗೆ ಹೋಗಬೇಕಾಗಿತ್ತು. ಹಿಂದೆ ತಿಳಿಸಿದ ಪಟ್ಟಿಯಲ್ಲಿ ಯಾರ ಹೆಸರು ಮುಂಚೆ ತಿಳಿದಿದ್ದರೂ ಪೋಲೀಸರು ಅವರನ್ನು ಬಂಧನ ಮಾಡದ ಸಂಭವವಿತ್ತು. ನನಗೆ ಅದೇ ರೀತಿ ಆಯಿತು. ಎರಡು ಮೂರು ಬಾರಿ ನನ್ನನ್ನು ದಸ್ತಗಿರಿ ಮಾಡಿದರು, ಆ ಮೇಲೆ ಗಡಿಯಲ್ಲಿ ನನ್ನ ತಂಟೆಗೆ ಬರುತ್ತಲೇ ಇರಲಿಲ್ಲ. ಈ ಗುಂಪು ದಂಡಯಾತ್ರೆ ಹೊರಟ ವಿಷಯ ಯಾರಿಗೂ ತಿಳಿಸಲಿಲ್ಲ; ವರ್ತಮಾನಪತ್ರಿಕೆಗಳಿಗೂ ತಿಳಿಸಲಿಲ್ಲ. ಪೋಲೀಸಿನವರಿಗೂ ಹೆಸರು ತಿಳಿಸಬಾರದು, ನ್ಯಾಯಾಸ್ಥಾನದಲ್ಲಿ ತಿಳಿಸುವುದಾಗಿ ಹೇಳಬೇಕು ಎಂದು ದಂಡಯಾತ್ರೆ ಹೊರಟವರಿಗೆ ತಿಳಿಸಲಾಗಿತ್ತು.

ಪೋಲೀಸರಿಗೆ ಇಂಥ ಸಂದರ್ಭಗಳು ಗೊತ್ತಿದ್ದವು. ಭಾರತೀಯರು ಸೆರೆಮನೆ ಸೇರಲು ಹೊರಟಾಗ ತಮಾಷೆಗಾಗಿ ಕೆಲವರು ಹೆಸರು ಕೊಡುತ್ತಿರಲಿಲ್ಲ. ಆದ್ದರಿಂದ ಫೀನಿಕ್ಸ್ ಗುಂಪಿನ ಈ ನಡವಳಿಕೆಯಲ್ಲಿ ಏನೂ ಆಶ್ಚರ್ಯ ತೋರದೆ ಅವರೆಲ್ಲರನ್ನೂ ಬಂಧಿಸಿದರು. ಅವರ ವಿಚಾರಣೆಯಾಗಿ ೧೯೧೩ನೇ ಸೆಪ್ಟೆಂಬರ ೨೩ ರಲ್ಲಿ ಮೂರು ಮೂರು ತಿಂಗಳು ಕಠಿಣ ಶಿಕ್ಷೆಯಾಯಿತು.

ಟ್ರಾನ್ಸ್ ವಾಲ್‌ನಲ್ಲಿ ವಿಫಲರಾದ ಸೋದರಿಯರು ನೇಟಾಲ್‌ಗೆ ಒಂದರು. ರಹದಾರಿ ಇಲ್ಲವೆಂದು ಅವರ ಬಂಧನವಾಗಲಿಲ್ಲ. ಆದ್ದರಿಂದ ಅವರು ನ್ಯೂಕ್ಯಾಸಲ್‌ಗೆ ಹೋಗಿ ಮೊದಲೇ ವಿಧಾಯಕ ಮಾಡಿದಂತೆ ತಮ್ಮ ಕಾರ್ಯದಲ್ಲಿ ತೊಡಗಿದರು. ಅವರ ಪ್ರಭಾವ ಕಾಳ್ಗಿಚ್ಚಿನಂತೆ ಹಬ್ಬಿತು. ಮೂರು ಪೌಂಡು ತಲೆಗಂದಾಯದ ಅನ್ಯಾಯದ ದಾರುಣ ಕಥೆ ಕೂಲಿಗಾರರ ಮನಸ್ಸನ್ನು ಕಲಕಿತು. ಅವರೆಲ್ಲ ಮುಷ್ಕರ ಹಿಡಿದರು.

ನನಗೆ ತಂತೀ ವರ್ತಮಾನ ಬಂತು ಸಂತೋಷವಾದಂತೆ ದಿಗ್ಭ್ರಾಂತನೂ ಅದೆ. ಈಗ ನನ್ನ ಕರ್ತವ್ಯವೇನು? ಈ ಅದ್ಭುತ ಜಾಗೃತಿಗೆ ನಾನು ಸಿದ್ಧನಿರಲಿಲ್ಲ. ನನ್ನ ಕರ್ತವ್ಯವನ್ನೇನೊ ಸ್ಪಷ್ಟವಾಗಿ ಗ್ರಹಿಸಿದೆ. ನ್ಯೂಕ್ಯಾಸಲ್‌ಗೆ ಹೋಗಿ ಸಾಧ್ಯವಾದುದನ್ನೆಲ್ಲ ಮಾಡಬೇಕು. ಮರುಕ್ಷಣದಲ್ಲೇ ಅಲ್ಲಿಗೆ ಹೊರಟೆ.

ಟ್ರಾನ್ಸ್ ವಾಲ್ ಸೋದರಿಯರನ್ನು ಹಿಡಿಯದೆ ಚಳುವಳಿ ನಡೆಸಬಿಡಲು ಅಸಾಧ್ಯವಾಯಿತು. ಫೀನಿಕ್ಸ್ ಗುಂಪಿನಂತೆ ಅವರಿಗೂ ೧೯೧೩ ನೇ ಅಕ್ಟೋಬರ್ ೨೧ ರಲ್ಲಿ ಮೂರು ಮೂರು ತಿಂಗಳು ಶಿಕ್ಷೆ ವಿಧಿಸಿ ಅದೇ ಸೆರೆಮನೆಯಲ್ಲಿಟ್ಟರು.

ಈ ಸುದ್ದಿಯೆಲ್ಲ ದಕ್ಷಿಣ ಆಫ್ರಿಕದಲ್ಲಿ ಮಾತ್ರವಲ್ಲ, ಮಾತೃಭೂಮಿಯಾದ ಭಾರತದಲ್ಲಿ ಸಹ ಭಾರತೀಯರ ಮನಸ್ಸನ್ನು ಕಲಕಿಬಿಟ್ಟಿತು. ಇದುವರೆಗೂ ಸರ್ ಫಿರೋಜ್ ಷಾ ತಟಸ್ಥರಾಗಿದ್ದರು. ೧೯೦೧ ರಲ್ಲಿ ದಕ್ಷಿಣ ಆಫ್ರಿಕಕ್ಕೆ ಹೋಗಬಾರದೆಂದು ನನಗೆ ಬುದ್ಧಿವಾದ ಹೇಳಿದ್ದರು. ಭಾರತಕ್ಕೆ ಸ್ವಾತಂತ್ರ್ಯ ದೊರೆಯುವವರೆಗೂ ಪರದೇಶಗಳಲ್ಲಿರುವ ಭಾರತೀಯರಿಗೆ ಏನೂ ಸಹಾಯ ಮಾಡಲು ಸಾಧ್ಯವಿಲ್ಲವೆಂದು ಅವರ ಭಾವನೆ; ಪ್ರಾರಂಭದಲ್ಲಿ ಸತ್ಯಾಗ್ರಹ ಚಳುವಳಿಯಿಂದ ಅವರ ಮೇಲೆ ಯಾವ ಪರಿಣಾಮವೂ ಆಗಲಿಲ್ಲ. ಆದರೆ ಹೆಂಗಸರು ಸೆರೆಯಲ್ಲಿದ್ದಾರೆಂದು ಕೇಳಿ ಇನ್ನಾವುದರಿಂದಲೂ ಸಾಧ್ಯವಾಗದ ಪರಿಣಾಮವಾಯಿತು. ಬೊಂಬಾಯಿ ನಗರ ಭವನದಲ್ಲಿ ನಡೆದ ಸಭೆಯಲ್ಲಿ, ಸಾಮಾನ್ಯ ಅಪರಾಧಿಗಳೊಂದಿಗೆ ಈ ಹೆಂಗಸರನ್ನು ಸೆರೆಯಲ್ಲಿ ಕೂಡಿರಿಸುವದನ್ನು ಕೇಳಿ ತಮ್ಮ ರಕ್ತ ಕುದಿಯುತ್ತಿರುವುದೆಂದೂ, ಈ ಸಂದರ್ಭದಲ್ಲಿ ಭಾರತ ಇನ್ನು ನಿದ್ದೆ ಮಾಡಲು ಸಾಧ್ಯವಿಲ್ಲವೆಂದೂ ಅವರೇ ಹೇಳಿದರು.

ಸ್ತ್ರೀಯರ ಧೈರ್ಯ ವರ್ಣನಾತೀತವಾಗಿತ್ತು. ಎಲ್ಲರನ್ನೂ ಮಾರಿಟ್ಸ್ ಬರ್ಗ್ ಸೆರೆಮನೆಯಲ್ಲಿಟ್ಟು ಅನೇಕ ಹಿಂಸೆಕೊಟ್ಟರು. ಆಹಾರ ಏನು ಚೆನ್ನಾಗಿರಲಿಲ್ಲ. ಬಟ್ಟೆ ಒಗೆಯುವ ಕೆಲಸ ಕೊಡುತ್ತಿದ್ದರು. ಅವಧಿ ಮುಗಿಯುವ ಕೊನೆಯವರೆಗೂ ಹೊರಗಿನಿಂದ ಆಹಾರ ಕೊಡಲು ಅವಕಾಶ ಕೊಡಲಿಲ್ಲ. ಒಬ್ಬಾಕೆಯಂತೂ ಒಂದೇ ಬಗೆಯ ಆಹಾರ ತೆಗೆದುಕೊಳ್ಳುವ ವ್ರತ ಹಿಡಿದಿದ್ದಳು. ಅಧಿಕಾರಿಗಳು ಆ ಆಹಾರ ಒದಗಿಸಲು ಬಹಳ ಕಷ್ಟಪಡಬೇಕಾಯಿತು; ಮನುಷ್ಯ ಮಾತ್ರರು ಅದನ್ನು ಮುಟ್ಟುವಂತೆ ಇರಲಿಲ್ಲ. ಆಕೆಗೆ ಹಿಪ್ಪೆ () ಎಣ್ಣೆ ಬೇಕಾಗಿತ್ತು. ಮೊದಲು ನಿರಾಕರಿಸಿದರು; ಕೊಟ್ಟಾಗ ಬರೀ ಮುಗ್ಗು ವಾಸನೆ. ತನ್ನ ಸ್ವಂತ ವೆಚ್ಚದಿಂದ ತರಿಸಿಕೊಡಲು ಕೇಳಿದಾಗ, ಸೆರೆಮನೆಯು ಹೋಟಲಲ್ಲವೆಂದೂ ಕೊಟ್ಟುದನ್ನು ತೆಗೆದುಕೊಳ್ಳ ಬೇಕೆಂದೂ ಉತ್ತರ ದೊರೆಯಿತು. ಆಕೆ ಸೆರೆಮನೆಯಿಂದ ಬಂದಾಗ ಎಲುಬಿನ ಗೂಡಾಗಿದ್ದಳು; ಜೀವ ಉಳಿಸುವದೇ ಗಂಡಾಂತರವಾಯಿತು.

ಇನ್ನೊಬ್ಬಾಕೆ ಸೆರೆಮನೆಯಿಂದ ಹೊರಗೆ ಬಂದಾಗ ಕೆಟ್ಟಜ್ವರ ಪೀಡಿತಳಾಗಿ ಸ್ವಲ್ಪ ದಿನಗಳಲ್ಲೇ–೧೯೧೪ ನೇ ಫೆಬ್ರುವರಿ ೨೨ ರಲ್ಲಿ ದೈವಾಧೀನಳಾದಳು. ಆಕೆಯನ್ನು ನಾನು ಮರೆಯವದೆಂತು? ಜೋಹಾನ್ಸಬರ್ಗ್‌ನ ವಲ್ಲಿಯಮ್ಮ ಆರ್. ಮುನಿಸಾಮಿ ಹದಿನಾರು ವರ್ಷದ ಯುವತಿ. ಆಕೆಯನ್ನು ನಾನು ನೋಡಿದಾಗ ಹಾಸಿಗೆ ಹಿಡಿದಿದ್ದಳು. ಒಳ್ಳೆ ಎತ್ತರವಾದ ಹುಡುಗಿಯಾದ್ದರಿಂದ ಆಕೆಯ ಕೃಶಾಂಗವನ್ನು ನೋಡುವುದು ಅಸಾಧ್ಯವಾಗಿತ್ತು.

"ವಲ್ಲಿಯಮ್ಮ, ಸೆರೆಮನೆಗೆ ಹೋದುದಕ್ಕೆ ವ್ಯಸನಪಡುತ್ತೀಯಾ?" ನಾನು ಕೇಳಿದೆ.

"ವ್ಯಸನವೇ? ಈಗ ಬಂಧಿಸಿದರೆ ಪುನಃ ಹೋಗಲು ಸಿದ್ಧಳಿದ್ದೇನೆ" ಎಂದಳು ವಲ್ಲಿಯಮ್ಮ.

"ನೀನು ಸಾಯಬೇಕಾಗಿ ಬಂದರೆ"

"ಚಿಂತೆಯಿಲ್ಲ, ತನ್ನ ಮಾತೃಭೂಮಿಗಾಗಿ ಯಾರು ತಾನೆ ಸಾಯಬಯಸುವುದಿಲ್ಲ?

ಈ ಸಂಭಾಷಣೆಯಾದ ಕೆಲ ದಿನದಲ್ಲೆ ವಲ್ಲಿಯಮ್ಮ ಕಣ್ಮರೆಯಾದಳು. ಆದರೆ ಆಕೆಯ ಹೆಸರು ನಮ್ಮ ಶಾಶ್ವತ ಕೀರ್ತಿ! ಅನೇಕ ಕಡೆಗಳಲ್ಲಿ ಸಂತಾಪ ಸೂಚಕ ಸಭೆ ನಡೆದವು. ಈ ಭಾರತ ವೀರಪುತ್ರಿಯ ಅಪ್ರತಿಮ ಬಲಿದಾನದ ಜ್ಞಾಪಕಾರ್ಥ 'ವಲ್ಲಿಯಮ್ಮ ಭವನ' ಎಂಬ ಸ್ಮಾರಕಮಂದಿರವನ್ನು ನಿರ್ಮಿಸಲು ಭಾರತೀಯರು ನಿಶ್ಚಯಿಸಿದರು. ಈ ನಿರ್ಣಯ ದುರದೃಷ್ಟವಶಾತ್ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಅನೇಕ ತೊಂದರೆ ಅಡ್ಡಬಂದವು. ನಮ್ಮ ಜನರಲ್ಲೇ ಒಡಕು ಹುಟ್ಟಿ ಪ್ರಮುಖ ಕೆಲಸಗಾರರೆಲ್ಲ ಒಬ್ಬೊಬ್ಬರಾಗಿ ದೂರವಾದರು. ಕಲ್ಲು ಮಣ್ಣಿನ ಭವನ ಏಳಲಿ ಬಿಡಲಿ, ವಲ್ಲಿಯಮ್ಮನ ತ್ಯಾಗವಂತೂ ಚಿರಸ್ಥಾಯಿ. ಆಕೆ ತನ್ನ ತ್ಯಾಗಮಂದಿರವನ್ನು ತಾನೇ ತನ್ನ ಕೈಗಳಿಂದ ನಿರ್ಮಿಸಿದಳು. ಈಗಲೂ ಅನೇಕ ಹೃದಯಮಂದಿರಗಳಲ್ಲಿ ಆಕೆಯ ಜ್ಯೋತಿ ಪ್ರತಿಮೆ ಮೂರ್ತೀಭವಿಸಿದೆ. ಭಾರತ ಉಳಿದಿರುವವರೆಗೂ, ದಕ್ಷಿಣ ಆಫ್ರಿಕ ಸತ್ಯಾಗ್ರಹ ಇತಿಹಾಸದಲ್ಲಿ ವಲ್ಲಿಯಮ್ಮನ ಹೆಸರು ಶಾಶ್ವತವಾಗಿರುತ್ತದೆ. ಶಾಸನದ ತೊಡಕುಗಳನ್ನೆ ಅರಿಯದೆ, ದೇಶದ ಭಾವನೆಯೇ ಇಲ್ಲದೆ, ಕೇವಲ ನಂಬಿಕೆಯಿಂದ ಹೊರಹೊಮ್ಮಿದ ದೇಶಪ್ರೇಮದ ಈ ಸೋದರಿಯರ ತ್ಯಾಗ ಬಹು ಪರಿಶುದ್ಧವಾದುದು. ಇವರಲ್ಲಿ ಅನೇಕರು ವಿದ್ಯಾಹೀನರು, ಪತ್ರಿಕೆ ಓದಲಾರದವರು. ಆದರೂ ಭಾರತೀಯರ ಆತ್ಮಗೌರವಕ್ಕೇ ಕೊಡಲಿಯ ಪೆಟ್ಟು ಬಿದ್ದಿದೆ ಎಂದು ಅರಿತರು. ಅವರು ಸೆರೆಮನೆ ಸೇರಿದ್ದು ಅವರ ಹೃದಯ ಶೋಕದ ಧ್ವನಿ, ಹೃದಯಾಂತರಾಳದ ಮೊರೆ, ಸರ್ವಶ್ರೇಷ್ಠ ಯಜ್ಞದ ಗುರುತು ಪರಿಶುದ್ಧವಿದ್ದಂತೆ ಯಾಗದ ಫಲ. ಮಾನವನ ಭಕ್ತಿಗಾಗಿಯೇ ದೇವರು ಹಸಿದಿದ್ದಾನೆ. ನಿಃಸ್ವಾರ್ಥ ಭಕ್ತಿಯಿಂದ ಒಪ್ಪಿಸಿದ ನಿರಾಶ್ರಿತ ವಿಧವೆಯ ಕಾಣಿಕೆಯನ್ನು ಸಹ ಸಂತೋಷದಿಂದ ಸ್ವೀಕರಿಸಿ ನೂರು ಪಾಲು ಪ್ರತಿಫಲ ಕೊಡುತ್ತಾನೆ. ಕಡುಬಡವಸುದಾಮ ಕೊಟ್ಟ ಹಿಡಿ ಅವಲಕ್ಕಿಯಿಂದ ಅವನ ಜನ್ಮಕ್ಕೆ ಅಂಟಿದ್ದ ಬಡತನವೆಲ್ಲ ಮಾಯವಾಯಿತು. ಅನೇಕರ ಬಂಧನ ನಿರುಪಯೋಗವಾಗಿದ್ದರೂ ಇರಬಹುದು; ಆದರೆ ಒಬ್ಬ ಶುದ್ಧಾತ್ಮನ ಭಕ್ತಿಯ ತ್ಯಾಗ ಸಾಕು; ಅದು ಎಂದಿಗೂ ನಿರರ್ಥಕವಾಗದು. ದಕ್ಷಿಣ ಆಫ್ರಿಕದಲ್ಲಿ ಯಾರ ತ್ಯಾಗದಿಂದ ದೇವರು ತೃಪ್ತನಾದನೋ, ಫಲ ಲಭಿಸಿತೋ ಹೇಳುವುದು ಕಷ್ಟ. ಆದರೆ ವಲ್ಲಿಯಮ್ಮನ ತ್ಯಾಗದಿಂದ ಫಲ ಲಭಿಸಿತು ಎಂದು ಬಲ್ಲೆವು. ಅಂತೆಯೇ ಇತರ ಸೋದರಿಯರ ತ್ಯಾಗವೂ ಫಲಪ್ರದವಾಯಿತು.

ಮಾನವನಸೇವೆಗಾಗಿ, ದೇಶಸೇವೆಗಾಗಿ ಅಸಂಖ್ಯಾತ ಕೃತಾತ್ಮರು ಆತ್ಮತ್ಯಾಗ ಮಾಡಿದ್ದಾರೆ, ಮಾಡುತ್ತಿದ್ದಾರೆ, ಮುಂದೆಯೂ ಮಾಡುತ್ತಾರೆ, ಅವರಲ್ಲಿ ಪರಿಶುದ್ಧರು ಯಾರು ಎಂದು ಅರಿಯುವದು ಕಷ್ಟ. ಆದರೆ ಸತ್ಯಾಗ್ರಹಿಗಳಲ್ಲಿ ಸ್ಫಟಿಕದಂತೆ ಪರಿಶುದ್ಧರಾದವರು ಒಬ್ಬರಿದ್ದರೂ ಗುರಿ ಮುಟ್ಟಲು ತ್ಯಾಗ ಸಾಕು. ಸತ್ಯದ ತಳಹದಿಯ

ಮೇಲೆ ಪ್ರಪಂಚ ನಿಂತಿದೆ. ಅಸತ್ಯವೆಂದರೆ ಅಸತ್; ಇಲ್ಲದುದು. ಸತ್ಯ ಶಾಶ್ವತ. ಅಸತ್ಯಕ್ಕೆ ನಿತ್ಯತೆಯೇ ಇಲ್ಲದ ಮೇಲೆ ಗೆಲವೆಲ್ಲಿಯದು? ಸತ್ಯ ಶಾಶ್ವತವಾದುದರಿಂದ ಅದರ ನಾಶವೂ ಅಸಾಧ್ಯ. ಇದೇ ಸತ್ಯಾಗ್ರಹದ ತಿರುಳು.

೪೧. ಕೂಲಿಗಾರರ ಪ್ರವಾಹ

ಸ್ತ್ರೀಯರ ಬಂಧನವು ನ್ಯೂಕ್ಯಾಸಲ್ ಗಣಿಗಳ ಕೂಲಿಗಾರರ ಮೇಲೆ ಗಾರುಡಿಗನ ಇಂದ್ರಜಾಲದಂತೆ ಅಸಾಧ್ಯ ಪರಿಣಾಮ ಮಾಡಿತು. ಅವರೆಲ್ಲರೂ ಮುಷ್ಕರ ಹಿಡಿದು ತಂಡತಂಡವಾಗಿ ಪಟ್ಟಣಕ್ಕೆ ಬಂದರು. ಈ ಸುದ್ದಿ ಬಂದೊಡನೆ ನಾನು ನ್ಯೂಕ್ಯಾಸಲ್‌ಗೆ ಹೊರಟೆ.

ಈ ಕೂಲಿಗಾರರಿಗೆ ಸ್ವಂತ ಮನೆಯಿಲ್ಲ. ಗಣಿ ಮಾಲಿಕರೆ ಮನೆ ಕಟ್ಟಿಸಿಕೊಟ್ಟು, ರಸ್ತೆಗೆ ದೀಪ, ಮನೆಗೆ ನೀರು ಒದಗಿಸುತ್ತಿದ್ದುದರಿಂದ ಇವರೆಲ್ಲ ಗುಲಾಮಗಿರಿಯಲ್ಲೇ ಜೀವಿಸಬೇಕು. ತುಲಸೀದಾಸರು ಹೇಳುವಂತೆ ಪರಾವಲಂಬಿಗೆ ಕನಸಿನಲ್ಲೂ ಸುಖವಿಲ್ಲ.

ಕೂಲಿಗಾರರು ಅನೇಕ ದೂರು ಹೇಳಿದರು. ಬಂಡವಾಳಗಾರರು ದೀಪ ನೀರು ನಿಲ್ಲಿಸಿದ್ದಾರೆಂದು ಕೆಲವರೂ, ತಮ್ಮ ಮನೆಗಳೊಳಗಿನ ಸಾಮಾನು ಹೊರಗೆಸೆದಿದ್ದಾರೆಂದು ಕೆಲವರೂ ತಿಳಿಸಿದರು. ಸೈಯದ್ ಇಬ್ರಾಹಿಂ ಎಂಬ ಪಠಾಣ ತನ್ನ ಬೆನ್ನು ತೋರಿಸಿ "ಇಲ್ಲಿ ನೋಡಿ, ಹೇಗೆ ಹೊಡೆದಿದ್ದಾರೆ? ನಿಮ್ಮ ಆಜ್ಞೆ ಪಾಲಿಸಬೇಕೆಂದು ಆ ನೀಚರನ್ನು ಸುಮ್ಮನೆ ಬಿಟ್ಟೆ. ನಾನು ಪಠಾಣ. ಪಠಾಣರಿಗೆ ಹೊಡೆತ ತಿನ್ನುವದು ಗೊತ್ತಿಲ್ಲ; ಕೊಡುವುದೊಂದೇ ಗೊತ್ತು" ಎಂದ.

"ಭೇಷ್ ಅಣ್ಣ. ಒಳ್ಳೆ ಕೆಲಸ ಮಾಡಿದೆ. ಇದೇ ನಿಜವಾದ ಧೈರ್ಯ. ನಿನ್ನಂಥ ಜನರಿಂದಲೇ ನಮಗೆ ಗೆಲವಾಗುವದು" ಎಂದೆ.

ಆತನನ್ನು ಅಭಿನಂದಿಸಿದೆ. ಆದರೆ ಈ ಪಠಾಣನಂತೆ ಇನ್ನೂ ಉಳಿದವರನ್ನೂ ಹೊಡೆಯುತ್ತ ಹೋದರೆ ಮುಷ್ಕರ ಬಹುಕಾಲ ನಡೆಯಲಾರದೆಂದು ಚಿಂತಿಸಿದೆ. ಛಡಿ ಹೊಡೆತವೊಂದು ಬಿಟ್ಟರೆ ನೀರು ದೀಪ ಮುಂತಾದ ಸೌಕರ್ಯ ನಿಲ್ಲಿಸಿದರೂ ಬಾಧಕವಿರುತ್ತಿರಲಿಲ್ಲ. ಆ ದೂರು ನಿಜವಿರಲಿ ಸುಳ್ಳಿರಲಿ, ಆ ಪರಿಸ್ಥಿತಿಯಲ್ಲಿ ಬಹಲ ಕಾಲ ಮುಷ್ಕರ ನಡೆಸಲು ಸಾಧ್ಯವಿರಲಿಲ್ಲ. ಏನಾದರೂ ನಿವಾರಣೋಪಾಯ ಹುಡುಕಬೇಕು; ಇಲ್ಲವಾದರೆ ಇನ್ನೂ ಅನೇಕ ದಿನ ಕಾದಾಡಿ ಸೋತು ಸುಣ್ಣವಾಗಿ ಕೆಲಸಕ್ಕೆ ಹಿಂದಿರುಗುವುದಕ್ಕಿಂತ ಈಗಲೇ ಸೋಲು ಒಪ್ಪಿ ಕೆಲಸಕ್ಕೆ ಹಿಂದಿರುಗುವುದು ಮೇಲು. ನಾನೆಂದಿಗೂ ನಿರಾಶಾವಾದಿಯಲ್ಲ. ಆದ್ದರಿಂದ ಕೂಲಿಗಾರರೆಲ್ಲ ತಮ್ಮ ಮಾಲಿಕರ ಮನೆ ಬಿಟ್ಟು ಯಾತ್ರಿಕರಂತೆ ಗುಂಟುಮೂಟೆ ಕಟ್ಟಿ ಹೊರಡುವುದೊಂದೇ ಮಾರ್ಗವೆಂದು ತಿಳಿಸಿದೆ.

ಕೂಲಿಗಾರರು ಹತ್ತಾರಲ್ಲ, ನೂರಾರು ಜನ ಇದ್ದರು; ಸಾವಿರಾರು ಆದರೂ ಆಗಬಹುದು. ಈ ದೊಡ್ಡ ಗುಂಪಿಗೆ ಊಟ, ವಸತಿ ಒದಗಿಸುವದೆಂತು? ತರುವಾಯ ಮಾತೃಭೂಮಿಯಿಂದ ಹರಿದ ಹೊನ್ನು ಹೊಳೆ ಇನ್ನೂ ಹುಟ್ಟಿರಲಿಲ್ಲ. ಭಾರತೀಯ ವರ್ತಕರೆಲ್ಲ ಅಧೈರ್ಯಗೊಂಡಿದ್ದರು. ಗಣಿ ಮಾಲಿಕರೊಡನೆ ಯೂರೋಪಿಯನ್‌ರೊಡನೆ ಅವರ ಸಂಬಂಧವಿದ್ದುದರಿಂದ ಬಹಿರಂಗವಾಗಿ ನನಗೆ ಸಹಾಯ ಮಾಡಲು ಯಾರೂ

ಒಪ್ಪಲಿಲ್ಲ. ನ್ಯೂಕ್ಯಾಸಲ್‌ಗೆ ಹೋದಾಗೆಲ್ಲ ನಾನು ಅವರ ಮನೆಯಲ್ಲೇ ಇಳಿಯುತ್ತಿದ್ದೆ. ಆದರೆ ಈ ಬಾರಿ ಇಳಿದುಕೊಂಡರೆ ಅವರನ್ನು ತೊಂದರೆಗೀಡುಮಾಡಬಹುದೆಂದು ಬೇರೆ ಕಡೆ ಇಳಿಯಲು ನಿರ್ಧರಿಸಿದೆ.

ಮೊದಲೇ ತಿಳಿಸಿದಂತೆ ಟ್ರಾನ್ಸ್‌ವಾಲ್ ಸೋದರಿಯರೆಲ್ಲ ತಮಿಳರು. ಅವರೆಲ್ಲ ನ್ಯೂಕ್ಯಾಸಲ್‌ನಲ್ಲಿ ಡಿ. ಲಾಸರಸ್ ಎಂಬಾತನ ಮನೆಯಲ್ಲಿಳಿದಿದ್ದರು. ಆತ ತಮಿಳುನಾಡಿನ ಸಾಧಾರಣ ಅನುಕೂಲಸ್ಥ ಕ್ರೈಸ್ತ. ಎರಡು ಮೂರು ಕೋಣೆ. ಸುತ್ತಲೂ ಸ್ವಲ್ಪ ಆವರಣವಿರುವ ಒಂದು ಮನೆ, ಆತನ ಆಸ್ತಿ. ಆತನ ಮನೆಯಲ್ಲೇ ನಾನೂ ಇಳಿಯಲು ನಿರ್ಧರಿಸಿದೆ. ಬಹು ಆದರದಿಂದ ಸ್ವಾಗತಿಸಿದರು. ಬಡವರಿಗೆ ಭಯವಿಲ್ಲ. ಆ ಮನೆ ಯಜಮಾನ ಅವಧಿ ಕೂಲಿಗಾರನ ವಂಶಸ್ಥ ಆದ್ದರಿಂದ ಆತನೂ ಆತನ ಬಂಧುಗಳೂ ಮೂರು ಪೌಂಡು ತಲೆಗಂದಾಯ ಕೊಡುತ್ತಿದ್ದರು. ಅವಧಿ ಕೂಲಿಗಾರರ ಕಷ್ಟ ಸುಖಗಳೆಲ್ಲ ಅವರಿಗೆ ಚೆನ್ನಾಗಿ ಗೊತ್ತಿದ್ದರಿಂದ ಕೂಲಿಗಾರರಿಗೆ ಆತನೂ ಆತನ ಮನೆಯವರೂ ಸಹಾನುಭೂತಿ ತೋರಿದ್ದು ಆಶ್ಚರ್ಯವೇನಲ್ಲ. ಸಾಮಾನ್ಯ ದಿನಗಳಲ್ಲಿ ನನಗೆ ಆತಿಥ್ಯ ಮಾಡುವುದೇ ನನ್ನ ಸ್ನೇಹಿತರಿಗೆ ಕಷ್ಟ; ಈಗಂತೂ ಮನೆ ಮಠ ಎಲ್ಲ ಹಾಳಾಗಬಹುದು, ಸೆರೆಮನೆಯೂ ಕಾದಿರಬಹುದು. ಅಂಥ ಇಕ್ಕಟ್ಟಿಗೆ ಸಿಗಲು ಇಷ್ಟವುಳ್ಳ ಅನುಕೂಲಸ್ಥ ವರ್ತಕರು ವಿರಳ. ನನ್ನ, ಅವರ ಮಿತಿಯರಿತು ನಾನೇ ದೂರ ನಿಂತೆ. ಬಡ ಲಾಸರಸ್‌ಗೆ ಆಗುವ ನಷ್ಟ ಹೆಚ್ಚೆಂದರೆ ಸ್ವಲ್ಪ ಕೂಲಿ. ಸೆರೆಮನೆಗೆ ಹಾಕಿದರೂ ಆತ ಹೋಗಲು ಸಿದ್ಧ. ಆದರೆ ತನಗಿಂತ ಬಡವರಾದ ಅವಧಿ ಕೂಲಿಗಾರರ ಮೇಲೊಡ್ಡಿದ ಕಷ್ಟ ಸಹಿಸುವುದೆಂತು? ತನ್ನ ಅತಿಥಿಗಳಾದ ಟ್ರಾನ್ಸ್‌ವಾಲ್ ಸೋದರಿಯರು ಅವಧಿ ಕೂಲಿಗಾರಿಗೆ ಸಹಾಯ ಮಾಡಹೋಗಿ ಬಂಧನಕ್ಕೊಳಗಾಧರು. ಕೂಲಿಗಾರರ ಪ್ರಶ್ನೆಯಲ್ಲಿ ತನಗೂ ಒಂದು ಕರ್ತವ್ಯವಿದೆ ಎಂದರಿತು ನನಗೆ ಇಳಿದುಕೊಳ್ಳಲು ಅವಕಾಶ ಕೊಟ್ಟ. ನನಗೆ ನೆರಳು ಕೊಟ್ಟುದೊಂದೇ ಅಲ್ಲ, ತನ್ನ ಸರ್ವಸ್ವವನ್ನೂ ಈ ಸಮಸ್ಯಗಾಗಿ ಅರ್ಪಿಸಿದ. ಆತನ ಮನೆಯಲ್ಲಿ ನಾನು ಇಳಿದುಕೊಂಡದ್ದರಿಂದ ಅದೊಂದು ಯಾತ್ರಾಸ್ಥಳವಾಯಿತು. ಎಲ್ಲ ತರದ ಎಲ್ಲ ಅಂತಸ್ತಿನ ಜನ ಬಂದುಹೋಗುತ್ತಿದ್ದರು. ಒಂದೊಂದು ಸಲ ಆ ಮನೆಯ ಆವರಣದ ತುಂಬಾ ಜನರ ತಲೆಗಳೇ ಎಲ್ಲೆಲ್ಲೂ ಕಾಣುತ್ತಿದ್ದವು. ಅಡಿಗೆಮನೆಯಲ್ಲಂತೂ ಹೆಚ್ಚಿದ ಒಲೆ ಹಗಲೂ ರಾತ್ರಿ ಆರುತ್ತಿರಲಿಲ್ಲ. ಶ್ರೀಮತಿ ಲಾಸರಸ್‌ಗಂತೂ ಕತ್ತೆಗೆಲಸ. ಆದರೂ ಆಕೆಯೂ ಆಕೆಯ ಯಜಮಾನನೂ ಸದಾ ಹಸನ್ಮುಖಿಗಳಾಗಿಯೇ ಇದ್ದರು.

ನೂರಾರು ಜನ ಕೂಲಿಗಾರಿಗೆ ಅನ್ನ ನೀಡುವ ಶಕ್ತಿ ಲಾಸರಸ್‌ಗೆ ಇರಲಿಲ್ಲ. ಮುಷ್ಕರ ಬಹುಕಾಲ ಮುಂದುವರಿಯುವುದೆಂದೂ, ತಮ್ಮ ಯಜಮಾನರ ಮನೆಗಳನ್ನು ಬಿಟ್ಟುಬರಬೇಕೆಂದೂ ಕೂಲಿಗಾರಿಗೆ ಸಲಹೆ ಕೊಟ್ಟೆ. ಸಾಧ್ಯವಿದ್ದಷ್ಟು ಸಾಮಾನು ಮಾರಬೇಕು. ಉಳಿದದ್ದು ಅಲ್ಲೆ ಬಿಟ್ಟು ಬರಬೇಕು. ಗಣಿ ಮಾಲಿಕರು ಅವನ್ನೇನೂ ಮುಟ್ಟುವುದಿಲ್ಲ. ಸೇಡು ತೀರಿಸಿಕೊಳ್ಳಬೇಕೆಂದು ಬೀದಿಗೆಸೆದರೂ ಅದಕ್ಕೂ ಸಿದ್ಧರಿರಬೇಕು. ನನ್ನ ಹತ್ತಿರ ಬರುವಾಗ ಮೈಮೇಲಿನ ಬಟ್ಟೆ, ಕಂಬಳಿ ಹೊರತು ಬೇರೇನೂ ಇರಕೂಡದು. ಮುಷ್ಕರ ಮುಗಿಯುವವರೆಗೆ, ನಾನು ಹೊರಗೆ ಇರುವವರೆಗೆ ನಾನೂ ಅವರೊಂದಿಗೆ ವಾಸಮಾಡಿ ಊಟ ಮಾಡುವದಾಗಿ ತಿಳಿಸಿದೆ. ಈ ನಿಯಮದಂತೆ ನಡೆದರೆ ಮಾತ್ರ ಮುಷ್ಕರ

ಮುಂದುವರಿಸಿ ಜಯ ಗಳಿಸುವುದಕ್ಕೆ ಸಾಧ್ಯ ಎಂದೆ . ಈ ದಾರಿಯಲ್ಲಿ ನಡೆಯಲು ಧೈರ್ಯವಿಲ್ಲದವರು ಕೆಲಸಕ್ಕೆ ಹಿಂದಿರುಗಬೇಕು. ಹಿಂದಿರುಗಿದವರನ್ನು ಯಾರೂ ತಿರಸ್ಕಾರ ಮಾಡಬಾರದು; ಅವರಿಗೆ ತೊಂದರೆ ಕೊಡಬಾರದು. ನನ್ನ ಈ ಷರತ್ತುಗಳಿಗೆ ಕೂಲಿಗಾರರು ಯಾರೂ ಹಿಂದೆ ಮುಂದೆ ನೋಡಲಿಲ್ಲ. ನಾನು ಈ ರೀತಿ ಹೇಳಿದ ದಿನದಿಂದಲೇ ಮನೆಬಿಟ್ಟು ಬಯಲನ್ನಾಶ್ರಯಿಸಿ, ಬಟ್ಟೆಗಂಟು ತಲೆ ಮೇಲೆ ಹೊತ್ತು ತಮ್ಮ ಹೆಂಡತಿ ಮಕ್ಕಳೊಡನೆ ಕೂಲಿಗಾರ ಯಾತ್ರಿಕರು ಪ್ರಚಂಡ ಪ್ರವಾಹದೋಪಾದಿ ಬರಲು ಮೊದಲು ಮಾಡಿದರು.

ಅವರಿಗೆ ವಸತಿ ಒದಗಿಸಲು ನನಗೆ ಶಕ್ತಿ ಇರಲಿಲ್ಲ. ಆಕಾಶವೇ ಮೇಲ್ಛಾವಣಿಯಾಯಿತು. ಪುಣ್ಯವಶಾತ್ ಪ್ರಕೃತಿ ಮಾತೆಯೂ ಅನುಕೂಲಳಾಗಿದ್ದಳು. ಮಳೆಯಾಗಲಿ ಚಳಿಯಾಗಲಿ ಇರಲಿಲ್ಲ. ವರ್ತಕರು ಆಹಾರ ಒದಗಿಸುವುದರಲ್ಲಿ ಹಿಂಜರಿಯರೆಂಬ ಧೈರ್ಯವಿತ್ತು. ನ್ಯೂಕ್ಯಾಸಲ್ ವರ್ತಕರು ಅಡಿಗೆ ಪಾತ್ರೆ, ಅಕ್ಕಿ, ಬೇಳೆ ಕೊಟ್ಟರು. ಇತರ ಸ್ಥಳಗಳಿಂದಲೂ ಅಕ್ಕಿ, ಬೇಳೆ, ಕಾಯಿಪಲ್ಲೆ, ಮಸಾಲೆ ಸಾಮಾನುಗಲ ಸುರಿಮಳೆಯಾಯಿತು. ನಿರೀಕ್ಷೆಗಿಂತ ಹೆಚ್ಚಿನ ಸಹಾಯ ಒದಗಿತು. ಸೆರೆಮನೆಗೆ ಹೋಗಲು ಸಿದ್ಧವಿಲ್ಲದಿದ್ದರೂ, ಎಲ್ಲರೂ ನಮ್ಮ ಹೋರಾಟಕ್ಕಾಗಿ ತಲ್ಲಣಿಸಿದರು. ಪ್ರತಿಯೊಬ್ಬನಿಗೂ ತಮ್ಮ ಶಕ್ತಿಮೀರಿ ಸಹಾಯ ಮಾಡಲು ಆಸಕ್ತಿ. ಕೊಡಲು ಏನೂ ಇಲ್ಲದವರು ಸ್ವಯಂ ಸೇವಕರಾಗಿ ಸೇರಿ ಸಹಾಯ ಮಾಡಿದರು. ಈ ಅನಾಮಧೇಯ ವಿದ್ಯಾವಿಹೀನರನ್ನು ನೋಡಿಕೊಳ್ಳಲು ಪರಿಚಿತರೂ ಬುದ್ಧಿವಂತರೂ ಆದ ಸ್ವಯಂಸೇವಕರ ಅವಶ್ಯಕತೆ ಇತ್ತು. ಅವರೂ ಮುಂದೆ ಬಂದರು; ಅತ್ಯಮೂಲ್ಯ ಸಹಾಯಮಾಡಿದರು; ಬಂಧನಕ್ಕೂ ಒಳಗಾದರು. ಈ ರೀತಿ ಎಲ್ಲರೂ ತಮ್ಮ ತಮ್ಮ ಕೈಲಾದ ಸಹಾಯ ಮಾಡಿ ನಮ್ಮ ದಾರಿಯನ್ನು ಸುಗಮ ಮಾಡಿದರು.

ಜನರ ಗುಂಪು ದೊಡ್ಡದಾಯಿತು. ಇನ್ನೂ ತಡೆಯಿಲ್ಲದೆ ಬರುತ್ತಲೇ ಇದ್ದರು. ಅವರೆಲ್ಲರನ್ನೂ ಒಂದೇ ಸ್ಥಳದಲ್ಲಿಡುವುದೂ, ಕೆಲಸವಿಲ್ಲದ ಅವರನ್ನು ನೋಡಿಕೊಳ್ಳುವುದೂ ಬಹಳ ಕಷ್ಟವಾಯಿತು. ಸಾಮಾನ್ಯವಾಗಿ ಯಾರಿಗೂ ಆರೋಗ್ಯ ನಿಯಮಗಳು ತಿಳಿದಿರಲಿಲ್ಲ. ಕೆಲವರು ಖೂನಿ, ಕಳ್ಳತನ, ವ್ಯಭಿಚಾರಕ್ಕಾಗಿ ಸೆರೆಮನೆಗೂ ಹೋಗಿಬಂದವರು. ಆದರೆ ಅವರ ಗುಣ ಪರೀಕ್ಷೆಗೆ ನನಗೇನು ಅಧಿಕಾರ ? ಕುರಿ ಮೇಕೆ ವಿಂಗಡಿಸುವ ಹೆಡ್ಡತನಕ್ಕೆ ನಾನು ಕೈ ಹಾಕಲಿಲ್ಲ. ಮುಷ್ಕರ ಮುಂದುವರಿಸುವುದು ಮಾತ್ರ ನನ್ನ ಕೆಲಸ. ಜೊತೆಗೆ ಅವರ ನಡತೆಯ ಸುಧಾರಣೆಯನ್ನೂ ಕೈಗೊಳ್ಳಲು ಸಾಧ್ಯವಿರಲಿಲ್ಲ. ನಮ್ಮ ಪಾಳೆಯದಲ್ಲಿ ನೀತಿಧರ್ಮಕ್ಕೆ ಲೋಪ ಬಾರದಂತೆ ನೋಡಿಕೊಳ್ಳವದು ಮಾತ್ರ ನನ್ನ ಕರ್ತವ್ಯ; ಪ್ರತಿಯೊಬ್ಬ ಕೂಲಿಗಾರನ ಪೂರ್ತಿ ಚರಿತ್ರೆಯ ಪರಿಶೀಲನವಲ್ಲ. ಅಷ್ಟು ದೊಡ್ಡ ಜನಸಮುದಾಯವನ್ನು ಕೆಲಸವಿಲ್ಲದೆ ಒಂದೇ ಕಡೆ ಇಟ್ಟರೆ ದುಷ್ಕೃತ್ಯ ನಡೆಯಲೇಬೇಕು. ನಾವು ಅಲ್ಲಿದ್ದ ಸ್ವಲ್ಪ ದಿನದಲ್ಲಿ ಅಂತಹ ಅಪಕೃತ್ಯಗಳಾವುವೂ ನಡೆಯದೆ ಎಲ್ಲವೂ ಶಾಂತವಾಗಿದ್ದುದೇ ಆಶ್ಚರ್ಯ. ಎಲ್ಲರೂ ಆ ಗಂಭೀರ ಪರಿಸ್ಥಿತಿಯನ್ನು ಅರಿತಿದ್ದರೋ ಎನ್ನುವಂತೆ ಶಾಂತರಾಗಿದ್ದರು.

ನನ್ನ ಸಮಸ್ಯೆಗೆ ಒಂದು ಪರಿಹಾರವನ್ನು ಯೋಚಿಸಿದೆ. ಈ ಸೈನ್ಯವನ್ನು ಟ್ರಾನ್ಸ್‌ವಾಲ್‌ಗೆ ಕರೆದುಕೊಂಡು ಹೋಗಿ, ಫೀನಿಕ್ಸ್ ಆಶ್ರಮವಾಸಿಗಳಂತೆ ಇವರನ್ನೂ ಸುರಕ್ಷಿತವಾಗಿ ಸೆರೆಮನೆ ಸೇರಿಸಬೇಕು. ಈ ಸೈನ್ಯವನ್ನು ಸಣ್ಣ ಗುಂಪುಗಳಾಗಿ ವಿಭಾಗಿಸಿ ಪ್ರತಿಯೊಂದು

ಗುಂಪೂ ಬೇರೆ ಬೇರೆ ಕಡೆ ಗಡಿ ದಾಟಬೇಕು. ಆದರೆ ಇವರನ್ನು ಶಿಸ್ತಿಗೆ ತರಲು ಕಾಲ ಹಿಡಿಯುವದರಿಂದಲೂ, ಸಣ್ಣ ಸಣ್ಣ ಗುಂಪುಗಳ ಬಂಧನದಿಂದ ಸಾಮೂಹಿಕ ಚಳವಳಿಯ ನೈತಿಕ ಪ್ರಭಾವವುಂಟಾಗುವುದಿಲ್ಲವಾದ್ದರಿಂದಲೂ ಈ ವಿಭಜನೆಯ ಯೋಚನೆ ಬಿಟ್ಟೆ.

ನಮ್ಮ ಅಂಗಬಲ ಐದು ಸಾವಿರ. ಅಷ್ಟು ಜನಕ್ಕೆ ರೈಲು ಖರ್ಚಿಗೆ ನನ್ನಲ್ಲಿ ಹಣವಿರಲಿಲ್ಲ. ಎಲ್ಲರನ್ನೂ ರೈಲಿನಲ್ಲಿ ಕಳುಹಿಸಲು ಸಾಧ್ಯವಿರಲಿಲ್ಲ. ಅಲ್ಲದೆ, ರೈಲಿನಲ್ಲಿ ಕರೆದುಕೊಂಡು ಹೋದರೆ, ಅದರ ನೈತಿಕಬಲವನ್ನು ಅಳೆಯಲು ಅವಕಾಶವಿರದು. ನ್ಯೂಕ್ಯಾಸಲ್‌ನಿಂದ ಟ್ರಾನ್ಸ್ ವಾಲ್ ಗಡಿಗೆ ಮೂವತ್ತಾರು ಮೈಲಿ. ಚಾರ್ಲ್ಸ್ ಟೌನ್, ವೋಲ್ಕ್ಸ್ ರಸ್ಟ್ ಎರಡೂ ನೇಟಾಲ್ ಟ್ರಾನ್ಸ್‌ವಾಲ್ ಗಡಿಯ ಹಳ್ಳಿಗಳು. ಕಾಲು ನಡಿಗೆಯಲ್ಲೇ ಹೊರಡಬೇಕೆಂದು ಕೊನೆಗೆ ನಿರ್ಧಾರಮಾಡಿದೆ. ಕುಟುಂಬಿಕರಾದ ಕೂಲಿಗಾರರ ಸಲಹೆ ತೆಗೆದುಕೊಂಡೆ. ಕೆಲವರು ನನ್ನ ಸಲಹೆಗೆ ಹಿಂಜರಿದರು, ಮನಸ್ಸು ಗಟ್ಟಿ ಮಾಡದೆ ನನಗೆ ಬೇರೆ ಗತಿ ಇರಲಿಲ್ಲ; ಇಷ್ಟವುಳ್ಳವರು ಗಣಿಗಳಿಗೆ ಹಿಂದಿರುಗಬಹುದೆಂದು ತಿಳಿಸಿದೆ. ಈ ಸ್ವಾತಂತ್ರ್ಯ ಪಡೆಯಲು ಯಾರೂ ಮುಂದೆ ಬರಲಿಲ್ಲ. ದೇಹಾಲಸ್ಯವಿರುವವರೆಲ್ಲ ರೈಲಿನಲ್ಲಿ ಪ್ರಯಾಣ ಮಾಡಬೇಕೆಂದು ತೀರ್ಮಾನಿಸಿದೆವು. ಗಟ್ಟಿಮುಟ್ಟಾದವರೆಲ್ಲ ಚಾರ್ಲ್ಸ್ ಟೌನ್‌ವರೆಗೆ ಕಾಲುನಡಿಗೆಯಲ್ಲಿ ಬರುವುದಾಗಿ ಒಪ್ಪಿದರು. ಎರಡು ದಿನಗಳಲ್ಲಿ ಈ ದಂಡಯಾತ್ರೆ ಮುಗಿಯಬೇಕಾಗಿತ್ತು. ನಾವು ಹೊರಟಾಗ ಎಲ್ಲರಿಗೂ ಸಂತೋಷವೆ. ಬಡ ಲಾಸರಸ್‌ಗೂ ಆತನ ಕುಟುಂಬದವರಿಗೂ ಸ್ವಲ್ಪ ವಿರಾಮ ದೊರೆಯುವದೆಂದು ಕೂಲಿಗಾರಿಗೆ ಗೊತ್ತಾಯಿತು. ನ್ಯೂಕ್ಯಾಸಲ್‌ನ ಯೂರೋಪಿಯನ್‌ರು ನಮ್ಮಿಂದ ಪ್ಲೇಗು ಬರಬಹುದೆಂದು ಗಾಬರಿಗೊಂಡಿದ್ದರು. ಅದನ್ನು ತಡೆಗಟ್ಟಲು ಎಲ್ಲ ನಿವಾರಣೋಪಾಯ ಮಾಡಲು ಹವಣಿಸುತ್ತಿದ್ದರು. ಅಲ್ಲಿಂದ ಹೊರಟು ಅವರಿಗೂ ಮನಶ್ಶಾಂತಿ ಕೊಟ್ಟೆವು. ಅವರ ಮುಂಜಾಗ್ರತೆಯ ಕ್ರಮಗಳಿಂದ ನಮಗಾಗಬಹುದಾದ ತೊಂದರೆಯನ್ನೂ ತಪ್ಪಿಸಿಕೊಂಡೆವು.

ದಂಡಯಾತ್ರೆಯ ಸಿದ್ಧತೆ ಮುಂದುವರಿಯುತ್ತಿರುವಾಗಲೇ ಗಣಿಗಳ ಮಾಲಿಕರನ್ನು ನೋಡಲು ನನಗೆ ಒಂದು ಆಹ್ವಾನ ಬಂತು. ನಾನು ಡರ್ಬಾನ್‌ಗೆ ಹೋದೆ. ಈ ಸಭೆ, ಅಲ್ಲಿಂದ ಮುಂದೆ-ಇನ್ನೊಂದು ಅಧ್ಯಾಯದಲ್ಲಿ.

೪೨. ಸಮ್ಮೇಳನ-ಅನಂತರ

ಗಣಿ ಮಾಲಿಕರ ಆಹ್ವಾನದಂತೆ ಅವರನ್ನು ಡರ್ಬಾನ್‌ನಲ್ಲಿ ನೋಡಿದೆ. ಮುಷ್ಕರ ಪರಿಣಾಮಕಾರಿಯಾಗಿತ್ತೆಂದು ಅವರ ಸಂಭಾಷಣೆಯೇ ಸಾರುತ್ತಿತ್ತು. ಆದರೆ ಈ ಭೇಟಿಯಿಂದ ಮಹತ್ಕಾರ್ಯ ಸಾಧಿಸೀತೆಂದು ನಾನು ಭಾವಿಸಿರಲಿಲ್ಲ. ಸತ್ಯಾಗ್ರಹಿಯ ತಾಳ್ಮೆಗೆ ಮೇರೆ ಇಲ್ಲ. ಸಂಧಿಗೆ ಯಾವ ಅವಕಾಶವನ್ನೂ ಕಳೆದುಕೊಳ್ಳುವುದಿಲ್ಲ; ಪರರು ಹೇಡಿ ಎಂದರೂ ಗಮನಿಸುವುದಿಲ್ಲ. ಆತ್ಮವಿಶ್ವಾಸವಿದ್ದು ಅದರಿಂದ ಬರುವ ಸಾಮರ್ಥ್ಯ ಒಂದಿದ್ದರೆ ಯಾರು ತಿರಸ್ಕರಿಸಿದರೂ ಸತ್ಯಾಗ್ರಹಿಗೆ ಲಕ್ಷ್ಯವಿಲ್ಲ. ಅಂತಶ್ಶಕ್ತಿಯೊಂದೇ ಅವನ ಬಲ. ಆದ್ದರಿಂದ ಎಲ್ಲರನ್ನೂ ಗೌರವಿಸಿ ಪ್ರಪಂಚದ ಮನಸ್ಸನ್ನು ತನ್ನ ಕಡೆ ಪ್ರಯತ್ನ ಪೂರ್ವಕ ಒಲಿಸಿಕೊಳ್ಳುತ್ತಾನೆ.

ಆದ್ದರಿಂದ ಗಣಿ ಮಾಲಿಕರ ಆಹ್ವಾನವನ್ನು ಸ್ವಾಗತಿಸಿದೆ. ಅವರನ್ನು ನೋಡಿದೊಡನೆ ಸದ್ಯದ ಪರಿಸ್ಥಿತಿಯ ಉದ್ವೇಗ, ತೀವ್ರತೆಗಳಿಂದ ವಾತಾವರಣ ಪ್ರಕ್ಷುಬ್ಧವಾಗಿದ್ದುದು ಕಂಡುಬಂತು. ಪರಿಸ್ಥಿತಿ ವಿವರಿಸಲು ಅವಕಾಶಕೊಡುವ ಬದಲು ಅವರ ಪ್ರತಿನಿಧಿ ಪ್ರಶ್ನೆಗಳ ಸುರಿಮಳೆ ಆರಂಭಿಸಿದ. ಆತನಿಗೆ ಸದುತ್ತರ ಕೊಟ್ಟೆ.

"ಮುಷ್ಕರ ಕೊನೆಗಾಣಿಸುವುದು ನಿಮ್ಮ ಕೈಯಲ್ಲಿದೆ" ಎಂದೆ.

"ನಾವು ಅಧಿಕಾರಿಗಳಲ್ಲ" ಎಂದ ಆತ.

"ಅಧಿಕಾರಿಗಳಲ್ಲದಿದ್ದರೂ ನೀವು ಎಷ್ಟೋ ಕೆಲಸ ಮಾಡಬಹುದು. ಮೂರು ಪೌಂಡು ಕಂದಾಯ ತೆಗೆದುಹಾಕಲು ನೀವು ಒತ್ತಾಯಮಾಡಿದರೆ ಸರಕಾರ ನಿರಾಕರಿಸಲಾರದು. ಈ ವಿಷಯದಲ್ಲಿ ಯೂರೋಪಿಯನ್ ಅಭಿಪ್ರಾಯವನ್ನು ತಿದ್ದಲು ಸಹ ನೀವು ಸಹಾಯ ಮಾಡಬಹುದು."

"ಆದರೆ ಮೂರು ಪೌಂಡು ತಲೆಗಂದಾಯಕ್ಕೂ ಮುಷ್ಕರಕ್ಕೂ ಏನು ಸಂಬಂಧ? ಗಣಿ ಮಾಲಿಕರ ಮೇಲೆ ಏನಾದರೂ ಕೂಲಿಗಾರರ ಆಕ್ಷೇಪಗಳಿದ್ದರೆ ಪರಿಹಾರ ಕೇಳಲಿ."

"ಕೂಲಿಗಾರರಿಗೆ ಮುಷ್ಕರ ಬಿಟ್ಟರೆ ಬೇರೆ ಯಾವ ಆಯುಧವೂ ಇಲ್ಲ. ತಮಗೋಸ್ಕರ ದುಡಿಯಬೇಕು, ಆದರೆ ಸ್ವತಂತ್ರರಾಗಿ ದುಡಿಯಬಾರದು ಎನ್ನುವ ಗಣಿ ಮಾಲಿಕರಿಗಾಗಿ ಈ ತಲೆಗಂದಾಯ ಹೇರಿರುವುದು. ಆದ್ದರಿಂದ ಈ ಕಂದಾಯ ನಿವಾರಣೆಗಾಗಿ ಕೂಲಿಗಾರರು ಮುಷ್ಕರ ಹಿಡಿದರೆ ಗಣಿ ಮಾಲಿಕರಿಗೆ ಏನೂ ಅನ್ಯಾಯವಲ್ಲ."

"ಹಾಗಾದರೆ ಮುಷ್ಕರ ನಿಲ್ಲಿಸಲು ನೀನು ಅವರಿಗೆ ಬುದ್ಧಿ ಹೇಳುವುದಿಲ್ಲವೆ?"

"ಕ್ಷಮಿಸಬೇಕು, ನನ್ನಿಂದ ಸಾಧ್ಯವಿಲ್ಲ."

"ಪರಿಣಾಮ ಏನಾಗುವುದೆಂದು ಯೋಚಿಸಿದ್ದೀಯಾ?"

"ನನಗೂ ಗೊತ್ತು. ನನ್ನ ಜವಾಬ್ದಾರಿ ನನಗೆ ಗೊತ್ತಿದೆ."

"ಹಾಗೋ, ನಿನ್ನದೇನೂ ಹೋಗಬೇಕಾಗಿಲ್ಲ. ಆದರೆ ನೀನು ಅಡ್ಡದಾರಿಗೆಳೆದ ಕೂಲಿಗಾರರಿಗೆ ಸಂಭವಿಸುವ ನಷ್ಟಕ್ಕೆ ಪರಿಹಾರ ಕೊಡಲು ನಿನ್ನಿಂದ ಸಾಧ್ಯವೆ?"

"ಕೂಲಿಗಾರರು ಎಲ್ಲಾ ವಿಷಯುವನ್ನೂ ಚೆನ್ನಾಗಿ ಯೋಚಿಸಿ, ತಮಗೆ ಒದಗಬಹುದಾದ ಕಷ್ಟನಷ್ಟ ಗಮನಿಸಿ ಮುಷ್ಕರ ಹಿಡಿಯಲು ತೀರ್ಮಾನಿಸಿದ್ದಾರೆ. ಆತ್ಮಗೌರವ ಕಳೆದುಕೊಳ್ಳುವದಕ್ಕಿಂತ ಮನುಷ್ಯನಿಗೆ ಬೇರೆ ದೊಡ್ಡ ನಷ್ಟ ಯಾವುದು? ಈ ಮೂಲತತ್ವವನ್ನು ಕೂಲಿಗಾರರು ಅರಿತಿರುವುದೇ ನನಗೊಂದು ಮಹಾತೃಪ್ತಿ."

ಈ ರೀತಿ ನಡೆಯಿತು ಸಂಭಾಷಣೆ. ಸಂಭಾಷಣೆಯೆಲ್ಲ ಪೂರ್ಣ ಜ್ಞಾಪಕವಿಲ್ಲ. ಜ್ಞಾಪಕವಿರುವ ವಿಷಯ ಮಾತ್ರ ಸೂಕ್ಷ್ಮವಾಗಿ ತಿಳಿಸಿದ್ದೇನೆ. ತಮ್ಮ ವಾದದಲ್ಲಿ ಏನೂ ತಿರುಳಿಲ್ಲವೆಂದು ಅವರು ಅರಿತುಕೊಂಡರು. ಏಕೆಂದರೆ ಅಷ್ಟರಲ್ಲೆ ಅವರು ಸರಕಾರದೊಡನೆ ಪತ್ರವ್ಯವಹಾರ ನಡೆಸಿದ್ದರು.

ನಾನು ಡರ್ಬಾನ್ ಗೆ ಹೋಗಿ ಹಿಂದಿರುಗಿದ ಪ್ರಯಾಣ ಸಮಯದಲ್ಲಿ ಮುಷ್ಕರವೂ ಮುಷ್ಕರಕಾರರ ಶಾಂತಿಯುತ ನಡತೆಯೂ ರೈಲ್ವೆ ಮಾರ್ಡುಮುಂತಾದವರ ಮೇಲೆ ಉತ್ತಮ ಪರಿಣಾಮ ಮಾಡಿದ್ದು ಗೊತ್ತಾಯಿತು. ಯಥಾ ರೀತಿ ಮೂರನೆ ತರಗತಿಯಲ್ಲಿ ಪ್ರಯಾಣ ಮಾಡಿದೆ. ಅಲ್ಲಿಯೂ ಗಾರ್ಡುಗಳೂ ಇತರ ಅಧಿಕಾರಿಗಳೂ ನನ್ನ ಸುತ್ತ ಮುತ್ತಿಕೊಂಡು ನನಗೆ ಜಯವನ್ನು ಕೋರುತ್ತಿದ್ದರು. ಎಷ್ಟೋ ಸಣ್ಣಪುಟ್ಟ ಅನುಕೂಲವನ್ನು

ಒದಗಿಸುತ್ತಿದ್ದರು. ಅವರ ನನ್ನ ಸಂಬಂಧ ನಿಷ್ಕಲಂಕವೂ ಪರಿಶುದ್ಧವೂ ಇರುವಂತೆ ಜಾಗರೂಕತೆಯಿಂದ ಇದ್ದೆ. ಯಾವ ಅನುಕೂಲತೆಗೂ ಆಶೆಪಡಲಿಲ್ಲ. ಸ್ವಯಂ ಪ್ರೇರಿತರಾಗಿ ಅವರೇ ಆದರಿಸಿದರೆ ಸಂತೋಷದಿಂದ ಸ್ವೀಕರಿಸುತ್ತಿದ್ದೆ. ಅದಕ್ಕಾಗಿ ಲಂಚಕೊಡಲಿಲ್ಲ. ಬಡವರೂ ವಿದ್ಯಾವಿಹೀನ ಅಜ್ಞಾನಿಗಳೂ ಆದ ಕೂಲಿಗಾರರು ತೋರಿದ ಮನೋದಾರ್ಢ್ಯಕ್ಕಾಗಿ ಈ ಅಧಿಕಾರಿಗಳು ತುಂಬ ಚಕಿತರಾದರು. ಮನೋನಿಶ್ಚಯ, ಧೈರ್ಯ, ಎದುರಾಳಿಯ ಮೇಲೂ ಪ್ರಭಾವ ಬೀರುವ ಗುಣಗಳು.

ನ್ಯೂಕ್ಯಾಸಲ್‌ಗೆ ಹಿಂದಿರುಗಿದೆ. ಅನೇಕ ಕಡೆಗಳಿಂದ ಕೂಲಿಗಾರರು ಇನ್ನೂ ಬರುತ್ತಲೇ ಇದ್ದರು. ಇದ್ದ ಪರಿಸ್ಥಿತಿಯನ್ನೆಲ್ಲ ನಮ್ಮ ಸೇನೆಗೆ ಸ್ಪಷ್ಟವಾಗಿ ತಿಳಿಸಿದೆ. ಇಷ್ಟವಿದ್ದರೆ ಆಗಲೂ ಕೆಲಸಕ್ಕೆ ಹಿಂದಿರುಗಬಹುದೆಂದು ಹೇಳಿದೆ. ಗಣಿ ಮಾಲಿಕರ ಬೆದರಿಕೆಯನ್ನೂ ಮುಂದಿನ ಕಷ್ಟಗಳನ್ನೂ ಚಿತ್ರಿಸಿದೆ. ಹೋರಾಟ ಯಾವಾಗ ಮುಗಿದೀತೋ ತಿಳಿಸಲು ಸಾಧ್ಯವಿಲ್ಲವೆಂದೆ. ಸೆರೆಮನೆಯ ಕಷ್ಟಗಳನ್ನೆಲ್ಲ ವಿವರಿಸಿದೆ. ಆದರೂ ಯಾರೂ ಜಗ್ಗಲಿಲ್ಲ. ಅವರ ಪರವಾಗಿ ಕಾದಾಡಲು ನಾನು ಸಿದ್ಧನಿರುವವರೆಗೂ ತಾವು ಯಾರೂ ಹಿಂದೇಟು ಹಾಕುವುದಿಲ್ಲವೆಂದೂ, ಕಷ್ಟ ಸಹಿಸುವುದು ತಮ್ಮ ಬೆನ್ನಿಗಂಟಿದ ಅಭ್ಯಾಸವಾದ್ದರಿಂದ ನಾನು ಚಿಂತಿಸಬೇಕಿಲ್ಲವೆಂದೂ ಧೈರ್ಯದಿಂದ ತಿಳಿಸಿದರು.

ದಂಡಯಾತ್ರೆ ಹೊರಡುವುದೊಂದೇ ಉಳಿದದ್ದು. ೨೮.೧೦.೧೨ ರ ಮುಂಜಾನೆ ಯಾತ್ರೆ ಎಂದು ಒಂದು ದಿನ ಸಂಜೆ ಕೂಲಿಗಾರರಿಗೆಲ್ಲ ತಿಳಿಸಿದೆವು. ಪಯಣದಲ್ಲಿ ಅನುಸರಿಸಬೇಕಾದ ನಿಯಮಗಳನ್ನೆಲ್ಲ ಓದಿ ಹೇಳಿದೆವು. ಐದಾರು ಸಾವಿರ ಜನರ ಗುಂಪನ್ನು ಹತೋಟಿಯಲ್ಲಿಡುವುದು ಸುಲಭವಲ್ಲ. ನಿಕರವಾಗಿ ಎಷ್ಟು ಜನ ಇದ್ದರೋ ಗೊತ್ತಿರಲಿಲ್ಲ. ಅವರ ಹೆಸರು, ನಿವಾಸ ನನಗೆ ತಿಳಿಯದು. ಎಷ್ಟು ಜನರಿದ್ದರೆ ಅಷ್ಟೇ ಸಾಕಾಗಿತ್ತು. ದಾರಿಯಲ್ಲಿ ಪ್ರತಿಯೊಬ್ಬರಿಗೂ ದಿನಕ್ಕೆ ಒಂದೂವರೆ ಪೌಂಡು ರೊಟ್ಟಿ, ಒಂದು ಔನ್ಸ್ ಸಕ್ಕರೆ ಹೊರತು ಬೇರೆ ಏನು ಕೊಡಲೂ ಸಾಧ್ಯವಿರಲಿಲ್ಲ. ಸಾಧ್ಯವಾದರೆ ದಾರಿಯಲ್ಲಿ ಭಾರತೀಯ ವರ್ತಕರಿಂದ ಏನಾದರೂ ಆಹಾರ ಕೊಡಿಸಲು ಪ್ರಯತ್ನಿಸುವೆನೆಂದು ತಿಳಿಸಿದೆ. ಸಾಧ್ಯವಾಗದಿದ್ದರೆ ರೊಟ್ಟಿ ಸಕ್ಕರೆಯೇ ಗತಿ. ಬೋಅರ್ ಯುದ್ಧ, ಜೂಲುದಂಗೆಯ ಅನುಭವ ಈಗ ನನಗೆ ಬಹಳ ಉಪಯೋಗವಾದವು. ಅವಶ್ಯವಿದ್ದುದಕ್ಕಿಂತ ಹೆಚ್ಚು ಬಟ್ಟೆ ಯಾರೂ ತೆಗೆದುಕೊಳ್ಳಬಾರದು. ದಾರಿಯಲ್ಲಿ ಯಾರೂ ಇನ್ನೊಬ್ಬರ ಸಾಮಾನು ಮುಟ್ಟಬಾರದು. ದಾರಿಯಲ್ಲಿ ಯಾರಾದರೂ ಅಧಿಕಾರಿ ಅಥವಾ ಅನಧಿಕಾರಿ ಯೂರೋಪಿಯನ್ ಬಂದು ಬೈದರೂ, ಹೊಡೆದರೂ ಅದನ್ನೆಲ್ಲ ತಾಳ್ಮೆಯಿಂದ ಸಹಿಸಬೇಕು. ಪೋಲೀಸರು ಬಂಧಿಸಬಂದರೆ ಒಳಗಾಗಬೇಕು. ನನ್ನ ದಸ್ತಗಿರಿಯಾದರೂ ಯಾತ್ರೆ ಮುಂದುವರಿಯಬೇಕು. ಇದೆಲ್ಲವನ್ನೂ ವಿವರಿಸಿ, ನನ್ನ ಬಂಧನವಾದರೆ ನನ್ನ ಸ್ಥಾನದಲ್ಲಿ ಒಬ್ಬೊಬ್ಬರಾಗಿ ಯಾರು ಯಾರು ನಾಯಕತ್ವ ವಹಿಸುತ್ತಾರೆಂದೂ ತಿಳಿಸಿದೆ.

ತಮಗೆ ಕೊಟ್ಟ ಬುದ್ಧಿವಾದವನ್ನೆಲ್ಲ ಅವರು ಅರ್ಥಮಾಡಿಕೊಂಡರು. ನಮ್ಮ ಸೇನೆ ಸುಖವಾಗಿ ಚಾರ್ಲ್ಸ್ ಟೌನ್ ಸೇರಿತು. ಅಲ್ಲಿಯ ವರ್ತಕರು ತುಂಬಾ ಸಹಾಯ ಮಾಡಿದರು. ಮನೆಗಳನ್ನು ಬಿಟ್ಟುಕೊಟ್ಟರು; ಮಸೀದಿ ಆವರಣದಲ್ಲಿ ಅಡಿಗೆ ಮಾಡಲು ಅವಕಾಶ ಕೊಟ್ಟರು. ಬೀಡು ಸೇರುವ ಹೊತ್ತಿಗೆ ದಾರಿಯಲ್ಲಿ ಕೊಟ್ಟ ಆಹಾರವೆಲ್ಲ

ಮುಗಿದಿದ್ದರಿಂದ ಅಡಿಗೆಗೆ ಪಾತ್ರೆ ಬೇಕಾಯಿತು. ಅವನ್ನೂ ಒದಗಿಸಿದರು. ನಮ್ಮಲ್ಲಿ ಸಾಮಗ್ರಿ ಬೇಕಾದಷ್ಟು ಇದ್ದರೂ ವರ್ತಕರು ಅದಕ್ಕೆ ತಮ್ಮ ಸಹಾಯವನ್ನೂ ಸೇರಿಸಿದರು.

ಚಾರ್ಲ್ಸ್ ಟೌನ್ ಒಂದು ಸಾವಿರ ಜನವಸತಿಯ ಸಣ್ಣ ಹಳ್ಳಿ. ಐದಾರು ಸಾವಿರ ಜನಕ್ಕೆ ಹೇಗೆ ವಸತಿ ದೊರೆಯಬೇಕು? ಹೆಂಗಸರು ಮಕ್ಕಳಿಗೆ ಮಾತ್ರ ಮನೆಗಳಲ್ಲಿರಲು ಅವಕಾಶ ಕೊಟ್ಟೆವು. ಉಳಿದವರೆಲ್ಲ ಬಯಲಲ್ಲೇ ಬೀಡುಬಿಟ್ಟೆವು.

ಚಾರ್ಲ್ಸ್ ಟೌನ್ ಅನುಭವದಲ್ಲಿ ಸವಿನೆನಪು ಕಹಿನೆನಪು ಅನೇಕ ಇವೆ. ಸವಿನೆನಪೆಲ್ಲ ಆರೋಗ್ಯಕ್ಕೆ ಸಂಬಂಧಪಟ್ಟದ್ದು. ಜಿಲ್ಲಾ ಆರೋಗ್ಯಧಿಕಾರಿ ಡಾಕ್ಟರ್ ಬ್ರಿಸ್ಕೋಗೆ ಇದ್ದಕ್ಕಿದ್ದಂತೆ ಜನಸಂಖ್ಯೆ ಹೆಚ್ಚಿದ್ದು ನೋಡಿ ಗಾಬರಿಯಾಯಿತು. ಆದರೆ ಕಠಿಣಮಾರ್ಗ ಹಿಡಿಯುವ ಬದಲು, ನನ್ನನ್ನು ಕಂಡು ಕೆಲವು ಸಲಹೆ ಕೊಟ್ಟು ಸಹಾಯ ಮಾಡಲು ಮುಂದೆ ಬಂದ. ಮೂರು ವಿಷಯಗಳಲ್ಲಿ ಯೂರೋಪಿಯನ್‌ರು ಬಹಳ ಜಾಗರೂಕರು, ನಾವು ಅಜಾಗರೂಕರು. ಕುಡಿಯುವ ನೀರಿನ ಪರಿಶುದ್ಧತೆ, ರಸ್ತೆ ಮತ್ತು ಪಾಕೀಜುವ್ಯವಸ್ಥೆ. ರಸ್ತೆಯಲ್ಲಿ ನೀರು ಚೆಲ್ಲದಂತೆಯೂ ಹೊಲಸು ಮಾಡದಂತೆಯೂ ಕೊಳಕು ಪದಾರ್ಥಗಳನ್ನು ಸಿಕ್ಕ ಹಾಗೆ ಎಸೆಯದಂತೆಯೂ ನಮ್ಮ ಜನರಿಗೆ ತಿಳಿಸಲು ಹೇಳಿದ. ಜನರೆಲ್ಲ ತಮಗೆ ಬಿಟ್ಟುಕೊಟ್ಟ ಸ್ಥಳದಲ್ಲಿಯೇ ಇರಬೇಕಾಗಿಯೂ ಆ ಸ್ಥಳವನ್ನು ಶುಭ್ರವಾಗಿಡುವ ಜವಾಬ್ದಾರಿಯನ್ನೂ ನಾನು ವಹಿಸಿಕೊಳ್ಳಬೇಕಾಗಿಯೂ ತಿಳಿಸಿದ. ಆತನ ಸಲಹೆಗಳನ್ನೆಲ್ಲ ಒಪ್ಪಿದೆ.

ನಮ್ಮ ಜನ ಈ ನಿಯಮಗಳನ್ನನುಸರಿಸುವಂತೆ ಮಾಡುವುದು ಬಹಳ ಕಷ್ಟವಾಯಿತು. ಸಹೋದ್ಯೋಗಿಗಳೂ ಯಾತ್ರಿಕರೂ ಸಹಕರಿಸಿ ನನ್ನ ಭಾರಕಡಮೆ ಮಾಡಿದರು. ಸಮಾಜಸೇವಕ ಸೇವೆ ಮಾಡಿ ಇತರರಿಗೆ ಬುದ್ಧಿ ಹೇಳುವುದನ್ನು ಬಿಟ್ಟರೆ ಎಷ್ಟೋ ಮೇಲಾದೀತೆಂದು ನನ್ನ ಅನುಭವ. ಸೇವಕನು ದುಡಿಯಲು ಆರಂಭಿಸಿದರೆ ಇತರರು ಅವನನ್ನು ಹಿಂಬಾಲಿಸುತ್ತಾರೆ. ಈ ಸಂದರ್ಭದಲ್ಲೂ ಅದೇ ನನ್ನ ಅನುಭವಕ್ಕೆ ಬಂತು. ನನ್ನ ಸಹೋದ್ಯೋಗಿಗಳೂ ನಾನೂ ಕಸ ಗುಡಿಸುವುದು, ಹೇಸಿಗೆ ತೆಗೆಯುವುದು ಮುಂತಾದ ಕೆಲಸ ಮಾಡಲು ಯಾವಾಗಲೂ ಹಿಂದೆಗೆಯಲಿಲ್ಲ. ಅದನ್ನು ನೋಡಿ ಇತರರೂ ಆ ಕೆಲಸಕ್ಕೆ ಉತ್ಸಾಹದಿಂದ ಮುಂದೆ ಬಂದರು. ವಿವೇಕವಾದ ನಡತೆಯಿಲ್ಲದೆ ಸುಮ್ಮನೆ ಆಜ್ಞೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಎಲ್ಲರೂ ನಾಯಕರಾಗಿ ಇತರರಿಗೆ ಆಜ್ಞೆ ಮಾಡುತ್ತಾರೆ. ಕೊನೆಗೆ ಯಾವ ಕೆಲಸವೂ ಸಾಗುವುದಿಲ್ಲ. ಆದರೆ ನಾಯಕನೇ ಸೇವಕನಾದರೆ ನಾಯಕತ್ವಕ್ಕೆ ಪೈಪೋಟಿಯೇ ಇರುವದಿಲ್ಲ.

ಸಹೋದ್ಯೋಗಿಗಳಲ್ಲಿ ಕಾಲೆನ್‌ಬಾಕ್ ಆಗಲೇ ಚಾರ್ಲ್ಸ್ ಟೌನ್‌ನಲ್ಲಿ ಇದ್ದರು. ಅದೇ ರೀತಿ ಕುಮಾರಿ ಶ್ಲೇಜಿನ್ ಬಂದಿದ್ದಳು. ಆಕೆಯ ಕಾರ್ಯ ಕೌಶಲ್ಯ, ಅಚ್ಚುಕಟ್ಟು, ಪ್ರಾಮಾಣಿಕತೆ ಹೊಗಳಲಸಾಧ್ಯ. ಭಾರತೀಯರಲ್ಲಿ ದಿವಂಗತ ಪಿ.ಕೆ.ನಾಯುಡು, ಆಲ್ಬರ್ಟ್ ಕ್ರಿಸ್ಟೋಫರ್ ಇದ್ದರು. ಕಷ್ಟಪಟ್ಟು ಕೆಲಸಮಾಡಿ ಅಮೂಲ್ಯ ಸಹಾಯಮಾಡಿದ ಇನ್ನೂ ಅನೇಕರಿದ್ದರು.

ಊಟಕ್ಕೆ ಅನ್ನ, ಸಾರು, ಬೇಕಾದಷ್ಟು ಕಾಯಿಪಲ್ಯ ಇತ್ತು. ಆದರೆ ಕಾಲ, ಪಾತ್ರೆಗಳ ಅಭಾವದಿಂದ ಬೇರೆ ಬೇಯಿಸದೆ ಸಾರಿನಲ್ಲೆ ಪಲ್ಯ ಬೆರೆಸಿ ಬೇಯಿಸುತ್ತಿದ್ದೆವು. ಇಪ್ಪತ್ತು

ನಾಲ್ಕು ಗಂಟೆಯೂ ಅಡಿಗೆ ಮನೆಗೆ ಬಿಡುವಿರಲಿಲ್ಲ. ಹಸಿದ ಜನ ಹಗಲೂ ರಾತ್ರಿ ಯಾವ ಹೊತ್ತಿನಲ್ಲಾದರೂ ಬರುತ್ತಿದ್ದರು. ನ್ಯೂಕ್ಯಾಸಲ್‌ನಲ್ಲಿರಲು ಕೂಲಿಗಾರರಿಗೆ ಯಾರಿಗೂ ಅವಕಾಶ ಕೊಡಲಿಲ್ಲ. ಎಲ್ಲಿಗೆ ಹೋಗಬೇಕೆಂದು ಗೊತ್ತಿದ್ದುದರಿಂದ ಗಣಿ ಬಿಟ್ಟೊಡನೆ ಚಾರ್ಲ್ಸ್ ಟೌನಿಗೆ ಬರಬೇಕಾಗಿತ್ತು.

ನಮ್ಮ ಜನರ ತಾಳ್ಮೆ, ಕಷ್ಟಸಹಿಷ್ಣುತೆ ನೆನೆದುಕೊಂಡರೆ ದೇವರು ದೊಡ್ಡವನೆಂಬ ಭಾವನೆಯಿಂದ ಮೈಮರೆಯುತ್ತೇನೆ. ಅಡಿಗೆಮನೆ ನಾನೇ ಯಜಮಾನ. ಒಂದೊಂದು ಸಲ ಸಾರು ಹೆಚ್ಚು ನೀರಾಗಿರುತ್ತಿತ್ತು; ಒಂದೊಂದು ಸಲ ಬೇಳೆಯೇ ಬೆಂದಿರುತ್ತಿರಲಿಲ್ಲ. ಒಂದೊಂದು ವೇಳೆ ಅಕ್ಕಿ, ಕಾಯಿಪಲ್ಯ ಸಹ ಸರಿಯಾಗಿ ಬೆಂದಿರುತ್ತಿರಲಿಲ್ಲ. ಅಂತಹ ಆಹಾರವನ್ನು ಕೂಡ ಸಂತೋಷದಿಂದ ತುಟಿ ಪಿಟಕ್ಕೆನ್ನದೆ ತಿನ್ನುತ್ತಿದ್ದರು. ಆಕ್ಷೇಪಿಸುವವರೇ ಬಹಳ ಜನ ಇರಲಿಲ್ಲ. ಆದರೆ ದಕ್ಷಿಣ ಆಫ್ರಿಕದ ಸೆರೆಮನೆಗಳಲ್ಲಿ ವಿದ್ಯಾವಂತರು ಸಹ ಸ್ವಲ್ಪ ಕಡಮೆ ಬಡಿಸಿದರೆ, ಸ್ವಲ್ಪ ಅಡಿಗೆ ಕೆಟ್ಟಿದ್ದರೆ ಅಥವಾ ಸ್ವಲ್ಪ ತಡವಾದರೆ ಕೋಪ ಗೊಂಡುದನ್ನು ನಾನು ನೋಡಿದ್ದೇನೆ.

ಅಡಿಗೆ ಮಾಡುವುದಕ್ಕಿಂತ ಬಡಿಸುವುದು ಇನ್ನೂ ಕಷ್ಟ. ಅದಕ್ಕೂ ನನ್ನದೇ ಯಾಜಮಾನ್ಯ. ಸರಿಯಾಗಿರಲಿ ಬಿಡಲಿ, ಅಡಿಗೆ ಜವಾಬ್ದಾರಿ ನಾನು ವಹಿಸಿಕೊಂಡೆ. ಅಡಿಗೆ ಕಡಿಮೆ ಬಂದಾಗ, ಅಥವಾ ಊಟಕ್ಕೆ ಹೆಚ್ಚು ಜನ ಬಂದಾಗ ಎಲ್ಲರಿಗೂ ಸ್ವಲ್ಪ ಕಡಿಮೆ ಬಡಿಸಿ ಎಲ್ಲರನ್ನೂ ತೃಪ್ತಿಗೊಳಿಸುವ ಹೊರೆಯೂ ನನ್ನದಾಗಿತ್ತು. ಸ್ವಲ್ಪ ಕಡಿಮೆ ಬಡಿಸಿದಾಗ ಆ ಸೋದರಿಯರು ಕೋಪದಿಂದ ದುರುಗುಟ್ಟಿದ್ದನ್ನು ಎಂದಿಗೂ ಮರೆಯಲಾರೆ. ಆದರೆ ಮೆಚ್ಚುವವರಿಲ್ಲದ ನನ್ನೀ ಒಣ ಕೆಲಸ ಸ್ಮರಣೆಗೆ ಒಂದು ಮರುಕ್ಷಣದಲ್ಲೇ ಹಸನ್ಮುಖಿಗಳಾಗುತ್ತಿದ್ದರು. "ನಾನೇನು ಮಾಡಲಿ, ಮಾಡಿದ ಅಡಿಗೆ ಸ್ವಲ್ಪ. ಬಹಳ ಜನರಿಗೆ ಬಡಿಸಬೇಕಾದ್ದರಿಂದ, ಎಲ್ಲರಿಗೂ ಸಮನಾಗಿ ಹಂಚಬೇಕು" ಎಂದು ಹೇಳುತ್ತಿದ್ದೆ. ಅದನ್ನು ಕೇಳಿ ಪರಿಸ್ಥಿತಿ ಅರಿತು, ತಮಗೆ ಅಷ್ಟೇ ಸಾಕೆಂದು ಸಂತೋಷಭರಿತರಾಗಿ ಹೋಗುತ್ತಿದ್ದರು.

ಇವೆಲ್ಲ ಸವಿನೆನಪು. ಇನ್ನು ಕಹಿನೆನಪು. ಸ್ವಲ್ಪ ವಿಶ್ರಾಂತಿ ದೊರೆತೊಡನೆ ಗಂಡಸರು ಅಂತಃ ಕಲಹ ಆರಂಭಿಸುತ್ತಿದ್ದರು. ಇನ್ನೂ ದುರದೃಷ್ಟವೆಂದರೆ ವ್ಯಭಿಚಾರವೂ ನಡೆಯುತ್ತಿತ್ತು. ಅಸಾಧ್ಯ ಜನಸಂದಣಿ. ಗಂಡಸರೂ ಹೆಂಗಸರೂ ಒಟ್ಟಿಗೆ ಇರಬೇಕಾಗಿತ್ತು. ಮೃಗಗಳಿಗೆ ನಾಚಿಕೆ ಎಲ್ಲಿ? ಇದು ಗೊತ್ತಾದೊಡನೆ ನಾನಲ್ಲಿಗೆ ಹೋದೆ. ತಪ್ಪಿತಸ್ಥರು ತಲೆತಗ್ಗಿಸಿದರು ಅವರನ್ನು ಬೇರೆ ಬೇರೆ ಮಾಡಿದೆ. ಆದರೆ ನನ್ನ ಗಮನಕ್ಕೆ ಬಾರದೆ ಇನ್ನೆಷ್ಟು ನಡೆಯಿತೋ ಯಾರಿಗೆ ಗೊತ್ತು ? ಇದನ್ನು ಲಂಬಿಸಿ ಏನೂ ಫಲವಿಲ್ಲ. ಎಲ್ಲವೂ ಪರಿಪೂರ್ಣ ವಾಗಿರಲಿಲ್ಲ. ತಪ್ಪು ಮಾಡಿದರೂ ಎದುರು ಬೀಳುತ್ತಿರಲಿಲ್ಲ ಎಂದು. ತೋರಲು ಮಾತ್ರ ಈ ವಿಷಯ ತಿಳಿಸಿರುತ್ತೇನೆ. ಇಂಥ ಅನೇಕ ಸಂದರ್ಭ ಅನೇಕರು ಮೊದಮೊದಲು ಕಿರಾತರಂತೆ ನೀತಿಧರ್ಮಬಾಹಿರತಾಗಿದ್ದರೂ ಒಳ್ಳೆ ವಾತಾವರಣದಲ್ಲಿ ಸದ್ಗುಣಿಗಳಾಗುತ್ತಾರೆ. ಈ ಸತ್ಯವನ್ನು ಅರಿಯುವದು ಅತ್ಯಗತ್ಯ, ಲಾಭಕರ.

೪೩. ಗಡಿ ಪ್ರವೇಶ

೧೯೧೩ ನವೆಂಬರ್ ತಿಂಗಳು. ಮೊದಲು ಎರಡು ವಿಷಯ ತಿಳಿಸುತ್ತೇನೆ. ತನ್ನ ತಮಿಳು ಸೋದರಿಯರಿಗೆ ನ್ಯೂಕ್ಯಾಸಲ್‌ನಲ್ಲಿ ಶಿಕ್ಷೆಯಾಯಿತೆಂದು ಕೇಳಿ ಡರ್ಬಾನ್‌ನ ಬಾಯಿ ಫಾತಿಮಾ ಮೆಹತಾಬ್ ಸಹಿಸಲಾರದಾದಳು. ತನ್ನ ತಾಯಿ ಹನೀಫಾಬಾಯಿ, ಏಳು ವರ್ಷದ ಮಗನೊಡನೆ ದಸ್ತಗಿರಿಯಾಗಲು ವೋಲ್ಕ್ಸ್ ರಸ್ಟ್‌ಗೆ ಹೊರಟಳು. ತಾಯಿಮಗಳನ್ನು ಬಂಧಿಸಿ, ಮಗನನ್ನು ಬಂಧಿಸಲು ಸರಕಾರ ನಿರಾಕರಿಸಿತು. ಮೊಕದ್ದಮೆ ಹೂಡುವಾಗ, ಬೆರಳುಗುರುತು ಕೇಳಿದಾಗ ಫಾತಿಮಾಬಾಯಿ ಧೈರ್ಯದಿಂದ ನಿರಾಕರಿಸಿದಳು. ೧೯೧೩ ನೇ ಅಕ್ಟೋಬರ್ ೧೩ ರಲ್ಲಿ ಆಕೆಗೂ ಆಕೆಯ ತಾಯಿಗೂ ಮೂರು ತಿಂಗಳ ಶಿಕ್ಷೆಯಾಯಿತು.

ಇದೇ ಕಾಲದಲ್ಲಿ ಕೂಲಿಗಾರರ ಮುಷ್ಕರ ಬಹಳ ಉಗ್ರರೂಪ ತಾಳಿತು. ಗಂಡಸರು ಹೆಂಗಸರು ಗಣಿ ಜಿಲ್ಲೆಯಿಂದ ತಂಡೋಪತಂಡವಾಗಿ ಚಾರ್ಲ್ಸ್ ಟೌನ್‌ಗೆ ಬರುತ್ತಿದ್ದರು. ಇವರಲ್ಲಿ ಇಬ್ಬರು ಸ್ತ್ರೀಯರಿಗೆ ಎಳೆಯ ಮಕ್ಕಳು. ಒಂದು ಮಗು ದಾರಿಯಲ್ಲಿ ಚಳಿ ಗಾಳಿಗೆ ತಡೆಯಲಾರದೆ ಸತ್ತು ಹೋಯಿತು; ಇನ್ನೊಂದು ದಾರಿಯಲ್ಲಿ ಹಳ್ಳ ದಾಟುವಾಗ ಕೈಜಾರಿ ನೀರಿನಲ್ಲಿ ಮುಳುಗಿ ಸತ್ತು ಹೋಯಿತು. ಆದರೆ ಆ ವೀರಮಾತೆಯರು ಧೈರ್ಯಗೆಡದೆ ತಮ್ಮ ಪ್ರವಾಸ ಮುಂದುವರಿಸಿದರು. ಒಬ್ಬಾಕೆ "ಸತ್ತವರಿಗಾಗಿ ವ್ಯಸನಪಟ್ಟರೆ ಹಿಂದಕ್ಕೆ ಬರುವುದಿಲ್ಲ. ಏಕೆ ವ್ಯಸನಪಡಬೇಕು? ಬದುಕಿದ್ದವರಿಗಾಗಿ ದುಡಿಯಬೇಕು" ಎಂದಳು. ಅನೇಕ ವೇಳೆ ಇಂಥ ಧೀರೋದಾತ್ತತೆ, ಗಾಢವಿಶ್ವಾಸ, ಸಂಯಮ ಕಂಡಿದ್ದೇನೆ.

ಗಂಡಸರು ಹೆಂಗಸರು ಎಲ್ಲರೂ ಚಾರ್ಲ್ಸ್ ಟೌನ್‌ನಲ್ಲಿ ದೇವರ ಮೇಲೆ ಭಾರ ಹಾಕಿ ತಮ್ಮ ಕಷ್ಟಕಾರ್ಯದಲ್ಲಿ ನಿಷ್ಠರಾಗಿದ್ದರು. ಆ ಗಡಿನಾಡಿನ ಹಳ್ಳಿಗೆ ಹೋದದ್ದು ಶಾಂತಿ ಪಡೆಯಲೆಂಬ ಉದ್ದೇಶದಿಂದಲ್ಲ. ಯಾರಿಗಾದರೂ ಶಾಂತಿ ಬೇಕಾಗಿದ್ದರೆ ಅದನ್ನು ತಮ್ಮೊಳಗೇ ಹುಡುಕಬೇಕಾಗಿತ್ತು. ಮೇಲೆ ನೋಡಿದರೆ "ಇಲ್ಲಿ ಶಾಂತಿಯಿಲ್ಲ" ಎಂದು ಎಲ್ಲೆಲ್ಲೂ ಬರೆದು ಹಚ್ಚಿದಂತೆ ಕಾಣುತ್ತಿತ್ತು. ಆದರೆ ಭಕ್ತೆ ಮೀರಾಬಾಯಿ ನಿಶ್ಚಲಮನಸ್ಕಳಾಗಿ ಸಂತೋಷದಿಂದ ವಿಷಪಾನ ಮಾಡಿ, ಸಾಕ್ರೆಟಿಸನು ತನ್ನ ಕತ್ತಲೆ ಕೋಣೆಯಲ್ಲಿ ಏಕಾಂತದ ಸಾವು ಅಪ್ಪುತ್ತ, ಶಾಂತಿ ಪಡೆಯಲಪೇಕ್ಷಿಸುವವನು ತನ್ನೊಳಗೆ ಹುಡುಕಬೇಕು ಎಂದು ತನ್ನ ಸ್ನೇಹಿತರಿಗೂ ನಮಗೂ ಗಾಢ ತತ್ವೋಪದೇಶ ಮಾಡಿದ್ದು ಇಂಥ ಬಿರುಗಾಳಿಯ ನಡುವೆಯೆ.

ಈ ಬಗೆಯ ಗಂಭೀರ ಮೌನಪರಿವೃತರಾಗಿ, ನಾಳೆಗೆ ಏನೆಂದು ಲಕ್ಷ್ಯ ಮಾಡದೆ ಸತ್ಯಾಗ್ರಹಿಗಳು ತಮ್ಮ ಬೀಡಿನಲ್ಲಿ ಕಾಲಕಳೆಯುತ್ತಿದ್ದರು.

ನಾವು ವಾಸಕ್ಕಾಗಿ ಟ್ರಾನ್ಸ್‌ವಾಲ್ ಪ್ರವೇಶಮಾಡುತ್ತಿಲ್ಲವೆಂದೂ, ಮಂತ್ರಿಗಳ ವಚನಭಂಗಕ್ಕೆ ನ್ಯಾಯವಾದ ವಿರೋಧ ಪ್ರಕಟನೆಗಾಗಿಯೂ ನಮ್ಮ ಆತ್ಮ ಗೌರವಕ್ಕೆ ಚ್ಯುತಿ ಬಂದುದಕ್ಕೆ ದುಃಖ ವ್ಯಕ್ತಗೊಳಿಸುವ ಉದ್ದೇಶಕ್ಕಾಗಿಯೂ ಟ್ರಾನ್ಸ್‌ವಾಲ್ ಪ್ರವೇಶಿಸುತ್ತಿರುವುದಾಗಿ ಸರಕಾರಕ್ಕೆ ಪತ್ರ ಬರೆದೆ. ನಾವಿದ್ದಲ್ಲಿಯೇ ಚಾರ್ಲ್ಸ್‌ಟೌನ್‌ನಲ್ಲಿ ಸರಕಾರ ನಮ್ಮೆಲ್ಲರನ್ನೂ ಬಂಧಿಸಿದ್ದರೆ ನಮ್ಮ ಮನಸ್ಸಿನ ಕಳವಳ ಶಾಂತವಾಗುತ್ತಿತ್ತು. ಆ ರೀತಿ ಬಂಧಿಸದೆ ಇರುವಾಗ ಮುಚ್ಚುಮರೆಯಿಂದ ನಾವೇ ಟ್ರಾನ್ಸ್‌ವಾಲ್ ಪ್ರವೇಶ ಮಾಡಿದರೆ ತಪ್ಪು ಒಬ್ಬ

ನಮ್ಮದಾಗುತ್ತಿರಲಿಲ್ಲ. ನಮ್ಮ ಚಳುವಳಿಯಲ್ಲಿ ಮುಚ್ಚುಮರೆ ಏನೂ ಇರಲಿಲ್ಲ. ನಮ್ಮಲ್ಲಿ ಯಾರಿಗೂ ಯಾರ ಮೇಲೂ ವೈಯಕ್ತಿಕ ದ್ವೇಷವಿರಲಿಲ್ಲ. ನಮ್ಮಲ್ಲಿ ಯಾರಾದರೂ ಕಳ್ಳತನದಿಂದ ಟ್ರಾನ್ಸ್‌ವಾಲ್ ಪ್ರವೇಶ ಮಾಡಿದರೆ ನಾವು ಒಪ್ಪುತ್ತಿರಲಿಲ್ಲ. ಆದರೆ ಸಾವಿರಾರು ಜನ ಅಪರಿಚಿತ ವ್ಯಕ್ತಿಗಳನ್ನು ಹತೋಟಿಯಲ್ಲಿಡಬೇಕಾಗಿ ಬಂದಕಾರಣ ಯಾರ ನಡತೆಗೂ ನಾವು ಜವಾಬ್ದಾರಿ ವಹಿಸಲು ಸಾಧ್ಯವಿರಲಿಲ್ಲ. ನಮಗೆ ಪ್ರೇಮವಲ್ಲದೆ ಬೇರೆ ಯಾವ ಅಧಿಕಾರವೂ ಇರಲಿಲ್ಲ.

ಆದ್ದರಿಂದ ನಮ್ಮ ಸ್ಥಿತಿ ಬಹಳ ಅನಿಶ್ಚಿತವಾಗಿತ್ತು. ಸರಕಾರ ಯಾವಾಗ ನಮ್ಮನ್ನು ಬಂಧಿಸುತ್ತಾರೋ ಗೊತ್ತಿರಲಿಲ್ಲ. ಆದರೆ ಇಂಥ ಸಂದಿಗ್ಧ ಸಮಯದಲ್ಲಿ ಸರಕಾರದ ಉತ್ತರಕ್ಕೆಂದು ಬಹಳ ಕಾಲಕಾಯಲು ಸಾಧ್ಯವಿರಲಿಲ್ಲ. ಆದ್ದರಿಂದ ಸರಕಾರ ನಮ್ಮನ್ನು ಕೂಡಲೆ ಬಂಧಿಸದಿದ್ದರೆ, ಒಡನೆ ಚಾರ್ಲ್ಸ್ ಟೌನ್ ಬಿಟ್ಟು ಟ್ರಾನ್ಸ್‌ವಾಲ್ ಪ್ರವೇಶಿಸಬೇಕೆಂದು ನಿರ್ಧರಿಸಿದೆವು. ದಾರಿಯಲ್ಲಿ ಬಂಧಿಸದಿದ್ದರೆ, ಪ್ರತಿದಿನ ಇಪ್ಪತ್ತು, ಇಪ್ಪತ್ತುನಾಲ್ಕು ಮೈಲಿಗಳಂತೆ ಎಂಟು ದಿನ ನಡೆದು ಟಾಲ್‌ಸ್ಟಾಯ್ ಆಶ್ರಮಕ್ಕೆ ಹೋಗಬೇಕೆಂದೂ, ಸತ್ಯಾಗ್ರಹ ಮುಗಿಯುವವರೆಗೆ ಅಲ್ಲಿರಬೇಕೆಂದೂ ಅಲ್ಲಿಯವರೆಗೆ ಆಶ್ರಮದಲ್ಲಿ ದುಡಿದು ಬದುಕಬೇಕೆಂದೂ ನಿರ್ಧರಿಸಿದೆವು. ಕಾಲೆನ್‌ಬಾಕ್ ಪೂರ್ವಸಿದ್ಧತೆ ಮಾಡಿದ್ದರು. ಯಾತ್ರಿಕರ ಸಹಾಯದಿಂದಲೇ ಮಣ್ಣಿನ ಗುಡಿಸಲು ಕಟ್ಟಬೇಕೆಂದಿದ್ದೆವು. ಗುಡಿಸಲು ಕಟ್ಟಿ ಮುಗಿಯುವವರೆಗೂ ಮುದುಕರೂ, ಅಶಕ್ತರೂ ಸಣ್ಣ ಡೇರೆಗಳಲ್ಲಿರಬೇಕು; ಉಳಿದ ದೃಢಕಾಯರೆಲ್ಲ ಬಯಲಿನಲ್ಲಿರಬೇಕು. ನಮಗಿದ್ದ ಒಂದು ಹೆದರಿಕೆ ಮಳೆಗಾಲ ಸಮೀಪಿಸುತ್ತ ಇತ್ತು; ಮಳೆ ಬಂದಾಗ ಎಲ್ಲರಿಗೂ ಆಸರೆ ಬೇಕು. ಹೇಗಾದರೂ ಸರಿಪಡಿಸಬಹುದೆಂದು ಕಾಲೆನ್ ಬಾಕ್ ಧೈರ್ಯದಿಂದ ಇದ್ದರು.

ಇತರ ಸಿದ್ಧತೆಗಳನ್ನೂ ಮಾಡಿದೆವು. ಡಾಕ್ಟರ್ ಬ್ರಿಸ್ಕೋರ ಕೃಪೆಯಿಂದ ಒಂದು ಔಷಧಿ ಪೆಟ್ಟಿಗೆಯೂ, ನನ್ನಂಥ ಅಡ್ಡ ಕಸಬಿಯೂ ಉಪಯೋಗಿಸಬಹುದಾದ ಕೆಲವು ಶಸ್ತ್ರಸಲಕರಣೆಗಳೂ ದೊರೆತವು. ಜೊತೆಯಲ್ಲಿ ಯಾವ ವಾಹನವೂ ಇಲ್ಲದ್ದರಿಂದ ಪೆಟ್ಟಿಗೆಗೆ ಯಾತ್ರಿಕರೇ ಹೆಗಲುಕೊಟ್ಟರು. ಆದ್ದರಿಂದ ಬಹು ಸ್ವಲ್ಪ ಔಷಧಿ ತೆಗೆದುಕೊಂಡೆವು. ಒಂದು ಬಾರಿ ನೂರು ಜನರಿಗೆ ಸಹ ಸಾಕಾಗುತ್ತಿರಲಿಲ್ಲ. ಆದರೆ ಪ್ರತಿದಿನ ಯಾವುದಾದರೊಂದು ಹಳ್ಳಿಯ ಸಮೀಪ ತಂಗುತ್ತಿದ್ದುದರಿಂದ ಕಡಿಮೆ ಬಿದ್ದ ಔಷಧ ಭರ್ತಿಮಾಡಿಕೊಳ್ಳಬಹುದಾಗಿತ್ತು. ಅಲ್ಲದೆ ರೋಗಿಗಳೂ ಅಶಕ್ತರೂ ಯಾರೂ ನಮ್ಮೊಂದಿಗೆ ಬರುತ್ತಿರಲಿಲ್ಲ. ಅವರನ್ನು ಅಲ್ಲಲ್ಲೆ ಹಳ್ಳಿಗಳಲ್ಲಿ ಬಿಡಲು ಏರ್ಪಾಟು ಮಾಡಿದ್ದೆವು.

ರೊಟ್ಟಿ, ಸಕ್ಕರೆಯೇ ನಮ್ಮ ಆಹಾರ. ಎಂಟು ದಿನದ ಪ್ರವಾಸಕ್ಕೆ ಎಲ್ಲಿಂದ ರೊಟ್ಟಿ ಒದಗಿಸುವದು? ರೊಟ್ಟಿಯನ್ನು ಪ್ರತಿದಿನ ಹಂಚಬೇಕಾಗಿತ್ತು; ಒಟ್ಟಿಗೆ ತೆಗೆದುಕೊಂಡು ಹೊಗುವ ಹಾಗಿರಲಿಲ್ಲ. ಪ್ರತಿಯೊಂದು ಬಿಡಾರದಲ್ಲೂ ಯಾರಾದರೂ ರೊಟ್ಟಿ ಒದಗಿಸುವುದು ಒಂದೇ ಉಪಾಯ. ಅದಕ್ಕೆ ಯಾರನ್ನು ಹುಡುಕುವುದು? ರೊಟ್ಟಿ ಅಂಗಡಿಯವರು ಭಾರತೀಯರಾರೂ ಇರಲಿಲ್ಲ. ಪ್ರತಿ ಹಳ್ಳಿಯಲ್ಲಿ ರೊಟ್ಟಿಮಾಡುವವರೂ ಇರಲಿಲ್ಲ. ಸಾಮಾನ್ಯವಾಗಿ ಹಳ್ಳಿಗಳಿಗೆಲ್ಲ ಪಟ್ಟಣದಿಂದಲೇ ರೊಟ್ಟಿ ಬರಬೇಕು. ಆದ್ದರಿಂದ ಯಾರಾದರೂ ರೊಟ್ಟಿ ಅಂಗಡಿಯವನು ಪ್ರತಿದಿನವೂ ಗೊತ್ತಾದ ಸ್ಥಳಕ್ಕೆ ರೈಲುಮೇಲೆ ರೊಟ್ಟಿ ಕಳುಹಿಸಬೇಕು. ಚಾರ್ಲ್ಸ್‌ಟೌನ್‌ನ ಎರಡರಷ್ಟು ದೊಡ್ಡದಿತ್ತು ವೋಲ್ಕ್ಸ್ ರಸ್ಟ್.

ದೊಡ್ಡ ಯೂರೋಪಿಯನ್ ರೊಟ್ಟಿ ಅಂಗಡಿಯ ಯಜಮಾನ ನಮಗೆ ಪ್ರತಿ ಮಜಲಿಗೂ ರೊಟ್ಟಿ ಒದಗಿಸಲು ಸಂತೋಷದಿಂದ ಒಪ್ಪಿಕೊಂಡ. ನಮ್ಮ ಕಷ್ಟಸಮಯದಲ್ಲಿ ಹೆಚ್ಚು ದುಡ್ಡು ಕೇಳಲಿಲ್ಲ. ಒಳ್ಳೆಯ ಹಿಟ್ಟಿನಿಂದ ಮಾಡಿದ ರೊಟ್ಟಿಯನ್ನೇ ಒದಗಿಸಿದ. ಕಾಲಕ್ಕೆ ಸರಿಯಾಗಿ ರೈಲಿನಲ್ಲಿ ಕಳುಹಿಸುತ್ತಿದ್ದ. ರೈಲ್ವೆ ಅಧಿಕಾರಿಗಳು–ಅವರೂ ಯೂರೋಪಿಯನ್ ರೇ– ಪ್ರಾಮಾಣಿಕತೆಯಿಂದ ನಮಗೆ ಕೊಡುತ್ತಿದ್ದುದು ಒಂದೇ ಅಲ್ಲ, ದಾರಿಯಲ್ಲಿ ಜಾಗರೂಕತೆಯಿಂದ ಕಾಪಾಡಿ ಇನ್ನೂ ಕೆಲವು ಸೌಲಭ್ಯಗಳನ್ನು ಒದಗಿಸಿದರು. ನಮಗೆ ಯಾರಮೇಲೂ ದ್ವೇಷವಿಲ್ಲವೆಂದೂ ಯಾವ ಜೀವಿಗೂ ಹಿಂಸೆಮಾಡುವವರಲ್ಲವೆಂದೂ ಆತ್ಮತ್ಯಾಗದಿಂದ ಪರಿಹಾರ ಪಡೆಯಲು ಪ್ರಯತ್ನಮಾಡುತ್ತಿದ್ದೇವೆಂದೂ ಅವರು ಮನಗಂಡಿದ್ದರು. ನಮ್ಮ ಸುತ್ತಮುತ್ತಲ ವಾತಾವರಣವೆಲ್ಲ ಪರಿಶುದ್ಧವಾಯಿತು; ಮತ್ತು ಕೊನೆಯವರೆಗೂ ಪರಿಶುದ್ಧವಾಗಿತ್ತು. ಎಲ್ಲ ಮಾನವಹೃದಯದಲ್ಲೂ ಸುಪ್ತವಾದ ಪ್ರೇಮಭಾವನೆ ಹೊರಹೊಮ್ಮಿತು. ನಾವು ಕ್ರೈಸ್ತರು, ಯಹೂದ್ಯರು, ಹಿಂದು, ಮುಸಲ್ಮಾನ್ ಅಥವಾ ಏನೇ ಆಗಿರಲಿ ಎಲ್ಲರೂ ಸಹೋದರರೆಂಬ ಭಾವನೆ ಮೂಡಿತು.

ಪ್ರವಾಸದ ಎಲ್ಲ ಸಿದ್ಧತೆಗಳೂ ಮುಗಿದೊಡನೆ ಒಪ್ಪಂದಕ್ಕಾಗಿ ಇನ್ನೊಂದು ಪ್ರಯತ್ನ ಮಾಡಿದೆ. ಆಗಲೇ ಪತ್ರಗಳನ್ನೂ ತಂತಿಗಳನ್ನೂ ಕಳುಹಿಸಿದ್ದೆ. ನನ್ನ ವಿನಯಕ್ಕೆ ಬದಲು ಬೈಗಳು ಬಂದರೂ ಟೆಲಿಫೋನ್ ಮಾಡಬೇಕೆಂದು ನಿರ್ಧರಿಸಿದೆ. ಚಾರ್ಲ್ಸ್‌ಟೌನ್‌ನಿಂದ ಪ್ರೇಟೋರಿಯದಲ್ಲಿದ್ದ ಜನರಲ್ ಸ್ಮಟ್ಸಗೆ ಟೆಲಿಫೋನ್ ಮಾಡಿದೆ. ಆತನ ಕಾರ್ಯದರ್ಶಿಯನ್ನು ಕರೆದು "ಪ್ರವಾಸ ಕೈಗೊಳ್ಳಲು ನಾನು ಪೂರ್ಣ ಸಿದ್ಧನಿದ್ದೇನೆಂದು ಜನರಲ್ ಸ್ಮಟ್ಸ್‌ಗೆ ಹೇಳು. ವೊಲ್ಕ್ಸ್ ರಸ್ಟ್ ಯೂರೋಪಿಯನ್‌ರು ಬಹಳ ಉದ್ರೇಕಗೊಂಡಿದ್ದಾರೆ. ನಮ್ಮ ಪ್ರಾಣಕ್ಕೂ ಅಪಾಯ ತರುವ ಸ್ಥಿತಿಯಲ್ಲಿದ್ದಾರೆ. ಆ ರೀತಿ ಬೆದರಿಕೆ ತೋರಿಸುತ್ತಿದ್ದಾರೆ. ಅಂಥ ಪ್ರಮಾದ ನಡೆಯಲೆಂದು ಜನರಲ್ ಸ್ಮಟ್ಸ್‌ಗೆ ಇಷ್ಟವಿರಲಾರದು. ಈ ಮೂರು ಪೌಂಡು ತಲೆಗಂದಾಯ ತೆಗೆದುಬಿಡುವುದಾಗಿ ಭರವಸೆ ಕೊಟ್ಟರೆ ಪ್ರವಾಸ ನಿಲ್ಲಿಸುತ್ತೇನೆ. ಶಾಸನಭಂಗ ಮಾಡಲೇಬೇಕೆಂದು ನಾನು ಪ್ರವಾಸ ಹೊರಟಿಲ್ಲ. ಅನಿರ್ವಾಹವಾಗಿ ಮಾಡಲೇಬೇಕಾಗಿದೆ. ಈ ಸಣ್ಣ ಬೇಡಿಕೆ ನಡೆಸಲು ಜನರಲ್ ಸ್ಮಟ್ಸ್‌ಗೆ ಸಾಧ್ಯವಿಲ್ಲವೆ?" ಎಂದು ಕೇಳಿದೆ. ಅರ್ಧ ನಿಮಿಷದಲ್ಲೆ ಉತ್ತರ ಬಂದಿತು. ನಿಮ್ಮೊಂದಿಗೆ ಯಾವ ವ್ಯವಹಾರಕ್ಕೂ ಜನರಲ್ ಸ್ಮಟ್ಸ್ ಸಿದ್ಧರಿಲ್ಲ. ನಿಮಗೆ ಇಷ್ಟ ಬಂದಂತೆ ಮಾಡಬಹುದು. ಇಷ್ಟೆ ಉತ್ತರ.

ಹೀಗಾಗುವುದೆಂದು ನನಗೆ ಗೊತ್ತು. ಆದರೆ ಇಷ್ಟು ಕಟುವಾದ ಉತ್ತರ ಬರುವುದೆಂದು ಎಣಿಸಿರಲಿಲ್ಲ. ಸತ್ಯಾಗ್ರಹ ಆರಂಭವಾದ ಆರು ವರ್ಷಗಳಿಂದ ನನಗೂ ಜನರಲ್ ಸ್ಮಟ್ಸ್‌ಗೂ ರಾಜಕೀಯ ಸಂಬಂಧವಿದ್ದುದರಿಂದ ಸ್ವಲ್ಪ ಸಭ್ಯವಾದ ಉತ್ತರ ನಿರೀಕ್ಷಿಸಿದೆ. ಆದರೆ ಆತನ ಸಭ್ಯತೆಯಿಂದ ಹೇಗೆ ಉಬ್ಬುತ್ತಿರಲಿಲ್ಲವೋ ಹಾಗೆಯೇ ಅಸಭ್ಯತೆಯಿಂದ ತಗ್ಗಲೂ ಇಲ್ಲ. ಕಡಿದಾದ ನೇರ ದಾರಿ ನನ್ನ ಮುಂದೆ ಸ್ಪಷ್ಟವಾಗಿತ್ತು. ಮಾರನೆ ೧೯೧೩ನೇ ನವೆಂಬರ್ ಆರನೆ ದಿನ ನಿಯಮಿತಕಾಲಕ್ಕೆ ಪ್ರಾರ್ಥನೆ ಮುಗಿಸಿ, ದೇವರ ಮೇಲೆ ಭಾರಹಾಕಿ ಪ್ರವಾಸ ಕೈಗೊಂಡೆವು. ನಮ್ಮ ಜೈತ್ರಯಾತ್ರೆಯಲ್ಲಿ ೨,೦೩೭ ಜನ ಗಂಡಸರು, ೧೨೭ ಜನ ಹೆಂಗಸರು, ೫೭ ಮಕ್ಕಳು ಇದ್ದರು.

೪೪. ಮಹಾಯಾತ್ರೆ

ಈ ರೀತಿ ನಿಯತ ಕಾಲಕ್ಕೆ ಕಾಲಕ್ಕೆ ಸರಿಯಾಗಿ ಯಾತ್ರಿಕರ ತಂಡ ಪ್ರಯಾಣ ಹೊರಟಿತು. ಚಾರ್ಲ್ಸ್ ಟೌನ್‌ಗೆ ಒಂದು ಮೈಲು ದೂರದಲ್ಲಿ ಒಂದು ಹೊಳೆ ಇದೆ. ಆ ಹೊಳೆ ದಾಟಿದೊಡನೆ ವೋಲ್ಕ್ಸ್‌ರಸ್ಟ್ ಅಥವಾ ಟ್ರಾನ್ಸ್ ವಾಲ್ ಗಡಿಯ ಬಾಗಿಲಲ್ಲಿ ಒಂದು ಸಣ್ಣ ಸಶಸ್ತ್ರ ಪೋಲೀಸ್ ಪಡೆ ಕಾವಲಿತ್ತು. ನಾನು ಸಂಜ್ಞೆ ಕೊಟ್ಟೊಡನೆ ಗಡಿ ದಾಟಬೇಕೆಂದು ನಮ್ಮ ಪಡೆಗೆ ತಿಳಿಸಿ, ಅವರನ್ನು ಹಿಂದೆ ಬಿಟ್ಟು, ನಾನು ಮುಂದೆ ಹೋದೆ, ಪೋಲೀಸಿನವರೊಂದಿಗೆ ನಾನು ಮಾತನಾಡುತ್ತಿರುವಾಗಲೇ ಯಾತ್ರಿಕರು ಮುಂದೆ ನುಗ್ಗಿ ಗಡಿ ದಾಟಿದರು ಪೋಲೀಸಿನವರು ಅವರನ್ನು ಸುತ್ತುಗಟ್ಟಿದರು. ಆದರೆ ಮುಂದುವರಿಯುತ್ತಿದ್ದ ಜನಸಂದಣಿಯನ್ನು ತಡೆಯಲು ಸಾಧ್ಯವಾಗಲಿಲ್ಲ. ಅವರಿಗೆ ನಮ್ಮನ್ನು ಬಂಧಿಸುವ ಉದ್ದೇಶದಿರಲಿಲ್ಲ. ಯಾತ್ರಿಕರನ್ನು ಸಮಾಧಾನ ಮಾಡಿ ಸಾಲು ಗಟ್ಟಿ ನಿಲ್ಲಲು ತಿಳಿಸಿದೆ. ನಾಲ್ಕಾರು ನಿಮಿಷಗಳಲ್ಲೆ ಶಿಸ್ತು ಬಂದು ಟ್ರಾನ್ಸ್ ವಾಲ್ ಯಾತ್ರೆ ಪ್ರಾರಂಭವಾಯಿತು.

ಇದಕ್ಕೆ ಎರಡು ದಿನ ಮುಂಚೆ ವೋಲ್ಕ್ಸ್ ರಸ್ಟಿನ ಯೂರೋಪಿಯನ್‌ರು ಸಭೆ ಸೇರಿಸಿ ಭಾರತೀಯರಿಗೆ ಇಲ್ಲದ ಬೆದರಿಕೆ ತೋರಿದ್ದರು. ಟ್ರಾನ್ಸ್‌ವಾಲ್ ಪ್ರವೇಶಿಸಿದರೆ ಭಾರತೀಯರನ್ನು ಗುಂಡಿನಿಂದ ಸುಟ್ಟುಬಿಡುವುದಾಗಿ ಸಹ ಕೆಲವರು ಹೆದರಿಸಿದ್ದರು. ಅವರೊಂದಿಗೆ ಚರ್ಚೆ ನಡೆಸಿ ಸಮಾಧಾನಪಡಿಸಬೇಕೆಂದು ಕಾಲೆನ್‌ಬಾಕ್ ಆ ಸಭೆಗೆ ಹೋಗಿದ್ದರು. ಆದರೆ ಯೂರೋಪಿಯನ್‌ರು ಆತನ ಮಾತುಗಳಿಗೆ ಕಿವಿಗೊಡಲು ಸಿದ್ಧರಿರಲಿಲ್ಲ. ಕೆಲವರು ಆತನನ್ನು ಹೊಡೆಯಲು ಸಹ ಎದ್ದರು. ಜಟ್ಟಿಯ ಹತ್ತಿರ ಶಿಕ್ಷಣ ಪಡೆದು ಕಾಲೆನ್‌ಬಾಕ್ ಭೀಮಪರಾ ಕ್ರಮಿಗಳಾಗಿದ್ದರು; ಅವರನ್ನು ಬೆದರಿಸಲು ಸುಲಭ ಸಾಧ್ಯವಿರಲಿಲ್ಲ. ಒಬ್ಬ ಯೂರೋಪಿಯನ್ ದ್ವಂದ್ವಯುದ್ಧಕ್ಕೆ ಕರೆದ. "ಶಾಂತಿಯೇ ಈಗ ನನ್ನ ಧರ್ಮವಾದ್ದರಿಂದ ಸವಾಲು ಅಂಗೀಕರಿಸುವ ಹಾಗಿಲ್ಲ. ಇಷ್ಟವಿದ್ದವರು ಬಂದು ಬೇಕಾದ್ದು ಮಾಡಲಿ. ಈ ಸಭೆ ನನ್ನ ಮಾತು ಲಾಲಿಸಬೇಕೆಂದು ಒತ್ತಾಯಪಡಿಸುತ್ತೇನೆ. ಎಲ್ಲ ಯೂರೋಪಿಯನ್‌ರನ್ನೂ ಸಭೆಗೆ ಆಹ್ವಾನಿಸಿದ್ದೀರಿ. ನಿರಾಪರಾಧಿಗಳ ಮೇಲೆ ಕೈಮಾಡಲು ಎಲ್ಲ ಯೂರೋಪಿಯನ್‌ರೂ ಸಿದ್ಧರಿಲ್ಲವೆಂದು ತಿಳಿದಿದ್ದೇನೆ. ಭಾರತೀಯರ ಮೇಲೆ ನೀವು ಹೊರಿಸಿರುವ ಆಪಾದನೆಗಳು ಶುದ್ಧ ಸುಳ್ಳೆಂದು ತಿಳಿಸಲು ಒಬ್ಬ ಯೂರೋಪಿಯನ್ ಸಿದ್ಧನಿದ್ದಾನೆ. ನಿಮ್ಮ ಪ್ರಭುತ್ವವನ್ನು ಬುಡಮೇಲು ಮಾಡುವುದು ಅವರ ಇಷ್ಟವಿಲ್ಲ. ನಿಮ್ಮೊಂದಿಗೆ ಯುದ್ಧನಡೆಸಬೇಕೆಂದಾಗಲಿ, ದೇಶವನ್ನು ಆಕ್ರಮಿಸಬೇಕೆಂದಾಗಲಿ ಅವರ ಅಭಿಮತವಲ್ಲ. ತಮಗೆ ನ್ಯಾಯ ದೊರೆಯಬೇಕೆಂದು ಮಾತ್ರ ಅವರ ಇಷ್ಟ. ತಮ್ಮ ಮೇಲೆ ಹೊರಿಸಿರುವ ಅನ್ಯಾಯವಾದ ತೆರಿಗೆಗೆ ವಿರೋಧ ವ್ಯಕ್ತಗೊಳಿಸಲು ಮಾತ್ರ ಟ್ರಾನ್ಸ್ ವಾಲ್ ಪ್ರವೇಶ ಮಾಡಬೇಕೆಂದಿದ್ದಾರೆ. ಇಲ್ಲಿ ಬಂದು ನೆಲಸಲೆಂದಲ್ಲ. ಅವರು ವೀರಾಗ್ರಣಿಗಳು. ನಿಮ್ಮನ್ನಾಗಲಿ, ನಿಮ್ಮ ಆಸ್ತಿಯನ್ನಾಗಲಿ ಮುಟ್ಟರು; ನಿಮ್ಮೊಂದಿಗೆ ಯುದ್ಧಮಾಡರು. ಆದರೆ ಗುಂಡಿನ ಸುರಿಮಳೆ ಸುರಿಸಿದರೂ ಟ್ರಾನ್ಸ್ ವಾಲ್ ಪ್ರವೇಶ ಮಾತ್ರ ಬಿಡರು. ನಿಮ್ಮ ಗುಂಡುಗಳಿಗಾಗಲಿ, ಭರ್ಜಿಗಳಿಗಾಗಲಿ ಹೆದರಿ ಹಿಮ್ಮೆಟ್ಟುವ ಜನರಲ್ಲ. ತಮ್ಮ ಬಲಿದಾನದಿಂದ ನಿಮ್ಮ ಕಠಿಣ

ಮನಸ್ಸನ್ನು ಕರಗಿಸಬೇಕೆಂದಿದ್ದಾರೆ; ಕರಗಿಸಿಯೂ ಕರಗಿಸುತ್ತಾರೆ. ಇಷ್ಟೇ ನಾನು ಹೇಳುವುದು. ನಾನು ಹೇಳಬೇಕೆಂದಿದ್ದುದು ಹೇಳಿ ನಿಮ್ಮ ಸೇವೆ ಮಾಡಿದ್ದೇನೆಂದು ತಿಳಿಯುತ್ತೇನೆ. ಎಚ್ಚರದಿಂದಿರಿ. ಅನ್ಯಾಯ ಮಾತ್ರ ಮಾಡಬೇಡಿರಿ." ಇಷ್ಟು ಹೇಳಿ ಕಾಲೆನ್ ಬಾಕ್ ಕುಳಿತರು. ಸಭಿಕರೆಲ್ಲ ಸ್ತಂಭಿತರಾದರು. ಕಾಲೆನ್‌ಬಾಕ್‌ರನ್ನು ಯುದ್ಧಕ್ಕೆ ಕರೆದ ಯುರೋಪಿಯನ್ ಆತನ ಪರಮಮಿತ್ರನಾದ.

ಈ ಸಭೆಯ ವಿವರವೆಲ್ಲ ನಮಗೆ ತಿಳಿದಿತ್ತು. ವೋಲ್ಕ್ಸ್ ರಸ್ಟ್‌ನ ಯೂರೋಪಿಯನ್‌ರು ಏನು ತೊಂದರೆ ಕೊಟ್ಟರೂ ಸಹಿಸಲು ಸಿದ್ಧರಿದ್ದೆವು. ಪ್ರಾಯಶಃ ಪೋಲೀಸರನ್ನು ಹೆಚ್ಚಾಗಿ ಇಟ್ಟಿದ್ದು ಅವರಿಂದ ನಮಗಾವ ತೊಂದರೆಯಾಗದಂತೆ ನೋಡಿಕೊಳ್ಳಲು ಇದ್ದರೂ ಇರಬಹುದು. ಏನೇ ಆಗಲಿ ನಮ್ಮ ದಂಡಯಾತ್ರೆ ಶಾಂತಿಯಿಂದ ಮುಂದುವರಿಯಿತು. ತಮಾಷೆಗಾಗಿ ಸಹ ಯಾವ ಯೂರೋಪಿಯನ್‌ರೂ ಹೆದರಿಸಿದಂತೆ ನೆನಪಿಲ್ಲ. ಈ ಅಭೂತಪೂರ್ವ ದೃಶ್ಯವನ್ನು ನೋಡಲು ಎಲ್ಲರೂ ಹೊರಗೆ ಬಂದು ನಿಂತಿದ್ದರು. ಕೆಲವರ ಕಣ್ಣಿನಲ್ಲಿ ಸ್ನೇಹಭಾವವೂ ತೋರಿ ಬಂತು.

ಮೊದಲನೆ ದಿನ ರಾತ್ರಿ ವೋಲ್ಕ್ಸ್ ರಸ್ಟ್‌ಗೆ ಎಂಟು ಮೈಲು ದೂರ ಪಾಮರ್ಡ್‌ನಲ್ಲಿ ತಂಗಬೇಕಾಗಿತ್ತು. ಅಲ್ಲಿಗೆ ಹೋದಾಗ ಸಂಜೆ ಐದು ಗಂಟೆ. ಯಾತ್ರಿಕರೆಲ್ಲ ರೊಟ್ಟಿ ಸಕ್ಕರೆ ತಿಂದು ಬಯಲಲ್ಲಿ ಹಾಸಿಗೆ ಹರಡಿದರು. ಕೆಲವರು ಮಾತನಾಡುತ್ತ, ಕೆಲವರು ಭಜನೆಮಾಡುತ್ತ ಕಾಲಕಳೆಯುತ್ತಿದ್ದರು. ಹೆಂಗಸರು ನಡೆದು ಬಹಳ ಆಯಾಸಗೊಂಡಿದ್ದರು. ಮಕ್ಕಳನ್ನು ಎತ್ತಿಕೊಂಡೇ ಬಂದರು; ಅದೇ ರೀತಿ ಮುಂದುವರಿಯಲು ಸಾಧ್ಯವಿರಲಿಲ್ಲ. ಆದ್ದರಿಂದ ಮೊದಲೇ ತಿಳಿಸಿದ್ದಂತೆ ಅವರನ್ನು ಭಾರತೀಯ ವರ್ತಕನೊಬ್ಬನ ಮನೆಯಲ್ಲಿ ಬಿಟ್ಟೆವು. ನಾವು ಟಾಲ್ ಸ್ಟಾಯ್ ಆಶ್ರಮ ಸೇರಿದರೆ ಅಲ್ಲಿಗೆ ಕಳುಹಿಸಬೇಕೆಂದೂ, ಮಧ್ಯದಲ್ಲೇ ಬಂಧನವಾದರೆ ಅವರ ಮನೆಗಳಿಗೆ ಕಳುಹಿಸಬೇಕೆಂದೂ ಆತನಿಂದ ಭರವಸೆ ಪಡೆದೆವು.

ಮಧ್ಯರಾತ್ರಿ ಸಮಯ. ನಾನೂ ಮಲಗಲು ಸಿದ್ಧನಾಗುತ್ತಿದ್ದೆ. ಹೊರಗೆ ಕಾಲಿನ ಸದ್ದಾಯಿತು ಕೈಯಲ್ಲಿ ದೀಪ ಹಿಡಿದು ಒಬ್ಬ ಯೂರೋಪಿಯನ್ ಬಂದ. ಕೂಡಲೆ ಅರ್ಥವಾಯಿತು. ನಾನು ಸಿದ್ಧತೆಯೇನೂ ಮಾಡಬೇಕಾಗಿರಲಿಲ್ಲ. ಪೋಲೀಸ್ ಅಧಿಕಾರಿ:

"ನಿಮ್ಮನ್ನು ಬಂಧಿಸಲು ಆಜ್ಞೆಯಾಗಿದೆ" ಎಂದ.

"ಯಾವಾಗ?" ಎಂದು ಕೇಳಿದೆ.

"ಈಗಲೇ"

"ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತೀರಿ?"

"ಸದ್ಯ ಹತ್ತಿರದ ರೇಲ್ವೆ ಸ್ಟೇಷನ್‌ಗೆ; ರೈಲು ದೊರೆತೊಡನೆ ವೋಲ್ಕ್ಸ್‌ರಸ್ಟ್‌ಗೆ."

"ಯಾರೊಂದಿಗೂ ಮಾತನಾಡದೆ ಬರುತ್ತೇನೆ. ಆದರೆ ನನ್ನ ಸಹೋದ್ಯೋಗಿ ಒಬ್ಬನಿಗೆ ಕೆಲವು ವಿಷಯ ತಿಳಿಸಬೇಕು."

"ಆಗಬಹುದು."

ನನ್ನ ಪಕ್ಕದಲ್ಲೇ ಮಲಗಿದ್ದ ಪಿ.ಕೆ.ನಾಯುಡುವನ್ನು ಎಬ್ಬಿಸಿದೆ. ಬಂಧನದ ವಿಷಯ ತಿಳಿಸಿ ಬೆಳಗಿನವರೆಗೆ ಯಾರನ್ನೂ ಎಚ್ಚರಿಸಬಾರದೆಂದು ಹೇಳಿದೆ. ಬೆಳಗಾಗುತ್ತಲೆ ದಂಡಯಾತ್ರೆ ಎಂದಿನಂತೆ ಸಾಗಬೇಕು. ಹೊತ್ತು ಹುಟ್ಟುವ ಮುಂಚೆ ಯಾತ್ರೆ "ನನ್ನ

ಪ್ರಾರಂಭವಾಗಬೇಕು. ವಿಶ್ರಮಿಸಿಕೊಂಡು ಆಹಾರ ತೆಗೆದುಕೊಳ್ಳುವ ಸಮಯದಲ್ಲಿ ಜನರಿಗೆ ನನ್ನ ಬಂಧನದ ವಿಷಯ ತಿಳಿಸಬೇಕು. ಮಧ್ಯೆ ಯಾರಾದರೂ ಕೇಳಿದರೆ ಅವರಿಗೆ ಮಾತ್ರ ತಿಳಿಸಬಹುದು. ಯಾತ್ರಿಕರನ್ನೂ ಬಂಧಿಸಿದರೆ ಬಂಧನಕ್ಕೆ ಒಳಗಾಗಬೇಕು. ಇಲ್ಲವಾದರೆ ಕಾರ್ಯಕ್ರಮದಂತೆ ಯಾತ್ರೆ ಮುಂದುವರಿಸಬೇಕು. ನಾಯುಡುಗೆ ಭಯವೇನೂ ಇರಲಿಲ್ಲ. ಆತನ ಬಂಧನಾದರೆ ಏನು ಮಾಡಬೇಕೆಂಬುದನ್ನೂ ತಿಳಿಸಿದೆ. ಆಗ ಕಾಲೆನ್ ಬಾಕ್ ವೊಲ್ಕ್ಸ್‌ರಸ್ಟ್‌ನಲ್ಲಿದ್ದರು.

ನಾನು ಪೋಲೀಸ್ ಅಧಿಕಾರಿಯೊಂದಿಗೆ ಹೊರಟೆ. ಮಾರನೆ ಬೆಳಿಗ್ಗೆ ವೊಲ್ಕ್ಸ್‌ರಸ್ಟ್‌ಗೆ ರೈಲು ಹತ್ತಿದೆವು. ವೊಲ್ಕ್ಸ್‌ರಸ್ಟ್‌ನಲ್ಲಿ ನ್ಯಾಯಾಸ್ಥಾನದ ಮುಂದೆ ನಿಂತುಕೊಂಡೆ. ಪಬ್ಲಿಕ್ ಪ್ರಾಸಿಕ್ಯೂಟರನೇ ಸಾಕ್ಷ್ಯವೆಲ್ಲ ಸಿದ್ಧವಿಲ್ಲ, ೧೪ನೇ ತಾರೀಕಿನ ವರೆಗೆ ಸಮಯ ಬೇಕೆಂದು ಕೇಳಿದ. ಅದರಂತೆ ಅವಧಿಕೊಟ್ಟರು. ನನ್ನ ಅಧೀನದಲ್ಲಿ ೨,೦೦೦ ಜನ ಗಂಡಸರೂ ೧೨೨ ಜನ ಗೆಂಗಸರೂ ೫೦ ಮಕ್ಕಳೂ ಇದ್ದುದರಿಂದಲೂ, ಜಾಮೀನು ಮೇಲೆ ಬಿಡುಗಡೆ ಮಾಡಲು ಕೇಳಿದೆ. ಪಬ್ಲಿಕ್ ಪ್ರಾಸಿಕ್ಯೂಟರ್ ಅದನ್ನು ವಿರೋಧಿಸಿದ. ಕ್ರೂರ ಆಪಾದನೆಗಳಲ್ಲಿ ವಿನಾ ಉಳಿದೆಲ್ಲ ಆಪಾದನೆಗಳಲ್ಲಿ ಜಾಮೀನು ಮೇಲೆ ಬಿಡುಗಡೆ ಮಾಡಲೇಬೇಕೆಂದು ವಿಧಿಯಿದ್ದುದರಿಂದ ನ್ಯಾಯಾಧೀಶನಿಗೆ ಬೇರೆ ಮಾರ್ಗವೇ ಇರಲಿಲ್ಲ. ೫೦ ಪೌಂಡು ಜಾಮೀನು ಮೇಲೆ ನನ್ನ ಬಿಡುಗಡೆಯಾಯಿತು. ಕಾಲೆನ್ ಬಾಕ್ ಒಂದು ಮೋಟರು ಸಿದ್ಧಮಾಡಿದ್ದರು. ಮರುಕ್ಷಣದಲ್ಲೆ ನಮ್ಮ ಯಾತ್ರಿಕರನ್ನು ಸೇರಲು ಕರೆದೊಯ್ದರು. “ಟ್ರಾನ್ಸ್‌ವಾಲ್ ಲೀಡರ್” ಪತ್ರಿಕೆಯ ವಿಶೇಷ ಸುದ್ದಿಗಾರ ನಮ್ಮೊಂದಿಗೆ ಬರಲಪೇಕ್ಷಿಸಿದ. ಆತನನ್ನೂ ಮೋಟಾರಿನಲ್ಲಿ ಕರೆದುಕೊಂಡು ಹೋದೆವು. ನಮ್ಮ ಮೊಕದ್ದಮೆಯ ವಿವರ, ಪ್ರಯಾಣ, ಯಾತ್ರಿಕರ ಪಡೆ ಸೇರಿದ್ದು, ಅವರು ನನ್ನನ್ನು ಉತ್ಸಾಹದಿಂದ ಬರಮಾಡಿಕೊಂಡು ಆನಂದಪಟ್ಟದ್ದು–ಎಲ್ಲವನ್ನೂ ವಿಶದವಾಗಿ ತನ್ನ ಪತ್ರಿಕೆಯಲ್ಲಿ ಪ್ರಕಟ ಮಾಡಿದ. ಕಾಲೆನಬಾಕ್ ಕೂಡಲೆ ವೊಲ್ಕ್ಸ್‌ರಸ್ಟ್‌ಗೆ ಹಿಂದಿರುಗಿದರು. ಚಾರ್ಲ್ಸ್‌ಟೌನ್ ನಲ್ಲಿದ್ದ ಭಾರತೀಯರನ್ನೂ ಹೊಸದಾಗಿ ಬಂದವರನ್ನೂ ಆತ ನೋಡಿಕೊಳ್ಳಬೇಕಾಗಿತ್ತು.

ನಮ್ಮ ದಂಡಯಾತ್ರೆ ಸಾಗಿತು. ಆದರೆ ಇನ್ನು ನನ್ನನ್ನು ಸ್ವತಂತ್ರವಾಗಿ ಬಿಡಲು ಸರಕಾರಕ್ಕೆ ಇಷ್ಟವಿರಲಿಲ್ಲ. ಆದ್ದರಿಂದ ಸ್ಟಾಂಡರ್‌ಟನ್‌ನಲ್ಲಿ ೮ನೇ ತಾರೀಖು ಪುನಃ ಬಂಧಿಸಿದರು. ಅದು ಸ್ವಲ್ಪ ದೊಡ್ಡ ಊರು. ಇಲ್ಲಿ ನನ್ನನ್ನು ಬಂಧಿಸಿದ ರೀತಿ ಸ್ವಲ್ಪ ಆಶ್ಚರ್ಯಕರವಾಗಿತ್ತು. ಯಾತ್ರಿಕರಿಗೆ ರೊಟ್ಟಿ ಹಂಚುತ್ತಿದ್ದೆ. ಆದ್ದರಿಂದ ಎಲ್ಲರಿಗೂ ಹಂಚಲು ಸ್ವಲ್ಪ ತಡವಾಯಿತು. ಈ ಮಧ್ಯೆ ನ್ಯಾಯಾಧೀಶ ಬಂದು ನನ್ನ ಪಕ್ಕದಲ್ಲಿ ನಿಂತ. ಆಹಾರವನ್ನೆಲ್ಲ ಹಂಚುವವರೆಗೆ ಸುಮ್ಮನಿದ್ದು ಆಮೇಲೆ ನನ್ನನ್ನು ಒಂದು ಪಕ್ಕಕ್ಕೆ ಕರೆದ. ಆತನ ಪರಿಚಯ ಮೊದಲೇ ಇದ್ದುದರಿಂದ ಪ್ರಾಯಶಃ ಏನೋ ಮಾತನಾಡಲು ಕರೆಯುತ್ತಿದ್ದಾನೆಂದು ಭಾವಿಸಿದೆ. ಆತ ನಗುತ್ತ;

“ನೀವು ನನ್ನ ಕೈದಿ” ಎಂದ.

“ಈಗ ನನಗೆ ಬಡತಿಯಾದಂತಿದೆ . ಪೋಲೀಸ್ ಅಧಿಕಾರಿಗಳನ್ನು ದಾಟಿ ನ್ಯಾಯಾಧೀಶರೇ ಬಂಧಿಸಲು ಬರುತ್ತಿದ್ದಾರೆ. ಈಗಲೇ ವಿಚಾರಣೆ ನಡೆಸುತ್ತೀರಾ?” ಎಂದು ಕೇಳಿದೆ.

ಜೊತೆಗೆ ಬನ್ನಿ. ಕೋರ್ಟು ನಡೆಯುತ್ತಿದೆ" ಎಂದ.

ಯಾತ್ರಿಕರಿಗೆ ಪ್ರವಾಸ ಸಾಗಿಸಲು ಹೇಳಿ ನ್ಯಾಯಾಧೀಶನೊಂದಿಗೆ ಹೊರಟೆ. ನ್ಯಾಯಾಸ್ಥಾನ ಸೇರುತ್ತಲೆ ನನ್ನ ಸಹೋದ್ಯೋಗಿಗಳೂ ಕೆಲವರು ಬಂಧಿತರಾಗಿದ್ದುದನ್ನು ನೋಡಿದೆ. ಪಿ.ಕೆ.ನಾಯುಡು, ಬಿಹಾರಿ ಇಲಾಲ್ ಮಹಾರಾಜ್, ರಾಮನಾರಾಯಣ ಸಿಂಹ, ರಘು ನರಸು, ರಹೀಂಖಾನ್ ಐದು ಜನ ಇದ್ದರು.

ಆ ಕ್ಷಣದಲ್ಲೆ ನನ್ನನ್ನು ನ್ಯಾಯಾಧಿಶರ ಮುಂದೆ ನಿಲ್ಲಿಸಿದರು. ವೊಲ್ಕ್ಸ್‌ರಸ್ಟ್‌ನಲ್ಲಿ ಮಾಡಿದಂತೆ ಜಾಮೀನು ಮೇಲೆ ಬಿಡಬೇಕೆಂದು ಅರ್ಜಿಹಾಕಿದೆ. ಇಲ್ಲಿಯೂ ಪಬ್ಲಿಕ್ ಪ್ರಾಸಿಕ್ಯೂಟರ್ ನನ್ನ ಅರ್ಜಿ ಬಲವಾಗಿ ವಿಇರೋಧಿಸಿದ. ಇಲ್ಲಿಯೂ ೫೦ ಪೌಂಡು ಜಾಮೀನು ಮೇಲೆ ಬಿಡುಗಡೆಮಾಡಿ ಮೊಕದ್ದಮೆ ೨೧ಕ್ಕೆ ಮುಂದುವರಿಸಿದರು. ಭಾರತೀಯ ವರ್ತಕರು ಒಂದು ಗಾಡಿ ಸಿದ್ಧವಾಗಿಟ್ಟಿದ್ದರು. ಮೂರು ಮೈಲಿಯೊಳಗೆ ಯಾತ್ರಿಕರನ್ನು ಸಏರಿಕೊಂಡೆ. ಪ್ರಾಯಶಃ ಇನ್ನು ನಾವೆಲ್ಲ ಟಾಲ್‌ಸ್ಟಾಯ್ ಆಶ್ರಮ ಸೇರಬಹುದೆಂದು ಭಾವಿಸಿದೆವು. ಆದರೆ ನಡೆದುದೇ ಬೇರೆ. ಯಾತ್ರಿಕರು ನನ್ನ ಬಂಧನವಿಯೋಗವನ್ನು ಸಹಿಸುವಂತಾದುದೇನೂ ಅಲ್ಪ ವಿಷಯವಲ್ಲ. ನನ್ನ ಐದು ಜನ ಸಹೋದ್ಯೋಗಿಗಳೂ ಬಂಧನದಲ್ಲೆ ಇದ್ದರು.

೪೫. ಎಲ್ಲರೂ ಸೆರೆಮನೆಯಲ್ಲಿ

ಇಷ್ಟು ಹೊತ್ತಿಗೆ ಹೋಹಾನ್ಸ್ ಬರ್ಗ್ ಹತ್ತಿರ ಬಂದಿದ್ದೆವು. ನಮ್ಮ ಯಾತ್ರೆಯನ್ನು ಎಂಟು ಮಜಲಿನಲ್ಲಿ ಮುಗಿಸಲಿದ್ದೆವೆಂದು ಮೊದಲೇ ತಿಳಿಸಿದ್ದೇನೆ. ಇದುವರೆಗೆ ಕ್ರಮಪ್ರಕಾರ ದಂಡಯಾತ್ರೆ ನಡೆದಿತ್ತು. ಇನ್ನೂ ನಾಲ್ಕು ದಿನದ ಯಾತ್ರೆಯಿತ್ತು. ದಿನದಿನಕ್ಕೂ ನಮ್ಮ ಉತ್ಸಾಹ ಉಕ್ಕುತ್ತಿದ್ದಂತೆ ಭಾರತೀಯರ ಮುತ್ತಿಗೆಯನ್ನು ಯಾವ ರೀತಿ ಎದುರಿಸಬೇಕೆಂದು ಸರಕಾರಕ್ಕೂ ಯೋಚನೆ ಅಧಿಕವಾಗುತ್ತ ಬಂತು. ನಿರ್ದಿಷ್ಟ ಸ್ಥಳ ಸೇರಿದ ನಂತರ ಬಂಧಿಸಿದರೆ ಸರಕಾರದ ಅಶಕ್ತತೆ. ಬುದ್ಧಿಮಾಂಧ್ಯ ವ್ಯಕ್ತಪಡಿಸಿದಂತಾಗುತ್ತದೆ. ಬಂಧಿಸುವದಾದರೆ ಗುರಿಮುಟ್ಟುವ ಮುಂಚೆಯೇ ಬಂಧಿಸಬೇಕು.

ನನ್ನ ಬಂಧನದಿಂದ ಯಾತ್ರಿಕರು ಅಧೈರ್ಯಪಡುವುದಿಲ್ಲವೆಂದೂ, ಹೆದರುವುದಿಲ್ಲವೆಂದೂ, ಶಾಂತಿಭಂಗ ಮಾಡುವಂತೆ ಜನರನ್ನು ಉದ್ರೇಕಗೊಳಿಸಲು ಸಾಧ್ಯವಿಲ್ಲವೆಂದೂ ಅರಿತುಕೊಂಡರು. ದಂಗೆ ಏನಾದರೂ ಎದ್ದಿದ್ದರೆ ಗುಂಡಿನಿಂದ ಸುಟ್ಟುಹಾಕಲು ಸರಕಾರಕ್ಕೆ ಒಳ್ಳೆ ಅವಕಾಶ ದೊರೆಯುತ್ತಿತ್ತು. ನಮ್ಮ ಶಾಂತಿಯುತ ಧೈರ್ಯ ಜನರಲ್ ಸ್ಮಟ್ಸ್‌ರನ್ನು ಬಹಳ ಕಂಗೆಡಿಸಿತು. ಆ ರೀತಿ ಹೇಳಿಯೂ ಹೇಳಿದರು. ಶಾಂತ ಮನುಷ್ಯನನ್ನು ಎಲ್ಲಿಯವರೆಗೆ ಹಿಂಸಿಸಲು ಸಾಧ್ಯ? ಸ್ವಯಂ ಸಾಯಲು ಸಿದ್ಧನಿರುವವನನ್ನು ಕೊಲ್ಲುವದೆಂತು? ಅವನನ್ನು ಕೊಲ್ಲುವುದರಲ್ಲಿ ಯಾವ ಸ್ವಾರಸ್ಯವೂ ಇಲ್ಲ. ಆದ್ದರಿಂದಲೇ ಸೈನಿಕರು ಯಾವಾಗಲೂ ತಮ್ಮ ಶತ್ರುಗಳನ್ನು ಜೀವಸಹಿತ ಬಂಧಿಸಲು ಅಪೇಕ್ಷಿಸುತ್ತಾರೆ. ಬೆಕ್ಕು ಬಂದಾಗ ಇಲಿ ಓಡದಿದ್ದರೆ ಬೆಕ್ಕು ತನ್ನ ಆಹಾರಕ್ಕೆ ಬೇರೊಂದು ಪ್ರಾಣಿಯನ್ನು ಹುಡುಕಬೇಕಾಗುತ್ತದೆ. ಕುರಿಗಳೆಲ್ಲ ಸಿಂಹದೊಂದಿಗೆ ನಿದ್ರಿಸುವುದಾದರೆ ಸಿಂಹ ಕುರಿ ತಿನ್ನುವುದನ್ನು ಬಿಡಬೇಕಾಗುತ್ತದೆ. ಸಿಂಹ ನಿರ್ವೈರ ತಾಳಿದರೆ ಸಿಂಹಗಳ ಬೇಟೆಯೂ ನಿಲ್ಲುತ್ತದೆ. ಅಹಿಂಸೆ, ದೃಢನಿಶ್ಚಯ ಈ ಎರಡು ಗುಣಗಳ ಸಮ್ಮಿಲನದಲ್ಲಿ ನಮ್ಮ ವಿಜಯ ಸ್ವಯಂಸಿದ್ಧ.

ಪೋಲಕ್‌ರು ಭಾರತಕ್ಕೆ ಬರಬೇಕೆಂದೂ ಭಾರತ ಮತ್ತು ಸಾಮ್ರಾಜ್ಯ ಸರಕಾರಗಳಿಗೆ ನಮ್ಮ ಪರಿಸ್ಥಿತಿಯು ವಿದ್ಯಮಾನ ತಿಳಿಸಲು ಸಹಾಯು ಮಾಡಬೇಕೆಂದೂ ಗೋಖಲೆಯವರಿಂದ ಕೇಬಲ್ ಬಂತು. ಪೋಲಕ್‌ರ ಸ್ವಭಾವ ಎಲ್ಲ ಸಂದರ್ಭಗಳಲ್ಲೂ ಉಪಯೋಗವಾಗುವಂಥಾದ್ದು. ಯಾವ ಕೆಲಸಕ್ಕೆ ಕೈಹಾಕಿದರೂ ಅದರಲ್ಲಿ ಸಂಪೂರ್ಣ ಮಗ್ನರಾಗುತ್ತಿದ್ದರು. ಆದ್ದರಿಂದ ಭಾರತಕ್ಕೆ ಹೊರಡಬೇಕೆಂದು ಆತನಿಗೆ ಪತ್ರ ಬರೆದೆ. ನನ್ನನ್ನು ಭೆಟ್ಟಿಯಾಗಿ ಎಲ್ಲ ವಿಷಯವನ್ನೂ ತಿಳಿದುಕೊಳ್ಳದೆ ಹೊರಡಲು ಆತ ಇಷ್ಟಪಡಲಿಲ್ಲ. ಇಷ್ಟವಿದ್ದರೆ ಬರಬಹುದೆಂದೂ ಬಂದರೆ ಬಂಧನಕ್ಕೊಳಗಾಗುವ ಅಪಾಯವಿದೆಯೆಂದೂ ತಂತಿ ಕಳಿಸಿದೆ. ಯೋಧರು ಅಪಾಯಕ್ಕೆ ಅಂಜುವುದಿಲ್ಲ. ಸರಕಾರದ ದೃಷ್ಟಿಬಿದ್ದರೆ ಪ್ರತಿಯೊಬ್ಬರೂ ಬಂಧನಕ್ಕೆ ಸಿದ್ಧರಿರಬೇಕು. ದಸ್ತಗಿರಿಯಾಗಬಾರದೆಂಬ ಮನೋಭಾವ ಬಿಟ್ಟು ಪ್ರತಿಯೊಬ್ಬರೂ ಬಂಧಿತರಾಗಲು ಎಲ್ಲ ನೇರವಾದ, ನೈತಿಕ, ಅವಶ್ಯ ಪ್ರಯತ್ನಗಳನ್ನೂ ಮಾಡಬೇಕು; ಇದು ನಮ್ಮ ಹೋರಾಟದ ಮೂಲತತ್ವ, ಬಂಧಿಸುವ ಸಂಭವವಿದ್ದರೂ ಬರುವುದೊಳ್ಳೆಯದೆಂದು ಪೋಲಕ್ ನಿರ್ಧರಿಸಿದರು.

ಒಂಭತ್ತನೇ ತಾರೀಖು ಸ್ಟಾಂಡರ್‌ಟನ್, ಗ್ರೇಲಿಂಗ್ ಸ್ಟಾಡ್ ಮಧ್ಯೆ ಟೀಕ್‌ವರ್ತ್‌ನಲ್ಲಿ ಪೋಲಕ್‌ರು ನಮ್ಮನ್ನು ಸೇರಿದರು. ನಾವಿಬ್ಬರೂ ಆಪ್ತಾಲೋಚನೆಯಲ್ಲಿದ್ದೆವು. ಸ್ವಲ್ಪದರಲ್ಲೇ ಪೂರೈಸುವುದರಲ್ಲಿತ್ತು. ಮಧ್ಯಾಹ್ನ ಮೂರು ಗಂಟೆ ಸಮಯ. ಪಡೆಯ ಮುಂದೆ ನಾನೂ ಪೋಲಕ್‌ರೂ ಅಡ್ಡಾಡುತ್ತ ಇದ್ದೆವು. ಕೆಲವರು ಸಹೋದ್ಯೋಗಿಗಳು ನಮ್ಮ ಮಾತು ಕೇಳುತ್ತಿದ್ದರು. ಪೋಲಕ್‌ರು ಡರ್ಬಾನ್‌ಗೆ ಹೋಗಿ ಸಂಜೆಗೆ ರೈಲನ್ನು ಹತ್ತಬೇಕಾಗಿತ್ತು. ಆದರೆ ಮಾನವ ಇಚ್ಛೆಯೇ ಒಂದು, ದೈವೇಚ್ಛೆಯೇ ಬೇರೊಂದು. ಪಟ್ಟಾಭಿಷೇಕದ ದಿನವೇ ರಾಮನು ಕಾಡಿಗೆ ಹೋಗಬೇಕಾಯಿತು. ನಾವು ಈ ರೀತಿ ಮಾತನಾಡುತ್ತಿರುವಾಗ ಒಂದು ಗಾಡಿ ಬಂದು, ನಮ್ಮ ಎದುರಿಗೆ ನಿಂತಿತು. ಟ್ರಾನ್ಸ್‌ವಾಲ್ ವಲಸೆಗಾರ ಅಧಿಕಾರಿಯಾದ ಚಮನಿಯೂ ಒಬ್ಬ ಪೋಲೀಸ್ ಅಧಿಕಾರಿಯೂ ಗಾಡಿಯಿಂದ ಇಳಿದರು. ನನ್ನನ್ನು ಪಕ್ಕಕ್ಕೆ ಕರೆದು ಅವರಲ್ಲೊಬ್ಬರು "ನಿನ್ನನ್ನು ದಸ್ತಗಿರಿ ಮಾಡುತ್ತೇನೆ" ಎಂದ.

ಈ ರೀತಿ ನಾಲ್ಕು ದಿನಗಳಲ್ಲಿ ಮೂರು ಬಾರಿ ಬಂಧನವಾಯಿತು.

"ಯಾತ್ರಿಕರನ್ನು ಏನು ಮಾಡುತ್ತೀರಿ?" ಎಂದು ಕೇಳಿದೆ.

"ಅದನ್ನು ನಾವು ನೋಡಿಕೊಳ್ಳುತ್ತೇವೆ" ಎಂದ.

ನಾನು ಮುಂದೇನೂ ಮಾತನಾಡಲಿಲ್ಲ. ಪೋಲಕ್‌ರಿಗೆ ನನ್ನ ಸ್ಥಾನದಲ್ಲಿ ನಿಂತು ಯಾತ್ರಿಕರೊಂದಿಗೆ ಹೊರಡಲು ತಿಳಿಸಿದೆ. ಯಾತ್ರಿಕರಿಗೆ ನನ್ನ ಬಂಧನದ ವಿಷಯ ತಿಳಿಸಲು ಮಾತ್ರ ಪೋಲೀಸ್ ಅಧಿಕಾರಿ ಅವಕಾಶಕೊಟ್ಟ, ಶಾಂತಿಯಿಂದಿರಬೇಕೆಂದು ಹೇಳುವಾಗಲೇ ಪೋಲೀಸ್ ಅಧಿಕಾರಿ ಅಡ್ಡಬಂದು "ಈಗ ನೀನು ಬಂದಿ. ಭಾಷಣ ಮಾಡಲು ಅವಕಾಶವಿಲ್ಲ" ಎಂದ. ನನ್ನ ಸ್ಥಿತಿ ಅರಿತುಕೊಂಡೆ. ಭಾಷಣ ಅನಾವಶ್ಯಕವಾಗಿತ್ತು. ನನ್ನ ಭಾಷಣ ನಿಲ್ಲಿಸಿದೊಡನೆ ಗಾಡಿಯವನನ್ನು ಕರೆದು ಅದಷ್ಟು ವೇಗದಿಂದ ಗಾಡಿಹೊಡೆಯಲು ಅಪ್ಪಣೆ ಮಾಡಿದ. ಒಂದು ನಿಮಿಷದಲ್ಲಿ ಯಾತ್ರಿಕರು ಕಣ್ಮರೆಯಾದರು.

ಆಗ ಪರಿಸ್ಥಿತಿಯೆಲ್ಲ ನನ್ನ ಹತೋಟಿಯಲ್ಲಿದೆಯೆಂದು ಆ ಅಧಿಕಾರಿಗೆ ಗೊತ್ತು. ಏಕೆಂದರೆ, ನಮ್ಮ ಅಹಿಂಸೆಯನ್ನು ನಂಬಿ ಆ ನಿರ್ಜನ ಬೆಂಗಾಡಿನಲ್ಲಿ ಎರಡು ಸಾವಿರ

ಭಾರತೀಯರ ಎದುರಿಗೆ ತಾನೊಬ್ಬನೇ ಬಂದಿದ್ದ. ಅಲ್ಲದೆ ಬರಹದ ಮೂಲಕ ಒಂದು ಸಮನ್ ಕಳುಹಿಸಿದ್ದರು ನಾನು ಬರುತ್ತಿದ್ದೆನೆಂದೂ ಆತನಿಗೆ ತಿಳಿದಿತ್ತು. ಪರಿಸ್ಥಿತಿ ಹೀಗಿದ್ದಾಗ ನಾನು ಬಂಧಿತನೆಂದು ಜ್ಞಾಪಿಸುವ ಅವಶ್ಯಕತೆಯೇ ಇರಲಿಲ್ಲ. ಆ ಯಾತ್ರಿಕರಿಗೆ ನಾನು ಹೇಳಬಹುದಾಗಿದ್ದ ನಾಲ್ಕು ಮಾತುಗಳಿಂದ ನಮಗೂ ಒಳ್ಳೆಯದಾಗುತ್ತಿತ್ತು. ಆದರೆ ತನ್ನ ಅಧಿಕಾರ ದರ್ಪ ತೋರಿಸಲು ಅವಕಾಶ ದೊರೆತಾಗ ಅಧಿಕಾರಿ ಸುಮ್ಮನಿದ್ದಾನೆಯೆ? ಎಷ್ಟೋ ಅಧಿಕಾರಿಗಳು ಈ ಮಹಾತ್ಮನಿಗಿಂತ ನಮ್ಮನ್ನು ಚನ್ನಾಗಿ ಅರಿತಿದ್ದರು. ಬಂಧನಕ್ಕೆ ನಾವು ಹೆದರುವುದಿಲ್ಲವೆಂದೂ ಬಂಧನವೇ ನಮಗೆ ಸ್ವಾತಂತ್ರ್ಯದ ಹೆದ್ದಾರಿ ಎಂದೂ ತಿಳಿದಿದ್ದರು. ಆದ್ದರಿಂದ ಅವಶ್ಯವಾದಷ್ಟು ಸ್ವಾತಂತ್ರ್ಯಯ ಕೊಡುತ್ತಿದ್ದರು. ಅನನುಕೂಲವಿಲ್ಲದೆ ಜಾಗ್ರತೆ ಬಂಧಿಸಲು ನಮ್ಮ ಸಹಾಯವನ್ನೇ ಪಡೆಯುತ್ತಿದ್ದರು. ಈ ಇಬ್ಬಗೆಯ ಸನ್ನಿವೇಶಗಳನ್ನೂ ಈ ಪುಟಗಳಲ್ಲಿ ಕಾಣಬಹುದು.

ನನ್ನನ್ನು ಗ್ರೇಲಿಂಗ್ ಸ್ಟಾಡ್ ಗೆ ಕರೆದುಕೊಂಡು ಹೋದರು. ಅಲ್ಲಿಂದ ಬಾಲ್ಫರ್ ಮಾರ್ಗವಾಗಿ ಹೀಡಲ್ ಬರ್ಗ್‌ಗೆ ಅಲ್ಲಿಯೇ ರಾತ್ರಿಯನ್ನು ಕಳೆದೆ.

ಪೋಲಕ್‌ರ ನಾಯಕತ್ವದಲ್ಲಿ ಯಾತ್ರಿಕರು ತಮ್ಮ ಪ್ರವಾಸ ಮುಂದುವರಿಸಿ ರಾತ್ರಿ ಗ್ರೇಲಿಂಗ್ ಸ್ಟಾಡ್‌ನಲ್ಲಿ ಇಳಿದರು. ಸೇಠ್ ಅಹಮದ್ ಮಹಮದ್ ಕಾಛಲಿಯಾ ಮತ್ತು ಸೇಠ್ ಅಹಮದ್ ಭಾಯಾತ್ ಅಲ್ಲಿ ಅವರನ್ನು ಭೆಟ್ಟಿಯಾದರು. ಯಾತ್ರಿಕರನ್ನೆಲ್ಲ ಬಂಧಿಸಲು ಸಿದ್ದತೆ ಪೂರ್ಣವಾದ ವಿಷಯ ಸೇಠರಿಗೆ ಗೊತ್ತಾಗಿತ್ತು. ಯಾತ್ರಿಕರನ್ನೆಲ್ಲ ಬಂಧಿಸಲು ಸಿದ್ದತೆ ಪೂರ್ಣವಾದ ವಿಷಯ ಸೇಠರಿಗೆ ಗೊತ್ತಾಗಿತ್ತು. ಯಾತ್ರಿಕರ ಬಂಧನವಾದ ಮೇಲೆ ತನ್ನ ಜವಾಬ್ದಾರಿ ಮುಗಿಯುವುದೆಂದೂ, ಒಂದು ದಿನ ತಡವಾದರೂ ಡರ್ಬಾನ್‌ಗೆ ಹೋಗಿ ಭಾರತಕ್ಕೆ ಹಡಗು ಹತ್ತಲು ಅವಕಾಶವಿದೆಯೆಂದೂ ಪೋಲಕ್‌ರು ಯೋಚಿಸಿದರು. ಆದರೆ ದೇವರ ಇಷ್ಟವೇ ಬೇರೆ. ೧೦ನೇ ತಾರೀಖಿನ ಬೆಳಿಗ್ಗೆ ೯ ಗಂಟೆಗೆ ಯಾತ್ರಿಕರು ಬಾಲ್ಫರ್ ಸೇರಿದರು. ಅವರನ್ನೆಲ್ಲ ಕರೆದೊಯ್ದು ನೇಟಾಲ್‌ಗೆ ಬಿಡಲು ಮೂರು ರೈಲುಗಾಡಿ ಸ್ಟೇಷನ್‌ನಲ್ಲಿ ನಿಂತಿದ್ದವು. ಯಾತ್ರಿಕರು ಸ್ವಲ್ಪ ಮೊಂಡಾಟ ಮಾಡಿದರು. ನನ್ನನ್ನು ಕರೆಸಬೇಕಾಗಿಯೂ, ಬಂಧನಕ್ಕೊಳಗಾಗಿ ರೈಲು ಹತ್ತಲು ನಾನು ಹೇಳಿದರೆ ಮಾತ್ರ ಒಪ್ಪುವುದಾಗಿಯೂ ಹಠಹಿಡಿದರು. ಈ ನಡತೆ ತಪ್ಪು. ಮೊಂಡಾಟ ಬಿಡದಿದ್ದರೆ ಅದುವರೆಗೆ ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಗುತ್ತಿತ್ತು. ನಮ್ಮ ಚಳುವಳಿಗೊಂದು ಬಲವಾದ ಪೆಟ್ಟು ತಗಲುತ್ತಿತ್ತು. ಅವರು ಸೆರೆಮನೆ ಸೇರಲು ನಾನೇಕೆ ಇರಬೇಕು? ಅಧಿಕಾರಿಗಳನ್ನು ನೇಮಿಸುವ ಹಕ್ಕು ತಮ್ಮದೆಂದೂ ಅಂಥ ಅಧಿಕಾರಿಗಳ ಮಾತು ಮಾತ್ರ ಕೇಳತಕ್ಕವರೆಂದೂ ಸೈನಿಕರು ಹೇಳುವದು ತಪ್ಪು. ಯಾತ್ರಿಕರ ಬಂಧನಕ್ಕೆ ಸಹಾಯ ಮಾಡಲು ಪೋಲಕ್ ಮತ್ತು ಕಾಛಲಿಯಾ ಸೇಠರ ಸಹಾಯ ಚಮನಿ ಕೋರಿದ. ಯಾತ್ರಿಕರಿಗೆ ಪರಿಸ್ಥಿತಿ ವಿವರಿಸಲು ಈ ಸ್ನೇಹಿತರಿಗೆ ಬಹು ಕಷ್ಟವಾಯಿತು. ಯಾತ್ರಿಕರ ಗುರಿಯೇ ಸೆರೆಮನೆಯೆಂದೂ ಸರಕಾರದವರೇ ಬಂಧಿಸಲು ಮುಂದೆ ಬಂದಾಗ ಸಂತೋಷದಿಂದ ಬಂಧನಕ್ಕೊಳಗಾಗಬೇಕೆಂದೂ ತಿಳಿಸಿದರು. ಸತ್ಯಾಗ್ರಹಿಗಳು ಈ ರೀತಿ ಮಾತ್ರ ತಮ್ಮ ಸತ್ವ ತೋರಿ ಸಂಗ್ರಾಮದಲ್ಲಿ ವಿಜಯಿಗಳಾಗಬಹುದು. ಬೇರೆ ಯಾವ ಕಾರ್ಯನೀತಿಯೂ ನನಗೆ ಒಪ್ಪಿಗೆ ಇಲ್ಲವೆಂದು ಅವರು ತಿಳಿಸಿದರು. ಕೊನೆಗೆ ಯಾತ್ರಿಕರು ಒಪ್ಪಿ ರೈಲು ಹತ್ತಿದರು.

ಪುನಃ ನನ್ನನ್ನು ನ್ಯಾಯಾಸ್ಥಾನದ ಮುಂದೆ ನಿಲ್ಲಿಸಿದರು. ಯಾತ್ರಿಕರಿಂದ ನನ್ನನ್ನು ಕರೆದೊಯ್ದ ಮೇಲೆ ನಡೆದ ವಿಷಯ ನನಗೆ ತಿಳಿಯದು. ಪುನಃ ಜಾಮೀನು ಮೇಲೆ ಬಿಡಲು ಕೇಳಿದೆ. ಎರಡು ನ್ಯಾಯಾಸ್ಥಾನಗಳಲ್ಲಿ ಜಾಮೀನು ದೊರೆತಿದೆ; ನಮ್ಮ ಸ್ಥಳ ಸೇರಲು ಬಹಳ ದೂರವಿಲ್ಲ ಎಂದು ತಿಳಿಸಿದೆ. ಸರಕಾರದವರು ಯಾತ್ರಿಕರನ್ನೂ ಬಂಧಿಸಬೇಕು; ಇಲ್ಲವಾದರೆ ಅವರನ್ನು ಸುರಕ್ಷಿತವಾಗಿ ಟಾಲ್‌ಸ್ಟಾಯ್ ಆಶ್ರಮ ಸೇರಿಸಲು ನನಗೆ ಅವಕಾಶ ಕೊಡಬೇಕು ಎಂದು ತಿಳಿಸಿದೆ. ನ್ಯಾಯಾಧೀಶನು ನನ್ನ ಬೇಡಿಕೆ ನಡೆಸಿಕೊಡಲಿಲ್ಲ. ಒಡನೆ ಸರಕಾರಕ್ಕೆ ಕಳುಹಿಸುವುದಾಗಿ ತಿಳಿಸಿದ. ಅವಧಿ ಕೂಲಿಗಾರರನ್ನು ನೇಟಾಲ್ ಪ್ರಾಂತಬಿಡಲು ಪ್ರೋತ್ಸಾಹಿಸಿದೆನೆಂಬ ಮುಖ್ಯ ಆಪಾದನೆ ಮಾಡಿ ನನ್ನ ಮೇಲೆ ದಂಡಿಯಲ್ಲಿ ಮೊಕದ್ದಮೆ ಹೂಡಿದ್ದರು. ದಂಡಿಯಿಂದ ಬಂದ ವಾರಂಟಿನಿಂದ ನನ್ನನ್ನು ಬಂಧಿಸಿದ್ದರಿಂದ ಅದೇ ದಿನ ರೈಲಿನಲ್ಲಿ ದಂಡಿಗೆ ಕರೆದುಕೊಂಡು ಹೋದರು.

ಪೋಲಕ್‌ರನ್ನು ಬ್ಯಾಲ್ಫರ್‌ನಲ್ಲಿ ದಸ್ತಗಿರಿ ಮಾಡಿದ್ದುದು ಒಂದೇ ಅಲ್ಲ, ಅಧಿಕಾರಿಗಳಿಗೆ ಕೊಟ್ಟ ಸಹಾಯಕ್ಕಾಗಿ ವಂದನೆ ಸಹ ಅರ್ಪಿಸಿದರು. ಸರಕಾರಕ್ಕೆ ಅವರನ್ನು ಬಂಧಿಸುವ ಇಷ್ಟವಿಲ್ಲವೆಂದು ಸಹ ಚಮನಿ ತಿಳಿಸಿದ. ಆದರೆ ಇದು ಚಮನಿಯ ಸ್ವಂತ ಅಭಿಪ್ರಾಯ. ಆ ಅಧಿಕಾರಿಗೆ ಆಗಿನ ಕಾಲಕ್ಕೆ ಗೊತ್ತಿದ್ದ ಸರಕಾರದ ಅಭಿಪ್ರಾಯ. ಸರಕಾರ ನಿಮಿಷ ನಿಮಿಷಕ್ಕೂ ತನ್ನ ಮನೋಭಾವ ಬದಲಾಯಿಸುತ್ತಿತ್ತು. ಕೊನೆಗೆ ಪೋಲಕ್‌ರಿಗೆ ಭಾರತಕ್ಕೆ ಹೊಗಲು ಅವಕಾಶ ಕೊಡಬಾರದೆಂದೂ ಭಾರತೀಯರ ಪರ ಬಹು ದಕ್ಷತೆಯಿಂದ ಕೆಲಸಮಾಡುತ್ತಿದ್ದ ಕಾಲೆನ್‌ಬಾಕ್‌ರನ್ನೂ ಬಂಧಿಸಿ ಈ ಇಬ್ಬರು ಸ್ನೇಹಿತರನ್ನೂ ವೊಲ್ಕ್‌ಸ್ರಸ್ಟ್ ಸೆರೆಮನೆಯಲ್ಲಿಟ್ಟರು.

೧೧ ನೇ ತಾರೀಖಿನ ದಿನ ದಂಡಿಯಲ್ಲಿ ವಿಚಾರಣೆ ನಡೆದು ನನಗೆ ೯ ತಿಂಗಳ ಸಶ್ರಮ ಶಿಕ್ಷೆ ಆಯಿತು. ಟ್ರಾನ್ಸ್‌ವಾಲ್ ಪ್ರವೇಶಮಾಡಬಾರದೆಂದು ನಿಷೇಧಿಲ್ಪಟ್ಟ ಜನರಿಗೆ ಸಹಾಯ ಮಾಡಿದೆನೆಂಬ ಆಪಾದನೆಯ ಮೇಲೆ ವೊಲ್ಕ್‌ಸ್ರಸ್ಟ್‌ನಲ್ಲಿ ಇನ್ನೊಂದು ವಿಚಾರಣೆ ಆಗಬೇಕಾಗಿತ್ತು. ಆದ್ದರಿಂದ ೧೩ನೇ ತಾರಿಖು ನನ್ನನ್ನು ದಂಡಿಯಿಂದ ವೊಲ್ಕ್‌ಸ್ರಸ್ಟ್‌ಗೆ ಕರೆದೊಯ್ದರು. ಅಲ್ಲಿ ಸೆರೆಮನೆಯಲ್ಲಿ ಕಾಲೆಕ್ ಬಾಕ್, ಪೋಲಕ್‌ರನ್ನು ನೋಡಿ ಆನಂದವಾಯಿತು.

೧೪ ನೇ ತಾರೀಖು ವೊಲ್ಕ್‌ಸ್ರಸ್ಟ್ ಕೋರ್ಟಿನ ಮುಂದೆ ನನ್ನ ವಿಚಾರಣೆ ನಡೆಯಿತು. ಕ್ರೋಮ್‌ಡಾಯ್‌ನಲ್ಲಿ ನಾನೇ ತಿಳಿಸಿದ ಸಾಕ್ಷಿಗಳ ವಿಚಾರಣೆಯಿಂದಲೇ ಮೊಕದ್ದಮೆ ತೀರ್ಮಾನವಾದುದು ಒಂದು ವಿಶೇಷ. ಪೋಲೀಸ್‌ನವರಿಗೆ ಸಾಕ್ಷಿ ದೊರಕಿಸುವುದು ಕಷ್ಟವಿತ್ತು. ಆದ್ದರಿಂದ ನನ್ನನ್ನೇ ಕೇಳಿದರು. ತಪ್ಪಿತಸ್ಥ ಎಂದು ಹೇಳಿದ ಮಾತ್ರದಿಂದ ಇಲ್ಲಿಯ ಕೊರ್ಟುಗಳಂತೆ ಅಲ್ಲಿ ಶಿಕ್ಷೆ ವಿಧಿಸುತ್ತಿರಲಿಲ್ಲ.

ನನ್ನ ಮೊಕದ್ದಮೆಯಲ್ಲೇನೋ ಈ ಏರ್ಪಾಟು ಸರಿಹೋಯಿತು. ಆದರೆ ಕಾಲೆನ್‌ಬಾಕ್ ಮತ್ತು ಪೋಲಕ್‌ರ ಮೇಲೆ ಸಾಕ್ಷಿ ನುಡಿಯುವವರು ಯಾರು? ಸಾಕ್ಷ್ಯ ಇಲ್ಲದೆ ಅವರ ಮೇಲಿನ ಆಪಾದನೆ ಸ್ಥಿರಪಡುವಂತೆ ಇಲ್ಲ; ಅವರಮೇಲೆ ಸಾಕ್ಷ್ಯ ಒದಗಿಸುವುದೂ ಕಷ್ಟವಾಗಿತ್ತು. ಯಾತ್ರಿಕರ ಸಂಗಡ ಇರಬಯಸಿದ್ದರಿಂದ ತಪ್ಪಿತಸ್ಥನೆಂದು ಒಪ್ಪಲು ಕಾಲೆನ್‌ಬಾಕ್ ನಿರ್ಧರಿಸಿದರು. ಪೋಲಕ್ ಭಾರತಕ್ಕೆ ಹೊರಡಬೇಕಾಗಿದ್ದುದರಿಂದ ಉದ್ದೇಶಪಟ್ಟು ಸೆರೆಮನೆ ಸೇರಲು ಇಷ್ಟವಿರಲಿಲ್ಲ. ನಾವು ಮೂರು ಜನರೂ ಸಮಾಲೋಚನೆ

ನಡೆಸಿ ಪೋಲಕ್ ತಪ್ಪಿತಸ್ಥರೇ ಅಲ್ಲವೆ ಎಂದು ನಮ್ಮಿಬ್ಬರನ್ನು ಕೇಳಿದರೆ ನಾವು ಇಲ್ಲ, ಹೌದು ಏನೂ ಹೇಳದೆ ಮೌನದಿಂದಿರಬೇಕೆಂದು ನಿರ್ಧರಿಸಿದೆವು.

ಕಾಲೆನ್‌ಬಾಕ್ ಮೇಲೆ ಸರಕಾರದ ಪರ ನಾನೇ ಸಾಕ್ಷಿಯಾದೆ. ಪೋಲಕ್ ಮೇಲೂ ಸಾಕ್ಷಿಯಾದೆ. ಈ ಮೊಕದ್ದಮೆಗಳು ಮುಂದುವರಿಸಲು ನಮಗೆ ಇಷ್ಟವಿರಲಿಲ್ಲ. ಒಂದೊಂದೇ ದಿನದಲ್ಲಿ ಮುಗಿದುಬಿಡುವಂತೆ ನೋಡಿಕೊಂಡೆವು. ನನ್ನ ಮೇಲಿನ ಮೊಕದ್ದಮೆ ೧೪ ರಲ್ಲಿ, ಕಾಲೆನ್‌ಬಾಕ್ ರದು ೧೫ ರಲ್ಲಿ, ಪೋಲಕ್ ರದು ೧೭ರಲ್ಲಿ ಮುಗಿದು ಮೂರು ಜನರಿಗೂ ಮೂರು ಮೂರು ತಿಂಗಳು ಶಿಕ್ಷೆಯಾಯಿತು. ವೊಲ್ಕ್ಸ್‌ರಸ್ಟ್ ಸೆರೆಮನೆಯಲ್ಲಿ ಈ ಮೂರು ತಿಂಗಳು ನಾವು ಮೂವರೂ ಒಟ್ಟಿಗೆ ಇರಬಹುದೆಂದು ಯೋಚಿಸಿದೆವು. ಆದರೆ ಸರಕಾರಕ್ಕೆ ಅದು ಇಷ್ಟವಿರಲಿಲ್ಲ.

ಈ ಮಧ್ಯೆ ಸ್ವಲ್ಪ ದಿನ ವೊಲ್ಕ್ಸ್‌ರಸ್ಟ್ ಸೆರೆಮನೆಯಲ್ಲಿ ಬಹಳ ಸುಖವಾಗಿದ್ದೆವು. ಪ್ರತಿದಿನವೂ ಹೊಸ ಬಂದಿಗಳು ಬಂದು ಹೊರಗೆ ನಡೆಯುತ್ತಿದ್ದ ಸಮಾಚಾರ ತರುತ್ತಿದ್ದರು. ಈ ಸತ್ಯಾಗ್ರಹಿ ಬಂದಿಗಳಲ್ಲಿ ಎಪ್ಪತ್ತೈದು ವರ್ಷದ ಹರಬತ್‌ಸಿಂಗ್ ಎಂಬ ಒಬ್ಬ ಮುದುಕನಿದ್ದ. ಹರಬತ್‌ಸಿಂಗ್ ಗಣಿ ಕೂಲಿಯಾಗಿರಲಿಲ್ಲ. ಅನೇಕ ವರ್ಷ ಮೊದಲೇ ತನ್ನ ಅವಧಿ ಮುಗಿಸಿದ್ದನಾದ್ದರಿಂದ ಮುಷ್ಕರಕಾರನಾಗಿರಲಿಲ್ಲ. ನನ್ನ ಬಂಧನದ ತರುವಾಯ ಭಾರತೀಯರಲ್ಲಿ ಅಸಾಧ್ಯ ಉತ್ಸಾಹ ತಲೆದೋರಿತು. ಅನೇಕರು ನೇಟಾಲ್‌ನಿಂದ ಟ್ರಾನ್ಸ್‌ವಾಲ್ ಗಡಿ ದಾಟಿ ಬಂಧನಕ್ಕೊಳಗಾದರು. ಹರಬತ್‌ಸಿಂಗ್ ಅಂತಹ ಒಬ್ಬ ಉತ್ಸಾಹಿ.

"ನೀನು ಯಾಕೆ ಸೆರೆಮನೆಗೆ ಬಂದೆ? ನಿನ್ನಂಥ ಮುದುಕರು ಸೆರೆಮನೆಗೆ ಬರಬೇಕೆಂದು ನಾನು ಹೇಳಿರಲಿಲ್ಲ" ಎಂದೆ.

"ನೀನು, ನಿನ್ನ ಹೆಂಡತಿ, ನಿನ್ನ ಮಕ್ಕಳು, ನಮಗೋಸ್ಕರ ಸೆರೆಮನೆ ಸೇರಿದಾಗ ನಾನು ಸುಮ್ಮನಿರುವುದು ಹೇಗೆ?" ಎಂದ ಆತ.

"ಸೆರೆಮನೆಯ ಕಷ್ಟ ಸಹಿಸಲು ನಿನಗೆ ಸಾಧ್ಯವಿಲ್ಲ. ಸೆರೆಮನೆಯಿಂದ ನೀನು ಬಿಡುಗಡೆಯಾಗಿ ಹೋಗಬೇಕೆಂದು ನನ್ನ ಇಷ್ಟ. ಅದಕ್ಕೆ ಏರ್ಪಾಡು ಮಾಡಲೆ?"

"ದಯವಿಟ್ಟು ಬೇಡ. ನಾನು ಎಂದಿಗೂ ಹೋಗುವುದಿಲ್ಲ. ಹೇಗೂ ಸದ್ಯದಲ್ಲೇ ಸಾಯಬೇಕು. ಸೆರೆಮನೆಯಲ್ಲೇ ಸತ್ತರೆ ನನಗೆ ಎಷ್ಟೋ ಸಂತೋಷ." ಎಂದ.

ಈ ಬಗೆಯ ದೃಢಮನಸ್ಸನ್ನು ಮುರಿಯುವುದು ಉಚಿತವೆನಿಸಲಿಲ್ಲ. ಪ್ರಯತ್ನಮಾಡಿದರೂ ಸಾಧ್ಯವಾಗುತ್ತಿರಲಿಲ್ಲ. ಈ ವಿದ್ಯಾವಿಹೀನ ತಪಸ್ವಿಯ ಎದುರು ನಾನು ನಮ್ರನಾಗಿ ತಲೆಬಾಗಿದೆ. ಹರಬತ್‌ಸಿಂಗ್ ನ ಇಷ್ಟ ನೆರವೇರಿತು; ೧೯೧೪ ಜನವರಿ ೫ ರಲ್ಲಿ ಡರ್ಬಾನ್ ಸೆರೆಮನೆಯಲ್ಲೇ ಆತ ಪ್ರಾಣ ಬಿಟ್ಟ. ನೂರಾರು ಜನ ಭಾರತೀಯರ ಎದುರಿನಲ್ಲಿ ಹಿಂದೂ ಪದ್ಧತಿಯಂತೆ ಆತನಿಗೆ ಶವಸಂಸ್ಕಾರ ಮಾಡಲಾಯಿತು. ಸತ್ಯಾಗ್ರಹ ಸಂಗ್ರಾಮದಲ್ಲಿ ಇಂಥ ಹರಬತ್‌ಸಿಂಗ ಒಬ್ಬನಲ್ಲ, ಅನೇಕರಿದ್ದರು. ಆದರೆ ಸೆರೆಮನೆಯಲ್ಲಿ ಪ್ರಾಣ ಬಿಡುವದು ಮಾತ್ರ ಆತನ ಪಾಲಿಗೆ ಕಾದಿತ್ತು. ಆದ್ದರಿಂದ ದಕ್ಷಿಣ ಆಫ್ರಿಕ ಸತ್ಯಾಗ್ರಹದ ಚರಿತ್ರೆಯಲ್ಲಿ ಆತನಿಗೆ ಉನ್ನತ ಸ್ಥಾನ ದೊರೆತಿದೆ.

ಈ ರೀತಿ ಜನರು ಸೆರೆಮನೆಗೆ ಹೋಗಲು ಉತ್ಸಾಹಿಗಳಾಗುವುದು ಸರಕಾರಕ್ಕೆ ಇಷ್ಟವಿರಲಿಲ್ಲ. ಸೆರೆಮನೆಯಿಂದ ಬಿಡುಗಡೆಯಾದವರು ನನ್ನ ಸಂದೇಶವನ್ನು ಹೊರಗೆ ಸಾರುವುದೂ ಸರಿಬೀಳಲಿಲ್ಲ. ಆದ್ದರಿಂದ ಕಾಲೆನ್‌ಬಾಕ್, ಪೋಲಕ್ ರನ್ನೂ ಪ್ರತ್ಯೇಕಿಸಿ ವೊಲ್ಕ್ಸ್‌ರಸ್ಟ್‌ನಿಂದ ಬೇರೆ ಕಡೆ ಸಾಗಿಸಲು ನಿರ್ಧರಿಸಿತು. ನನ್ನನ್ನಂತೂ ಯಾವ ಭಾರತೀಯನೂ ಬಂದು ನೋಡಲಾಗದ ಸ್ಥಳಕ್ಕೆ ಕರೆದೊಯ್ಯೇಕೆಂದು ತೀರ್ಮಾನಿಸಿದರು. ಆದ್ದರಿಂದ ಆರೇಂಜಿಯಾ ರಾಜಧಾನಿಯಾದ ಬ್ಲೂಮ್ ಫಾಂಟೇನ್ ಸೆರೆಮನೆಗೆ ನನ್ನನ್ನು ಕಳುಹಿಸಿದರು. ಆರೆಂಜಿಯಾದಲ್ಲಿ ಇದ್ದವರೆಲ್ಲ ೫೦ ಮಂದಿ ಭಾರತೀಯರು. ಅವರೆಲ್ಲ ಹೊಟೆಲ್ ನೌಕರರು. ಆ ಸೆರೆಮನೆಯಲ್ಲಿ ನಾನೊಬ್ಬನೇ ಭಾರತೀಯ ಕೈದಿ; ಉಳಿದವರೆಲ್ಲ ಯೂರೋಪಿಯನ್‌ರು, ನೀಗ್ರೋಗಳೂ. ಈ ಏಕಾಂತವಾಸದಿಂದ ನನಗೇನೂ ತೊಂದರೆ ಆಗಲಿಲ್ಲ; ಅನುಕೂಲವೇ ಆಯಿತು. ನನ್ನ ಕಣ್ಣು ಕಿವಿ ತೆರೆದಿಡಬೇಕಾದ ಅವಶ್ಯಕತೆ ತಪ್ಪಿತು. ಈ ಹೊಸ ಅನುಭವ ದೊರೆತುದಕ್ಕೆ ಹರ್ಷಚಿತ್ತನಾದೆ. ೧೮೯೩ ರಿಂದ ಅನೇಕ ವರ್ಷ ನನಗೆ ಓದಲು ಅವಕಾಶವೇ ದೊರೆತಿರಲಿಲ್ಲ. ಈಗ ಒಂದು ವರ್ಷವಾದರೂ ನಿರಾಂತಕವಾಗಿ ಅಭ್ಯಾಸ ಮಾಡಬಹುದೆಂದು ಸಂತೋಷಭರಿತನಾದೆ.

ಬ್ಲೂಮ್ ಫಾಂಟೇನ್ ಸೆರೆಮನೆ ಸೇರಿದೊಡನೆ ಮನ ದಣಿಯುವಷ್ಟು ಶಾಂತಿ ದೊರೆಯಿತು. ಅನೇಕ ತೊಂದರೆಗಳಿದ್ದರೂ ಸಹಿಸಲು ಕಷ್ಟವಾಗಲಿಲ್ಲ. ಅವನ್ನೆಲ್ಲ ವಿವರಿಸಿ ಬೇಸರ ಮಾಡುವುದಿಲ್ಲ. ಆದರೆ ಸೆರೆಮನೆಯ ವೈದ್ಯಾಧಿಕಾರಿ ನನ್ನ ಸ್ನೇಹಿತನಾದ. ಸೆರೆಮನೆ ಅಧಿಕಾರಿಗೆ ತನ್ನ ಅಧಿಕಾರದರ್ಪದ ಯೋಚನೆಯೊಂದೇ. ಆದರೆ ವೈದ್ಯಾಧಿಕಾರಿ ಬಂದಿಗಳ ಹಕ್ಕು ರಕ್ಷಿಸಿ ಅವರನ್ನು ಸುಖವಾಗಿರಿಸಲು ಆಸಕ್ತನಾಗಿದ್ದ. ಆಗ ನಾನು ಹಣ್ಣು ಮಾತ್ರ ತೆಗೆದುಕೊಳ್ಳುತ್ತಿದ್ದೆ. ಹಾಲು, ತುಪ್ಪ, ಧಾನ್ಯ ಯಾವುದನ್ನೂ ಮುಟ್ಟುತ್ತಿರಲಿಲ್ಲ. ಬಾಳೆಹಣ್ಣು, ಟೊಮೊಟೊ, ನೆಲಗಡಲೆ (ಹಸಿ), ನಿಂಬೆಹಣ್ಣು, ಹಿಪ್ಪೆ ಎಣ್ಣೆಗಳಿಂದ ಜೀವಿಸುತ್ತಿದ್ದೆ. ಇವುಗಳಲ್ಲಿ ಯಾವುದು ಚೆನ್ನಾಗಿಲ್ಲದಿದ್ದರೂ ಉಪವಾಸವೇ ಗತಿ. ಅದೆಲ್ಲವನ್ನೂ ತರಿಸಿಕೊಡಲೇಬೇಕೆಂದು ವೈದ್ಯಾಧಿಕಾರಿ ಆಜ್ಞೆ ಮಾಡಿದ. ಜೊತೆಯಲ್ಲಿ ಬಾದಾಮಿ, ಅಕ್ರೋಡು, (ವಾಲ್ ನಟ್) ಮತ್ತು ಬ್ರೆಜಿಲ್ ಬಾದಾಮಿ ಸೇರಿಸಿದ. ನನಗೆ ಬರುತ್ತಿದ್ದ ಪ್ರತಿಯೊಂದು ಸಾಮಾನನ್ನೂ ಸ್ವತಃ ಪರೀಕ್ಷಿಸುತ್ತಿದ್ದ. ನನಗೆ ಕೊಟ್ಟ ಕೊಠಡಿಯಲ್ಲಿ ತಕ್ಕಷ್ಟು ಬೆಳಕು ಗಾಳಿ ಇರಲಿಲ್ಲ. ಬಾಗಿಲು ತೆರೆದಾಡಿಸಲು ಆತ ಎಷ್ಟು ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಬಾಗಿಲು ತೆಗಿಸಿದರೆ ತಾನು ರಾಜೀನಾಮೆ ಕೊಡುವುದಾಗಿ ಸೆರೆಮನೆಯ ಅಧಿಕಾರಿ ಹಠ ಹಿಡಿದ. ಆತನೇನು ಕೆಡುಕನಲ್ಲ. ಆದರೆ ಪಟ್ಟು ಹಿಡಿದನೆಂದರೆ ಕದಲಿಸುವುದು ಬಹು ಕಷ್ಟ. ಎಷ್ಟೋ ಜನ ಪುಂಡು ಕೈದಿಗಳನ್ನೂ ಆತ ನೋಡಿಕೊಳ್ಳಬೇಕಾಗಿತ್ತು. ನನ್ನಂಥ ಸೌಮ್ಯ ಕೈದಿಗೆ ರಿಯಾಯಿತಿ ತೋರಿಸಿದರೆ ತುಂಟ ಕೈದಿಗಳು ತನ್ನ ಮೇಲೆ ದಂಗೆ ಏಳಬಹುದೆಂದು ಹೆದರಿದ. ಆತನ ಕಷ್ಟ ನಮಗೂ ಅರ್ಥವಾಯಿತು. ನನ್ನ ವಿಷಯದಲ್ಲಿ ಸೆರೆಮನೆ ಅಧಿಕಾರಿಗೂ ವೈದ್ಯಾಧಿಕಾರಿಗೂ ಬಿನ್ನಾಭಿಪ್ರಾಯ ಬಂದಾಗ ನನ್ನ ಸಹಾನುಭೂತಿ ಯಾವಾಗಲೂ ಅನುಭವಸ್ಥನೂ ನಿರ್ದಾಕ್ಷಿಣ್ಯ ಸ್ವಭಾವದವನೂ ಕರ್ತವ್ಯನಿಷ್ಠನೂ ಆದ ಸೆರೆಮನೆ ಅಧಿಕಾರಿಯ ಕಡೆಗೇ ಇತ್ತು.

ಕಾಲೆನ್‌ಬಾಕ್‌ರನ್ನು ಪ್ರೆಟೋರಿಯಾ ಸೆರೆಮನೆಗೂ, ಪೋಲಕ್‌ರನ್ನು ಜರ್ಮಿಸ್ಟನ್ ಸೆರೆಮನೆಗೂ ಕರೆದೊಯ್ದರು.

ಆದರೆ ಸರಕಾರ ಇಷ್ಟಪಟ್ಟಿದ್ದರೆ ಈ ಎಲ್ಲ ಕಷ್ಟವನ್ನೂ ತಪ್ಪಿಸಿಕೊಳ್ಳಬಹುದಾಗಿತ್ತು. ಸರಕಾರದ ಪ್ರಯತ್ನವೆಲ್ಲ ಕೈಯಲ್ಲಿ ಪೊರಕೆ ಹಿಡಿದು ಸಮುದ್ರವನ್ನು ಹಿಂದಕ್ಕೆ ಗುಡಿಸಲು ಪ್ರಯತ್ನಪಟ್ಟ ಅಡಗೂಲಜ್ಜಿಯ ಕಥೆಯಂತೆ ಆಯಿತು. ನೇಟಾಲ್ ಕೂಲಿಗಾರರೆಲ್ಲ ಎಚ್ಚತ್ತರು. ಜಗತ್ತಿನ ಯಾವ ಶಕ್ತಿಯೂ ಅವರನ್ನೂ ತಡೆಯಲಾಗಲಿಲ್ಲ.

೪೬. ಒರೆಗಲ್ಲು

ಅಕ್ಕಸಾಲಿಗನು ಬಂಗಾರವನ್ನು ತಿಕ್ಕುತ್ತಾನೆ. ಚೊಕ್ಕವಲ್ಲವೆಂದು ಕಂಡರೆ ಪುಟಕ್ಕೆ ಹಾಕಿ ಬಡಿದು, ಕಸರು ಸುಟ್ಟು ಶುದ್ಧವಾದ ಚಿನ್ನ ತೆಗೆಯುತ್ತಾನೆ. ದಕ್ಷಿಣ ಆಪ್ರಿಕದ ಭಾರತೀಯರಿಗೆ ಇಂಥ ಪರೀಕ್ಷಾ ಸಮಯ ಒದಗಿತು. ಅವರಿಗೂ ಏಟು ಬಿದ್ದವು, ಅಗ್ನಿ ಪ್ರವೇಶವಾಯಿತು. ಸತ್ವಪರೀಕ್ಷೆಯ ಎಲ್ಲ ಘಟ್ಟಗಳಲ್ಲೂ ಉತ್ತೀರ್ಣರಾದ ಮೇಲೆಯೇ ಪ್ರಾಶಸ್ತ್ಯ ದೊರೆತದ್ದು.

ಯಾತ್ರಿಕರನ್ನು ಸ್ಪೆಷಲ್ ರೈಲುಗಳಲ್ಲಿ ಕರೆದುಕೊಂಡು ಹೋದದ್ದು ಊಟಕ್ಕಲ್ಲ; ಅಗ್ನಿಪರೀಕ್ಷೆಗೆ. ಸರಕಾರ ಅವರಿಗೆ ದಾರಿಯಲ್ಲಿ ಊಟಕ್ಕೂ ಏರ್ಪಾಟು ಮಾಡಲಿಲ್ಲ. ನೇಟಾಲ್‌ಗೆ ಹೋದೊಡನೆ ಮೊಕದ್ದಮೆ ಹೂಡಿ ನೇರವಾಗಿ ಸೆರೆಮನೆಗೆ ಕಳುಹಿಸಿದರು. ನಾವು ಬಯಸಿದ್ದೂ ಅದೇ, ಆದರೆ ಸರಕಾರಕ್ಕೆ ಈಗ ಹೆಚ್ಚು ಹಣ ವೆಚ್ಚ. ಸಾವಿರಾರು ಜನ ಕೂಲಿಗಾರರನ್ನು ಸೆರೆಮನೆಯಲ್ಲಿಟ್ಟರೆ ಭಾರತೀಯರ ಉದ್ದೇಶ ನೆರವೇರುವುದು. ಈ ಮಧ್ಯೆ ಕಲ್ಲಿದ್ದಲು ಗಣಿಗಳನ್ನೆಲ್ಲ ಮುಚ್ಚಬೇಕಾಗುವುದು. ಸ್ವಲ್ಪ ದಿನ ಇದೇ ರೀತಿ ನಡೆದರೆ ಸರಕಾರ ತಲೆ ಗಂದಾಯ ತೆಗೆದುಹಾಕಲೇಬೇಕು. ಆದ್ದರಿಂದ ಹೊಸ ಉಪಾಯ ಹುಡುಕಿದರು. ಕಲ್ಲಿದ್ದಲು ಗಣಿ ಆವರಣಕ್ಕೆ ಮುಳ್ಳುತಂತಿ ಬೇಲಿ ಹಾಕಿ ಆ ಸ್ಥಳ ದಂಡಿ, ನ್ಯೂಕ್ಯಾಸಲ್ ಸೆರೆಮನೆಗಳ ವಿಸ್ತರಣಗಳೆಂದು ಸಾರಿ, ಗಣಿಗಳ ಮಾಲಿಕರ ಯೂರೋಪಿಯನ್ ನೌಕರರನ್ನೆ ಸೆರೆಮನೆ ನೌಕರರನ್ನಾಗಿ ಸರಕಾರ ನೇಮಕ ಮಾಡಿತು. ಈ ರೀತಿ ಕೂಲಿಗಾರರಿಂದ ಬಲಾತ್ಕಾರವಾಗಿ ಗಣಿಗಳಲ್ಲಿ ಕೆಲಸ ಮಾಡಿಸಲು ಆರಂಭಿಸಿದರು. ಸೇವಕನಿಗೂ ಗುಲಾಮನಿಗೂ ಒಂದು ವ್ಯತ್ಯಾಸವಿದೆ. ಸೇವಕ ಕೆಲಸಕ್ಕೆ ಬಾರದೆಹೋದರೆ ಆತನ ಮೇಲೆ ದಾವೆ ಮಾಡಬಹುದು; ಗುಲಾಮ ಕೆಲಸಬಿಟ್ಟರೆ ಬಲಾತ್ಕಾರದಿಂದ ಹಿಂದಕ್ಕೆ ಕರೆತರಬಹುದು. ಕೂಲಿಗಾರರ ಪರಿಸ್ಥಿತಿ ಶುದ್ಧ ಗುಲಾಮಗಿರಿಯಾಯಿತು.

ಆದರೆ ಅಷ್ಟರಿಂದ ಅವರ ಬೇಳೆ ಏನೂ ಬೇಯಲಿಲ್ಲ. ಕೂಲಿಗಾರರು ಗಣಿಗಳಲ್ಲಿ ಕೆಲಸ ಮಾಡಲು ನಿರಾಕರಿಸಿದರು. ಬಾರಕೋಲಿನ ಏಟು ತಿನ್ನಬೇಕಾಯಿತು. ಅಲ್ಪಾಧಿಕಾರಮದೋನ್ಮತ್ತರಾದ ಅಧಿಕಾರಿಗಳು ಅವರನ್ನು ಒದ್ದು ಬೈದು, ಅಮಾನುಷ ದೌರ್ಜನ್ಯ ನಡೆಸಿದರು. ಬಡ ಕೂಲಿಗಾರರು ತಾಳ್ಮೆಯಿಂದ ಈ ಎಲ್ಲ ಸಂಕಟವನ್ನೂ ಸಹಿಸಿದರು. ಈ ದೌರ್ಜನ್ಯ ಕೃತ್ಯಗಳ ವಿಚಾರವಾಗಿ ಗೋಖಲೆಯವರಿಗೆ ಭಾರತಕ್ಕೆ ಕೇಬಲ್ ಹೋದವು. ಒಂದು ದಿನ ಸುದ್ದಿಯ ಪೂರ್ಣ ವಿವರ ಬರುವುದು ತಡವಾದರೆ ಅವರೇ ಕೇಬಲ್ ಮಾಡುತ್ತಿದ್ದರು. ಕಾಹಿಲೆಯಾದಾಗಲೂ ದಕ್ಷಿಣ ಆಫ್ರಿಕದ ಪ್ರಶ್ನೆಗೆ

ತಾವೇ ಗಮನ ಕೊಡುವುದಾಗಿ ಹಠಹಿಡಿದಿದ್ದರು. ಹಗಲೂ ರಾತ್ರಿ ದುಡಿಯುತ್ತಿದ್ದರು. ಕೊನೆ ಕೊನೆಗೆ ಇಡೀ ಭಾರತವೇ ಎಚ್ಚತ್ತು, ದಕ್ಷಿಣ ಆಫ್ರಿಕದ ಪ್ರಶ್ನೆ ಅಂದಿನ ಮುಖ್ಯ ಪ್ರಶ್ನೆಯಾಯಿತು.

ಆಗಲೇ–೧೯೧೩ ಡಿಸೆಂಬರ್‌ನಲ್ಲಿ–ಲಾರ್ಡ ಹಾರ್ಡಿಂಜ್ ಮದ್ರಾಸಿನಲ್ಲಿ ಮಾಡಿದ ಭಾಷಣದಿಂದ ದಕ್ಷಿಣ ಆಫ್ರಿಕದಲ್ಲೂ ಇಂಗ್ಲಂಡಿನಲ್ಲೂ ಬಹಳ ಪರಿಣಾಮವಾಯಿತು. ಸಾಮ್ರಾಜ್ಯದ ಇತರ ಸದಸ್ಯರನ್ನು ವೈಸ್ ರಾಯ್ ಟೀಕಿಸದೆ ಇರಬಹುದು. ಆದರೆ ಲಾರ್ಡ್ ಹಾರ್ಡಿಂಜ್ ಯೂನಿಯನ್ ಸರಕಾರವನ್ನು ಕಟುವಾಗಿ ಟೀಕಿಸಿದ್ದಲ್ಲದೆ ಸತ್ಯಾಗ್ರಹಿಗಳ ನಡತೆಗೆ ಸಂಪೂರ್ಣ ಸಮರ್ಥನೆ ಕೊಟ್ಟು, ವರ್ಣಭೇದದ ಅನ್ಯಾಯದ ಶಾಸನವನ್ನು ಎದುರಿಸಲು ಹೂಡಿದ ಶಾಸನಭಂಗ ಚಳುವಳಿಗೆ ಸಮ್ಮತಿ ವ್ಯಕ್ತಗೊಳಿಸಿದರು. ಹಾರ್ಡಿಂಜ್‌ರನ್ನು ಇಂಗ್ಲಂಡ್‌ನಲ್ಲಿ ವಿರೋಧಿಸಿ ಟೀಕೆ ಮಾಡಿದರು. ಕಾರ್ಯಕ್ರಮ ಅನಿವಾರ್ಯವಾಯಿತೆಂದೂ ಅದೇ ನ್ಯಾಯಮಾರ್ಗವೆಂದೂ ಹಾರ್ಡಿಂಜ್ ಸಮರ್ಥನೆ ಮಾಡಿದರು. ಹಾರ್ಡಿಂಜರ ದೃಢನಿಶ್ಚಯ ಎಲ್ಲ ಕಡೆಗೂ ಸತ್ಪರಿಣಾಮಮಾಡಿತು.

ಗಣಿಗಳಲ್ಲಿ ಬಂಧಿಸಲ್ಪಟ್ಟ ಈ ಅದೃಷ್ಟಹೀನ ಕೂಲಿಗಾರ ವೀರರನ್ನು ಸ್ವಲ್ಪ ಮರೆತು ನೇಟಾಲ್‌ನ ಇತರ ಕಡೆಯ ಪರಿಸ್ಥಿತಿ ಗಮನಿಸೋಣ. ಗಣಿಗಳಿರುವುದು ನೇಟಾಲ್‌ನ ವಾಯುವ್ಯ ಪ್ರಾಂತ್ಯದಲ್ಲಿ. ಭಾರತೀಯ ಕೂಲಿಗಾರರು ಹೆಚ್ಚಾಗಿ ಕೆಲಸಮಾಡುತ್ತಿದ್ದುದು ಉತ್ತರ ದಕ್ಷಿಣ ತೀರ ಪ್ರದೇಶಗಳಲ್ಲಿ. ಉತ್ತರ ತೀರದ ಕೆಲಸಗಾರರೆಲ್ಲ ನನಗೆ ಪರಿಚಿತರು. ಫೀನಿಕ್ಸ್, ವೆರೂಲಮ್, ಟೊಂಗಾಟ್ ಸುತ್ತಲಿನ ಜನರಲ್ಲಿ ಅನೇಕರು ಬೋಅರ್ ಯುದ್ಧದಲ್ಲಿ ನನ್ನೊಂದಿಗೆ ಕೆಲಸ ಮಾಡಿದ್ದರು. ದಕ್ಷಿಣ ತೀರದಲ್ಲಿ ಡರ್ಬಾನ್‌ನಿಂದ ಇಸಿಪಿಂಜೊ, ಉಮ್ ಜಿಂಟೊ ವರೆಗಿನ ಕೆಲಸಗಾರರ ಪೂರ್ಣ ಪರಿಚಯವಿರಲಿಲ್ಲ. ಹಲಕೆಲವರು ಸಹೋದ್ಯೋಗಿಗಳು ಇದ್ದರು. ಆದರೆ ಮುಷ್ಕರ, ದಸ್ತಗಿರಿಗಳ ಸುದ್ದಿ ಮಿಂಚುವೇಗದಿಂದ ಎಲ್ಲ ಕಡೆಗೂ ಹರಡಿತು. ಉತ್ತರ ದಕ್ಷಿಣ ತೀರಗಳೆರಡರಲ್ಲೂ ಸಾವಿರಾರು ಜನ ಕೂಲಿಗಾರರು ಅನಿರೀಕ್ಷಿತವಾಗಿ, ಸ್ವಯಂ ಪ್ರೇರಿತರಾಗಿ ಹೊರ ಹೊರಟರು. ಅನೇಕ ದಿನ ಹೋರಾಡಬೇಕಾಗಬಹುದೆಂದೂ, ಇತರರು ತಮಗೆ ಅನ್ನ ಬಟ್ಟೆ ಕೊಡಲಾರರೆಂದೂ ತಿಳಿದು ಕೆಲವರು ತಮ್ಮ ಮನೆ ಸಾಮಾನೆಲ್ಲ ಮಾರಿದರು. ನಾನು ಸೆರೆಮನೆಗೆ ಹೋಗುವಾಗ ಇನ್ನು ಹೆಚ್ಚು ಜನ ಕೂಲಿಗಾರರಿಗೆ ಮುಷ್ಕರ ಹಿಡಿಯಲು ಅವಕಾಶ ಕೊಟ್ಟರೆ ಅಪಾಯವೆಂದು ಎಚ್ಚರ ಕೊಟ್ಟಿದ್ದೆ. ಗಣಿ ಕೆಲಸಗಾರರ ಸಹಾಯದಿಂದ ಮಾತ್ರ ವಿಜಯಗಳಿಸಬಹುದೆಂದು ಯೋಚಿಸಿದ್ದೆ. ಎಲ್ಲ ಕೂಲಿಗಾರರೂ–ಸುಮಾರು ೬೦,೦೦೦ ಇದ್ದರು–ಹೊರಗೆ ಬಂದರೆ ಅವರನ್ನು ಕಾಪಾಡುವುದು ಕಷ್ಟ. ಅಷ್ಟು ಜನರನ್ನು ದಂಡ ಯಾತ್ರೆ ಕರೆದೊಯ್ಯುವುದೂ ಸಾಧ್ಯವಿರಲಿಲ್ಲ. ಅವರನ್ನು ನೋಡಿಕೊಳ್ಳಲು ಜನರೂ, ಅವರಿಗೆ ಊಟಕ್ಕೆ ಹಣವೂ ಇರಲಿಲ್ಲ. ಅಲ್ಲದೆ ಅಷ್ಟು ದೊಡ್ಡ ಜನ ಸಮುದಾಯದಲ್ಲಿ ಶಾಂತಿಭಂಗವಾಗದಂತೆ ನೋಡಿಕೊಳ್ಳುವುದೂ ಕಷ್ಟ.

ಆದರೆ ಪ್ರವಾಹ ಉಕ್ಕೇರುತ್ತಿರುವಾಗ ಅಡ್ಡಗಟ್ಟಲು ಯತ್ನಿಸುವುದು ಮೂರ್ಖತನ. ಕೂಲಿಗಾರರು ಎಲ್ಲ ಕಡೆಗಳಲ್ಲೂ ತಮ್ಮಷ್ಟಕ್ಕೆ ತಾವೇ ಮುಷ್ಕರ ಹಿಡಿದರು. ಅಲ್ಲಲ್ಲೆ ಸ್ವಯಂಸೇವಕರು ಅವರ ಯೋಗಕ್ಷೇಮ ನೋಡಿಕೊಳ್ಳಲು ನಿಂತುಕೊಂಡರು.

ಸರಕಾರ ಈಗ ರಾಕ್ಷಸೀ ಮನೋಭಾವ ತಾಳಿತು. ಕೂಲಿಗಾರರು ಮುಷ್ಕರ ಹಿಡಿಯದಂತೆ ಬಲಪ್ರಯೋಗ ಮಾಡತೊಡಗಿತು. ಸಶಸ್ತ್ರ ಪೋಲೀಸ್ ಸವಾರರು ಕೂಲಿಗಾರರನ್ನು ಬೆನ್ನಟ್ಟಿ ಹೋಗಿ ಕೆಲಸಕ್ಕೆ ಹಿಂದಿರುಗಲು ಬಲಾತ್ಕರಿಸಿದರು. ಕೂಲಿಗಾರರು ಸ್ವಲ್ಪ ಗಲಭೆ ಮಾಡಿದರೆ ಬಂದೂಕು ಹಾರಿಸುತ್ತಿದ್ದರು. ಒಂದು ಕೆಲಸಗಾರರ ಗುಂಪು ತಮ್ಮನ್ನು ಹಿಂದಿರುಗಿಸಲು ಮಾಡಿದ ಪ್ರಯತ್ನವನ್ನು ಪ್ರತಿಭಟಿಸಿತು. ಕೆಲವರು ಕಲ್ಲೆಸೆದರು, ಅವರ ಮೇಲೆ ಗುಂಡಿನ ಸುರಿ ಮಳೆಯಾಯಿತು. ಕೆಲವರು ಸತ್ತರು; ಅನೇಕರು ಗಾಯಗೊಂಡರು. ಆದರೂ ಕೂಲಿಗಾರರು ಜಗ್ಗಲಿಲ್ಲ. ಸ್ವಯಂ ಸೇವಕರು ವೆರೂಲಮ್ ಬಳಿ ಬಹು ಕಷ್ಟದಿಂದ ಒಂದು ಮುಷ್ಕರ ತಪ್ಪಿಸಿದರು. ಆದರೂ ಎಲ್ಲ ಕೂಲಿಗಾರರೂ ಹಿಂದಿರುಗಲಿಲ್ಲ. ಕೆಲವರು ಹೆದರಿ ಅಡಗಿಕೊಂಡರು; ಇನ್ನು ಕೆಲವರು ಹಿಂದಿರುಗಲಿಲ್ಲ.

ಇನ್ನೊಂದು ಸಂಗತಿ ಇಲ್ಲಿ ತಿಳಿಸುವುದು ಅವಶ್ಯಕ. ವೆರೂಲಮ್‌ನಲ್ಲಿ ಅನೇಕ ಕೂಲಿಗಾರರು ಮುಷ್ಕರ ಹಿಡಿದು ಹೊರಗೆ ಬಂದರು. ಅಧಿಕಾರಿಗಳು ಏನೇ ಪ್ರಯತ್ನ ಮಾಡಿದರೂ ಹಿಂದಿರುಗಲಿಲ್ಲ. ಜನರಲ್ ಲೂಕಿನ್ ಸೈನಿಕರೊಂದಿಗೆ ಸಿದ್ಧನಾಗಿ ಗುಂಡುಹಾರಿಸಲು ಆಜ್ಞೆ ಮಾಡುವುದರಲ್ಲಿದ್ದ. ದಿವಂಗತ ಪಾರ್ಸಿ ರುಸ್ತುಂಜಿಯ ಮಗ ಹದಿನೆಂಟು ವರ್ಷದ ಧೀರ ಸೋಹರಾಬ್ಜಿ ಆಗ ತಾನೆ ಡರ್ಬಾನ್‌ನಿಂದ ಅಲ್ಲಿಗೆ ಬಂದಿದ್ದ. ಆತನು ಜನರಲ್ ಲೂಕಿನ್‌ನ ಕುದುರೆ ಕಡಿವಾಣ ಹಿಡಿದು "ಗುಂಡುಹಾರಿಸಲು ಆಜ್ಞೆ ಮಾಡಬೇಡಿ. ಶಾಂತಿಯಿಂದ ಕೆಲಸಕ್ಕೆ ಹಿಂದಿರುಗಲು ನಮ್ಮ ಜನರಿಗೆ ಬುದ್ಧಿವಾದ ಹೇಳುತ್ತೇನೆ" ಎಂದ ಯುವಕನ ಧೈರ್ಯಕ್ಕೆ ಜನರಲ್ ಲೂಕಿನ್ ಮುಗ್ಧನಾಗಿ ಆತನ ಪ್ರೇಮ ಸತ್ವ ಪರೀಕ್ಷೆಗೆ ಅವಕಾಶ ಕೊಟ್ಟ. ಸೊಹರಾಬ್ಜಿ ಕೂಲಿಗಾರರೊಂದಿಗೆ ಚರ್ಚೆಮಾಡಿ ಕೆಲಸಕ್ಕೆ ಹಿಂದಿರುಗಲು ಸಮ್ಮತಿಸುವಂತೆ ಮಾಡಿದ.

ಈ ರೀತಿ ಗುಂಡು ಹಾರಿಸಿದ್ದೂ, ಕೂಲಿಗಾರರನ್ನು ಸರಕಾರ ಹಿಂಸಿಸಿದ್ದೂ ನ್ಯಾಯಸಮ್ಮತವಿರಲಿಲ್ಲ. ಮುಷ್ಕರವಿಷಯ ಬಿಟ್ಟು ರಹದಾರಿ ಇಲ್ಲದೆ ಟ್ರಾನ್ಸ್‌ವಾಲ್ ಪ್ರವೇಶ ಮಾಡಿದರೆಂದು ಗಣಿ ಕೆಲಸಗಾರರನ್ನು ಬಂಧಿಸಿದ್ದಕ್ಕೆ ಏನೋ ಒಂದು ನ್ಯಾಯಸಮ್ಮತ ಸ್ವರೂಪ ಕೊಡಲು ಸರಕಾರಕ್ಕೆ ಅವಕಾಶವಿತ್ತು. ಉತ್ತರ ದಕ್ಷಿಣ ತೀರಗಳಲ್ಲಿ ಮುಷ್ಕರ ಹಿಡಿದ ಮಾತ್ರಕ್ಕೆ ಶಾಸನ ಸಮ್ಮತಿಯಿಲ್ಲದೆ ಬರೀ ಒಂದು ಆಜ್ಞೆಯಿಂದ ಅದೇ ಒಂದು ಅಪರಾಧವಾಯಿತು. ಕೊನೆಕೊನೆಗೆ ಅಧಿಕಾರವೇ ಶಾಸನಗಳ ಸ್ಥಾನವನ್ನಾಕ್ರಮಿಸುತ್ತದೆ. 'ದೊರೆ ಮಾಡಿದ್ದು ತಪ್ಪಲ್ಲ' ಎಂದು ಇಂಗ್ಲಿಷ್ ಶಾಸನದ ಒಂದು ವಿಧಿಯಿದೆ. ಅಂತ್ಯದಲ್ಲಿ ಅಧಿಕಾರಮತ್ತರ ಇಷ್ಟವೇ ಶಾಸನ. ಈ ಕೆಡಕು ಎಲ್ಲ ಸರಕಾರಗಳಲ್ಲೂ ಇದ್ದೇ ಇದೆ. ಒಂದೊಂದು ವೇಳೆ ಸಾಮಾನ್ಯ ಶಾಸನಕ್ಕೆ ಕಚ್ಚಿಕೊಂಡು ಕುಳಿತುಕೊಳ್ಳುವುದೇ ವಿಪತ್ಕಾರಕ. ಜನತೆಯ ಕಲ್ಯಾಣಕ್ಕಾಗಿ ಜವಾಬ್ದಾರಿ ಹೊತ್ತು ಅಧಿಕಾರ ತೊಟ್ಟ ಸರಕಾರಕ್ಕೆ, ತನಗಿರುವ ಬಂಧನಗಳಿಂದಲೇ ವಿಪತ್ತು ಒದಗಿದಾಗ ವಿವೇಚನೆಯಿಂದ ಆ ಬಂಧನವನ್ನು ನಿರ್ಲಕ್ಷಿಸಲು ಅಧಿಕಾರವಿದೆ. ಆದರೆ ಅದು ವಿಶೇಷ ಸಂದರ್ಭಗಳಲ್ಲಿ ಮಾತ್ರ. ಪದೇ ಪದೇ ಆ ರೀತಿ ಶಾಸನ ಮೀರಿದರೆ ಆ ಸರಕಾರ ಎಂದಿಗೂ ಜನತೆಯ ಮಂಗಳವನ್ನು ಸಾಧಿಸಲಾರದು. ಈ ಸಂದರ್ಭದಲ್ಲಿ ಸ್ವೇಚ್ಛಾವರ್ತನೆಗೆ ಯಾವ ಕಾರಣವೂ ಇರಲಿಲ್ಲ. ಮುಷ್ಕರ ಹಿಡಿಯುವುದು ಕೂಲಿಗಾರನಿಗೆ ಶತಮಾನಗಳಿಂದ ಬಂದ ಆಜನ್ಮಸಿದ್ಧ ಹಕ್ಕು. ಕೆಡಕು ಮಾಡುವ ಉದ್ದೇಶ ಕೂಲಿಗಾರರಿಗೆ ಇರಲಿಲ್ಲವೆಂದು ಮನಗಾಣಲು

ಬೇಕಾದಷ್ಟು ಪ್ರತ್ಯಕ್ಷ ಸಾಕ್ಷ್ಯವಿತ್ತು. ಹೆಚ್ಚಿನ ಪರಿಣಾಮವೆಂದರೆ ಮೂರು ಪೌಂಡು ತಲೆಗಂದಾಯ ತೆಗೆದುಹಾಕಬೇಕಾಗಿತ್ತು. ಶಾಂತಿಯುತ ಜನರ ಮೇಲೆ ಶಾಂತಿ ಪ್ರಯೋಗವೆ ನ್ಯಾಯ. ಅಲ್ಲದೆ ದಕ್ಷಿಣ ಆಫ್ರಿಕದ ಸರಕಾರ ಸಾರ್ವಜನಿಕರ ಹಿತರಕ್ಷಣೆ ಮಾಡದೆ ಸಾಮಾನ್ಯವಾಗಿ ಭಾರತೀಯ ವಿರೋಧಿಗಳಾದ ಯೂರೋಪಿಯನ್‌ರ ಸ್ವಂತ ಲಾಭಕ್ಕಾಗಿಯೆ ಅಧಿಕಾರ ನಡೆಸುತ್ತಿತ್ತು. ಆದ್ದರಿಂದ ಇಂಥ ಪಕ್ಷಪಾತಿ ಸರಕಾರ ಶಾಸನಗಳ ಹದ್ದು ಮೀರಿ ನಡೆದದ್ದು ಅನ್ಯಾಯ, ಅಕ್ಷಮ್ಯ.

ನನ್ನ ದೃಷ್ಟಿಯಲ್ಲಿ ಇದು ಅಧಿಕಾರದ ದುರುಪಯೋಗ. ಈ ನಡತೆಯಿಂದ ಸರಕಾರ ಎಂದಿಗೂ ತನ್ನ ಇಷ್ಟಾರ್ಥವನ್ನು ಸಾಧಿಸಿಕೊಳ್ಳಲಾರದು. ಕೆಲವು ವೇಳೆ ತಾತ್ಕಾಲಿಕ ಲಾಭ ದೊರೆತರೂ ಈ ಬಗೆಯ ನಿಂದಾರ್ಹ ಪದ್ಧತಿಗಳಿಂದ ಶಾಶ್ವತ ಪರಿಹಾರ ಎಂದಿಗೂ ದೊರೆಯದು. ಯಾವುದನ್ನು ಸಮರ್ಥಿಸಲು ದಕ್ಷಿಣ ಆಫ್ರಿಕದ ಸರಕಾರ ಈ ಎಲ್ಲ ಕ್ರೂರ ದಬ್ಬಾಳಿಕೆ ನಡೆಸಿತೋ ಅದೇ ಸರಕಾರ ಗುಂಡಿನೇಟು ಹೊಡೆದ ಆರು ತಿಂಗಳಲ್ಲೇ ಆ ಮೂರು ಪೌಂಡು ತಲೆಗಂದಾಯ ತೆಗೆದುಹಾಕಬೇಕಾಯಿತು. ದುಃಖದ ಹಿಂದೆಯೇ ಸುಖ ಸಿದ್ಧ. ದಕ್ಷಿಣ ಆಫ್ರಿಕದ ಭಾರತೀಯರ ನೋವಿನ ಕೂಗು ಮೂಲೆಮೂಲೆಗಳಲ್ಲೂ ಪ್ರತಿಧ್ವನಿಸಿತು. ಒಂದು ಯಂತ್ರದಲ್ಲಿ ಪ್ರತಿಯೊಂದು ಭಾಗವೂ ತನ್ನ ತನ್ನ ಕೆಲಸಮಾಡಬೇಕಾದಂತೆ ಜನರ ಪ್ರತಿ ಚಳುವಳಿಯಲ್ಲೂ ಅನೇಕ ಮುಖಗಳಿವೆ. ತುಕ್ಕು ಧೂಳು ಹಿಡಿದು ಯಂತ್ರ ಮೂಲೆಗೆ ಬೀಳುವಂತೆ ಚಳುವಳಿ ವಿಫಲವಾಗುವದಕ್ಕೂ ಅನೇಕ ಕಾರಣಗಳಿವೆ. ದೈವನಿಯಾಮಕದಲ್ಲಿ ನಾವು ಕೇವಲ ಯಂತ್ರ ಮಾತ್ರ. ಯಾವ ಹೆಜ್ಜೆ ನಮ್ಮನ್ನು ಮುಂದಕ್ಕೆ ಒಯ್ಯುತ್ತದೆಯೋ ಯಾವುದು ಹಿಂದಕ್ಕೆ ತಳ್ಳುತ್ತದೆಯೋ ನಮಗೆ ತಿಳಿಯದು. ಆದ್ದರಿಂದ ನಮ್ಮ ದಾರಿಯ ಅರಿವಿನಿಂದಲೆ ನಾವು ತೃಪ್ತರಾಗಬೇಕು. ಮಾರ್ಗವೊಂದು ಪರಿಶುದ್ಧವಾಗಿದ್ದರೆ ಪರಿಣಾಮವನ್ನು ಅದರ ಪಾಡಿಗೆ ಬಿಟ್ಟು ಧೈರ್ಯದಿಂದಿರಬಹುದು.

ಸತ್ಯಾಗ್ರಹಿಗಳ ಸಂಕಟ ಅಧಿಕವಾದಂತೆ, ನೊಂದವರ ನಿರಪರಾಧ ವ್ಯಕ್ತವಾದಂತೆ ಹೋರಾಟದ ಮುಕ್ತಾಯ ಸಮೀಪಿಸಿದ್ದುದು ನನಗೆ ವ್ಯಕ್ತವಾಯಿತು. ಇಂಥ ಪರಿಶುದ್ಧ ನಿಶ್ಯಸ್ತ್ರ ಅಹಿಂಸಾಯುದ್ಧಕ್ಕೆ ಅವಶ್ಯವಾದ ಸಾಮಗ್ರಿ–ಜನ,ಧನ. ಎಂಥ ಸಾಮಗ್ರಿಯೆ ಆಗಲಿ ಕಾಲಕ್ಕೆ ಸರಿಯಾಗಿ ಹೇಗೋ ಒದಗುತ್ತದೆ ಎಂದು ಗೊತ್ತಾಯಿತು. ಸ್ವಯಂ ಸೇವಕರು ಅನೇಕರು ಸ್ವಯಂ ಪ್ರೇರಿತರಾಗಿ ಬಂದು ಕೆಲಸಮಾಡಿದರು; ಅವರು ಯಾರೆಂಬುದು ಈಗಲೂ ನನಗೆ ತಿಳಿಯದು. ಅವರೆಲ್ಲ ಸಾಮಾನ್ಯವಾಗಿ ನಿಸ್ವಾರ್ಥಿಗಳು. ಇಷ್ಟವಿಲ್ಲದಿದ್ದರೂ ಹೇಗೋ ಬಂದು, ಕಂಡೂ ಕಾಣದೆ ಸೇವೆಮಾಡುತ್ತಾರೆ. ಯಾರೂ ಅವರನ್ನು ಗಮನಿಸುವುದಿಲ್ಲ; ಯಾರೂ ಅವರಿಗೆ ಪ್ರಶಸ್ತಿ ಕೊಡುವದಿಲ್ಲ. ಆದರೆ ಅವರ ಅಮೂಲ್ಯ, ಅಲಕ್ಷಿತ ಪ್ರೇಮಸೇವೆ ಅನಿಮಿಷನಾದ ಧರ್ಮಾವತಾರನ ದೃಷ್ಟಿಯಿಂದ ಮಾತ್ರ ತಪ್ಪಿಸಿಕೊಳ್ಳಲಾರದೆಂದು ಸಹ ಅನೇಕರು ತಿಳಿಯರು.

ದಕ್ಷಿಣ ಆಫ್ರಿಕದ ಭಾರತೀಯರು ತಮ್ಮ ಸತ್ವ ಪರೀಕ್ಷೆಯಲ್ಲಿ ಗೆದ್ದರು. ಅಗ್ನಿ ಪ್ರವೇಶ ಮಾಡಿ ನಿರ್ಮಲ ತೇಜಸ್ಸಿನಿಂದ ಹೊರಗೆ ಬಂದರು. ಮುಕ್ತಾಯದ ಪ್ರಾರಂಭವನ್ನು ಮುಂದೆ ವಿವರಿಸುತ್ತೇನೆ.

೪೭. ಮುಕ್ತಾಯದ ಮೊದಲು

ಭಾರತೀಯರು ಅದಷ್ಟು ಸಂಯಮಶಕ್ತಿ ತೋರಿದುದೂ, ನಿರೀಕ್ಷೆಗಿಂತ ಅಧಿಕವಾಗಿ ತೋರಿದುದೂ ಓದುಗರಿಗೆ ಗೊತ್ತಿದೆ. ಅವರಲ್ಲನೇಕರು ಕಡು ಬಡವರಾಗಿ ಗುಲಾಮಗಿರಿಯಲ್ಲಿದ್ದರು; ಅವರಿಂದ ಏನೂ ಅಪೇಕ್ಷಿಸುವಂತಿರಲಿಲ್ಲ. ಫೀನಿಕ್ಸ್ ಆಶ್ರಮದ ಕೆಲಸಗಾರರಲ್ಲಿ ಇಬ್ಬರು ಮೂವರು ಹೊರತು ಉಳಿದ ಪ್ರಮುಖ ವ್ಯಕ್ತಿಗಳೆಲ್ಲ ಸೆರೆಮನೆ ಸೇರಿದ್ದರು. ಫೀನಿಕ್ಸ್ ಕೆಲಸಗಾರರಲ್ಲದೆ ದಿವಂಗತ ಸೇಠ್ ಅಹಮದ್ ಕಾಛಲಿಯಾ ಇನ್ನೂ ಸ್ವತಂತ್ರರಾಗಿದ್ದರು. ಫೀನಿಕ್ಸ್‌ನಲ್ಲಿ ವೆಸ್ಟ್, ಕುಮಾರಿ ವೆಸ್ಟ್, ಮಗನಲಾಲ ಗಾಂಧೀ ಇವರ ಬಂಧನವಾಗಿರಲಿಲ್ಲ. ಕಾಛಲಿಯಾ ಸೇಠ್ ಸಾರ್ವತ್ರಿಕವಾಗಿ ಎಲ್ಲಾ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಕುಮಾರಿ ಶ್ಲೇಜಿನ್ ಟ್ರಾನ್ಸ್‌ವಾಲ್ ಲೆಕ್ಕ ಪತ್ರಗಳನ್ನಿಟ್ಟು ಗಡಿ ದಾಟಿದ ಭಾರತೀಯರ ಯೋಗಕ್ಷೇಮ ನೋಡುತ್ತಿದ್ದಳು. ವೆಸ್ಟ್, "ಇಂಡಿಯನ್ ಓಪಿನಿಯನ್" ಮುದ್ರಿಸುತ್ತ ಗೋಖಲೆಯವರ ಕೇಬಲ್ ವ್ಯವಹಾರ ನೋಡುತ್ತಿದ್ದರು. ಪ್ರತಿ ನಿಮಿಷದಲ್ಲೂ ಪರಿಸ್ಥಿತಿ ಹೊಸ ರೂಪ ತಾಳುತ್ತಿದ್ದ ಈ ಕಾಲದಲ್ಲಿ ಟಪಾಲು ಮೂಲಕ ಪತ್ರವ್ಯವಹಾರ ಸಾಧ್ಯವಿರಲಿಲ್ಲ. ಕೇಬಲ್ ಮೂಲಕವೇ ವ್ಯವಹಾರ ನಡೆಸಬೇಕಾಗಿತ್ತು. ಒಂದೊಂದು ವೇಳೆ ಕಾಗದದಷ್ಟೆ ದೀರ್ಘವಾಗಿರಬೇಕಾಗಿತ್ತು ಕೇಬಲ್. ಈ ಜವಾಬ್ದಾರಿಯೆಲ್ಲ ವೆಸ್ಟರದಾಗಿತ್ತು.

ಗಣಿ ಪ್ರಾಂತದಲ್ಲಿ ನ್ಯೂಕ್ಯಾಸಲ್ ಇದ್ದಂತೆ, ಉತ್ತರ ತೀರದ ಕೂಲಿಗಾರರಿಗೆ ಫೀನಿಕ್ಸ್ ಕೇಂದ್ರವಾಯಿತು. ನೂರಾರು ಜನ ಸಲಹೆಗೂ, ವಾಸಕ್ಕೂ ಬರುತ್ತಿದ್ದರು. ಸ್ವಾಭಾವಿಕವಾಗಿ ಸರಕಾರದ ದೃಷ್ಟಿ ಅದರ ಮೇಲೆ ಬಿತ್ತು. ಯೂರೋಪಿಯನ್‌ರೂ ತಮ್ಮ ವಕ್ರದೃಷ್ಟಿ ಬೀರಿದರು. ಫೀನಿಕ್ಸ್‌ನಲ್ಲಿರುವುದೇ ಗಂಡಾಂತರವಾಯಿತು. ಆದರೂ ಸಣ್ಣ ಮಕ್ಕಳು ಕೂಡ ಅಸಾಧಾರಣ ಧೈರ್ಯದಿಂದ ಅನೇಕ ಅಪಾಯಕರ ಸಾಹಸ ಮಾಡುತ್ತಿದ್ದರು. ಈ ಮಧ್ಯೆ ಬಂಧಿಸಲು ನ್ಯಾಯವಾದ ಕಾರಣ ಇಲ್ಲದಿದ್ದರೂ ವೆಸ್ಟ್‌ರ ಬಂಧನವಾಯಿತು. ವೆಸ್ಟ್‌ರೂ ಮಗನ್‌ಲಾಲ್ ಗಾಂಧಿಯೂ ಬಂಧನಕ್ಕಾಗಿ ಪ್ರಯತ್ನ ಮಾಡಬಾರದೆಂದೂ ಬಂಧನಕ್ಕೆ ಅವಕಾಶಕೊಡದಂತೆ ಜಾಗರೂಕರಾಗಿರಬೇಕೆಂದೂ ನಿರ್ಧರಿಸಿದ್ದೆವು. ತಮ್ಮನ್ನು ಬಂಧಿಸಲು ಸರಕಾರಕ್ಕೆ ಯಾವ ಅವಕಾಶವೂ ದೊರೆಯದಂತೆ ವೆಸ್ಟ್ ವರ್ತಿಸಿದ್ದರು. ಆದರೆ ಸರಕಾರವು ಸತ್ಯಾಗ್ರಹಿಗಳ ಅನುಕೂಲ ಅನನುಕೂಲವನ್ನು ಗಮನಿಸುತ್ತದೆಯೆ? ಯಾರ ಸ್ವಾತಂತ್ರ್ಯ ಸರಕಾರದ ಕಣ್ಣಿಗೆ ಅಸಹನೀಯವೊ ಅವರನ್ನು ಬಂಧಿಸಲು ಕಾರಣಕ್ಕಾಗಿ ಕಾದಿರಬೇಕೆ? ಬಂಧಿಸಬೇಕೆಂಬ ಇಷ್ಟ, ಇದೊಂದೇ ಕಾರಣ ಸಾಕು. ವೆಸ್ಟ್‌ರ ಬಂಧನದ ವಿಷಯ ಕೇಬಲ್ ಮೂಲಕ ಭಾರತಕ್ಕೆ ತಿಳಿದ ಕೂಡಲೆ ಗೋಖಲೆಯವರು ಭಾರತದಿಂದ ಕೆಲವು ದಕ್ಷರಾದ ವ್ಯಕ್ತಿಗಳನ್ನು ಕಳುಹಿಸಲು ಪ್ರಯತ್ನ ಮಾಡಿದರು. ದಕ್ಷಿಣ ಆಫ್ರಿಕಾದ ಸತ್ಯಾಗ್ರಹವನ್ನು ಪ್ರೋತ್ಸಾಹಿಸಲು ಲಾಹೋರಿನಲ್ಲಿ ಸೇರಿದ ಸಭೆಯೊಂದರಲ್ಲಿ ಸಿ.ಎಫ್.ಆಂಡ್ರೂಸರು ತಮ್ಮ ಹಣವನ್ನೆಲ್ಲ ಸತ್ಯಾಗ್ರಹದ ಸಹಾಯಾರ್ಥ ಕೊಟ್ಟರು ಅಂದಿನಿಂದಲೂ ಗೋಖಲೆಯವರಿಗೆ ಅವರ ಮೇಲೆ ಕಣ್ಣು. ವೆಸ್ಟ್‌ರ ಸುದ್ದಿ ತಿಳಿದೊಡನೆ ಆ ಕ್ಷಣವೇ ದಕ್ಷಿಣ ಆಫ್ರಿಕಕ್ಕೆ ಹೊರಡುತ್ತೀರಾ ಎಂದು ತಂತಿಮೂಲಕ ಆಂಡ್ರೂಸರನ್ನು ಕೇಳಿದರು. ಆಂಡ್ರೂಸರು ಆಗಬಹುದೆಂದು

ಉತ್ತರಕೊಟ್ಟರು. ಅವರ ಪರಮಮಿತ್ರರಾದ ಪಿಯರ್ಸನ್‌ರೂ ಆಗಲೇ ಅವರೊಂದಿಗೆ ಹೊರಡಲನುವಾದರು. ಮೊದಲು ದೊರೆತ ಹಡಗಿನಲ್ಲಿ ಈ ಸ್ನೇಹಿತರಿಬ್ಬರೂ ಭಾರತದಿಂದ ದಕ್ಷಿಣ ಆಫ್ರಿಕಕ್ಕೆ ಹೊರಟರು.

ಇಷ್ಟು ಹೊತ್ತಿಗೆ ನಮ್ಮ ಹೋರಾಟವೂ ಮುಗಿಯುವದರಲ್ಲಿತ್ತು. ಸಾವಿರಾರು ನಿರಪರಾಧಿಗಳನ್ನು ಸೆರೆಮನೆಯಲ್ಲಿಡಲು ಯೂನಿಯನ್ ಸರಕಾರಕ್ಕೆ ಶಕ್ತಿ ಇರಲಿಲ್ಲ. ವೈಸರಾಯರ ಸಹನೆ ಮೀರುತ್ತಿತ್ತು. ಜನರಲ್ ಸ್ಮಟ್ಸ್ ಈಗೇನು ಮಾಡುತ್ತಾನೆಂದು ಇಡೀ ಪ್ರಪಂಚವೇ ಎದುರು ನೋಡುತ್ತಿತ್ತು. ಇಂಥ ಇಕ್ಕಟ್ಟಿಗೆ ಸಿಕ್ಕಾಗ ಉಳಿದೆಲ್ಲ ಸರಕಾರಗಳ ವರ್ತನೆಯಂತೆಯೇ ಯೂನಿಯನ್ ಸರಕಾರವೂ ವರ್ತಿಸಿತು. ಯಾವ ವಿಚಾರಣೆಯೂ ಬೇಕಿರಲಿಲ್ಲ. ನಮ್ಮ ಮೇಲೆ ಹೊರಿಸಿದ್ದ ಅನ್ಯಾಯ ಸರ್ವವೇದ್ಯವಾಗಿತ್ತು; ಪರಿಹಾರ ಅವಶ್ಯವೆಂದು ಎಲ್ಲರೂ ಮನಗಂಡಿದ್ದರು. ಈ ಅನ್ಯಾಯ ನಿವಾರಣೆಯಾಗಬೇಕೆಂದು ಜನರಲ್ ಸ್ಮಟ್ಸ್‌ಗೂ ಮನವರಿಕೆಯಾಗಿತ್ತು. ಆದರೆ ಅವನ ಸ್ಥಿತಿ ಇಲಿ ತಿಂದ ಹಾವಿನಂತೆ; ನುಂಗಲಾರ, ಉಗುಳಲಾರ. ನ್ಯಾಯದಾನವಾಗಬೇಕು; ಆದರೆ ನ್ಯಾಯ ದೊರಕಿಸಲು ಶಕ್ತಿ ಇಲ್ಲದವನಾಗಿದ್ದ. ಏಕೆಂದರೆ, ಮೂರು ಪೌಂಡು ತಲೆಗಂದಾಯ ತೆಗೆದುಹಾಕುವದಿಲ್ಲವೆಂದೂ, ಬೇರೆ ಯಾವ ಸುಧಾರಣೆಯನ್ನೂ ಆಚರಣೆಗೆ ತರುವುದಿಲ್ಲವೆಂದೂ ದಕ್ಷಿಣ ಆಫ್ರಿಕದ ಯೂರೋಪಿಯನ್‌ರಿಗೆ ಭರವಸೆ ಕೊಟ್ಟಿದ್ದ. ಈಗ ಆ ತೆರಿಗೆ ತೆಗೆದುಹಾಕುವುದೂ ಪರಿಹಾರಶಾಸನ ಕೈಗೊಳ್ಳುವುದೂ ಅನಿವಾರ್ಯವಾಯಿತು. ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆಕೊಡತಕ್ಕ ಸರಕಾರಗಳೆಲ್ಲ ಇಂಥ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಒಂದೊಂದು ಸಮಿತಿಯನ್ನು ಏರ್ಪಾಟು ಮಾಡುತ್ತವೆ. ಆ ಸಮಿತಿಗಳು ಕೊಡಬೇಕಾದ ಸಲಹೆ ಮೊದಲೇ ನಿರ್ಧಾರವಾಗಿರುವುದರಿಂದ ನೆಪ ಮಾತ್ರ ವಿಚಾರಣೆ. ಆ ಸಲಹೆಗಳನ್ನು ಸರಕಾರ ಸಾಧಾರಣವಾಗಿ ಒಪ್ಪುತ್ತದೆ; ಮೊದಲು ನಿರಾಕರಿಸಿದ ಪರಿಹಾರಗಳನ್ನೆ ಸರಕಾರಗಳು ಈ ಮೂಲಕ ಒದಗಿಸಿಕೊಡುತ್ತವೆ. ಜನರಲ್ ಸ್ಮಟ್ಸ್ ಮೂವರ ಸಮಿತಿಯೊಂದು ನೇಮಿಸಿದ. ಭಾರತೀಯರ ಬೇಡಿಕೆಗಳನ್ನು ಸರಕಾರ ಒಪ್ಪುವವರೆಗೂ ಭಾರತೀಯರು ಈ ಸಮಿತಿಯೊಂದಿಗೆ ಸಹಕರಿಸಲಾಗದೆಂದು ನಿರ್ಧರಿಸಿದರು. ಸತ್ಯಾಗ್ರಹಿಗಳ ಬಿಡುಗಡೆ ಮೊದಲನೆ ಬೇಡಿಕೆ; ಸಮಿತಿಯಲ್ಲಿ ಕೊನೆಯ ಪಕ್ಷ ಒಬ್ಬ ಭಾರತೀಯನಾದರೂ ಇರಬೇಕೆಂದು ಎರಡನೆಯ ಬೇಡಿಕೆ. ಸ್ವಲ್ಪ ಮಟ್ಟಿಗೆ ಸಮಿತಿಯವರೇ ನಮ್ಮ ಮೊದಲನೆ ಬೇಡಿಕೆ ಒಪ್ಪಿ ಕೂಲಂಕಷ ವಿಚಾರಣೆ ನಡೆಸಲು ಕಾಲೆನ್ ಬಾಕ್, ಪೋಲಕ್‌ರನ್ನೂ, ನನ್ನನ್ನೂ ಯಾವ ಷರತ್ತೂ ಇಲ್ಲದೆ ಬಿಡುಗಡೆ ಮಾಡಬೇಕೆಂದು ಸರಕಾರಕ್ಕೆ ಸೂಚನೆ ಕೊಟ್ಟರು. ಸರಕಾರವು ಈ ಸಲಹೆಗೆ ಒಪ್ಪಿ ನಮ್ಮ ಬಂಧನವಾದ ಆರು ವಾರದೊಳಗೇ ೧೯೧೩ ನೇ ಡಿಸೆಂಬರ್ ೧೮ ರಲ್ಲಿ ಮೂವರನ್ನೂ ಒಟ್ಟಿಗೆ ಬಿಡುಗಡೆಮಾಡಿತು. ವೆಸ್ಟ್ ರನ್ನು ಬಂಧನದಲ್ಲಿಡಲು ಯಾವ ಕಾರಣವೂ ಇಲ್ಲದ್ದರಿಂದ ಅವರ ಬಿಡುಗಡೆಯಾಗಾಯಿತು.

ಇದೆಲ್ಲ ಆಂಡ್ರೂಸ್, ಪಿಯರ್‌ಸನ್ ಬರುವ ಮುಂಚೆಯೇ ನಡೆದದ್ದರಿಂದ ಹಡಗಿಳಿಯುವಾಗ ಅವರನ್ನು ಡರ್ಬಾನ್‌ನಲ್ಲಿ ಸ್ವಾಗತಿಸಲು ಸಾಧ್ಯವಾಯಿತು. ಅವರ ಪ್ರಯಾಣಕಾಲದಲ್ಲಿ ನಡೆದ ಸಂಗತಿ ಅವರಿಗೆ ತಿಳಿದಿರಲಿಲ್ಲ. ಆದ್ದರಿಂದ ನಮ್ಮನ್ನು

ಕಂಡು ಅವರೂ ಚಕಿತರಾದರು. ಈ ಆಂಗ್ಲ ಮಹನೀಯರನ್ನು ನಾನು ನೋಡಿದ್ದು ಇದೇ ಮೊದಲು.

ನಮ್ಮ ಬಿಡುಗಡೆಯಿಂದ ನಮಗೆ ಮೂವರಿಗೂ ಬಹಳ ಅಸಮಧಾನವಾಯಿತು. ಹೊರಗಿನ ಸುದ್ದಿ ಯಾವುದೂ ತಿಳಿದಿರಲಿಲ್ಲ. ಸಮಿತಿಯ ನೇಮಕದ ವಿಚಾರ ನಮಗೆ ಆಶ್ಚರ್ಯವುಂಟು ಮಾಡಿತು. ಯಾವ ರೂಪದಲ್ಲೂ ಅವರೊಡನೆ ಸಹಕರಿಸಲು ಸಾಧ್ಯವಿಲ್ಲವೆಂದು ವ್ಯಕ್ತವಾಯಿತು. ಸಮಿತಿಯ ಸದಸ್ಯನಾಗಿ ಒಬ್ಬ ಭಾರತೀಯನನ್ನಾದರೂ ನೇಮಿಸುವ ಅಧಿಕಾರವನ್ನು ಭಾರತೀಯರಿಗೆ ಕೊಡಬೇಕಾದ್ದು ಅವಶ್ಯವೆನಿಸಿತು. ಆದ್ದರಿಂದ ನಾವು ಮೂವರೂ ಡರ್ಬಾನ್ ಸೇರಿದೊಡನೆ ೧೯೧೩ ಡಿಸೆಂಬರ್ ೨೧ ರಲ್ಲಿ ಈ ರೀತಿ ಪತ್ರ ಬರೆದೆವು:

"ಸಮಿತಿಯ ನೇಮಕವನ್ನು ನಾವು ಸ್ವಾಗತಿಸುತ್ತೇವೆ. ಆದರೆ ಎಸ್ಸೆಲೆನ್, ವೈಲಿಯವರನ್ನು ಸದಸ್ಯರಾಗಿ ನೇಮಿಸಿರುವುದನ್ನು ತೀವ್ರವಾಗಿ ವಿರೋಧಿಸುತ್ತೇವೆ. ನಮಗೆ ಅವರ ಮೇಲೆ ವೈಯಕ್ತಿಕ ದ್ವೇಷವೇನೂ ಇಲ್ಲ. ಅವರು ಸುಪ್ರಸಿದ್ಧರು; ಶಕ್ತರು. ಆದರೆ ಅವರಿಬ್ಬರೂ ಅನೇಕ ಬಾರಿ ಭಾರತೀಯ ದ್ವೇಷವನ್ನು ವ್ಯಕ್ತಪಡಿಸಿರುವುದರಿಂದ ಉದ್ದೇಶಪೂರ್ವಕವಲ್ಲದಿದ್ದರೂ ಭಾರತೀಯರಿಗೆ ಅನ್ಯಾಯ ಮಾಡಲು ಅವಕಾಶವಿದೆ. ಮನುಷ್ಯನು ಏಕಾಏಕಿ ತನ್ನ ಬಣ್ಣ ಬದಲಾಯಿಸಲಾರ. ಇದ್ದಕ್ಕಿದ್ದ ಹಾಗೆ ತಮ್ಮ ಸ್ವಭಾವ ವಿರುದ್ಧವಾಗಿ ಇವರು ನಿಷ್ಪಕ್ಷಪಾತಿಗಳಾದಾರೆಂದು ಭಾವಿಸುವುದು ಪ್ರಕೃತಿನಿಯಮಕ್ಕೆ ವಿರುದ್ಧ. ಅವರನ್ನು ಸಮಿತಿಯಿಂದ ತೆಗೆಯಬೇಕೆಂದು ನಮ್ಮ ಅಭಿಮತವಲ್ಲ. ಅವರ ಜೊತೆಗೆ ಕೆಲವು ನಿಷ್ಪಕ್ಷಪಾತಿ ಸದಸ್ಯರನ್ನು ನೇಮಿಸಬೇಕೆಂದು ಸೂಚಿಸುತ್ತೇವೆ. ಈ ಸಂದರ್ಭದಲ್ಲಿ ಸರ್ ಜೇಮ್ಸ್ ರೋಸ್ ಇನ್ಸ್, ಮಾನ್ಯ ಡಬ್ಲ್ಯು. ಪಿ.ಷ್ರೀನರ್ ಇವರ ಹೆಸರನ್ನು ಸೂಚಿಸುತ್ತೇವೆ. ಇವರಿಬ್ಬರೂ ನ್ಯಾಯಪರರಾದ ಪ್ರಸಿದ್ಧ ವ್ಯಕ್ತಿಗಳು. ಎರಡನೆಯದಾಗಿ: ಎಲ್ಲ ಸತ್ಯಾಗ್ರಹಿ ಬಂದಿಗಳನ್ನೂ ಬಿಡುಗಡೆ ಮಾಡಬೇಕು. ಆ ರೀತಿ ಮಾಡದಿದ್ದರೆ ನಾವು ಸೆರೆಮನೆಯ ಹೊರಗಿರಲು ಸಾಧ್ಯವಿಲ್ಲ. ಇನ್ನು ಮುಂದೆ ಸತ್ಯಾಗ್ರಹಿಗಳನ್ನು ಬಂಧನದಲ್ಲಿಡಲು ಕಾರಣವಿಲ್ಲ. ಮೂರನೆಯದಾಗಿ; ಈ ಸಮಿತಿಯ ಮುಂದೆ ನಾವು ಸಾಕ್ಷ್ಯವನ್ನಿಡಬೇಕಾದರೆ ಅವಧಿ ಕೂಲಿಗಾರರು ಕೆಲಸಮಾಡುವ ಗಣಿಗಳಿಗೂ ಕಾರ್ಖಾನೆಗಳಿಗೂ ಹೋಗಲು ನಮಗೆ ಅವಕಾಶವಿರಬೇಕು. ಈ ಬೇಡಿಕೆಗಳಿಗೆ ಒಪ್ಪದಿದ್ದರೆ ಪುನಃ ಸೆರೆಮನೆ ಸೇರಲು ನಾವು ಬೇರೆ ದಾರಿ ಹುಡುಕಬೇಕಾಗುತ್ತದೆ."

ಆದರೆ ಜನರಲ್ ಸ್ಮಟ್ಸ್‌ನ ಉತ್ತರದಲ್ಲಿ "ನಾವು ಒಂದು ನಿಷ್ಪಕ್ಷಪಾತ ನ್ಯಾಯಸಮ್ಮತ ಸಮಿತಿ ಏರ್ಪಡಿಸಿದ್ದೇವೆ. ಈ ರೀತಿ ಮಾಡುವಾಗ ಭಾರತೀಯರ ಸಲಹೆ ಕೇಳಿಲ್ಲ; ಕಲ್ಲಿದ್ದಲು ಗಣಿಗಳ ಮಾಲಿಕರ ಮತ್ತು ಕಬ್ಬಿನ ವ್ಯವಸಾಯಗಾರರ ಸಲಹೆಯನ್ನೂ ಕೇಳಿಲ್ಲ" ಎಂದು ಒಂದು ವಾಕ್ಯವಿದ್ದ ಕಾರಣ ಆತನಿಗೆ ಪುನಃ ಪತ್ರ ಬರೆಯಲು ಯೋಚಿಸಿದೆ. ನ್ಯಾಯಸಾಧನೆಯೇ ಸರಕಾರದ ಉದ್ದೇಶವಾದರೆ ಆತನನ್ನು ನೋಡಿ ಕೆಲವು ವಿಷಯ ತಿಳಿಸಬೇಕೆಂದು ಜನರಲ್ ಸ್ಮಟ್ಸ್‌ಗೆ ಖಾಸಗಿಯಾಗಿ ಒಂದು ಪತ್ರ ಬರೆದೆ. ಜನರಲ್ ಸ್ಮಟ್ಸ್‌ನನ್ನು ನೋಡಲು ನನಗೆ ಅವಕಾಶ ದೊರೆಯಿತು. ಅದೇ ಪ್ರಕಾರ ದಂಡಯಾತ್ರೆ ಕೆಲವು ದಿನ ಮುಂದೆ ಹಾಕಿದೆವು.

ಹೊಸ ದಂಡಯಾತ್ರೆ ಪ್ರಾರಂಭಿಸಲಿದ್ದೇವೆಂದು ಗೋಖಲೆಯವರಿಗೆ ತಿಳಿದೊಡನೆ ಆ ರೀತಿ ಮಾಡಿದರೆ ವೈಸರಾಯ್ ಲಾರ್ಡ್ ಹಾರ್ಡಿಂಜ್‌ರನ್ನೂ ತಮ್ಮನ್ನೂ ಬಿಕ್ಕಟ್ಟಿಗೆ ಸಿಕ್ಕಿಸಿದಂತಾಗುವುದೆಂದೂ ದಂಡಯಾತ್ರೆ ಬಿಟ್ಟು, ಸಾಕ್ಷ್ಯ ಒದಗಿಸಿ ಸಮಿತಿಯೊಂದಿಗೆ ಸಹಕರಿಸಬೇಕೆಂದೂ ಒಂದು ದೊಡ್ಡ ಕೇಬಲ್ ಕಳುಹಿಸಿದರು.

ಈಗ ನಾವು ಒಳ್ಳೆ ಇಕ್ಕಟ್ಟಿಗೆ ಸಿಕ್ಕಿದೆವು. ತಮ್ಮ ಅಪೇಕ್ಷೆಯಂತೆ ಸಮಿತಿಯ ಸದಸ್ಯತ್ವ ವಿಸ್ತರಿಸದಿದ್ದರೆ ಸಮಿತಿಯನ್ನು ಬಹಿಷ್ಕರಿಸಬೇಕೆಂದು ಭಾರತೀಯರು ತೀರ್ಮಾನಿಸಿದ್ದರು. ಲಾರ್ಡ್ ಹಾರ್ಡಿಂಜ್‌ರಿಗೆ ಅಸಮಾಧಾನವಾಗಬಹುದು, ಗೋಖಲೆಯವರ ಮನಸ್ಸು ನೋಯಬಹುದು; ಅದರೆ ಭಾರತೀಯರು ವಚನ ಭ್ರಷ್ಟರಾಗುವುದು ಹೇಗೆ? ಗೋಖಲೆಯವರ ಮನಸ್ಸು ಅವರ ಸೂಕ್ಷ್ಮ ದೇಹಸ್ಥಿತಿ, ನಮ್ಮ ತೀರ್ಮಾನದಿಂದ ಅವರಿಗಾಗಬಹುದಾದ ಅಪಾಯ ಎಲ್ಲವನ್ನೂ ಚೆನ್ನಾಗಿ ಯೋಚಿಸಬೇಕೆಂದು ಆಂಡ್ರೂಸರು ಸಲಹೆ ಕೊಟ್ಟರು. ಆದರೆ ಈ ಎಲ್ಲ ವಿಷಯಗಳೂ ನನ್ನ ಮನಸ್ಸಿನಲ್ಲಿ ಇದ್ದೇ ಇದ್ದವು. ಪ್ರಮುಖರೆಲ್ಲ ಸಭೆ ಸೇರಿ, ಸಮಿತಿಗೆ ಹೆಚ್ಚು ಸದಸ್ಯರನ್ನು ಸೇರಿಸದೆ ಹೋದರೆ, ಏನೇ ಬರಲಿ, ಬಹಿಷ್ಕಾರವನ್ನು ಮುಂದುವರಿಸಲೇಬೇಕೆಂದು ತೀರ್ಮಾನ ಮಾಡಿದರು. ಆದ್ದರಿಂದ ಗೋಖಲೆಯವರಿಗೆ ವಿಶದವಾದ ಕೇಬಲ್ ಕಳುಹಿಸಿದೆವು. ಅದೊಂದಕ್ಕೇ ನೂರು ಪೌಂಡು ವೆಚ್ಚವಾಯಿತು, ಈ ಕೇಬಲ್ ವರ್ತಮಾನಕ್ಕೆ ಆಂಡ್ರೂಸರೂ ಒಪ್ಪಿದರು. ಅದರ ಒಕ್ಕಣೆ ಈ ರೀತಿಯಿತ್ತು;

"ನಿಮಗೆ ಎಷ್ಟು ವ್ಯಸನವಾಗಿದೆಯೋ ನಮಗೆ ಗೊತ್ತು. ಎಷ್ಟು ಕಷ್ಟ ಬಂದರೂ ನಿಮ್ಮ ಸಲಹೆಯಂತೆ ನಡೆಯಬೇಕೆಂಬುದೇ ನಮ್ಮ ಇಷ್ಟ. ಲಾರ್ಡ್ ಹಾರ್ಡಿಂಜ್‌ರು ನಮಗೆ ಅಮೋಘ ಸಹಾಯ ಮಾಡಿದ್ದಾರೆ. ಕೊನೆಯವರೆಗೂ ಅವರ ಸಹಾಯ ದೊರೆಯಬೇಕೆಂದೇ ನಮ್ಮ ಆಶೆ. ಆದರೆ ನಮ್ಮ ಸ್ಥಿತಿಯನ್ನು ನೀವು ಅರಿತುಕೊಳ್ಳಬೇಕೆಂದು ನಮ್ಮ ಬಯಕೆ. ಸಾವಿರಾರು ಜನ ಪ್ರಮಾಣ ಮಾಡಿದ್ದಾರೆ. ನಮ್ಮ ಭವ್ಯ ಸಂಗ್ರಾಮವೆಲ್ಲ ನಿಂತಿರುವುದು ಪ್ರಮಾಣದ ಅಡಿಗಲ್ಲಿನ ಮೇಲೆ. ಆ ಪ್ರತಿಜ್ಞೆಯ ಪ್ರಭಾವವಿಲ್ಲದಿದ್ದರೆ ಪ್ರಾಯಶಃ ನಮ್ಮಲ್ಲನೇಕರು ಹಿಂದೆ ಬೀಳುತ್ತಿದ್ದೆವು. ಸಾವಿರಾರು ಜನ ಒಂದು ಬಾರಿ ವಚನಭ್ರಷ್ಟರಾದರೆ ಒಂದೇ ಏಟಿನಲ್ಲಿ ಎಲ್ಲ ನೈತಿಕ ಕಟ್ಟೂ ಒಡೆದು ಹೋಗುತ್ತದೆ. ಎಲ್ಲವನ್ನೂ ಆದ್ಯಂತವಾಗಿ ಪೂರ್ಣ ಚರ್ಚೆಮಾಡಿ ಪ್ರತಿಜ್ಞೆ ಮಾಡಲಾಗಿದೆ. ಪ್ರತಿಜ್ಞೆ ಅಸಾಧುವೆಂದು ಯಾರೂ ಹೇಳುವಂತಿಲ್ಲ. ಬಹಿಷ್ಕಾರ ಪ್ರತಿಜ್ಞೆ ಮುರಿಯ ಬಾರದೆಂದೂ, ಏನೇ ಬರಲಿ ಅಕ್ಷರಶಃ ಪಾಲಿಸಿಕೊಂಡು ಬರಬೇಕೆಂದೂ ನೀವೂ ಸಲಹೆ ಕೊಡಬೇಕೆಂದು ಬೇಡುತ್ತೇವೆ. ಈ ಕೇಬಲ್‌ನ್ನು ಲಾರ್ಡ್ ಹಾರ್ಡಿಂಜ್‌ರಿಗೆ ತೋರಿಸಿರಿ. ನಿಮ್ಮನ್ನು ಅವರು ಅಪಾರ್ಥಮಾಡಿಕೊಳ್ಳಬಾರದು. ಈ ನಮ್ಮ ಹೋರಾಟಕ್ಕೆ ದೇವರೇ ಸಾಕ್ಷಿ; ಆತನ ಕೃಪೆಯೇ ನಮ್ಮ ಪೂರ್ಣ ಬೆಂಬಲ ಎಲ್ಲ ಹಿರಿಯರ, ದೊಡ್ಡವರ ಸಹಾಯವೂ ನಮಗೆ ಬೇಕು, ಬೇಡುತ್ತೇವೆ; ಬಂದಾಗ ಆನಂದಿಸುತ್ತೇವೆ. ಸಹಾಯ ಒದಗಲಿ, ಒದಗದಿರಲಿ ಒಮ್ಮೆ ಮಾಡಿದ ಸಂಕಲ್ಪವನ್ನು ಚಾಚೂ ತಪ್ಪದೆ ಪಾಲಿಸಬೇಕಾದ್ದು ನಮ್ಮ ಕರ್ತವ್ಯವೆಂದು ನನ್ನ ನಮ್ರ ಸೂಚನೆ. ಅಂಥ ಪ್ರತಿಜ್ಞಾಪಾಲನೆಯಲ್ಲಿ ನಿಮ್ಮ ಬೆಂಬಲ, ಆಶೀರ್ವಾದ ಅಪೇಕ್ಷಿಸುತ್ತೇವೆ."

ಗೋಖಲೆಯವರಿಗೆ ಈ ಕೇಬಲ್ ತಲುಪಿದೊಡನೆ ಅವರ ದೇಹಸ್ಥಿತಿ ಹದಗೆಟ್ಟಿತು. ಆದರೂ ಅವರ ಸಹಾಯ ಏನೂ ಕಡಮೆಯಾಗಲಿಲ್ಲ. ಮೊದಲಿಗಿಂತಲೂ ಅಧಿಕವಾಯಿತು. ಈ ವಿಷಯದಲ್ಲಿ ಲಾರ್ಡ್ ಹಾರ್ಡಿಂಜ್‌ರಿಗೆ ತಂತಿ ಕಳುಹಿಸಿ, ನಮ್ಮ ಕೈಬಿಡದಿದ್ದುದು ಒಂದೇ ಅಲ್ಲ, ನಮ್ಮ ನಡತೆಯನ್ನು ಪೂರ್ಣ ಸಮರ್ಥಿಸಿದರು. ಲಾರ್ಡ್ ಹಾರ್ಡಿಂಜ್ ರೂ ಬದಲದೆ ಸಹಾಯಕರಾಗಿಯೇ ಇದ್ದರು.

ಆಂಡ್ರೂಸರೊಂದಿಗೆ ಪ್ರೆಟೋರಿಯಾಕ್ಕೆ ಹೋದೆ. ಇದೇ ಸಮಯದಲ್ಲಿ ಯೂನಿಯನ್ ರೈಲ್ವೆಗಳ ಯೂರೋಪಿಯನ್ ಕೆಲಸಗಾರರು ದೊಡ್ಡ ಮುಷ್ಕರ ಹಿಡಿದಿದ್ದರು. ಸರಕಾರದ ಪರಿಸ್ಥಿತಿ ಬಹಳ ಹದಗೆಟ್ಟಿತ್ತು. ಇಂಥ ಒಂದು ಸುಸಮಯದಲ್ಲಿ ನಮ್ಮ ದಂಡಯಾತ್ರೆ ಪ್ರಾರಂಭಿಸಲು ಸೂಚನೆ ಬಂತು. ಆದರೆ ಸರಕಾರಕ್ಕೆ ತೊಂದರೆ ಕೊಡುವುದೇ ಭಾರತೀಯರ ಉದ್ದೇಶವಲ್ಲ. ಅವರ ಹೋರಾಟವೇ ಬೇರೆ; ಪ್ರತ್ಯೇಕವಾಗಿ ಆರಂಭವಾದದ್ದು; ಆದ್ದರಿಂದ ಭಾರತೀಯರು ರೈಲ್ವೆ ಮುಷ್ಕರಕಾರರಿಗೆ ಸಹಾಯಮಾಡಬಾರದೆಂದು ತಿಳಿಸದೆ. ನಮ್ಮ ದಂಡಯಾತ್ರೆ ಆರಂಭಿಸಿದರೂ ರೈಲ್ವೆ ಮುಷ್ಕರ ಮುಗಿದ ಮೇಲೆ ಬೇರೆ ಸಮಯದಲ್ಲಿ ಪ್ರಾರಂಭಿಸಬೇಕೆಂದು ಹೇಳಿದೆ. ಈ ತೀರ್ಮಾನದಿಂದ ಅಸಾಧ್ಯ ಪರಿಣಾಮವಾಗಿ ರಾಯಟರ್ ಸುದ್ದಿಗಾರ ಇಂಗ್ಲೆಂಡಿಗೂ ಕೇಬಲ್ ಮಾಡಿದ. ಲಾರ್ಡ್‌ಆಮ್ಟ್‌ಹಿಲ್ ಇಂಗ್ಲೆಂಡಿನಿಂದ ಅಭಿನಂದನೆ ಕಳುಹಿಸಿದರು. ದಕ್ಷಿಣ ಆಫ್ರಿಕದ ಇಂಗ್ಲಿಷ್ ಸ್ನೇಹಿತರೂ ಕೂಡ ನಮ್ಮ ತೀರ್ಮಾನವನ್ನು ಬಹಳ ಮೆಚ್ಚಿದರು. ಜನರಲ್ ಸ್ಮಟ್ಸ್‌ರ ಕಾರ್ಯದರ್ಶಿಯೊಬ್ಬ ತಮಾಷೆಗಾಗಿ ಮಾತನಾಡುತ್ತ, "ನಿಮ್ಮ ಜನರನ್ನು ಕಂಡರೆ ನನಗೆ ಆಗುವುದಿಲ್ಲ. ಅವರಿಗೆ ಸಹಾಯ ಮಾಡಲು ಇಷ್ಟವೂ ಇಲ್ಲ. ಆದರೆ ನಾನೇನು ಮಾಡಲಿ? ಒಳ್ಳೆಯ ಸಂಕಟದಲ್ಲಿ ನಮಗೆ ಸಹಾಯ ಮಾಡುತ್ತೀರಿ. ನಿಮ್ಮ ಮೇಲೆ ಕೈಮಾಡುವುದಾದರೂ ಹೇಗೆ? ಇಂಗ್ಲಿಷ್ ಮುಷ್ಕರಕಾರರಂತೆ ನೀವೂ ಹಿಂಸಾಯುತರಾದರೆ ಒಂದು ನಿಮಿಷದಲ್ಲಿ ಮಟ್ಟಹಾಕಬಲ್ಲೆವು. ಆದರೆ ನಿಮ್ಮ ವೈರಿಯನ್ನು ಸಹ ನೀವು ಹಿಂಸಿಸುವದಿಲ್ಲ. ಆತ್ಮಬಲಿದಾನದಿಂದ ಗೆಲ್ಲಲು ಹೊರಟ್ಟಿದ್ದೀರಿ. ನಿಮ್ಮ ಶೌರ್ಯವನ್ನೂ ಗೌರವವನ್ನೂ ಎಂದೂ ಮೀರಿ ನಡೆಯುವುದಿಲ್ಲ. ಇದೇ ನಮ್ಮನ್ನು ಕೇವಲ ನಿಸ್ಸಹಾಯಕರನ್ನಾಗಿ ಮಾಡಿದೆ" ಎಂದ. ಜನರಲ್ ಸ್ಮಟ್ಸ್ ಸಹ ಇದೇ ಅಭಿಪ್ರಾಯ ವ್ಯಕ್ತಗೊಳಿಸಿದ.

ಸತ್ಯಾಗ್ರಹಿಗಳು ಪರರ ಹಿತವನ್ನು ಗೌರವಿಸಿದ್ದು ಇದೇ ಮೊದಲು ಬಾರಿಯಲ್ಲ. ಉತ್ತರ ತೀರದ ಭಾರತೀಯ ಕೆಲಸಗಾರರು ಮುಷ್ಕರ ಹಿಡಿದಾಗ ಮೌಂಟ್ ಎಡ್ಜ್ ಕೂಮ್‌ನಲ್ಲಿ ಗದ್ದೆಯಲ್ಲಿನ ಕತ್ತರಿಸಿದ ಕಬ್ಬನ್ನೆಲ್ಲ ಗಾಣಕ್ಕೆ ತಂದು ಗಾಣವಾಡದಿದ್ದರೆ ಅಲ್ಲಿನ ಜಮೀನುದಾರರಿಗೆ ಬಹಳ ನಷ್ಟವಾಗುತ್ತಿತ್ತು. ಈ ಕೆಲಸ ಪೂರೈಸುವ ಉದ್ದೇಶದಿಂದಲೆ ೧೨೦೦ ಜನ ಕೂಲಿಗಾರರು ಕೆಲಸಕ್ಕೆ ಹಿಂದಿರುಗಿ ಆಲೆಕೆಲಸ ಪೂರೈಸಿ ಆಮೇಲೆ ಒಂದು ಸತ್ಯಾಗ್ರಹ ಸೇರಿದರು. ಡರ್ಬಾನ್ ಪೌರಸಭೆಯ ಭಾರತೀಯ ಕೆಲಸಗಾರರೆಲ್ಲ ಮುಷ್ಕರ ಹಿಡಿದಾಗ ನಗರ ನೈರ್ಮಲ್ಯಶಾಖೆಯ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸೇವೆಮಾಡತಕ್ಕವರನ್ನೆಲ್ಲ ಹಿಂದಕ್ಕೆ ಕಳುಹಿಸಿದೆವು. ಅವರೆಲ್ಲ ಸಂತೋಷದಿಂದ ಕೆಲಸಕ್ಕೆ ಹಿಂದಿರುಗಿದರು. ನಗರದ ನಿರ್ಮಲೀಕರಣಕಾರ್ಯ ನಿಂತಿದ್ದರೆ, ಊರಿನಲ್ಲಿ ಜಾಡ್ಯ ಹರಡುತ್ತಿತ್ತು. ರೋಗಿಗಳಿಗೆ ವೈದ್ಯಸಹಾಯ ತಪ್ಪುತ್ತಿತ್ತು. ಇದು ಯಾವ ಸತ್ಯಾಗ್ರಹಿಗೂ

ಪ್ರಿಯವಲ್ಲ. ಆದ್ದರಿಂದ ಈ ಬಗೆಯ ಕೆಲಸಗಾರರನ್ನು ಮುಷ್ಕರಕ್ಕೆ ಸೇರಿಸುತ್ತಿರಲಿಲ್ಲ. ಸತ್ಯಾಗ್ರಹಿ ಇಡುವ ಪ್ರತಿ ಹೆಜ್ಜೆಯಲ್ಲೂ ತನ್ನ ಎದುರಾಳಿಯ ಪರಿಸ್ಥಿತಿಯನ್ನೂ ಗಮನಿಸಬೇಕು.

ಈ ಬಗೆಯ ಧೀರೋದಾತ್ತ ನಡತೆ ಎಲ್ಲೆಲ್ಲೂ ಕಂಡೂ ಕಾಣದಂತೆ ತನ್ನ ಪ್ರಭಾವಮುದ್ರೆ ಬೀರಿತು, ಭಾರತೀಯರ ಕೀರ್ತಿಪ್ರತಿಷ್ಠೆ ಹೆಚ್ಚಿಸಿತು, ಸಂಧಾನಕ್ಕೆ ತಕ್ಕ ವಾತಾವರಣ ಕಲ್ಪಿಸಿತು.

೪೮. ತಾತ್ಕಾಲಿಕ ಒಪ್ಪಂದ

ಈ ರೀತಿ ವಾತಾವರಣವು ಸಂಧಾನಕ್ಕೆ ಅನುಕೂಲವಾಗುತ್ತ ಬಂತು. ನಾನೂ ಆಂಡ್ರೂಸರೂ ಪ್ರೆಟೋರಿಯಾಕ್ಕೆ ಹೊರಟ ಕಾಲಕ್ಕೆ ಲಾರ್ಡ ಹಾರ್ಡಿಂಜ್ ಪ್ರತ್ಯೇಕ ಹಡಗಿನಲ್ಲಿ ಕಳಿಸಿದ ಸರ್ ಬೆಂಜಮಿನ್ ರಾರ್ಟ್ಸನ್ ಬರಬೇಕಾಗಿತ್ತು. ಆದರೆ ನಾವು ಕಾಯಲಿಲ್ಲ. ಜನರಲ್ ಸ್ಮಟ್ಸ್ ತಿಳಿಸಿದ ಕಾಲಕ್ಕೆ ಸರಿಯಾಗಿ ಪ್ರೆಟೋರಿಯಾ ಸೇರಲು ಹೊರಟೆವು. ಪರ್ಯವಸಾನ ನಮ್ಮ ಶಕ್ತಿಯನ್ನೇ ಅವಲಂಬಿಸಿದ್ದುದರಿಂದ ಆತನ ಆಗಮನಕ್ಕಾಗಿ ನಾವು ಕಾಯಲಿಲ್ಲ.

ಆಂಡ್ರೂಸರೂ ನಾನೂ ಪ್ರೆಟೋರಿಯಾ ಸೇರಿದೆವು. ಆದರೆ ನಾನು ಮಾತ್ರ ಜನರಲ್ ಸ್ಮಟ್ಸ್ ಭೇಟಿಮಾಡಬೇಕಾಗಿತ್ತು. ಜನರಲ್ ಸ್ಮಟ್ಸ್‌ರ ಮನಸ್ಸೆಲ್ಲ ರೈಲ್ವೆ ಮುಷ್ಕರದ ಮೇಲಿತ್ತು. ಯೂನಿಯನ್ ಸರಕಾರ ಮಾರ್ಷಲ್ ಲಾ ಆಚರಣೆಗೆ ತರಬೇಕಾದ ಉಲ್ಬಣ ಪರಿಸ್ಥಿತಿಗೆ ಮುಟ್ಟಿತು. ಯೂರೋಪಿಯನ್ ಕೆಲಸಗಾರರಿಗೆ ಬೇಕಾಗಿದ್ದುದು ಹೆಚ್ಚಿನ ಕೂಲಿ ಮಾತ್ರವಲ್ಲ; ಅಧಿಕಾರವನ್ನೂ ತಮ್ಮ ಕೈಗೆ ತೆಗೆದುಕೊಳ್ಳಬೇಕೆಂಬ ಉದ್ದೇಶವಿತ್ತು. ಜನರಲ್ ಸ್ಮಟ್ಸ್‌ರೊಡನೆ ನನ್ನ ಮೊದಲ ಭೇಟಿ ನಡೆದದ್ದು ಬಹಳ ಸ್ವಲ್ಪ ಕಾಲ. ಮೊದಲು ಇದ್ದ ದರ್ಪ ಇರಲಿಲ್ಲ. ನಮ್ಮ ದಂಡಯಾತ್ರೆಯ ಪ್ರಾರಂಭದಲ್ಲಿ ನನ್ನೊಂದಿಗೆ ಮಾತನಾಡಲು ಸಿದ್ಧನಿರಲಿಲ್ಲ. ಸತ್ಯಾಗ್ರಹದ ಭಯ ಈಗ ಇದ್ದಷ್ಟೆ ಆಗಲೂ ಇತ್ತು. ಆದರೂ ಸಂಧಾನ ನಡೆಸಲು ಸಿದ್ಧನಾಗಿರಲಿಲ್ಲ. ಈಗ ನನ್ನೊಂದಿಗೆ ಸಂಧಾನಕ್ಕೆ ಸಿದ್ಧನಾಗಿದ್ದ. ಭಾರತೀಯ ಹಿತರಕ್ಷಣೆಗಾಗಿ ಸಮಿತಿಯಲ್ಲಿ ಒಬ್ಬ ಭಾರತೀಯ ಸದಸ್ಯರನ್ನು ಸೇರಿಸಬೇಕೆಂದು ಭಾರತೀಯರ ಬೇಡಿಕೆ. ಈ ವಿಷಯವನ್ನು ಒಪ್ಪಲು ಸ್ಮಟ್ಸ್ ಸಿದ್ಧನಿರಲಿಲ್ಲ. "ಸರಕಾರದ ಪ್ರತಿಷ್ಠೆ ಕುಂದುವುದರಿಂದ ಆ ರೀತಿ ನಡೆಯಲು ಸಾಧ್ಯವಿಲ್ಲ. ಬೇಕಾದರೆ ಸುಧಾರಣೆ ತರಲು ನನಗೆ ಸಾಧ್ಯವಿಲ್ಲ ಎಸ್ಸೆಲೆನ್ ನಮ್ಮ ಪರ ಇದ್ದಾರೆ. ಸುಧಾರಣೆಗಳ ವಿಷಯದಲ್ಲಿ ಸರಕಾರದ ಇಷ್ಟಕ್ಕೆ ವಿರೋಧ ಬಾರದೆ ನಮ್ಮ ಸಲಹೆಯನ್ನೂ ಒಪ್ಪುತ್ತಾರೆ. ಕರ್ನಲ್ ವೈಲಿ ನೇಟಾಲ್‌ನಲ್ಲಿ ಗಣ್ಯರು; ಭಾರತೀಯ ವಿರೋದಿಗಳೆಂದರೂ ಅನ್ನಬಹುದು. ಆದರೆ ಅವರೂ ಮೂರು ಪೌಂಡು ತಲೆಗಂದಾಯ ತೆಗೆದು ಹಾಕಲು ಒಪ್ಪಿದರೆ ಸರಕರದ ಕೆಲಸ ಬಹು ಸುಲಭವಾಗುತ್ತದೆ. ನಮಗೆ ಅನೇಕ ತೊಂದರೆಗಳಿವೆ. ಒಂದು ನಿಮಿಷ ವ್ಯರ್ಥಮಾಡುವಂತಿಲ್ಲ. ಭಾರತೀಯರ ಪ್ರಶ್ನೆಯನ್ನು ಇತ್ಯರ್ಥ ಮಾಡಬೇಕೆಂದಿದ್ದೇವೆ. ನಿಮ್ಮ ಬೇಡಿಕೆ ನಡೆಸಿ ಕೊಡಬೇಕೆಂದಿದ್ದೇವೆ. ಅದಕ್ಕೆ ಸಮಿತಿಯಿಂದ ಒಂದು ವರದಿ ಬೇಕು. ನಿಮ್ಮ ಸ್ಥಿತಿಯೂ ನನಗೆ ಗೊತ್ತಿದೆ. ಸಮಿತಿಯಲ್ಲಿ ಭಾರತೀಯರ ಹಿತ ಸಂರಕ್ಷಿಸಲು ಒಬ್ಬ ಸದಸ್ಯನಿಲ್ಲದ ಹೊರತು ಸಮಿತಿಯ ಮುಂದೆ ಸಾಕ್ಷ್ಯ ಕೊಡುವುದಿಲ್ಲವೆಂದು

ನೀವು ಪ್ರತಿಜ್ಞೆತೊಟ್ಟಿದ್ದೀರಿ. ನೀವು ಸಾಕ್ಷ್ಯ ಒದಗಿಸದಿದ್ದರೂ ವ್ಯಸನವಿಲ್ಲ. ಸಾಕ್ಷ್ಯಕೊಡಲು ಯಾರಾದರೂ ಬಂದರೆ ವಿರೋಧ ಪ್ರಚಾರಮಾಡಿ ಅವರಿಗೆ ಅಡ್ಡಿ ಬರಬಾರದು; ಅಲ್ಲದೆ ಈ ಮಧ್ಯೆ ಸತ್ಯಾಗ್ರಹ ನಿಲ್ಲಿಸಬೇಕು. ಆ ರೀತಿ ಮಾಡಿದರೆ ನಿಮ್ಮ ಹಿತವೂ ಸಾಧಿಸುತ್ತದೆ; ನನಗೂ ಸ್ವಲ್ಪ ಮನಸ್ಸಮಾಧಾನವಾಗುತ್ತದೆ. ನೀವು ಸಾಕ್ಷ್ಯಕೊಡದಿದ್ದರೆ ಭಾರತೀಯ ಕೂಲಿಗಾರರಿಗೆ ಹಿಂಸೆ ಕೊಟ್ಟರೆಂದು ದೃಢಪಡಿಸಲು ಸಾಧ್ಯವಾಗುವದಿಲ್ಲ. ಅದು ನೀವೇ ಯೋಚಿಸಬೇಕಾದ ವಿಷಯ."

ಇವೇ ಜನರಲ್ ಸ್ಮಟ್ಸ್‌ರ ಸಲಹೆಗಳು. ಒಟ್ಟಿನಲ್ಲಿ ಒಪ್ಪಬಹುದೆಂದು ನನಗೂ ತೋರಿತು. ಸೈನಿಕರ ಮೇಲೂ ವಾರ್ಡರುಗಳ ಮೇಲೂ ಭಾರತೀಯ ಕೂಲಿಗಾರರಿಗೆ ಬಹಳ ಹಿಂಸೆಕೊಟ್ಟರೆಂದು ಆಪಾದನೆ ಮಾಡಿದ್ದೆವು. ಆದರೆ ಸಮಿತಿಯನ್ನೇ ಬಹಿಷ್ಕರಿಸಲು ತೀರ್ಮಾನಿಸಿದ್ದರಿಂದ ಆ ಆಪಾದನೆ ಸ್ಥಿರಪಡಿಸಲು ಅವಕಾಶವಿರಲಿಲ್ಲ. ಈ ವಿಷಯವಾಗಿ ಭಾರತೀಯರಲ್ಲಿ ಭಿನ್ನಾಭಿಪ್ರಾಯ ಹುಟ್ಟಿತು.ಕೆಲವರು ಆಪಾದನೆಗಳನ್ನು ಸ್ಥಿರಪಡಿಸಬೇಕೆಂದರು. ಸಮಿತಿಯ ಮುಂದೆ ಸಾಕ್ಷ್ಯಕೊಡಲು ಸಾಧ್ಯವಿಲ್ಲವಾದರೆ ನಮ್ಮಲ್ಲಿದ್ದ ಸಾಕ್ಷ್ಯಸಾಹಿತ್ಯವನ್ನು ಪ್ರಕಟಿಸಿ ಮಾನನಷ್ಟ ಮೊಕದ್ದಮೆಗಳಿಗೆ ಸಿದ್ಧರಾಗಬೇಕೆಂದರು. ಈ ಸಲಹೆ ನನಗೆ ಸರಿತೋರಲಿಲ್ಲ ಮಾನನಷ್ಟ ಮೊಕದ್ದಮೆಗಳಿಂದ ನಮ್ಮ ಜನರಿಗೆ ಕೊನೆಯಿಲ್ಲದ ನಷ್ಟ. ಹಿಂಸೆಮಾಡಿದರೆಂಬ ಆಪಾದನೆ ಸ್ಥಿರಪಡಿಸಿದೆವೆಂಬ ತೃಪ್ತಿಯೊಂದರ ಹೊರತು ಬೇರೆ ಯಾವ ಲಾಭವೂ ಇಲ್ಲ. ನ್ಯಾಯವಾದಿಯಾಗಿ ಮಾನನಷ್ಟ ಮೊಕದ್ದಮೆಗಳಲ್ಲಿ ಸರಿಯಾದ ಸಾಕ್ಷ್ಯ ಒದಗಿಸುವುದು ಎಷ್ಟು ಕಷ್ಟವೆಂದು ನನ್ನ ಅನುಭವಕ್ಕೆ ಬಂದಿತ್ತು. ಆದರೆ ಎಲ್ಲಕ್ಕೂ ಮುಖ್ಯವಾದ ಕಾರಣ ಸತ್ಯಾಗ್ರಹಿಯ ಕಷ್ಟಸಹಿಷ್ಣುತೆ. ಸತ್ಯಾಗ್ರಹ ಪ್ರಾರಂಭವಾಗುವ ಮೊದಲೇ ಸಾವನ್ನಾದರೂ ಸಹಿಸಲು ಸತ್ಯಾಗ್ರಹಿಗಳು ಸಿದ್ಧರಿರಬೇಕೆಂದು ತಿಳಿದಿತ್ತು; ಸಿದ್ಧರಾಗಿಯೂ ಇದ್ದರು. ಕಷ್ಟಪಟ್ಟೆವೆಂದು ಸ್ಥಿರಪಡಿಸುವದರಲ್ಲಿ ಯಾವ ಅರ್ಥವೂ ಇರಲಿಲ್ಲ. ಸೇಡಿನ ಮನೋಭಾವನೆ ಸತ್ಯಾಗ್ರಹಕ್ಕೆ ಸಲ್ಲದು. ತಾನನುಭವಿಸಿದ ಕಷ್ಟವನ್ನು ಸ್ಥಿರಪಡಿಸಲು ವಿಶೇಷ ಆತಂಕವಿದ್ದಾಗ ಸತ್ಯಾಗ್ರಹಿ ಮೌನದಿಂದಿರುವುದೇ ಮೇಲು. ಸತ್ಯಾಗ್ರಹಿ ಕಾದುವುದು ತಿರುಳಿಗಾಗಿ. ಅನಿಷ್ಟ ಶಾಸನಗಳೆಲ್ಲ ತೊಲಗಬೇಕು, ಅಥವಾ ಕ್ರಮವಾಗಿ ತಿದ್ದುಪಡೆಯಾಗಬೇಕೆಂಬುದೇ ನಮ್ಮ ಧ್ಯೇಯದ ತಿರುಳು. ಇಷ್ಟು ನಮ್ಮ ಕೈಗೆ ಬಂದರೆ ಉಳಿದುದೆಲ್ಲ ಅಪ್ರಕೃತ. ಸಂಧಾನ ಸಮಯದಲ್ಲಿ ಮೌನ ತಾಳಿದರೆ ಅನ್ಯಾಯದ ಶಾಸನಗಳನ್ನು ವಿರೋಧಿಸುವಾಗ ಸತ್ಯಾಗ್ರಹಿಗೆ ಹೆಚ್ಚು ಉಪಯೋಗ. ಈ ರೀತಿ ವಾದಮಾಡಿ ನನಗೆ ಇದಿರು ನಿಂತಿದ್ದ ಸ್ನೇಹಿತರನ್ನು ನನ್ನ ಪರ ಒಲಿಸಿಕೊಂಡೆ. ಹಿಂಸೆ ಮಾಡಿದರೆಂಬ ಆಪಾದನೆಯನ್ನು ಸ್ಥಿರಪಡಿಸುವ ಮನೋಭಾವವನ್ನು ನಾವೆಲ್ಲ ಬಿಟ್ಟೆವು.

೪೯. ಪತ್ರವ್ಯವಹಾರ

ಅನೇಕ ಭೇಟಿಗಳ ಫಲವಾಗಿ ನಮ್ಮಲ್ಲಾದ ಒಪ್ಪಂದವನ್ನು ನನಗೂ ಜನರಲ್ ಸ್ಮಟ್ಸ್‌ರಿಗೂ ನಡೆದ ಪತ್ರವ್ಯವಹಾರದಲ್ಲಿ ಅಡಕಮಾಡಿದೆವು. ೧೯೧೪ರ ಜನವರಿ ೨೧ ರಲ್ಲಿ ನಾನು ಬರೆದ ಪತ್ರದ ಸಾರಾಂಶ ಈ ರೀತಿ ಇತ್ತು:

"ಸಮಿತಿಯ ಈಗಿನ ರಚನೆಯಂತೆ ಸಾಕ್ಷ್ಯ ಕೊಡಲು ನಮಗೆ ತಾತ್ವಿಕ ವಿರೋಧವಿದೆ. ಈ ತತ್ವಗಳು ಸಾಧುವಾದುವೆಂದು ಒಪ್ಪಿದರೂ, ನಿಮ್ಮ ತೀರ್ಮಾನ ಬದಲಾಯಿಸಲು ನೀವು ಒಪ್ಪುವುದಿಲ್ಲ. ಆದರೂ ಭಾರತೀಯರ ಸಲಹೆ ಪಡೆಯಬೇಕೆಂಬುದರಿಂದ ಈ ಸಮಿತಿ ತೀರ್ಮಾನಕ್ಕೆ ಬರುವವರೆಗೂ ಮುಂದಿನ ಶಾಸನ ಸಭಾಧಿವೇಶನದಲ್ಲಿ ಶಾಸನ ಬದಲಾವಣೆಯಾಗುವವರೆಗೂ ವಿರೋಧ ಪ್ರಚಾರ ನಡೆಸಿ ಸಮಿತಿಯ ಕಾರ್ಯಕಲಾಪಗಳಿಗೆ ಅಡ್ಡಿಮಾಡಬಾರದೆಂದೂ ಪುನಃ ಸತ್ಯಾಗ್ರಹ ಆರಂಭಿಸಿ ಸರಕಾರಕ್ಕೆ ತೊಂದರೆಯನ್ನೊಡ್ಡ ಬಾರದೆಂದೂ ನಮ್ಮ ಜನರಿಗೆ ಸಲಹೆ ಕೊಡುತ್ತೇನೆ. ಇದೂ ಅಲ್ಲದೆ ವೈಸರಾಯ್ ಕಳುಹಿಸಿರುವ ಸರ್ ಬೆಂಜಮಿನ್ ರಾಬರ್ಟ್‌ಸನ್‌ರಿಗೂ ನಾವು ಸಹಾಯ ಮಾಡಲು ಅನುಕೂಲವಾಗುತ್ತದೆ.

"ನೇಟಾಲ್ ಮುಷ್ಕರಕಾಲದಲ್ಲಿ ಮುಷ್ಕರಕಾರರಿಗೆ ಕೊಟ್ಟ ಹಿಂಸೆಯ ವಿಚಾರದಲ್ಲಿ ಸಮಿತಿಯನ್ನು ಪೂರ್ಣ ಬಹಿಷ್ಕರಿಸಬೇಕೆಂದು ನಾವು ಪ್ರತಿಜ್ಞೆ ಮಾಡಿರುವುದರಿಂದ ಆ ಆಪಾದನೆಗಳನ್ನು ಸಮಿತಿ ಮೂಲಕ ಸ್ಥಿರಪಡಿಸಲು ಸಾಧ್ಯವಿಲ್ಲ. ಸತ್ಯಾಗ್ರಹಿಗಳಾಗಿ ನಮಗೆ ಕೊಟ್ಟ ತೊಂದರೆಗಳಿಗೆ ನಾವು ಸಾಧ್ಯವಾದ ಮಟ್ಟಿಗೆ ಯಾವ ವೈಯಕ್ತಿಕ ದ್ವೇಷವನ್ನೂ ಸಾಧಿಸುವುದಿಲ್ಲ. ಆದರೆ ನಮ್ಮ ಮೌನವನ್ನು ಅಪಾರ್ಥಮಾಡಿಕೊಳ್ಳದೆ, ನಮ್ಮ ಧ್ಯೇಯವರಿತು ನಮ್ಮ ಆಪಾದನೆಗಳ ವಿಚಾರದಲ್ಲಿ ಸಮಿತಿಯ ಮುಂದೆ ವಿರೋಧ ಸಾಕ್ಷ್ಯ ಒದಗಿಸದಂತೆ ನೋಡಿ ಪರಸ್ಪರ ಸೌಹಾರ್ದ ತೋರಬೇಕಾಗಿ ಕೇಳಬಹುದೆ?

"ಸತ್ಯಾಗ್ರಹ ನಿಲ್ಲಿಸುವುದರಿಂದ ಸತ್ಯಾಗ್ರಹಿಗಳನ್ನು ಬಂಧನಮುಕ್ತರನ್ನಾಗಿ ಮಾಡಬೇಕಾದ್ದು ಸರಕಾರದ ಕರ್ತವ್ಯ.

"ಯಾವ ಯಾವ ವಿಷಯಗಳ ಬಗ್ಗೆ ಪರಿಹಾರ ನಿರೀಕ್ಷಿಸುತ್ತೇವೆ ಎಂದು ಈ ಸಂದರ್ಭದಲ್ಲಿ ತಿಳಿಸುವುದು ಅಪ್ರಕೃತವಾಗಲಾರದು:

(೧) ಮೂರು ಪೌಂಡು ತಲೆಗಂದಾಯ ತೆಗೆದುಹಾಕುವುದು.

(೨) ಹಿಂದೂ, ಇಸ್ಲಾಮ್ ಇತ್ಯಾಧಿ ಮತಪದ್ಧತಿ ಪ್ರಕಾರ ನಡೆದ ವಿವಾಹಗಳು ಶಾಸನಸಮ್ಮತವೆಂದು ಶಾಸನಮಾಡುವುದು.

(೩) ವಿದ್ಯಾವಂತ ಭಾರತೀಯರ ವಲಸೆ ವಿಚಾರ.

(೪) ಆರೇಂಜ ಫ್ರೀಸ್ಟೇಟ್ ವಿಚಾರದಲ್ಲಿ ಕೊಟ್ಟ ಭರವಸೆಗೆ ವಿರುದ್ಧವಾಗಿ ನಡೆದದ್ದು.

(೫) ಭಾರತೀಯರಿಗೆ ಸಂಬಂಧಿಸಿದ ಶಾಸನಗಳನ್ನು ಅವರ ಹಕ್ಕುಗಳಿಗೆ ಲೋಪ ತಾರದಂತೆ, ನ್ಯಾಯವಾಗಿ ಪ್ರಯೋಗಿಸುವ ಭರವಸೆ.

ಈ ಎಲ್ಲ ಬೇಡಿಕೆಗಳನ್ನು ಸೌಹಾರ್ದದಿಂದ ಗಮನಿಸುವುದಾಗಿ ಭರವಸೆ ಕೊಟ್ಟರೆ ಈ ಪತ್ರದಂತೆ ನಮ್ಮ ಜನರಿಗೆ ಸಲಹೆಕೊಡಲು ಸಿದ್ಧವಾಗಿದ್ದೇನೆ." ಜನರಲ್ ಸ್ಮಟ್ಸ್‌ರು ಅದೇ ದಿನ ಈ ರೀತಿ ಉತ್ತರವಿತ್ತರೂ:

"ಸಮಿತಿಯ ಮುಂದೆ ಸಾಕ್ಷ್ಯ ಕೊಡಲು ಸಾಧ್ಯವಿಲ್ಲವೆಂಬ ನಿರ್ಧಾರಕ್ಕಾಗಿ ನಾನು ವ್ಯಸನಪಡುತ್ತೇನೆ; ಆದರೆ ನಿಮ್ಮ ಮನೋಭಾವನೆಯನ್ನೂ ಗ್ರಹಿಸಿದ್ದೇನೆ. ನ್ಯಾಯಾಸ್ಥಾನಗಳ ಮುಂದೆ ಮಾನನಷ್ಟ ಮೊಕದ್ದಮೆಗಳಿಗೆ ಅವಕಾಶಕೊಟ್ಟು ಪರಸ್ಪರ ವೈಷಮ್ಯ ಹೆಚ್ಚಿಸಲು ಇಷ್ಟವಿಲ್ಲವೆಂಬ ನಿಮ್ಮ ಧ್ಯೇಯವನ್ನೂ ಗೌರವಿಸುತ್ತೇನೆ. ಭಾರತೀಯ ಮುಷ್ಕರಕಾರರನ್ನು ಹಿಂಸಿಸಿದರೆಂಬುದನ್ನು ಸರಕಾರ ಒಪ್ಪುವುದಿಲ್ಲ. ಆದರೆ ನೀವು ಸಾಕ್ಷ್ಯ

ಒದಗಿಸುವುದಿಲ್ಲವಾದ್ದರಿಂದ, ಸರಕಾರ ತನ್ನ ಅಧಿಕಾರಿಗಳ ಸಮರ್ಥನೆಗೆ ಸಾಕ್ಷ್ಯ ಒದಗಿಸುವುದೂ ಅನಾವಶ್ಯಕ. ಸತ್ಯಾಗ್ರಹಿಗಳ ವಿಷಯದಲ್ಲಿ ನಿಮ್ಮ ಪತ್ರ ಬರುವ ಮುಂಚೆಯೇ ಸರಕಾರ ಬಿಡುಗಡೆಗೆ ಆಜ್ಞೆ ಮಾಡಿದೆ. ನಿಮ್ಮ ಪತ್ರದ ಕೊನೆಯ ಬೇಡಿಕೆಗಳ ವಿಷಯದಲ್ಲಿ ಸಮಿತಿಯ ತೀರ್ಮಾನದ ತರುವಾಯ ಸರಕಾರ ಉಚಿತ ಕಾರ್ಯಕ್ರಮ ಕೈಗೊಳ್ಳುತ್ತದೆ."

ಈ ಪತ್ರಗಳು ಕೈಯಿಂದ ಕೈಗೆ ಸೇರುವ ಮುಂಚೆ ನಾನು ಆಂಡ್ರೂಸರೂ ಸ್ಮಟ್ಸ್‌ರನ್ನೂ ಅನೇಕ ಬಾರಿ ಭೇಟಿಮಾಡಿದೆವು. ಇಷ್ಟರಲ್ಲಿ ಸರ್ ಬೆಂಜಮಿನ್ ರಾಬರ್ಟ್ಸನ್ ಪ್ರೆಟೋರಿಯಾಕ್ಕೆ ಬಂದಿದ್ದ. ಸರ್ ರಾಬರ್ಟ್ಸನ್ ಜನಾನುರಾಗಿ ಅಧಿಕಾರಿ. ಗೋಖಲೆಯವರಿಂದ ಒಂದು ಶಿಫಾರಸುಪತ್ರವನ್ನೂ ತಂದಿದ್ದ. ಆದರೆ ಇಂಗ್ಲೀಷ್ ಅಧಿಕಾರಿಗಳಿಗೆ ಇರುವ ಸಾಮಾನ್ಯ ದುರ್ಗುಣಗಳಿಗೆ ಹೊರತಲ್ಲ. ಬಂದೊಡನೆ ಭಾರತೀಯರಲ್ಲಿ ಒಡಕು ಹುಟ್ಟಿಸುವುದಕ್ಕೂ, ಸತ್ಯಾಗ್ರಹಿಗಳನ್ನು ಹೆದರಿಸುವುದಕ್ಕೂ ಆರಂಭಿಸಿದ. ಪ್ರೆಟೋರಿಯಾದಲ್ಲಿ ಆತನನ್ನು ಮೊದಲು ನೋಡಿದಾಗಲೆ ನನಗೆ ಆದರ ಹುಟ್ಟಲಿಲ್ಲ. ಆತನ ಬೆದರಿಕೆಯ ವಿಷಯವಾಗಿ ನನಗೆ ಬಂದ ತಂತಿಗಳನ್ನು ಆತನಿಗೆ ತೋರಿಸಿದೆ. ಎಲ್ಲರಂತೆ ಆತನೊಂದಿಗೂ ನಿರ್ದಾಕ್ಷಿಣ್ಯವಾಗಿ ಮುಚ್ಚುಮರೆ ಇಲ್ಲದೆ ವರ್ತಿಸಿದೆ. ಆಮೇಲೆ ಸ್ನೇಹಿತರಾದೆವು. ಹೇಡಿಗಳಾಗಿ ತಲೆಬಾಗುವವರನ್ನು ಬೆದರಿಸುತ್ತಲೇ ಇರುವುದು ಅಧಿಕಾರಿಗಳ ಸ್ವಭಾವ. ಆದರೆ ನಾವು ನಿರ್ಭೀತರಾದರೆ ಅಧಿಕಾರಿಗಳೂ ಹದ್ದಿನಲ್ಲಿರುತ್ತಾರೆ.

ಈ ರೀತಿ ತಾತ್ಕಾಲಿಕ ಒಪ್ಪಂದವಾಯಿತು. ಕಟ್ಟಕಡೆಗೆ ಸತ್ಯಾಗ್ರಹ ನಿಲ್ಲಿಸಲಾಯಿತು. ಅನೇಕ ಆಂಗ್ಲ ಸ್ನೇಹಿತರು ಹರ್ಷಗೊಂಡ, ಕೊನೆಯ ತೀರ್ಮಾನದಲ್ಲಿ ಸಹಾಯಮಾಡುವುದಾಗಿ ಭರವಸೆಕೊಟ್ಟರು. ಈ ಒಪ್ಪಂದಕ್ಕೆ ಭಾರತೀಯರನ್ನು ಒಪ್ಪಿಸಲು ಕಷ್ಟವಾಯಿತು. ಆಗ ಹುಟ್ಟಿದ್ದ ಉತ್ಸಾಹ ಮುರಿಯಲು ಯಾರಿಗೂ ಇಷ್ಟವಿರಲಿಲ್ಲ. ಅಲ್ಲದೆ ಜನರಲ್ ಸ್ಮಟ್ಸ್‌ರನ್ನು ನಂಬುವವರು ಯಾರು? ಕೆಲವರು ೧೯೦೮ ರಲ್ಲಿ ನಡೆದ ದ್ರೋಹವನ್ನು ಜ್ಞಾಪಿಸಿ "ಜನರಲ್ ಸ್ಮಟ್ಸ್ ಒಂದು ಸಲ ನಿಮಗೆ ಕೈಕೊಟ್ಟಿದ್ದಾನೆ. ಹೊಸ ಪ್ರಶ್ನೆ ತಂದೊಡ್ಡುತ್ತೀರಿ ಎಂದು ಅನೇಕ ವೇಳೆ ದೂರಿದ್ದಾನೆ. ನಮಗೆ ಅಪಾರ ಕಷ್ಟ ಕೊಟ್ಟಿದ್ದಾನೆ. ಆದರೂ ಆತನನ್ನು ನಂಬಬಾರದೆಂದು ನಿಮಗೆ ಅಪಾರ ಕಷ್ಟ ಕೊಟ್ಟಿದ್ದಾನೆ. ಆದರೂ ಆತನನ್ನು ನಂಬಬಾರದೆಂದು ನಿಮಗೆ ಇನ್ನೂ ತಿಳಿಯಲಿಲ್ಲವಲ್ಲ, ಏನು ಹೇಳೋಣ? ಪುನಃ ನಿಮಗೆ ಮೋಸಮಾಡುತ್ತಾನೆ; ಮತ್ತೆ ಸತ್ಯಾಗ್ರಹ ಹೂಡ ಬೇಕಾದೀತು. ಆಗ ನಿಮ್ಮ ಮಾತು ಯಾರು ಕೇಳುತ್ತಾರೆ? ಜನರು ಪದೇ ಪದೇ ಸೆರೆಮನೆಗೆ ಹೋಗಿ ಪ್ರತಿ ಸಲವೂ ಅಪಜಯ ಪಡೆಯುತ್ತ ಹೋಗುವದು ಎಷ್ಟು ದಿನ ಸಾಧ್ಯ? ಕೆಲಸ ಪೂರಾ ಮುಗಿದ ಮೇಲೆಯೇ ಜನರಲ್ ಸ್ಮಟ್ಸ್‌ನಂಥ ಮನುಷ್ಯನನ್ನು ನಂಬಲು ಸಾಧ್ಯ. ಒಣ ಮಾತಿನಿಂದ ಏನೂ ಪ್ರಯೋಜನವಿಲ್ಲ. ಮಾತುಕೊಟ್ಟು ಮುರಿವವರನ್ನು ಎಷ್ಟು ಬಾರಿ ತಾನೆ ನಂಬಲು ಸಾಧ್ಯ?"

ಇಂಥ ವಾದ ಏಳುತ್ತದೆಂದು ನಾನು ಊಹಿಸಿದ್ದೆ; ಆದ್ದರಿಂದ ಏನೂ ಆಶ್ಚರ್ಯವಾಗಲಿಲ್ಲ. ತನ್ನ ಎದುರಾಳಿ ಎಷ್ಟು ಬಾರಿ ಮೋಸಮಾಡಿದರೂ, ನಂಬದಿರಲು ಕಾರಣವಿಲ್ಲದಿದ್ದರೆ ಅಲ್ಲಿಯವರೆಗೂ ಸತ್ಯಾಗ್ರಹಿ ಆತನನ್ನು ನಂಬುತ್ತಾನೆ. ನೋವು ಸತ್ಯಾಗ್ರಹಿಗೆ ಸುಖ. ಕಷ್ಟಕ್ಕೆ ಹೆದರಿ ಬುಡವಿಲ್ಲದ ಅಪನಂಬಿಕೆಗೆ ಅವಕಾಶಕೊಟ್ಟು

ಮೋಸಹೋಗುವುದಿಲ್ಲ. ಬದಲು, ಆತ್ಮಶಕ್ತಿಯನ್ನೇ ನಂಬಿದವನಾದ್ದರಿಂದ ಪದೇ ಪದೇ ದ್ರೋಹವಮಾಡಿದರೂ ನಂಬುತ್ತಲೇ ಇರುತ್ತಾನೆ. ಆ ಮೂಲಕ ಸತ್ಯ ಬಲವೃದ್ಧಿಯಾಗುವುದೆಂದೂ ವಿಜಯ ಸಮೀಪಿಸುವುದೆಂದೂ ಭಾವಿಸುತ್ತಾನೆ. ಅನೇಕ ಕಡೆ ಸಭೆ ನಡೆಸಿದೆ. ಭಾರತೀಯರು ಒಪ್ಪಂದದ ಷರತ್ತುಗಳನ್ನು ಒಪ್ಪುವಂತೆ ಒಲಿಸಿದೆ. ಭಾರತೀಯರಿಗೆ ಈಗ ಸತ್ಯಾಗ್ರಹದ ಗುಟ್ಟು ಚೆನ್ನಾಗಿ ಅರ್ಥವಾಯಿತು. ಈ ಒಪ್ಪಂದದಲ್ಲಿ ಆಂಡ್ರೂ ಸರೇ ಮಧ್ಯಸ್ಥಗಾರರು; ಅವರೇ ಸಾಕ್ಷಿ. ಭಾರತ ಸರಕಾರದ ಪ್ರತಿನಿಧಿಯಾಗಿ ಸರ್ ಬೆಂಜಮಿನ್ ರಾಬರ್ಟ್ಸ್‌ನ್ ಇದ್ದ. ಆದ್ದರಿಂದ ಮುಂದೆ ಒಪ್ಪಂದ ಮುರಿಯುವ ಸಂಭವ ಇರಲಿಲ್ಲ. ನಾನು ಹಠ ಹಿಡಿದು ಸಂಧಿಯನ್ನು ನಿರಾಕರಿಸಿದ್ದರೆ. ಭಾರತೀಯ ಅಪಖ್ಯಾತಿಗೆ ಅದೇ ಒಂದು ಕಾರಣವಾಗುತ್ತಿತ್ತು. ಕೇವಲ ಆರು ತಿಂಗಳೊಳಗೆ ದೊರೆತ ವಿಜಯ ಮತ್ತೆ ಸಿಗಲು ಅನೇಕ ತೊಂದರೆಗಳೊದಗುತ್ತಿದ್ದವು. ತಮ್ಮಲ್ಲಿ ತಪ್ಪಿಗೆ ಸ್ವಲ್ಪವೂ ಅವಕಾಶಕೊಡದ ಸತ್ಯಾಗ್ರಹಿಗಳ ಅನುಭವವೇ "ಕ್ಷಮಾವೀರಸ್ಯ ಭೂಷಣಮ್" ಎಂಬ, ಅಮೃತವಾಣಿಯ ಮೂಲ. ಅವಿಶ್ವಾಸ ಅಧೈರ್ಯದ ಹೆಗ್ಗುರುತು. ಸತ್ಯಾಗ್ರಹವೆಂದರೆ ಎಲ್ಲ ಅಧೈರ್ಯ ತ್ಯಾಗ. ಎಲ್ಲಿ ಎದುರಾಳಿಯ ನಾಶವಲ್ಲದೆ ಪರಿವರ್ತನೆಯೇ ಗುರಿಯೋ ಅಲ್ಲಿ ಅಪನಂಬಿಕೆಗೆ ಸ್ಥಾನವಿಲ್ಲ.

ಈ ರೀತಿ ಭಾರತೀಯರು ಒಪ್ಪಂದ ಒಪ್ಪಿದ ಮೇಲೆ ಯೂನಿಯನ್ ಪಾರ್ಲಿಮೆಂಟಿನ ಮುಂದಿನ ಅಧಿವೇಶನಕ್ಕಾಗಿ ಕಾಯುವುದಲ್ಲದೆ ನಮಗೆ ಬೇರೆ ಕೆಲಸವಿರಲಿಲ್ಲ. ಈ ಮಧ್ಯೆ ಸಮಿತಿ ತನ್ನ ಕೆಲಸವನ್ನಾರಂಭಿಸಿತು. ಎಲ್ಲೋ ಕೆಲವರು ಭಾರತೀಯರು ಸತ್ಯಾಗ್ರಹಿಗಳ ಮೇಲೆ ಭಾರತೀಯರಿಗೆ ಅಗಾಧ ವಿಶ್ವಾಸವಿದೆಯೆಂದು ಅಸಾಧ್ಯ ಸಾಕ್ಷ್ಯವನ್ನೂ ಒದಗಿಸಿದರು. ಸಾಕ್ಷ್ಯಕೊಡಲು ಅನೇಕ ಭಾರತೀಯರನ್ನು ಸರ್ ಬೆಂಜಮಿನ್ ರಾಬರ್ಟ್ಸನ್ ಎಷ್ಟೋ ಪುಸಲಾಯಿಸಿದ. ಆದರೆ ಸತ್ಯಾಗ್ರಹಕ್ಕೆ ತೀವ್ರ ವಿರೋಧಿಗಳಾಗಿದ್ದ ನಾಲ್ಕಾರು ಭಾರತೀಯರ ಹೊರತು ಬೇರೆ ಎಲ್ಲೂ ಆತನ ಬೇಳೆ ಬೇಯಲಿಲ್ಲ. ಸಮಿತಿಯ ಬಹಿಷ್ಕಾರದಿಂದ ಯಾವ ದುಷ್ಪರಿಣಾಮವೂ ಆಗಲಿಲ್ಲ. ಅದರ ಕೆಲಸವೂ ಕಡಿಮೆಯಾಯಿತು, ವರದಿಯೂ ಜಾಗ್ರತೆ ಹೊರಬಿತ್ತು. ಭಾರತೀಯರ ಅಸಹಕಾರವನ್ನು ಉಗ್ರವಾಗಿ ಟೀಕಿಸಿ, ಆಪಾದನೆಗಳಿಗೆ ಬುಡವಿಲ್ಲೆಂದು ಅಭಿಪ್ರಾಯ ಕೊಟ್ಟಿತು. ಆದರೆ ಭಾರತೀಯರ ಬೇಡಿಕೆಗಳನ್ನೆಲ್ಲ, ಎಂದರೆ ಮೂರು ಪೌಂಡು ತೆರಿಗೆ, ಭಾರತೀಯ ವಿವಾಹ ಪದ್ಧತಿ, ಇನ್ನು ಕೆಲವು ಸಣ್ಣ ಬೇಡಿಕೆಗಳ ವಿಷಯದಲ್ಲಿ ಕೂಡಲೇ ಪರಿಹಾರ ಕೊಡಬೇಕೆಂದು ಸಲಹೆ ಮಾಡಿತು. ಈ ರೀತಿ ಜನರಲ್ ಸ್ಮಟ್ಸ್‌ರ ಭರವಸೆಯಂತೆ ಸಮಿತಿಯ ವರದಿ ಭಾರತೀಯರಿಗೆ ಅನುಕೂಲವಾಯಿತು. ಆಂಡ್ರೂಸರು ಇಂಗ್ಲೆಂಡಿಗೆ ಹೊರಟರು; ಸರ್ ಬೆಂಜಮಿನ್ ರಾಬರ್ಟ್ಸನ್ ಭಾರತಕ್ಕೆ ಹಿಂದಿರುಗಿದರು. ಸಮಿತಿಯ ಸಲಹೆಗಳನ್ನು ಆಚರಣೆಗೆ ತರಲು ಅವಶ್ಯವಾದ ಶಾಸನವನ್ನು ರೂಪುಗೊಳಿಸುವ ಭರವಸೆಯೂ ಬಂತು. ಈ ಶಾಸನಗಳ ರಚನೆ, ಅನ್ವಯ–ಮುಂದಿನ ಅಧ್ಯಾಯದಲ್ಲಿ.

೫೦. ಮುಕ್ತಾಯ

ಸಮಿತಿಯ ವರದಿ ಹೊರಬಿದ್ದ ಕೆಲವು ದಿನದಲ್ಲೆ ಭಾರತೀಯರಿಗೂ ಸರಕಾರಕ್ಕೂ ಇದ್ದ ದೀರ್ಘ ವ್ಯಾಜ್ಯ ಪರಿಹಾರಾರ್ಥವಾಗಿ 'ಭಾರತೀಯ ಪರಿಹಾರ ಶಾಸನ' ಎಂಬ

ಮಸೂದೆ ಯೂನಿಯನ್ ಸರಕಾರದ ಗೆಜೆಟ್‌ನಲ್ಲಿ ಪ್ರಕಟವಾಯಿತು. ನಾನು ಕೂಡಲೆ ಯೂನಿಯನ್ ಪಾರ್ಲಿಮೆಂಟ್ ಸೇರುವ ಕೇಪ್ ಟೌನಿಗೆ ಹೋದೆ. ಆ ಮಸೂದೆಯಲ್ಲಿ ಒಂಭತ್ತು ಅಂಶ ಮಾತ್ರ ಇದ್ದವು. "ಯಂಗ್ ಇಂಡಿಯ" ದ ಒಂದು ಪುಟದಲ್ಲಿ ಅಚ್ಚುಹಾಕುವಷ್ಟು ಇತ್ತು. ಒಂದು ಭಾಗ ಭಾರತೀಯ ವಿವಾಹಗಳಿಗೆ ಸಂಬಂಧಪಟ್ಟದ್ದು: ಭಾರತದಲ್ಲಿ ಶಾಸನ ಸಮ್ಮತವಾದ ವಿವಾಹಗಳೆಲ್ಲ ದಕ್ಷಿಣ ಆಫ್ರಿಕದಲ್ಲೂ ಶಾಸನ ಸಮ್ಮತ; ಆದರೆ ಒಬ್ಬರಿಗಿಂತ ಹೆಚ್ಚು ಹೆಂಡಂದಿರಿದ್ದರೆ ಅವರಲ್ಲಿ ಒಬ್ಬಾಕೆ ಮಾತ್ರ ಆ ಸಮಯಕ್ಕೆ ಪತ್ನಿ ಎಂದು ಶಾಸನದ ಒಪ್ಪಿಗೆ ದೊರೆಯಿತು. ಎರಡನೆಯ ಭಾಗ ಅವಧಿ ಕೂಲಿಗಾರರಿಗೆ ಸಂಬಂಧಪಟ್ಟದ್ದು. ಅವಧಿ ಮುಗಿದ ಮೇಲೆ ಭಾರತಕ್ಕೆ ಹಿಂದಿರುಗದೆ ದಕ್ಷಿಣ ಆಫ್ರಿಕದಲ್ಲಿ ಸ್ವತಂತ್ರನಾಗಿ ನೆಲೆಸಿದರೆ ಮೂರು ಪೌಂಡು ವಾರ್ಷಿಕ ತಲೆಗಂದಾಯ ಕೊಟ್ಟು ರಹದಾರಿ ಪಡೆಯಬೇಕಾದ್ದಿಲ್ಲವೆಂದು ಶಾಸನವಾಯಿತು. ಮೂರನೆಯ ಭಾಗ ನೇಟಾಲ್ ಭಾರತೀಯರು ಸರಕಾರದಿಂದ ವಲಸೆ ರಹದಾರಿಪಡೆದು, ಅದರಲ್ಲಿ ಅವರ ಹೆಬ್ಬಟ್ಟು ಗುರುತಿದ್ದರೆ ಆತನು ಯೂನಿಯನ್ ಸರಕಾರದಲ್ಲಿ ತನ್ನ ಗುರುತು ಸ್ಥಾಪಿಸಿದೊಡನೆ ಆ ರಹದಾರಿಯ ಆಧಾರದ ಮೇಲೆ ಎಲ್ಲಿ ಬೇಕಾದರೂ ಪ್ರವೇಶ ಮಾಡಲು ಅಧಿಕಾರವಿರುವುದಾಗಿ ಶಾಸನ. ಯೂನಿಯನ್ ಪಾರ್ಲಿಮೆಂಟ್‌ನಲ್ಲಿ ಸುದೀರ್ಘವೂ ಸ್ವಾರಸ್ಯವೂ ಆದ ಚರ್ಚೆಯಾಯಿತು.

ಭಾರತ ಪರಿಹಾರ ಶಾಸನದಲ್ಲಿ ಸೇರದ ಕೆಲವು ವಿಷಯ ನಾನೂ ಸ್ಮಟ್ಸ್ ಪತ್ರವ್ಯವಹಾರ ನಡೆಸಿ ತೀರ್ಮಾನಿಸಿದೆವು. ವಿದ್ಯಾವಂತರಾದ ಭಾರತೀಯರಿಗೆ ಕೇಪ್ ಕಾಲೊನಿಗೆ ಹೋಗಲು ಇರುವ ಅಧಿಕಾರ, ವಿಶೇಷ ವಿದ್ಯಾವಂತ ಭಾರತೀಯರು ದಕ್ಷಿಣ ಆಫ್ರಿಕಕ್ಕೆ ಬರಲು ಅವಕಾಶ, ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಆಫ್ರಿಕಕ್ಕೆ ಬಂದ ಭಾರತೀಯರ ಸ್ಥಾನಮಾನ, ಭಾರತದಲ್ಲಿ ಹಿಂದುಳಿದ ಅವರ ಹೆಂಡಂದಿರು ದಕ್ಷಿಣ ಆಫ್ರಿಕಕ್ಕೆ ಬಂದ ಭಾರತೀಯರ ಸ್ಥಾನಮಾನ, ಭಾರತದಲ್ಲಿ ಹಿಂದುಳಿದ ಅವರ ಹೆಂಡಂದಿರು ದಕ್ಷಿಣ ಆಫ್ರಿಕದಲ್ಲಿ ತಮ್ಮ ಗಂಡಂದಿರನ್ನು ಬಂದು ಸೇರಲು ಅವಕಾಶ. ಇವೇ ಆ ವಿಷಯಗಳು. ಇದೆಲ್ಲ ಇತ್ಯರ್ಥವಾದ ಮೇಲೆ ೧೯೧೪ರ ಜೂನ್ ಮೂವತ್ತರಲ್ಲಿ ಜನರಲ್ ಸ್ಮಟ್ಸ್ ನನಗೆ ಬರೆದ ಪತ್ರದಲ್ಲಿ:

"ಈಗ ಆಚರಣೆಯಲ್ಲಿರುವ ಶಾಸನಗಳನ್ನು ನ್ಯಾಯಮಾರ್ಗದಲ್ಲಿ ಹಕ್ಕುಬಾಧ್ಯತೆಗಳ ರಕ್ಷಣೆ ದೃಷ್ಟಿಯಿಂದ ಉಪಯೋಗಿಸಬೇಕೆಂಬುದೇ ಮೊದಲಿನಿಂದಲೂ ಸರಕಾರದ ಆಶೆ. ಮುಂದೆಯೂ ಅದೇ ರೀತಿ ಆಚರಿಸುತ್ತಾರೆ" ಎಂದಿತ್ತು.

"ಈ ದಿನ ನೀವು ಬರೆದ ಪತ್ರ ಸೇರಿತು. ಈ ನಮ್ಮ ಚರ್ಚೆಗಳಲ್ಲಿ ನೀವು ತೋರಿಸಿದ ತಾಳ್ಮೆ, ಗೌರವಕ್ಕಾಗಿ ಕೃತಜ್ಞರಾಗಿದ್ದೇವೆ.

"ಭಾರತ ಪರಿಹಾರ ಶಾಸನ ಮತ್ತು ಈ ಪತ್ರ–ಇವುಗಳಿಂದ ನಾವು ೧೯೦೬ ರಲ್ಲಿ ಪ್ರಾರಂಭಿಸಿದ ಸತ್ಯಾಗ್ರಹ ಸಂಗ್ರಾಮ ಮುಕ್ತಾಯವಾಗುತ್ತದೆ. ಅದರಿಂದ ಭಾರತೀಯರು ಅಪಾರ ಕಷ್ಟವನ್ನೂ ನಷ್ಟವನ್ನೂ ಅನುಭವಿಸಿದ್ದಾರೆ. ಸರಕಾರಕ್ಕೂ ಸ್ವಲ್ಪ ಯೋಚನೆಯೂ ತೊಂದರೆಯೂ ಆಗಿರಬೇಕು.

"ನಮ್ಮಲ್ಲಿ ಕೆಲವರು ಇಲ್ಲಿಗೇ ಮುಗಿಸಬಾರದೆಂದು ಒತ್ತಾಯ ಮಾಡಿದ್ದು ನಿಮಗೆ ಗೊತ್ತೇ ಇದೆ. ಬೇರೆ ಬೇರೆ ಪ್ರಾಂತಗಳಲ್ಲಿ ವ್ಯಾಪಾರಕ್ಕೆ ರಹದಾರಿ ಪಡೆಯಬೇಕೆಂಬ

ಶಾಸನ, ೧೮೮೫ನೇ ಟ್ರಾನ್ಸ್‌ವಾಲ್ ಶಾಸನಗಳನ್ನು ತಿದ್ದಿ ವಾಸ, ವ್ಯಾಪಾರ, ಸ್ಥಿರಾಸ್ತಿಗಳ ವಿಷಯದಲ್ಲಿ ಭಾರತೀಯರಿಗೆ ಪೂರ್ಣಾಧಿಕಾರ ದೊರೆತಿಲ್ಲವೆಂದು ಕೆಲವರಿಗೆ ಅಸಮಾಧಾನವಾಗಿದೆ. ವಿವಾಹಗಳ ವಿಷಯದಲ್ಲಿ ಶಾಸನ ಸಾಕಷ್ಟು ಉದಾರವಾಗಿಲ್ಲವೆಂದು ಇನ್ನು ಕೆಲವರಿಗೆ ಅಸಮಾಧಾನ. ಇವನ್ನೂ ಸತ್ಯಾಗ್ರಹದಲ್ಲಿ ಸೇರಿಸಬೇಕೆಂದು ನನ್ನನ್ನು ಕೇಳಿದ್ದಾರೆ. ಅವರ ಇಷ್ಟದಂತೆ ನಡೆಯಲು ನನ್ನ ಮನಸ್ಸು ಒಪ್ಪಲಿಲ್ಲ.

"ಇವನ್ನು ಸತ್ಯಾಗ್ರಹದಲ್ಲಿ ಸೇರಿಸಲು ಸಾಧ್ಯವಾಗದೆ ಹೋದರೂ ಒಂದಲ್ಲ ಒಂದು ದಿನ ಸರಕಾರ ಇವನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕಾಗುತ್ತದೆಂಬುದನ್ನು ಅಲ್ಲಗಳೆಯುವಂತಿಲ್ಲ. ಇಲ್ಲಿ ನೆಲೆಸಿರುವ ಭಾರತೀಯರಿಗೆ ಪೂರ್ಣ ನಾಗರಿಕ ಹಕ್ಕು ಕೊಡುವವರೆಗೂ ಪೂರ್ಣ ಸಮಾಧಾನ ನೆಲೆಸುವುದಿಲ್ಲ.

"ತಾಳ್ಮೆಯಿಂದ ವರ್ತಿಸಬೇಕೆಂದು ನನ್ನ ದೇಶಬಾಂಧವರಿಗೆ ಸಲಹೆ ಕೊಟ್ಟಿದ್ದೇನೆ. ಎಲ್ಲ ಗೌರವಯುತ ಮಾರ್ಗಗಳನ್ನೂ ಉಪಯೋಗಿಸಿ ಈ ಪತ್ರವ್ಯವಹಾರದಲ್ಲಿ ದೊರೆತ ಪರಿಹಾರಕ್ಕೂ ಮುಂದೆ ಹೋಗಿ ಸರಕಾರವು ಸೌಲಭ್ಯ ಕೊಡಲು ಅನುಕೂಲಿಸುವಂತೆ ಸಾರ್ವಜನಿಕ ಅಭಿಪ್ರಾಯ ರೂಪುಗೊಳಿಸಲು ಪ್ರಚಾರ ನಡೆಸಲು ಸೂಚಿಸಿದ್ದೇನೆ. ಅವಧಿ ಕೂಲಿಗಾರರು ದಕ್ಷಿಣ ಆಫ್ರಿಕಕ್ಕೆ ಬರುವುದನ್ನು ಈಗ ನಿಲ್ಲಿಸಿರುವುದರಿಂದಲೂ, ಹೋದ ವರ್ಷ ವಲಸೆ ಹತೋಟಿ ಶಾಸನ ಆಚರಣೆಗೆ ಬಂದು ಭಾರತೀಯರ ವಲಸೆ ಸಂಪೂರ್ಣವಾಗಿ ನಿಂತಿರುವುದರಿಂದಲೂ, ನಮ್ಮ ಜನರಿಗೆ ಇಲ್ಲಿ ರಾಜಕೀಯ ಆಶೋತ್ತರವೇನೂ ಇಲ್ಲವೆಂದು ದಕ್ಷಿಣ ಆಫ್ರಿಕದ ಯೂರೋಪಿಯನ್ ರು ಮನಗಂಡು ಮೇಲೆ ಹೇಳಿದ ಹಕ್ಕುಗಳನ್ನು ಭಾರತೀಯರಿಗೆ ಸಂಪಾದಿಸಿಕೊಡುವುದರ ನ್ಯಾಯವನ್ನೂ ಅವಶ್ಯಕತೆಯನ್ನೂ ಯೂರೋಪಿಯನ್ನರೇ ಅರಿಯುತ್ತಾರೆಂದು ಆಶಿಸುತ್ತೇನೆ.

ಈ ಮಧ್ಯೆ ಈ ಸಮಸ್ಯೆಗಳ ಪರಿಹಾರದಲ್ಲಿ ಕಳೆದ ಕೆಲವು ತಿಂಗಳು ಸರಕಾರ ತೋರಿಸಿರುವ ಉದಾರ ದೃಷ್ಟಿಯನ್ನೇ ನಿಮ್ಮ ಪತ್ರದಲ್ಲಿ ಭರವಸೆ ಕೊಟ್ಟಂತೆ, ಆಚರಣೆಯಲ್ಲಿರುವ ಶಾಸನಪ್ರಯೋಗದಲ್ಲಿ ಮುಂದೆಯೂ ತೋರುತ್ತಬಂದರೆ ಯೂನಿಯನ್ ರಾಷ್ಟ್ರದ ಭಾರತೀಯರಲ್ಲೆಲ್ಲ ಸ್ವಲ್ಪ ಶಾಂತಿ ಸಂತೋಷ ನೆಲೆಗೊಳ್ಳಬಹುದೆಂದು, ಸರಕಾರಕ್ಕೆ ಮುಂದೆಂದೂ ಅವರು ಕಂಟಕಪ್ರಾಯರಾಗುವುದಿಲ್ಲವೆಂದೂ ಭರವಸೆ ಇದೆ." ಎಂದು ಉತ್ತರ ಬರೆದೆ.

ಸಮಾಪ್ತಿ

ಈ ರೀತಿ ಎಂಟು ವರ್ಷದ ಮೇಲೆ ಈ ಮಹಾಸತ್ಯಾಗ್ರಹ ಸಂಗ್ರಾಮ ಕೊನೆಗಂಡಿತು. ದಕ್ಷಿಣ ಆಫ್ರಿಕದ ಭಾರತೀಯರು ಇನ್ನು ನೆಮ್ಮದಿಯಿಂದ ಇರಬಹುದೆಂದೂ ತೋರಿತು. ಭಾರತಕ್ಕೆ ಹಿಂದಿರುಗುವ ಮುನ್ನ ಗೋಖಲೆಯವರನ್ನು ನೋಡಲು ಒಂದೆಡೆ ದುಃಖ ಇನ್ನೊಂದೆಡೆ ಸಂತೋಷದಿಂದ ೧೯೧೪ ಜುಲೈ ೧೮ ರಲ್ಲಿ ಇಂಗ್ಲೆಂಡಿಗೆ ಹೊರಟೆ. ಅನೇಕ ವರ್ಷಗಳ ತರುವಾಯ ಸ್ವದೇಶಕ್ಕೆ ಹಿಂದಿರುಗಿ ಗೋಖಲೆಯವರ ನೇತೃತ್ವದಲ್ಲಿ ದೇಶಸೇವೆ ಮಾಡಬೇಕೆಂಬ ಕಾತುರತೆಗಾಗಿ ಸುಖ; ಇಪ್ಪತ್ತೊಂದು ವರ್ಷ ಜೀವನ ಯಾತ್ರೆ ನಡೆಸಿ ಮಾನವ ಜೀವನದ ಕಹಿ ಸಿಹಿ ಅನುಭವದ ಪಾಲು ಉಂಡು ನನ್ನ ಜೀವನ ಪಥ ನಿರ್ಧರಿಸಿದ ದಕ್ಷಿಣ ಆಫ್ರಿಕದ ಎಲ್ಲ ಪ್ರೇಮಬಂಧನಗಳನ್ನು ಒಂದೇ ಸಲ ತೊರೆಯಬೇಕೆಂಬ ದುಃಖ.

ಸತ್ಯಾಗ್ರಹದ ಸುಖಮಯ ಮುಕ್ತಾಯವನ್ನು ದಕ್ಷಿಣ ಆಫ್ರಿಕ ಭಾರತೀಯರ ಈಗಿನ ಈಗಿನ ಸ್ಥಿತಿಯೊಡನೆ ಹೋಲಿಸಿದರೆ ಈ ಎಲ್ಲ ತ್ಯಾಗ, ಕಷ್ಟ ಸಹನೆ ಹೊಳೆಯಲ್ಲಿ ಹುಳಿ ಕದಡಿದಂತಾಯಿತೇ ಅನಿಸುತ್ತದೆ. ಮಾನವ ಸಮಸ್ಯೆಗಳ ಪರಿಹಾರಕ್ಕೆ ಸತ್ಯಾಗ್ರಹ ಒಂದು ಉತ್ತಮ ಮಾರ್ಗವೇ ಎಂಬ ಅನುಮಾನವೂ ಬರುತ್ತದೆ. ಈ ವಿಷಯ ಸ್ವಲ್ಪ ಯೋಚಿಸೋಣ. ಯಾವ ಮಾರ್ಗದಿಂದ ಒಂದು ವಸ್ತುವನ್ನು ಸಂಪಾದಿಸುತ್ತೇವೆಯೋ, ಆ ಮಾರ್ಗದಿಂದ ಮಾತ್ರ ಆ ವಸ್ತು ರಕ್ಷಣೆ ಸಾಧ್ಯವೆಂಬುದು ಒಂದು ಧರ್ಮಸೂತ್ರ. ದಕ್ಷಿಣ ಆಫ್ರಿಕದ ಭಾರತೀಯರು ತಮ್ಮ ರಕ್ಷಣೆ ಮಾಡಿಕೊಳ್ಳಬೇಕಾದರೆ ಸತ್ಯಾಗ್ರಹದ ಅಸ್ತ್ರ ಉಪಯೋಗಿಸಲು ಶಕ್ತರಾಗಿರಬೇಕು. ಸತ್ಯಮಾರ್ಗದಿಂದ ಆರ್ಜಿಸಿದ ವಸ್ತುವನ್ನು ಅನ್ಯಮಾರ್ಗದಿಂದ ರಕ್ಷಿಸಲು ಸತ್ಯಾಗ್ರಹದಲ್ಲಿ ಇಂದ್ರಜಾಲ ಶಕ್ತಿಯಿಲ್ಲ; ಸಾಧ್ಯವಾದರೂ ಸಾಧುವಲ್ಲ. ದಕ್ಷಿಣ ಆಫ್ರಿಕದ ಭಾರತೀಯರ ಈಗಿನ ಸ್ಥಿತಿ ಹದಗೆಟ್ಟಿದ್ದರೆ ಅವರಲ್ಲಿ ಸತ್ಯಾಗ್ರಹಿಗಳಿಲ್ಲದಿರುವುದೇ ಕಾರಣ. ದಕ್ಷಿಣ ಆಫ್ರಿಕದ ಭಾರತೀಯರ ಈಗಿನ ಪೀಳಿಗೆಯವರಲ್ಲಿ ತಪ್ಪೆಣಿಸಲು ನಾನು ಹೀಗೆ ಹೇಳುತ್ತಿಲ್ಲ; ಆದರೆ ಯಥಾರ್ಥ ಸ್ಥಿತಿ ಅದು. ವ್ಯಕ್ತಿಗಳಾಗಲಿ, ಸಂಸ್ಥೆಗಳಾಗಲಿ ತಮ್ಮಲ್ಲಿಲ್ಲದ ಗುಣಗಳನ್ನು ಇತರರಿಂದ ಕಡ ಪಡೆಯಲು ಸಾಧ್ಯವಿಲ್ಲ. ಸತ್ಯಾಗ್ರಹಿ ಶೂರರೆಲ್ಲ ಒಬ್ಬರಾಗುತ್ತ ಒಬ್ಬರು ಕಣ್ಮರೆಯಾದರು. ಸೊಹರಾಬ್ಜಿ, ಕಾಛಲಿಯಾ, ತಂಬಿನಾಯುಡು, ಪಾರ್ಸಿ ರುಸ್ತುಂಜಿ ಮೊದಲಾದವರು ಯಾರೂ ಈಗ ಇಲ್ಲ. ಸತ್ಯಾಗ್ರಹಜ್ವಾಲೆಯಲ್ಲಿ ಧುಮುಕಿ ಪುಟ ಹೊಂದಿ ಬಂದವರು ಈಗಿರುವವರಲ್ಲಿ ಬಹು ವಿರಳ. ಇರುವ ಸ್ವಲ್ಪ ಜನ ಈಗಲೂ ಹೋರಾಟ ನಡೆಸುತ್ತಲೇ ಇದ್ದಾರೆ. ಸತ್ಯಾಗ್ರಹ ಜ್ಯೋತಿ ಅವರ ಹೃದಯ ಮಂದಿರಗಳಲ್ಲಿ ಬೆಳಗುತ್ತಿದ್ದರೆ ಪರೀಕ್ಷಾಕಾಲ ಬಂದಾಗ ಅವರೇ ನಮ್ಮ ಜನರ ಭಾಗ್ಯವಿಧಾತರಾಗುತ್ತಾರೆಂಬುದರಲ್ಲಿ ನನಗೆ ಅನುಮಾನವಿಲ್ಲ.

ಕೊನೆಯದಾಗಿ ಈ ಮಹಾಕದನ ನಡೆಸದಿದ್ದರೆ, ಅನೇಕ ಭಾರತೀಯರು ವರ್ಣನಾತೀತವಾದ ಹಿಂಸೆಗಳಿಗೆ ತಲೆಗೊಡದಿದ್ದರೆ, ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಒಂದು ಪಿಳ್ಳೆಯೂ ಇಲ್ಲದಂತೆ ಹೊರದೂಡುತ್ತಿದ್ದರು. ದಕ್ಷಿಣ ಆಫ್ರಿಕದ ಭಾರತೀಯರ ವಿಜಯ ಬ್ರಿಟಿಷ್ ಸಾಮ್ರಾಜ್ಯದ ಇತರ ಭಾಗಗಳ ಭಾರತೀಯರಿಗೆ ಒಂದು ರಕ್ಷಾಕವಚ. ಅವರೇನಾದರೂ ಪಾತಾಳಕ್ಕೆ ಅದುಮಲ್ಪಟ್ಟರೆ ಅದು ಸತ್ಯಾಗ್ರಹದ ದೌರ್ಬಲ್ಯ ಅಥವಾ ಅವರನ್ನು ರಕ್ಷಿಸಲು ಭಾರತೀಯರ ಅಸಾಮರ್ಥ್ಯದಿಂದಲ್ಲ, ಸತ್ಯಾಗ್ರಹ ಒಂದು ಅಮೂಲ್ಯ, ಅಸಮಾನವಾದ ಆಯುಧವೆಂದೂ, ಅದನ್ನು ಉಪಯೊಗಿಸುವವರಿಗೆ ನಿರಾಸೆ ಅಥವಾ ಸೋಲು ಗೊತ್ತಿಲ್ಲವೆಂದೂ ಈ ಪುಟಗಳಲ್ಲಿ ಸ್ಥಿರಪಡಿಸಬಲ್ಲೆನಾಗಿದ್ದರೆ ನನ್ನ ಶ್ರಮಕ್ಕೆ ತಕ್ಕ ಫಲ ದೊರೆತಂತೆ!

❖

ಗಾಂಧಿಯಾನ್
ಪಬ್ಲಿಷಿಂಗ್ ಹೌಸ್
ಕಸ್ತೂರ್‌ಬಾ ಭವನ, ಗಾಂಧೀಭವನ ಆವರಣ
ಕುಮಾರಪಾರ್ಕ್ ಪೂರ್ವ, ಬೆಂಗಳೂರು-೫೬೦ 001